ಮಾನೋತ್ಸವ ಪ್ರಕಟಣೆ-೯೨

ಬಸವಣ್ಣನವರ ಪರ್ಯಾಯ ಸಮಾಜ

ರಂಜಾನ್ ದರ್ಗಾ





ಪ್ರಕಾಶಕರು

ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ

ಶ್ರೀ ಮುರುಘಾಮಠ, ಧಾರವಾಡ

ಶ್ರೀ ಮ.ನಿ.ಪ್ರ. ಮುರುಘರಾಜೇಂದ್ರ ಉಚಿತ ಪ್ರಸಾದನಿಲಯ ಶತಮಾನೋತ್ಸವ ಸ್ಮರಣೆ

ಗ್ರಂಥ ಪ್ರಕಟಣೆ : ೯೨

ಬಸವಣ್ಣನವರ ಪರ್ಯಾಯ ಸಮಾಜ

ರಂಜಾನ್ ದರ್ಗಾ

ಧಾರವಾಡ

ಪ್ರಕಾಶಕರು

ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ

ಶ್ರೀ ಮುರುಘಾಮಠ

ಮೃತ್ಯುಂಜಯನಗರ, ಧಾರವಾಡ

ಬಸವಣ್ಣನವರ ಪರ್ಯಾಯ ಸಮಾಜ-ರಂಜಾನ್ ದರ್ಗಾ, 'ವಚನ', ಸಿದ್ಧಾರೂಢ ಕಾಲನಿ, ಮದಿಹಾಳ, ಧಾರವಾಡ-೫೮೦೦೦೭
ಪ್ರಕಾಶಕರು: ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ
ಶ್ರೀ ಮುರುಘಾಮಠ, ಮೃತ್ಯುಂಜಯನಗರ, ಧಾರವಾಡ
***

ಮಾರ್ಗದರ್ಶಕರು :
ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಶ್ರೀ ಮುರುಘಾಮಠ, ಧಾರವಾಡ

ಪ್ರಧಾನ ಸಂಪಾದಕರು :
ಡಾ. ವೀರಣ್ಣ ರಾಜೂರ ಮತ್ತು ಬಸವರಾಜ ಹೂಗಾರ

ಗ್ರಂಥದಾಸೋಹ
ಲಿಂ. ಶ್ರೀಮತಿ ನಿಂಗಮ್ಮ ಕೋಂ. ಫಕೀರಡ್ಡೆಪ್ಪ ಚೇಗರಡ್ಡಿ
ಇವರ ಸ್ಮರಣಾರ್ಥ
ಪ್ರೊ. ಬಿ. ಎಫ್. ಚೇಗರಡ್ಡಿ, ಗದಗ

ಪ್ರಥಮ ಮುದ್ರಣ : ೨೦೧೮
ಪುಟಗಳು : xiv + ೨೩೬ = ೨೫೦
ಬೆಲೆ : ೧೫೦/-
ಬಳಸಿದ ಕಾಗದ : ೬೦ಜಿಎಸ್‌ಎಂ ಎನ್. ಎಸ್. ಬುಕ್‌ಪ್ರಿಂಟ್
***

ಮುಖಪುಟ ವಿನ್ಯಾಸ : ಬಿ. ಮಾರುತಿ, ಚಿತ್ತಾರ ಕಲಾ ಬಳಗ, ಧಾರವಾಡ
ಅಕ್ಷರ ಸಂಯೋಜನೆ : ಡಾ. ಹನುಮಂತ ಮೇಲಿನಮನಿ, ಧಾರವಾಡ
ಮುದ್ರಣ : ತ್ವರಿತ ಮುದ್ರಣ ಆಫ್‌ಸೆಟ್ ಪ್ರಿಂಟರ್ಸ್, ಕಾಗದಗೇರಿ ಓಣಿ, ಗದಗ



ವಿಶ್ವಗುರು ಬಸವಣ್ಣನವರು



ಪೂಜ್ಯ ಶ್ರೀ ಮುರುಘೇಂದ್ರ ಶಿವಯೋಗಿಗಳು
ಗಚ್ಚಿನಮಠ, ಅಥಣಿ



ಪೂಜ್ಯ ಶ್ರೀ ಮ.ನಿ.ಪ್ರ. ಮೃತ್ಯುಂಜಯ ಅಪ್ಪಗಳು
ಶ್ರೀ ಮುರುಘಾಮಠ, ಧಾರವಾಡ



ಪೂಜ್ಯ ಶ್ರೀ ಮ.ನಿ.ಪ್ರ. ಮಹಾಂತ ಅಪ್ಪಗಳು
ಶ್ರೀ ಮುರುಘಾಮಠ, ಧಾರವಾಡ



ಪೂಜ್ಯ ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಮಹಾಸ್ವಾಮಿಗಳು
ಶ್ರೀ ಮುರುಘಾಮಠ, ಧಾರವಾಡ

*

ಪ್ರಕಾಶಕರ ನುಡಿ

ಧಾರವಾಡ ಶ್ರೀಮಂತ ಸಾಹಿತ್ಯ-ಸಂಸ್ಕೃತಿ ಪರಂಪರೆ ಹೊಂದಿದ ಮಹಾನಗರ. ಇದರ ಘನತೆ ಗೌರವಗಳನ್ನು ಹೆಚ್ಚಿಸಿದ ಧಾರ್ಮಿಕ ಶ್ರದ್ಧಾಕೇಂದ್ರ ಮುರುಘಾಮಠ. ಮೃತ್ಯುಂಜಯ ಅಪ್ಪಗಳು ಅದರ ಕ್ರಿಯಾಶಕ್ತಿ; ಮಹಾಂತ ಅಪ್ಪಗಳು ಅದರ ಶ್ರೇಯೋಮೂರ್ತಿ. ಮುರುಘರಾಜೇಂದ್ರ ಉಚಿತ ಪ್ರಸಾದ ನಿಲಯ, ಅಖಿಲಭಾರತ ಶಿವಾನುಭವ ಸಂಸ್ಥೆ, ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಅದರ ಮೂರು ಕಣ್ಣುಗಳು. ಅನ್ನದಾಸೋಹ; ಜ್ಞಾನದಾಸೋಹ, ಅನುಭಾವ ದಾಸೋಹ ಇಲ್ಲಿ ನಿರಂತರ ನಡೆಯುವ ತ್ರಿವಿಧ ದಾಸೋಹಗಳು. ಬಡ ವಿದ್ಯಾರ್ಥಿಗಳ ಭವಿಷ್ಯದ ಉಜ್ವಲತೆ, ಸ್ವಸ್ಥ ಸುಂದರ ಸಮಾಜದ ನಿರ್ಮಾಣ, ಶ್ರೀಮಂತ ಶರಣ ಸಾಹಿತ್ಯ-ಸಂಸ್ಕೃತಿ ಪ್ರಸಾರ ಇವು ಶ್ರೀಮಠದ ತ್ರಿವಿಧ ಮಹಾಮಣಿಹಗಳು.

ಶ್ರೀಮಠವನ್ನು ಕಟ್ಟಿ ಬೆಳೆಸಿದ ಉಭಯ ಶ್ರೀಗಳು ಬಸವತತ್ವಗಳನ್ನು ತಮ್ಮ ಜೀವನದ ಉಸಿರನ್ನಾಗಿಸಿಕೊಂಡು ಬದುಕಿದ ಮಹಾತ್ಮರು. ಬಸವತತ್ವಗಳನ್ನು ಪ್ರಸಾರಪಡಿಸುವುದಕ್ಕಾಗಿಯೇ ತಮ್ಮ ಬದುಕನ್ನು ಸವೆಸಿದ ಮಹಾಂತರು. ಶರಣಸಾಹಿತ್ಯ ಅವರ ಪಂಚಪ್ರಾಣ. ನೆಲದ ಮರೆಯ ನಿಧಾನದಂತೆ ಹಸ್ತಪ್ರತಿಗಳಲ್ಲಿ ಅಡಗಿ ಕುಳಿತಿದ್ದ ಅದನ್ನು ಪ್ರಕಟಿಸಿ ಪ್ರಸಾರಗೊಳಿಸಬೇಕೆಂಬುದು ಅವರ ಮನದ ಉತ್ಕಟ ಹಂಬಲ. ಅದನ್ನು ಸಾಕಾರಗೊಳಿಸಲೆಂದು ಶ್ರೀಮಠದಲ್ಲಿ ಅಸ್ತಿತ್ವಕ್ಕೆ ಬಂದುದು 'ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ'.

೧೯೪೭ ರಲ್ಲಿ ಬಾಲಲೀಲಾ ಮಹಾಂತ ಶಿವಯೋಗಿಗಳ 'ಕೈವಲ್ಯದರ್ಪಣ' ಕೃತಿ ಪ್ರಕಟಣೆಯೊಂದಿಗೆ ಆರಂಭವಾದ ಈ ಗ್ರಂಥಮಾಲೆಯ ಅಡಿಯಲ್ಲಿ ಇದುವರೆಗೆ ಇನ್ನೂರಕ್ಕೂ ಹೆಚ್ಚು ಕೃತಿಗಳು ಬೆಳಕುಕಂಡಿವೆ. ಬಸವಜಯಂತಿ ಶತಮಾನೋತ್ಸವ ಸಂದರ್ಭದಲ್ಲಿ ಪ್ರಕಟಿಸಿದ 'ಯುಗ ಯುಗದ ಉತ್ಸಾಹ' ಎಂಬ ಸಾವಿರ ಪುಟದ ಬೃಹತ್ ಗ್ರಂಥ, ಪೂಜ್ಯ ಮಹಾಂತಪ್ಪಗಳ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಪ್ರಕಟಿಸಿದ 'ಮಹಾಂತ ಬೆಳಗು' ಎಂಬ ಉದ್ಗ್ರಂಥ ಈ ಮಾಲೆಯ ಹೆಮ್ಮೆಯ ಕೊಡುಗೆಗಳೆನಿಸಿವೆ.

ಈಗ ಈ ಮಾಲೆ ಕೈಕೊಂಡ ಮತ್ತೊಂದು ಐತಿಹಾಸಿಕ ಮಹತ್ವದ ಬೃಹತ್ ಯೋಜನೆ 'ಶ್ರೀ ಮ.ನಿ.ಜ. ಮುರುಘರಾಜೇಂದ್ರ ಉಚಿತ ಪ್ರಸಾದ ನಿಲಯ'ದ ಶತಮಾನೋತ್ಸವ ನೆನಪಿನ ನೂರೊಂದು ಗ್ರಂಥಗಳ ಪ್ರಕಟಣೆ.

ಮುರುಘಾಮಠದ ಉಚಿತ ಪ್ರಸಾದ ನಿಲಯ ಅನೇಕ ಸಾವಿರ ಬಡ ವಿದ್ಯಾರ್ಥಿಗಳ ಬಾಳಿಗೆ ಬೆಳಕನ್ನು ನೀಡಿದ ದಾರಿದೀಪ. ಪೂಜ್ಯ ಮೃತ್ಯುಂಜಯ ಅಪ್ಪಗಳ ಮಾನವೀಯ ಅಂತಃಕರಣ, ಶಿಕ್ಷಣಪ್ರೀತಿ, ವಿದ್ಯಾರ್ಥಿ ವಾತ್ಸಲ್ಯ ಕಾರಣವಾಗಿ ೧೯೧೭ ರಲ್ಲಿ ಸ್ಥಾಪಿತವಾದ ಇದು ಈ ಭಾಗದ ಗ್ರಾಮೀಣ ಬಡ ವಿದ್ಯಾರ್ಥಿಗಳ ಆಶಾಕಿರಣವಾಗಿ, ಉಜ್ವಲ ಭವಿಷ್ಯ ರೂಪಿಸುವ ಮಹಾಮನೆಯಾಗಿ ಕಾರ್ಯಮಾಡುತ್ತ ಬಂದಿದೆ. ಇಲ್ಲಿ ಪ್ರಸಾದ ಸ್ವೀಕರಿಸಿ ಅಧ್ಯಯನ ಮಾಡಿದ ಅನೇಕ ವಿದ್ಯಾರ್ಥಿಗಳು ಉನ್ನತ ಹುದ್ದೆ, ಸ್ಥಾನಮಾನಗಳನ್ನು ಪಡೆದು ನಾಡಿಗೆ ಹೆಸರನ್ನು ತಂದಿದ್ದಾರೆ. ಕನ್ನಡ ನಾಡಿನ ತುಂಬ ಮಠ ಮಾನ್ಯಗಳು ಉಚಿತ ಪ್ರಸಾದ ನಿಲಯ ಆರಂಭಿಸಲು ಪ್ರೇರಣೆ ನೀಡಿದ ಇದು ನಾಡಿನ ಶೈಕ್ಷಣಿಕ ಪ್ರಗತಿಗೆ ನಾಂದಿ ಹಾಡಿದ ಕೀರ್ತಿಗೆ ಭಾಜನವಾಗಿದೆ. ಈ ಸಂಸ್ಥೆ ಈಗ ತನ್ನ ನೂರು ವರ್ಷದ ಸಾರ್ಥಕ ಸೇವೆಯನ್ನು ಪೂರೈಸಿ ಮುನ್ನಡೆದಿದೆ. ಇದರ ಶತಮಾನೋತ್ಸವವನ್ನು ಹಲವು ಅರ್ಥಪೂರ್ಣ ಯೋಜನೆಗಳನ್ನು ಹಾಕಿಕೊಳ್ಳುವ ಮೂಲಕ ಆಚರಿಸಲು ಶ್ರೀಮಠದ ಆಡಳಿತ ಮಂಡಳಿ ಮುಂದಾಗಿದೆ. ಅದರಲ್ಲಿ ಗ್ರಂಥ ಪ್ರಕಟಣೆಗೆ ವಿಶೇಷ ಆದ್ಯತೆ ನೀಡಲಾಗಿದೆ. ನೂರೊಂದು ಮೌಲಿಕ ಗ್ರಂಥಗಳು, ಒಂದು ಬೃಹತ್ ಸ್ಮರಣ ಸಂಪುಟ, ಒಂದು ಪ್ರಸಾದ ನಿಲಯದ ವಿದ್ಯಾರ್ಥಿಗಳ ಸೂಚಿ-ಈ ಯೋಜನೆಯ ಅಡಿಯಲ್ಲಿ ಪ್ರಕಟವಾಗುತ್ತಿರುವುದು ಸಂತಸದ ಸಂಗತಿ. ಮುರುಘಾಮಠ ಮೊದಲಿನಿಂದಲೂ ಗ್ರಂಥ ಪ್ರಕಟಣೆಯಲ್ಲಿ ವಿಶೇಷ ಆಸಕ್ತಿ ತೋರಿಸುತ್ತ ಬಂದಿದೆ. ಅದರ ಮುಂದುವರಿಕೆಯಾಗಿ ಈ ಯೋಜನೆ ರೂಪುಗೊಂಡಿದೆ.

ಈ ಬಹುದೊಡ್ಡ ಯೋಜನೆಗೆ ರೂಪರೇಷೆ ಹಾಕಿದವರು ನಮ್ಮ ನಾಡಿನ ಹಿರಿಯ ವಚನ ಸಾಹಿತ್ಯ ಸಂಶೋಧಕರೂ ಶ್ರೀ ಮಠದ ಈ ಹಿಂದಿನ ಗ್ರಂಥಪ್ರಕಟನ ಯೋಜನೆಯ ನಿರ್ದೇಶಕರೂ ಆಗಿರುವ ಡಾ. ವೀರಣ್ಣ ರಾಜೂರ ಮತ್ತು ಅವರ ಆತ್ಮೀಯ ಸ್ನೇಹಿತರಾದ ಶ್ರೀ ಬಸವರಾಜ ಹೂಗಾರ ಅವರು, ತುಂಬ ಪರಿಶ್ರಮ-ತಾಳ್ಮೆ-ಜಾಣ್ಮೆವಹಿಸಿ ಈ ಕಾರ್ಯವನ್ನು ಅಚ್ಚುಕಟ್ಟಾಗಿ ನೆರವೇರಿಸಿ ಮುರುಘಾಮಠದ ಗ್ರಂಥ ಪ್ರಕಟಣೆ ಇತಿಹಾಸದಲ್ಲಿ ಒಂದು ನೂತನ ಮೈಲುಗಲ್ಲು ಸ್ಥಾಪಿಸಲು ಕಾರಣರಾದ ಈ ಇಬ್ಬರೂ ಸಾಹಿತ್ಯ ಸಾಧಕರಿಗೆ ಶಿವಯೋಗಿತ್ರಯರು ಶುಭಾಶೀರ್ವಾದ ನೀಡಲೆಂದು ಬಯಸುತ್ತೇವೆ.

ಕರ್ನಾಟಕ ಸರ್ಕಾರದ ರಾಷ್ಟ್ರೀಯ ಬಸವ ಪುರಸ್ಕಾರ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕರ್ನಾಟಕ ಮಾಧ್ಯಮ ಅಕಾಡೆಮಿ ಗೌರವ ಪ್ರಶಸ್ತಿ ಮುಂತಾದ ೪೫ ಪ್ರಶಸ್ತಿಗಳ ವಿಜೇತ ರಂಜಾನ್ ದರ್ಗಾ ಅವರು ಬಂಡಾಯ ಸಾಹಿತ್ಯ

ಪರಂಪರೆಯ ಶಕ್ತಿಶಾಲಿ ಕವಿಗಳಲ್ಲಿ ಒಬ್ಬರು. ಸಮಾಜ ವಿಜ್ಞಾನಿಯ ದೃಷ್ಟಿಕೋನವಿರುವ ದರ್ಗಾ ಅವರ ಚಿಂತನೆಗಳ ಕೇಂದ್ರಕಾಳಜಿ ಶರಣ ಸಾಹಿತ್ಯ, ಸಮತಾವಾದ ಮತ್ತು ಸೂಫಿ ವಿಚಾರಗಳ ನೆಲೆಯಲ್ಲಿ ವಚನ ಚಳವಳಿಯ ತತ್ತ್ವಗಳಿಗೆ ಹೊಸ ಹೊಳಹು ನೀಡುವುದರಲ್ಲಿ ತಲ್ಲೀನರಾಗಿದ್ದಾರೆ.

ವಿಜಾಪುರದಲ್ಲಿ ೨೦.೬.೧೯೫೧ರಂದು ಜನಿಸಿದ ದರ್ಗಾ ಅವರ ಬರಹಗಳಲ್ಲಿ ಬುದ್ಧ, ಪೈಗಂಬರ್, ಬಸವಣ್ಣ, ಮಾರ್ಕ್ಸ್, ವಿವೇಕಾನಂದ, ಗಾಂಧಿ ಮತ್ತು ಅಂಬೇಡ್ಕರ್ ಅವರ ಚಿಂತನೆಗಳನ್ನು ಒಟ್ಟೊಟ್ಟಿಗೆ ಕಾಣಬಹುದು. ಪ್ರಜಾವಾಣಿ ದಿನಪತ್ರಿಕೆಯಲ್ಲಿ ಸುದ್ದಿ ಸಂಪಾದಕರಾಗಿ ಸೇವೆಸಲ್ಲಿಸಿ ನಿವೃತ್ತಿ ಹೊಂದಿರುವ ರಂಜಾನ್ ದರ್ಗಾ ಈಗ ಧಾರವಾಡ ವಾಸಿಯಾಗಿದ್ದಾರೆ.

ಕಾವ್ಯ ಬಂತು ಬೀದಿಗೆ. (ಕಾವ್ಯ –೧೯೭೮), ಹೊಕ್ಕಳಲ್ಲಿ ಹೂವಿದೆ (ಕಾವ್ಯ), ನೆಲ್ಸನ್ ಮಂಡೇಲಾ, ಬಸವಣ್ಣನವರ ದೇವರು, ವಚನಕಲ್ಯಾಣ, ಬಸವಧರ್ಮದ ವಿಶ್ವಸಂದೇಶ, ಅಮೃತ ಮತ್ತು ವಿಷ, ಬಸವಪ್ರಜ್ಞೆ, ನಡೆನುಡಿ ಸಿದ್ಧಾಂತ, ಲಿಂಗವ ಪೂಜಿಸಿ ಫಲವೇನಯ್ಯಾ, ಜಾತಿವ್ಯವಸ್ಥೆಗೆ ಸವಾಲಾದ ಶರಣರು, ಶರಣರ ಸಮಗ್ರ ಕ್ರಾಂತಿ, ಸೌಹಾರ್ದಸೌರಭ, ಬಸವಣ್ಣ ಮತ್ತು ಅಂಬೇಡ್ಕರ್, ಮೂರ್ತ ಮತ್ತು ಅಮೂರ್ತ, ಸಾಹಿತ್ಯ ಮತ್ತು ಸಮಾಜ, ಬಸವಣ್ಣ ಏಕೆ ಬೇಕು? ಮುಂತಾದವು ಅವರ ಮಹತ್ವದ ಪ್ರಕಟಿತ ಕೃತಿಗಳಾಗಿವೆ. ಪ್ರಸ್ತುತ ಕೃತಿಯಲ್ಲಿ ಅವರ ಶರಣಸಾಹಿತ್ಯ ಕುರಿತ ೨೫ ಲೇಖನಗಳು ಅಳವಟ್ಟಿವೆ. ಇದನ್ನು ಪ್ರಕಟಿಸಲು ಕೊಡಮಾಡಿದ ಶ್ರೀ ರಂಜಾನನ ದರ್ಗಾ ಅವರಿಗೆ ಅನಂತ ಶರಣಾರ್ಥಿಗಳು.

ಗ್ರಂಥ ಪ್ರಕಟಣೆ ಇಂದು ತುಂಬ ವೆಚ್ಚವನ್ನು ಅಪೇಕ್ಷಿಸುವ ಕಾರ್ಯ. ಅದನ್ನು ಸುಲಭಗೊಳಿಸಿದವರು ಶ್ರೀಮಠದ ಸದ್ಭಕ್ತರು. ಅವರ ಉದಾರ ನೆರವು ಇಲ್ಲದಿದ್ದರೆ ಇಂಥ ದೊಡ್ಡ ಗಾತ್ರದ ಗ್ರಂಥಗಳ ದೊಡ್ಡ ಯೋಜನೆಯನ್ನು ಯಶಸ್ವಿಯಾಗಿ ಪೂರೈಸಲು ಸಾಧ್ಯವಾಗುತ್ತಿರಲಿಲ್ಲ. ಕಾರಣ ಗ್ರಂಥ ದಾಸೋಹ ನೀಡಿದ ಎಲ್ಲ ಹೃದಯ ಶ್ರೀಮಂತರಿಗೆ ಮೃತ್ಯುಂಜಯ–ಮಹಾಂತಪ್ಪಗಳ ಕೃಪಾಶೀರ್ವಾದ ಸದಾ ಇರಲಿ ಎಂದು ಹಾರೈಸುತ್ತೇವೆ.

ಗ್ರಂಥ ಪ್ರಕಟಣೆಗೆ ಸಂಬಂಧಿಸಿದ ಡಿ.ಟಿ.ಪಿ, ಮುಖ ಪುಟ ವಿನ್ಯಾಸ, ಮುದ್ರಣ ಇತ್ಯಾದಿ ಎಲ್ಲ ಕಾರ್ಯಗಳನ್ನು ತುಂಬ ಅಚ್ಚುಕಟ್ಟಾಗಿ ಪೂರೈಸಿದ ಡಾ. ಹನುಮಂತ ಮೇಲಿನಮನಿ, ಡಾ. ಸರಸ್ವತಿ ಭಗವತಿ; ಶ್ರೀ ಬಿ. ಮಾರುತಿ, ಶ್ರೀ ಕೆ. ಅಶೋಕ ಮೊದಲಾದವರಿಗೆ ಬಸವಾದಿ ಶರಣರ ಕೃಪಾಶೀರ್ವಾದ ನಿರಂತರವಾಗಿರಲೆಂದು ಬಯಸುತ್ತೇವೆ.

೨೨–೬–೨೦೧೮ – ಪ್ರಕಾಶಕರು

❖❖

*

ಪ್ರಧಾನ ಸಂಪಾದಕರ ನುಡಿ

ಶ್ರೀ ಮುರುಘಾಮಠ :

ಸಕಲ ಜೀವಾತ್ಮರ ಲೇಸನ್ನೇ ತನ್ನ ಪರಮಧ್ಯೇಯವನ್ನಾಗಿರಿಸಿಕೊಂಡು ಉದಿಸಿದ ಶರಣಧರ್ಮ ಉನ್ನತ ತತ್ವ- ಸಿದ್ಧಾಂತ-ಮೌಲ್ಯ-ಆದರ್ಶಗಳ ಕೂಡಲಸಂಗಮ. ಅರಿವು-ಆಚಾರ-ಅನುಭಾವ-ಕಾಯಕ-ದಾಸೋಹ ಇದರ ಪ್ರಾಣಜೀವಾಳ. ಇದರ ಪರಂಪರೆ ಉಜ್ವಲ; ಸಂಸ್ಕೃತಿ ನಿರ್ಮಲ; ಆಶಯ ಲೋಕೋತ್ತರ; ಖ್ಯಾತಿ ವಿಶ್ವಮಾನ್ಯ; ನೀತಿ ನಿತ್ಯನಿರಂಜನ.

ಇಂಥ ಅನನ್ಯ ಶರಣ ಸಂಸ್ಕೃತಿ ಪರಂಪರೆಯನ್ನು ಆಧುನಿಕ ಕಾಲದಲ್ಲಿ ನಿಷ್ಠೆಯಿಂದ ನಿರ್ವಹಿಸಿಕೊಂಡು ನಡೆದ ಧಾರ್ಮಿಕ ಸಂಸ್ಥೆಗಳಲ್ಲಿ ಕರ್ನಾಟಕದ ಲಿಂಗಾಯತ ಮಠಗಳ ಪಾತ್ರ ಮಹತ್ತರವಾದುದು. ಅವುಗಳಲ್ಲಿ ಧಾರವಾಡದ ಹೆಮ್ಮೆ ಎನಿಸಿದ ಶ್ರೀ ಮುರುಘಾಮಠದ ಹೆಸರು ಅಗ್ರಗಣ್ಯವೆನಿಸಿದೆ.

ಶ್ರೀ ಮುರುಘಾಮಠ ಸು. ಇನ್ನೂರಾ ಐವತ್ತು ವರ್ಷಗಳ ಶ್ರೀಮಂತ ಪರಂಪರೆಯನ್ನು ಹೊಂದಿದ ಒಂದು ಧಾರ್ಮಿಕ ಶ್ರದ್ಧಾಕೇಂದ್ರ. ಶೂನ್ಯಪೀಠ ಪರಂಪರೆಯ ಮುರುಘಾ ಸಮಯಕ್ಕೆ ಸೇರಿದ ಇದು ಪೇಶ್ವೆಯವರ ಆಳ್ವಿಕೆಯ ಕಾಲಕ್ಕೆ (೧೭೪೦) ಇಮ್ಮಡಿ ಮುರಿಗಾ ಗುರುಸಿದ್ಧರ ಶಿಷ್ಯರಾದ ಶ್ರೀ ರುದ್ರಮುನಿ ಸ್ವಾಮಿಗಳಿಂದ ಸ್ಥಾಪಿತವಾಯಿತೆಂದು ಹೇಳಲಾಗುತ್ತದೆ. ಆದರೆ ಅಲ್ಲಿಂದ ಮುಂದಿನ ನೂರಾ ಐವತ್ತು ವರ್ಷಗಳ ಇದರ ಇತಿಹಾಸ ಕಾಲನ ಗರ್ಭದಲ್ಲಿ ಅಡಗಿಹೋಗಿದೆ.

ಕೇವಲ ಒಂದು ಸಣ್ಣ ಮುರುಕು ಮಂಟಪ. ಸುತ್ತಲೂ ಮುಳ್ಳುಕಂಟಿಗಳಿಂದ ಆವೃತವಾಗಿ ಕಗ್ಗಾಡಿನಂತಿದ್ದ ಈ ಮಠಕ್ಕೆ ಕಾಯಕಲ್ಪ ನೀಡಿ-ಮರುಜೀವ ತುಂಬಿ ಅದನ್ನು ಉತ್ತರೋತ್ತರವಾಗಿ ಬೆಳೆಸಿ, ಅದರ ಕೀರ್ತಿಯನ್ನು ಉತ್ತುಂಗಕ್ಕೇರಿಸಿದವರು ೧೯೧೬ ರಲ್ಲಿ ಶ್ರೀ ಮಠದ ಅಧಿಕಾರವನ್ನು ವಹಿಸಿಕೊಂಡ ಅಮೃತಹೃದಯಿ

ಪೂಜ್ಯ ಶ್ರೀ ಮೃತ್ಯುಂಜಯ ಅಪ್ಪಗಳವರು. ಅದನ್ನು ಇನ್ನಷ್ಟು ಏರೆತ್ತರಕ್ಕೆ ಕೊಂಡೊಯ್ದು ಜಾಜ್ವಲ್ಯಮಾನವಾಗಿ ಬೆಳಗಿಸಿದವರು ಮಾತೃಹೃದಯದ ಪೂಜ್ಯ ಶ್ರೀ ಮಹಾಂತ ಅಪ್ಪಗಳವರು.

ಮೃತ್ಯುಂಜಯ ಅಪ್ಪಗಳ ಸಂಕಲ್ಪ ಶಕ್ತಿ ಮತ್ತು ಮಹಾಂತ ಅಪ್ಪಗಳ ಕ್ರಿಯಾಶಕ್ತಿ ಸಮ್ಮಿಲನಗೊಂಡು ಶ್ರೀಮಠದಲ್ಲಿ ಅನೇಕ ವಿಧಾಯಕ ಕಾರ್ಯಯೋಜನೆಗಳು ರೂಪುಗೊಂಡವು.

೧. ಬಡವರು-ದೀನದಲಿತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಶ್ರೀ ಮುರುಘರಾಜೇಂದ್ರ ಉಚಿತ ಪ್ರಸಾದ ನಿಲಯ, ವಿದ್ಯಾರ್ಥಿಗಳ ವಾಸಕ್ಕಾಗಿ ಅರವತ್ತೂರು ಪುರಾತನರ ಹೆಸರಿನಲ್ಲಿ ವಸತಿ ನಿಲಯಗಳ ಸ್ಥಾಪನೆಯಾಯಿತು.

೨. ಶರಣಧರ್ಮ-ತತ್ವ-ಮೌಲ್ಯಗಳ ಪ್ರಸಾರಕ್ಕಾಗಿ ಅಖಿಲಭಾರತ ಶಿವಾನುಭವ ಸಂಸ್ಥೆ, ಶಿವಾನುಭವ ಪರೀಕ್ಷೆಗಳಿಗೆ ಚಾಲನೆ ದೊರೆಯಿತು.

೩. ಶರಣ ಸಾಹಿತ್ಯ ಪ್ರಕಟಣೆ-ಪ್ರಸಾರಕ್ಕಾಗಿ ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, 'ಸಾವಧಾನ' ಪತ್ರಿಕೆ ಆರಂಭವಾದವು.

೪. ಶರಣ ಸಂಸ್ಕೃತಿ ಪ್ರಸಾರಕ್ಕಾಗಿ ಶಿವಯೋಗಿಗಳ ರಥೋತ್ಸವ, ಶ್ರಾವಣ ಮಾಸದ ಪುರಾಣ-ಪ್ರವಚನ-ಉಪನ್ಯಾಸ-ಸಂಗೀತ ಕಾರ್ಯಕ್ರಮಗಳಿಗೆ ಉತ್ತೇಜನ ಉಂಟಾಯಿತು.

ಹೀಗೆ ಅನ್ನದಾಸೋಹ, ಜ್ಞಾನದಾಸೋಹ, ಅನುಭಾವದಾಸೋಹಗಳ ತ್ರಿವೇಣಿ ಸಂಗಮವೆನಿಸಿ ಶ್ರೀ ಮುರುಘಾಮಠ ಕರ್ನಾಟಕದ ಸುಪ್ರಸಿದ್ಧ ಪವಿತ್ರ ತಾಣವಾಗಿ ಖ್ಯಾತಿಗಳಿಸಿತು. ನಾಡಿನ ಭಕ್ತ ಕುಲಕೋಟಿಯ ಹೃನ್ಮನಗಳನ್ನು ನಿರಂತರ ತನ್ನತ್ತ ಸೆಳೆದುಕೊಳ್ಳುತ್ತ ನೆಮ್ಮದಿಯ ನೆಲೆಯಾಗಿ, ಶಾಂತಿಯ ನಿಕೇತನವಾಗಿ ಪರಿಣಮಿಸಿತು.

ಶ್ರೀ ಮುರುಘರಾಜೇಂದ್ರ ಉಚಿತ ಪ್ರಸಾದ ನಿಲಯ :

'ಶ್ರೀಮನ್ನಿರಂಜನ ಜಗದ್ಗುರು ಮುರುಘರಾಜೇಂದ್ರ ಉಚಿತ ಪ್ರಸಾದ ನಿಲಯ' ಪೂಜ್ಯ ಶ್ರೀ ಮೃತ್ಯುಂಜಯ ಅಪ್ಪಗಳ ಕಾರುಣ್ಯದ ಕೂಸು. ಅವರು ಶ್ರೀಮಠದ ಅಧಿಕಾರ ವಹಿಸಿಕೊಂಡ ಐದೂವರೆ ತಿಂಗಳ ಅವಧಿಯಲ್ಲಿ ಮೊದಲು ಮಾಡಿದ ಮಹತ್ಕಾರ್ಯವೇ ಪ್ರಸಾದನಿಲಯದ ಸ್ಥಾಪನೆ (೨೭-೩-೧೯೧೭). ಅವರ ಲೋಕಕಲ್ಯಾಣ ಪುರುಷದೃಷ್ಟಿ, ಸಕಲ ಜೀವಾವಳಿಯ ಬಗೆಗೆ ಅವರಲ್ಲಿದ್ದ ಅಪಾರವಾದ ಅಂತಃಕರಣ-ಅನುಕಂಪಗಳೇ ಈ ಪ್ರಸಾದ ನಿಲಯದ ಹುಟ್ಟಿಗೆ ಕಾರಣವಾದವು.

ಆರಂಭಕಾಲದಲ್ಲಿ ಪ್ರಸಾದ ನಿಲಯ ನಡೆಸಲು ಪೂಜ್ಯರು ಪಟ್ಟ ಪರಿಶ್ರಮ ಅಪರಿಮಿತ. ಹಳ್ಳಿ ಹಳ್ಳಿಗೆ ಹೋಗಿ ಪಾದಚಾರಿಗಳಾಗಿ ಸಂಚರಿಸಿ ಧನ-ಧಾನ್ಯ

ಸಂಗ್ರಹಿಸಿದರು. ವಿದ್ಯಾರ್ಥಿಗಳಿಗೆ ಯಾವುದೇ ರೀತಿಯ ಕೊರತೆಯಾಗದಂತೆ ನೋಡಿಕೊಂಡರು.

ಮೃತ್ಯುಂಜಯಪ್ಪಗಳಿಗೆ ವಿದ್ಯಾರ್ಥಿಗಳೇ ಸರ್ವಸ್ವವಾಗಿದ್ದರು. ಅವರ ಉಜ್ವಲ ಭವಿಷ್ಯ ಜೀವನ ರೂಪಿಸುವುದೇ ಅವರ ಮಹಾಮಣಿಹವಾಗಿತ್ತು. ವಿದ್ಯಾರ್ಥಿಗಳ ಹೊಟ್ಟೆಗೆ ಪ್ರಸಾದ, ನೆತ್ತಿಗೆ ಜ್ಞಾನ, ಹೃದಯಕ್ಕೆ ಸಂಸ್ಕಾರ ನೀಡಿ ಶ್ರೇಷ್ಠ ಪ್ರಜೆಗಳನ್ನಾಗಿ ಮಾಡಿದರು. ಅನೇಕ-ಸಾವಿರ ವಿದ್ಯಾರ್ಥಿಗಳು ಈ ಪ್ರಸಾದ ನಿಲಯದಲ್ಲಿದ್ದು ಪ್ರಸಾದ ಪಡೆದು ವಿದ್ಯಾರ್ಜನೆ ಮಾಡಿದ್ದಾರೆ. ಇಲ್ಲಿ ಕಲಿತ ವಿದ್ಯಾರ್ಥಿಗಳು ವಿವಿಧ ಕ್ಷೇತ್ರಗಳಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ ಕೀರ್ತಿಗಳಿಸಿದ್ದಾರೆ. ರಾಷ್ಟ್ರಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿ ಶ್ರೀಮಠದ ಹೆಸರನ್ನು ಬೆಳಗಿಸಿ ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡಿದ್ದಾರೆ. ಮೃತ್ಯುಂಜಯ ಅಪ್ಪಗಳು ಆರಂಭಿಸಿದ ಈ ಪ್ರಸಾದ ನಿಲಯವೇ ಮುಂದೆ ಕರ್ನಾಟಕದಲ್ಲಿ ಅನೇಕ ಪ್ರಸಾದ ನಿಲಯಗಳು ಹುಟ್ಟಿಕೊಳ್ಳಲು ಪ್ರೇರಣೆ ನೀಡಿತೆಂಬುದು ಒಂದು ಐತಿಹಾಸಿಕ ಮಹತ್ವದ ಸ್ಮರಣೀಯ ಸಂಗತಿಯಾಗಿದೆ.

ಪ್ರಸಾದ ನಿಲಯದ ಶತಮಾನೋತ್ಸವ :

೨೦೧೭ ಮುರುಘರಾಜೇಂದ್ರ ಪ್ರಸಾದ ನಿಲಯದ ಶತಮಾನೋತ್ಸವ ವರ್ಷ. ನೂರು ವರ್ಷದ ಈ ಸಾರ್ಥಕ ಸಂದರ್ಭವನ್ನು ಅರ್ಥಪೂರ್ಣ ಯೋಜನೆಗಳ ಮೂಲಕ ಸ್ಮರಣೀಯವಾಗಿಸಲು ಶ್ರೀಮಠದ ಇಂದಿನ ಪೂಜ್ಯರಾದ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು-ಶ್ರೀಮಠದ ಆಡಳಿತ ಮಂಡಳಿಯ ಎಲ್ಲ ಸದಸ್ಯರು ಹಾಗೂ ಸಕಲ ಸದ್ಭಕ್ತರ ಸಹಕಾರದೊಂದಿಗೆ-ಸಂಕಲ್ಪ ಮಾಡಿದ್ದಾರೆ.

ಪೂಜ್ಯ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ತ್ರಿವಿಧ ದಾಸೋಹಿಗಳು. ಅಧ್ಯಯನ-ಅನುಷ್ಠಾನ-ಚಿಂತನ-ಮನನಗಳಿಂದ ಗಟ್ಟಿಗೊಂಡ ಸಾತ್ವಿಕ ಶೀಲಸಂಪನ್ನರು; ಪ್ರವಚನಾಚಾರ್ಯರು; ಸಾಹಿತ್ಯ ಪ್ರೇಮಿಗಳು. ಉತ್ಸಾಹ-ದೂರ ದೃಷ್ಟಿ-ಕ್ರಿಯಾಶೀಲತೆ-ಕಾರ್ಯದಕ್ಷತೆ-ಬದ್ಧತೆ ಅವರ ವ್ಯಕ್ತಿತ್ವದ ವಿಶಿಷ್ಟ ಲಕ್ಷಣಗಳು. ಸದಾ ಹೊಸದನ್ನು ಮಾಡಬೇಕು, ಅದ್ದೂರಿಯಾಗಿ ಮಾಡಬೇಕು, ಅರ್ಥಪೂರ್ಣವಾಗಿ ಮಾಡಬೇಕು, ಅದರಿಂದ ಸಮಾಜಕ್ಕೆ, ಲೋಕಕ್ಕೆ ಒಳಿತಾಗಬೇಕು ಎಂಬ ಉತ್ಕಟ ಹಂಬಲ; ಅದಕ್ಕೆ ಮೃತ್ಯುಂಜಯಪ್ಪ-ಮಹಾಂತಪ್ಪಗಳ ಆಶೀರ್ವಾದದ ಬೆಂಬಲ.

ಹೀಗಾಗಿ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಮುರುಘಾಮಠದ ಕರ್ಣಧಾರತ್ವವನ್ನು ವಹಿಸಿಕೊಂಡ ನಂತರ ಶ್ರೀಮಠದ ಕಾರ್ಯ ಚಟುವಟಿಕೆಗಳಿಗೆಲ್ಲ ಹೊಸ ಚೈತನ್ಯ ಮೂಡಿತು. ಭೌತಿಕ ಮತ್ತು ಬೌದ್ಧಿಕ ಎರಡೂ ವಲಯಗಳಲ್ಲಿ ಅನೇಕ ಪ್ರಗತಿ ಕಾರ್ಯಗಳು ಕಣ್ತೆರೆದುಕೊಂಡವು. ಅಪೂರ್ಣವಾಗಿದ್ದ 'ಮೃತ್ಯುಂಜಯ

ಅತಿಥಿಗೃಹ' ಶ್ರೀಮಠದ ಹಳೆಯ ವಿದ್ಯಾರ್ಥಿಗಳ ಸಹಕಾರದಿಂದ ನಿರ್ಮಾಣವಾಯಿತು. ನೂತನ ದಾಸೋಹ ಭವನ ಪೂರ್ಣಗೊಂಡಿತು. ಮಠದ ಒಳ ಆವರಣ ನವೀಕರಣ ತಾಳಿತು. ಮಹಾಂತಪ್ಪಗಳ ಅಮೃತ-ಶಿಲಾಮೂರ್ತಿ ಪ್ರತಿಷ್ಠಾಪನೆಯಾಯಿತು. ಶ್ರಾವಣಮಾಸದ ಕಾರ್ಯಕ್ರಮಗಳು ಹೊಸರೂಪ ಪಡೆದವು. 'ಸಾವಧಾನ' ಪತ್ರಿಕೆಗೆ ಮರುಜೀವ ಬಂದಿತು. ಶಿವಯೋಗಿಗಳ ಜಾತ್ರಾ ಮಹೋತ್ಸವ ಧಾರ್ಮಿಕ-ಸಾಹಿತ್ಯಿಕ-ಸಾಂಸ್ಕೃತಿಕ ಕಾರ್ಯಕ್ರಮಗಳ ತ್ರಿವೇಣಿ ಎನಿಸಿತು. ಗ್ರಂಥ ಪ್ರಕಟಣೆ ಗರಿಗೆದರಿತು. ಮೃತ್ಯುಂಜಯ-ಮಹಂತ ಪ್ರಶಸ್ತಿ ಸ್ಥಾಪನೆಗೊಂಡಿತು. ಬಸವ ಜಯಂತಿ ಶತಮಾನೋತ್ಸವ ಅರ್ಥಪೂರ್ಣವಾಗಿ ಆಚರಿಸಲ್ಪಟ್ಟಿತು. ಅಖಿಲಭಾರತ ೧೧ನೆಯ ಶರಣ ಸಾಹಿತ್ಯ ಸಮ್ಮೇಲನ ಯಶಸ್ವಿಯಾಗಿ ಜರುಗಿತು. ಪೂಜ್ಯ ಮಹಾಂತಪ್ಪಗಳ ಜನ್ಮ ಶತಮಾನೋತ್ಸವ ವೈಭವೋಪೇತವಾಗಿ ನೆರವೇರಿತು.

ಈಗ ಪೂಜ್ಯರು ಹಮ್ಮಿಕೊಂಡಿರುವ ಮತ್ತೊಂದು ಮಹತ್ವಾಕಾಂಕ್ಷೆಯ ಮಹತ್ಕಾರ್ಯ ಮುರುಘರಾಜೇಂದ್ರ ಉಚಿತ ಪ್ರಸಾದ ನಿಲಯದ ಶತಮಾನೋತ್ಸವ. ಇದರ ಅಂಗವಾಗಿ ಈ ಕೆಳಗಿನ ಮಹತ್ವದ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ.

೧. ಈಗಿರುವ ನೂತನ ಪ್ರಸಾದ ನಿಲಯದ ಮೇಲೆ ಸುಸಜ್ಜಿತವಾದ ವಿಶಾಲ-ಸುಂದರ ಸಭಾಭವನವನ್ನು ನಿರ್ಮಿಸುವುದು.

೨. ಮಠದ ಮುಂಭಾಗದಲ್ಲಿ ಕಲಾತ್ಮಕವಾದ ಭವ್ಯ ಮಹಾದ್ವಾರ ಕಟ್ಟಿಸಿ, ಅದರ ಶಿರೋಭಾಗದಲ್ಲಿ ಮಹಾಮಾನವತಾವಾದಿ ಬಸವಣ್ಣನವರ ಅಮೃತಶಿಲಾ ಮೂರ್ತಿಯನ್ನು ಪ್ರತಿಷ್ಠಾಪಿಸುವುದು.

೩. ಶತಮಾನೋತ್ಸವ ಸಂಕೇತವಾಗಿ ಶರಣಧರ್ಮ-ಸಾಹಿತ್ಯ-ಸಂಸ್ಕೃತಿ ಕುರಿತ ನೂರೊಂದು ಮೌಲಿಕ ಗ್ರಂಥಗಳನ್ನು ಪ್ರಕಟಿಸಿ ಏಕಕಾಲಕ್ಕೆ ಬಿಡುಗಡೆಗೊಳಿಸುವುದು.

೪. ಪ್ರಸಾದ ನಿಲಯದ ನೂರುವರ್ಷದ ನೆನಪಿಗಾಗಿ ಕರ್ನಾಟಕದ ನೂರು ಪ್ರಸಾದ ನಿಲಯಗಳ ಧಾರ್ಮಿಕ-ಸಾಮಾಜಿಕ-ಶೈಕ್ಷಣಿಕ-ಸಾಂಸ್ಕೃತಿಕ ಕೊಡುಗೆಗಳನ್ನು ತಿಳಿಸುವ ನೂರು ಲೇಖನಗಳನ್ನೊಳಗೊಂಡ ಬೃಹತ್ ಸ್ಮರಣ ಸಂಪುಟವೊಂದನ್ನು ಹೊರತರುವುದು.

೫. ನೂರು ವರ್ಷದ ಅವಧಿಯಲ್ಲಿ ಪ್ರಸಾದ ನಿಲಯದಲ್ಲಿದ್ದು ಅಧ್ಯಯನ ಮಾಡಿದ ವಿದ್ಯಾರ್ಥಿಗಳ ಸಮಗ್ರ ಸೂಚಿಯೊಂದನ್ನು ಪ್ರಕಟಿಸುವುದು.

೬. ಒಂದು ವರ್ಷ ಕಾಲ (ಜನೇವರಿ ೨೦೧೭ ರಿಂದ ಆರಂಭಿಸಿ)ನಾಡಿನ ಬೇರೆ ಬೇರೆ ಕಡೆಗಳಲ್ಲಿ ಮತ್ತು ಶ್ರೀಮಠದಲ್ಲಿ ಶರಣತತ್ವ ಬಿಂಬಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

೭. ಜನೇವರಿ ೨೦೧೮ ರಲ್ಲಿ ಶತಮಾನೋತ್ಸವದ ಸಮಾರೋಪ ಸಮಾರಂಭವನ್ನು ರಾಷ್ಟ್ರದ ಗಣ್ಯ ವ್ಯಕ್ತಿಗಳು ಹಾಗೂ ಪೂಜ್ಯರ ಸಾನಿಧ್ಯದಲ್ಲಿ ನೆರವೇರಿಸುವುದು.

ಸುಮಾರು ೫ ರಿಂದ ೬ ಕೋಟಿ ರೂ. ವೆಚ್ಚದ ಈ ಎಲ್ಲ ಯೋಜನೆಗಳು ಯಶಸ್ವಿಯಾಗಿ ಕಾರ್ಯರೂಪಕ್ಕೆ ಬರುವಲ್ಲಿ ನಾಡಿನ ಸಕಲ ಸದ್ಭಕ್ತರ ಸಕ್ರಿಯ ಸಹಕಾರ ಅತ್ಯಗತ್ಯವಾಗಿದೆ. ಸಂಕಲ್ಪಿತ ಈ ಸಮಾರಂಭ ಶ್ರೀಮಠದ ಚರಿತ್ರೆಯಲ್ಲಿ ಒಂದು ಐತಿಹಾಸಿಕ ಘಟನೆಯಾಗಿ ಅಚ್ಚಳಿಯದೆ ದಾಖಲೆಗೊಳ್ಳುವಂತೆ ಮಾಡಲು ತಮ್ಮನ್ನು ಸಮರ್ಪಿಸಿಕೊಂಡ ಸರ್ವರೂ ಅಭಿನಂದನೆಗೆ ಪಾತ್ರರಾಗಿದ್ದಾರೆ.

ನೂರೊಂದು ಗ್ರಂಥಗಳು :

ಪ್ರಸಾದ ನಿಲಯದ ಶತಮಾನೋತ್ಸವ ಸ್ಮರಣೆಗಾಗಿ ಪ್ರಕಟಿಸಲು ಆಯ್ಕೆ ಮಾಡಿದ ಗ್ರಂಥಗಳೆಲ್ಲ ಶರಣಸಾಹಿತ್ಯಕ್ಕೆ ಸಂಬಂಧಿಸಿದುವಾಗಿವೆ. ಇವುಗಳಲ್ಲಿ ಏಕವ್ಯಕ್ತಿ ಷಟ್‌ಸ್ಥಲ ವಚನ ಸಂಪುಟಗಳು, ನಿಶ್ಚಿತ ವಿಷಯ ಕುರಿತ ಅನೇಕವ್ಯಕ್ತಿ ಆಯ್ದ ವಚನ ಸಂಕಲನಗಳು, ಸ್ವರವಚನ ಸಂಪುಟಗಳು, ತಾತ್ವಿಕ ಗ್ರಂಥಗಳು, ಲಿಂಗಾಯತ ಪ್ರಾಚೀನ ಕಾವ್ಯಗಳು, ವಚನ ಸಾಹಿತ್ಯ ಸಂಬಂಧಿ ಏಕವ್ಯಕ್ತಿ ಬಿಡಿ ಲೇಖನ ಸಂಗ್ರಹಗಳು ಸಮಾವೇಶಗೊಂಡಿವೆ. ಕೃತಿಗಳ ಪುಟ ವ್ಯಾಪ್ತಿ ೧೦೦ ರಿಂದ ೫೦೦ ರವರೆಗೆ ವಿಸ್ತರಿಸಿಕೊಂಡಿದೆ. ಇದರಲ್ಲಿ ಕೆಲವು ಮರುಮುದ್ರಣಗಳಾದರೆ, ಮತ್ತೆ ಕೆಲವು ಪ್ರಥಮ ಮುದ್ರಣಗಳೆನಿಸಿವೆ. ಸದಾಕಾಲ ಅಧ್ಯಯನ ಯೋಗ್ಯವಾದ ವಚನ, ಸ್ವರವಚನಗಳಿಗೆ, ಸುಪ್ರಸಿದ್ಧ ವಿದ್ವಾಂಸರು ಬರೆದ ಮೌಲಿಕ ಬಿಡಿ ಬರಹಗಳಿಗೆ, ಬಹುಕಾಲದಿಂದ ಪ್ರಕಟವಾಗದೆ ಸಂಶೋಧಕರಿಗೆ ಅಲಭ್ಯವೆನಿಸಿದ್ದ ಪ್ರಾಚೀನ ಕಾವ್ಯಗಳಿಗೆ ಇಲ್ಲಿ ವಿಶೇಷ ಆದ್ಯತೆ ಕೊಡಲಾಗಿದೆ. ಹೀಗಾಗಿ ಇವು ಕೇವಲ ಸಂಖ್ಯೆಯನ್ನು ಪೂರೈಸಲು ಪ್ರಕಟಿಸಿದ ಸಾಮಾನ್ಯ ಕೃತಿಗಳಾಗಿರದೆ, ಸಂಶೋಧಕರು ಹಾಗೂ ಸಾಮಾನ್ಯ ಓದುಗರು ಉಭಯತರಿಗೂ ತುಂಬ ಉಪಯುಕ್ತವಾದ ಉನ್ನತ ಗುಣಮಟ್ಟದ ರಚನೆಗಳಾಗಿವೆಯೆಂದು ಹೇಳಲು ಬಯಸುತ್ತೇವೆ.

ಇಷ್ಟು ದೊಡ್ಡ ಸಂಖ್ಯೆಯ ಸಾಹಿತ್ಯಿಕ-ಮೌಲಿಕ ಗ್ರಂಥಗಳು ಏಕಕಾಲಕ್ಕೆ ಪ್ರಕಟವಾಗುತ್ತಿರುವುದು ಮುರುಘಾಮಠದ ಗ್ರಂಥ ಪ್ರಕಟಣ ಇತಿಹಾಸದಲ್ಲಿಯೇ ಒಂದು ಅವಿಸ್ಮರಣೀಯ ಅಧ್ಯಾಯ. ಈ ಜ್ಞಾನದಾಸೋಹ ಮಹಾಮಣಿಹದ ರೂವಾರಿಗಳು, ಮಾರ್ಗದರ್ಶಕರು ಪೂಜ್ಯ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು. ಇಂಥ ಒಂದು ಅಪೂರ್ವ ಕಾರ್ಯವನ್ನು ಮಾಡುವ ಮಹಾಭಾಗ್ಯವನ್ನು ನಮಗೆ ಒದಗಿಸಿದ ಪೂಜ್ಯರ ಚರಣಕಮಲಗಳಿಗೆ ಅನಂತ ಪ್ರಣಾಮಗಳನ್ನು ಅರ್ಪಿಸುತ್ತೇವೆ.

ಇದನ್ನು ಯಶಸ್ವಿಯಾಗಿ ಪೂರೈಸಲು ಶಕ್ತಿ-ಸಾಮರ್ಥ್ಯ-ಆಶೀರ್ವಾದಗಳನ್ನು ನೀಡಿದ ಶ್ರೀಮಠದ ದಿವ್ಯ ಚೇತನರಾದ ಶಿವಯೋಗಿತ್ರಯರ ಸನ್ನಿಧಿಗೆ ಅನಂತ ಶರಣಾರ್ಥಿಗಳು. ಈ ಮಹತ್ಕಾರ್ಯದಲ್ಲಿ ಸಕ್ರಿಯವಾಗಿ ಕೈಜೋಡಿಸಿದ ಎಲ್ಲ ಗ್ರಂಥಕರ್ತರಿಗೆ, ಗ್ರಂಥ ದಾಸೋಹಿಗಳಿಗೆ, ಛಾಯಾಕ್ಷರ ಸಂಯೋಜಕರಿಗೆ, ಮುಖಪುಟ ವಿನ್ಯಾಸಕಾರರಿಗೆ, ಮುದ್ರಕರಿಗೆ ಹಾಗೂ ಒಟ್ಟಾಗಿ ಸಲಹೆ-ಸಹಾಯ-ಸಹಕಾರ ನೀಡಿದ ಎಲ್ಲ ಸಹೃದಯರಿಗೆ ಅನಂತ ಕೃತಜ್ಞತೆಗಳು.

೨೨-೬-೨೦೧೮ -ವೀರಣ್ಣ ರಾಜೂರ

❖❖

*

ಲೇಖಕರ ನುಡಿ

ನನ್ನ ವಿವಿಧ ಪುಸ್ತಕಗಳಿಂದ ಆಯ್ದ ಲೇಖನಗಳನ್ನು ಕೂಡಿಸಿ ಈ 'ಬಸವಣ್ಣನವರ ಪರ್ಯಾಯ ಸಮಾಜ' ಪುಸ್ತಕವನ್ನು ಸಿದ್ಧಪಡಿಸಲಾಗಿದೆ. ಇಲ್ಲಿರುವ ಲೇಖನಗಳೆಲ್ಲ ಶೀರ್ಷಿಕೆಯ ಆಶಯವನ್ನು ಹೊಂದಿದವುಗಳಾಗಿವೆ. ಮುರುಘರಾಜೇಂದ್ರ ಪ್ರಸಾದ ನಿಲಯದ ಶತಮಾನೋತ್ಸವದ ಸವಿ ನೆನಪಿಗಾಗಿ ಪ್ರಕಟವಾಗುತ್ತಿರುವ ನೂರೊಂದು ಪುಸ್ತಕಗಳಲ್ಲಿ ಇದು ಕೂಡ ಒಂದಾಗಿದೆ ಎಂಬುದು ನನಗೆ ಬಹಳ ಸಂತಸವನ್ನುಂಟು ಮಾಡಿದೆ.

ಗ್ರಂಥ ಪ್ರಕಟಣೆಯನ್ನು ತಮ್ಮ ಬದುಕಿನ ಉಸಿರಾಗಿಸಿಕೊಂಡು ಗ್ರಂಥ ಪ್ರಕಟಣಾ ಕ್ರಾಂತಿ ಮಾಡುತ್ತಿರುವ ಪೂಜ್ಯ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಈ ನೂರೊಂದು ಗ್ರಂಥ ಪ್ರಕಟಣಾ ಕಾರ್ಯಕ್ಕೆ ಮಾರ್ಗದರ್ಶಿಗಳಾಗಿದ್ದಾರೆ. ಡಾ. ವೀರಣ್ಣ ರಾಜೂರ ಮತ್ತು ಶ್ರೀ ಬಸವರಾಜ ಹೂಗಾರ ಅವರ ಪ್ರಧಾನ ಸಂಪಾದಕತ್ವದಲ್ಲಿ, ಶ್ರೀ ಮುರುಘಾಮಠದ ಶ್ರೀ ಬಾಲಲೀಲಾ ಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ ಪ್ರಕಾಶನದ ಮೂಲಕ ಈ ಮಹತ್ವದ ಯೋಜನೆ ಕಾರ್ಯಗತವಾಗುತ್ತಿದೆ. ಇವರೆಲ್ಲರಿಗೂ ಮತ್ತು ತ್ವರಿತ ಮುದ್ರಣದ ಶ್ರೀ ಕೆ. ಅಶೋಕ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಧಾರವಾಡ — –ರಂಜಾನ್ ದರ್ಗಾ

೨೨-೬-೨೦೧೮

*

ಪರಿವಿಡಿ

❖❖

೧

❖

೨೧ನೇ ಶತಮಾನಕ್ಕೆ ಬಸವಧರ್ಮ

ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದಗಳು ೨೧ನೇ ಶತಮಾನಕ್ಕೆ ಭಾರಿ ದೊಡ್ಡ ಸವಾಲುಗಳಾಗಿ ನಿಂತಿವೆ. ಈ ಭೇದಗಳಲ್ಲದೆ ಭಯೋತ್ಪಾದನೆ, ಜನಾಂಗಹತ್ಯೆ, ಯುದ್ಧ, ನಿರುದ್ಯೋಗ, ಆರ್ಥಿಕ ಹಿಂಜರಿತ, ಕೊಲೆ, ಸುಲಿಗೆ, ಅತ್ಯಾಚಾರ, ಹಸಿವು, ಬಡತನ, ಮಾನಸಿಕ ಒತ್ತಡ ಮತ್ತು ಪರಿಸರ ಸಮಸ್ಯೆಗಳು ಇಡೀ ವಿಶ್ವವನ್ನು ಕಾಡುತ್ತಿವೆ. ಜನಾಂಗಗಳ ಮತ್ತು ದೇಶಗಳ ಮಧ್ಯೆ ಅಪನಂಬಿಕೆ ಹೆಚ್ಚುತ್ತಿದೆ. ಮಾನವೀಯತೆ, ಜೀವಕಾರುಣ್ಯ ಮತ್ತು ಎಲ್ಲ ಜನಾಂಗಗಳ ಬಗೆಗಿನ ಪ್ರೇಮಭಾವ ಕಡಿಮೆಯಾಗುತ್ತ ದ್ವೇಷ ಬೆಳೆಯುತ್ತಿದೆ. ಇಂಥ ವಿಷಮ ಪರಿಸ್ಥಿತಿಯಲ್ಲಿ ವಿಶ್ವಮಾನ್ಯವಾದ ಬಸವಣ್ಣನವರ ಚಿಂತನೆಗಳು, ಜಗತ್ತನ್ನು ಎಲ್ಲ ಅನಿಷ್ಟಗಳಿಂದ ಮುಕ್ತಗೊಳಿಸುವ ಶಕ್ತಿಯನ್ನು ಹೊಂದಿವೆ.

ಭೌತಿಕ ಜಗತ್ತಿನ ಕಾಳಜಿಯೊಂದಿಗೆ ಆಧ್ಯಾತ್ಮಿಕ ಜಗತ್ತಿನ ಕಡೆಗೆ ಸಾಗುವುದು. ಭೌತಿಕ ಜಗತ್ತಿನ ಅನುಭವದ ಮೂಲಕ ಆಧ್ಯಾತ್ಮಿಕ ಜಗತ್ತಿನ ಅನುಭಾವ ಪಡೆಯುವುದು. ಸಂಸಾರದಲ್ಲಿ ಇದ್ದುಕೊಂಡೇ ಸದ್ಗತಿಯನ್ನು ಹೊಂದುವುದು. ಸಮಾಜಸೇವೆಯ ಮೂಲಕ ದೇವರಲ್ಲಿ ನಿಷ್ಠೆಯನ್ನು ಹೊಂದುವುದು. ಎಲ್ಲ ಧರ್ಮಗಳ ಜನರ ಬಗ್ಗೆ ಮತ್ತು ಎಲ್ಲ ಪಶು ಪಕ್ಷಿ ಮುಂತಾದ ಜೀವಿಗಳ ಬಗ್ಗೆ ಕಾಳಜಿಯನ್ನು ವ್ಯಕ್ತಪಡಿಸುವುದು. ಪರಿಸರ ಸಮತೋಲನವನ್ನು ಕಾಪಾಡುವುದು. ದೇಶ, ಭಾಷೆ, ಜಾತಿ, ಧರ್ಮ ಮತ್ತು ಜನಾಂಗಗಳ ಮಧ್ಯೆ ಮಾನವೀಯ ಸಂಬಂಧಗಳನ್ನು ಬೆಳೆಸುವುದು. "ಒಬ್ಬನೇ ದೇವರು, ಒಂದೇ ವಿಶ್ವ ಮತ್ತು ಒಂದೇ ಮಾನವ ಜನಾಂಗ" ಎಂಬ ಸತ್ಯವನ್ನು ಸಾರುವುದು ಲಿಂಗವಂತ ಧರ್ಮ ಎಂಬ ಬಸವಧರ್ಮದ ಗುರಿಯಾಗಿದೆ.

ಬಸವಣ್ಣನವರು ೧೨ನೇ ಶತಮಾನದಲ್ಲೇ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಎತ್ತಿಹಿಡಿದರು. ಸಮಾಜೋಧಾರ್ಮಿಕ ಸಂಸತ್ತು ಎಂದು ಕರೆಯಿಸಿಕೊಳ್ಳುವ ಅನುಭವ ಮಂಟಪವನ್ನು ಸ್ಥಾಪಿಸಿದರು. ಈ ಅನುಭವ ಮಂಟಪದಲ್ಲಿ ಎಲ್ಲ ಕಾಯಕಜೀವಿಗಳ ೭೭೦ ಪ್ರತಿನಿಧಿಗಳಿದ್ದರು. ಕಸಗುಡಿಸುವವರ, ತೊಗಲು ಹದ ಮಾಡುವವರ,

ಪಾದರಕ್ಷೆಗಳನ್ನು ಹೊಲಿಯುವವರ, ದೋಣಿ ನಡೆಸುವವರ, ಬಟ್ಟೆ ಒಗೆಯುವವರ, ಹುಲ್ಲು ಮಾರುವವರ, ರೈತರ. ನೇಕಾರರ, ಕ್ಷೌರಿಕರ, ಬಡಗಿಗಳ, ವೈದ್ಯರ, ದನ ಕಾಯುವವರ, ಕಟ್ಟಿಗೆ ಮಾರುವವರ, ಕಮ್ಮಾರರ, ಕುಂಬಾರರ, ಅಕ್ಕಸಾಲಿಗರ, ಕುರುಬರ, ಬುಟ್ಟಿ ಹೆಣೆಯುವವರ, ವಾದ್ಯಗಳನ್ನು ನುಡಿಸುವವರ, ಬೀದಿನಾಟಕ ಮಾಡುವವರ, ಸಮಾಜದ ಕಟ್ಟಕಡೆಯಲ್ಲಿದ್ದು ಕಡುಬಡತನದಲ್ಲಿ ಜೀವನ ಸಾಗಿಸುವ ದಲಿತರ... ಹೀಗೆ ಹಲವು ಹದಿನೆಂಟು ರೀತಿಯ ಕಾಯಕ ಮಾಡುವವರ ಪ್ರತಿನಿಧಿಗಳಿಂದ ಅನುಭವ ಮಂಟಪ ಕಂಗೊಳಿಸುತ್ತಿತ್ತು. ಈ ಅನುಭವ ಮಂಟಪದಲ್ಲಿ ಎಲ್ಲ ಮಹಿಳಾ ಮತ್ತು ಪುರುಷ ಪ್ರತಿನಿಧಿಗಳಿಗೆ ಸಮಾನ ಅವಕಾಶವಿತ್ತು. ಎಲ್ಲರಿಗೂ ಮಾತನಾಡುವ ಹಕ್ಕಿತ್ತು. ೧೨ನೇ ಶತಮಾನಕ್ಕೆ ಮೊದಲು ಇಂಥ ಒಂದು ಪ್ರಜಾಪ್ರಭುತ್ವದ ಬೃಹತ್ ಪ್ರಯೋಗ ಜಗತ್ತಿನ ಯಾವ ಮೂಲೆಯಲ್ಲೂ ನಡೆದಿಲ್ಲ ಎಂಬುದು ಗಮನಾರ್ಹವಾಗಿದೆ.

೧೨ನೇ ಶತಮಾನದಲ್ಲಿ ಕೆಳವರ್ಗದ ಜನರಿಗೆ ಮತ್ತು ಮಹಿಳೆಯರಿಗೆ ಶಿಕ್ಷಣ ಪಡೆಯುವ ಹಕ್ಕು ಇದ್ದಿದ್ದಿಲ್ಲ. ಬಸವಣ್ಣನವರು ಇಂಥ ಅಕ್ಷರ ವಂಚಿತರಿಗೆ ಅಕ್ಷರ ಜ್ಞಾನ ನೀಡಿ, ಅವರು ಕೂಡ ವಚನಗಳನ್ನು ಬರೆದು ತಮ್ಮ ವಿಚಾರಗಳನ್ನು ವ್ಯಕ್ತಪಡಿಸುವಂಥ ವಾತಾವರಣವನ್ನು ಸೃಷ್ಟಿಸಿದರು. ಮಹಿಳೆ ಮತ್ತು ಪುರುಷರಿಗಾಗಿ ಈ ರೀತಿಯ ವಯಸ್ಕರ ಶಿಕ್ಷಣ ವ್ಯವಸ್ಥೆ ಜಗತ್ತಿನಲ್ಲಿ ಹಿಂದೆ ಎಲ್ಲಿಯೂ ಇದ್ದಿದ್ದಿಲ್ಲ.

ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣೆಯಲ್ಲಿನ ಎಲ್ಲ ೩೦ ಅಂಶಗಳೂ ಬಸವಣ್ಣನವರ ವಚನಗಳಲ್ಲಿ ಇವೆ. ಆ ಮೂಲಕ ಆಧುನಿಕ ಮಾನವನ ಆಶಯಗಳನ್ನು ಈಡೇರಿಸುವ ಶಕ್ತಿಯನ್ನು ಹೊಂದಿವೆ. ಬಡವರ ಮತ್ತು ಮಹಿಳೆಯರ ಹಕ್ಕಿಗಾಗಿ ಅಷ್ಟೇ ಅಲ್ಲದೆ ಅನೈತಿಕ ಸಂಬಂಧದಿಂದ ಹುಟ್ಟಿದ ಮಗುವಿನ ಹಕ್ಕಿಗಾಗಿಯೂ ಅವರು ಧ್ವನಿ ಎತ್ತಿದ್ದಾರೆ.

ಬಸವಣ್ಣನವರಿಗೆ ಇಷ್ಟಲಿಂಗಪೂಜೆ ಎಂಬುದು ಮಾನವ ಹಕ್ಕುಗಳ ಪ್ರಜ್ಞೆಯನ್ನು ಹೊಂದುವ ಸಾಧನವಾಗಿದೆ. ಮಾನವ ಏಕತೆಯನ್ನು ಸಾಧಿಸುವ ಕ್ರಮವಾಗಿದೆ.

ಲಿಂಗವ ಪೂಜಿಸಿ ಫಲವೇನಯ್ಯಾ,
ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ?
ಲಿಂಗವ ಪೂಜಿಸಿ ಫಲವೇನಯ್ಯಾ,
ಕೂಡಲಸಂಗಮದೇವರ ಪೂಜಿಸಿ
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?

–ಬಸವಣ್ಣ

ಎಂದು ಬಸವಣ್ಣನವರು ಪ್ರಶ್ನಿಸುತ್ತಾರೆ. ೨೧ನೇ ಶತಮಾನದ ಜಗತ್ತು ಕೂಡ ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದಗಳಿಂದ ಮುಕ್ತವಾಗಿಲ್ಲ. ಜಗತ್ತಿನ ಎಲ್ಲ ಜನಾಂಗಗಳ ಮಧ್ಯೆ ಸಾಮರಸ್ಯ ಮೂಡಿಲ್ಲ. ಈ ಎಲ್ಲ ಸಮಸ್ಯೆಗಳಿಂದಾಗಿ ಜಗತ್ತಿನ ಜನರು ಜನಾಂಗದ್ವೇಷ, ಕೊಲೆ, ಸುಲಿಗೆ ಮತ್ತು ಅಪನಂಬಿಕೆಗಳಿಗೆ ಬಲಿಯಾಗುತ್ತಲೇ ಇರುತ್ತಾರೆ. ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗುತ್ತಲೇ ಇರುತ್ತಾರೆ. ಇಂಥ ಸಮಸ್ಯೆಗಳಿಗೆ ಉತ್ತರ ಕಂಡುಕೊಳ್ಳುವುದೇ ಇಷ್ಟಲಿಂಗ ಪೂಜೆಯ ಉದ್ದೇಶವಾಗಿದೆ. ಬರಿ ಲಿಂಗಪೂಜೆ ಮಾಡುತ್ತ ಇಂಥ ಸಮಸ್ಯೆಗಳ ಬಗ್ಗೆ ಗಮನ ಹರಿಸದಿದ್ದರೆ ಮತ್ತು ಅವುಗಳ ನಿವಾರಣೆಗಾಗಿ ಪ್ರಯತ್ನಿಸದಿದ್ದರೆ ಇಷ್ಟಲಿಂಗಪೂಜೆ ಮಾಡುವುದು ವ್ಯರ್ಥ ಎಂಬುದನ್ನು ಬಸವಣ್ಣನವರು ಸ್ಪಷ್ಟಪಡಿಸುತ್ತಾರೆ.

ಸಮರತಿ ಎಂದರೆ ಸತಿ ಮತ್ತು ಪತಿ ಸಮಾನ ಹಕ್ಕು, ಗೌರವ, ವ್ಯಕ್ತಿ ಸ್ವಾತಂತ್ರ್ಯ ಮತ್ತು ಅಭಿಪ್ರಾಯ ಸ್ವಾತಂತ್ರ್ಯವನ್ನು ಹೊಂದಿ, ಲಿಂಗಭೇದವನ್ನು ಅಳಿಸಿ, ಪರಸ್ಪರ ಕಾಳಜಿಯೊಂದಿಗೆ ಎಲ್ಲರೂ ಒಂದಾಗಿ ಬದುಕುವುದು. ಹೀಗೆ ಬಸವಣ್ಣನವರು ಲಿಂಗಭೇದ ನೀತಿಯನ್ನು ವಿರೋಧಿಸುತ್ತಾರೆ.

ಸಮಕಳೆ ಎಂದರೆ ಪ್ರತಿಯೊಬ್ಬ ಮಾನವನಿಗೂ ಸಮನಾದ ತೇಜಸ್ಸು ಇರುವುದು. ಬ್ರಾಹ್ಮಣರಿಗೆ ಬ್ರಹ್ಮತೇಜಸ್ಸು ಮತ್ತು ಕ್ಷತ್ರಿಯರಿಗೆ ಕ್ಷಾತ್ರ ತೇಜಸ್ಸು ಎಂಬುದು ಇರುವುದಿಲ್ಲ. ಕೆಳಜಾತಿಯವರಿಗೆ ಮತ್ತು ಮೇಲ್ಜಾತಿಯವರಿಗೆ ಒಂದೇ ರೀತಿಯ ಮಾನವ ತೇಜಸ್ಸು ಇರುತ್ತದೆ. ಎಲ್ಲ ಮಾನವರು ಸಮಾನರಾಗಿದ್ದಾರೆ. ಜಾತಿ. ಕುಲ ಮತ್ತು ಧರ್ಮಗಳಿಂದ ಯಾರೂ ಮೇಲು ಮತ್ತು ಕೀಳು ಆಗುವುದಿಲ್ಲ. ಹೀಗೆ ಬಸವಣ್ಣನವರು ವರ್ಣಭೇದ ನೀತಿಯನ್ನು ವಿರೋಧಿಸುತ್ತಾರೆ.

ಸಮಸುಖ ಎಂದರೆ ಶ್ರೀಮಂತರು ಮತ್ತು ಬಡವರಿಗೆ ಒಂದೇ ತೆರನಾದ ಬದುಕು ಇರುತ್ತದೆ. ಶ್ರೀಮಂತರಿಗೆ ಒಂದು ರೀತಿಯ ಸುಖ ಮತ್ತು ಬಡವರಿಗೆ ಒಂದು ರೀತಿಯ ಸುಖ ಇರುವುದಿಲ್ಲ. ಎಲ್ಲ ಜೀವಗಳೂ ನೆಮ್ಮದಿಯಿಂದ ಬದುಕಲು ಬಯಸುತ್ತವೆ. ಈ ಭೂಮಿಯ ಮೇಲೆ ಬೇರೆಯವರಿಗೆ ತೊಂದರೆ ಕೊಡದೆ, ದುಡಿದು ಸುಖವಾಗಿ ಬದುಕುವ ಹಕ್ಕನ್ನು ಪ್ರತಿಯೊಬ್ಬರೂ ಪಡೆದಿದ್ದಾರೆ. ಬೇರೆಯವರ ಶೋಷಣೆ ಮಾಡುವ ಹಕ್ಕನ್ನು ಯಾರೂ ಪಡೆದಿಲ್ಲ ಎಂದು ಬಸವಣ್ಣನವರು ವರ್ಗಭೇದ ನೀತಿಯನ್ನು ವಿರೋಧಿಸುತ್ತಾರೆ.

ಎಲ್ಲ ಮಾನವರು ಪ್ರೇಮಭಾವದೊಂದಿಗೆ, ನದಿಯೊಳಗೆ ನದಿ ಬೆರೆತ ಹಾಗೆ ಒಂದಾಗಿ ಬದುಕಬೇಕು. ಯಾರೂ ಹೆಚ್ಚಿನವರಲ್ಲ ಯಾರೂ ಕಡಿಮೆಯಲ್ಲ. ಎಲ್ಲರೂ ಸಮಾನರು. ಆದ್ದರಿಂದ ಎಲ್ಲ ಜಾತಿ, ಜನಾಂಗ ಮತ್ತು ಧರ್ಮದವರು ಸೇರಿ

ಒಂದಾಗಿ ಬದುಕಬೇಕು. ಇಂಥ ಪ್ರಜ್ಞೆಯನ್ನು ಮೂಡಿಸುವುದೇ ಇಷ್ಟಲಿಂಗ ಪೂಜೆಯ ಉದ್ದೇಶವಾಗಿದೆ. ಒಂದು ವೇಳೆ ಇಷ್ಟಲಿಂಗ ಪೂಜಕರು ಈ ರೀತಿಯ ಪ್ರಜ್ಞೆಯನ್ನು ಬೆಳೆಸಿಕೊಳ್ಳದಿದ್ದರೆ ಮಾನವ ಏಕತೆ ಸಾಧಿಸಲಿಕ್ಕಾಗದು. ಆಗ ಇಷ್ಟಲಿಂಗ ಪೂಜೆಯ ಉದ್ದೇಶ ಈಡೇರದು. ಹೀಗೆ ನಿರರ್ಥಕ ಪೂಜೆ ಮಾಡಬೇಕಿಲ್ಲ ಎಂದು ಎಚ್ಚರಿಸುತ್ತಾರೆ.

ಬಸವಣ್ಣನವರ ಆಶಯದಂತೆ ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದಗಳನ್ನು ಅಳಿಸಿಹಾಕಿ, ನದಿಯೊಳಗೆ ನದಿ ಕೂಡುವ ಹಾಗೆ ಎಲ್ಲ ದೇಶಗಳ ಮತ್ತು ಎಲ್ಲ ಧರ್ಮಗಳ ಮಾನವರ ಏಕತೆಯನ್ನು ಸಾಧಿಸಿದಾಗ ಜಗತ್ತಿನಲ್ಲಿ ಶೋಷಣೆ ಎಂಬುದು ಇರುವುದಿಲ್ಲ. ಯುದ್ಧಗಳು ಇರುವುದಿಲ್ಲ. ಜನಾಂಗಹತ್ಯೆ ಇರುವುದಿಲ್ಲ. ಇಂಥ ಒಂದು ವ್ಯವಸ್ಥೆಯ ಕನಸನ್ನು ಬಸವಣ್ಣನವರು ಕಂಡಿದ್ದರು.

ಬಸವಣ್ಣನವರು ಕಲ್ಯಾಣ ರಾಜ್ಯದ ಪ್ರಧಾನಿಯಾಗಿದ್ದ ಅವಧಿಯಲ್ಲಿ ಒಂದು ಯುದ್ಧವೂ ನಡೆಯಲಿಲ್ಲ. "ಕಲ್ಯಾಣದಲ್ಲಿ ಕೊಡುವವರುಂಟು ಬೇಡುವವರಿಲ್ಲ" ಎಂದು ಬಸವಣ್ಣನವರೇ ಹೇಳಿದ್ದಾರೆ. "ಬಸವ ರಾಜ್ಯದ ಸಿರಿಯು, ಬಸವ ಬಡವರ ನಿಧಿಯು" ಎಂದು ಆ ಕಾಲದ ಜನಪದ ಕವಿಯೊಬ್ಬ ಹಾಡಿದ್ದಾನೆ. ಬಸವಣ್ಣನವರು ಪ್ರಧಾನಿಯಾಗಿದ್ದಾಗ ಕಾಯಕಕ್ಕೆ ಬಹಳಷ್ಟು ಮಹತ್ವ ನೀಡಿದರು. ಜನರು ಕಾಯಕದಲ್ಲಿ ತಲ್ಲೀನರಾಗಿ ಯೋಗ್ಯರೀತಿಯಲ್ಲಿ ಉತ್ಪಾದನೆ ಮಾಡಿದರು. ಯಾರಿಗೂ ಬೇಡದೆ ಬದುಕುವ ಸಾಮರ್ಥ್ಯವನ್ನು ಪಡೆದರು. ಜನರೆಲ್ಲ ಚೆನ್ನಾಗಿ ಉತ್ಪಾದನೆಯಲ್ಲಿ ತೊಡಗಿದ್ದರಿಂದ ರಾಜ್ಯದ ಭಂಡಾರವೂ ತುಂಬಿತು. ಹೀಗೆ ಬಸವಣ್ಣನವರು ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳ ಸದ್ಬಳಕೆಯೊಂದಿಗೆ ಸಮಾನತೆಯಿಂದ ಕೂಡಿದ ಸುಂದರ ಸಮಾಜವನ್ನು ನಿರ್ಮಿಸಿದರು. ಇಂಥ ಒಂದು ಸಮಾಜ ಮಧ್ಯ ಯುಗದ ಅದ್ವಿತೀಯ ಸಮಾಜವಾಗಿತ್ತು.

ಜಗಜ್ಜ್ಯೋತಿ ಬಸವಣ್ಣನವರು ಮಹಾನ್ ಮಾನವತಾವಾದಿಗಳಾಗಿದ್ದರು. ಮಹಾನ್ ಆಡಳಿತಗಾರರಾಗಿದ್ದರು. ಮಹಾನ್ ಸಾಮಾಜಿಕ ಮನೋವಿಜ್ಞಾನಿಗಳಾಗಿದ್ದರು. ಮಹಾನ್ ಅರ್ಥಶಾಸ್ತ್ರಜ್ಞರಾಗಿದ್ದರು. ಮಹಾನ್ ಸಾಹಿತಿಗಳಾಗಿದ್ದರು. ಮಹಾನ್ ಭಾಷಾ ಪಂಡಿತರಾಗಿದ್ದರು. ಬದುಕಿನ ಎಲ್ಲ ರಂಗಗಳಲ್ಲಿ ಮಹಾಜ್ಞಾನಿಗಳಾಗಿದ್ದರು. ಮಹಾನ್ ದಾರ್ಶನಿಕರಾಗಿದ್ದರು.

ಅವರಿಗೆ ಇಡೀ ಸಮಾಜ ವ್ಯವಸ್ಥೆಯ ಕಲ್ಪನೆ ಇತ್ತು. ಒಂದು ಹೊಸ ಸಮಾಜ ಹೇಗೆ ಇರಬೇಕು ಎಂಬುದರ ಪ್ರಜ್ಞೆ ಇತ್ತು. ಅವರು ಧರ್ಮ, ಸಮಾಜ, ಸಂಸ್ಕೃತಿ ಮತ್ತು ಅರ್ಥಶಾಸ್ತ್ರವನ್ನು ಬೇರೆಬೇರೆಯಾಗಿ ನೋಡಲಿಲ್ಲ, ಕುಟುಂಬ, ಸಮಾಜ, ದೇಶ ಮತ್ತು ಜಗತ್ತನ್ನು ಬೇರೆಬೇರೆಯಾಗಿ ನೋಡಲಿಲ್ಲ. ಇವೆಲ್ಲವುಗಳ ಮಧ್ಯದ ಘನವಾದ ಸಂಬಂಧವನ್ನು ಗುರುತಿಸಿದರು. ಇವೆಲ್ಲವುಗಳ ಒಟ್ಟು ಅಭಿವೃದ್ಧಿಯಿಂದ

ಮಾತ್ರ ಮಾನವರನ್ನು ಎಲ್ಲ ಬಂಧನಗಳಿಂದ ವಿಮೋಚನೆಗೊಳಿಸಬಹುದು ಎಂಬುದನ್ನು ಅವರು ಬಹುಬೇಗ ಕಂಡುಕೊಂಡರು.

ಮಾನವ ಸಂಪನ್ಮೂಲ ಮತ್ತು ನೈಸರ್ಗಿಕ ಸಂಪನ್ಮೂಲಗಳ ಯೋಗ್ಯ ಬಳಕೆಯಿಂದ ಜನೋಪಯೋಗಿ ವಸ್ತುಗಳ ಉತ್ಪಾದನೆ ಮಾಡಬೇಕು. ಇದೇ ಕಾಯಕ ತತ್ತ್ವ. ವಸ್ತುಗಳನ್ನು ಹಿತಮಿತವಾಗಿ ಬಳಸುವುದು ಪ್ರಸಾದ ತತ್ತ್ವ. ನಮ್ಮ ಸಂಪತ್ತಿನ ಮೂಲಕ ಸಮಾಜಸೇವೆ ಮಾಡುವುದು ದಾಸೋಹ ತತ್ತ್ವ.

ಹೀಗೆ ಕಾಯಕ, ಪ್ರಸಾದ ಮತ್ತು ದಾಸೋಹ ತತ್ತ್ವಗಳಲ್ಲಿ ನಿಸರ್ಗತತ್ತ್ವ ಅಡಕವಾಗಿದೆ. ಜಗತ್ತಿನಲ್ಲಿ ಎಲ್ಲವೂ ಕಾಯಕ ನಿರತವಾಗಿವೆ. ಪ್ರಸಾದದ ಕ್ರಮವನ್ನು ಅನುಸರಿಸಿ ದಾಸೋಹ ಮಾಡುತ್ತಿವೆ. ನದಿಗಳು ಹರಿಯುವ ಕಾಯಕ ಮಾಡುತ್ತಿವೆ. ದಾಸೋಹ ಭಾವದಿಂದ ಸಮುದ್ರವನ್ನು ಸೇರುತ್ತಿವೆ. ಆ ಮೂಲಕ ಜನರ ನೀರಿನ ಸಮಸ್ಯೆ ಬಗೆಹರಿಸುತ್ತಿವೆ. ಅಲ್ಲದೆ ಭೂಭಾಗಕ್ಕಿಂತಲೂ ದೊಡ್ಡದಾದ ಸಮುದ್ರದ ನೀರು ಹೆಚ್ಚು ಉಪ್ಪಾಗದಂತೆ ನೋಡಿಕೊಳ್ಳುತ್ತ ದಾಸೋಹ ಭಾವದಿಂದ ಸಮುದ್ರ ಜೀವಿಗಳ ಜೀವ ಉಳಿಸುತ್ತಿವೆ. ರೈತರು ದಿನವಿಡೀ ದುಡಿದು ರಾತ್ರಿ ಮನೆಗೆ ಬಂದರೂ ಭೂಮಿಯಲ್ಲಿನ ಎರೆಹುಳುಗಳು ಕಾಯಕ ನಿರತವಾಗಿರುತ್ತವೆ. ಅವು ದಾಸೋಹ ಭಾವದಿಂದ ರೈತರ ಭೂಮಿಯನ್ನು ಹದಗೊಳಿಸುತ್ತಿರುತ್ತವೆ. ಮರಗಳು ನಿಂತಲ್ಲೇ ಕಾಯಕ ನಿರತವಾಗಿ ಜನರಿಗೆ ದಾಸೋಹ ಭಾವದಿಂದ ಫಲಗಳನ್ನು ಕೊಡುತ್ತಿರುತ್ತವೆ. ಜೇನು ನೊಣಗಳು ಹೂವಿನ ಮಕರಂದವನ್ನು ಹೀರುತ್ತವೆ. ಆದರೆ ದಾಸೋಹ ಭಾವದಿಂದ ಪರಾಗಸ್ಪರ್ಶದ ಕಾಯಕದ ಮೂಲಕ ಆ ಹೂವಿನ ಮರ ಮತ್ತು ಬಳ್ಳಿಗಳ ಸಂತತಿಯನ್ನು ಹೆಚ್ಚಿಸುತ್ತಿರುತ್ತವೆ. ಹೀಗೆ ಇಡೀ ಜಗತ್ತೇ ಕಾಯಕ, ಪ್ರಸಾದ ಮತ್ತು ದಾಸೋಹ ತತ್ತ್ವದಿಂದ ಕೂಡಿದೆ.

ಕಾಯಕವೆಂಬುದು ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸುತ್ತ, ಬದುಕನ್ನು ಹೆಚ್ಚು ಹೆಚ್ಚು ಸುಂದರಗೊಳಿಸುವ ಉತ್ಪಾದನಾ ಕ್ರಿಯೆ. ನಮ್ಮ ಉತ್ಪಾದನಾ ವ್ಯವಸ್ಥೆ ಜೀವಜಾಲ ಸಮತೋಲನಕ್ಕೆ ಧಕ್ಕೆ ಉಂಟುಮಾಡಬಾರದು. ನಮ್ಮ ನದಿ, ಸಮುದ್ರ, ಅರಣ್ಯ ಮತ್ತಿತರ ನೈಸರ್ಗಿಕ ಸಂಪನ್ಮೂಲಗಳು ವಿನಾಶದ ಅಂಚಿಗೆ ತಲುಪದ ಹಾಗೆ ಎಚ್ಚರಿಕೆ ವಹಿಸಿ ಉತ್ಪಾದನೆಯಲ್ಲಿ ತೊಡಗಬೇಕು. ಸತ್ಯ ಶುದ್ಧವಾದುದನ್ನೇ ಉತ್ಪಾದಿಸಬೇಕು. ಇದು ಕಾಯಕ ಪ್ರಜ್ಞೆ.

ಜಗತ್ತಿನ ಎಲ್ಲ ವಸ್ತುಗಳು ದೇವರ ಕಾಣಿಕೆ. ಇದಕ್ಕೆ ಪ್ರಸಾದ ಎಂದು ಕರೆಯುವರು ಪ್ರತಿಯೊಂದು ಕೂಡ ದೇವರ ಕಾಣಿಕೆಯೆ ಆಗಿದೆ. ಆದ್ದರಿಂದ ಎಲ್ಲ ಸಂಪನ್ಮೂಲಗಳನ್ನು ಪ್ರಸಾದ ರೂಪದಲ್ಲಿ ಬಳಸಬೇಕು. ಯಾವುದನ್ನೂ ಹಾಳು ಮಾಡಬಾರದು. ಒಂದು ಹನಿ ನೀರನ್ನೂ ಹಾಳು ಮಾಡಬಾರದು. ಒಂದು ತುತ್ತು ಅನ್ನವನ್ನೂ

ಹಾಳುಮಾಡಬಾರದು. ಅವಶ್ಯಕತೆಗಿಂತ ಹೆಚ್ಚಿಗೆ ಯಾವುದನ್ನೂ ಬಳಸಬಾರದು. ಇದು ಪ್ರಸಾದ ಪ್ರಜ್ಞೆ.

ನಾವು ಉತ್ಪಾದಿಸುವುದು ಮತ್ತು ಗಳಿಸುವುದು. ಕೇವಲ ನಮಗಾಗಿ ಮತ್ತು ನಮ್ಮ ಕುಟುಂಬಕ್ಕಾಗಿ ಅಲ್ಲ. ಅದರಲ್ಲಿ ಸಮಾಜದ ಪಾಲೂ ಇದೆ. ಇಡಿ ಸಮಾಜವನ್ನೇ ದೇವರು ಎಂದು ಭಾವಿಸಿ. ನಾವು ಪಡೆದದ್ದರಲ್ಲಿನ ಹೆಚ್ಚಿನ ಪಾಲನ್ನು ದಾಸೋಹ ಭಾವದಲ್ಲಿ ಸಮಾಜಕ್ಕೆ ಅರ್ಪಿಸಬೇಕು. ಇಂಥ ಸಾಮಾಜಿಕ ಪ್ರಜ್ಞೆಯೊಂದಿಗೆ ಸಮಾಜ ರಕ್ಷಣೆ ಮಾಡಬೇಕು. ಯಾರೂ ನೋವಿಗೆ ಒಳಗಾಗದಂಥ ಮತ್ತು ಯಾರೂ ಹಸಿವಿನಿಂದ ಬಳಲದಂಥ ಸಮಾಜವನ್ನು ನಿರ್ಮಾಣ ಮಾಡಬೇಕು. ಇದು ದಾಸೋಹ ಪ್ರಜ್ಞೆ.

ಹೀಗೆ ಸಾಮಾಜಿಕ ಪ್ರಜ್ಞೆಯ ಬಸವಧರ್ಮದಲ್ಲಿ ವ್ಯಕ್ತಿಗತ ಮೋಕ್ಷ ಎಂಬುದು ಇಲ್ಲ. ಶೋಷಣೆ ಇಲ್ಲದ ಸುಸಂಸ್ಕೃತ ಸಮಾಜದ ನಿರ್ಮಾಣದಲ್ಲಿ ತೊಡಗುವ ಆನಂದವೇ ಮೋಕ್ಷದ ಆನಂದ. ಹೀಗೆ ಬಸವಧರ್ಮದಲ್ಲಿ ಮೋಕ್ಷ ಎಂಬುದು ಮಾನವನ ಜೀವಿತಾವಧಿಯಲ್ಲೇ ಲಭಿಸುವಂಥದ್ದು. ಇಲ್ಲಿ ಮೋಕ್ಷ ಎಂಬುದು ಅತ್ಯುನ್ನತ ಆನಂದದ ಮನಸ್ಥಿತಿ.

ಬಸವಧರ್ಮದ ಮೂಲ ತತ್ತ್ವಗಳಾದ ಕಾಯಕ, ಪ್ರಸಾದ ಮತ್ತು ದಾಸೋಹ ತತ್ತ್ವಗಳು ಸಾಮಾಜಿಕ ಅರ್ಥಶಾಸ್ತ್ರದ ತತ್ತ್ವಗಳಾಗಿವೆ. ಆದ್ದರಿಂದಲೇ ಕಾಯಕ ಪ್ರಜ್ಞೆ ಯೋಗ್ಯ ಉತ್ಪಾದನಾ ವ್ಯವಸ್ಥೆಯನ್ನು ರೂಪಿಸುವುದು. ಪ್ರಸಾದ ಪ್ರಜ್ಞೆ ಯೋಗ್ಯರೀತಿಯಲ್ಲಿ ವಸ್ತುಗಳನ್ನು ಉಪಯೋಗಿಸುವ ವ್ಯವಸ್ಥೆಯನ್ನು ರೂಪಿಸುವುದು. ದಾಸೋಹ ಪ್ರಜ್ಞೆ ಯೋಗ್ಯರೀತಿಯಲ್ಲಿ ವಸ್ತುಗಳ ವಿತರಣೆಯ ವ್ಯವಸ್ಥೆಯನ್ನು ರೂಪಿಸುವುದು.

ಇಂಥ ವ್ಯವಸ್ಥಿತ ಸಮಾಜದಲ್ಲಿ. ಯಾವುದೇ ರೀತಿಯ ಭೇದಭಾವಗಳು ಇರುವುದಿಲ್ಲ. ಕ್ರೌರ್ಯ ಇರುವುದಿಲ್ಲ. ಎಲ್ಲರೂ ಘನತೆಯಿಂದ ಮತ್ತು ಸೇವಾಭಾವದಿಂದ ಬದುಕುವರು. ಪ್ರತಿಯೊಬ್ಬರು ಚೆನ್ನಾಗಿ ಬದುಕುವಂಥ ವಾತಾವರಣ ಸೃಷ್ಟಿಸುವರು.

ಬಸವಣ್ಣನವರ ಕನಸು ೨೧ನೇ ಶತಮಾನದಲ್ಲಿ ನನಸಾದರೆ. ಈ ಜಗತ್ತು ಎಲ್ಲರೀತಿಯ ಸಮಸ್ಯೆಗಳಿಂದ ಮುಕ್ತವಾಗಿ ಇಡೀ ಮಾನವಕುಲ ಒಂದಾಗುವುದು.

***

(೨೦೧೦ನೇ ಜುಲೈ ೧೧ರಂದು ಕೆನಡಾದ ವಿಂಡ್ಸರ್ ನಗರದಲ್ಲಿ. ವಿಂಡ್ಸರ್ ಮತ್ತು ಅಮೆರಿಕದ ಡೆಟ್ರಾಯಿಟ್ ನಗರಗಳ ವಿ.ಎಸ್.ಎನ್.ಎ ಸದಸ್ಯರ ಸಭೆಯಲ್ಲಿ ಮಾಡಿದ ಭಾಷಣ.)

೨

❖

ಬಸವಣ್ಣ ಏಕೆ ಬೇಕು?

ವೇದಪ್ರಣೀತ ಆರ್ಯರು ಭಾರತದ ಮೂಲನಿವಾಸಿಗಳ ಮೇಲೆ ವಿಜಯ ಸಾಧಿಸಿದ ನಂತರ ಅವರನ್ನು ದಸ್ಯುಗಳೆಂದು ಕರೆದರು. ದಸ್ಯುಗಳೆಂದರೆ ಆರ್ಯರ ಸೇವೆ ಮಾಡುವ ದಾಸರು. ಅವರಿಗಾಗಿ ಎಲ್ಲ ತೆರನಾದ ಉತ್ಪಾದನೆ ಮತ್ತು ಸೇವೆಯಲ್ಲಿ ತೊಡಗಿದಂಥವರು. ಈ ಮೂಲನಿವಾಸಿ ದಸ್ಯುಗಳೇ ಶೂದ್ರ ವರ್ಣಕ್ಕೆ ಸೇರಿದವರು. ಹೀಗೆ ಶೇಕಡಾ ೯೦ರಷ್ಟು ದುಡಿಯುವ ಜನರು ಶೂದ್ರರಾಗಿ ಉಳಿದರು. ಜನಿವಾರ ಇಲ್ಲದವರೆಲ್ಲ ಶೂದ್ರರೇ. ವೇದವನೋದುವ ಬ್ರಾಹ್ಮಣರು, ದೇಶ ಆಳುವ ಕ್ಷತ್ರಿಯರು ಮತ್ತು ವಸ್ತುಗಳ ಕೊಡು ಕೊಳ್ಳುವಿಕೆಯಲ್ಲಿ ತೊಡಗಿದ ವೈಶ್ಯರು ಜನಿವಾರದೊಂದಿಗೆ ಉತ್ತಮ ವರ್ಣದವರಾಗಿ ಸವರ್ಣೀಯರೆನಿಸಿದರು. ಇವರೆಲ್ಲ ಸೇರಿ ಉಳಿದ ಬಹುಜನರನ್ನು ದಾಸರನ್ನಾಗಿಸಿ ಶೂದ್ರರೆಂದು ಕರೆದರು. ಈ ಶೂದ್ರರಲ್ಲಿ ತಾರತಮ್ಯದ ವಿರುದ್ಧ ಹೋರಾಡಿದವರನ್ನು ಪಂಚಮರೆಂದು ಕರೆದು, ಊರ ಹೊರಗೆ ಇಟ್ಟು, ಅಸ್ಪೃಶ್ಯರಾಗಿ ಬದುಕುವ ಶಿಕ್ಷೆಯನ್ನು ಕೊಟ್ಟರು. ಹೀಗೆ ಪಂಚಮ ವರ್ಣದ ಉದಯ ನಂತರದಲ್ಲಿ ಆಯಿತು. ಅವರು ಕೊಟ್ಟ ಈ ಶಿಕ್ಷೆ ತಲೆತಲಾಂತರದಿಂದ ಇಂದಿಗೂ ಉಳಿದುಕೊಂಡು ಬಂದಿದೆ.

ಹಿಂದಿನ ಶತಮಾನಗಳ ನಿರಂತರ ಯುದ್ಧಗಳಿಂದಾಗಿ, ಕನ್ನಡ ನಾಡಿನ ೧೨ನೇ ಶತಮಾನ ದಣಿದ ಶತಮಾನವಾಗಿತ್ತು. ಧರ್ಮಗಳು ನಿಷ್ಕ್ರಿಯವಾಗುತ್ತ ಎಲ್ಲೆಡೆ ಹಿಂಸೆ ತಾಂಡವವಾಡುತ್ತಿತ್ತು. ಧಾರ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜ್ಯಶಕ್ತಿಯಿಂದಾಗಿ ನಿರಂತರ ಶೋಷಣೆಗೆ ಒಳಗಾಗಿದ್ದ ಬಹುಪಾಲು ಕಾಯಕಜೀವಿಗಳ ಬದುಕು ದುರ್ಬರವಾಗಿತ್ತು. ಹಿಂಸೆ ಮತ್ತು ಸ್ವಯಂ ಹಿಂಸೆಯನ್ನು ಪ್ರತಿಪಾದಿಸುವ ಧರ್ಮಗಳು ಜನಜೀವನವನ್ನು ಅಸ್ತವ್ಯಸ್ತಗೊಳಿಸಿದ್ದವು. ಅಹಿಂಸೆಯನ್ನು ಪ್ರತಿಪಾದಿಸುವ ಧರ್ಮಗಳು ಹಿಂಸೆಯ ವಿರುದ್ಧ ಧ್ವನಿ ಎತ್ತುವ ಸ್ಥಿತಿಯಲ್ಲಿ ಇರಲಿಲ್ಲ. ಇಂಥ ವಿಷಮ ವಾತಾವರಣದಲ್ಲಿ ಬಸವಣ್ಣನವರ ಜನನವಾಯಿತು.

ಅವರು ಜನಿಸಿದ್ದು ಅಗ್ರಹಾರಗಳ ಅಗ್ರಹಾರವಾಗಿದ್ದ ಬಾಗೇವಾಡಿಯ ಪುರವರಾಧೀಶ ಮಾದರಸ ಮತ್ತು ಮಾದಲಾಂಬಿಕೆಯ ಮಗನಾಗಿ. ಉನ್ನತಕುಲ ಎಂದು ಕರೆಯಿಸಿಕೊಳ್ಳುವ ಬ್ರಾಹ್ಮಣ ಕುಲದಲ್ಲಿ, ಧಾರ್ಮಿಕ ಅಧಿಕಾರ, ವೇದಾಗಮಗಳ ಜ್ಞಾನ ಮತ್ತು ಸಂಪತ್ತು ತುಂಬಿದ್ದ ಮನೆತನದಲ್ಲಿ! ಆದರೆ ಬಸವಣ್ಣನವರಿಗೆ ಇದಾವುದರ ಪರಿವೆ ಇರಲಿಲ್ಲ. ಶೂದ್ರರ ಮತ್ತು ಪಂಚಮರ ಸಾಮಾಜಿಕ ನ್ಯಾಯದ ಪ್ರಶ್ನೆ ಮಾತ್ರ ಅವರನ್ನು ಬಾಧಿಸುತ್ತಿತ್ತು. ಅದಕ್ಕೆ ಅವರು ಉತ್ತರ ಕಂಡುಕೊಳ್ಳಲೇ ಬೇಕಾಗಿತ್ತು. ಅದಕ್ಕಾಗಿ ಅವರು ಬ್ರಾಹ್ಮಣ್ಯವನ್ನು, ಸಂಪತ್ತನ್ನು ಮತ್ತು ನಂತರ ಕಲ್ಯಾಣದ ಪ್ರಧಾನಿ ಪದವಿಯನ್ನೂ ಬಿಟ್ಟುಕೊಡಬೇಕಾಯಿತು. ಶೋಷಣೆಯಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತ, ಶೂದ್ರರು ಮತ್ತು ಪಂಚಮರು ಎಂದೆಂದಿಗೂ ಆರ್ಥಿಕವಾಗಿ ದುರ್ಬಲರಾಗೇ ಉಳಿಯುವಂಥ ಸ್ಥಿತಿಯನ್ನು ನಿರ್ಮಿಸಿದ ವರ್ಣವ್ಯವಸ್ಥೆಯನ್ನು ಗಟ್ಟಿ ಮಾಡಿದ ಮನುಸ್ಮೃತಿಯ ಕೌರ್ಯದ ವಿರುದ್ಧ ಹೋರಾಡುತ್ತ, ದಯಾಸಂಸ್ಕೃತಿಯನ್ನು ಸಾಮಾಜೀಕರಣಗೊಳಿಸಿ ಬದುಕಿನ ಎಲ್ಲ ಸ್ತರಗಳಲ್ಲಿನ ಶೋಷಣೆಯನ್ನು ನಿರ್ನಾಮಗೊಳಿಸುವುದೇ ಬಸವಣ್ಣನವರ ಗುರಿಯಾಗಿತ್ತು.

ದೇಶದ ಮೊದಲ ಏಕದೇವೋಪಾಸನಾ ಧರ್ಮ:

ಬಹುದೇವೋಪಾಸನೆಯ ಸನಾತನ ಧರ್ಮ, ತೀರ್ಥಂಕರರ ಜೈನಧರ್ಮ, ಅಜ್ಞೇಯವಾದಿ ಬೌದ್ಧಧರ್ಮ ಮತ್ತು ಆದಿವಾಸಿಗಳ ವಿವಿಧ ಸಂಪ್ರದಾಯಗಳು ಭಾರತದಲ್ಲಿ ಸಹಸ್ರಾರು ವರ್ಷಗಳಿಂದ ವಿವಿಧ ಜೀವನ ವಿಧಾನಗಳಿಂದ ಕೂಡಿದ ಸಮಾಜಗಳನ್ನು ಸೃಷ್ಟಿಸಿದ್ದರೂ ಏಕದೇವೋಪಾಸನೆಯ ಧರ್ಮದ ಸ್ಥಾಪನೆಯಾಗಿರಲಿಲ್ಲ. ಲಿಂಗವಂತ ಧರ್ಮ ಎಂದು ಕರೆಯಿಸಿಕೊಳ್ಳುವ ಬಸವಧರ್ಮ ಕನ್ನಡದ ನೆಲದಲ್ಲಿ ಜನ್ಮತಾಳಿದೆ. ದಕ್ಷಿಣ ಭಾರತದಲ್ಲಿ ಜನಿಸಿದ ಮೊದಲ ಧರ್ಮ ಇದಾಗಿದೆ. ದೇಶದ ಮೊದಲ ಏಕದೇವೋಪಾಸನೆಯ ಧರ್ಮವಾಗಿದೆ. ಅದ್ವೈತದ ಪ್ರತಿಪಾದಕರಾದ ಶಂಕರಾಚಾರ್ಯರು, ವಿಶಿಷ್ಟಾದ್ವೈತದ ಪ್ರತಿಪಾದಕರಾದ ರಾಮಾನುಜಾಚಾರ್ಯರು ಮತ್ತು ದ್ವೈತದ ಪ್ರತಿಪಾದಕರಾದ ಮಧ್ವಾಚಾರ್ಯರು ದಕ್ಷಿಣ ಭಾರತದಲ್ಲಿ ಜನಿಸಿ ತ್ರಿಮತಗಳ ಸ್ಥಾಪನೆ ಮಾಡಿದರೆ ಹೊರತು ಹೊಸ ಧರ್ಮ ಸ್ಥಾಪನೆ ಮಾಡಲಿಲ್ಲ. ಈ ಮತಗಳು ಪ್ರಸ್ಥಾನತ್ರಯಗಳೆಂದು ಕರೆಯಲಾಗುವ ಪ್ರಮಾಣ ಗ್ರಂಥಗಳಾದ ಬ್ರಹ್ಮಸೂತ್ರ, ಉಪನಿಷತ್ ಮತ್ತು ಭಗವದ್ಗೀತೆಗಳ ಅಧೀನದಲ್ಲೇ ಇರುವುದರಿಂದ ಇವು ಸ್ವತಂತ್ರ ಧರ್ಮಗಳಾಗುವುದಿಲ್ಲ. ಆದ್ದರಿಂದ ಈ ಮೂವರು ಆಚಾರ್ಯರನ್ನು ಮತಸ್ಥಾಪಕರೆಂದೇ ಕರೆಯಲಾಗುತ್ತಿದೆ.

ಬಸವಣ್ಣನವರ ಕಾಲದಲ್ಲಿ, ದಕ್ಷಿಣ ಭಾರತದಲ್ಲಿ ಯಾವುದೇ ಧರ್ಮ ಹುಟ್ಟಿರಲಿಲ್ಲ. ವೈದಿಕ, ಶೈವ, ಜೈನ, ಬೌದ್ಧಧರ್ಮಗಳು ದಕ್ಷಿಣ ಭಾರತದಲ್ಲಿ ಹಬ್ಬಿದ್ದರೂ ಅವುಗಳ

ಉಗಮಸ್ಥಾನ ಉತ್ತರ ಭಾರತವಾಗಿತ್ತು. ದಕ್ಷಿಣ ಭಾರತದ ವಿವಿಧ ಬುಡಕಟ್ಟುಗಳ ಮತ್ತು ವೃತ್ತಿಗುಂಪುಗಳ ಅನೇಕ ಕಾಯಕಜೀವಿಗಳು ಈ ಧರ್ಮಗಳಲ್ಲಿನ ಅವೈದಿಕ ಧರ್ಮಗಳನ್ನು ಸೇರಿದರು. ಇನ್ನುಳಿದವರು ವೈದಿಕರಿಂದ ಶೂದ್ರ ವರ್ಣದವರೆಂದು ಕರೆಯಿಸಿಕೊಂಡರು. ವೈದಿಕರಿಂದ ಕ್ಷುದ್ರ ದೇವತೆಗಳೆಂದು ಕರೆಯಿಸಿಕೊಂಡ ಬುಡಕಟ್ಟು ಮತ್ತು ಜನಪದ ದೈವಗಳ ಆರಾಧಕರು ಇವರಾಗಿದ್ದರು.

ಭಾರತದ ಮೊದಲ ಏಕದೇವೋಪಾಸನೆಯ ಧರ್ಮವಾದ ಲಿಂಗವಂತ ಧರ್ಮದಿಂದಾಗಿ ಕನ್ನಡಕ್ಕೆ ತನ್ನದೇ ಆದ ಮಹತ್ವ ಬಂದಿತು. ಕನ್ನಡವನ್ನು ಧರ್ಮದ, ದರ್ಶನದ, ಶಾಸ್ತ್ರದ, ಕಾಯಕಜೀವಿಗಳ ಸಾಹಿತ್ಯದ ಮತ್ತು ಚಳವಳಿಯ ಭಾಷೆಯಾಗಿ ರೂಪಿಸಿದ ಕೀರ್ತಿ ೧೨ನೇ ಶತಮಾನದ ಶರಣಸಂಕುಲಕ್ಕೆ ಸಲ್ಲುತ್ತದೆ.

ಶರಣಸಂಕುಲ:

ಲಕ್ಷದ ಮೇಲೆ ತೊಂಬತ್ತಾರು ಸಾವಿರ ಶರಣರಿಂದ ಕೂಡಿದ್ದ ಶರಣಸಂಕುಲವೆಂಬ ಸಮಾಜ ಹೊಸ ಜೀವನವಿಧಾನದಿಂದ ಕೂಡಿತ್ತು. ಉಳ್ಳವರ ಮತ್ತು ಬಡವರ ಎರಡು ಬದುಕಿನ ಕ್ರಮಗಳನ್ನು ಗುರುತಿಸಿದ ಬಸವಣ್ಣನವರು ಬಡವರ ಉದ್ಧಾರಕ್ಕಾಗಿ ಪಟ್ಟ ಶ್ರಮ ಅನನ್ಯವಾಗಿದೆ. ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳಿಂದ ಕೂಡಿದ್ದ ಸಮಾಜದಿಂದ ಜನಸಮುದಾಯವನ್ನು ಎತ್ತಿ ಸರ್ವಭೇದಗಳನ್ನು ನಿರಾಕರಿಸುವ ಶರಣ ಸಂಕುಲವೆಂಬ ವಿಶಿಷ್ಟ ಸಮಾಜವನ್ನು ಬಸವಾದಿ ಶರಣರು ರೂಪಿಸಿದರು. ಬಸವಧರ್ಮದಲ್ಲಿ ಸಂಕುಲವು ವಿಶಿಷ್ಟವಾದ ಪಾರಿಭಾಷಿಕ ಪದವಾಗಿದೆ. ಸಂಕುಲದಲ್ಲಿ ಕುಲಭೇದವಿರುವುದಿಲ್ಲ. ಸರ್ವಸಮತ್ವವೇ ಸಂಕುಲದ ಜೀವಾಳವಾಗಿದೆ. ಬಡವ-ಶ್ರೀಮಂತ, ಹೆಣ್ಣು-ಗಂಡು ಮುಂತಾದ ಭೇದಗಳಿಂದ ಶರಣ ಸಂಕುಲ ಮುಕ್ತವಾಗಿತ್ತು. ಎಲ್ಲ ಕಾಯಕಜೀವಿಗಳು ಸಮಾನ ಗೌರವವನ್ನು ಹೊಂದಿದ್ದರು. ಶರಣ ಸಂಕುಲದಲ್ಲಿ 'ಒಕ್ಕಮಿಕ್ಕ' ಮತ್ತು 'ಶಿವನ ಸೊಮ್ಮು' ಪದಗಳು ಬಹಳ ಮುಖ್ಯವಾಗಿವೆ. ಶರಣರು ವೈಯಕ್ತಿಕವಾಗಿ 'ಇಂದಿಂಗೆ ನಾಳಿಂಗೆ' ಕೂಡಿಸಿ ಇಡುತ್ತಿರಲಿಲ್ಲ. ತಾವು ದುಡಿದು ಗಳಿಸಿದ್ದನ್ನು ಶಿವನ ಪ್ರಸಾದ ಎಂದು ಭಾವಿಸುತ್ತಿದ್ದರು. ದಾಸೋಹಂಭಾವದಿಂದ ಶಿವನಿಧಿಗೆ ಅರ್ಪಿಸಿ ಉಳಿದದ್ದರಲ್ಲಿ ಉಪಜೀವನ ಸಾಗಿಸುತ್ತಿದ್ದರು. ಹೀಗೆ ಶರಣಸಂಕುಲಕ್ಕೆ ಕೊಟ್ಟು ಉಳಿದದ್ದೇ 'ಒಕ್ಕಮಿಕ್ಕ' ವಸ್ತು. ಶರಣರದು ಬಾಹ್ಯದಲ್ಲಿ ಬಡವರ ಉಪಜೀವನವಾಗಿತ್ತು. ಆದರೆ ಆಂತರ್ಯದಲ್ಲಿ ಅವರು ಘನಮನ ಸಂಪನ್ನರಾಗಿದ್ದರು. ಅವರೊಳಗಿನ ಶ್ರೀಮಂತಿಕೆಯನ್ನು ಮೀರುವ ಸಾಮರ್ಥ್ಯ ಈ ಭೌತಿಕ ಜಗತ್ತಿನ ಶ್ರೀಮಂತರಿಗೆ ಇರಲಿಲ್ಲ.

ಸಾಮಾಜಿಕ ನಿಧಿ:

ಶಿವನಿಧಿಯು ಸಾಮಾಜಿಕ ನಿಧಿಯಾಗಿದೆ. ಶರಣಸಂಕುಲದಲ್ಲಿ ಯಾರೂ ಆರ್ಥಿಕ ಸಮಸ್ಯೆಯಿಂದ ಬಳಲಬಾರದು ಎಂಬ ಉದ್ದೇಶದಿಂದ ಬಸವಣ್ಣನವರು ಶಿವನಿಧಿಯನ್ನು ಸ್ಥಾಪಿಸಿದ್ದರು.

ಮಹಾನ್ ಅರ್ಥಶಾಸ್ತ್ರಜ್ಞರೂ ಆಗಿದ್ದ ಬಸವಣ್ಣನವರು ಕಾಯಕ ಪ್ರಜ್ಞೆಯ ಮೂಲಕ ಯೋಗ್ಯ ಉತ್ಪಾದನೆಯ ಮಹತ್ವ ತಿಳಿಸಿದರು. ಕಾಯಕದಿಂದ ಬಂದದ್ದು ದೇವರ ಪ್ರಸಾದ ಎಂದು ಸಾರಿದರು. ಪ್ರಸಾದವು ಸದ್ಬಳಕೆಯ ಪ್ರತೀಕವಾಗಿದೆ. ದೇವರ ಪ್ರತೀಕವಾದ ಸಕಲಜೀವಾತ್ಮರ (ಜಂಗಮ) ಸೇವೆಗೆ ದಾಸೋಹ ಎಂದು ಕರೆದರು. ದಾಸೋಹವು ಸರಿಯಾದ ಸಾಮಾಜಿಕ ವಿತರಣೆಯನ್ನು ಸೂಚಿಸುತ್ತದೆ. ಯೋಗ್ಯ ಉತ್ಪಾದನೆ, ಯೋಗ್ಯ ಬಳಕೆ ಮತ್ತು ಯೋಗ್ಯ ಸಾಮಾಜಿಕ ವಿತರಣಾ ವ್ಯವಸ್ಥೆ ಇರುವ ದೇಶದಲ್ಲಿ ಹಿಂಸೆ ತಾಂಡವವಾಡುವುದಿಲ್ಲ. ಜನತೆ ಸರ್ವ ವಿಧದಿಂದ ಸಮಾನತೆಯನ್ನು ಅನುಭವಿಸುತ್ತಾರೆ. ಬಸಣ್ಣನವರ ವಚನಗಳು ಸಾಹಿತ್ಯ, ಸಮಾಜ, ಧರ್ಮ, ದರ್ಶನ, ರಾಜನೀತಿ, ಅರ್ಥಶಾಸ್ತ್ರ, ಆಡಳಿತ, ಮನೋವಿಜ್ಞಾನ, ಸಮೂಹ ಪ್ರಜ್ಞೆ, ಚಳವಳಿ ಮುಂತಾದ ವಿಷಯಗಳನ್ನು ಒಳಗೊಂಡಿರುತ್ತವೆ.

ತನು–ಮನ–ಧನ, ಕಾಯಕ–ಪ್ರಸಾದ–ದಾಸೋಹ, ಉತ್ಪಾದನೆ–ಬಳಕೆ–ವಿತರಣೆ, ಗುರು–ಲಿಂಗ–ಜಂಗಮ ಮತ್ತು ಅರಿವು–ಸಂಸ್ಕಾರ–ಆಚಾರ ಎಂಬುವು ಆಂತರಿಕ ಸಂಬಂಧವನ್ನು ಹೊಂದಿವೆ. ತನು–ಕಾಯಕ–ಉತ್ಪಾದನೆ–ಗುರು–ಅರಿವು, ಮನ–ಪ್ರಸಾದ–ಬಳಕೆ–ಲಿಂಗ–ಸಂಸ್ಕಾರ ಮತ್ತು ಧನ–ದಾಸೋಹ–ವಿತರಣೆ–ಜಂಗಮ–ಆಚಾರ ಜೊತೆ ಜೊತೆಯಾಗಿ ಸಾಗುತ್ತವೆ. ತನುವಿಗೆ ಕಾಯಕದ ಸಂಬಂಧ ಬಂದಾಗ ಅದರ ಉತ್ಪಾದನೆಯಿಂದ ಬರುವ ಅರಿವು ಗುರುವಾಗುವುದು. ಮನವು ಪ್ರಸಾದ ಪ್ರಜ್ಞೆಯಿಂದಾಗಿ ಎಲ್ಲವನ್ನು ಸದ್ಬಳಕೆ ಮಾಡುತ್ತ ಸರ್ವಸಮತ್ವದ ಲಿಂಗತತ್ತ್ವದಿಂದ ಕೂಡಿದ ಸಂಸ್ಕಾರ ಹೊಂದುವುದು. ಧನವು ದಾಸೋಹಂಭಾವದಿಂದಾಗಿ ಯೋಗ್ಯ ವಿತರಣೆಯುಂಟಾಗಿ ಜಂಗಮ (ಸಮಾಜ)ದ ಏಳ್ಗೆಯ ಆಚರಣೆಯಾಗುವುದು.

ಹೀಗೆ ಜಾತಿ, ಕುಲ, ಮತ, ಧರ್ಮ, ವರ್ಗ ಮತ್ತು ಲಿಂಗಭೇದವಿಲ್ಲದೆ 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂದು ಎಲ್ಲರನ್ನು ಒಳಗೊಳ್ಳುವ ಶರಣಸಂಕುಲದ ನಿರ್ಮಾಣವಾದುದು ಹೇಗೆ? ಒಬ್ಬನೇ ನಿರಾಕಾರ ದೇವರು, ಸಕಲ ಜೀವಾತ್ಮರನ್ನೊಳಗೊಂಡ ಒಂದೇ ಸಾಕಾರ ಜಗತ್ತು ಹಾಗೂ ಮಾನವಕುಲವೊಂದೇ ಎಂದು ಸಾರುತ್ತ 'ಇವನಾರವ, ಇವನಾರವ, ಇವನಾರವ' ಎಂದು ಬೇರ್ಪಡಿಸುವವರ ಸ್ಥಗಿತಗೊಂಡ ಧರ್ಮವನ್ನು ಎದುರಿಸುತ್ತ, ಎಲ್ಲರನ್ನು ಒಳಗೊಳ್ಳುವ ಜೀವನ ವಿಧಾನವೊಂದರ ಮೂಲಕ ಕಾಯಕ ಜೀವಿಗಳ ಚಳವಳಿಯ ಧರ್ಮ ಸ್ಥಾಪನೆ ಮಾಡಿದ್ದು ಹೇಗೆ? ಎಂಬುದನ್ನು ಅರಿಯುವುದು ಈ ಕಾಲಘಟ್ಟದಲ್ಲಿ ಅತ್ಯವಶ್ಯವಾಗಿದೆ.

ಕಾಯಕಜೀವಿಗಳ ಸಂಘಟನೆ:

ಜಗತ್ತಿನಲ್ಲಿ ಕಾಯಕಜೀವಿಗಳ ಸಂಘಟನೆ ಮಾಡಿದವರಲ್ಲಿ ಬಸವಣ್ಣನವರು ಮೊದಲಿಗರು. ಅಲ್ಲಿಯ ವರೆಗೆ ಜಗತ್ತಿನ ಯಾವುದೇ ಮೂಲೆಯಲ್ಲಿ ಕಾಯಕಜೀವಿಗಳ ಸಂಘಟನೆಯಾಗಿರಲಿಲ್ಲ. 'ಜಗತ್ತಿನ ಇತಿಹಾಸವು ವರ್ಗಹೋರಾಟಗಳ ಇತಿಹಾಸವೇ ಆಗಿದೆ' ಎಂದು ೧೯ನೇ ಶತಮಾನದಲ್ಲಿ ಕಾರ್ಲ್ ಮಾರ್ಕ್ಸ್ ಹೇಳಿದರು. ಕಾಯಕಜೀವಿಗಳು ತಮ್ಮ ಅಸ್ತಿತ್ವಕ್ಕಾಗಿ ಸದಾ ಹೋರಾಡುತ್ತ ಬಂದಿದ್ದಾರೆ ಎಂಬುದನ್ನು ೧೨ನೇ ಶತಮಾನದಲ್ಲೇ ಕಂಡುಕೊಂಡ ಬಸವಣ್ಣನವರು. ಯಾವ ಆರ್ಥಿಕ ಶಕ್ತಿಯೂ ಇಲ್ಲದ ಕಾಯಕಜೀವಿಗಳ ಆತ್ಮಸ್ಥೈರ್ಯದ ಮೇಲೆ ಹೊಸ ಸಮಾನತೆಯ ಸಿದ್ಧಾಂತವನ್ನು ರೂಪಿಸಿದರು. ಅಲ್ಲಿಯ ವರೆಗೆ ಭಾರತೀಯ ಸಮಾಜೋಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಈ ಕಾಯಕಜೀವಿಗಳಿಗೆ ಯಾವುದೇ ಸ್ಥಾನವಿರಲಿಲ್ಲ. ಸಾಮಾಜಿಕ ಮನೋವಿಜ್ಞಾನಿ ಡಾ. ಬಿ. ಕೃಷ್ಣಮೂರ್ತಿ ಅವರು ಹೇಳುವಂತೆ 'ಸಮಯವಿಲ್ಲ ನನಗೆ ನನ್ನ ಅರಿಯಲು. ಸದಾ ಸ್ವತಂತ್ರ ನಾ ದಣಿಗಳಿಗಾಗಿ ದುಡಿಯಲು' ಎಂಬುದು ಅವರ ಜೀವನ ವಿಧಾನವಾಗಿತ್ತು. ಆದರೆ ಆಂತರ್ಯದಲ್ಲಿ ಸಂಘರ್ಷದ ಕಿಡಿ ಸಿಡಿಯುತ್ತಲೇ ಇತ್ತು. ನಿರಂತರ ಶೋಷಣೆಯ ವಿರುದ್ಧ ಕಾಯಕಜೀವಿಗಳು ಒಂದಾಗುವುದು ಐತಿಹಾಸಿಕ ಅನಿವಾರ್ಯತೆಯಾಗಿತ್ತೆಂಬುದು ಮಹಾನುಭಾವಿ ಬಸವಣ್ಣನವರಿಗೆ ಅರಿವಾಗದೆ ಇರಲಿಲ್ಲ. ಬಸವಣ್ಣನವರು ಈ ಅರಿವನ್ನು ಪಡೆದ ಬಗೆ ಅನುಪಮವಾಗಿದೆ.

ದುಡಿಯುವ ಜನರ ಮೊದಲ ಸಿದ್ಧಾಂತ:

ಭಾರತದ ಇತಿಹಾಸದಲ್ಲಿ ಶೂದ್ರರ ಮತ್ತು ಅತಿಶೂದ್ರರಾದ ಪಂಚಮರ ಅನುಭವಕ್ಕೆ ಯಾವುದೇ ಬೆಲೆ ಇರಲಿಲ್ಲ. ವೇದ, ಶಾಸ್ತ್ರ, ಪುರಾಣಗಳು ಸವರ್ಣೀಯರ ಜೀವನವಿಧಾನಕ್ಕೆ ಧಕ್ಕೆ ತರದಂಥ ಸಂಸ್ಕಾರಗಳನ್ನೇ ಪ್ರತಿಪಾದಿಸುತ್ತವೆ. ಅವು ಮೇಲ್ನೋಟಕ್ಕೆ ಬಹಳ ಉದಾತ್ತವಾಗಿ ಕಂಡರೂ ಆಂತರ್ಯದಲ್ಲಿ ಕಾಯಕಜೀವಿಗಳ ಶೋಷಣೆಗೆ ಪೂರಕವಾಗಿಯೆ ಇವೆ. ಅಂತೆಯ ಬಸವಣ್ಣನವರು 'ಏನಯ್ಯಾ ವಿಪ್ರರು ನುಡಿದಂತೆ ನಡೆಯರು, ಇದೆಂತಯ್ಯಾ? ತಮಗೊಂದು ಬಟ್ಟೆ (ದಾರಿ) ಶಾಸ್ತ್ರಕ್ಕೊಂದು ಬಟ್ಟೆ!' ಎಂದು ನುಡಿದಿದ್ದಾರೆ. 'ನುಡಿ ಲೇಸು ನಡೆ ಅಧಮವಾದಲ್ಲಿ ಬಿಡಿಸಲಾಗದ ಹೊಲೆ' ಎಂದು ಮಾದಾರ ಚೆನ್ನಯ್ಯನವರು ತಿಳಿಸಿದ್ದಾರೆ. ಸಮಾಜದಲ್ಲಿ ರಕ್ತಗತವಾಗಿದ್ದ ತಾರತಮ್ಯಕ್ಕೆ ಕಾರಣವಾದ ವೈದಿಕ ವ್ಯವಸ್ಥೆಯನ್ನು ಕಟುವಾಗಿ ವಿರೋಧಿಸುತ್ತ 'ವಿಪ್ರರು ಕೀಳು ನೋಡಾ ಜಗವೆಲ್ಲ ಅರಿಯಲು' ಎಂದು ಬಸವಣ್ಣನವರು ಸಿಡಿಮಿಡಿಗೊಂಡಿದ್ದಾರೆ. ಶೋಷಣೆಯಿಲ್ಲದ ಸಿದ್ಧಾಂತವನ್ನು ರೂಪಿಸುವುದಕ್ಕಾಗಿ ಶೋಷಿತರ ಬದುಕನ್ನು ಅರಿಯಲು ಎಲ್ಲ ಕಾಯಕಜೀವಿಗಳ ಅನುಭವವನ್ನು ತಮ್ಮದಾಗಿಸಿಕೊಳ್ಳುವುದರ

ಮೂಲಕ ಬಸವಣ್ಣನವರು ಮಹಾನುಭಾವಿಗಳಾದರು. ಶ್ರಮಜೀವಿಗಳ ಅನುಭವದಿಂದ ಸೃಷ್ಟಿಯಾದ ಅನುಭಾವವೇ ಬಸವಾದ್ವೈತವೆಂಬ ಸಿದ್ಧಾಂತ. ಈ ಅನುಭಾವವೇ ಶರಣರ ಅಧ್ಯಾತ್ಮ, ತತ್ತ್ವಜ್ಞಾನ ಮತ್ತು ದರ್ಶನ. ವೈದಿಕರ ಅಧ್ಯಾತ್ಮ ಕಾಯಕಜೀವಿಗಳ ಶ್ರಮಸಿದ್ಧಾಂತದಿಂದ ಬಂದುದಲ್ಲ. ಆದರೆ ಶರಣರ ಅನುಭಾವ ಜನಸಮುದಾಯದ ಕಾಯಕಗಳ ಮೂಲಕ ದಕ್ಕಿದ ಅನುಭವದಿಂದ ರೂಪುಗೊಂಡದ್ದಾಗಿದೆ. ಹೀಗೆ ಬಸವಣ್ಣನವರು ದುಡಿಯುವ ಜನರ ಅನುಭವದ ಆಧಾರದ ಮೇಲೆ ಹೊಸ ಜಗತ್ತಿನ ಸಿದ್ಧಾಂತವನ್ನು ರೂಪಿಸಿದರು. ಹೀಗೆ ಬಸವಾದ್ವೈತವು ವಿಶ್ವದ ದುಡಿಯುವ ಜನರ ಮೊದಲ ಸಿದ್ಧಾಂತವಾಗಿದೆ. ವಸ್ತು ಮತ್ತು ಚೈತನ್ಯವನ್ನು ಬೇರ್ಪಡಿಸಲಿಕ್ಕಾಗದು. ಚೈತನ್ಯವಿಲ್ಲದೆ ವಸ್ತುವಿಲ್ಲ. ಒಂದು ದಿನ ವಸ್ತು ತನ್ನ ರೂಪವನ್ನು ಕಳೆದುಕೊಂಡು ಮತ್ತೆ ನಿರಾಕಾರವಾದ ಚೈತನ್ಯವಾಗುವುದು. ಇಡೀ ಜಗತ್ತು ಚೈತನ್ಯಮಯವಾದ ವಸ್ತುವಾಗಿದೆ. ಈ ವಸ್ತುವೇ ಸಕಲಜೀವರಾಶಿಯ ಅಸ್ತಿತ್ವಕ್ಕೆ ಕಾರಣವಾಗಿದೆ. ಚರಾಚರವೆಲ್ಲ ಜೀವಜಾಲದಲ್ಲಿರುವುದರಿಂದ ಯಾವುದೂ ಮೇಲಲ್ಲ, ಯಾವುದೂ ಕೀಳಲ್ಲ. ಮೇಲು ಕೀಳು ಎಂಬುವು ಮಾನವ ನಿರ್ಮಿತ. ಬಲಿಷ್ಠರ ಶೋಷಣೆಯ ಬುದ್ಧಿಯಿಂದಾಗಿ ಇವನಾರವ ಇವನಾರವ ಎಂಬ ತಾರತಮ್ಯ ಭಾವ ಮೂಡಿದೆ. ಇದನ್ನು ಅಳಿಸಿ ಹಾಕಿ ಇವ ನಮ್ಮವ, ಇವ ನಮ್ಮವ ಎಂಬ ಏಕೋಭಾವ ಮೂಡಿಸುತ್ತ ಸತ್ಯದ ದರ್ಶನ ಮಾಡಿಸುವುದೇ ಬಸವಾದ್ವೈತದ ಉದ್ದೇಶವಾಗಿದೆ.

ಸಂಸತ್ತಿನ ಮೂಲ ಅನುಭವ ಮಂಟಪ:

ಬಸವಣ್ಣನವರು ಸಂಸತ್ತಿನ ಪರಿಕಲ್ಪನೆಯನ್ನು ಮೂಡಿಸಿದ ಮಹಾಜ್ಞಾನಿ. ಮಹಿಳೆಯರೂ ಸೇರಿದಂತೆ ದಲಿತ ಮೊದಲಾದ ವಿವಿಧ ಸಮಾಜಗಳ ಹಿನ್ನೆಲೆಯಿಂದ ಬಂದ ನಾಯಕರಾದ ೭೭೦ ಅಮರಗಣಂಗಳ ಮೂಲಕ ಅನುಭವಮಂಟಪ ಎಂಬ ಸಮಾಜೋ ಧಾರ್ಮಿಕ ಸಂಸತ್ತಿನ ಮೂಲಕ ವಿಶ್ವದಲ್ಲಿ ಮೊದಲ ಬಾರಿಗೆ ಸಮೂಹ ನಾಯಕತ್ವದ ಕಲ್ಪನೆ ಮೂಡಿಸಿದರು. ದಲಿತರು ಮತ್ತು ಮಹಿಳೆಯರು ಸೇರಿದಂತೆ ಎಲ್ಲ ಕಾಯಕಜೀವಿಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯದ ಅರಿವು ಮೂಡಿಸಿದರು. ಜಗತ್ತಿನ ಯಾವ ದೇಶಗಳಲ್ಲೂ ಸಂವಿಧಾನದ ಕನಸು ಬೀಳದ ಸಂದರ್ಭದಲ್ಲಿ ಆಧುನಿಕ ಸಂವಿಧಾನಗಳಿಗೆ ಬೀಜಸ್ವರೂಪವಾದಂಥ ಅಂಶಗಳನ್ನು ವಚನಗಳಲ್ಲಿ ಸೃಷ್ಟಿಸಿದರು. ಅನುಭವ ಮಂಟಪದ ಜೊತೆಯಲ್ಲೇ ಒಳಜಗತ್ತಿಗೆ ಸಂಬಂಧಿಸಿದ ಅರಿವಿನ ಮನೆ ಮತ್ತು ಹೊರ ಜಗತ್ತಿಗೆ ಸಂಬಂಧಿಸಿದ ಮಹಾಮನೆಗಳ ಸ್ಥಾಪನೆ ಮಾಡಿದರು. ಅರಿವಿನ ಮನೆ ಇಷ್ಟಲಿಂಗಯೋಗಕ್ಕೆ ಸಂಬಂಧಿಸಿದ್ದರೆ ಮಹಾಮನೆ ಸಮಾಜವೆಂಬ ಜಂಗಮಲಿಂಗದ ಯೋಗಕ್ಷೇಮಕ್ಕೆ ಸಂಬಂಧಿಸಿತ್ತು.

ಸಮೂಹ ನಾಯಕತ್ವ:

ಕಾಯಕಜೀವಿಗಳನ್ನು ಸಂಘಟಿಸುವುದರ ಮೂಲಕ ಬಸವಣ್ಣನವರು ದುಡಿಯುವ ವರ್ಗದ ಮೊದಲ ನಾಯಕರಾದರು. ಆದರೆ ಅವರು ತಮ್ಮ ನಾಯಕತ್ವವನ್ನು ಸಮೂಹ ನಾಯಕತ್ವವಾಗಿ ಪರಿವರ್ತಿಸಿದರು. ರಾಜರುಗಳಿಂದ ತುಂಬಿದ್ದ ಜಗತ್ತಿನಲ್ಲಿ ಸಮೂಹ ನಾಯಕತ್ವದ ಪ್ರಶ್ನೆಯೆ ಇರಲಿಲ್ಲ. ರಾಜ ಹೇಳಿದ್ದೇ ಅಂತಿಮವಾಗಿತ್ತು. ಆದರೆ ಬಸವಣ್ಣನವರು ವಿಶ್ವದಲ್ಲಿ ಮೊದಲ ಬಾರಿಗೆ ಸಮೂಹ ನಾಯಕತ್ವದ ಪರಿಕಲ್ಪನೆಯನ್ನು ಸಾಕಾರಗೊಳಿಸಿದರು. ಅಲ್ಲಿಯ ವರೆಗೆ ಜಗತ್ತಿನ ಯಾವ ದಾರ್ಶನಿಕನಿಗೂ ಸಮೂಹ ನಾಯಕತ್ವದ ಕಲ್ಪನೆ ಮೂಡಿರಲಿಲ್ಲ. ಅನುಭವ ಮಂಟಪದ ೭೭೦ ಅಮರಗಣಂಗಳೇ ಆ ಸಮೂಹ ನಾಯಕರು. ಇಲ್ಲಿನ ಬಹುಪಾಲು ನಾಯಕರೆಲ್ಲ ವಿವಿಧ ಸಾಮಾಜಿಕ ಸ್ತರಗಳಿಂದ ಬಂದ ಕಾಯಕಜೀವಿಗಳಾದ ಶರಣ ಶರಣೆಯರಾಗಿದ್ದರು. ಕೆಲವರು ಮೇಲಿನ ವರ್ಣಗಳವರು ಶರಣಸಂಕುಲದ ಸರ್ವಸಮತ್ವವನ್ನು ಒಪ್ಪಿಕೊಂಡು ಶರಣ ಶರಣೆಯರಾಗಿದ್ದರು. ಇವರೆಲ್ಲ ಅನುಭವ ಮಂಟಪವೆಂಬ ಸಮಾಜೋಧಾರ್ಮಿಕ ಸಂಸತ್ತಿನ ಸದಸ್ಯರಾಗಿದ್ದರು. ನಟುವರ ಜನಾಂಗದಿಂದ ಬಂದ ಮಹಾಜ್ಞಾನಿ ಅಲ್ಲಮಪ್ರಭುಗಳು ಈ ಸಂಸತ್ತಿನ ಸಭಾಧ್ಯಕ್ಷರಾಗಿದ್ದರು. ಹೀಗೆ ಜಗತ್ತಿನಲ್ಲಿ ಮೊದಲಬಾರಿಗೆ ಸಂಸತ್ತಿನ ಪರಿಕಲ್ಪನೆ ಮೂಡಿತು.

ಅನುಭವ ಮಂಟಪದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವಿತ್ತು. ಬದುಕಿನ ಎಲ್ಲ ಆಗುಹೋಗುಗಳ ಚರ್ಚೆಯಾಗುತ್ತಿತ್ತು. ಶರಣರ ವಚನಗಳು ಅನುಭವ ಮಂಟಪದ ಮೂಸೆಯಲ್ಲಿ ಹಾಯ್ದು ಹೊರಬರುತ್ತಿದ್ದವು. ಅಂದರೆ ೭೭೦ ಅಮರಗಣಂಗಳ ಒಪ್ಪಿಗೆ ಪಡೆದು ಮಸೂದೆಗಳು ಕಾಯ್ದೆಗಳಾಗುವ ಹಾಗೆ ವಚನಗಳು ಹೊರಬರುತ್ತಿದ್ದವು. ಈ ಕಾರಣದಿಂದಲೇ ವಚನಗಳು 'ವಚನ ಸಂವಿಧಾನ' ಎಂದು ಕರೆಯಿಸಿಕೊಂಡವು.

ಚಳವಳಿಗಳ ಜನಕ:

ಚಳವಳಿಯ ಪ್ರಜ್ಞೆ ಇಲ್ಲದೆ ಶರಣ ಸಂಕುಲವನ್ನಾಗಲಿ, ಅನುಭವ ಮಂಟಪವನ್ನಾಗಲಿ ಸೃಷ್ಟಿಸುವುದು ಸಾಧ್ಯವಿಲ್ಲ. ಯುದ್ಧಗಳ ಜಗತ್ತಿನಲ್ಲಿ ಶರಣರ ಸಹಾಯದೊಂದಿಗೆ ಚಳವಳಿಯನ್ನು ಮೊದಲಿಗೆ ರೂಪಿಸಿದವರು ಬಸವಣ್ಣನವರು. ಹಿಂಸೆ ಮತ್ತು ಯುದ್ಧಕ್ಕೆ ವಿರುದ್ಧವಾಗಿರುವ ಚಳವಳಿಗಳು ಶೋಷಣೆಯಿಲ್ಲದ ಬದುಕಿನ ಪರವಾಗಿರುತ್ತವೆ. ರಾಜ್ಯಶಕ್ತಿಯ ಕ್ರೌರ್ಯದ ವಿರುದ್ಧ ಹೋರಾಡುತ್ತ ವಿಜಯ ಸಾಧಿಸುವಲ್ಲಿ ಚಳವಳಿಗಳು ಜನಸಾಮಾನ್ಯರ ಬಹು ಪರಿಣಾಮಕಾರಿ ಅಸ್ತ್ರಗಳಾಗಿವೆ. ವಚನ ಚಳವಳಿ ವಿಶ್ವದ ಮೊದಲ ಚಳವಳಿಯಾಗಿದೆ. ಈ ಚಳವಳಿಯ ಪ್ರಜ್ಞೆಯಿಂದಾಗಿಯೆ

ಶರಣರು ಹೊಸ ಮಾನವೀಯ ವ್ಯವಸ್ಥೆ ರೂಪಿಸುವಲ್ಲಿ ತಲ್ಲೀನರಾದರು. ದಯೆಯ ಮೂಲಕ ಯುದ್ಧಗಳಿಲ್ಲದ ಜಗತ್ತಿನ ಕನಸುಗಾರರಾದರು. ವಚನ ಚಳವಳಿ ಎಂಬ ಈ ಸರ್ವೋದಯ ಚಳವಳಿಯಲ್ಲಿ ಬಸವಣ್ಣನವರ ಇಡೀ ಕುಟುಂಬದ ಜೊತೆ ಅಕ್ಕನಾಗಮ್ಮ ಮತ್ತು ಸೋದರಳಿಯ ಚನ್ನಬಸವಣ್ಣನವರೂ ಪಾಲ್ಗೊಂಡಿದ್ದರು.

ತುಳಿತಕ್ಕೊಳಗಾದವರಿಗೆ ಶಿಕ್ಷಣ:

ಬಸವಣ್ಣನವರು ವಯಸ್ಕರ, ಮಹಿಳೆಯರ, ದಲಿತರ, ಹಿಂದುಳಿದವರ ಮತ್ತು ಒಟ್ಟಾರೆ ಕಾಯಕಜೀವಿಗಳ ಶಿಕ್ಷಣದ ಹರಿಕಾರರಾಗಿದ್ದಾರೆ. ಕಾಯಕಜೀವಿಗಳ ಶಿಕ್ಷಣ ಸಂಘಟನೆ ಮತ್ತು ಹೋರಾಟ ವಚನ ಚಳವಳಿಯ ಪ್ರಮುಖ ಅಂಶಗಳಾಗಿವೆ. ಬಸವಣ್ಣನವರು ಜನಸಮುದಾಯ ಸಂಘಟಿತರಾಗುವಂಥ ಶಿಕ್ಷಣ ನೀಡಿದರು ಮತ್ತು ಹೋರಾಟಕ್ಕೆ ಪೂರಕವಾದ ಶರಣಸಂಕುಲದಂಥ ಸಂಘಟನೆ ಮಾಡಿದರು. ಮೊದಲ ಬಾರಿಗೆ ಅಕ್ಷರ ಕಲಿತ ಕಾಯಕಜೀವಿಗಳು ಉತ್ಕೃಷ್ಟ ವಚನ ಸಾಹಿತ್ಯ ರಚನೆ ಮಾಡಿದರು. ಅವರು ತಮ್ಮ ಕಾಯಕದ ಅನುಭವವನ್ನು ಅನುಭಾವದ ಮಟ್ಟಕ್ಕೇರಿಸಿದರು. 'ಹದ ಮಣ್ಣಲ್ಲದೆ ಮಡಕೆಯಾಗಲಾರದು' ಎಂದು ಕುಂಬಾರ ಗುಂಡಯ್ಯನವರ ಪುಣ್ಯಸ್ತ್ರೀ ಕೇತಲದೇವಿ ಹೇಳುತ್ತಾಳೆ. ಮಡಕೆ ಮಾಡಲು ಮಣ್ಣನ್ನು ಸೋಸಬೇಕು. ನೀರಲ್ಲಿ ಕಲಿಸಿಟ್ಟು ತುಳಿದು ತುಳಿದು ಹದ ಮಾಡಬೇಕು. ಈ ಕೆಲಸದ ಅನುಭವದ ಮೂಲಕ ಕೇತಲದೇವಿ ಅನುಭಾವದ ಮಾತುಗಳನ್ನು ಸೂಚಿಸುತ್ತಾಳೆ. ಪ್ರಕೃತಿದತ್ತವಾದ ಮನುಷ್ಯ ಸಂಸ್ಕಾರದ ಮೂಲಕ ಹದಗೊಂಡಾಗ ಅನುಭಾವ ತುಂಬಿದ 'ಘಟ'ವಾಗುತ್ತಾನೆ. ಹೀಗೆ ಕಾಯಕಜೀವಿಗಳು ತಮ್ಮ ಕಾಯಕದ ಅನುಭವವನ್ನು ಅನುಭಾವದ ಮಟ್ಟಕ್ಕೇರಿಸಿ ವಚನ ರಚನೆ ಮಾಡಿದರು. ಅನುಭವದ ಮೂಲಕ ಮಾತ್ರ ಅನುಭಾವದ ಕಡೆಗೆ ಹೋಗಲು ಸಾಧ್ಯ ಎಂಬುದನ್ನು ಸಾಬೀತುಪಡಿಸಿದರು. ವೈಯಕ್ತಿಕ ಕಾಯಕದ ಅನುಭವದ ಮೂಲಕ ಸಾಮೂಹಿಕ ಅನುಭಾವದ ಎತ್ತರಕ್ಕೆ ಒಯ್ಯುವ ವಿಶಿಷ್ಟವಾದ ವಚನ ಸಾಹಿತ್ಯ ಪ್ರಕಾರವನ್ನು ಬಸವಣ್ಣನವರು ಸಾಮಾಜೀಕರಣಗೊಳಿಸಿದರು. ಮಹಿಳೆಯರು, ದಲಿತರು, ಹಿಂದುಳಿದವರು ಮತ್ತು ಎಲ್ಲ ಕಾಯಕಜೀವಿಗಳು ವಿಶ್ವದಲ್ಲಿ ಮೊದಲಬಾರಿಗೆ ಒಂದಾಗಿ ತಮ್ಮ ಸ್ವಂತಿಕೆಯೊಂದಿಗೆ ಸೃಷ್ಟಿಸಿದ ವಚನ ಸಾಹಿತ್ಯ ಜಗತ್ತಿನ ದುಡಿಯುವ ವರ್ಗದ ಮೊದಲ ಸಾಹಿತ್ಯವಾಗಿದೆ.

ಮಾನವಹಕ್ಕುಗಳ ಪ್ರತಿಪಾದಕ:

೧೯೪೮ ಡಿಸೆಂಬರ್ ೧೦ರಂದು ವಿಶ್ವಸಂಸ್ಥೆ ಘೋಷಿಸಿದ ಮಾನವಹಕ್ಕುಗಳಲ್ಲಿನ ಎಲ್ಲ ೩೦ ಅಂಶಗಳು ಬಸವಣ್ಣನವರ ವಚನಗಳಲ್ಲಿವೆ. ಬಸವಣ್ಣನವರು ೧೨ನೇ ಶತಮಾನದಲ್ಲೇ ಮಾನವಹಕ್ಕುಗಳ ಪ್ರತಿಪಾದನೆ ಮಾಡುವುದರ ಮೂಲಕ

ಸರ್ವೋದಯದ ಪರಿಕಲ್ಪನೆಯನ್ನು ಕೊಟ್ಟಿದ್ದಾರೆ. ಬಸವಧರ್ಮದಲ್ಲಿ ಇಷ್ಟಲಿಂಗ ಧರಿಸಿದ ದಾಸೀಪುತ್ರರು, ವೇಶ್ಯಾಪುತ್ರರು ಮತ್ತು ರಾಜಪುತ್ರರು ಉಳಿದವರ ಹಾಗೆ ಸಮಾನ ಸ್ಥಾನಮಾನ ಮತ್ತು ಮರ್ಯಾದೆಗೆ ಯೋಗ್ಯರಾಗುತ್ತಾರೆ. ವಿಶ್ವಸಂಸ್ಥೆಯ ಮಾನವಹಕ್ಕುಗಳ ಪ್ರಕಾರ ದಾಂಪತ್ಯದಿಂದ ಜನಿಸಿದ ಹಕ್ಕು ಮತ್ತು ಅನೈತಿಕ ಸಂಬಂಧದಿಂದ ಜನಿಸಿದ ಮಗುವಿನ ಹಕ್ಕಿನಲ್ಲಿ ವ್ಯತ್ಯಾಸವಿಲ್ಲ. ಹೀಗೆ ಮಾನವಹಕ್ಕುಗಳ ಎಲ್ಲ ಅಂಶಗಳೂ ಬಸವಣ್ಣನವರ ವಚನಗಳಲ್ಲಿವೆ.

ಸಾಮಾಜಿಕ ನ್ಯಾಯದ ಪರುಷಕಟ್ಟೆ:

ಶರಣಸಂಕುಲದೊಳಗೆ ವಿಶ್ವದ ಮೊದಲ ಸಾಮಾಜಿಕನಿಧಿಗೆ ಚಾಲನೆ ನೀಡಿದ ಕಲ್ಯಾಣದ ಪ್ರಧಾನಿ ಬಸವಣ್ಣನವರು ಕಲ್ಯಾಣದ ಪ್ರಜೆಗಳ ಅಹವಾಲುಗಳನ್ನು ಆಲಿಸಲು ಸಾಮಾಜಿಕ ನ್ಯಾಯದ ಪರುಷಕಟ್ಟೆಯನ್ನು ಸ್ಥಾಪಿಸಿದರು. ಜನರು ಬಸವಣ್ಣನವರನ್ನು ಮುಟ್ಟಿದ್ದೆಲ್ಲ ಚಿನ್ನವಾಗಿಸುವ ಪರುಷಮಣಿ ಎಂದೇ ಭಾವಿಸಿದರು. ಅವರು ಅಹವಾಲು ಕೇಳುವುದಕ್ಕಾಗಿ ಕೂಡುವ ಧರ್ಮದರ್ಶನ ಕಟ್ಟೆಗೆ ಪರುಷಕಟ್ಟೆ ಎಂದು ಕರೆದರು. ಜನರ ಆಶಯಗಳಿಗೆ ಧ್ವನಿಯಾಗಿದ್ದ ಬಸವಣ್ಣನವರು ರಾಜ ಬಿಜ್ಜಳನಿಗೆ ಜನರ ಕಷ್ಟಕಾರ್ಪಣ್ಯಗಳನ್ನು ವಿವರಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಯೋಜನೆಗಳಿಗೆ ಚಾಲನೆ ನೀಡುತ್ತಿದ್ದರು.

ಇಷ್ಟಲಿಂಗದ ಜನಕ:

'ಬಸವಣ್ಣನ ಉದರದಲ್ಲಿ ಹುಟ್ಟಿತ್ತು ಲಿಂಗ' ಎಂದು ಚೆನ್ನಬಸವಣ್ಣನವರು ಹೇಳಿದ್ದಾರೆ. ಬಸವಣ್ಣನವರೇ ಇಷ್ಟಲಿಂಗದ ಜನಕರು ಎಂಬುದನ್ನು ಅಲ್ಲಮಪ್ರಭು, ಸಿದ್ಧರಾಮ, ಅಕ್ಕಮಹಾದೇವಿ ಮುಂತಾದವರು ಸೂಚಿಸಿದ್ದಾರೆ. ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದವನ್ನು ಕಳೆದು ಸಮರತಿ, ಸಮಕಳೆ ಮತ್ತು ಸಮಸುಖದ ಅರಿವು ಮೂಡಿಸಲಿಕ್ಕಾಗಿಯೆ ಇರುವಂಥದ್ದು ಎಂಬುದನ್ನು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ. 'ಲಿಂಗವ ಪೂಜಿಸಿ ಫಲವೇನಯ್ಯಾ ಸಮರತಿ, ಸಮಕಳೆ, ಸಮಸುಖವನರಿಯದನ್ನಕ್ಕ' ಎಂದು ಬಸವಣ್ಣನವರು ಪಶ್ನಿಸಿದ್ದಾರೆ.

ರಕ್ತಸಂಬಂಧವನ್ನು 'ನಂಟುಭಕ್ತಿ ನಾಯಕ ನರಕ' ಎಂದು ಅಲ್ಲಗಳೆದು ಭಕ್ತಿಸಂಬಂಧದ ಮೂಲಕ ಸರ್ವ ಜಾತಿಮತಗಳ ಜನರನ್ನು ಅಕ್ಕ, ಅಣ್ಣ, ಅಪ್ಪ, ಅವ್ವ, ಅಮ್ಮ, ತಾಯಿ, ತಂದೆ, ಬೊಪ್ಪ, ಅಜ್ಜ, ಮುತ್ತಜ್ಜ, ಮುತ್ತಾತ, ಅಯ್ಯ, ಮುತ್ತಯ್ಯ ಮುಂತಾದ ರಕ್ತಸಂಬಂಧದ ಶಬ್ದ ಮತ್ತು ಪದಗಳಿಗೆ ಭಕ್ತಿಸಂಬಂಧದ ಅರ್ಥ ಕೊಟ್ಟು ಇಡೀ ಮಾನವ ಸಮಾಜವನ್ನೇ ಮಹಾಮನೆಯ ಪರಿಕಲ್ಪನೆಯಲ್ಲಿ ನೋಡಿದ್ದಾರೆ.

ಕಲ್ಯಾಣದ ಪ್ರಧಾನಿಯಾಗಿದ್ದರೂ ಕಾಯಕಜೀವಿಗಳ ಜೊತೆ ದಾಸೋಹದ ಪಂಕ್ತಿಯಲ್ಲಿ ಪ್ರಸಾದ ಸ್ವೀಕರಿಸುತ್ತ ಅವರ ಜೊತೆ ಬದುಕಿದ್ದಾರೆ.

ಕಾಯಕ, ಪ್ರಸಾದ ಮತ್ತು ದಾಸೋಹ ಪ್ರಜ್ಞೆಯೊಂದಿಗೆ ಸಮೂಹ ಬದುಕಿಗೆ ನಾಂದಿ ಹಾಡಿದ್ದಾರೆ. ಬಿಜ್ಜಳನ ಹಳೆಯ ರಾಜ್ಯವ್ಯವಸ್ಥೆಯ ಪ್ರಧಾನಿಯಾಗಿದ್ದರೂ ನವಸಮಾಜದ ನಿರ್ಮಾಣಕ್ಕಾಗಿ ಕಾಯಕಜೀವಿಗಳ ನಾಯಕತ್ವ ವಹಿಸಿಕೊಂಡು ಅದ್ವಿತೀಯ ಮುತ್ಸದ್ದಿ ಎನಿಸಿಕೊಂಡಿದ್ದಾರೆ. ಪ್ರಧಾನಿ ಸಮೇತ ಎಲ್ಲ ಪರಸೇವಕರು ಮತ್ತು ಕಾಯಕಜೀವಿಗಳು ಸರಿಸಮಾನರು ಎಂದು ಘೋಷಿಸಿದವರೇ ಬಸವಣ್ಣನವರು.

ಸ್ವರ್ಗ ನರಕಗಳಿಲ್ಲದ ಧರ್ಮ:

ಬಸವಧರ್ಮವು ಮೂಲತಃ ಮಾನವ ವಿಮೋಚನೆಯ ಚಳವಳಿಯಾಗಿ ರೂಪುಗೊಂಡು ಲಿಂಗವಂತ ಧರ್ಮವಾಯಿತು. ವಚನಧರ್ಮ, ಕಾಯಕಜೀವಿಗಳ ಧರ್ಮ, ಶರಣಧರ್ಮ, ಲಿಂಗಾಯತ ಧರ್ಮ ಮುಂತಾದ ಹೆಸರುಗಳಿಂದ ಈ ಜೀವನವಿಧಾನವನ್ನು ಕರೆಯಲಾಗಿದೆ. ಬಸವಧರ್ಮದಲ್ಲಿ ಸ್ವರ್ಗ, ನರಕ, ಪುಣ್ಯ, ಪಾಪ, ಪುನರ್ಜನ್ಮ, ಮೋಕ್ಷ ಮತ್ತು ಇವೆಲ್ಲವುಗಳ ತಾಯಿಬೇರಾದ ಕರ್ಮಸಿದ್ಧಾಂತಗಳಿಲ್ಲ. ದಯವೇ ಈ ಧರ್ಮದ ಮೂಲವಾಗಿದೆ. ಈ ಧರ್ಮದಲ್ಲಿ ದೇವರು ದಯೆಯ ರೂಪದಲ್ಲಿದ್ದಾನೆ. ದಯೆಯ ಮೂರ್ತಿ ಮಾಡಲಿಕ್ಕಾಗದು, ದಯೆಗೆ ಗುಡಿ ಕಟ್ಟಲಿಕ್ಕಾಗದು. ದಯೆ ಎಂಬ ದೇವರಿಗೆ ನಮ್ಮ ದೇಹವೇ ದೇವಾಲಯವಾಗಿದೆ. ಜೀವಕಾರುಣ್ಯದಿಂದ ಕೂಡಿದ ಸಂವೇದನಾಶೀಲ ಮನುಷ್ಯರು ಮಾತ್ರ ತಮ್ಮ ದಯಾಭಾವದಲ್ಲಿ ಈ ದೇವರನ್ನು ಕಾಣಬಲ್ಲರು.

ಈ ಧರ್ಮದಲ್ಲಿ ಆಚಾರವೇ ಸ್ವರ್ಗವಾಗಿದೆ. ಅನಾಚಾರವೇ ನರಕವಾಗಿದೆ. ಜೀವಕಾರುಣ್ಯದಿಂದ ಮಾಡುವ ಕ್ರಿಯೆಗಳು ಪುಣ್ಯವನ್ನೇ ಕೊಡುತ್ತವೆ. ಜೀವಕಾರುಣ್ಯಕ್ಕೆ ವಿರುದ್ಧವಾದ ಕ್ರಿಯೆಗಳು ಪಾಪವನ್ನೇ ಕೊಡುತ್ತವೆ. ಅವೆಲ್ಲವುಗಳನ್ನು ನಾವು ಜೀವಿತಾವಧಿಯಲ್ಲೇ ಅನುಭವಿಸುತ್ತೇವೆ. ಅದಕ್ಕಾಗಿ ಪ್ರತ್ಯೇಕ ಸ್ವರ್ಗ ನರಕಗಳಿಲ್ಲ. 'ಕೈಲಾಸವೆಂಬುದೇನೋ ಪೃಥ್ವಿಯ ಮೇಲೊಂದು ಮೊರಡಿ' ಎಂದು ಬಸವಣ್ಣನವರು ಹೇಳಿದ್ದಾರೆ. ಹೀಗೆ ಕೈಲಾಸವನ್ನು ಬರಡುಭೂಮಿ ಎಂದು ತಿರಸ್ಕರಿಸಿದ್ದಾರೆ.

ಈ ಇಷ್ಟಲಿಂಗ ತತ್ತ್ವ ಅಥವಾ ವಚನತತ್ತ್ವದ ಅರಿವೇ ಪುನರ್ಜನ್ಮವನ್ನು ಕೊಡುವಂಥದ್ದು. ಸತ್ತು ಹುಟ್ಟುವ ಪುನರ್ಜನ್ಮ ಲಿಂಗವಂತ ಧರ್ಮದಲ್ಲಿ ಇಲ್ಲ. ನಮ್ಮೊಳಗಿನ ದೇವರ ಜೊತೆಗೆ ಇರುವುದೇ 'ಲಿಂಗೈಕ್ಯ ಸ್ಥಿತಿ'. ಅದುವೇ ಮೋಕ್ಷ. ಆದ್ದರಿಂದ ಈ ಧರ್ಮದಲ್ಲಿ ಸತ್ತ ಮೇಲಿನ ಮೋಕ್ಷಕ್ಕೆ ಸ್ಥಾನವಿಲ್ಲ. ಲಿಂಗೈಕ್ಯ ಸ್ಥಿತಿಯನ್ನು ತಲುಪಿದ ಮೇಲೆ ಪುನರ್ಜನ್ಮದ ಪ್ರಶ್ನೆಯೆ ಇಲ್ಲ. ಆದ್ದರಿಂದ ಶರಣರು ಸತ್ತ ಮೇಲಿನ ಪುನರ್ಜನ್ಮವನ್ನು ಅಲ್ಲಗಳೆದಿದ್ದಾರೆ.

ಈ ಧರ್ಮದಲ್ಲಿ ಇರುವುದು ಕಾಯಕ ಸಿದ್ಧಾಂತ. ಎಲ್ಲ ಅನಿಷ್ಟಗಳ ತಾಯಿಯಾದ ಕರ್ಮಸಿದ್ಧಾಂತಕ್ಕೆ ಇಲ್ಲಿ ಯಾವ ಬೆಲೆಯೂ ಇಲ್ಲ. 'ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆ ಅದೇತಕೊ' ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಹೀಗೆ ಸಂಕಷ್ಟಕ್ಕೊಳಗಾದ ಜನರ ಮಧ್ಯದಿಂದಲೇ ಎಲ್ಲರನ್ನೂ ಒಳಗೊಳ್ಳುವ ಹೊಸ ಜೀವನವಿಧಾನವನ್ನು ಬಸವಣ್ಣನವರು ಸೃಷ್ಟಿಸಿದ್ದಾರೆ.

ದೇವರು ದಯೆಯ ರೂಪದಲಿ ನಮ್ಮೊಳಗೇ ಇರುವುದರಿಂದ ಬಸವಧರ್ಮದಲ್ಲಿ ಮಂದಿರ, ಮೂರ್ತಿ ಮತ್ತು ಮೂರ್ತಿಪೂಜೆ ಇಲ್ಲ. ಮಠೀಯ ವ್ಯವಸ್ಥೆ ಇಲ್ಲ. ಸ್ವಾಮಿಗಳಿಲ್ಲ.

ಪರ್ಯಾಯ ವ್ಯವಸ್ಥೆ:

ಬಸವಣ್ಣನವರು ವೈದಿಕ ವ್ಯವಸ್ಥೆಯ ಎಲ್ಲವನ್ನೂ ತಿರಸ್ಕರಿಸಿದರು. ಅದಕ್ಕೆ ಪರ್ಯಾಯವಾಗಿ ಹೊಸ ಮಾನವೀಯ ವ್ಯವಸ್ಥೆಯನ್ನು ಜಾರಿಗೊಳಿಸಿದರು. ಬಹುದೇವೋಪಾಸನೆಗೆ ಪರ್ಯಾಯವಾಗಿ ಏಕದೇವೋಪಾಸನೆ, ಸ್ಥಾವರಲಿಂಗಕ್ಕೆ ಪರ್ಯಾಯವಾಗಿ ಇಷ್ಟಲಿಂಗ, ಮಂದಿರಕ್ಕೆ ಪರ್ಯಾಯವಾಗಿ ಅನುಭವ ಮಂಟಪ, ಮಠಕ್ಕೆ ಪರ್ಯಾಯವಾಗಿ ಮಹಾಮನೆ, ಸ್ವಾಮಿಗೆ ಪರ್ಯಾಯವಾಗಿ ತತ್ತ್ವಜಂಗಮ, ಕರ್ಮಸಿದ್ಧಾಂತಕ್ಕೆ ಪರ್ಯಾಯವಾಗಿ ಕಾಯಕಸಿದ್ಧಾಂತ. ಜಾತಿಭೇದ ಸಮಾಜಕ್ಕೆ ಪರ್ಯಾಯವಾಗಿ ಜಾತಿಸಂಕರ ಸಮಾಜ ಮುಂತಾದವು ಬಸವಣ್ಣನವರ ಪರ್ಯಾಯ ವ್ಯವಸ್ಥೆಯ ಅಂಶಗಳಾಗಿವೆ.

ಮೂಢನಂಬಿಕೆಗೆ ವಿರೋಧ:

ಕರ್ಮಸಿದ್ಧಾಂತವು ಎಲ್ಲ ಅನಿಷ್ಟಗಳ ತಾಯಿಬೇರಾಗಿದೆ. ವರ್ಣ–ಜಾತಿ, ಮೇಲು–ಕೀಳು, ಕಷ್ಟ–ಸುಖ, ಸುದೈವ–ದುರ್ದೈವ, ಹೆಣ್ಣು–ಗಂಡು ಹೀಗೆ ಎಲ್ಲದರ ನಿರ್ಧಾರ ಮಾಡುವುದು ಕರ್ಮಸಿದ್ಧಾಂತವೇ ಆಗಿದೆ. ನಮ್ಮ ಬದುಕಿನ ಆಗುಹೋಗುಗಳಿಗೆಲ್ಲ ಅದೇ ಕಾರಣವಾಗಿದೆ ಎಂಬ ಭ್ರಮೆಯನ್ನು ಸಹಸ್ರಾರು ವರ್ಷಗಳಿಂದ ಮಾನವರ ಮನೋಭೂಮಿಕೆಯಲ್ಲಿ ಬಿತ್ತಲಾಗಿದೆ.

ಜನಸಮುದಾಯವನ್ನು ದುರ್ಬಲಗೊಳಿಸುವ ಪಂಚಾಂಗ, ಶನಿಕಾಟ ಮತ್ತು ಮೂಢನಂಬಿಕೆಗಳನ್ನು ಬಸವಾದಿ ಶರಣರು ಪ್ರಬಲವಾಗಿ ವಿರೋಧಿಸಿದರು.

"ಇಪ್ಪತ್ತು ನಾಲ್ಕು ತಿಥಿಯಿಂದ ವೆಗ್ಗಳ.
ಗ್ರಹಣ ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ ವ್ಯತೀಪಾತದಿಂದ ವೆಗ್ಗಳ,

ಸೂಕ್ಷ್ಮ ಶಿವಪಥವನರಿದಂಗೆ
ಹೋಮ ನೇಮ ಜಪ ತಪದಿಂದ ವೆಗ್ಗಳ
ಕೂಡಲಸಂಗಮದೇವಾ ನಿಮ್ಮ ಮಾಣದೆ ನೆನೆವಂಗೆ."

ಸದಾ ಕೂಡಲಸಂಗಮದೇವರನ್ನು ನೆನೆಯುವುದು ತಿಥಿ, ಗ್ರಹಣ, ಸಂಕ್ರಾಂತಿ. ಏಕಾದಶಿ, ಸೂರ್ಯ-ಚಂದ್ರ ಯೋಗ, ಹೋಮ, ನೇಮ, ಜಪ ಮತ್ತು ತಪಕ್ಕಿಂತ ಶ್ರೇಷ್ಠವಾದುದು ಎಂದು ಬಸವಣ್ಣನವರು ತಿಳಿಸಿದ್ದಾರೆ.

ಪರಿಸರವಾದಿ:

'ಜೀವಜಾಲದಲ್ಲಿದೆ ಚರಾಚರವೆಲ್ಲ' ಎಂದು ಬಸವಣ್ಣನವರು ತಿಳಿಸಿದ್ದಾರೆ.

"ಮರ ಗಿಡು ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು
ಪ್ರಾಣವ ಕೊಂದುಂಡು, ಶರೀರ ಹೊರೆವ ದೋಷಕ್ಕೆ
ಇನ್ನಾವುದು ವಿಧಿಯಯ್ಯಾ?
ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ
ಜೀವಜಾಲದಲ್ಲಿದೆ ಚರಾಚರವೆಲ್ಲ.
ಅದು ಕಾರಣ,
ಕೂಡಲಸಂಗನ ಶರಣರು ಲಿಂಗಕ್ಕರ್ಪಿಸಿ ಪ್ರಸಾದವ ಕೊಂಡು
ನಿರ್ದೋಷಿಗಳಾಗಿ ಬದುಕಿದರು."

ಎಂದು ಬಸವಣ್ಣನವರು ಹೇಳುವ ಮೂಲಕ ಸಸ್ಯಗಳಿಗೂ ಜೀವವಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಸಸ್ಯಾಹಾರ ಸೇವನೆ ಕೂಡ ಹಿಂಸೆಯನ್ನು ಅಂಟಿಸಿಕೊಂಡೇ ಇದೆ. ಅಂತೆಯೆ ಶರಣರು ತಮ್ಮ ಆಹಾರವನ್ನು ಲಿಂಗಕ್ಕರ್ಪಿಸಿ ಪ್ರಸಾದವ ಕೊಂಡು ನಿರ್ದೋಷಿಗಳಾಗಿ ಬದುಕಿದರು.

ಅರ್ಥವಿಜ್ಞಾನಿ, ಸಮಾಜವಿಜ್ಞಾನಿ, ಮನೋವಿಜ್ಞಾನಿ, ಭಾಷಾವಿಜ್ಞಾನಿ, ತತ್ತ್ವಜ್ಞಾನಿ, ಮಹಾನ್ ಆಡಳಿತಗಾರ ಮತ್ತು ಸಮಗ್ರ ಕ್ರಾಂತಿಯ ಜನಕರಾದ ಬಸವಣ್ಣನವರು ಆತ್ಮವಿಶ್ವಾಸ ಮತ್ತು ಆತ್ಮಗೌರವದ ಪ್ರತಿಪಾದಕರಾಗಿದ್ದರು. ದಂಡರೂಪಿ ಸುಲಿಗೆಯ ಪ್ರಾಯಶ್ಚಿತ್ತವನ್ನು ಅಲ್ಲಗಳೆದು ಮನ ಪರಿವರ್ತನೆಯ ಪಶ್ಚಾತ್ತಾಪದ ದಾರಿ ತೋರಿಸಿದರು.

ಅರಿವಿನ ಮೂಲಕ ಆತ್ಮವು ಸಕಲ ಜೀವಾತ್ಮರ ಜೊತೆ ಸಂಪರ್ಕ ಹೊಂದುವಂತೆ ಮಾಡುವುದರ ಮೂಲಕ ಒಳ ಮತ್ತು ಹೊರ ಜಗತ್ತಿನ ಮಧ್ಯೆ ಸಂಬಂಧ ಕಲ್ಪಿಸಿದರು. ಒಳಗಿನ ಸ್ವಾತಂತ್ರ್ಯದ ಅರಿವು ಮತ್ತು ಹೊರಗಿನ ಕರ್ತವ್ಯಪ್ರಜ್ಞೆಯನ್ನು ಮೂಡಿಸಿದರು. ಕೆಳವರ್ಗೀಕರಣಕ್ಕೆ ಮತ್ತು ಕೆಳಜಾತೀಕರಣಕ್ಕೆ ಒಳಗಾಗುವುದರ ಮೂಲಕ ವ್ಯಕ್ತಿತ್ವ ವಿಕಸನಕ್ಕೆ ಮಾರ್ಗಸೂಚಿಯಾದರು.

ರಾಜಪ್ರಭುತ್ವ ಅಳಿದು ಪ್ರಜಾಪ್ರಭುತ್ವ ಉದಯವಾಗುವುದರ ಕನಸು ಕಂಡರು. ಯುಗದ ಉತ್ಸಾಹವಾಗಿ ಜನಸಮುದಾಯದ ಏಳ್ಗೆಗಾಗಿ ಅಹರ್ನಿಶಿ ದುಡಿದರು.

ನ್ಯಾಯನಿಷ್ಠುರಿ:

'ನ್ಯಾಯನಿಷ್ಠುರಿ; ದಾಕ್ಷಿಣ್ಯಪರ ನಾನಲ್ಲ.
ಲೋಕವಿರೋಧಿ; ಶರಣನಾರಿಗಂಜುವನಲ್ಲ.
ಕೂಡಲಸಂಗಮದೇವರ ರಾಜತೇಜದಲ್ಲಿಪ್ಪನಾಗಿ.'

ಬಾಗಿದ ಶಿರ ಮುಗಿದ ಕೈಯೊಂದಿಗೆ ಸದುವಿನಯದಿಂದ ಬದುಕಿದ ಬಸವಣ್ಣನವರು ಸಾಂಪ್ರದಾಯಕವಾಗಿ ಬಂದ ಸುಲಿಗೆ ವ್ಯವಸ್ಥೆಯನ್ನು ವಿರೋಧಿಸುವಲ್ಲಿ ಯಾವುದೇ ದಾಕ್ಷಿಣ್ಯವನ್ನು ತೋರಿಸುತ್ತಿರಲಿಲ್ಲ. ನ್ಯಾಯನಿಷ್ಠುರಿಯಾದ ಶರಣ ಯಾರಿಗೂ ಅಂಜುವುದಿಲ್ಲ ಎಂದು ಶರಣರ ವ್ಯಕ್ತಿತ್ವದ ವ್ಯಾಖ್ಯಾನ ಮಾಡಿದ್ದಾರೆ.

ಈ ಧೈರ್ಯ ಸುಮ್ಮನೆ ಬಂದುದಲ್ಲ. ಎಲ್ಲರನ್ನೂ ಒಳಗೊಳ್ಳುವ 'ಕೂಡಲಸಂಗಮದೇವ' ಎಂಬ ಸಿದ್ಧಾಂತ ಅವರ ಮುಂದೆ ಇತ್ತು. ಆ ಸಿದ್ಧಾಂತದ ಮಹಾತೇಜದಲ್ಲಿ ಅವರಿದ್ದರು. ಅಂದರೆ ಸಮತ್ವದ ಸೈದ್ಧಾಂತಿಕ ನಿಲವು ಅವರನ್ನು ಎಲ್ಲ ಅನಿಷ್ಟಗಳನ್ನು ಎದುರಿಸುವ ವೀರಪುರುಷನನ್ನಾಗಿಸಿತ್ತು.

ಅಹಂಕಾರ ಮರ್ದನ:

ಜೀವಕಾರುಣ್ಯ ತತ್ತ್ವದೊಂದಿಗೆ ಬಸವಣ್ಣನವರು ಅಹಂಕಾರ ಮರ್ದನ ಮಾಡಿದರು. ಅಹಂಕಾರವು ಎಲ್ಲ ಭೌತಿಕ ಅನಿಷ್ಟಗಳ ಮತ್ತು ಮನೋರೋಗಗಳ ಮೂಲವಾಗಿದೆ. ಜೀವ ಮತ್ತು ಜಗತ್ತಿನ ಅವಿರತ ಸಂಬಂಧವನ್ನು ತೋರಿಸುವ ಮೂಲಕ ದಯಾಭಾವದೊಂದಿಗೆ ಸಹನಶಕ್ತಿಯನ್ನು ಹೆಚ್ಚಿಸುತ್ತ ಮಾನವರನ್ನು ಅಹಂಕಾರ ಭಾವದಿಂದ ಮುಕ್ತಗೊಳಿಸಿ ಅವರೆಲ್ಲ ತಮ್ಮೊಳಗಿನ ದೇವರಿಗೆ ಶರಣಾಗುವಂಥ ಸಿದ್ಧಾಂತವನ್ನು ರೂಪಿಸಿದರು. ಇಡೀ ಮಾನವ ಕುಲ ಒಂದಾಗಿ ಸಕಲಜೀವಾತ್ಮರಿಗೆ ಲೇಸ ಬಯಸುವ ಹಾಗೆ ಬದುಕುವ ಕಲೆಯನ್ನು ಕಲಿಸಿದರು.

ವ್ಯಕ್ತಿತ್ವ ವಿಕಸನ: ಮಾನವರನ್ನು ವಿಚಾರವಾದಕ್ಕೆಳೆದು ಅವರ ವ್ಯಕ್ತಿತ್ವ ವಿಕಸನಗೊಳಿಸುವದೇ ಬಸವಣ್ಣನವರ ಗುರಿಯಾಗಿತ್ತು. ವೈದಿಕ ವ್ಯವಸ್ಥೆ ನಿರ್ಮಿಸಿದ ಜಾತಿ, ವರ್ಣಗಳ ಕಟ್ಟಳೆಗಳನ್ನು ತೆಗೆದುಹಾಕಿ, ಕಾಯಕಜೀವಿಗಳಿಗೆ ಜಾತಿ ಮತ್ತು ಅಸ್ಪೃಶ್ಯತೆಯ ಮೂಲಕ ಹಾಕಿದ್ದ ನಿಗೂಢ ಆರ್ಥಿಕ ದಿಗ್ಬಂಧನವನ್ನು ಕಿತ್ತೆಸೆದು ಮಾನವರ ವ್ಯಕ್ತಿತ್ವ ವಿಕಸನಕ್ಕೆ ದಾರಿ ಮಾಡಿಕೊಟ್ಟವರು ಬಸವಣ್ಣನವರು. ಮನುವಾದಿ ಧರ್ಮದಲ್ಲಿ ಕಟ್ಟಕಡೆಯ ಜಾತಿಗೆ ಸೇರಿದ ಮಾದಾರ ಚೆನ್ನಯ್ಯನವರು ಬಸವಧರ್ಮದಲ್ಲಿ ತಮ್ಮ ಸತ್ಯಶುದ್ಧ ಕಾಯಕ ಮತ್ತು ದಾಸೋಹಂಭಾವದಿಂದಾಗಿ ದೇವರಿಗಿಂತಲೂ

ಹೆಚ್ಚಿನ ವ್ಯಕ್ತಿತ್ವ ವಿಕಸನ ಹೊಂದುತ್ತಾರೆ. 'ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ ನೋಡಾ ಕೂಡಲಸಂಗಮದೇವ' ಎಂದು ಬಸವಣ್ಣನವರು ಮನದುಂಬಿ ಹೇಳಿದ್ದಾರೆ.

ಇಷ್ಟಲಿಂಗದ ಮಹತ್ವ:

ಭಾರತೀಯ ಸಮಾಜೋ ಧಾರ್ಮಿಕ, ಆರ್ಥಿಕ ಮತ್ತು ರಾಜಕೀಯ ಇತಿಹಾಸದಲ್ಲಿ ಇಷ್ಟಲಿಂಗದ ಪಾತ್ರ ಅನನ್ಯವಾಗಿದೆ. ಸಮಾಜದ ವಿವಿಧ ಸ್ತರಗಳಿಂದ ಬಂದ ಕಾಯಕಜೀವಿಗಳು ವಿವಿಧ ಸ್ಥಾವರಲಿಂಗಗಳಿಗೆ ಅಂಟಿಕೊಂಡಿದ್ದರು. ಶೂದ್ರರು ಮತ್ತು ಪಂಚಮರಾದ ಅವರಿಗೆ ಆ ದೇವಾಲಯಗಳಲ್ಲಿ ಪ್ರವೇಶವಿರಲಿಲ್ಲ. ಅವರೆಲ್ಲ ಅಲ್ಲಿ ಬಿಟ್ಟಿಕೂಲಿಗಳಾಗಿ ದುಡಿಯಬೇಕಾಗಿತ್ತು. ರೈತಾಪಿ ಜನರು ಆಹಾರಧಾನ್ಯಗಳನ್ನು ಕೊಡಬೇಕಿತ್ತು. ಗಾಣಿಗರು ಎಣ್ಣೆ ಕೊಡಬೇಕಿತ್ತು. ಹೀಗೆ ಸುಲಿಗೆ ನಿರಂತರವಾಗಿ ನಡೆದಿತ್ತು. ಕಾಯಕಜೀವಿಗಳು ಸವರ್ಣೀಯರ ಸುಖಕ್ಕಾಗಿ ಜೀವ ತೇಯಬೇಕಿತ್ತು. ಇಂಥ ಪ್ರಸಂಗದಲ್ಲಿ ಕಾಯಕಜೀವಿಗಳನ್ನು ಮಂದಿರಗಳಿಂದ ಹೊರ ತರುವುದು ಅವಶ್ಯವಾಗಿತ್ತು. ಅದಕ್ಕಾಗಿ ಬಸವಣ್ಣನವರಿಗೆ ಅರಿವಿನ ಕುರುಹು ಆದ ಹೊಸ ದೇವಸಂಕೇತದ ಸೃಷ್ಟಿಯ ಅವಶ್ಯಕತೆಯಾಯಿತು. ಇಂಥ ಐತಿಹಾಸಿಕ ತಿರುವಿನ ಸಂದರ್ಭದಲ್ಲಿ ಇಷ್ಟಲಿಂಗದ ಸೃಷ್ಟಿಯಾಯಿತು. ಮೂರ್ತಿ ಮಂದಿರಗಳ ಹಂಗಿಲ್ಲದ ಏಕದೇವೋಪಾಸನೆಗಾಗಿ ಈ ಇಷ್ಟಲಿಂಗ ಹೇಳಿ ಮಾಡಿಸಿದಂತಿದೆ. ಕಾಯಕಜೀವಿಗಳು ಈ ಇಷ್ಟಲಿಂಗವನ್ನು ತಾವು ಹಿಂದೆ ಆರಾಧಿಸುತ್ತಿದ್ದ ದೇವರ ಹೆಸರಿನಲ್ಲೇ ಕಟ್ಟಿಕೊಂಡರು. ಹಾಗೆ ಕಟ್ಟಿಕೊಳ್ಳುವಾಗ ಬಸವಣ್ಣನವರ 'ದೇವನೊಬ್ಬ ನಾಮ ಹಲವು' ಎಂಬ ಎಚ್ಚರ ಅವರಿಗಿತ್ತು. ಇದೊಂದೇ ಲಿಂಗಾಯತರ ಪೂಜಾರ್ಹ ವಸ್ತು. ಈ ಇಷ್ಟಲಿಂಗ ಅನೇಕ ರೀತಿಯಲ್ಲಿ ಮಹತ್ವಪೂರ್ಣವಾಗಿದೆ. ಕಾಯಕಜೀವಿಗಳು ಇಷ್ಟಲಿಂಗ ಪೂಜೆ ಮಾಡಿಕೊಳ್ಳುವುದರ ಮೂಲಕ ತಮ್ಮೊಳಗಿನ ಅಂತಃಶಕ್ತಿಯೆಂಬ ಮಹಾಘನದೊಡನೆ ಒಂದಾಗುವ ಕ್ರಮ ಗೊತ್ತಾಯಿತು. ಇಂಥ ಶಕ್ತಿಯನ್ನು ಪಡೆದ ಅವರು ಸ್ವತಂತ್ರಧೀರರಾದರು. ತಾವು ಏಕಾತ್ಮ. ತಮ್ಮೊಳಗಿರುವಾತ ಪರಮಾತ್ಮ. ತಮ್ಮ ಮುಂದೆ ಇರುವುದು ಸಕಲಜೀವಾತ್ಮರಿಂದ ಕೂಡಿದ ಲೋಕಾತ್ಮ. ಏಕಾತ್ಮವು ತನ್ನ ಮುಂದಿರುವ ಲೋಕಾತ್ಮದ ಜೊತೆ ಒಂದಾದಾಗ ಮಾತ್ರ ತನ್ನೊಳಗಿನ ಪರಮಾತ್ಮನ ಜೊತೆ ಕೂಡಲು ಸಾಧ್ಯ. ಅಂದರೆ ಮಾನವರು ಸಕಲಜೀವಾತ್ಮರೊಂದಿಗೆ ತನುಮನಧನದೊಂದಿಗೆ ಒಂದಾದಾಗ ಮಾತ್ರ ತಮ್ಮೊಳಗಿನ ದೇವರ ಜೊತೆ ಒಂದಾಗಬಲ್ಲರು. ಇದುವೆ ಲಿಂಗಾಂಗಸಾಮರಸ್ಯ.

ವಿಮೋಚನೆಯ ಮಾರ್ಗ:

ಬಸವಣ್ಣನವರು ಆಂತರಿಕ ಶಕ್ತಿ ಮತ್ತು ಶುಚಿತ್ವಕ್ಕಾಗಿ ಇಷ್ಟಲಿಂಗದ ಅರಿವು ಕೊಟ್ಟರೆ. ಲೋಕದಲ್ಲಿ ಸರ್ವರೀತಿಯ ಸಮಾನತೆ ಸಾಧಿಸುವುದಕ್ಕಾಗಿ ಸಮಾಜವೆಂಬ ಜಂಗಮಲಿಂಗದ ಪ್ರಜ್ಞೆ ಕೊಟ್ಟರು. ಲಿಂಗವಂತರು ಕಾಯಕದ ಜವಾಬ್ದಾರಿ, ಪ್ರಸಾದ ಪ್ರಜ್ಞೆ ಮತ್ತು ದಾಸೋಹ ಭಾವದೊಂದಿಗೆ ಬದುಕುವುದೇ ಜಂಗಮಲಿಂಗಪೂಜೆ. ಹೀಗೆ ಬದುಕುವುದರಿಂದ ಯಾರೂ ಉಪವಾಸದಿಂದ ನರಳುವುದಿಲ್ಲ. ಜಾತಿಯಿಂದಾಗಿ ಕಡೆಗಣನೆಗೆ ಒಳಗಾಗುವುದಿಲ್ಲ. ಬಡವ–ಬಲ್ಲಿದ ಎಂಬ ಭೇದ ಇರುವುದಿಲ್ಲ.

ಇಷ್ಟಲಿಂಗದಿಂದಾಗಿ ಕಾಯಕಜೀವಿಗಳಿಗೆ ಮಂದಿರಗಳಲ್ಲಿ ಆಗುವ ಅವಮಾನ ತಪ್ಪಿತು. ಮಂದಿರಗಳಲ್ಲಿ ಬಿಟ್ಟಿಕೂಲಿ ಮಾಡುವುದು ತಪ್ಪಿತು. ರೈತಾಪಿ ಜನರು ಆಹಾರ ಧಾನ್ಯಗಳನ್ನು ಬಿಟ್ಟಿಯಾಗಿ ಕೊಡುವುದು ತಪ್ಪಿತು. ಗಾಣಿಗರು ಎಣ್ಣೆ ಕೊಡುವುದನ್ನು ನಿಲ್ಲಿಸಿದರು. ದೇವರಿಗೆ ಹರಕೆ ಹೊರುವುದರ ಮೂಲಕ ಜೀವನವಿಡಿ ಉಳಿಸಿದ್ದನ್ನು ಕಳೆದುಕೊಳ್ಳುವುದು ನಿಂತಿತು. ಇಷ್ಟಲಿಂಗ ಪೂಜೆಗೆ ಯಾವುದೇ ಖರ್ಚು ಇಲ್ಲದ ಕಾರಣ ದೇವರ ಹೆಸರಿನಲ್ಲಿ ಪೂಜಾರಿಗಳು, ಮಾಂತ್ರಿಕರು, ಭವಿಷ್ಯಗಾರರು ಮತ್ತು ಇತರೆ ಮೂಢ ನಂಬಿಕೆ ಹಬ್ಬಿಸುವವರು ಮೋಸ ಮಾಡುವುದು ನಿಂತಿತು. ಹೀಗಾಗಿ ಕಾಯಕಜೀವಿಗಳ ಆರ್ಥಿಕ ಪರಿಸ್ಥಿತಿಯಲ್ಲಿ ಗಮನಾರ್ಹ ಸುಧಾರಣೆಯಾಯಿತು. 'ಕಲ್ಯಾಣದಲ್ಲಿ ಕೊಡುವವರುಂಟು ಬೇಡುವವರಿಲ್ಲ' ಎಂಬ ಹೊಸ ವಾತಾವರಣದ ಸೃಷ್ಟಿಯಾಯಿತು. ಇಷ್ಟಲಿಂಗವು ಆತ್ಮಗೌರವದ ಪ್ರತೀಕವಾಯಿತು. ಹೀಗೆ ಇಷ್ಟಲಿಂಗವು ಮಾನಸಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಕಾಯಕಜೀವಿಗಳನ್ನು ವಿಮೋಚನೆಗೊಳಿಸಿ ಹೊಸ ಜೀವನವಿಧಾನಕ್ಕೆ ನಾಂದಿಹಾಡಿತು.

❖❖

೩

❖

ಬಸವಣ್ಣ ಅನುಭಾವಿಯಾದ ಕ್ರಮ

ದ್ವಿದಳ ಧಾನ್ಯವೊಂದು ತೇವಾಂಶದ ಭೂಮಿಗೆ ಬಿದ್ದಾಗ ಅದರೊಳಗಿನ ಬೀಜಮೂಲವು ಮೊಳಕೆಯೊಡೆಯುವುದಕ್ಕಾಗಿ ಆ ದ್ವಿದಳದೊಳಗಿನ ಜೀವಶಕ್ತಿಯನ್ನೇ ತಿನ್ನುವುದು! ತದನಂತರವೆ ಅದರ ಬೇರುಗಳು ಭೂಮಿಗೆ ಇಳಿಯುತ್ತವೆ. ಭೂಸತ್ವ ಮತ್ತು ಜಲಸತ್ವದೊಂದಿಗೆ ಮೊಳಕೆಯೊಡೆದ ಬೀಜವು ಸಸಿಯ ರೂಪವನ್ನು ತಾಳುತ್ತದೆ. ಗಾಳಿ, ಬೆಳಕು ಮತ್ತು ಆಕಾಶದ ಸಹಾಯದೊಂದಿಗೆ ಬೆಳೆಯುತ್ತದೆ. ಹೀಗೆ ಬೀಜವೊಂದು ತನ್ನೊಳಗಿನ ಶಕ್ತಿಯಿಂದ ಕ್ರಿಯಾಶೀಲವಾಗುತ್ತದೆ. ನಂತರ ಪಂಚಮಹಾಭೂತಗಳ ಸಹಾಯದೊಂದಿಗೆ ಬೆಳೆದು ಫಲನೀಡುತ್ತದೆ. ಈ ತೆರನಾಗಿ ಅದು ಪಂಚಮಹಾಭೂತಗಳನ್ನೆಲ್ಲ ತನ್ನೊಳಗೆ ತೆಗೆದುಕೊಂಡು ತನ್ನೊಳಗಿನದೆಲ್ಲವನ್ನೂ ಲೋಕಕ್ಕೆ ಅರ್ಪಿಸುತ್ತದೆ. ಕೊನೆಗೆ ಪಂಚಮಹಾಭೂತಗಳಲ್ಲಿ ಲೀನವಾಗುತ್ತದೆ.

ಬರಿ ಹೊರಗಿನ ಶಕ್ತಿಯಿಂದ ಏನನ್ನೂ ಸಾಧಿಸಲಿಕ್ಕಾಗದು. ಒಳಗೆ ಶಕ್ತಿಯಿದ್ದಾಗ ಮಾತ್ರ ಹೊರಗಿನ ಶಕ್ತಿಗಳು ಸಹಾಯಕ್ಕೆ ಬರುತ್ತವೆ. ಸಸ್ಯಲೋಕವೂ ಸೇರಿದಂತೆ, ಜೀವಜಗತ್ತಿನ ಪ್ರತಿಯೊಂದು ಜೀವವೂ ಇದೇ ತೆರನಾಗಿ ವಿಕಸನಗೊಳ್ಳುತ್ತದೆ. ನಂತರ ಬಯಲಿನೊಳಗೆ ಬಯಲಾಗುತ್ತದೆ. ಬಸವಧರ್ಮ ಕೂಡ ಇದೇ ತೆರನಾದ ನಿಸರ್ಗಧರ್ಮದ ಮೇಲೆಯೆ ನಿಂತಿದೆ.

ಎಲ್ಲ ಮಾನವರೂ ಬಸವಣ್ಣ ಆಗ ಬಲ್ಲರು. ಹಾಗಾಗಲು ಮೊದಲಿಗೆ ಬಸವಣ್ಣನವರಂತೆ ಅವರ ಒಳಲೋಕದೊಳಗೂ ಜೀವಕಾರುಣ್ಯದ ಶಕ್ತಿ ಇರಬೇಕು. ಅದು ಹೊರಲೋಕದ ಅನುಭವದೊಂದಿಗೆ ವಿಕಸನಗೊಳ್ಳಬೇಕು. ಒಳ ಮತ್ತು ಹೊರಲೋಕಗಳು ದ್ವೈತತತ್ವವನ್ನು ಕಳೆದುಕೊಂಡು ವಿಕಸಿತ ಮನಸ್ಸಿನೊಳಗೆ ಅದ್ವೈತವಾಗಬೇಕು. ಇಡೀ ಪ್ರಪಂಚವನ್ನು ತನ್ನೊಳಗೆ ತೆಗೆದುಕೊಂಡು ತನ್ನೊಳಗಿನದೆಲ್ಲವನ್ನೂ ಇಡೀ ಪ್ರಪಂಚಕ್ಕೆ ಕೊಡಬೇಕು. ಹೀಗೆ ಸಕಲಜೀವಾತ್ಮರಿಗೆ ಲೇಸನೆ ಬಯಸುವಷ್ಟು ಬೆಳೆಯಬೇಕು. ಇಂಥ ಬೆಳೆಯುವ ಕ್ರಮದಲ್ಲಿ ವ್ಯಕ್ತಿಯೊಬ್ಬ ತನ್ನೊಳಗಿನ ಸತ್ವವನ್ನು ಅರಿತು, ಹೊರಗಿನ ಪ್ರಜ್ಞೆಯೊಂದಿಗೆ ಬೆರೆತು ಅನುಭವದ

ಆಳ ಮತ್ತು ಎತ್ತರವನ್ನು ಹೊಂದುತ್ತ ವ್ಯಕ್ತಿತ್ವವನ್ನು ವಿಕಸನ ಹೊಂದುತ್ತಾನೆ. ಇಂಥ ಮನುಷ್ಯ ತನ್ನೊಳಗಿನ ಚೈತನ್ಯವೆಂಬ ಲಿಂಗ ಮತ್ತು ತನ್ನ ಹೊರಗಿನ ಜಗತ್ತೆಂಬ ಅಂಗದೊಂದಿಗೆ ಸಮರಸ ಹೊಂದುತ್ತ ಪಡೆಯುವ ಅರಿವೆಂಬ ಗುರುವಿನ ಮೂಲಕ ಮಾತ್ರ ಅನುಭಾವಿಯಾಗಲು ಸಾಧ್ಯ. ಲಿಂಗ (ಎನರ್ಜಿ)ದಿಂದಲೇ ಅಂಗ (ಮ್ಯಾಟರ್) ಆಗಿದೆ. ಆ ಅಂಗದೊಳಗೂ ಲಿಂಗವೇ ಇದೆ. ಕೊನೆಗೊಂದು ದಿನ ಎಲ್ಲವೂ ಲಿಂಗೈಕ್ಯ ಸ್ಥಿತಿಯನ್ನೇ ತಲುಪುವುದು. ಇದೇ ನಿಸರ್ಗದ ರಹಸ್ಯ. ಹಾಗೆ ತಲುಪುವ ಮೊದಲೇ ಮಾನವರು ಲಿಂಗಾಂಗ ಸಾಮರಸ್ಯದೊಂದಿಗೆ ಅಚ್ಚ ಲಿಂಗೈಕ್ಯರಾಗಿ ಸರ್ವಸಮತ್ವಕ್ಕಾಗಿ ಕ್ರಿಯಾಶೀಲರಾಗುವುದನ್ನು ಬಸವಣ್ಣನವರು ಬಯಸಿದ್ದರು. ಈ ತೆರನಾಗಿ ವ್ಯಷ್ಟಿಯು ತನ್ನ ಒಳಹೊರಗುಗಳನ್ನು ಒಂದಾಗಿಸಿ ಸಮಷ್ಟಿಯಾಗುವುದೇ ಲಿಂಗಾಂಗಸಾಮರಸ್ಯ. ಒಳ ಮತ್ತು ಹೊರಗಿನ ಅನುಭವಗಳ ಮೂಲಕ ತಲುಪುವ ಲಿಂಗಾಂಗಸಾಮರಸ್ಯ ಎಂಬ ಈ ಐಕ್ಯಸ್ಥಿತಿಯ ಪರಿಣಾಮವೇ ಅನುಭಾವ. ಈ ಅನುಭಾವದ ಆನಂದಕ್ಕಾಗಿ ಬಸವಾದಿ ಶರಣರು ಸದಾ ಲಿಂಗೈಕ್ಯ ಸ್ಥಿತಿಯಲ್ಲಿ ಇರುತ್ತಿದ್ದರು.

ಈ ಲಿಂಗೈಕ್ಯ ಸ್ಥಿತಿ ಎಂಬುದು ಪ್ರಪಂಚದ ಸವಾಲುಗಳನ್ನು ಎದುರಿಸದೆ ಹಿಮಾಲಯದ ಕಡೆಗೆ ಓಡಿಹೋಗುವುದಲ್ಲ. ಇದೊಂದು ಧ್ಯಾನಸ್ಥ ಅನಿಮಿಷ ಅವಸ್ಥೆ. ಅಂದರೆ ಒಳಗಿನ ಧ್ಯಾನ ಮತ್ತು ಹೊರಗಿನ ಪ್ರಜ್ಞೆಯೊಂದಿಗೆ ಬದುಕುವುದು. ಈ ರೀತಿ ಅಚ್ಚ ಲಿಂಗೈಕ್ಯ ಸ್ಥಿತಿಯಲ್ಲೇ ಸದಾ ಪ್ರಪಂಚದ ಆಗುಹೋಗುಗಳ ಕಡೆಗೆ ಜಾಗೃತವಾಗಿರುವಂಥವರು ಲಿಂಗಾಂಗಸಾಮರಸ್ಯವನ್ನು ಸಾಧಿಸಿದವರಾಗಿರುತ್ತಾರೆ. ಈ ಲಿಂಗಾಂಗಸಾಮರಸ್ಯ ಹೊಂದುವುದಕ್ಕೆ ಅಡ್ಡ ಬರುವ ಲಿಂಗಭೇದ, ಜಾತಿಭೇದ, ವರ್ಣಭೇದ, ವರ್ಗಭೇದ, ಪ್ರಾದೇಶಿಕ ಭೇದ ಮುಂತಾದ ಭೇದಗಳನ್ನು ಅಳಿಸಿ ಹಾಕುವುದಕ್ಕಾಗಿ ಸಾಂಘಿಕ ಹೋರಾಟ ಮಾಡುವುದು ಬಸವ ತತ್ತ್ವನಿಷ್ಠರ ಆದ್ಯ ಕರ್ತವ್ಯವಾಗಿದೆ. ಇಂಥ ಸಂಕೋಲೆಗಳಿಂದ ಮಾನವರನ್ನು ವಿಮೋಚನೆಗೊಳಿಸಿ ಲಿಂಗಾಂಗಸಾಮರಸ್ಯದ ಆನಂದದೆಡೆಗೆ ಒಯ್ಯುವುದೇ ಬಸವಧರ್ಮದ ಗುರಿಯಾಗಿದೆ. ಒಳಗಿನ ಅರಿವು ಮತ್ತೊ ಹೊರಗಿನ ಪ್ರಜ್ಞೆಯಿಂದ ಎಲ್ಲ ಪ್ರಕಾರದ ಸಮಾನತೆ ಸಾಧಿಸಿದಾಗಲೇ ಈ ಅವಸ್ಥೆ ತಲುಪಲು ಸಾಧ್ಯ. ಇದು ವ್ಯಕ್ತಿಯಿಂದ ಪ್ರಾರಂಭವಾಗಿ ಇಡೀ ಸಮೂಹವನ್ನು ತನ್ನೊಳಗೆ ತೆಗೆದುಕೊಳ್ಳುವಂಥ ವಾತಾವರಣ ಸೃಷ್ಟಿಯಾದಾಗ ಮಾತ್ರ ಬಸವ ಸಮಾಜ ಪರಿಪೂರ್ಣಗೊಳ್ಳುವುದು. ಆಗ ಇಡೀ ಮಾನವಕುಲ ಒಂದಾಗಿ ಸಕಲಜೀವಾತ್ಮರಿಗೆ ಲೇಸನೆ ಬಯಸುವಂಥ ಮನಸ್ಸನ್ನು ಹೊಂದುವುದು.

ಬಸವಧರ್ಮವು ನಿಸರ್ಗಧರ್ಮವಾಗಿರುವುದರಿಂದ ಮತ್ತು ಮಾನವರ ಮಧ್ಯದ ಸಕಲಭೇದಗಳು ಅನೈಸರ್ಗಿಕವಾಗಿರುವುದರಿಂದ, ಸಹಜ ಸರಳ ಬದುಕಿಗಾಗಿ ಚಳವಳಿ

ಮತ್ತು ಹೋರಾಟಗಳು ಅನಿವಾರ್ಯವಾಗಿವೆ ಎಂಬುದನ್ನು ಜಗತ್ತಿಗೆ ಪ್ರಾಯೋಗಿಕವಾಗಿ ತೋರಿಸಿಕೊಟ್ಟವರೇ ಬಸವಣ್ಣನವರು. ಅಶಾಂತಿಯನ್ನು ಹುಟ್ಟು ಹಾಕುವ ಯುದ್ಧಗಳ ಜಾಗದಲ್ಲಿ ಶಾಂತಿಯನ್ನು ಸ್ಥಾಪಿಸುವ ಹೋರಾಟವನ್ನು ಜಗತ್ತಿಗೆ ಕಲಿಸಿದವರೇ ಬಸವಣ್ಣನವರು. ಅದಕ್ಕೂ ಮೊದಲು ಶಾಂತಿಗಾಗಿ ಪ್ರಯತ್ನಿಸಿದ ಅನೇಕ ಮಹಾತ್ಮರಿದ್ದರು. ಆದರೆ ಚಳವಳಿಯ ಮೂಲಕ ಪ್ರಯತ್ನಿಸಿದವರು ಕಾಣಸಿಗುವುದಿಲ್ಲ.

ಬಸವ ಚಳವಳಿಯು ಅನುಭಾವಿಗಳ ಚಳವಳಿಯಾಗಿತ್ತು. ಪ್ರತಿಯೊಬ್ಬ ಕಾಯಕಜೀವಿ ತನ್ನ ದೈನಂದಿನ ಅನುಭವದ ಮೂಲಕವೇ ಅನುಭಾವಿಯಾಗುವ ಸೂತ್ರವನ್ನು ಬಸವಣ್ಣನವರು ಕಂಡುಹಿಡಿದರು. ಈ ಬಸವವಿದ್ಯೆಯು ಕರ್ಮಸಿದ್ಧಾಂತವನ್ನು ಅಲ್ಲಗಳೆಯುತ್ತ ಸ್ವರ್ಗ, ನರಕಗಳನ್ನು ನಿರಾಕರಿಸುವ ವಿದ್ಯೆಯಾಗಿದೆ. ಹುಸಿ ಕರ್ಮಸಿದ್ಧಾಂತದ ಕೃತ್ರಿಮ ಫಲಗಳಾದ ಬಡತನ, ಶ್ರೀಮಂತಿಕೆ, ಮೇಲ್ಜಾತಿ, ಕೀಳುಜಾತಿ, ಅಪೂರ್ಣ ಹೆಣ್ಣು, ಪರಿಪೂರ್ಣ ಗಂಡು ಮುಂತಾದ ಅನಿಷ್ಟಗಳನ್ನು ಬಸವಣ್ಣನವರು ತಿರಸ್ಕರಿಸಿದರು. ಚಳವಳಿಗಳ ಮೂಲಕ ಮಾನವಕುಲವನ್ನು ಒಂದಾಗಿಸುತ್ತ, ಪ್ರತಿಯೊಬ್ಬರೂ ತಮ್ಮ ಒಳ ಮತ್ತು ಹೊರಗಿನ ಮಧ್ಯೆ ಅಭೇದ್ಯ ಕಲ್ಪಿಸಿದ ನಂತರ ಉಂಟಾಗುವ ಲಿಂಗಾಂಗಸಾಮರಸ್ಯದೊಂದಿಗೆ ಅನುಭಾವಿಗಳಾಗಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು.

ಲಿಂಗಾಂಗಸಾಮರಸ್ಯದಲ್ಲಿ ಮಾನವನ ವ್ಯಕ್ತಿತ್ವವಿಕಸನ ತತ್ತ್ವವೂ ಅಡಗಿದೆ. ಈ ಪ್ರಕಾರದ ವ್ಯಕ್ತಿತ್ವ ವಿಕಸನದ ಮೂಲಕ ಮಾನವರು ದೇವರಿಗಿಂತಲೂ ಅಧಿಕ ಎನಿಸಿಕೊಳ್ಳಬಲ್ಲರು. ನಮ್ಮ ವಿಷಮ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲ ಜಾತಿಗಳಿಗಿಂತ ಕಡೆಯಲ್ಲಿರುವ ಮಾದಿಗ ಜಾತಿಯಲ್ಲಿ ಹುಟ್ಟಿ ವಿಶ್ವಮಾನವರಾಗಿ ಬೆಳೆದ ಮಾದಾರ ಚೆನ್ನಯ್ಯನವರು ದೇವರಿಗಿಂತಲೂ ಅಧಿಕ ಎಂದು ಬಸವಣ್ಣನವರು ಸಾರಿದ್ದಾರೆ.

ಮಹಾವೀರ, ಬುದ್ಧ, ಜೀಸಸ್, ಪೈಗಂಬರ, ಬಸವಣ್ಣ, ಗುರುನಾನಕ, ಗಾಂಧಿ, ಅಂಬೇಡ್ಕರ್ ಮುಂತಾದ ಮಹಾನುಭಾವರು ಮನುಷ್ಯರ ಮಧ್ಯದ ಕಂದರಗಳನ್ನು ಮುಚ್ಚಲು ನಿರಂತರ ಪ್ರಯತ್ನ ಮಾಡಿದವರಾಗಿದ್ದಾರೆ. ಆದರೂ ಸಾಮಾಜಿಕವಾಗಿ ಮೇಲ್ ಸ್ತರದವರು ಎಂದು ಭಾವಿಸಿದ ಮನುಷ್ಯರನೇಕರು ಕುಲಮದ, ಧನಮದ ಮತ್ತು ಜ್ಞಾನಮದದಲ್ಲಿ ಮನುಷ್ಯತ್ವವನ್ನು ಕಳೆದುಕೊಳ್ಳುತ್ತಿದ್ದಾರೆ. ಕೆಳಸ್ತರದವರು ತಮ್ಮ ಕೀಳರಿಮೆಯಿಂದಾಗಿ ನರಕಯಾತನೆಯನ್ನು ಅನುಭವಿಸುತ್ತಿದ್ದಾರೆ. ಈ ಎರಡೂ ಅವಸ್ಥೆಗಳು ನೈಸರ್ಗಿಕವಾಗಿ ಅವಾಸ್ತ ಆಗಿವೆ. ಅಂತೆಯೆ ಬಸವಣ್ಣನವರು "ವೇದಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ? ಕವಿ, ಗಮಕಿ, ವಾದಿ, ವಾಗ್ಮಿಗಳು ಹಿರಿಯರೆ?

ನಟನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ? ಎಂದು ಪ್ರಶ್ನಿಸಿದ್ದಾರೆ. ವಚನ ಸಾಹಿತ್ಯದಲ್ಲಿನ ಇಂಥ ಪ್ರಶ್ನೆಗಳೇ ಹೋರಾಟದ ಬೀಜಗಳಾಗಿವೆ.

ಈ ಪ್ರಶ್ನೆಗಳು ಸವರ್ಣೀಯರಿಗೆ ಎಚ್ಚರಿಕೆ ನೀಡಿದವು. ಶೂದ್ರ ಮತ್ತು ಅತಿಶೂದ್ರರು ಎಂದು ಅವಗಣನೆಗೆ ಒಳಗಾದ ಕಾಯಕಜೀವಿಗಳಿಗೆ ಮೇಲೆಳಲು ಧೈರ್ಯ ತುಂಬಿದವು. ಸವರ್ಣೀಯರ ಹಿತರಕ್ಷಣೆಯ ಉದ್ದೇಶದಿಂದಲೇ ಇಂಥ ಅಮಾಯಕರ ಧೈರ್ಯವನ್ನು ಕುಂದಿಸಲು ಪುರೋಹಿತಶಾಹಿಗಳು ಕರ್ಮಸಿದ್ಧಾಂತದ ಮೂಲಕ ಮಂದಿರ, ಮೂರ್ತಿ, ಸ್ವರ್ಗ, ನರಕ, ಪುಣ್ಯ, ಪಾಪ, ಶಾಪ, ಪುನರ್ಜನ್ಮ, ಮೋಕ್ಷ ಮುಂತಾದ ಸಂಕೋಲೆಗಳಲ್ಲಿ ಅವರನ್ನು ಬಂಧಿಸಿದರು. ಈ ಎಲ್ಲ ಸಂಕೋಲೆಗಳನ್ನು ಕಿತ್ತೊಗೆದು ದುಡಿಯುವ ವರ್ಗವನ್ನು ವಿಮೋಚನೆಗೊಳಿಸುವುದೇ ಬಸವಣ್ಣನವರ ಬಹುಮುಖ್ಯ ಗುರಿಯಾಗಿತ್ತು.

ಪುರೋಹಿತಶಾಹಿಗಳು ಶಾಸ್ತ್ರಮಾರ್ಗವನ್ನು ದುಡಿಯುವ ವರ್ಗದ ಶೋಷಣೆಗಾಗಿಯೇ ರೂಪಿಸಿದ್ದರು. ಆದರೆ ಅವರು ನಡೆಯುವ ಐಹಿಕ ಮಾರ್ಗವೇ ಬೇರೆಯಾಗಿತ್ತು. ಅಂತೆಯೆ ಬಸವಣ್ಣನವರು 'ಏನಯ್ಯಾ ವಿಪ್ರರು ನುಡಿದಂತೆ ನಡೆಯರು; ಇದೆಂತಯ್ಯಾ ತಮಗೊಂದು ಬಟ್ಟೆ, ಶಾಸ್ತ್ರಕ್ಕೊಂದು ಬಟ್ಟೆ' ಎಂದು ಅಸಂತೋಷ ವ್ಯಕ್ತಪಡಿಸಿದರು. 'ಇನ್ನು ಜಂಗಮವೇ ಲಿಂಗವೆಂದು' ನಂಬಿದೆ ಎಂದು ಸಾರಿದರು. ಜಂಗಮ (ಸಮಾಜ)ವನ್ನೇ ದೈವತ್ವಕ್ಕೇರಿಸಿ ಆ ಸಮಾಜದ ಸೇವೆಯನ್ನು ಹೋರಾಟದ ಮೂಲಕ ಮಾತ್ರ ಮಾಡಲು ಸಾಧ್ಯ ಎಂಬುದನ್ನು ತೋರಿಸಿಕೊಟ್ಟರು.

'ಲಿಂಗಾರ್ಚನಂ ನ ಕರ್ತವ್ಯಂ' ಎಂದು ತಿಳಿಸಿದ ಬಸವಣ್ಣನವರು 'ಜಂಗಮಾರ್ಚನಂ ಕರ್ತವ್ಯಂ' ಎಂದು ಸಾರಿದರು. ಲಿಂಗಾರ್ಚನೆ ಕರ್ತವ್ಯ ಅಲ್ಲ; ಶೋಷಣೆ ಮುಕ್ತ ಸಮಾಜದ ನಿರ್ಮಾಣಕ್ಕಾಗಿ ಮಾನಸಿಕ ಶಕ್ತಿಯನ್ನು ಬೆಳೆಸಿಕೊಳ್ಳಲು ಮಾಡುವ ತಾಲೀಮು. ಇಂಥ ಮನೋಸ್ಥೈರ್ಯದ ತಾಲೀಮಿಗೆ ಬೌದ್ಧಧರ್ಮದಲ್ಲಿ 'ಸಮ್ಯಕ್ ವ್ಯಾಯಾಮ' ಎಂದು ಕರೆಯುತ್ತಾರೆ. ವ್ಯಾಯಾಮ ಶಾಲೆಯಲ್ಲಿ ಇಡೀ ಜೀವನ ತಾಲೀಮು ಮಾಡುತ್ತ ಕುಳಿತರೆ ಕುಸ್ತಿ ಹಿಡಿಯುವುದು ಯಾವಾಗ? ಕುಸ್ತಿ ಹಿಡಿಯುವ ಅಖಾಡಾ ಸಮಾಜದಲ್ಲಿದೆ. ಅಲ್ಲಿನ ಶೋಷಕ ಶಕ್ತಿಗಳನ್ನು ಸೋಲಿಸಬೇಕಿದೆ. ಇದುವೇ ಜಂಗಮಾರ್ಚನ. ಇದುವೇ ಕರ್ತವ್ಯ. ಇಂಥ ಕರ್ತವ್ಯವನ್ನು ನಿಭಾಯಿಸಲು ಶಕ್ತಿ ಕೊಡುವಂಥದ್ದೇ ಲಿಂಗಾರ್ಚನ ಎಂಬದನ್ನು ಬಸವಣ್ಣನವರು ಮಾರ್ಮಿಕವಾಗಿ ಸೂಚಿಸಿದ್ದಾರೆ. ಇಂಥ ಶೋಷಣೆರಹಿತ ವ್ಯವಸ್ಥೆಗಾಗಿ ಹೋರಾಡುವವರಿಗೆ ಲಿಂಗಾಂಗಸಾಮರಸ್ಯದಿಂದ ಲಭ್ಯವಾಗುವ ಅನುಭಾವವನ್ನು ಪಡೆಯುವುದು ಸಾಧ್ಯ. ಹೋರಾಟದ ಮೂಲಕ ಬರುವ ಇಂಥ 'ಸೈದ್ಧಾಂತಿಕ ಸಾಮರಸ್ಯ'ದಿಂದಲೇ ಮಾರ್ಕ್ಸ್, ಲೆನಿನ್, ಲೋಹಿಯಾ, ಅಂಬೇಡ್ಕರ್ ಮುಂತಾದ ಹೋರಾಟಗಾರರು ಅನುಭಾವಿಗಳಾದರು!

ಸದ್ಯ ಭಾರತದಲ್ಲಿ ನಮ್ಮ ಕಾಲದ ಬಹುದೊಡ್ಡ ಅನುಭಾವಿ ಎಂದರೆ ತ್ರಿಪುರಾ ಮುಖ್ಯಮಂತ್ರಿ ಕಾಮ್ರೇಡ್ ಮಾಣಿಕ್ ಸರ್ಕಾರ್ ಅವರು. ಅನೇಕ ಬಾರಿ ತ್ರಿಪುರಾ ಮುಖ್ಯಮಂತ್ರಿಗಳಾದ ಅವರ ಚರ ಮತ್ತು ಸ್ಥಿರಾಸ್ತಿ ಎರಡೂವರೆ ಲಕ್ಷ ರೂಪಾಯಿ ಮೀರುವುದಿಲ್ಲ! ಇದು ಒಬ್ಬ ಐ.ಟಿ. ಎಂಜಿನಿಯರ್‌ನ ತಿಂಗಳ ಸಂಬಳಕ್ಕಿಂತಲೂ ಕಡಿಮೆ!! ಅವರು ತಮ್ಮ ಮುಖ್ಯಮಂತ್ರಿ ಪದವಿಯಿಂದ ಬರುವ ಹಣವನ್ನೆಲ್ಲ ಪಕ್ಷದ ಕಚೇರಿಗೆ ಒಪ್ಪಿಸುತ್ತಾರೆ. ಪ್ರತಿ ತಿಂಗಳು ಪಕ್ಷ ಕೊಡುವ ೫೦೦೦ ರೂಪಾಯಿಗಳಲ್ಲಿ ಜೀವನ ಸಾಗಿಸುತ್ತಾರೆ!!! ಇದುವೇ ಬಸವಣ್ಣನವರು ಹೇಳಿದ ದಾಸೋಹ ತತ್ತ್ವ. "ಹೊನ್ನಿನೊಳಗೊಂದೊರೆಯ, ಅನ್ನದೊಳಗೊಂದಗುಳ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ. ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲಸಂಗಮದೇವಾ" ಎಂದು ಬಸವಣ್ಣನವರು ತಿಳಿಸಿದ್ದಾರೆ. ದಾಸೋಹ ತತ್ತ್ವದ ಪ್ರಕಾರ ಶರಣರು ಗಳಸಿದ್ದೆಲ್ಲವನ್ನೂ ಶಿವನಿಧಿಗೆ ಅರ್ಪಿಸುತ್ತಿದ್ದರು. ನಂತರ ಅಲ್ಲಿಂದ ಬಂದುದನ್ನು ಪ್ರಸಾದವಾಗಿ ಸ್ವೀಕರಿಸುತ್ತಿದ್ದರು.

ಮಾಣಿಕ್ ಸರ್ಕಾರ್ ಅವರಂಥ ಕಾಮ್ರೇಡ್‌ಗಳು ಕೂಡ ಹೀಗೆಯೆ ಮಾಡುತ್ತಾರೆ. ಇ.ಎಂ.ಎಸ್. ನಂಬೂದಿರಿಪಾಡ್, ಭೂಪೇಶಗುಪ್ತಾ, ನಾಗಿರೆಡ್ಡಿ, ಲೋಹಿಯಾ ಮತ್ತು ಅಂಬೇಡ್ಕರ್ ಅವರಂಥ ಸಂಗಾತಿಗಳು ಹೀಗೆಯೆ ಬದುಕಿ ನಮಗೆಲ್ಲ ದಾರಿದೀಪವಾಗಿದ್ದಾರೆ. ಇವರ ಸೈದ್ಧಾಂತಿಕ ನೆಲೆಗಳು ಬೇರೆಯಾಗಿದ್ದಿರಬಹುದು ಆದರೆ ಇವರ ಚಾರಿತ್ರ ಮಾನವಕುಲಕ್ಕೆ ಅನನ್ಯವಾಗಿದೆ. ಇದಕ್ಕಿಂತ ನಿಚ್ಚಳವಾದ ಲಿಂಗಾಂಗಸಾಮರಸ್ಯ ಬೇಕೆ? ಇಂಥವರ ಬದುಕಿನ ಸಾಮರಸ್ಯದಿಂದ ಲಭ್ಯವಾಗುವ ಅನುಭಾವಕ್ಕಿಂತ ಹೆಚ್ಚಿನದು ಯಾವುದಿದೆ?

ಅನುಭಾವ, ಅನುಭಾವ ಎನ್ನುತ್ತ ಆಸ್ತಿ ಮಾಡುವವರು, ಕೀರ್ತಿಶನಿಯ ಹಿಂದೆ ಬೀಳುವವರು, ಅಧಿಕಾರಕ್ಕಾಗಿ ಹಾತೊರೆಯುವವರು, ಪರಾಕುಪ್ರಿಯರು, ಜಾತಿ, ಉಪಜಾತಿಗಳಲ್ಲೇ ಕೊಳೆಯುವವರು, ಬಸವತತ್ತ್ವನಿಷ್ಠರಾಗದೆ ಬಸವಮೂರ್ತಿ, ಬಸವಚಿತ್ರಗಳಲ್ಲೇ ತಲ್ಲೀನರಾಗುವವರು ಅನುಭಾವಿಗಳಾಗಲು ಸಾಧ್ಯವೆ?

❖❖

೪

❖

ಜಾತಿ ಇಲ್ಲದ ಧರ್ಮ

ಲಿಂಗಾಯತ ಧರ್ಮಗುರು ಬಸವಣ್ಣನವರು ೧೨ನೇ ಶತಮಾನದಲ್ಲೇ ಜಾತಿವಿನಾಶ ಚಳವಳಿ ಆರಂಭಿಸಿದರು. ಇಷ್ಟಲಿಂಗ ಧಾರಣ ಮಾಡಿ ಲಿಂಗಾಯತರಾದವರಲ್ಲಿ ಜಾತಿಭೇದ, ವರ್ಣಭೇದ, ವರ್ಗಭೇದ ಮತ್ತು ಲಿಂಗಭೇದಗಳಿಲ್ಲ ಎಂದು ಸಾರಿದರು. ಸಮಗಾರ ಹರಳಯ್ಯನವರು ಮತ್ತು ಬ್ರಾಹ್ಮಣ ಮೂಲದ ಮಧುವರಸರು ಲಿಂಗವಂತ ಧರ್ಮ ಸ್ವೀಕರಿಸಿ ಎಲ್ಲ ಭೇದಗಳಿಂದ ಮುಕ್ತರಾದರು. ಹರಳಯ್ಯನವರ ಮಗ ಶೀಲವಂತ ಮತ್ತು ಮಧುವರಸರ ಮಗಳು ಲಾವಣ್ಯಳ ವಿವಾಹವನ್ನು ಬಸವಾದಿ ಶರಣರು ಏರ್ಪಡಿಸಿದರು. ಮನುಧರ್ಮಶಾಸ್ತ್ರದ ಪ್ರಕಾರ ಇದು ವಿಲೋಮ ವಿವಾಹ ಎಂದು ವೈದಿಕರು ಗುಲ್ಲೆಬ್ಬಿಸಿದರು. ಶರಣರಿಗೆ ಶಿಕ್ಷೆ ವಿಧಿಸಬೇಕೆಂದು ಬಿಜ್ಜಳ ರಾಜನ ಮೇಲೆ ಒತ್ತಡ ತಂದರು. ವೈದಿಕರ ಶಾಸ್ತ್ರಗಳು ಹೇಳಿದಂತೆ ಬಿಜ್ಜಳನ ಶಸ್ತ್ರಗಳು ಕೇಳಿದವು. ಹರಳಯ್ಯ ಮಧುವರಸರಿಗೆ ಎಳೆಹೂಟೆ ಶಿಕ್ಷೆಯಾಯಿತು. ಹೀಗೆ ವೈದಿಕರು ಬಸವಣ್ಣನವರ ಶರಣಸಂಕುಲವೆಂಬ ನವಸಮಾಜದ ಮೇಲೆ ಬಿಜ್ಜಳನ ಮೂಲಕ ಕ್ಷಿಪ್ರಕ್ರಾಂತಿ ಮಾಡಿಸಿದರು. ಆಗ ಬಹಳಷ್ಟು ಶರಣರ ಕಗ್ಗೊಲೆಯಾಯಿತು. ಸಮಾನತೆ ಸಾರುವ ಬಹಳಷ್ಟು ವಚನಕಟ್ಟುಗಳು ಬೆಂಕಿಗೆ ಆಹುತಿಯಾದವು. ಸಹಸ್ರ ಸಹಸ್ರ ಶರಣರು ದಿಕ್ಕಾಪಾಲಾಗಿ ಹೋದರು. ಸಮಾನತೆಗಾಗಿ ಹೋರಾಟ ಮಾಡಿದ ದಾರ್ಶನಿಕರನ್ನು ಹೀಗೆ ಸಾಮೂಹಿಕವಾಗಿ ಕೊಲೆ ಮಾಡಿದ ಘಟನೆ ಜಗತ್ತಿನಲ್ಲಿ ಎಲ್ಲಿಯೂ ನಡೆದಿಲ್ಲ.

ಬಸವಣ್ಣನವರು ಜಾತಿಯ ಸಂಕೋಲೆಗಳನ್ನು ಕಳಚಿದ ರೀತಿ ವಿಶಿಷ್ಟವಾಗಿದೆ. ಅವರು ಜಾತಿಸೂಚಕ ಪದಗಳನ್ನು ಕಾಯಕ ಸೂಚಕ ಪದಗಳಾಗಿ ಮಾರ್ಪಡಿಸಿದರು. ಕಾಯಕಕ್ಕೆ ಅಂಟಿದ್ದ ಜಾತಿಯ ವಿಷವನ್ನು ತೆಗೆದು ಹಾಕಿದರು. ಕಾಯಕಗಳ ಮಧ್ಯೆ ಇದ್ದ ಮೇಲು ಕೀಳು ಭಾವನೆಯನ್ನು ಹೊಡೆದು ಹಾಕಿದರು. ಪ್ರಧಾನಿ ಕಾಯಕ ದೊಡ್ಡದಲ್ಲ, ಸಮಗಾರ ಕಾಯಕ ಸಣ್ಣದಲ್ಲ ಎಂಬುದನ್ನು 'ಶರಣು' ಎಂದು ಹೇಳಿದ

ಸಮಗಾರ ಹರಳಯ್ಯನವರಿಗೆ ಬಾಗಿದ ಶಿರ ಮತ್ತು ಮುಗಿದ ಕೈಗಳೊಂದಿಗೆ 'ಶರಣು ಶರಣಾರ್ಥಿ' ಎಂದು ಹೇಳುವ ಮೂಲಕ ಸೂಚಿಸಿದರು. ಜನರನ್ನು ಒಂದೂಗೂಡಿಸುವುದು ಆರ್ಥಿಕ ಸಮಾನತೆಯಿಂದ ಕೂಡಿದ ನಿರ್ಜಾತಿ ವ್ಯವಸ್ಥೆಯಿಂದ ಮಾತ್ರ ಎಂಬುದು ಬಸವಣ್ಣನವರಿಗೆ ಮನವರಿಕೆಯಾಗಿತ್ತು. ಸಾಂಪ್ರದಾಯಕವಾಗಿ ಬಂದ ಜಾತಿ ವ್ಯವಸ್ಥೆಯೊಳಗಿನ ರಕ್ತ ಸಂಬಂಧವನ್ನು 'ನಂಟುಭಕ್ತಿ ನಾಯಕ ನರಕ' ಎಂದು ಟೀಕಿಸುವ ಮೂಲಕ ಅಲ್ಲಗಳೆದರು. ಸರ್ವಸಮತ್ವ ಪ್ರಜ್ಞೆಯಿಂದ ಕೂಡಿದ ಇಷ್ಟಲಿಂಗ ಭಕ್ತಿಯ ಮೂಲಕ ಶರಣಸಂಕುಲದಲ್ಲಿ ಭಕ್ತಿಸಂಬಂಧವನ್ನು ಬೆಸೆಯುವಲ್ಲಿ ಯಶಸ್ಸನ್ನು ಸಾಧಿಸಿದರು. ಇದು ಜಾತಿವಿನಾಶ ಮತ್ತು ವರ್ಗವಿನಾಶ ಮಾಡುವ ಸಾಮಾಜಿಕ ಸಂಬಂಧಕ್ಕೆ ನಾಂದಿಯಾಯಿತು. ಮನುವಾದಿ ವ್ಯವಸ್ಥೆಯಲ್ಲಿ ಮೇಲ್ವರ್ಗ ಮತ್ತು ಮೇಲ್ಜಾತಿ ಬ್ರಾಹ್ಮಣರಾಗಿದ್ದ ಮಂತ್ರಿ ಮಧುವರಸರು ಮತ್ತು ಕೆಳಜಾತಿ, ಕೆಳವರ್ಗದರಾಗಿದ್ದ ಸಮಗಾರ ಹರಳಯ್ಯನವರು ಇಷ್ಟಲಿಂಗವನ್ನು ಧರಿಸುವ ಮೂಲಕ ಶರಣ ಸಂಕುಲದಲ್ಲಿ ಜಾತಿ ಮತ್ತು ವರ್ಗರಹಿತವಾಗಿ ಸಮತೆಯ ಬದುಕನ್ನು ಪಡೆದರು. ಶರಣಧರ್ಮದ ಈ ಸಮಾನತೆಯ ಕಾರಣದಿಂದಲೇ ಮಧುವರಸರ ಮಗಳು ಲಾವಣ್ಯ ಮತ್ತು ಹರಳಯ್ಯನವರ ಮಗ ಶೀಲವಂತರ ವಿವಾಹ ಏರ್ಪಡಲು ಸಾಧ್ಯವಾಯಿತು. ಆದರೆ ಮನುಧರ್ಮಕ್ಕೆ ವಿರುದ್ಧವಾದ ಈ ವಿಲೋಮ ಪದ್ಧತಿಯ ಮದುವೆ ಪುರೋಹಿತಶಾಹಿಗಳಿಗೆ ನುಂಗಲಾರದ ತುತ್ತಾಯಿತು. ಇದಕ್ಕೂ ಮೊದಲು ಕೆಳವರ್ಗದ ನಟುವರ ಜನಾಂಗದ ಅಲ್ಲಮಪ್ರಭುಗಳನ್ನು ಬಸವಣ್ಣನವರು ಅನುಭವ ಮಂಪಟದ ಶೂನ್ಯಸಿಂಹಾಸನದ ಮೇಲೆ ಕೂಡಿಸಿದ್ದೇ ಪುರೋಹಿತಶಾಹಿಗಳ ದೃಷ್ಟಿಯಲ್ಲಿ ಪ್ರಮಾದವಾಗಿತ್ತು. ಬಸವಣ್ಣನವರ ಆ ನಿರ್ಧಾರ ವೈದಿಕರ ಅಸ್ತಿತ್ವವನ್ನೇ ಅಲುಗಾಡಿಸಿತ್ತು. ಅದಾಗಲೇ ಅವರ ಮನುಧರ್ಮ ಸಿಂಹಾಸನ ಕುಸಿಯತೊಡಗಿತ್ತು. ಆದರೆ ಪುರೋಹಿತಶಾಹಿಗಳು 'ರಾಜಸಿಂಹಾಸನ ಕುಸಿಯುತ್ತಿದೆ' ಎಂದು ಗುಲ್ಲೆಬ್ಬಿಸಿದರು. ಅರಮನೆಯಲ್ಲಿ ಬಿಜ್ಜಳ, ತಮ್ಮ ಕರ್ಣದೇವ ಮತ್ತು ಮಗ ರಾಯಮುರಾರಿ ಸೋವಿದೇವರ ಮಧ್ಯೆ ಅಪನಂಬಿಕೆ ಹುಟ್ಟುವಂತೆ ಮಾಡಿದರು. ಹರಳಯ್ಯ ಮಧುವರಸರ ಮಕ್ಕಳ ಮದುವೆಯ ಸಂದರ್ಭದಲ್ಲಿ ಈ ಅಪನಂಬಿಕೆ ತಾರಕಕ್ಕೇರಿತು. ಬಿಜ್ಜಳ ಈ ಸಂದರ್ಭದಲ್ಲಿ ಮಂತ್ರಿಮಂಡಲದ ತುಂಬ ಇದ್ದ ಮನುವಾದಿ ಪುರೋಹಿತರ ಒತ್ತಡಕ್ಕೆ ಮಣಿದಿದ್ದ. ಹೀಗೆ ಪುರೋಹಿತಶಾಹಿ ಹಿಡಿತಕ್ಕೆ ರಾಜಶಾಹಿ ಒಳಗಾಯಿತು. ಈ ಸಂದರ್ಭದ ಲಾಭ ಪಡೆದ ಮನುವಾದಿಗಳು ಜಗದೇವ ಮಲ್ಲಿಬೊಮ್ಮರಿಂದ ಬಿಜ್ಜಳನ ಕೊಲೆಯಾಗುವಂಥ ಷಡ್ಯಂತ್ರ ಹೂಡಿದರು. ಸೋವಿದೇವನಿಗೆ ಇದೆಲ್ಲದರ ಅರಿವಿದ್ದರೂ ಮನುವಾದಿಗಳು ಸಿಂಹಾಸನದ ಆಸೆ ಹಚ್ಚಿದ್ದರಿಂದ ಕಂಡೂ ಕಾಣದ ಹಾಗೆ ಇದ್ದ. ಮನುವಾದಿಗಳು ಶರಣರ ಮೇಲೆ ಬಿಜ್ಜಳನ ಕೊಲೆಯ ಆರೋಪ ಹೊರಿಸಿದರು.

ಉರಿಯುವ ಬೆಂಕಿಯ ಮೇಲೆ ತುಪ್ಪವನ್ನು ಚೆಲ್ಲುತ್ತಲೇ ಇದ್ದರು. ಅಂತೂ ಸೋವಿದೇವನನ್ನು ಸಿಂಹಾಸನದ ಮೇಲೆ ಕೂಡಿಸಿದರು. ಮನುವಾದಿಗಳು ಹೇಳಿದಂತೆ ಸೈನಿಕರು ಕೇಳುವ ಸ್ಥಿತಿ ತಲುಪಿತು. ಶರಣರ ಕೊಲೆ ಸುಲಿಗೆ ಮಾಡುವ ಮತ್ತು ಅವರ ವಚನಕಟ್ಟುಗಳನ್ನು ಸುಡುವ ಕೃತ್ಯಗಳು ಮುಂದುವರಿದಿದ್ದವು. ಅಳಿದುಳಿದ ಶರಣರು ಚೆಲ್ಲಾಪಿಲ್ಲಿಯಾಗಿ ದಿಕ್ಕುದೆಸೆಯಿಲ್ಲದೆ ಕಲ್ಯಾಣ ಬಿಟ್ಟು ಹೋಗುವಂತಾಯಿತು. ಅಕ್ಕ ನಾಗಮ್ಮ, ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ಕಿನ್ನರಿ ಬ್ರಹ್ಮಯ್ಯ, ನುಲಿಯ ಚಂದಯ್ಯ, ಡೋಹರ ಕಕ್ಕಯ್ಯ, ಗಂಗಾಂಬಿಕೆ ಮುಂತಾದ ಶರಣರ ಮುಂದಾಳತ್ವದಲ್ಲಿ ಶರಣರ ಗುಂಪೊಂದು ಬೆಂಕಿಗಾಹುತಿಯಾಗದೆ ಉಳಿದ ವಚನಕಟ್ಟುಗಳ ರಕ್ಷಣೆಗಾಗಿ ಉಳವಿಯ ಕಡೆಗೆ ಸಾಗಿತು.

ಶರಣರ ಸಮಗ್ರ ಕ್ರಾಂತಿಯ ಪ್ರಕ್ರಿಯೆಯನ್ನು ಪಟ್ಟಭದ್ರ ಶಕ್ತಿಗಳು ಹಾಳುಮಾಡಿದ್ದನ್ನೇ ಮುಂದಿನ ಶತಮಾನಗಳ ಲಿಂಗಾಯತರು 'ಕಲ್ಯಾಣಕ್ರಾಂತಿ' ಎಂದು ರಮ್ಯವಾಗಿ ಭ್ರಮಿಸಿದರು. ಆ ಮೂಲಕ ಶರಣರ ತ್ಯಾಗ ಬಲಿದಾನಗಳನ್ನು ಮರೆತರು. ಅಕ್ಷರಜ್ಞಾನ ಪಡೆದಂತೆಲ್ಲ ಶರಣ ಶರಣೆಯರನ್ನು ಬಾಯಿಮಾತಿನಲ್ಲಿ ವೈಭವೀಕರಿಸುತ್ತ ತಮ್ಮ ಮಕ್ಕಳಿಗೆ ಅವರ ನೆನಪಿಗಾಗಿ ಹೆಸರಿಡುವುದನ್ನೂ ಮರೆತರು. ಮಾನವಕುಲದ ಏಳ್ಗೆಗಾಗಿ ಬಸವಣ್ಣನವರು ಕನಸು ಕಂಡ ಜಾತಿ ಮತ್ತು ವರ್ಗ ತಾರತಮ್ಯಗಳಿಂದ ಮುಕ್ತವಾದ ಹೊಸಜಗತ್ತಿನ ನಿರ್ಮಾಣದ ಚಳವಳಿಯಲ್ಲಿ ಹುತಾತ್ಮರಾದ ಹರಳಯ್ಯ ಮತ್ತು ಮಧುವರಸರ ಹೆಸರನ್ನು ಕಳೆದ ೮೦೦ ವರ್ಷಗಳ ಅವಧಿಯಲ್ಲಿ ಯಾವುದೇ ಲಿಂಗಾಯತ ಮನೆತನದಲ್ಲಿ ಕಾಣುವುದಿಲ್ಲ! ಚೆಂದಯ್ಯ, ಬೊಮ್ಮಯ್ಯ, ಕಕ್ಕಯ್ಯ, ಚೆನ್ನಯ್ಯ, ಧೂಳಯ್ಯ, ನಾಗಿದೇವ, ಚಂದಿಮರಸ, ಮಾರಯ್ಯ, ದಾಸಿಮಯ್ಯ, ಚೌಡಯ್ಯ, ಮಸಣಯ್ಯ, ಉರಿಲಿಂಗಪೆದ್ದಿ, ಮಾಚಿದೇವ, ಬಾಚರಸ, ರೇಕಣ್ಣ, ಗೊಗ್ಗವ್ವೆ, ಕೇತಲದೇವಿ, ದುಗ್ಗಳೆ, ಬೊಂತಾದೇವಿ, ಕಾಳವ್ವೆ, ಲಕ್ಕಮ್ಮ, ಸಂಕವ್ವೆ ಮುಂತಾದ ಶರಣ ಶರಣೆಯರ ಹೆಸರುಗಳು ಕೂಡ ಯಾವುದೇ ಲಿಂಗಾಯತ ಮನೆತನದಲ್ಲಿ ಕಾಣಬರುವುದಿಲ್ಲ.

ಲಿಂಗಾಯತರಿಗೆ ತಮ್ಮ ಪೂರ್ವಜರ ತ್ಯಾಗ ಮತ್ತು ಧೀರ ಪರಂಪರೆಯ ಅರಿವು ಇಲ್ಲ. ಹರಳಯ್ಯ-ಮಧುವರಸರಿಗೆ ಎಳೆಹೂಟೆ ಶಿಕ್ಷೆಯ ಹಿಂದಿರುವ ರಾಜ್ಯಶಕ್ತಿ ಮತ್ತು ವೈದಿಕಶಕ್ತಿಯ ಕ್ರೌರ್ಯವನ್ನು ಮರೆತದ್ದೇ ಅದಕ್ಕೆ ಸಾಕ್ಷಿ. (೧೩೦೦ ವರ್ಷಗಳಷ್ಟು ಹಿಂದೆ ಸತ್ಯಕ್ಕಾಗಿ ಹುತಾತ್ಮರಾದ ಪ್ರವಾದಿ ಮುಹಮ್ಮದ ಪೈಗಂಬರರ ಮೊಮ್ಮಗ ಹುಸೇನ ಅವರ ಹೆಸರನ್ನಿಡದ ಒಂದು ಮುಸ್ಲಿಂ ಮನೆತನ ಕೂಡ ಜಗತ್ತಿನಲ್ಲಿಲ್ಲ!) ಲಿಂಗಾಯತರು ಕಳೆದ ೬ ಶತಮಾನಗಳ ಅವಧಿಯಲ್ಲಿ ಕೆಳವರ್ಗದಿಂದ ಮೇಲ್ವರ್ಗ ಮತ್ತು ಮೇಲ್ಜಾತಿಯ ಗುಣಗಳನ್ನು ರೂಢಿಸಿಕೊಳ್ಳುತ್ತ ಬೆಳೆದರು. ವಿಜಯನಗರದಲ್ಲಿ ರಾಜಾಶ್ರಯ ಸಿಕ್ಕ ನಂತರ ತಾವು 'ಲಿಂಗೀಬ್ರಾಹ್ಮಣರು' ಎಂಬ ಭ್ರಮೆಗೆ ಒಳಗಾದರು.

ಮೇಲ್ಜಾತಿ ಮತ್ತು ಮೇಲ್ವರ್ಗದ ದಾರಿ ಹಿಡಿದು ಆಚಾರ್ಯ ಸಂಪ್ರದಾಯಕ್ಕೆ ಬಲಿಯಾದರು. ೧೨ನೇ ಶತಮಾನದ ಶರಣರ ಧೀರೋದಾತ್ತ ಗುಣಗಳನ್ನು ಮರೆಮಾಚುತ್ತ ಧಾರ್ಮಿಕ ವಿಧಿವಿಧಾನಗಳಲ್ಲೇ ಅವರನ್ನು ಅರ್ಥೈಸತೊಡಗಿದರು. ಮೇಲ್ವರ್ಗದ ಲಿಂಗಾಯತರು ವೈದಿಕರು ಸೃಷ್ಟಿಸಿದ ಅಧ್ಯಾತ್ಮವೆಂಬ ಭ್ರಮೆಯ ಲೋಕಕ್ಕೇ ಜೋತುಬಿದ್ದು ಶರಣರ ಅನುಭಾವ ಮತ್ತು ಆ ಅನುಭಾವದ ನೆಲೆಯಾದ ಅನುಭವವನ್ನೇ ಮರೆತರು. 'ನಡೆದಾಡುವ ದೇವರುಗಳು' ಅವರ ಬೆಂಬಲಿಗೆ ನಿಂತರು. 'ಭಗವದ್ಗೀತೆ ಜಗತ್ತಿನ ಶ್ರೇಷ್ಠಗ್ರಂಥ' ಎಂದು ಮಾಯಾಭ್ರಾಂತಿ ಕವಿದ ಗೀತಜ್ಞರು ಪ್ರತಿಪಾದಿಸಿದಾಗ ಅದನ್ನೇ ನಿಜ ಎಂದು ಭಾವಿಸಿದರು. ಇಷ್ಟಲಿಂಗದ ವಿರಾಟದರ್ಶನವನ್ನು ಅರ್ಥೈಸಿಕೊಳ್ಳಲಿಕ್ಕಾಗದೆ ಹೋದರು. ಅದರ ಸಮಷ್ಟಿರೂಪವನ್ನು ವ್ಯಷ್ಟಿಗೆ ಇಳಿಸುತ್ತ ಶ್ರದ್ಧೆಯಿಂದಲೇ ಇಷ್ಟಲಿಂಗ ಪೂಜಾನಿರತರಾಗುತ್ತ ಸಮಷ್ಟಿಯ ಅರಿವಿಲ್ಲದೆ ಲಿಂಗಾಂಗಸಾಮರಸ್ಯವನ್ನು ಸಾಧಿಸಿದೆವು ಎಂದು ಅನೇಕ ಅಣ್ಣಗಳು, ಅಕ್ಕಗಳು, ಅಪ್ಪಗಳು ಭಾವಿಸಿದರು. ಬಸವಣ್ಣನವರ ಹೆಸರಿನಲ್ಲಿ ಸಮಿತಿಗಳನ್ನು, ಪ್ರತಿಷ್ಠಾನಗಳನ್ನು ಮತ್ತು ಆಶ್ರಮಗಳನ್ನು ಕಟ್ಟಿಕೊಳ್ಳುತ್ತ ಶರಣರ ಪ್ರಖರ ವೈಚಾರಿಕತೆಯನ್ನು ಮರೆತು ವೈದಿಕದ ರೀತಿಯಲ್ಲೇ ಕರ್ಮಸಿದ್ಧಾಂತ, ಪುನರ್ಜನ್ಮ, ಸ್ವರ್ಗ, ನರಕ, ಪುಣ್ಯ, ಪಾಪ, ಶಾಪ, ಮೋಕ್ಷಗಳನ್ನು ನಂಬುತ್ತ ಮೂಢನಂಬಿಕೆಗಳೊಂದಿಗೆ ಬದುಕುವ ಪರಿ ಹೇಸಿಗೆ ಹುಟ್ಟಿಸುವಂಥದ್ದು. ಲಿಂಗಾಂಗಸಾಮರಸ್ಯ ಸೂಚಿಸುವ ಚೈತನ್ಯ ಮತ್ತು ವಸ್ತುವಿನ ಸಮರಸದ ರಹಸ್ಯವನ್ನು ಅರಿಯದೆ ಹೋದ ಇವರು ವೈದಿಕರ ರಾಜಕೀಯ ಸಿದ್ಧಾಂತವನ್ನೂ ಪುರಸ್ಕರಿಸಿದರು. ಶರಣರ ಹತ್ಯೆ ಮಾಡಿದ ವೈದಿಕಶಕ್ತಿಗಳು ಬಸವನಾಡಾದ ಕನ್ನಡ ನಾಡಿನಲ್ಲಿ ರಾಜಕೀಯ ಸೂತ್ರ ಹಿಡಿಯುವಂಥ ಸ್ಥಿತಿಯನ್ನು ಇಂಥವರೆಲ್ಲ ಸೇರಿ ಸೃಷ್ಟಿ ಮಾಡಿದರು.

ಅಕ್ಷರಜ್ಞಾನವಿಲ್ಲದ ಕಾಯಕಜೀವಿಗಳಲ್ಲಿ ಆತ್ಮಗೌರವ ತುಂಬುತ್ತ ಈ ಉನ್ನತ ಅವಸ್ಥೆಯನ್ನು ತಲುಪುವ ಹಾಗೆ ಮತ್ತು ಅವರ ವ್ಯಕ್ತಿತ್ವವಿಕಸನವಾಗುವಂತೆ ಮಾಡಿದ್ದು ಬಸವಣ್ಣನವರ ಅನನ್ಯ ಸಾಧನೆಗಳಲ್ಲಿ ಒಂದಾಗಿದೆ. ಬಸವಣ್ಣನವರು ಇಂಥ ಬಸವಳಿದವರ ಬಳಿಗೆ ಹೋಗಿ ಅವರನ್ನು ಅಪ್ಪಿಕೊಂಡರು; ಹೆಗಲಮೇಲೆ ಹೊತ್ತುಕೊಂಡು ಮೇಲೆ ತಂದರು. ಕಠಿಣಸಾಧ್ಯವಾದ ನಿರಂತರ ಪ್ರಯತ್ನದಿಂದ ಅವರು ಇದನ್ನು ಕಾರ್ಯಗತಗೊಳಿಸಿದ್ದಾರೆ. ಅವರಿಗೆ ಉಣಲು, ಉಡಲು, ನಡೆಯಲು ಮತ್ತು ನುಡಿಯಲು ಕಲಿಸುವ ಮೂಲಕ ಇಂಥ ಅಘಟಿತ ಘಟನೆಯನ್ನು ಸಾಧಿಸಿತೋರಿಸಿದ್ದಾರೆ.

ಯಾವ ಜನರ ಅನುಭವಕ್ಕೆ ಕವಡೆ ಕಿಮ್ಮತ್ತು ಇದ್ದಿದ್ದಿಲ್ಲವೊ; ಯಾರ ದುಡಿಮೆಯನ್ನು ಕೌಶಲರಹಿತವೆಂದು ಪರಿಗಣಿಸಲಾಗಿತ್ತೊ; ಯಾರ ಜ್ಞಾನವು ಅಕ್ಷರ ರೂಪಕ್ಕೆ ಇಳಿಸುವ

ಯೋಗ್ಯತೆಯನ್ನು ಹೊಂದಿಲ್ಲ ಎಂದು ತುಚ್ಛೀಕರಿಸಲಾಗಿತ್ತೋ; ಯಾರ ಬದುಕು ಆದರ್ಶ ಅಲ್ಲ ಎಂದು ಭಾವಿಸಲಾಗಿತ್ತೋ ಅಂಥ ಕಾಯಕಜೀವಿಗಳಲ್ಲಿ ಬಸವಣ್ಣನವರು ಅನುಭವದ 'ಭಿಕ್ಷೆ'ಯನ್ನು ಪಡೆದರು. ಎಲ್ಲ ಕಾಯಕಜೀವಿಗಳ ಬದುಕಿನಲ್ಲಿ ಭಾಗಿಯಾಗುತ್ತ ಅವರ ಅನುಭವವನ್ನು ತಮ್ಮದಾಗಿಸಿಕೊಳ್ಳುವುದರಲ್ಲಿ ತಲ್ಲೀನರಾದರು. ಆ ಮೂಲಕ ದುಡಿಯುವ ವರ್ಗದ ಅದಮ್ಯ ಶಕ್ತಿಯ ವಿರಾಟ್ ಸ್ವರೂಪವನ್ನು ಕಂಡುಕೊಂಡರು. ಅವರ ಅನುಭವದ ಮೇಲೆಯೆ ಅನುಭಾವದ ತತ್ತ್ವಜ್ಞಾನವನ್ನು ವಿಶ್ವಕ್ಕೆ ನೀಡುವುದರ ಮೂಲಕ ದುಡಿಯುವ ವರ್ಗದ ತತ್ತ್ವಜ್ಞಾನವು ಅನನ್ಯವಾದುದು ಎಂಬುದನ್ನು ಸಾಧಿಸಿ ತೋರಿಸಿದರು. ಜಗತ್ತಿನ ಯಾವ ಮೂಲೆಯಲ್ಲೂ ಇಲ್ಲದಂಥ ದುಡಿಯುವ ವರ್ಗದ ಸಂಘಟನೆ ಮಾಡಿದರು. ವಿಶ್ವದ ಕಾಯಕಜೀವಿಗಳ ಪ್ರಥಮ ನಾಯಕರೆನಿಸಿದರು. ಅಹಂನ ಕಡುವೈರಿಗಳಾಗಿದ್ದ ಅವರು ಹೊಗಳಿಕೆಯನ್ನು ಎಂದೂ ಇಷ್ಟಪಡಲಿಲ್ಲ. ಅದನ್ನು ಹೊನ್ನಶೂಲ ಎಂದು ಕರೆದರು. ತಾವೇ ಎಲ್ಲರಿಗಿಂತ ಕಿರಿಯರೆಂದು ಮನವರಿಕೆ ಮಾಡಿಕೊಡುತ್ತ ಅಹಂಕಾರ ಮರ್ದನ ಮಾಡಿದರು. ಎಲ್ಲ ಬಗೆಯ ಕಾಯಕಜೀವಿಗಳೆಂಬ ಗಣಂಗಳ ಮಧ್ಯದ ನಾಯಕತ್ವ ಗುಣವುಳ್ಳವರನ್ನು ಆಯ್ಕೆ ಮಾಡಿ ಅವರನ್ನು ಅಮರಗಣಂಗಳೆಂದು ಕರೆದು ಸರ್ವಸಮಾಜಗಳ ಪ್ರತಿನಿಧಿಯಾಗಿಸಿದರು. ಹೀಗೆ ಸಮೂಹ ನಾಯಕತ್ವದ ರೂವಾರಿಗಳಾದರು. ಜನಸಮುದಾಯಗಳ ಆಶಯಗಳಿಗೆ ಬಾಯಿಯಾದರು. ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ ಇಂಥ ಪ್ರಕ್ರಿಯೆಯನ್ನೇ ರೂಸೋ 'ಜನರಲ್ ವಿಲ್' ಎಂದು ಕರೆದದ್ದು.

ಎಲ್ಲ ಜಾತಿ ಜನಾಂಗಗಳ ಹಿನ್ನೆಲೆಯಿಂದ ಬಂದು ಇಷ್ಟಲಿಂಗ ದೀಕ್ಷೆ ಪಡೆದು ಶರಣರಾದಂಥವರಲ್ಲಿನ ೭೭೦ ಪ್ರಮುಖರನ್ನು ಆಯ್ಕೆ ಮಾಡಿ ಸರ್ವಸಮಾಜಗಳ ಭಾವನೆಗಳಿಗೆ ಬೆಲೆಕೊಡುವಂಥ ಸಮಾಜೋ ಧಾರ್ಮಿಕ ಸಂಸತ್ ಅನ್ನು ಕ್ರಿಯಾಶೀಲವಾಗಿಸುವ ಮೂಲಕ ಹೊಸ ಸಮಾಜದ ನೀಲನಕ್ಷೆ ಸಿದ್ಧಪಡಿಸಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ. ಮಾನವಕುಲವನ್ನು ಒಂದುಮಾಡುವ ಈ ಅನುಭವ ಮಂಟಪವೇ ಇಂದಿನ ಸಂಸತ್ ವ್ಯವಸ್ಥೆಗೆ ಸಾಕ್ಷಿಯಾಗಿದೆ. ಅನುಭವ ಮಂಟಪದ ಮೂಲಕ ಅಮರಗಣಂಗಳ ಮಧ್ಯೆ ಅಭಿವ್ಯಕ್ತಿ ಸ್ವಾತಂತ್ರ್ಯದ ಮಹತ್ವವನ್ನು ಎತ್ತಿಹಿಡಿದರು. ಅವರಲ್ಲಿ ವಿಮರ್ಶಾ ಪ್ರಜ್ಞೆ ಮೂಡಿಸಿದರು. ಶರಣ ಶರಣೆಯರ ಮಧ್ಯೆ ಜಾತಿಭೇದ ಮತ್ತು ಲಿಂಗಭೇದಗಳಿಲ್ಲದಂಥ ಸ್ಥಾಯಿಭಾವದ ಸೃಷ್ಟಿ ಮಾಡಿದರು. ಸತ್ಯಾನ್ವೇಷಣೆಯ ಉದ್ದೇಶದಿಂದ ಚರ್ಚೆಯಲ್ಲಿ ಭಾಗವಹಿಸಿದರು.

ಪ್ರಜಾಪ್ರಭುತ್ವದ ರೂಪುರೇಷಗಳ ಚಿಂತನೆ, ವಚನಗಳನ್ನು ಬದುಕಿನ ಸಂವಿಧಾನವನ್ನಾಗಿಸುವ ಬಯಕೆ, ಕಾಯಕಜೀವಿಗಳ ಜೀವನಾನುಭವದ ಮಕರಂದವನ್ನು ಸೈದ್ಧಾಂತಿಕವಾಗಿ ಕ್ರೋಡೀಕರಿಸಿ ಅನುಭಾವದ ಮಧುವನ್ನು ಸೃಷ್ಟಿಸುವುದು ಮುಂತಾದವು ಅನುಭವ ಮಂಟಪದ ಧ್ಯೇಯೋದ್ದೇಶಗಳಾಗಿದ್ದವು.

ನಿರ್ಜಾತಿ ವ್ಯವಸ್ಥೆಯ ಈ ಅನುಭವ ಮಂಟಪದಲ್ಲಿ ದಲಿತರಿಗೂ ಮಹಿಳೆಯರಿಗೂ ಸಮಾನ ಅವಕಾಶವಿದ್ದುದು ವಿಶ್ವದಲ್ಲೇ ಅದ್ವಿತೀಯವಾಗಿದೆ. ವರ್ಗ, ವರ್ಣ ಮತ್ತು ಲಿಂಗಭೇದಗಳಿಲ್ಲದ ಸಮಾಜವೊಂದರ ಉದಯಕ್ಕೆ ಅನುಭವಮಂಟಪ ಕಾರಣವಾಯಿತು. ನವಸಮಾಜವಾಗಿ ರೂಪುಗೊಂಡಂಥ ಶರಣಸಂಕುಲವು ಮಾನವರ ಮಧ್ಯೆ ಇರುವ ಎಲ್ಲ ಪ್ರಕಾರದ ಅಡ್ಡಗೋಡೆಗಳನ್ನು ಕೆಡವಿ ಹಾಕಿತು. ಇಡೀ ಮಾನವಕುಲವನ್ನು ಒಂದಾಗಿಸುವ ಮಂತ್ರ ಕಲಿಸಿತು.

ರಾಜ್ಯಶಕ್ತಿಗೆ ಬದಲಾಗಿ ಜನಶಕ್ತಿಯನ್ನು ರೂಪಿಸುವ ವಿಧಾನವನ್ನು ಕಂಡುಹಿಡಿದ ಬಸವಣ್ಣನವರು ರಾಜ್ಯಶಕ್ತಿಗೆ ಪರ್ಯಾಯವಾಗಿ ಶರಣಸಂಕುಲದ ನಿರ್ಮಾಣ ಮಾಡಿದರು. ಶರಣರ ಅನುಭವಮಂಟಪಕ್ಕೆ ಬಾಗಿಲುಗಳಿರಲಿಲ್ಲ. ಇಲ್ಲಿ ಪ್ರವೇಶ ಪಡೆಯುವುದು ಪ್ರತಿಯೊಬ್ಬ ಮಾನವನ ಹಕ್ಕಾಗಿತ್ತು. ಇದು ಜಾತಿಮಂಟಪಗಳನ್ನು ವಿರೋಧಿಸುವ ನೀತಿಮಂಟಪವಾಗಿತ್ತು. ಎಲ್ಲ ಜಾತಿ ಜನಾಂಗಗಳ ಹಿನ್ನೆಲೆಯಿಂದ ಬಂದ ಕಾಯಕಜೀವಿ ಶರಣರು ಜಾತ್ಯತೀತರಾಗಿ ಮತ್ತು ಧರ್ಮಬದ್ಧರಾಗಿ ಹೊಸತನವನ್ನು ಸಾಧಿಸಿದ್ದು ವಿಶ್ವದ ಇತಿಹಾಸದಲ್ಲೇ ಅನನ್ಯವಾಗಿದೆ.

ಅನುಭವ ಪ್ರಧಾನವಾದ ಜೀವನಶಿಕ್ಷಣ, ಸೈದ್ಧಾಂತಿಕವಾಗಿ ಜನಸಮೂಹದ ಸಂಘಟನೆ ಮತ್ತು ಅನುಭಾವದ ನೆಲೆಯಲ್ಲಿ ರಾಜ್ಯಶಕ್ತಿಯನ್ನು ಕಡೆಗಣಿಸುವಂಥ ಸ್ವಾವಲಂಬನೆಯ ಸಂಕುಲ ಬದುಕನ್ನು ಸಾಧಿಸುವ ಹೋರಾಟ ಈ ಮೂರು ಅವಸ್ಥೆಗಳು ಬಸವಣ್ಣನವರ ದರ್ಶನದ ಮೂರು ಮುಖ್ಯ ಮಗ್ಗಲುಗಳಾಗಿವೆ. ಅಂತೆಯೆ ಅವರ ದರ್ಶನವು ಭೂಮುಖಿ ದರ್ಶನ ಎಂದೆನಿಸಿಕೊಳ್ಳುವುದು. ಈ ದರ್ಶನದ ಪ್ರಕಾರ ಮರ್ತ್ಯಲೋಕವು ಕರ್ತಾರನ ಕಮ್ಮಟವಾಗಿದೆ. ಇಲ್ಲಿ ದೇವಲೋಕಕ್ಕೆ ಸ್ಥಾನವೇ ಇಲ್ಲ. ಸಮಗ್ರ ಕ್ರಾಂತಿಯ ಪರಿಕಲ್ಪನೆಯಿಲ್ಲದೆ ಇಂಥ ಸಾಧನೆ ಮಾಡಲಿಕ್ಕಾಗದು. ಬಸವಣ್ಣನವರು ರೂಪಿಸಿದ ಆ ಮೂರೂ ಅವಸ್ಥೆಗಳು ಸ್ಫಟಿಕದ ಶಲಾಕೆಯಂತೆಯೂ ಮುತ್ತಿನಹಾರದಂತೆಯೂ ಮಾಣಿಕ್ಯದ ದೀಪ್ತಿಯಂತೆಯೂ ಇದ್ದು ಮಾನವನ ಘನತೆಯನ್ನು ಕಾಪಾಡುವ ಶಕ್ತಿಯನ್ನು ಹೊಂದಿವೆ. ಬಸವದರ್ಶನವಾದ ಲಿಂಗತತ್ತ್ವವನ್ನು ಒಳಗೊಂಡ ಬಸವಾದಿ ಶರಣರ ವಚನಗಳು ದುಡಿಯುವ ಜನರ ಮಾನವೀಯ ಮೌಲ್ಯಗಳ ಮತ್ತು ವಿಶ್ವವ್ಯಾಪಿ ಸಂಸ್ಕೃತಿಯ ವಾಹಕಗಳಾಗಿವೆ. ದುಡಿಯುವ ವರ್ಗದ ಸಾಹಿತ್ಯದ ಅನನ್ಯತೆಯ ಮಾದರಿಯಾಗಿ ಇಂದಿಗೂ ಜನಮನವನ್ನು ಸೂರೆಗೊಳ್ಳುತ್ತಿವೆ.

ಲಿಂಗವಂತ ಧರ್ಮದ ಮೂಲಾಧಾರ ಯಾವುದು?

ಕಾಯಕವೇ ಲಿಂಗವಂತ ಧರ್ಮದ ಮೂಲಾಧಾರವಾಗಿದೆ. ಇಡೀ ನಿಸರ್ಗ ಕಾಯಕದ ಉತ್ಪಾದನೆಯಾಗಿದೆ. ಅಂತೆಯೆ "ಅಮರೇಶ್ವರಲಿಂಗವಾಯಿತ್ತಾದಡೂ

ಕಾಯಕದೊಳಗು" ಎಂದು ಹೇಳುವ ಮೂಲಕ ಆಯ್ದಕ್ಕಿ ಮಾರಯ್ಯನವರು 'ಕಾಯಕವೇ ಕೈಲಾಸ' ಎಂದು ತಿಳಿಸಿದ್ದಾರೆ.

'ಲೋಕದ ಚೇಷ್ಟೆಗೆ ರವಿ ಬೀಜ' ಎಂದು ಅಕ್ಕಮಹಾದೇವಿ ಹೇಳುತ್ತಾಳೆ. ಸೃಷ್ಟಿ ರೂಪುಗೊಳ್ಳುವ ಕ್ರಿಯೆಯಲ್ಲಿ ಸೂರ್ಯನ ಪಾತ್ರವನ್ನು ಅಕ್ಕ ಸೂಚಿಸುತ್ತಾಳೆ. ಸೂರ್ಯನದು ಬೆಳಕು ಕೊಡುವ ಕಾಯಕ. ಚಂದ್ರನದು ಬೆಳದಿಂಗಳು ಕೊಡುವ ಕಾಯಕ. ವಾಯುವಿನದು ಸೃಷ್ಟಿಯನ್ನು ಜೀವಂತವಾಗಿಡುವ ಕಾಯಕ, ಭೂಮಿ ಮತ್ತು ಜಲಕ್ಕೆ ನಮ್ಮೆಲ್ಲರನ್ನು ಸಲಹುವ ಕಾಯಕ. ಮೋಡಗಳಿಗೆ ಮಳೆ ಸುರಿಸುವ ಕಾಯಕ, ಲೋಕಕ್ಕೆ ನೀರುಣಿಸುತ್ತ ಸಮುದ್ರ ಸೇರಿ ಉಪ್ಪಿನಾಂಶವನ್ನು ಸಮತೋಲನದಲ್ಲಿ ಇಡುವ ಮೂಲಕ ಜಲಚರಗಳನ್ನು ರಕ್ಷಿಸುವ ಕಾಯಕ ನದಿಯದು. ಹೀಗೆ ಕಾಯಕವು ನಿಸರ್ಗಧರ್ಮವಾಗಿದೆ. ಈ ಪ್ರಕಾರ ಲಿಂಗವಂತ ಧರ್ಮವು ನಿಸರ್ಗ ಧರ್ಮವಾಗಿರುವುದರಿಂದ ಕಾಯಕವು ಅದರ ಮೂಲಾಧಾರವಾಗಿದೆ.

ಬಸವಧರ್ಮ ಎಂಬ ಲಿಂಗವಂತ ಧರ್ಮವು ಕಾಯಕ ಪ್ರಧಾನ ಧರ್ಮವಾಗಿರುವುದರಿಂದ ಕಾಯಕ ಜೀವಿಗಳೇ ಈ ಧರ್ಮದ ಮೂಲಪುರುಷರು. ಬಸವಣ್ಣನವರ ಅನುಭವದ ಪಾತ್ರೆಯನ್ನು ತುಂಬಿಸಿದವರೇ ಕಾಯಕಜೀವಿಗಳು. "ಭಕ್ತಿ ಇಲ್ಲದ ಬಡವ ನಾನಯ್ಯಾ ಕಕ್ಕಯ್ಯನ ಮನೆಯಲ್ಲೂ ಬೇಡಿದೆ; ಚೆನ್ನಯ್ಯನ ಮನೆಯಲ್ಲೂ ಬೇಡಿದೆ" ಎಂದು ಬಸವಣ್ಣನವರು ಮನದುಂಬಿ ಹೇಳಿದ್ದಾರೆ. ಉನ್ನತ ಕುಲ, ಉನ್ನತ ಶಿಕ್ಷಣ, ಉನ್ನತ ವರ್ಗ ಮತ್ತು ಪ್ರಧಾನ ಮಂತ್ರಿಯಂಥ ಉನ್ನತ ಹುದ್ದೆಯನ್ನು ಹೊಂದಿ ಕ್ರಿಯಾಶೀಲರಾಗಿದ್ದ ಬಸವಣ್ಣನವರು ಇವುಗಳನ್ನೆಲ್ಲ ಲೆಕ್ಕಿಸದೆ ಹೀಗೆ ಕೆಳಜಾತೀಕರಣಕ್ಕೆ ಒಳಗಾಗಿ ಬಸವಳಿದ ಜನರ ಕಣ್ಣೀರನ್ನು ಒರೆಸಲು ಮುಂದಾದರು. ಸಕಲ ವೇದ, ಶಾಸ್ತ್ರ, ಉಪನಿಷತ್, ಪುರಾಣ ಮತ್ತು ಆಗಮಗಳಲ್ಲಿ ಪಾರಂಗತರಾಗಿದ್ದರೂ ಹೊಸ ಜಗತ್ತಿನ ಸಿದ್ಧಾಂತ ರೂಪಿಸುವಲ್ಲಿ ಕಾಯಕಜೀವಿಗಳ ಅನುಭವವನ್ನೇ ಪ್ರಮಾಣವಾಗಿ ಸ್ವೀಕರಿಸಿದರು.

ಲಕ್ಷಾಂತರ ಜನರ ಅನುಭವದಿಂದ ಒಂದು ನಾಗರೀಕತೆಯ ನಿರ್ಮಾಣವಾಗುವುದು. ಅವರೆಲ್ಲರ ಅನುಭವದ ಸಾರವಾದ ಅನುಭಾವದಿಂದ ಮಾನವಸಂಸ್ಕೃತಿ ಅರಳುವುದು. ಹೀಗೆ ನಿರ್ಮಾಣವಾದ ನಾಗರೀಕತೆಯಲ್ಲಿ ಅರಳಿದ ಸಂಸ್ಕೃತಿಯಲ್ಲಿ ವಿಶ್ವಮಾನವನ ಉದಯವಾಗುವುದು. ನಮ್ಮ ಬಸವಾದಿ ಶರಣರು ಅಂಥ ವಿಶ್ವಮಾನವರು.

❖❖

೫

❖

ಬಸವಣ್ಣ ಮತ್ತು ಅಂಬೇಡ್ಕರ್

ಭಾರತದ ಇತಿಹಾಸದಲ್ಲಿ ವೈದಿಕರ ಸಮಾಜೋ ಧಾರ್ಮಿಕ ವ್ಯವಸ್ಥೆಯನ್ನು ನೇರವಾಗಿ ಎದುರಿಸಿದ ಇಬ್ಬರು ಮಹಾನಭಾವರಲ್ಲಿ ಮೊದಲನೆಯವರು ೧೨ನೇ ಶತಮಾನದ ಬಸವಣ್ಣ ಮತ್ತು ಎರಡನೆಯರು ೨೦ನೇ ಶತಮಾನದ ಬಾಬಾಸಾಹೇಬ ಅಂಬೇಡ್ಕರ್ ಅವರು. ಐತಿಹಾಸಿಕವಾಗಿ ಮನುವಾದಿ ವೈದಿಕರ ಬಗ್ಗೆ ಎಚ್ಚರಿಕೆಯ ಗಂಟೆ ಬಾರಿಸಿದ ಚಾರ್ವಾಕರು (ಲೋಕಾಯತರು) ಇದ್ದಾರೆ. ಭೇದ ಸಂಸ್ಕೃತಿಗೆ ವಿಮುಖರಾದ ಬುದ್ಧರಂಥ ತತ್ತ್ವಜ್ಞಾನಿಗಳು ಇದ್ದಾರೆ. ತಾವು ಸನಾತನ ಹಿಂದುಗಳೆಂದು ಹೇಳಿಕೊಳ್ಳುತ್ತ ವೈದಿಕವನ್ನು ಮೆತ್ತಗೆ ಮಾಡಿದ ಗಾಂಧೀಜಿಯವರಂಥವರಿದ್ದಾರೆ. ರಾಮ ಮತ್ತು ಕೃಷ್ಣರ ಹೆಸರುಗಳನ್ನು ತೆಗೆದುಕೊಳ್ಳುತ್ತ ವ್ಯವಸ್ಥೆಯ ಒಳಗಿದ್ದುಕೊಂಡೇ ಅವರ ವಿರುದ್ಧ ಹೋರಾಡಿದ ಕಬೀರರಂಥವರಿದ್ದಾರೆ. ಸಾಮಾಜಿಕ ಪ್ರಜ್ಞೆ ಮೂಡಿಸಿದ ಜ್ಯೋತಿಬಾ ಫುಲೆ ಅವರಂಥವರಿದ್ದಾರೆ. ಇವರೆಲ್ಲ ತಮ್ಮ ತಮ್ಮ ಕಾಲಘಟ್ಟದಲ್ಲಿ ವಿವಿಧ ರೀತಿಯಲ್ಲಿ ಮಾಡಿದ ವೈದಿಕ ವಿರೋಧಿ ಪ್ರತಿಭಟನೆಗಳು ಕ್ರಾಂತಿಕಾರಕವಾಗಿಯೆ ಇವೆ. ಆದರೆ ವೈದಿಕವನ್ನು ನೇರವಾಗಿ ವಿರೋಧಿಸಿದ ಬಸವಣ್ಣ ಮತ್ತು ಅಂಬೇಡ್ಕರರ ಕಾಲಘಟ್ಟಗಳು ಮಾನವಘನತೆಗೆ ಸಂಬಂಧಿಸಿದಂಥ ತೀವ್ರ ಸಾಮಾಜಿಕ ಬದಲಾವಣೆಯಲ್ಲಿ ಬಹು ಮಹತ್ವದ ಪಾತ್ರ ವಹಿಸಿವೆ.

ಬಹಳ ಮುಖ್ಯವಾದ ವಿಚಾರವೆಂದರೆ ಬಸವಣ್ಣನವರು ಮತ್ತು ಅಂಬೇಡ್ಕರರು ವೈದಿಕ ವ್ಯವಸ್ಥೆಯನ್ನು ನೋಡಿದ ಕ್ರಮದಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಹೊಸ ವ್ಯವಸ್ಥೆಯನ್ನು ರೂಪಿಸುವ ಚಿಂತನಾ ಕ್ರಮದಲ್ಲೂ ವ್ಯತ್ಯಾಸವಿಲ್ಲ! ಏಕೆಂದರೆ ಜನರನ್ನು ಬೇರ್ಪಡಿಸಿ ಆಳುವ ವೈದಿಕ ಸಿದ್ಧಾಂತದ ಕ್ರೌರ್ಯವನ್ನು ವಿರೋಧಿಸುವ ನಿಲವು ಅವರಿಬ್ಬರ ಚಿಂತನಾ ಕ್ರಮದಲ್ಲಿ ಸ್ಥಾಯಿಭಾವವಾಗಿದೆ.

ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿನ ಸುಧಾರಣೆಗಳು ಬಹುಮುಖ್ಯ ಸುಧಾರಣೆಗಳಾಗಿವೆ. ಶಿಕ್ಷಣ, ಸಂಘಟನೆ ಮತ್ತು

ಹೋರಾಟಗಳ ಮೂಲಕ ಈ ಸುಧಾರಣೆಗಳನ್ನು ತರಲಿಕ್ಕಾಗುವುದು ಹೊರತಾಗಿ ಮಂತ್ರದಿಂದ ಮಾವಿನಕಾಯಿ ಉದುರುವುದಿಲ್ಲ ಎಂಬುದು ಈ ಇಬ್ಬರೂ ಮಹಾನುಭಾವಿಗಳಿಗೆ ಮನದಟ್ಟಾಗಿತ್ತು. ಅಷ್ಟೇ ಅಲ್ಲ ಮೊದಲಿಗೆ ಯಾವ ಕ್ಷೇತ್ರದಲ್ಲಿ ಸುಧಾರಣೆಯಾಗಬೇಕು ಎಂಬುದನ್ನು ಕೂಡ ಅವರು ಮನಗಂಡಿದ್ದರು. ಅವರ ಮೊದಲ ಆಯ್ಕೆ ಸಾಮಾಜಿಕವಾಗಿತ್ತು. ಅದಕ್ಕೆ ತಕ್ಕಂತೆ ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಬದಲಾವಣೆಗಳಾಗಬೇಕು. ಈ ಕ್ಷೇತ್ರಗಳಲ್ಲಿನ ಪರ್ಯಾಯ ವ್ಯವಸ್ಥೆ ಮಾತ್ರ ಹೊಸ ರಾಜಕೀಯ ವ್ಯವಸ್ಥೆಯನ್ನು ರೂಪಿಸಬಲ್ಲುದು ಎಂಬುದು ಇವರಿಬ್ಬರ ಹೋರಾಟದ ಮಾದರಿಗಳನ್ನು ಅಭ್ಯಸಿಸಿದಾಗ ಮನವರಿಕೆಯಾಗುವುದು. ಪರ್ಯಾಯ ಸಾಮಾಜಿಕ ವ್ಯವಸ್ಥೆಗಾಗಿ ಅಂಬೇಡ್ಕರರು ಮಾಡಿದ ಚಿಂತನೆಗಳು ಬಸವಣ್ಣನವರ ವಚನಗಳಲ್ಲಿ ಕಾಣಸಿಗುತ್ತವೆ.

ಈ ಇಬ್ಬರೂ ದಾರ್ಶನಿಕರು ಮೊದಲಿಗೆ ಸಾಮಾಜಿಕ ಕ್ಷೇತ್ರವನ್ನೇ ಏಕೆ ಆಯ್ಕೆ ಮಾಡಿಕೊಂಡರು ಎಂಬುದನ್ನು ಅರ್ಥ ಮಾಡಿಕೊಳ್ಳಲು ಭಾರತದ ಐದು ಸಾವಿರ ವರ್ಷಗಳ ಅಸಮಾನತೆಯ ಸಮಾಜವನ್ನು ಕಣ್ಣೆದುರಿಗೆ ತಂದುಕೊಳ್ಳುವುದು ಅವಶ್ಯವಾಗಿದೆ. ಆರು ಸಾವಿರ ವರ್ಷಗಳಷ್ಟು ಹಿಂದಿನದೆಂದು ಹೇಳಲಾಗುವ ಋಗ್ವೇದದಲ್ಲಿ "ಆನೋ ಭದ್ರಾಃ ಕೃತವೋ ಯಂತು ವಿಶ್ವತಃ" (ಉದಾತ್ತ ವಿಚಾರಗಳು ನಮಗೆ ಎಲ್ಲೆಡೆಯಿಂದ ಬರಲಿ) ಎಂದು ಹೇಳಲಾಗಿದೆ. ಅದೇ ರೀತಿ ಇನ್ನೊಂದೆಡೆ "ಯತ್ರ ವಿಶ್ವಂ ಭವತಿ ಏಕ ನೀಡಂ" (ಇಡೀ ವಿಶ್ವವೇ ಒಂದು ಗೂಡು) ಎಂದು ಋಗ್ವೇದ ತಿಳಿಸುತ್ತದೆ. ಹೀಗೆ ವಿಶ್ವಮಾನವ ತತ್ತ್ವವನ್ನು ಸಾರುವ ಋಗ್ವೇದ, 'ಬ್ರಾಹ್ಮಣರು ಬಾಯಿಯಿಂದ, ಕ್ಷತ್ರಿಯರು ಭುಜದಿಂದ, ವೈಶ್ಯರು ತೊಡೆಯಿಂದ ಮತ್ತು ಶೂದ್ರರು ಪಾದದಿಂದ ಹುಟ್ಟಿರುವರು' ಎಂಬ ವಿಚಾರವನ್ನು ಪುರುಷಸೂಕ್ತದಲ್ಲಿ ಸೇರಿಸಿ ಮಾನವ ಭೇದಭಾವ ವಿಚಾರಕ್ಕೆ ಎಡೆ ಮಾಡಿಕೊಟ್ಟಿದೆ. ಹಿಂದೂ ಸಮಾಜದಲ್ಲಿ ಮಾನವಭೇದಗಳು ಕಾಣಿಸಿಕೊಳ್ಳುವುದಕ್ಕೆ ಈ ಸೂಕ್ತ ಮೂಲಾಧಾರವಾಗಿದೆ. ಅನೇಕ ವಿದ್ವಾಂಸರು ಈ ಪುರುಷಸೂಕ್ತವನ್ನು ಕೊಂಡಾಡುತ್ತಾರೆ. ತಮ್ಮ ದಿನನಿತ್ಯದ ಬದುಕಿನಲ್ಲಿ ಹಿಂದೂ ಧರ್ಮದ ಹೆಸರಿನಲ್ಲಿ ನಡೆಯುವ ಅಸ್ಪೃಶ್ಯತೆ ಆಚರಣೆ ಮತ್ತು ಜಾತಿಭೇದ ಮಾಡುವ ಸತ್ಯವನ್ನು ಮರೆಮಾಚುತ್ತ ಈ ಪುರುಷ ಸೂಕ್ತಕ್ಕೆ ತಮಗೆ ಅನುಕೂಲಕರವಾದ ಬೇರೊಂದು ಅರ್ಥವನ್ನೇ ಕಲ್ಪಿಸುತ್ತಾರೆ. ಮಾನವನ ದೇಹದಲ್ಲೇ ಈ ನಾಲ್ಕು ವರ್ಣಭೇದಗಳಿವೆ. ಮಾನವನ ತಲೆ, ಭುಜ, ತೊಡೆ ಮತ್ತು ಪಾದ ಇವು ಅನುಕ್ರಮವಾಗಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರ ಸಂಕೇತ. ವೈದಿಕ ಧರ್ಮದಲ್ಲಿ ಪಾದಕ್ಕೆ ಎರಗುವುದು ಮತ್ತು ಪಾದಪೂಜೆ ಮುಂತಾದವು ಶೂದ್ರರಿಗೆ ನೀಡುವ ಗೌರವದ ಸಂಕೇತ. ಏಕೆಂದರೆ ಶೂದ್ರ ಜನಾಂಗ ಎಲ್ಲ ರೀತಿಯ ಉತ್ಪಾದನೆ ಮತ್ತು ಸೇವೆಯಲ್ಲಿ

ತೊಡಗಿರುತ್ತದೆ ಎಂದು ಅವರು ವಿಶ್ಲೇಷಣೆ ಮಾಡುತ್ತಾರೆ. ಇದೊಂದು ಚಾಣಾಕ್ಷ ಮೋಸದ ವಿಶ್ಲೇಷಣೆ. ಇದು ನಿಜವಾಗಿದ್ದರೆ ಭಾರತದಲ್ಲಿ ಸಹಸ್ರಾರು ಜಾತಿ ಉಪಜಾತಿಗಳು ಇರುತ್ತಿರಲಿಲ್ಲ. ದಲಿತರು ಅಸ್ಪೃಶ್ಯರಾಗಿ ಅರೆಹೊಟ್ಟೆಯಿಂದ ಊರ ಹೊರಗೆ ಬದುಕುವಂಥ ಹೀನಾಯ ಸ್ಥಿತಿ ಬರುತ್ತಿರಲಿಲ್ಲ.

ಇದಷ್ಟೇ ಅಲ್ಲ; ನಾಲ್ಕೂ ವೇದಗಳಲ್ಲಿ ಪುರಾತನವೂ ಹೆಚ್ಚು ಮಹತ್ವದ್ದೂ ಆದ ಋಗ್ವೇದ, ಈ ದೇಶದ ದಸ್ಯುಗಳೆಂಬ ಮೂಲನಿವಾಸಿಗಳನ್ನು ನಿರ್ನಾಮ ಮಾಡುವುದಕ್ಕಾಗಿ ಹೊರಗಿನಿಂದ ಭಾರತಕ್ಕೆ ಬಂದ ತನ್ನ ಜನಾಂಗವಾದ ಆರ್ಯರನ್ನು ಜನಾಂಗಹತ್ಯೆಗಾಗಿ ಪ್ರಚೋದಿಸುತ್ತದೆ. ಆ ಮೂಲಕ ಉಗ್ರವಾದವನ್ನು ಬೋಧಿಸುತ್ತದೆ.

"ವಿ ಜಾನೀಹಿ ಆರ್ಯಾನ್ ಯೇ ಚ ದಸ್ಯವಃ
ಬರ್ಹಿಷ್ಮತೆ ರಂಧಯ ಶಾಸದವ್ರತಾನ್।
ಶಾಕೀಭವ ಯಜಮಾನಸ್ಯ ಚೋದಿತಾ ವಿಶ್ವೇತ್ತಾ
ತೇ ಸಧಮಾದೇಷು ಚಾಕನ॥"

–ಋಗ್ವೇದ ೧ನೇ ಮಂಡಲ, ೫೧ನೇ ಸೂಕ್ತ, ೮ನೇ ಮಂತ್ರ

(ಆರ್ಯರನ್ನು ಮತ್ತು ದಸ್ಯುಗಳನ್ನು ಸರಿಯಾಗಿ ತಿಳಿ. ಯಜ್ಞಾದಿ ವ್ರತಗಳನ್ನು ಮಾಡದ ದಸ್ಯುಗಳನ್ನು ಶಿಕ್ಷಿಸು. ಯಜ್ಞದ ವೇಳೆ ದೇವತೆಗಳನ್ನು ಆಹ್ವಾನಿಸಲು ದರ್ಬೆಯ ಹುಲ್ಲನ್ನು ಹರಡಿರುವವರಿಗೆ (ಯಜ್ಞ ಮಾಡುವವರಿಗೆ) ಅವರು (ದಸ್ಯುಗಳು) ಅಧೀನರಾಗುವ ಹಾಗೆ ಮಾಡು. ಯಜ್ಞ ಮಾಡುವ ಯಜಮಾನನಿಗೆ ನೀನು ಪ್ರೋತ್ಸಾಹದಾಯಕನಾಗು. ನಿನ್ನ ಪೂರ್ವೋಕ್ತ ಕೃತ್ಯಗಳು ನನಗೆ ಆನಂದದಾಯಕ.)

ಮೊನ್ನೆ ನಮ್ಮ ರಾಷ್ಟ್ರ ನಾಯಕರು 'ಈ ದೇಶದಲ್ಲಿ ಉಗ್ರವಾದ ಎಂಬುದು ಆಮದು ಮಾಡಿಕೊಂಡಿರುವಂಥದ್ದು' ಎಂದು ಹೇಳಿದ್ದು ಸುಳ್ಳು ಎನ್ನಲು ಋಗ್ವೇದದ ಮೇಲಿನ ಸೂತ್ರವೇ ಸಾಕ್ಷಿಯಾಗಿದೆ. ಇಡೀ ಜಾತಿ ವ್ಯವಸ್ಥೆ ಉಗ್ರವಾದದ ಮೇಲೆ ನಿಂತಿದೆ. ಜಾತಿಯ ಉಗ್ರವಾದದಿಂದಾಗಿ ಸಹಸ್ರಾರು ವರ್ಷಗಳಿಂದ ಭಾರತದ ಶೇಕಡಾ ೯೦ರಷ್ಟು ದಲಿತ ಮತ್ತು ಹಿಂದುಳಿದ ಜನರು ಜಾತಿಯ ಬಲೆಯಲ್ಲಿ ಸಿಲುಕಿ ಶೋಷಣೆಗೆ ಒಳಗಾಗಿದ್ದಾರೆ. ಮೂಲದಲ್ಲಿ ಋಗ್ವೇದ ಸೃಷ್ಟಿಸಿದ ಉಗ್ರವಾದ, ಮನುಸ್ಮೃತಿಯಿಂದಾಗಿ ಗಟ್ಟಿಗೊಳ್ಳುವುದರ ಮೂಲಕ ಜಾತಿಗಳ ರೂಪ ತಾಳಿ ಇಂದಿಗೂ ಮುಂದುವರಿದಿದೆ.

ಬಸವಣ್ಣನವರು ಮತ್ತು ಅಂಬೇಡ್ಕರರು ಇಂಥ ವೈದಿಕ ವ್ಯವಸ್ಥೆಯ ಶೋಷಣಾ ತಂತ್ರವನ್ನು ಸರಿಯಾಗಿ ಅರ್ಥೈಸಿದರು. ಅಂತೆಯೆ ಇವರಿಬ್ಬರ ಕೃತಿಗಳಲ್ಲಿ ಈ ಕ್ರೌರ್ಯಕ್ಕೆ ದಯೆಯ ಉತ್ತರವಿದೆ.

"ಧರ್ಮಸ್ಯ ಬ್ರಾಹ್ಮಣೋ ಮೂಲಂ" (ಬ್ರಾಹ್ಮಣನು ಧರ್ಮದ ಮೂಲ) ಎಂದು ಮನುಸ್ಮೃತಿಯ ೧೧ನೇ ಅಧ್ಯಾಯದ ೮೫ನೇ ಶ್ಲೋಕ ಹೇಳುತ್ತದೆ.

"ಬ್ರಾಹ್ಮಣಃ ಸಂಭವೇನೈವ ದೇವಾನಾಮಪಿ ದೈವತಂ।
ಪ್ರಮಾಣಂ ಚೈವ ಲೋಕಸ್ಯ ಬ್ರಹ್ಮಾತ್ರೈವ ಹಿ ಕಾರಣಂ॥"

–ಮನುಸ್ಮೃತಿ (ಅಧ್ಯಾಯ ೧೧. ಶೋಕ ೮೪)

(ಬ್ರಾಹ್ಮಣನು ಹುಟ್ಟಿನಿಂದಲೇ ದೇವತೆಗಳಿಗೂ ದೇವತೆಯಾಗಿರುತ್ತಾನೆ. ಈ ಲೋಕದ ಧರ್ಮ ಸಾಧನೆಗೆ ಪ್ರತ್ಯಕ್ಷ ಪ್ರಮಾಣವೆಂದರೆ ಬ್ರಾಹ್ಮಣನೇ.)

ಎಂದು ೮೪ನೇ ಶ್ಲೋಕ ಹೇಳುತ್ತದೆ. ಆದರೆ ಬ್ರಾಹ್ಮಣ ಮೂಲದ ಬಸವಣ್ಣನವರು 'ಬ್ರಾಹ್ಮಣನೇ ಧರ್ಮದ ಮೂಲ' ಎಂಬುದನ್ನು ಅಲ್ಲಗಳೆದರು. ಆ ವೈದಿಕ ಧರ್ಮವನ್ನು ತಿರಸ್ಕರಿಸಿ 'ದಯವೇ ಧರ್ಮದ ಮೂಲ' ಎಂದು ಸಾರಿದರು. ನಿರ್ಜಾತಿ ವ್ಯವಸ್ಥೆಯ ಶರಣಸಂಕುಲ ಸ್ಥಾಪಿಸುವುದರ ಮೂಲಕ ಲಿಂಗವಂತ ಧರ್ಮಕ್ಕೆ ನಾಂದಿ ಹಾಡಿದರು. 'ಹಿಂದೂಧರ್ಮ ಎಂಬುದೊಂದು ಧರ್ಮವಲ್ಲ; ಅದೊಂದು ರೋಗ' ಎಂದು ಅಂಬೇಡ್ಕರರು ಸಾರುವ ಮೂಲಕ ವೈದಿಕ ಧರ್ಮವನ್ನು ಅಲ್ಲಗಳೆದರು. ದಯೆಯನ್ನು ಪ್ರತಿಪಾದಿಸುವ ಲಕ್ಷಾಂತರ ಅನುಯಾಯಿಗಳೊಂದಿಗೆ ಬೌದ್ಧಧರ್ಮವನ್ನು ಸ್ವೀಕರಿಸಿದರು.

'ದಯವೇ ಧರ್ಮದ ಮೂಲ'ಕ್ಕೆ ದೊಡ್ಡ ಪರಂಪರೆಯಿದೆ. ಆ ಪರಂಪರೆಯಲ್ಲಿ ಬಸವಣ್ಣ ಬರುವರು. ಅದೇ ಪರಂಪರೆಯಲ್ಲಿ ಅಂಬೇಡ್ಕರರು ಮುಂದುವರಿಯುವರು. ಬಸವಣ್ಣ ಮತ್ತು ಅಂಬೇಡ್ಕರರಿಗೆ ಸಂಬಂಧಿಸಿದ ವಿಚಾರ ಹೇಳುವ ಮೊದಲು ಅವರ ಮಧ್ಯದ ೮೦೦ ವರ್ಷಗಳ ಅಂತರವನ್ನು ಮರೆಯಬಾರದು. ಈ ಕಾಲಘಟ್ಟದಲ್ಲಿ ದೇಶ ಅನೇಕ ತಿರುವುಗಳನ್ನು ಪಡೆದಿದೆ. ನಾವಿಂದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದ್ದೇವೆ. ಈ ವ್ಯವಸ್ಥೆ ಕೂಡ ಪರಿಪೂರ್ಣ ಪ್ರಜಾಪ್ರಭುತ್ವ ವ್ಯವಸ್ಥೆಯಾಗಿಲ್ಲ. ಇಷ್ಟು ಪಡೆಯಬೇಕಾದರೂ ಅನೇಕ ಹೋರಾಟಗಳಾಗಿವೆ. ಯಾವುದೇ ಆಧುನಿಕತೆ ಇಲ್ಲದ ಸಂದರ್ಭದಲ್ಲಿನ ಬಸವಣ್ಣನವರ ವಿಚಾರಗಳು ಇಂದು ಸಂವಿಧಾನದ ರೂಪದಲ್ಲಿ ಜೀವಂತವಾಗಿರಲು ಅಂಬೇಡ್ಕರರು ಕಾರಣರಾಗಿದ್ದಾರೆ. ಮಾನವೀಯತೆಗಾಗಿ ಅವರಿಬ್ಬರೂ ಸ್ಪಂದಿಸಿದ ರೀತಿ ಒಂದೇ ತೆರನಾಗಿದ್ದರಿಂದ ಅವರ ವಿಚಾರಗಳಲ್ಲಿ ಸಹಜವಾಗಿಯೆ ಸಾಮ್ಯತೆ ಕಂಡುಬಂದಿತು. ಅಲ್ಲದೆ ೮೦೦ ವರ್ಷಗಳ ಅಂತರದಲ್ಲಿನ ಮಾನವಕುಲದ ಅನುಭವದಿಂದಾಗಿ ಬಸವಣ್ಣನವರ ಚಿಂತನೆಗಳು ಅಂಬೇಡ್ಕರರ ಮನಸ್ಸಿನಲ್ಲಿ ಕಾನೂನಿನ ರೂಪ ಪಡೆದವು.

ಬಸವಣ್ಣನವರನ್ನು ಕುರಿತು ಅಂಬೇಡ್ಕರರು ಎರಡು ಸಂದರ್ಭಗಳಲ್ಲಿ ಮಾತನಾಡಿದ್ದಾರೆ. ಒಂದು ಸಲ ನಿಜಲಿಂಗಪ್ಪನವರ ಜೊತೆ ಮಾಡನಾಡುವಾಗ

'ಬಸವಣ್ಣನವರಂಥ ಮಹಾನುಭಾವರನ್ನು ನೀವು ನಿಮ್ಮ ಜೇಬಿನಲ್ಲಿ ಇಟ್ಟುಕೊಂಡಿದ್ದೀರಿ' ಎಂದು ತಿಳಿಸಿದ್ದಾರೆ. ಧಾರವಾಡದಲ್ಲಿ ಸಂಭವಿಸಿದ ಇನ್ನೊಂದು ಸಂದರ್ಭದ ಕುರಿತು ನನಗೆ ಡಾ. ಆರ್.ಸಿ. ಹಿರೇಮಠ ಅವರು ಹೇಳಿದ್ದರು. ಡಾ. ಆರ್.ಸಿ. ಹಿರೇಮಠ ಅವರು ವಿದ್ಯಾರ್ಥಿಯಾಗಿದ್ದಾಗ ನಡೆದ ಘಟನೆ ಇದು. ಆಗ ಧಾರವಾಡ, ವಿಜಾಪುರ, ಬೆಳಗಾವಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಬಾಂಬೆ ಸ್ಟೇಟ್‌ನ ಭಾಗಗಳಾಗಿದ್ದವು. ವಕೀಲರಾಗಿದ್ದ ಬಾಬಾಸಾಹೇಬ ಅಂಬೇಡ್ಕರರು ಧಾರವಾಡ ಕೋರ್ಟಿಗೂ ಬರುತ್ತಿದ್ದರು. ಒಮ್ಮೆ ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಮಾತನಾಡುವಾಗ ಲಿಂಗಾಯತರನ್ನು ಉದ್ದೇಶಿಸಿ 'ನೀವು ಬಸವಣ್ಣನವರಂಥ ಮಹಾನ್ ಕ್ರಾಂತಿಕಾರಿಯನ್ನು ಇಟ್ಟುಕೊಂಡು ಇಷ್ಟೇಕೆ ದಡ್ಡರಿದ್ದೀರಿ' ಎಂದು ಪ್ರಶ್ನಿಸಿದ್ದರು. ಈ ಪ್ರಶ್ನೆ ಇಂದಿಗೂ ಪ್ರಶ್ನೆಯಾಗಿಯೇ ಉಳಿದಿದೆ. ಈ ಪ್ರಶ್ನೆಗೆ ಉತ್ತರಿಸುವುದು ಬಸವ ತತ್ತ್ವದ ಪ್ರತಿಪಾದಕರ ಕರ್ತವ್ಯವಾಗಿದೆ. ಬಸವತತ್ತ್ವದ ಮತ್ತು ಅಂಬೇಡ್ಕರ್ ವಾದದ ಪುನರ್ ಮೌಲ್ಯೀಕರಣದ ಹಿನ್ನೆಲೆಯಲ್ಲಿ ನಾವು ಚಿಂತನೆ ಮಾಡುವುದು ಈ ಕಾಲಘಟ್ಟದಲ್ಲಿ ಅವಶ್ಯವಾಗಿದೆ. ೨೧ನೇ ಶತಮಾನದಲ್ಲಿ ಬಸವಣ್ಣನವರನ್ನು ಅರ್ಥ ಮಾಡಿಕೊಳ್ಳಬೇಕಾದರೆ ಅಂಬೇಡ್ಕರರನ್ನು ಸರಿಯಾಗಿ ಓದಬೇಕು. ಎಲ್ಲಿಯವರೆಗೆ ನಾವು ಅಂಬೇಡ್ಕರರನ್ನು ಅರ್ಥ ಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ನಮಗೆ ಬಸವಣ್ಣ ಅರ್ಥ ಆಗುವುದಿಲ್ಲ. "Emancipation of Soul is a necessarily preliminary for the political expansion of the People" ಎಂದು ಅಂಬೇಡ್ಕರರು ಹೇಳಿದ್ದಾರೆ. ನಾವು ಮಾನಸಿಕ ಗುಲಾಮಗಿರಿಯಿಂದ ಹೊರಬರದೆ ಯಾವುದೇ ರಾಜಕೀಯ ಬದಲಾವಣೆಯನ್ನು ತರಲಿಕ್ಕಾಗುವುದಿಲ್ಲ ಎಂಬುದಕ್ಕೆ ಏಳು ದಶಕಗಳ ನಮ್ಮ ಸ್ವಾತಂತ್ರ್ಯದ ಬದುಕು ಸಾಕ್ಷಿಯಾಗಿದೆ. ಅಂಬೇಡ್ಕರರು ಸಾಮಾಜಿಕ ಮತ್ತು ಮಾನಸಿಕ ವಿಮೋಚನೆ ಕುರಿತು ಮಾತನಾಡುವಾಗ ಯಾರಿಗೂ ಅರ್ಥವಾಗಲಿಲ್ಲ. 'ರಾಜಕೀಯ ಸ್ವಾತಂತ್ರ್ಯ ಮೊದಲು ಬರಲಿ. ಆಮೇಲೆ ಸಾಮಾಜಿಕ ಚಳವಳಿಗಳು ಬರುತ್ತವೆ' ಎಂದು ದಲಿತರು ಮತ್ತು ಹಿಂದುಳಿದವರಿಗೆ ಮೇಲ್ಜಾತಿಗಳ ದೊಡ್ಡವರು ಸಮಜಾಯಿಸಿ ನೀಡುತ್ತಲೇ ಬಂದರು. ಆದರೆ ಅಂಬೇಡ್ಕರರು ಯಾವ ಕಾಲಕ್ಕೂ ಈ ಮಾತನ್ನು ಒಪ್ಪಿಕೊಳ್ಳಲಿಲ್ಲ. ಒಂದು ವೇಳೆ ಒಪ್ಪಿಕೊಂಡಿದ್ದರೆ ವೈದಿಕ ವ್ಯವಸ್ಥೆ ಇನ್ನೂ ಹೆಚ್ಚು ಗಟ್ಟಿಗೊಳ್ಳುತ್ತಿತ್ತು.

ನಮ್ಮ ನಾಯಕರನೇಕರು ಹೊರದೇಶಗಳಿಗೆ ಹೋದಾಗ ಭಾರತೀಯ ಸಂಸ್ಕೃತಿ, ಹಿಂದೂ ಸಂಸ್ಕೃತಿ, ಮಾನವೀಯ ಸಂಸ್ಕೃತಿ ಎಂದು ಮುಂತಾಗಿ ಹೇಳುತ್ತಲೇ ಇರುತ್ತಾರೆ. ಆ ಮೂಲಕ ಭಾರತೀಯ ಸಂಸ್ಕೃತಿಯನ್ನು ಹಿಂದೂ ಸಂಸ್ಕೃತಿಯಲ್ಲಿ ತುರುಕುವ ಪ್ರಯತ್ನವನ್ನೂ ಮಾಡುತ್ತಾರೆ. ಆದರೆ ಅದರ ನಿಜರೂಪ ಅಂಬೇಡ್ಕರಿಗೆ ಗೊತ್ತಾಗಿತ್ತು. "Caste is the monster, closes your path" ಎಂದು ಅಂಬೇಡ್ಕರರು

ತಿಳಿಸಿದ್ದಾರೆ. ಭಾರತದ ಜಾತಿಪದ್ಧತಿ ದೇಶದ ಸರ್ವೋದಯದ ಬಾಗಿಲನ್ನೇ ಮುಚ್ಚಿದೆ. ಅದು ಮೇಲ್ವರ್ಗದ ಅಭಿವೃದ್ಧಿಯನ್ನು ಮಾತ್ರ ಸೂಚಿಸುತ್ತದೆ. ಮಾನವೀಯ ಚಿಂತನೆಯ ಎಲ್ಲ ದಾರಿಗಳನು ಮುಚ್ಚುವುದೇ ಅದರ ಗುರಿಯಾಗಿದೆ. "You cannot have economic reform unless you kill the monster" ಎಂದು ಅಂಬೇಡ್ಕರರು ತಿಳಿಸಿದ್ದಾರೆ. ಜಾತಿ ವಿನಾಶ ಚಳವಳಿ ಅಂಬೇಡ್ಕರರ ಮುಖ್ಯ ಚಳವಳಿಯಾಗಿತ್ತು. ಜಾತಿ ರಾಕ್ಷಸನ ನಿರ್ನಾಮವಾಗದೆ ಯಾವುದೇ ಆರ್ಥಿಕ ಸುಧರಣೆ ಆಗದು ಎಂಬ ಅಂಬೇಡ್ಕರರ ಮಾತು ಸತ್ಯವಾಗಿದೆ. ೧೨ನೇ ಶತಮಾನದಲ್ಲಿ ಬಸವಣ್ಣನವರು ಇಂಥ ಅನ್ಯಾಯದ ವಿರುದ್ಧದ ಚಳವಳಿಯನ್ನು ಆರಂಭಿಸಿದರು. ೨೦ನೇ ಶತಮಾನದಲ್ಲಿ ಅಂಬೇಡ್ಕರರಿಂದಾಗಿ ಆ ಚಳವಳಿಗೆ ನ್ಯಾಯ ಸಿಕ್ಕಿತು.

'ಜಾತಿಗಳು ಸ್ಥಗಿತಗೊಂಡ ವರ್ಗಗಳು' ಎಂದು ಅಂಬೇಡ್ಕರರು ಪ್ರತಿಪಾದಿಸಿದ್ದಾರೆ. ಈ ಜಾತಿ ವ್ಯವಸ್ಥೆಯಿಂದಾಗಿ ಅತ್ಯಲ್ಪಸಂಖ್ಯಾತ ಸವರ್ಣೀಯರು ಬಹುಸಂಖ್ಯಾತ ಕಾಯಕಜೀವಿಗಳನ್ನು ಸದಾ ಶೋಷಣೆ ಮಾಡುವಂಥ ವ್ಯವಸ್ಥೆಯೆ ಜಾತಿ ವ್ಯವಸ್ಥೆಯಾಗಿದ್ದು ಅದು ತನ್ನೊಳಗೇ ವರ್ಗಗುಣವನ್ನು ಹೊಂದಿದೆ. ಮೇಲ್ಜಾತಿಗಳಿಗೂ ಶ್ರೀಮಂತಿಕೆಗೂ ಸಂಬಂಧವಿದೆ. ಕೆಳಜಾತಿಗಳಿಗೂ ಬಡತನಕ್ಕೂ ಸಂಬಂಧವಿದೆ. 'ಉಳ್ಳವರು ಶಿವಾಲಯವ ಮಾಡಿಹರು; ನಾನೇನು ಮಾಡಲಿ ಬಡವನಯ್ಯಾ' ಎಂದು ಬಸವಣ್ಣನವರು ತಿಳಿಸುವ ಮೂಲಕ ಶ್ರೀಮಂತಿಕೆ ಮೇಲ್ಜಾತಿಗಳ ಜೊತೆಗೆ ಇದೆ ಮತ್ತು ಬಡತನ ಕೆಳಜಾತಿಗಳ ಜೊತೆಗೆ ಇದೆ ಎಂಬುದನ್ನು ಸೂಚಿಸಿದ್ದಾರೆ.

ಮನುಸ್ಮೃತಿಯ ಮುಖ್ಯ ಉದ್ದೇಶ ಅತ್ಯಲ್ಪಸಂಖ್ಯಾತ ಸವರ್ಣೀಯರ ವರ್ಗಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದು ಮತ್ತು ಬಹುಸಂಖ್ಯಾತ ಕೆಳಜಾತಿಗಳ ಜನರನ್ನು ಶೋಷಣೆಗೆ ಒಳಪಡಿಸುವುದೇ ಆಗಿದೆ. ವರ್ಗಪ್ರಜ್ಞೆಯಿಂದ ಮಾತ್ರ ಜಾತಿವಿನಾಶ ಸಾಧ್ಯ. ಇಂದು ನಾವು ಅಸ್ಪೃಶ್ಯತೆ, ಜಾತಿಯತೆ ಮತ್ತು ಬಡತನದ ನಿವಾರಣೆಗಾಗಿ ವರ್ಗಪ್ರಜ್ಞೆಯನ್ನು ಹೊಂದುವುದು ಅವಶ್ಯವಾಗಿದೆ. ಅದಕ್ಕಾಗಿ ಭಾರತೀಯ ಸಮಾಜದಲ್ಲಿನ ಜಾತಿಗಳಲ್ಲಿ ವರ್ಗಲಕ್ಷಣಗಳನ್ನು ಗುರುತಿಸುವುದು ಅವಶ್ಯವಾಗಿದೆ.

ಬಸವಣ್ಣ ಮತ್ತು ಅಂಬೇಡ್ಕರರ ಹಾಗೆ ಜಾತಿವಿನಾಶ ಚಳವಳಿ ವರ್ಗಹೋರಾಟದ ಬಹುಮುಖ್ಯ ಚಳವಳಿಯಾಗಬೇಕಾಗಿದೆ. ಭಾರತೀಯ ಸಂದರ್ಭದಲ್ಲಿ ಇಂಥ ಒಂದು ಮಹತ್ತರ ಬದಲಾವಣೆಗೆ ಅವೈದಿಕ ಧರ್ಮಗಳು ಸಹಕಾರಿಯಾಗಿವೆ. ಜೈನ, ಬೌದ್ಧ ಮತ್ತು ಬಸವಾದಿ ಶರಣರ ಲಿಂಗವಂತ ಧರ್ಮಗಳ ಇತಿಹಾಸವನ್ನು ತಿಳಿದುಕೊಂಡಾಗ ಹಾಗೂ ಭಕ್ತಿ ಚಳವಳಿಯನ್ನು ಪರಾಮರ್ಶಿಸಿದಾಗ ಈ ಸತ್ಯದ ಅರಿವಾಗುವುದು.

ನಮ್ಮ ಮನಸ್ಸಿನಲ್ಲಿ ವೈದಿಕರು ಸಾವಿರಾರು ವರ್ಷಗಳಿಂದ ತುಂಬಿದ ಕೊಳೆ ತೆಗೆಯಲು ಅನೇಕ ಪ್ರಕಾರದ ಪ್ರಯತ್ನಗಳನ್ನು ಮಾಡಬೇಕಾಗುವುದು. ಈ ಕಾರಣದಿಂದಲೇ ಅಂಬೇಡ್ಕರರು ಜಗತ್ತಿನ ಎಲ್ಲ ಧರ್ಮಗಳನ್ನು ವಿಶ್ಲೇಷಿಸಿದ್ದಾರೆ. ಅಂಬೇಡ್ಕರರ ದೃಷ್ಟಿಯಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಹೋರಾಟಗಳಂತೆ ದಾರ್ಶನಿಕ ಹೋರಾಟವೂ ಮಹತ್ವದ್ದಾಗಿದೆ. ಅದಕ್ಕಾಗಿ ಅವರು ಬೌದ್ಧಧರ್ಮ ಸ್ವೀಕರಿಸಿದ್ದು ವೈದಿಕರ ಭೇದ ಸಂಸ್ಕೃತಿಯನ್ನು ನಿರ್ನಾಮ ಮಾಡುವ ಕಾರ್ಯಕ್ರಮದ ಒಂದು ಭಾಗವಾಗಿದೆ. "The political revolutions have always been preceded by social and religious revolutions" ಎಂದು ಅಂಬೇಡ್ಕರರು ತಿಳಿಸಿದ್ದಾರೆ. ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಗಳನ್ನು ರಾಜಕೀಯ ಕ್ರಾಂತಿ ಹಿಂಬಾಲಿಸುತ್ತದೆ ಎಂಬುದಕ್ಕೆ ಅವರು ಮಾರ್ಟಿನ್ ಲೂಥರ್‌ನ ಉದಾಹರಣೆಯನ್ನು ಕೊಡುತ್ತಾರೆ. ಹೇಗೆ ಕ್ರೈಸ್ತಧರ್ಮದಲ್ಲಿ ಪ್ರೊಟೆಸ್ಟಂಟ್ ಪಂಥ ಆರಂಭವಾಯಿತು ಎಂಬುದನ್ನು ವಿವರಿಸುತ್ತಾರೆ. ಅರಬಸ್ತಾನದಲ್ಲಿ ರಾಜಕೀಯ ಬದಲಾವಣೆಯಾಗುವಲ್ಲಿ ಪ್ರವಾದಿ ಮುಹಮ್ಮದರ ಪಾತ್ರ ಏನಿತ್ತು ಎಂಬುದನ್ನು ತಿಳಿಸುತ್ತಾರೆ. ಬದಲಾವಣೆಯ ದಾರಿ ಹಿಡಿಯಲು ಅನೇಕ ರಾಜರಿಗೆ ಬುದ್ಧನ ಉಪದೇಶ ಹೇಗೆ ಉಪಯೋಗಕ್ಕೆ ಬಂದಿತು? ಮಹಾರಾಷ್ಟ್ರದಲ್ಲಿ ಶಿವಾಜಿಯ ರಾಜ್ಯ ಸ್ಥಾಪನೆಯಾಗುವಾಗ ಮಹಾರಾಷ್ಟ್ರದ ಸಂತರ ಚಿಂತನೆಗಳು ಯಾವರೀತಿ ಉಪಯೋಗಕ್ಕೆ ಬಂದವು ಎಂಬುದರ ಸೂಕ್ಷ್ಮತೆ ಕುರಿತು ಅಂಬೇಡ್ಕರರು ಮಾತನಾಡಿದ್ದಾರೆ. ಈ ಪರಿಜ್ಞಾನದಿಂದಲೇ ಅಂಬೇಡ್ಕರರು ಬೌದ್ಧಧರ್ಮವನ್ನು ಸ್ವೀಕರಿಸಿದರು. ದಲಿತರಿಗೆ ಅವೈದಿಕ ಸಂಸ್ಕಾರ ಕೊಡುವುದು ಅವಶ್ಯವಾಗಿತ್ತು. ಆ ಸಂದರ್ಭದಲ್ಲಿ ವೈದಿಕವನ್ನು ಸೈದ್ಧಾಂತಿಕವಾಗಿ ಎದುರಿಸಿದ ಬೌದ್ಧ ಧರ್ಮದ ಮೂಲಕ ದೇಶಾದ್ಯಂತ ಸಂಕಷ್ಟದಲ್ಲಿರುವ ದಲಿತರಿಗೆ ಆತ್ಮಸ್ಥೈರ್ಯ ತುಂಬುವ ಉದ್ದೇಶ ಅವರದಾಗಿತ್ತು.

೧೯೦೦ನೇ ಏಪ್ರಿಲ್ ಒಂದರಂದು ಜೈಪುರದ ಚಿಕ್‌ಘಾರದಲ್ಲಿ ಒಬ್ಬ ದಲಿತ ಒಂದು ಯಾತ್ರೆಯನ್ನು ಮುಗಿಸಿಕೊಂಡು ಬಂದಿರುತ್ತಾನೆ. ಯಾತ್ರಿಕನಾಗಿ ಹೋಗಿ ಬಂದಾಗ ಸಂಪ್ರದಾಯದ ಪ್ರಕಾರ ತನ್ನ ಜನರಿಗೆ ಮತ್ತು ನೆಹೊರೆಯವರಿಗೆ ಒಂದು ಸಿಹಿ ಊಟದ ವ್ಯವಸ್ಥೆಯನ್ನು ಮಾಡಿರುತ್ತಾನೆ. ಆ ಭೋಜನಕೂಟದಲ್ಲಿ ತುಪ್ಪ ಬಡಿಸುವ ವ್ಯವಸ್ಥೆಯನ್ನೂ ಮಾಡಿರುತ್ತಾನೆ. ಅನ್ನದಲ್ಲಿ ತುಪ್ಪ ಹಾಕೋದನ್ನು ನೋಡಿದ ಸವರ್ಣೀಯರು ಅಲ್ಲಿನ ಆಹಾರ ಪದಾರ್ಥವನ್ನು ನಾಶಮಾಡುತ್ತಾರೆ ಮತ್ತು ಊಟಕ್ಕೆ ಬಂದವರನ್ನು ಹೊಡೆದು ಕಳುಹಿಸುತ್ತಾರೆ ಎಂದು ಅಂಬೇಡ್ಕರರು ತಿಳಿಸಿದ್ದಾರೆ.

೧೯೨೮ನೇ ಜನವರಿ ೪ರ 'ಟೈಮ್ಸ್ ಆಫ್ ಇಂಡಿಯಾ'ದಲ್ಲಿನ ಇಂದೋರ್ ಸಂಸ್ಥಾನಕ್ಕೆ ಸಂಬಂಧಿಸಿದ ಒಂದು ವರದಿಯನ್ನು ಅಂಬೇಡ್ಕರರು ಉದ್ಧರಿಸುತ್ತಾರೆ. ಇಂದೋರ್ ಈಗ ಮಧ್ಯಪ್ರದೇಶದಲ್ಲಿದೆ. ಅಲ್ಲಿ ಬಲಾಯಿ ಎಂಬ ಒಂದು ಅಸ್ಪೃಶ್ಯ

ಜನಾಂಗದವರಿಗೆ ಸವರ್ಣೀಯರು ಬಹಳಷ್ಟು ಷರತ್ತುಗಳನ್ನು ವಿಧಿಸುತ್ತಾರೆ. 'ನೀವು ನಮ್ಮ ಊರಲ್ಲಿ ಇರಬೇಕಾದರೆ, ನಮ್ಮ ಹೊಲಗಳಲ್ಲಿ ಪುಕ್ಕಟೆ ದುಡಿಯಬೇಕು. ನಮ್ಮ ಮನೆಯಲ್ಲಿ ಯಾರಾದರೂ ತೀರಿಕೊಂಡರೆ ನಮ್ಮ ಸಂಬಂಧಿಕರಿಗೆ ಸುದ್ದಿ ಮುಟ್ಟಿಸಬೇಕು. ಎಲ್ಲ ರೀತಿಯ ಕೆಲಸ ಕಾರ್ಯಗಳನ್ನು ನಮಗಾಗಿ ಮಾಡಬೇಕು' ಎಂದು ಮುಂತಾಗಿ ಷರತ್ತುಗಳನ್ನು ಹಾಕುತ್ತಾರೆ. ಆಗ ಬಲಾಯಿ ಅಸ್ಪೃಶ್ಯರು ಒಪ್ಪಿಕೊಳ್ಳುವುದಿಲ್ಲ. ಒಪ್ಪಿಕೊಳ್ಳದೆ ಹೋದಾಗ ಆ ಅಸ್ಪೃಶ್ಯರು ತಮ್ಮ ಹೊಲಗಳಿಗೆ ಹೋಗದ ಹಾಗೆ ತಡೆಯುತ್ತಾರೆ. ಏಕೆಂದರೆ ಅವರ ಹೊಲಗಳು ಈ ಸವರ್ಣೀಯರ ಹೊಲಗಳ ಮಧ್ಯೆ ಇರುವುದರಿಂದ ಅವರನ್ನು ತಮ್ಮ ಹೊಲಗಳ ಮಧ್ಯೆ ಹಾಯ್ದು ಹೋಗಲು ಬಿಡುವುದಿಲ್ಲ. ಕೊನೆಗೆ ತಮ್ಮ ದನಗಳನ್ನು ಆ ಅಸ್ಪೃಸ್ಯರ ಹೊಲಗಳಲ್ಲಿ ಬಿಟ್ಟು ಮೇಯಿಸುತ್ತಾರೆ. ಆ ದಲಿತರು ತಮ್ಮ ಹೆಂಡಿರು ಮಕ್ಕಳನ್ನು ಕರೆದುಕೊಂಡು ಬೇರೆ ಪ್ರದೇಶಕ್ಕೆ, ಬೇರೆ ಸಂಸ್ಥಾನಕ್ಕೆ ಹೋಗುವಂಥ ಸ್ಥಿತಿಯನ್ನು ತಂದಿಡುತ್ತಾರೆ.

ಗುಜರಾಥದಲ್ಲಿ ಕವಿಥಾ ಎನ್ನುವ ಪ್ರದೇಶದಲ್ಲಿ ೩೦ರ ದಶಕದಲ್ಲಿ ದಲಿತ ಮಕ್ಕಳು ಶಾಲೆಗೆ ಹೋಗದ ಹಾಗೆ ಸವರ್ಣೀಯರು ನಿರ್ಬಂಧ ಹೇರಿರುತ್ತಾರೆ. ಅಹಮದಾಬಾದಿನ ಜುನು ಎಂಬ ಪ್ರದೇಶದಲ್ಲಿ, ಇದ್ದುದರಲ್ಲೇ ಸ್ವಲ್ಪ ಸ್ಥಿತಿವಂತರಾಗಿರುವ ದಲಿತ ಮಹಿಳೆಯರು ತಾಮ್ರದ ಕೊಡವನ್ನು ಹೊತ್ತುಕೊಂಡು ನೀರು ತರುತ್ತಿದ್ದರು. ಇದನ್ನು ಸಹಿಸದ ಸವರ್ಣೀಯರು ಆ ಎಲ್ಲ ಹೆಣ್ಣುಮಕ್ಕಳಿಗೆ ಹೊಡೆದು ಕೊಡಗಳನ್ನು ಕಸಿದುಕೊಳ್ಳುತ್ತಾರೆ. ೧೯೩೫ನೇ ನವೆಂಬರ್‌ನಲ್ಲಿ ನಡೆದ ಈ ಘಟನೆ ಕುರಿತು ಅಂಬೇಡ್ಕರ್ ಹೇಳುತ್ತಾರೆ. ಇಂಥ ಅನೇಕ ಘಟನೆಗಳನ್ನು ಅವರು ದಾಖಲಿಸಿದ್ದಾರೆ.

ದಲಿತ ಜನಾಂಗ ಯಾವ ಪ್ರಕಾರವಾಗಿ ನೋವು ಮತ್ತು ಅಪಮಾನಕ್ಕೆ ಒಳಗಾಗಿದೆ ಎಂಬುದನ್ನು ತಿಳಿದುಕೊಂಡಾಗ ಮಾತ್ರ ನಮಗೆ ಜಾತಿಯ ಕ್ರೌರ್ಯದ ನಿಜರೂಪ ಗೊತ್ತಾಗುತ್ತದೆ. ಇದರ ರಹಸ್ಯವನ್ನು ಬಸವಣ್ಣನರು ೧೨ನೇ ಶತಮಾನದಲ್ಲೇ ಕಂಡುಹಿಡಿದರು. ಬಸವಣ್ಣನವರು ಏನೇನು ಕಂಡು ಹಿಡಿದಿರುವರೋ ಅವೆಲ್ಲವನ್ನೂ ಅಂಬೇಡ್ಕರರ ಬರವಣಿಗೆ ಮತ್ತು ಕ್ರಿಯಾಶಕ್ತಿಯಲ್ಲಿ ಕಾಣುತ್ತೇವೆ.

ಎರಡು ರೀತಿಯ ಸುಧಾರಣೆಗಳನ್ನು ಕುರಿತು ಅಂಬೇಡ್ಕರ್ ಹೇಳುತ್ತಾರೆ. ಮೊದಲನೆಯದು ಹಿಂದೂ ಫ್ಯಾಮಿಲಿ ರಿಫಾರ್ಮ್ಸ್ ಮತ್ತು ಎರಡನೆಯದು ಸೋಸಿಯಲ್ ರಿಫಾರ್ಮ್ಸ್. ಹಿಂದೂ ಫ್ಯಾಮಿಲಿ ರಿಫಾರ್ಮ್ಸ್‌ನಲ್ಲಿ ಸುಧಾರಣೆ ಎಂದರೆ ವಿಧವಾ ವಿವಾಹವಾಗುವುದು ಮತ್ತು ಬಾಲ್ಯವಿವಾಹ ನಿಷೇಧಿಸುವುದು. ಆದರೆ ಹಿಂದು ಫ್ಯಾಮಿಲಿ ರಿಫಾರ್ಮ್ಸ್‌ನಲ್ಲಿ ಅಂತರ್ಜಾತೀಯ ವಿವಾಹದ ವಿಚಾರ ಬರುವುದಿಲ್ಲ. ಅದು ಸೋಸಿಯಲ್ ರಿಫಾರ್ಮ್ಸ್‌ನಲ್ಲಿ ಅಂದರೆ ಸಾಮಾಜಿಕ ಸುಧಾರಣೆಯಲ್ಲಿ

ಅದು ಬರುತ್ತದೆ ಎಂದು ಅಂಬೇಡ್ಕರರು ಹೇಳುತ್ತಾರೆ. ಹೀಗೆ ಅವರು ಸೂಕ್ಷ್ಮವಾದ ವಿಶ್ಲೇಷಣೆಯನ್ನು ಮಾಡುತ್ತಾರೆ.

೧೨ನೇ ಶತಮಾನದಲ್ಲಿ ಬಸವಣ್ಣನವರು ಇದನ್ನೇ ಮಾಡಿದ್ದು. ಬ್ರಾಹ್ಮಣ ಮಂತ್ರಿ ಮಧುವರಸರ ಮಗಳು ಮತ್ತು ಸಮಗಾರ ಕಾಯಕದ ಹರಳಯ್ಯನವರ ಮಗನ ವಿವಾಹ ನೆರವೇಸಿರುಸುವುದರ ಮೂಲಕ ಮನುಸ್ಮೃತಿ ನಿಷೇಧಿಸಿದ ವಿಲೋಮ ವಿವಾಹ ಪದ್ಧತಿಯನ್ನು ಜಾರಿಗೊಳಿಸಿದರು. ಮೇಲ್ಜಾತಿಯ ಹೆಣ್ಣು ಮತ್ತು ಕೆಳಜಾತಿಯ ಗಂಡಿನ ಮಧ್ಯೆ ವಿವಾಹ ಮಾಡುವುದು ವಿಲೋಮ ವಿವಾಹ ಎಂದು ಮನುಸ್ಮೃತಿ ನಿಷಿದ್ಧಗೊಳಿಸಿರುವ ಕಾರಣ, ಪಟ್ಟಭದ್ರ ಹಿತಾಸಕ್ತಿಗಳು ಇದನ್ನೇ ನೆಪ ಮಾಡಿಕೊಂಡು ತಮ್ಮ ಮೇಲೆ ಹಲ್ಲೆ, ಕೊಲೆ, ಲೂಟಿ ಮಾಡುತ್ತವೆ ಮತ್ತು ತಮ್ಮ ವಚನಕಟ್ಟುಗಳನ್ನು ಸುಡುತ್ತವೆ ಎಂಬುದು ಶರಣರಿಗೆ ಸ್ಪಷ್ಟವಾಗಿತ್ತು. ಇಷ್ಟೆಲ್ಲ ಗೊತ್ತಿದ್ದರೂ ಬಸವಾದಿ ಶರಣರು ಈ ಕಠಿಣ ನಿಲುವನ್ನು ತೆಗೆದುಕೊಂಡು ಸಾಮಾಜಿಕ ಸುಧಾರಣೆಗೆ ನಾಂದಿ ಹಾಡಿದರು. ಈ ಘಟನೆಗೆ ಮುಂಚೆ ಅವರು ಪಣ್ಯಾಂಗನೆ (ವೇಶ್ಯೆ)ಯರನ್ನು ಇಷ್ಟಲಿಂಗ ದೀಕ್ಷೆ ಮೂಲಕ ಪುಣ್ಯಾಂಗನೆಯರನ್ನಾಗಿಸಿದರು. ಕಾಯಕಜೀವಿಗಳ ಮಧ್ಯೆ ವಿಧವಾ ವಿವಾಹದ ಉಡಕಿ ಪದ್ಧತಿಯಂತೂ ಮೊದಲೇ ಇತ್ತು. ಹೀಗೆ ಕೌಟುಂಬಿಕ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ಪರ್ಯಾಯ ವ್ಯವಸ್ಥೆಯನ್ನು ತರುವುದರ ಮೂಲಕ ಸರ್ವರಿಗೂ ಸಮಪಾಲು ಸಿಗುವಂಥ ರಾಜಕೀಯ ವ್ಯವಸ್ಥೆಗಾಗಿ ಪ್ರಜಾಪ್ರಭುತ್ವದ ಹೆದ್ದಾರಿಯನ್ನು ನಿರ್ಮಿಸುವುದು ಬಸವಣ್ಣನವರ ಮುಖ್ಯ ಉದ್ದೇಶವಾಗಿತ್ತು. ಈ ಪ್ರಕಾರ ತಳಮಟ್ಟದಿಂದ ವ್ಯವಸ್ಥೆಯನ್ನು ಬದಲಾವಣೆಗೆ ಒಳಪಡಿಸಿದಾಗ ಶೋಷಣೆ ಇಲ್ಲದ ರಾಜಕೀಯ ವ್ಯವಸ್ಥೆಯನ್ನು ನಿರ್ಮಾಣ ಮಾಡಲು ಸಾಧ್ಯ ಎಂಬುದು ಅಂಬೇಡ್ಕರ್ ವಾದವಾಗಿದೆ.

ಜಾತಿ ಎಂಬುದು 'ಅನೈಸರ್ಗಿಕ ಶ್ರಮ ವಿಭಜನೆ' (unnatural division of labour) ಎಂದು ಅಂಬೇಡ್ಕರ್ ವಿಶ್ಲೇಷಿಸಿದ್ದಾರೆ. ಜಾತಿ ಮತ್ತು ವರ್ಣವ್ಯವಸ್ಥೆಗಳು ಅಸಹಜವಾಗಿವೆ. ಈ ಶ್ರಮವಿಭಜನೆಯು ವ್ಯಕ್ತಿಯ ಆಯ್ಕೆಯಾಗಿಲ್ಲ. ಒಬ್ಬ ವ್ಯಕ್ತಿ ಯಾವ ಜಾತಿಯಲ್ಲಿ ಜನಿಸುವನೋ ಆತ ಅದೇ ಜಾತಿಗೆ ಅಂಟಿಕೊಂಡು ಬಂದ ಕಾಯಕವನ್ನೇ ಮಾಡಬೇಕಿತ್ತು. 'It is not a division based on choice' ಎಂದು ಅಂಬೇಡ್ಕರ್ ತಿಳಿಸಿದ್ದಾರೆ. ಈ ವಾಟರ್ ಟೈಟ್ ಕಂಪಾರ್ಟ್‌ಮೆಂಟ್ ವ್ಯವಸ್ಥೆಯನ್ನು ಮೊದಲ ಬಾರಿಗೆ ಪ್ರಶ್ನಿಸಿದವರು ನಿರೀಶ್ವರವಾದಿ ಲೋಕಾಯತರು ಮತ್ತು ಅಜ್ಞೇಯವಾದಿ ಗೌತಮ ಬುದ್ಧ. ಮೊದಲ ಬಾರಿಗೆ ಆ ವ್ಯವಸ್ಥೆಯ ವಿರುದ್ಧ ಬಂಡಾಯ ಹೂಡಿದವರು ನಿರಾಕಾರ ಏಕದೇವೋಪಾಸಕ ಬಸವಣ್ಣನವರು. ೧೨ನೇ ಶತಮಾನದ ಅನೇಕ ಜನ ಶರಣರು ತಮ್ಮ ಮನೆತನದ ಕಾಯಕವನ್ನು ಬಿಟ್ಟು ಬೇರೆ

ಬೇರೆ ಕಾಯಕಗಳನ್ನು ಮಾಡುತ್ತಿದ್ದರು. ಹಡಪದ ಅಪ್ಪಣ್ಣನವರು ಹಡಪದ ಕೆಲಸ ಮಾಡುತ್ತಿರಲಿಲ್ಲ. ಅವರು ಬಸವಣ್ಣನವರಿಗೆ ಸಹಾಯಕರಾಗಿದ್ದರು. ಶರಣರು ತಮ್ಮ ಮನೆತನದ ಕಾಯಕ ಮಾಡಿದರೂ ಬಸವಣ್ಣನವರು ಆ ಕಾಯಕಗಳನ್ನು ಜಾತಿಗಳಿಗೆ ತಳಕು ಹಾಕಲಿಲ್ಲ. 'ದೇವಸಹಿತ ಭಕ್ತ ಮನೆಗೆ ಬಂದಡೆ, ಕಾಯಕವಾವುದೆಂದು ಬೆಸಗೊಂಡಡೆ ನಿಮ್ಮಾಣೆ! ನಿಮ್ಮ ಪುರಾತರಾಣೆ! ತಲೆದಂಡ! ತಲೆದಂಡ! ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಿಸಿದಡೆ ನಿಮ್ಮ ರಾಣೀವಾಸದಾಣೆ.' ಎಂದು ಬಸವಣ್ಣನವರು ದೇವರಿಗೆ ತಿಳಿಸುವ ಮೂಲಕ ಕಾಯಕಗಳ ಮಧ್ಯೆ ಸಮಾನತೆ ಸಾಧಿಸುತ್ತ ಜಾತಿಗಳನ್ನು ಅಲ್ಲಗಳೆಯುತ್ತಾರೆ.

ಸಮಗಾರ ಹರಳಯ್ಯನವರು ಎಂದರೆ ಚರ್ಮದ ಕಾಯಕ ಮಾಡುವ ಹರಳಯ್ಯನವರು ಎಂದು ತಿಳಿದುಕೊಳ್ಳಬೇಕೆ ಹೊರತಾಗಿ ಸಮಗಾರ ಜಾತಿಯ ಹರಳಯ್ಯ ಎಂದು ಭಾವಿಸುವ ಹಾಗಿಲ್ಲ. ಕಾಯಕಕ್ಕೆ ಅಂಟಿದ ಜಾತಿವಿಷವನ್ನು ಬಸವಣ್ಣನವರು ತೆಗೆಯುವದರ ಮೂಲಕ ಜಾತಿ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಮನುಸ್ಮೃತಿಗೆ ವಿರುದ್ಧವಾದ ವಿಲೋಮ ವಿವಾಹ ನೆರವೇರಿಸಲು ಸಾಧ್ಯವಾಯಿತು. ಇಷ್ಟಲಿಂಗ ದೀಕ್ಷೆಯ ಮೂಲಕ ಜಾತಿ, ವರ್ಣ, ವರ್ಗ ಮತ್ತು ಲಿಂಗಭೇದಗಳನ್ನು ಅಳಿಸಿಹಾಕುವಂಥ ವ್ಯವಸ್ಥೆಯನ್ನು ನಿರ್ಮಿಸುವ ಉದ್ದೇಶವನ್ನು ಬಸವಣ್ಣನವರು ಹೊಂದಿದ್ದರು. ಈ ಅನಿಷ್ಟಗಳಿಂದ ಅಪಮಾನಕ್ಕೆ ಒಳಗಾದವರು ಮತ್ತು ಇಂಥ ಅಪಮಾನವನ್ನು ವಿರೋಧಿಸಿದ ಪ್ರಜ್ಞಾವಂತರು ಇಷ್ಟಲಿಂಗ ದೀಕ್ಷೆ ಪಡೆದು ಲಿಂಗವಂತರಾದರು ಎಂಬುದು ಐತಿಹಾಸಿಕ ಸತ್ಯವಾಗಿದೆ.

ಕಾಯಕಕ್ಕೂ ಆರ್ಥಿಕ ವ್ಯವಸ್ಥೆಗೂ ಆಂತರಿಕ ಸಂಬಂಧವಿದೆ. ದಲಿತರು, ಕೃಷಿಕಾರ್ಮಿಕರು, ದನ ಕಾಯುವವರು, ಹಡಪದರು ತಮ್ಮದೇ ಆದ ಪರಂಪರಾಗತವಾದ ಆಯಪದ್ಧತಿಯ ವ್ಯವಸ್ಥೆಯಲ್ಲಿ ಯಾವ ಕಾಲಕ್ಕೂ ಆರ್ಥಿಕವಾಗಿ ಸಬಲರಾಗಲು ಸಾಧ್ಯವಿಲ್ಲ. ಅವರು ಸ್ವತಂತ್ರ ಕಾಯಕ ಮಾಡುವಾಗ ಮತ್ತು ಕಾಯಕಗಳನ್ನು ತಮ್ಮ ಇಚ್ಛೆಯ ಮೇರೆಗೆ ಬದಲಾಯಿಸಲು ಸಾಧ್ಯವಾದಾಗ ಮಾತ್ರ ಧಾರ್ಮಿಕವಾಗಿ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದುವರಿಯಲು ಸಾಧ್ಯ. ಈ ತೆರನಾದ ಕೌಟುಂಬಿಕ, ಧಾರ್ಮಿಕ, ಸಾಮಾಜಿಕ ಮತ್ತು ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸದ ರಾಜಕೀಯ ಸ್ವಾತಂತ್ರ್ಯ ಮತ್ತೆ ಸುಲಿಗೆಕೋರರ ಪಾಲಾಗಿಯೆ ಉಳಿಯುವುದು ಎಂಬುದು ಅಂಬೇಡ್ಕರರ ವಾದವಾಗಿದೆ. 'ಮದ್ರಾಸ್ ಬ್ರಾಹ್ಮಣರು ಮತ್ತು ದಲಿತರು ಒಂದೇ ವಂಶಕ್ಕೆ ಸೇರಿದವರಾಗಿದ್ದಾರೆ' ಎಂದು ಅಂಬೇಡ್ಕರರು ತಿಳಿಸಿದ್ದಾರೆ. ಮದ್ರಾಸಿನ ಬ್ರಾಹ್ಮಣರು ಮತ್ತು ದಲಿತರು ಖಂಡಿತವಾಗಿಯೂ ಒಂದೇ ಮೂಲದವರು. 'ಆನು ಹಾರುವನೆಂದಡೆ ಕೂಡಲಸಂಗಯ್ಯ ನಗುವನಯ್ಯಾ' ಎಂದು ಹೇಳುವ ಮೂಲಕ

ಈ ವಾದವನ್ನು ಬಸವಣ್ಣನವರು ೧೨ನೇ ಶತಮಾನದಲ್ಲೇ ಮಂಡಿಸಿದ್ದಾರೆ. ಹೀಗೆ ಬಸವಣ್ಣ ಮತ್ತು ಅಂಬೇಡ್ಕರರು ಜಾತಿ, ವರ್ಣ ಮತ್ತು ಜನಾಂಗೀಯ ತಾರತಮ್ಯಗಳನ್ನು ಅಲ್ಲಗಳೆದಿದ್ದಾರೆ.

ಐರೋಪ್ಯ ಖಂಡ ನಿದ್ರಾವಸ್ಥೆಯಲ್ಲಿ ಇದ್ದಾಗ ಬಸವಣ್ಣನವರು ಯಾವ ಚಿಂತನೆಗಳನ್ನು ಮಾಡಿದ್ದರೋ ಆ ಎಲ್ಲ ಚಿಂತನೆಗಳನ್ನು ಅಂಬೇಡ್ಕರರ ಶಿಕ್ಷಣ, ಸಂಘಟನೆ ಮತ್ತು ಹೋರಾಟದಲ್ಲಿ ಕಾಣುತ್ತೇವೆ.

ಸಂಘಟನೆಯ ಅವಶ್ಯಕತೆಯನ್ನು ಮನವರಿಕೆ ಮಾಡುಕೊಡದಂತಹದು ಶಿಕ್ಷಣವೇ ಅಲ್ಲ. ಹೋರಾಟಕ್ಕೆ ಸ್ಫೂರ್ತಿ ನೀಡದಂತಹದು ಸಂಘಟನೆಯೆ ಅಲ್ಲ. ಶಿಕ್ಷಣಕ್ಕೆ ಸಂಘಟನೆಯ ಜವಾಬ್ದಾರಿ ಇದೆ. ಸಂಘಟನೆಗೆ ಹೋರಾಟದ ಜವಾಬ್ದಾರಿ ಇದೆ. ಇಂಥ ಶಿಕ್ಷಣ, ಸಂಘಟನೆ ಮತ್ತು ಹೋರಾಟಗಳ ಮೂಲಕ ಹೊರಹೊಮ್ಮುವ ಮಾನವೀಯ ಚಿಂತನೆಗಳೇ ಸಂವಿಧಾನವನ್ನು ರೂಪಿಸುವ ಸಾಮರ್ಥ್ಯವನ್ನು ಪಡೆದಿರುತ್ತವೆ.

ಸಕಲ ಜೀವಾತ್ಮರಿಗೆ ಲೇಸನೇ ಬಯಸಿದ ಬಸವಣ್ಣನವರು ಸಾಧಿಸಿದ್ದು ಈ ಹೋರಾಟ ಸೂತ್ರದ ಮೂಲಕವೇ. ಅಕ್ಷರವಂಚಿತರಾದ ದುಡಿಯುವ ವರ್ಗಕ್ಕೆ ಅವರು ಶಿಕ್ಷಣದ ವ್ಯವಸ್ಥೆ ಮಾಡಿದರು. ಶರಣಸಂಕುಲದ ಮೂಲಕ ಅವರನ್ನು ಸಂಘಟಿಸಿದರು. ಅಲ್ಲಿ ಅವರನ್ನು ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಆರ್ಥಿಕ ಮತ್ತು ಲಿಂಗ ಸಮಾನತೆಯ ತಳಹದಿಯ ಮೇಲೆ ಹೋರಾಟಕ್ಕೆ ಅಣಿ ಮಾಡಿದರು. ೧೨ನೇ ಶತಮಾನದ ಈ ಶಿಕ್ಷಣ–ಸಂಘಟನೆ–ಹೋರಾಟವು 'ವಚನ ಚಳವಳಿ' ಎಂದು ಪ್ರಸಿದ್ಧವಾಗಿದೆ. ಈ ಶಿಕ್ಷಣ–ಸಂಘಟನೆ–ಹೋರಾಟವನ್ನೇ ಅಂಬೇಡ್ಕರರು ತಮ್ಮ ಕೊನೆಯ ಸಂದೇಶವೆಂದು ಅಂಬೇಡ್ಕರರು ೧೯೪೨ನೇ ಜುಲೈ ೧೮ರಂದು ನಾಗಪುರದಲ್ಲಿ ನಡೆದ ಅಖಿಲ ಭಾರತ ನಿಮ್ನ ವರ್ಗಗಳ ಸಮ್ಮೇಳನದ ಭಾಷಣದಲ್ಲಿ ಸಾರಿದ್ದಾರೆ. ಶಿಕ್ಷಣವಿಲ್ಲದ ಸಂಘಟನೆ ಮತ್ತು ಅಂಥ ಸಂಘಟನೆ ಇಲ್ಲದ ಹೋರಾಟ ನಿರುಪಯುಕ್ತವಾದುವು ಎಂಬುದು ಅಂಬೇಡ್ಕರರ ನಿಲವಾಗಿತ್ತು. ಕ್ರಿಯೆ ಇಲ್ಲದ ಜ್ಞಾನ ಮತ್ತು ಜ್ಞಾನವಿಲ್ಲದ ಕ್ರಿಯೆ ನಿರುಪಯುಕ್ತವಾದುವು ಎಂದು ಬಸವಾದಿ ಶರಣರು ಪ್ರತಿಪಾದಿಸಿದ್ದಾರೆ. ಇಂಥ ಶಿಕ್ಷಣ, ಸಂಘಟನೆ ಮತ್ತು ಹೋರಾಟದ ಪ್ರಕ್ರಿಯೆಯನನ್ನು ವಿಶ್ವದಲ್ಲೇ ಮೊದಲ ಬಾರಿಗೆ ನಾವು ೧೨ನೇ ಶತಮಾನದ ವಚನ ಚಳವಳಿಯಲ್ಲಿ ಕಾಣುತ್ತೇವೆ. ಇಂಥ ಚಳವಳಿಯ ಮೂಲಕವೇ ನಾವು ಶರಣಸಂಕುಲದಂಥ ನವಸಮಾಜವನ್ನು ಸೃಷ್ಟಿಸಲು ಸಾಧ್ಯ.

ಸಂಕುಲವು ವಿಶಿಷ್ಟ ಪದವಾಗಿದೆ. ಪ್ರಾಣಿಸಂಕುಲದಲ್ಲಿ ಹುಲಿ ಮತ್ತು ಹುಲ್ಲೆ ಒಂದೇ ತೆರನಾದ ಮಹತ್ವವನ್ನು ಪಡೆದಿರುತ್ತವೆ. ಅವುಗಳಿಗೆ ಅವುಗಳದೇ ಆದ

ಶರೀರ ರಚನೆ ಇದೆ. ತಮ್ಮದೇ ಆದ ಬದುಕುವ ತಂತ್ರಗಳುಳ್ಳ ಪ್ರವೃತ್ತಿಗಳಿಂದ ಕೂಡಿದ ಬುದ್ಧಿಮತ್ತೆಯನ್ನು ಅವು ಹೊಂದಿರುತ್ತವೆ. ಶರಣಸಂಕುಲದಲ್ಲಿ ಶರಣರು ಎಲ್ಲ ತೆರನಾದ ಕೃತ್ರಿಮ ಭೇದಭಾವಗಳಿಂದ ಹೊರಬಂದು ಬದುಕುವ ಕಲೆಯನ್ನು ಕಲಿತು ನವಮಾನವರಾದರು. ಜಾತಿಗಳಿಲ್ಲದ, ಕುಲಗಳಿಲ್ಲದ, ಬಡವ-ಶ್ರೀಮಂತರಿಲ್ಲದ, ಹೆಣ್ಣು-ಗಂಡು ಭೇದವಿಲ್ಲದ ಸಮಾಜಕ್ಕೆ 'ಶರಣಸಂಕುಲ' ಎಂದು ಕರೆಯಲಾಯಿತು. ಈ ಸಂಕುಲ, ಮಾನವಕುಲಕ್ಕೆ ಬಸವಣ್ಣನವರು ನೀಡಿದ ಅನುಪಮ ಕಾಣಿಕೆಯಾಗಿದೆ. ಈ ವ್ಯವಸ್ಥೆಯನ್ನು ಕಾರ್ಯಗತಗೊಳಿಸುವುದೇ ಇಷ್ಟಲಿಂಗ ಪೂಜಾಫಲವಾಗಿದೆ.

'ಲಿಂಗವ ಪೂಜಿಸಿ ಫಲವೇನಯ್ಯಾ; ಸಮರತಿ, ಸಮಕಳೆ, ಸಮಸುಖ ವನರಿಯದನ್ನಕ್ಕ?' ಎಂದು ಸಮರತಿ (ಲಿಂಗಭೇದಕ್ಕೆ ವಿರುದ್ಧ), ಸಮಕಳೆ (ವರ್ಣಭೇದಕ್ಕೆ ವಿರುದ್ಧ) ಮತ್ತು ಸಮಸುಖ (ವರ್ಗಭೇದಕ್ಕೆ ವಿರುದ್ಧ) ಎಂದು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ. ಈ ಅರಿವನ್ನು ಆಚರಣೆಯಲ್ಲಿ ತಂದು ಸರ್ವಸಮತ್ವವನ್ನು ಸಾಧಿಸುವುದೇ ಲಿಂಗಪೂಜಾಫಲ. ನಿಸರ್ಗವು ಹೆಣ್ಣು-ಗಂಡುಗಳ ಚಿಂತನಾಶಕ್ತಿಯಲ್ಲಿ, ಬ್ರಾಹ್ಮಣ-ದಲಿತರ ಪ್ರತಿಭೆಯಲ್ಲಿ ಮತ್ತು ಬಡವ-ಶ್ರೀಮಂತರ ಆಶಯಗಳಲ್ಲಿ ಭೇದವನ್ನು ಕಲ್ಪಿಸಿಲ್ಲ. ಆದ್ದರಿಂದ ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದಗಳು ನಿಸರ್ಗವಿರೋಧಿಗಳಾಗಿವೆ ಎಂದು ಬಸವಣ್ಣನವರು ಸಾರಿದ್ದಾರೆ.

'ಲಿಂಗವ ಪೂಜಿಸಿ ಫಲವೇನಯ್ಯಾ; ಕೂಡಲಸಂಗಮದೇವರ ಪೂಜಿಸಿ ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?' ಎಂದು ಬಸವಣ್ಣನವರು ಅದೇ ವಚನದಲ್ಲಿ ಇನ್ನೊಂದು ಪ್ರಶ್ನೆಯನ್ನು ಎತ್ತಿದ್ದಾರೆ. ಇದು 'ಇವ ನಮ್ಮವ, ಇವ ನಮ್ಮವ' ಎಂದೆನಿಸುತ್ತ ಎಲ್ಲರನ್ನೂ ಒಳಗೊಳ್ಳುವ ಸಿದ್ಧಾಂತ. ಇದುವೆ Theory of Inclusion. ಭಾರತೀಯರು ಹೀಗೆ ಒಳಗೊಳ್ಳುವುದರ ಮೂಲಕ ಲಿಂಗ, ಜಾತಿ ಮತ್ತು ವರ್ಗವೈರುಧ್ಯಗಳಿಂದ ವಿಮೋಚನೆಗೊಳ್ಳಬೇಕೆಂಬುದು ಅಂಬೇಡ್ಕರರ ಆಶಯವಾಗಿತ್ತು. ಮಾನವರು ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಒಳಗೊಳ್ಳುತ್ತ ಹೋದಂತೆ ಎಲ್ಲ ಭೇದಗಳಿಂದ ಹೊರಗಾಗತೊಡಗುತ್ತಾರೆ. ಬಸವಣ್ಣನವರು ಮತ್ತು ಅಂಬೇಡ್ಕರರು ಇಂಥ ಒಳಗೊಳ್ಳುವ ಸಂಸ್ಕೃತಿಯ ಪ್ರತಿಪಾದಕರಾಗಿದ್ದರು.

ಮನುವಾದಿ ವ್ಯವಸ್ಥೆಯಲ್ಲಿ ವರ್ಣಗಳಿವೆ, ಜಾತಿಗಳಿವೆ, ಉಪಜಾತಿಗಳಿವೆ, ಇವೆಲ್ಲ ಪ್ರಾದೇಶಿಕವಾಗಿಯೂ ವಿಂಗಡಣೆಗೊಂಡಿವೆ. ವಿವಿಧ ಕಾಯಕಗಳಲ್ಲೂ ವಿಂಗಡಣೆಗೊಂಡಿವೆ. ಉದಾಹರಣೆಗೆ ಕುರುಬ ಜಾತಿ ಎಂಬುದು ಅಷ್ಟಕ್ಕೇ ನಿಲ್ಲುವುದಿಲ್ಲ. ಅದು ಕಾಡುಕುರುಬ, ಜೇನುಕುರುಬ, ಹಂಡೆಗುರುಬ, ಉಣ್ಣೆ ಕಂಕಣ ಕುರುಬ, ನೂಲು ಕಂಕಣ ಕುರುಬ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಹೀಗೆ ಪ್ರತಿಯೊಂದು ವರ್ಣದೊಳಗೆ ಜಾತಿ ಮತ್ತು ಜಾತಿಗಳೊಳಗೆ ಉಪಜಾತಿ ಹಾಗೂ ಇವೆಲ್ಲವುಗಳಿಗೆ

ಹಿನ್ನೆಲೆಯಾಗಿ ಪ್ರಾದೇಶಿಕ ಮತ್ತು ಅಂತಸ್ತಿನ ಪ್ರಭೇದಗಳಿಂದಾಗಿ ಹಿಂದೂ ಎಂದು ಕರೆಯಿಸಿಕೊಳ್ಳುವ ವೈದಿಕ ಧರ್ಮವು 'Religion of Exclusion' ಆಗಿದೆ. ಆದರೆ ಬಸವಧರ್ಮವು ಇದಕ್ಕೆ ತದ್ವಿರುದ್ಧವಾದ 'Religion of Inclusion' ಆಗಿದೆ. ಎಲ್ಲರನ್ನೂ ಒಳಗೊಳ್ಳುವ ಬಸವತತ್ತ್ವ ಮತ್ತು ಅಂಬೇಡ್ಕರ್ ವಾದ ಒಂದೇ ತೆರನಾದ ಚಿಂತನಾಕ್ರಮವನ್ನು ಹೊಂದಿವೆ. ಇವರಿಬ್ಬರೂ ತಮ್ಮ ಕಾಲದ ವಾಸ್ತವಕ್ಕೆ ತಕ್ಕಂತೆ ವೈದಿಕದ ವಿರುದ್ಧ ನೇರವಾದ ಪ್ರಬಲ ವೈಚಾರಿಕ ವಿರೋಧ ವ್ಯಕ್ತಪಡಿಸಿದ್ದಾರೆ. ಮಹಾವೀರ ಮತ್ತು ಬುದ್ಧ ಆ ವೈದಿಕಕ್ಕೆ ವಿಮುಖವಾದ ಸಿದ್ಧಾಂತವನ್ನು ಮಂಡಿಸಿದ್ದಾರೆ. ವಿವೇಕಾನಂದ ಮತ್ತು ಗಾಂಧೀಜಿಯಂಥವರು ವೈದಿಕದೊಳಗೇ ಇದ್ದುಕೊಂಡು ಒಳಬಂಡಾಯ ಮಾಡಿದ್ದಾರೆ. ಇಡೀ ಭಕ್ತಿ ಚಳವಳಿ ಒಳಬಂಡಾಯದ ಪ್ರತೀಕವಾಗಿದೆ. ಆದರೆ ವೈದಿಕವನ್ನು ನೇರವಾಗಿ ಮತ್ತು ಸಾಂಘಿಕವಾಗಿ ವಿರೋಧಿಸಿದವರೆಂದರೆ ೧೨ನೇ ಶತಮಾನದಲ್ಲೇ ಬೃಹತ್ ಭಕ್ತಿ ಚಳವಳಿಯನ್ನು ಆರಂಭಿಸಿದ ಬಸವಾದಿ ಶರಣರು ಮತ್ತು ೨೦ನೇ ಶತಮಾನದಲ್ಲಿ ಭಾರಿ ವೈಚಾರಿಕ ಹೋರಾಟ ಆರಂಭಿಸಿದ ಅಂಬೇಡ್ಕರರು. ಈ ಕಾರಣದಿಂದಲೇ ಬಸವಣ್ಣನವರು ಮತ್ತು ಅಂಬೇಡ್ಕರರು ಭಾರತದ ೫೦೦೦ ವರ್ಷಗಳ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆಯುತ್ತಾರೆ.

ಕಾಯಕಜೀವಿಗಳ ಜೊತೆ ಬದುಕಿ ಅವರ ಜೀವನಾನುಭವ ಪಡೆದದ್ದರಿಂದ ಬಸವಣ್ಣನವರಿಗೆ ಈ ರೀತಿ ಸಾಧಿಸಲು ಸಾಧ್ಯವಾಯಿತು. ಸ್ವತಃ ಅಸ್ಪೃಶ್ಯರಾಗಿ ಜನಿಸಿ ಬುದ್ಧ, ಕಬೀರ, ಜ್ಯೋತಿಬಾ ಫುಲೆ, ಮುಂಬೈನಲ್ಲಿ ಜವಳಿ ಗಿರಣಿಗಳ ಮೂಲಕ ಆರಂಭವಾದ ಔದ್ಯೋಗೀಕರಣ ಹಾಗೂ ಆಧುನಿಕ ಇಂಗ್ಲಿಷ್ ಶಿಕ್ಷಣದಿಂದ ಸ್ಫೂರ್ತಿ ಪಡೆದದ್ದರಿಂದ ಅಂಬೇಡ್ಕರರಿಗೆ ಈ ಅನನ್ಯ ಸಾಧನೆಗಳನ್ನು ಮಾಡಲು ಸಾಧ್ಯವಾಯಿತು.

ಯಾವ ಒಳಗೊಳ್ಳುವ ಸಂಸ್ಕೃತಿಯನ್ನು ೨೬ ಶತಮಾನಗಳ ಹಿಂದೆ ಬುದ್ಧ ಸೃಷ್ಟಿಸಿದರೋ ಅದನ್ನು ೧೨ನೇ ಶತಮಾನದಲ್ಲಿ ಬಸವಣ್ಣನವರು ಒಂದು ಚಳವಳಿಯಾಗಿ ರೂಪಿಸಿದರು. ೨೦ನೇ ಶತಮಾನದಲ್ಲಿ ಈ ಒಳಗೊಳ್ಳುವ ಚಳವಳಿಗೆ ಬಾಬಾಸಾಹೇಬ ಅಂಬೇಡ್ಕರರು ಸಂವಿಧಾನದ ರೂಪ ಕೊಟ್ಟರು. ಇಂಥ ಭವ್ಯ ಪರಂಪರೆಯನ್ನು ನಾವು ಹೊಂದಿದ್ದೇವೆ. ಆದರೆ ಏತನ್ಮಧ್ಯೆ ಲಿಂಗಾಯತರಲ್ಲಿ ನೂರಾರು ಜಾತಿ ಉಪಜಾತಿಗಳು ಸೃಷ್ಟಿಯಾದದ್ದು ಮತ್ತು ದಲಿತ ಚಳವಳಿಗಳು ಜಾತಿ ಉಪಜಾತಿಗಳಲ್ಲಿ ಒಡೆದುಹೋಗುತ್ತಿರುವುದು ಈ ಪರಂಪರೆಗೆ ಒಡ್ಡುತ್ತಿರುವ ಒಳ ಸವಾಲುಗಳಾಗಿವೆ. ಈ ಕಾರಣದಿಂದಲೇ ದೇಶದಲ್ಲಿ ಮತ್ತೆ ಮತ್ತೆ 'Religion of Exclusion' ವಿಜಯ ಸಾಧಿಸುತ್ತಲೇ ಇರುತ್ತದೆ.

ಒಂದು ಸಂವಿಧಾನ ರೂಪುಗೊಳ್ಳಲು ಚಳವಳಿಗಳೇ ಸಂಪನ್ಮೂಲಗಳಾಗಿವೆ. ಇಂಥ ಚಳವಳಿಗಳಿಗೆ ಜನ್ಮ ಕೊಟ್ಟವರೇ ಬಸವಣ್ಣನವರು. ಬಸವಣ್ಣನವರಿಗಿಂತ

ಮೊದಲು ಜಗತ್ತಿನಲ್ಲಿ ಒಳ್ಳೆಯದು ಮತ್ತು ಕೆಟ್ಟದ್ದೆಲ್ಲವು ಯುದ್ಧಗಳ ಮೂಲಕವೇ ನಿರ್ಧಾರವಾಗುತ್ತಿತ್ತು. ಅನ್ಯಾಯದ ಯುದ್ಧಕ್ಕೆ ಪ್ರತಿಯಾಗಿ ನ್ಯಾಯಬದ್ಧ ಯುದ್ಧಗಳು ನಡೆಯುತ್ತಿದ್ದವು. ಆದರೆ ಬಸವಣ್ಣನವರು ಅಹಿಂಸಾತ್ಮಕ ಚಳವಳಿಗಳ ಮೂಲಕ ಯುದ್ಧಗಳನ್ನು ಎದುರಿಸುವ ಕಲೆಯನ್ನು ಕಲಿಸಿದರು. ಒಂದು ದೇಶದೊಳಗೆ ಸಾಮಾಜಿಕ ನ್ಯಾಯಕ್ಕಾಗಿ ನಡೆಯುವ ಚಳವಳಿಗಳು ಯಾದವೀ ಕಲಹಗಳನ್ನು ತಡೆಗಟ್ಟುತ್ತವೆ. ಯುವಕರು ಕೋಮುವಾದಿ, ಮೂಲಭೂತವಾದಿ ಮತ್ತು ಉಗ್ರವಾದಿಗಳಾಗುವುದು ತಪ್ಪುತ್ತದೆ. ಚಳವಳಿಗಳು ಅವರನ್ನು ನವಸಮಾಜದ ಕಡೆಗೆ ಕರೆದೊಯ್ಯುತ್ತವೆ.

ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಕಲ್ಯಾಣ ನಾಡು ಒಂದಿಲ್ಲೊಂದು ಯುದ್ಧಗಳಲ್ಲಿ ತೊಡಗಿರುತ್ತಿತ್ತು. ಆದರೆ ಬಸವಣ್ಣನವರು ಬಿಜ್ಜಳನ ಪ್ರಧಾನಿಯಾದಮೇಲೆ ಯುದ್ಧಗಳು ಮಾಯವಾಗಿ ಕಾಯಕಜೀವಿಗಳ ಚಳವಳಿ ಆರಂಭವಾಯಿತು. ಇದು 'State should wither away' ಎನ್ನುವ ರೀತಿಯ ಚಳವಳಿಯಾಗಿತ್ತು. ಶರಣರು ಒಗ್ಗಟ್ಟಾದರೂ ನೇರ ಪ್ರತಿಭಟನೆ ಮಾಡದೆ, ಕಾಯಕದಲ್ಲಿ ಉತ್ಸಾಹ ತೋರುತ್ತ ಮತ್ತು ಸಂಕುಲದ ಬದುಕನ್ನು ಬದುಕುತ್ತ ಪ್ರಭುತ್ವ ನಿರಾಕರಣೆಯ ಒಳನೋಟವನ್ನು ಹೊಂದಿದ್ದ ವಚನ ಚಳವಳಿಯಲ್ಲಿ ತೊಡಗಿದ್ದರು ಎಂಬುದು ವಚನ ಅಧ್ಯಯನ ಆಳಕ್ಕಿಳಿದಾಗ ತಿಳಿದುಬರುತ್ತದೆ.

ಕಾಯಕಜೀವಿಗಳು ಉತ್ಪಾದನೆಯಲ್ಲಿ ಅಭಿವೃದ್ಧಿ ಸಾಧಿಸುತ್ತ ದೇಶದ ಆರ್ಥಿಕ ಸ್ಥಿತಿಯನ್ನು ಉನ್ನತಮಟ್ಟಕ್ಕೇರಿಸಿದರು. 'ಕಲ್ಯಾಣದಲ್ಲಿ ಕೊಡುವವರುಂಟು ಬೇಡುವವರಿಲ್ಲ' ಎಂದು ಬಸವಣ್ಣನವರು ಘೋಷಿಸುವ ಹಾಗೆ ಮಾಡಿದರು. ಶರಣರು ಶರಣಸಂಕುಲದಲ್ಲಿ ಸಮೂಹ ಜೀವನ ಸಾಗಿಸುವುದರ ಮೂಲಕ ಪ್ರಭುತ್ವದ ಹಂಗಿಲ್ಲದೆ ಬದುಕುವುದನ್ನು ಕಲಿತರು. ಜನಸಮುದಾಯ ಬಿಜ್ಜಳರಾಜನಿಗಿಂತಲೂ ಪ್ರಧಾನಿ ಬಸವಣ್ಣನವರನ್ನೇ ನೆಚ್ಚಿಕೊಂಡಿತ್ತು. ಚಳವಳಿಯಿಂದ ರೂಪುಗೊಂಡ ಸ್ವತಂತ್ರ ಬದುಕು ಜನಸಾಮಾನ್ಯರಿಗೆ ಹೊಸ ಜೀವನಾನುಭವ ನೀಡಿತು. ಜನಸಮುದಾಯ ಪ್ರಭುತ್ವವನ್ನು ಕಡೆಗಣಿಸುತ್ತಿದೆ ಎಂದು ಪಟ್ಟಭದ್ರ ಹಿತಾಸಕ್ತಿಗಳು ಭಾವಿಸತೊಡಗಿದವು. ಪುರೋಹಿತಶಾಹಿಗಳು ಈ ತೆರನಾಗಿ ಬಿಜ್ಜಳನ ತಲೆ ತುಂಬಿದರು. ಕಾಯಕಜೀವಿಗಳ ಶ್ರಮದಿಂದ ರಾಜ್ಯಭಂಡಾರ ತುಂಬಿತುಳುಕುತ್ತಿರುವಾಗ ಬಿಜ್ಜಳನಿಗೆ ಈ ಬಸವ ವಿರೋಧಿ ಮಾತುಗಳು ಧೃತಿಗೆಡಸಿದವು. ಹೀಗೇ ಮುಂದುವರಿದರೆ ಒಂದು ದಿನ ಇಡೀ ಪ್ರಭುತ್ವ ಶರಣರ ಪಾಲಾಗುವುದು ಎಂಬ ಲೆಕ್ಕಾಚಾರ ಬಿಜ್ಜಳನ ವಲಯದಲ್ಲಿ ಶುರುವಾಯಿತು. ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆಯ ನೆಪದಲ್ಲಿ ಕಲ್ಯಾಣದಲ್ಲಿ ಶರಣರನ್ನು ಹತ್ತಿಕ್ಕಲಾಯಿತು. ಕೊಲೆ ಸುಲಿಗೆಗಳು ನಡೆದವು. ಮಾನವಕುಲದ ಹೆಮ್ಮೆಯಾದಂಥ ವಚನ ಸಾಹಿತ್ಯದ ಬಹುಭಾಗವನ್ನು ಸುಟ್ಟುಹಾಕಲಾಯಿತು.

೧೨ನೆಯ ಶತಮಾನದಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಅಭಿವೃದ್ಧಿ ಸಾಧಿಸಲಿಕ್ಕಾಗಿರಲಿಲ್ಲ. ಅಂಥ ಸಂದರ್ಭದಲ್ಲಿ ಕಾಯಕಜೀವಿಗಳಾದ ಶರಣರು ವಿಶ್ವಪ್ರಸಿದ್ಧವಾದ ವಚನ ಸಾಹಿತ್ಯದ ರಚನೆ ಮಾಡಿದರು. ಪ್ರತಿಗಾಮಿ ಶಕ್ತಿಗಳು ಭಾರಿ ಪ್ರಮಾಣದಲ್ಲಿ ವಚನಕಟ್ಟುಗಳನ್ನು ಸುಟ್ಟುಹಾಕಿದ್ದರಿಂದ, ವಚನ ಸಾಹಿತ್ಯವನ್ನು ಎಷ್ಟು ಮಂದಿ ರಚಿಸಿದರು ಮತ್ತು ವಚನ ಸಾಹಿತ್ಯ ಎಷ್ಟಿತ್ತು ಎಂಬುದು ತಿಳಿದುಬಂದಿಲ್ಲ. ಕೇವಲ ೨೧೨ ವಚನಕಾರರ ೧೫ ಸಾವಿರದಷ್ಟು ವಚನಗಳು ಸಿಕ್ಕಿವೆ. ಅವರಲ್ಲಿ ೧೨೫ ವಚನಕಾರರು, ೩೩ ವಚನಕಾರ್ತಿಯರು ಮತ್ತು ೫೪ ಮಂದಿ ಅಜ್ಞಾತ ವಚನಕಾರರು ಇದ್ದಾರೆ. ಇವರಲ್ಲಿ ಬಹುಪಾಲು ಮಂದಿ ಕೆಳಜಾತಿ ಮತ್ತು ಕೆಳವರ್ಗಗಳಿಂದ ಬಂದ ಕಾಯಕಜೀವಿಗಳಿದ್ದಾರೆ. ಜಗತ್ತಿನ ದುಡಿಯುವ ವರ್ಗದ ಮೊದಲ ಸಾಹಿತ್ಯ ಇದಾಗಿದೆ. ಕಸಗುಡಿಸುವ ಸತ್ಯಕ್ಕ, ದಲಿತ ಮಹಿಳೆ ಕಾಳವ್ವೆ, ಸೂಳೆ ಸಂಕವ್ವೆ ಮುಂತಾದವರು ಬರೆಯುವಾಗ ಇಂಗ್ಲಿಷ್ ಭಾಷೆಯಲ್ಲಿ ಹೇಳಿಕೊಳ್ಳುವಂಥ ಸಾಹಿತ್ಯ ಇರಲಿಲ್ಲ!

ಒಂದು ಚಳವಳಿ ಏನೆಲ್ಲ ಸಾಧನೆಗೆ ಅವಕಾಶ ಕಲ್ಪಿಸುವುದು ಎನ್ನುವುದಕ್ಕೆ ವಚನ ಚಳವಳಿ ಉದಾಹರಣೆಯಾಗಿದೆ. ಬಡತನ ಮತ್ತು ನಿರಕ್ಷರತೆಯ ಹಿನ್ನೆಲೆಯಿಂದ ಬಂದ ಈ ಶರಣರಲ್ಲಿನ ಬಹುಪಾಲು ಜನರಿಗೆ ಬಸವಣ್ಣನವರು ಅದು ಹೇಗೆ ವಯಸ್ಕರ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದರು ಮತ್ತು ಅದು ಹೇಗೆ ಆ ಶರಣರು ವಿಶ್ವಮಾನ್ಯವಾದ ಸಾಹಿತ್ಯ ರಚಿಸಿದರು ಎಂಬುವು ಬೆರಗುಗೊಳಿಸುವಂಥ ಘಟನೆಗಳಾಗಿವೆ.

ಬೇರೆ ಭಾಷೆ ಮತ್ತು ದೇಶಗಳಿಂದ ಬಂದವರಿಗೆ ಶಿಕ್ಷಣ, ಮಹಿಳಾ ಶಿಕ್ಷಣ, ದಲಿತ ಶಿಕ್ಷಣ, ಕಾಯಕಜೀವಿಗಳ ಶಿಕ್ಷಣ, ವಯಸ್ಕರ ಶಿಕ್ಷಣ ಹೀಗೆ ಈ ಎಲ್ಲ ಪ್ರಕಾರದ ಶಿಕ್ಷಣಕ್ಕೆ ಕಾಯಕದ, ಅನುಭಾವದ, ಸಂಘಟನೆಯ ಮತ್ತು ಚಳವಳಿಯ ನಂಟು ಕಲ್ಪಿಸುವುದು ಸಾಮಾನ್ಯ ಮಾತಾಗಿರಲಿಲ್ಲ. ಅಂಬೇಡ್ಕರರ ಶಿಕ್ಷಣ ಪ್ರಜ್ಞೆಗೂ ಬಸವಣ್ಣನವರ ಶಿಕ್ಷಣ ಪ್ರಜ್ಞೆಗೂ ಯಾವುದೇ ವ್ಯತ್ಯಾಸವಿಲ್ಲ ಎಂಬುದು ಇದರಿಂದ ಸಾಬೀತಾಗುತ್ತದೆ. ಬಸವಣ್ಣನವರು ಕೆಳಜಾತೀಕರಣಕ್ಕೆ ಒಳಗಾಗಿದ್ದರಿಂದ ಮತ್ತು ಅಂಬೇಡ್ಕರರು ಕೆಳಜಾತಿಯಿಂದ ಬಂದವರಾಗಿದ್ದರಿಂದ ಇದು ಸಾಧ್ಯವಾಯಿತು. ಬರಿ ಹಿನ್ನೆಲೆಯೊಂದೇ ಸಾಲದು. ಜಗತ್ತನ್ನು ವಿಮೋಚನೆಗೊಳಿಸಬೇಕೆಂಬ ಮಹತ್ವಾಕಾಂಕ್ಷೆಯೂ ಇರಬೇಕಾಗುತ್ತದೆ. ಅದಕ್ಕೆ ಬೇಕಾದ ಅದಮ್ಯ ಉತ್ಸಾಹ ಮತ್ತು ಅಪ್ರತಿಮ ಪ್ರತಿಭೆಯೂ ಬೇಕಾಗುತ್ತದೆ. ಈ ಎಲ್ಲ ಗುಣಗಳು ಬಸವಣ್ಣ ಮತ್ತು ಅಂಬೇಡ್ಕರರಲ್ಲಿ ಇದ್ದ ಕಾರಣದಿಂದಲೇ ಅವರು ಮಹತ್ವದ್ದನ್ನು ಸಾಧಿಸಿದರು.

ಪ್ರತಿಭಾಶಾಲಿಗಳು ಕೆಳಜಾತೀಕರಣಕ್ಕೆ ಮತ್ತು ಕೆಳವರ್ಗೀಕರಣಕ್ಕೆ ಒಳಗಾಗುವುದರಿಂದ ಅಥವಾ ಅಲ್ಲೇ ಜನಿಸಿ ಆ ಜನಸಮುದಾಯಕ್ಕೆ ಅಂಟಿಕೊಂಡಿರುವುದರಿಂದ ಇದೆಲ್ಲ ಸಾಧ್ಯವಾಗುತ್ತದೆ. ಒಬ್ಬ ವ್ಯಕ್ತಿ ಎಲ್ಲಿ ಹುಟ್ಟಿದ್ದಾನೆ ಎಂಬುದು ಮುಖ್ಯವಲ್ಲ. ಬ್ರಾಹ್ಮಣನಾಗಿ ಹುಟ್ಟಿ ದಲಿತೀಕರಣಕ್ಕೆ ಒಳಗಾಗಬಹುದು. ದಲಿತನಾಗಿ ಹುಟ್ಟಿ ಬ್ರಾಹ್ಮಣೀಕರಣಕ್ಕೆ ಒಳಗಾಗಬಹುದು. ಅಥವಾ ದಲಿತನಾಗಿ ಹುಟ್ಟಿ ಅವರ ಸುಖದುಃಖಗಳು ತನ್ನ ಸುಖದುಃಖವೆಂದು ಭಾವಿಸಿ ಅವರ ನೆಮ್ಮದಿಯ ಬದುಕಾಗಿ ಹೋರಾಟದ ಹಾದಿ ತುಳಿಯಬಹುದು.

ಬ್ರಾಹ್ಮಣ ಮೂಲದಿಂದ ಬಂದ ಬಸವಣ್ಣನರು 'ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹರ ಕಕ್ಕಯ್ಯ' ಎನ್ನುತ್ತ ಬದುಕಿದವರು. ಹೀಗೆ ಜಾತಿ ನಿರಾಕರಣ ಚಳವಳಿ ಆರಂಭಿಸಿದವರು. ಜಾತಿಯಲ್ಲಿ ಕಟ್ಟಕಡೆಯ ಮನುಷ್ಯನಾಗಿ ಪರಿವರ್ತನೆಗೊಂಡವರು. ಆದರೆ ಅಲ್ಲಿಗೇ ನಿಲ್ಲದೆ 'ಚೆನ್ನಯ್ಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು. ಇವರಿಬ್ಬರಿಗೆ ಹುಟ್ಟಿದ ಮಗ ನಾನು, ಕೂಡಲಸಂಗಮದೇವರ ಸಾಕ್ಷಿಯಾಗಿ.' ಎಂದು ಹೇಳುವ ಮೂಲಕ ಅನೈತಿಕ ಸಂಬಂಧದಿಂದ ಜನಿಸಿದ ಮಕ್ಕಳ ಹಕ್ಕುಗಳ ಪರವಾಗಿ ಧ್ವನಿ ಎತ್ತಿದರು.

೧೯೪೮ರ ಡಿಸೆಂಬರ್ ೧೦ರಂದು ವಿಶ್ವಸಂಸ್ಥೆ ೩೦ ಅಂಶಗಳ ಮಾನವ ಹಕ್ಕುಗಳನ್ನು ಘೋಷಿಸಿತು. 'ದಾಂಪತ್ಯ ಸಂಬಂಧದಿಂದ ಹುಟ್ಟಿದ ಮಗುವಿನ ಹಕ್ಕು ಮತ್ತು ಅನೈತಿಕ ಸಂಬಂಧದಿಂದ ಜನಿಸಿದ ಮಗುವಿನ ಹಕ್ಕುಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲ' ಎಂಬುದು ಅವುಗಳಲ್ಲಿ ಒಂದು. ಈ ಸತ್ಯವನ್ನು ಅರಿಯಲು ಪಾಶ್ಚಿಮಾತ್ಯ ರಾಷ್ಟ್ರಗಳು ೨೦ ಶತಮಾನದ ವರೆಗೆ ಕಾಯಬೇಕಾಯಿತು. ಆದರೆ ಬಸವಣ್ಣನವರು 'ದಾಸೀಪುತ್ರನಾಗಲಿ ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ' ಎಂದು ಹೇಳಿದ್ದಾರೆ. ಆ ಮೂಲಕ ಅನೈತಿಕ ಸಂಬಂಧದಿಂದ ಜನಿಸಿದ ಮಕ್ಕಳ ಹಕ್ಕುಗಳನ್ನು ಎತ್ತಿ ಹಿಡಿದಿದ್ದಾರೆ. ಶಿವದೀಕ್ಷೆಯಾದ ಬಳಿಕ ರಾಜಪುತ್ರನೂ ಅಷ್ಟೇ, ವೇಶ್ಯಾಪುತ್ರನೂ ಅಷ್ಟೇ ಎಂಬುದು ಬಸವಣ್ಣನವರ ದೃಢ ನಿರ್ಧಾರವಾಗಿದೆ. ಹೀಗೆ ಬಸವಧರ್ಮವು ಮಾನವಹಕ್ಕುಗಳ ಧರ್ಮವೇ ಆಗಿದೆ. ಅದೇರೀತಿ ಮಾನವಹಕ್ಕುಗಳು ಅಂಬೇಡ್ಕರರ ಚಿಂತನೆಯ ಜೀವಾಳಗಳಾಗಿವೆ. ಮಾನವಹಕ್ಕುಗಳ ಅಂಶಗಳು ಬಸವಣ್ಣನವರ ವಚನಗಳಲ್ಲಿ ಮತ್ತು ಭಾರತದ ಸಂವಿಧಾನದಲ್ಲಿ ಅಡಕವಾಗಿವೆ. ಮಹಿಳಾ ಹಕ್ಕುಗಳು, ದಲಿತ ಹಕ್ಕುಗಳು, ಕಾಯಜೀವಿಗಳ ಹಕ್ಕುಗಳು ಮುಂತಾದವುಗಳ ಬಗ್ಗೆ ಅಂಬೇಡ್ಕರರು ಯಾವ ರೀತಿ ಚಿಂತನೆ ಮಾಡಿರುವರೋ ಆ ಎಲ್ಲ ಚಿಂತನೆಯ ಬೀಜಗಳು ಬಸವಣ್ಣನವರ ವಚನಗಳಲ್ಲಿವೆ.

ಬಸವಣ್ಣನವರು ಚಳವಳಿಯ, ಮಾನವಹಕ್ಕುಗಳ, ಸಮೂಹ ನಾಯಕತ್ವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದಿಂದ ಕೂಡಿದ ಪ್ರಜಾಪ್ರಭುತ್ವದ ಪರಿಕಲ್ಪನೆಯ ಅನುಭವ ಮಂಟಪ ಎಂಬ ಸಮಾಜೋ ಧಾರ್ಮಿಕ ಸಂಸತ್ತಿನ ಮತ್ತು ಸಂವಿಧಾನದ ಅಂಶಗಳ ಜನಕರಾಗಿದ್ದಾರೆ. ಕ್ರಿಸ್ತಶಕ ೧೨೧೫ರಲ್ಲಿ ಇಂಗ್ಲೆಂಡಿನ ಕಿಂಗ್ ಜಾನ್ ಮತ್ತು ಜಮೀನದಾರರ ಮಧ್ಯೆ ಏರ್ಪಟ್ಟ ಮಹಾ ಒಪ್ಪಂದ 'ಮ್ಯಾಗ್ನಾಕಾರ್ಟಾ' ಜಗತ್ತಿನ ಎಲ್ಲ ಸಂವಿಧಾನಗಳ ತಾಯಿ ಎಂದು ಹೇಳುತ್ತಾರೆ. ಆದರೆ ೧೨ನೇ ಶತಮಾನದಲ್ಲೇ ವಚನಸಂವಿಧಾನ ಕನ್ನಡದ ನೆಲದಲ್ಲಿ ಸೃಷ್ಟಿಯಾದುದರ ಬಗ್ಗೆ ಯಾರೂ ಗಮನ ಹರಿಸುತ್ತಿಲ್ಲ. ಬಸವಣ್ಣನವರ ವಚನಗಳು ಮತ್ತು ಅಂಬೇಡ್ಕರರ ಸಂವಿಧಾನ ಕುರಿತು ಆಳವಾದ ಚಿಂತನೆ ಮಾಡುವ ಸಂದರ್ಭ ಇದಾಗಿದೆ.

ಬಸವಣ್ಣನವರ ಅನುಭವ ಮಂಟಪದಲ್ಲಿ ದಲಿತ, ಹಿಂದುಳಿದ ಮೂಲದವರು ಹಾಗೂ ಮಹಿಳೆಯರೂ ಸೇರಿದಂತೆ ೭೭೦ ಅಮರಗಣಂಗಳು ಇದ್ದರು. ಬದುಕಿನ ರೂಪುರೇಷೆಗಳನ್ನು ನಿಗದಿ ಪಡಿಸುವಂಥ ವಚನಗಳ ಕುರಿತು ಅಲ್ಲಿ ಚರ್ಚೆ ನಡೆಯುತ್ತಿತ್ತು. ಮಸೂದೆಗಳು ಕಾಯದೆ ಆಗುವ ಹಾಗೆ ಅಲ್ಲಿ ಪ್ರತಿಯೊಬ್ಬ ಶರಣರ ವಚನಗಳು ಚರ್ಚೆಗೆ ಒಳಪಟ್ಟು ಸರ್ವಮಾನ್ಯವಾಗಿ ಹೊರಬರುತ್ತಿದ್ದವು. ಅನುಭವ ಮಂಟಪದಲ್ಲಿ ಪ್ರತಿಯೊಬ್ಬರು ಅಭಿವ್ಯಕ್ತಿ ಸ್ವಾತಂತ್ರ್ಯ ಹೊಂದಿದ್ದರು. ಕಿರಿಯರು ಹಿರಿಯರನ್ನು ಕೂಡ ಪ್ರಶ್ನಿಸುವಂಥ ವಾತಾವರಣವನ್ನು ಅನುಭವ ಮಂಟಪದಲ್ಲಿ ಸೃಷ್ಟಿಸಲಾಗಿತ್ತು. ಪಾರ್ಲಿಮೆಂಟ್‌ನಲ್ಲಿ ಸ್ಪೀಕರ್ ಇರುವ ಹಾಗೆ ಅನುಭವ ಮಂಟಪದ ಶೂನ್ಯಸಿಂಹಾಸನದಲ್ಲಿ ಕೆಳಜಾತಿಯ ನಟುವರ ಜನಾಂಗದ ಮೂಲದಿಂದ ಬಂದ ಅಲ್ಲಮಪ್ರಭುಗಳು ವಿರಾಜಮಾನರಾಗಿರುತ್ತ ಚರ್ಚೆಗಳನ್ನು ಆಲಿಸುತ್ತಿದ್ದರು. ನಿರ್ಣಾಯಕ ಹಂತದಲ್ಲಿ ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದರು. ಆ ಅನುಭವ ಮಂಟಪದಲ್ಲಿ ಇದ್ದವರು ವೇದಮೂರ್ತಿಗಳಾಗಿದ್ದಿಲ್ಲ ಅಥವಾ ಆಗಮ ಪ್ರವೀಣರಾಗಿದ್ದಿಲ್ಲ. ಅವುಗಳ ಜ್ಞಾನವಿದ್ದರೂ ಅಲ್ಲಿ ಅವು ಗೌಣವಾಗಿದ್ದವು. ವೇದಾಗಮಗಳ ಚರ್ಚೆಯಲ್ಲಿ ಯಾರಿಗೆ ಅವಕಾಶವಿರಲಿಲ್ಲವೋ ಅಂಥ ಜನರು ಅಂದರೆ ತೊಗಲು ಹದ ಮಾಡುವವರು, ಚಪ್ಪಲಿ ಹೊಲಿಯುವವರು, ಬಟ್ಟೆ ಒಗೆಯುವವರು, ಹುಲ್ಲು ಮಾರುವವರು, ಕಸಗುಡಿಸುವವರು, ಕೃಷಿಕಾರ್ಮಿಕರು ಮತ್ತು ರೈತರು ಮುಂತಾದವರು ಬಹುಸಂಖ್ಯಾತರಾಗಿದ್ದ ಅನುಭವ ಮಂಟಪ ಎಲ್ಲ ಜನವರ್ಗಗಳ ಪ್ರಾತಿನಿಧ್ಯ ಪಡೆದ ಸಂಸ್ಥೆಯಾಗಿತ್ತು. ಅಮರಗಣಂಗಳು ವಿವಿಧ ಜನಸಮುದಾಯಗಳ ಪ್ರತಿನಿಧಿಗಳಂತೆ ಇದ್ದರು. ಇಷ್ಟೊಂದು ಸದಸ್ಯರುಳ್ಳ ಯಾವ ಪಾರ್ಲಿಮೆಂಟೂ ಜಗತ್ತಿನಲ್ಲಿ ಸೃಷ್ಟಿಯಾಗಿಲ್ಲ!

ಬಸವಧರ್ಮವು ಸಮಾಜದಲ್ಲಿ ಎಲ್ಲತೆರನಾದ ಅಪಮಾನಕ್ಕೊಳಗಾಗಿ ಬದುಕುವವರಿಗೆ ಘನತೆಯನ್ನು ಒದಗಿಸುವ ಧರ್ಮವಾಗಿತ್ತು. 'ಎಡದ ಕೈಯಲಿ ಕತ್ತಿ,

ಬಲದ ಕೈಯಲಿ ಮಾಂಸ, ಬಾಯಲಿ ಸುರೆಯ ಗಡಿಗೆ, ಕೊರಳಲಿ ದೇವರಿರಲು ಅವರ ಲಿಂಗನೆಂಬೆ ಸಂಗನೆಂಬೆ, ಕೂಡಲಸಂಗಮದೇವಾ ಅವರ ಮುಖಲಿಂಗಿಗಳೆಂಬೆನು' ಎಂದು ಬಸವಣ್ಣನವರು ಹೇಳಿದ್ದು ಚೆನ್ನಬಸವಣ್ಣನವರಂಥ ಪರಿಶುದ್ಧವಾದಿಗಳಿಗೆ ಹಿಡಿಸಲಿಲ್ಲ. ಲಿಂಗವಂತ ಧರ್ಮಕ್ಕೆ ಬರುವವರು ಪವಿತ್ರವಾಗಿರಬೇಕು ಎಂಬ ಭಾವ ಚೆನ್ನಬಸವಣ್ಣನವರದಾಗಿತ್ತು. 'ಈ ಭಾವ ಬಸವಣ್ಣನಿಗಾಯಿತಲ್ಲದೆ ಎನಗಿಲ್ಲ ನೋಡಾ' ಎಂದು ಚೆನ್ನಬಸವಣ್ಣನವರು ಹೇಳಿದರು. 'ಶರಣರ ಕಾಯಕ ಮಡಿವಾಳರ ಕಾಯಕ' ಎಂದು ಬಸವಣ್ಣನವರು ತಿಳಿಸಿದ್ದಾರೆ. ಮನಸ್ಸಿನ ಮೈಲಿಗೆ ಕಳೆಯುವ ಕಾಯಕ ಶರಣರದಾಗಿದೆ. ಯಾರೇ ಬಂದರೂ ಸ್ವಾಗತಿಸುವ ಮನಸ್ಸು ಬಸವಣ್ಣನವರದು. ಇಷ್ಟಲಿಂಗ ತತ್ತ್ವ ಮತ್ತು ಮಾನವೀಯವಾದ ಶರಣಸಂಕುಲದಲ್ಲಿ ಎಂಥ ಕೆಟ್ಟವರೂ ಬದಲಾಗುತ್ತಾರೆ ಎಂಬ ಆತ್ಮವಿಶ್ವಾಸ ಅವರದು.

ಈ ರೀತಿಯ ಅನುಭವ ಮಂಟಪದ ಚರ್ಚೆಗಳು, ಚಿಂತನೆಗಳು, ಅಭಿವ್ಯಕ್ತಿ ಸ್ವಾತಂತ್ರ್ಯ, ಮಾನವಹಕ್ಕು ಮುಂತಾದವು ನಮಗೆ ಶರಣರ ಬಳುವಳಿಗಳಾಗಿ ಬಂದಿವೆ. ಈ ಆಧುನಿಕ ಕಾಲಘಟ್ಟದಲ್ಲಿ ಅವು ನಮಗೆ ಸಂವಿಧಾನವಾಗಿ ಮತ್ತು ಕಾನೂನುಗಳಾಗಿ ಕಾಣಸಿಗುತ್ತವೆ. ಇಂಥ ಹಿನ್ನೆಲೆಯಲ್ಲಿ ನಾವು ಬಸವಣ್ಣನವರನ್ನು ಮತ್ತು ಅಂಬೇಡ್ಕರರನ್ನು ಅರ್ಥ ಮಾಡಿಕೊಳ್ಳಬೇಕಿದೆ.

ಲಿಂಗಾಯತ ಧರ್ಮಕ್ಕೆ ವಿಚಿತ್ರವಾದ ಸಮಸ್ಯೆಗಳಿವೆ. ಅವರು ಆಹಾರ ಸಂಸ್ಕೃತಿಯ ಪ್ರಶ್ನೆ ಬಂದಾಗ ಬ್ರಾಹ್ಮಣರ ಜೊತೆ ಇರುತ್ತಾರೆ. ಏಕದೇವೋಪಾಸನೆಯ ವಿಚಾರದಲ್ಲಿ ಇಸ್ಲಾಂ, ಕ್ರೈಸ್ತ ಮತ್ತು ಸಿಖ್ ಧರ್ಮಕ್ಕೆ ಹತ್ತಿರವಾಗುತ್ತಾರೆ. ಸಾಮಾಜಿಕ ಸಮಸ್ಯೆಗಳ ಸಂದರ್ಭದಲ್ಲಿ ಶೂದ್ರರ ಸ್ಥಾನದಲ್ಲಿರುತ್ತಾರೆ. ಆದರೆ ಆಹಾರ ಸಂಸ್ಕೃತಿಯು ಕೊನೆಗೆ ಅವರನ್ನು ನಿಯಂತ್ರಿಸುತ್ತದೆ. ಅವರಲ್ಲಿನ ಬಹುಪಾಲು ಜನ ಬ್ರಾಹ್ಮಣೀಕರಣಕ್ಕೆ ಒಳಗಾಗ ಬಯಸುತ್ತಾರೆ. ಅವರು ಏಕದೇವೋಪಾಸನೆಯ ಇಷ್ಟಲಿಂಗ ಪೂಜೆಯ ಜೊತೆಗೇ ಗುಡಿಗುಂಡಾರಗಳನ್ನೂ ಸುತ್ತುತ್ತಾರೆ. ತಾವು ಶೂದ್ರ ಜನಾಂಗದವರಿಗಿಂತ ಮೇಲಿನವರು ಎಂದು ಭಾವಿಸಿ ಮೇಲ್ಜಾತಿಯವರಾಗುತ್ತಾರೆ. ಕೊನೆಗೆ ಹಿಂದೂ ಲಿಂಗಾಯತರಾಗುತ್ತಾರೆ. ಹೀಗೆ ಬಹಳ ಶತಮಾನಗಳಿಂದ ಅವರು ಹಿಂದೂ ಧರ್ಮದ ಲಿಂಗಾಯತ ಜಾತಿಯವರಾಗಿ ಬದುಕುತ್ತಿದ್ದಾರೆ. ತಮ್ಮದು ಸ್ವತಂತ್ರ ಧರ್ಮ ಎಂಬುದನ್ನೇ ಮರೆತುಬಿಟ್ಟಿದ್ದಾರೆ. ಈಗೀಗ ಅನೇಕರಲ್ಲಿ ತಮ್ಮದು ಸ್ವತಂತ್ರ ಧರ್ಮ ಎಂಬ ಪ್ರಜ್ಞೆ ಮೂಡುತ್ತಿದೆ. ಆದರೆ ಮತ್ತೆ ಮತ್ತೆ ತಾವು ಲಿಂಗಾಯತರೋ, ವೀರಶೈವರೋ ಅಥವಾ ವೀರಶೈವ ಲಿಂಗಾಯತರೋ ಎಂಬ ಗೊಂದಲಗಳಿಗೆ ಈಡಾಗುತ್ತಾರೆ. ಅನೇಕ ಸ್ವಾಮಿಗಳು ಮತ್ತು ವಿದ್ವಾಂಸರು ಕೂಡ ಈ ಗೊಂದಲಗಳಿಗೆ ಕಾರಣರಾಗಿದ್ದಾರೆ.

ಬಾಬಾಸಾಹೇಬರು ಸ್ವೀಕರಿಸಿದ ಬೌದ್ಧಧರ್ಮ ಬಸವಣ್ಣನವರ ಲಿಂಗವಂತ ಧರ್ಮದ ಮೂಲಸ್ವರೂಪಕ್ಕೆ ಬಹಳ ಹತ್ತಿರವಾಗಿದೆ. ಬೌದ್ಧಧರ್ಮವು ತ್ರಿಶರಣ ಧರ್ಮವಾಗಿದೆ. ಬುದ್ಧ, ಧರ್ಮ ಮತ್ತು ಸಂಘಕ್ಕೆ ಬೌದ್ಧರು ಶರಣುಹೋಗುತ್ತಾರೆ. ಲಿಂಗಾಯತ ಧರ್ಮವೂ ತ್ರಿಶರಣ ಧರ್ಮವಾಗಿದೆ. ಲಿಂಗಾಯತರು ಗುರು, ಲಿಂಗ ಮತ್ತು ಜಂಗಮಕ್ಕೆ ಶರಣು ಹೋಗುತ್ತಾರೆ. ಇದಕ್ಕೆ 'ತ್ರಿವಿಧ ದಾಸೋಹ' ಎಂದು ಕರೆಯುವರು. ಹೀಗೆ ಎರಡೂ ಶರಣ ಧರ್ಮಗಳೇ ಆಗಿವೆ. ದೇವರ ವಿಚಾರದಲ್ಲಿ ಬೌದ್ಧ ಧರ್ಮವು ಅಜ್ಞೇಯವಾದಿ ಧರ್ಮವಾಗಿದೆ. ಅದು ದೇವರ ಅಸ್ತಿತ್ವದ ಬಗ್ಗೆ ಏನೂ ಹೇಳುವುದಿಲ್ಲ. ಲಿಂಗಾಯತ ಧರ್ಮದಲ್ಲಿ ಅರಿವೇ ಗುರು, ಗುರವೇ ದೇವರು. ಅಂದರೆ ದೇವರು ನಮ್ಮೊಳಗೆ ಅರಿವಿನ ರೂಪದಲ್ಲಿ ಇದ್ದಾನೆ. ಅರಿವು ಎಂದರೆ ಆಂತರಿಕ ಪ್ರಜ್ಞೆ. ಏನು ಮಾಡಬೇಕು, ಏನು ಮಾಡಬಾರದು ಎಂದು ನಮ್ಮೊಳಗೇ ಸೂಚಿಸುವ ಪ್ರಜ್ಞೆ. ದೇಹವೇ ದೇಗುಲವಾದ ಕಾರಣ ದೇವರು ನಮ್ಮೊಳಗೇ ಇರುವಂಥವನು. ಈ ಏಕದೇವೋಪಾಸನೆ ಕೂಡ ಹೊರಗಿನದಲ್ಲ, ಒಳಗಿನದೇ ಆಗಿರುತ್ತದೆ. ಆದ್ದರಿಂದ ಬುದ್ಧನ ಅಜ್ಞೇಯವಾದಕ್ಕೂ ಬಸವಣ್ಣನವರ ನಿರಾಕಾರ ದೇವರ ಕಲ್ಪನೆಗೂ ಒಂದುರೀತಿಯ ಸಾಮೀಪ್ಯವಿದೆ. ಈ ಮುಂತಾದ ಕಾರಣಗಳಿಂದ ಬುದ್ಧ, ಬಸವ ಮತ್ತು ಅಂಬೇಡ್ಕರರು ಒಂದೇ ಮಾರ್ಗದ ಪಥಿಕರಾಗಿದ್ದಾರೆ. ಅವರ ಕಾಲಮಾನಗಳು ಬೇರೆ ಆಗಿವೆ ಅಷ್ಟೇ.

ಜನಿವಾರವಿಲ್ಲದವರೆಲ್ಲ ಶೂದ್ರರೇ ಆಗಿದ್ದಾರೆ. ಮೇಲಿನ ಮೂರು ವರ್ಣಗಳಾದ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರಿಗೆ ಜನಿವಾರವಿದೆ. ಆದರೆ ಈ ಮೂರೂ ವರ್ಣಗಳಿಗೆ ಸಂಬಂಧಿಸದ ಲಿಂಗಾಯತರು ತಮ್ಮದು ಜಾತಿ ಎಂದು ಭಾವಿಸಿದಾಗ ಸಹಜವಾಗಿಯೇ ಶೂದ್ರ ವರ್ಣಕ್ಕೆ ಸೇರಿದವರಾಗುತ್ತಾರೆ. ಆದರೆ ಇವರಲ್ಲಿನ ಅನೇಕರು ಲಿಂಗಿಬ್ರಾಹ್ಮಣರೆಂದು ಕರೆಯಿಸಿಕೊಳ್ಳುತ್ತ ಕಳೆದ ೮೦೦ ವರ್ಷಗಳ ಅವಧಿಯಲ್ಲಿ ಬಸವತತ್ತ್ವವನ್ನು ಮರೆಮಾಚುತ್ತ ಬಂದಿದ್ದಾರೆ. ದುಡಿಯವ, ಹಿಂದುಳಿದ ಮತ್ತು ದಲಿತ ವರ್ಗಗಳ ಜನಸಮುದಾಯಗಳ ಮತ್ತು ಸಮತ್ವ ಭಾವದ ಪ್ರಜ್ಞಾವಂತರ ಧರ್ಮ ಇದಾಗಿದೆ. ಈ ಕಾಯಕಜೀವಿಗಳ ಧರ್ಮ ಯಾರ ಸೊತ್ತು? ಎನ್ನುವುದನ್ನು ಪುನರಾವಲೋಕನ ಮಾಡದೆ ಹೋದರೆ ಈ ಧರ್ಮ ಸಂಪೂರ್ಣವಾಗಿ ವೈದಿಕ ಧರ್ಮದಲ್ಲಿ ಕರಗಿ ಹೋಗುವುದರಲ್ಲಿ ಸಂಶಯವಿಲ್ಲ. ಈ ಕಾಲದ ಪ್ರಜ್ಞಾವಂತರ ಜವಾಬ್ದಾರಿ ಎಂದರೆ ಈ ಧರ್ಮವನ್ನು ಉಳಿಸಿಕೊಳ್ಳುವುದು.

ಭಾರತದ ಹಳ್ಳಿಗಳಲ್ಲಿ ದಲಿತರ ಮೇಲೆ ಸವರ್ಣೀಯರು ಕೇವಲ ಜಾತಿಯಾಗಿ ಅಲ್ಲದೆ ಪ್ರಬಲ ವರ್ಗವಾಗಿಯೂ ದೌರ್ಜನ್ಯ ಎಸಗುತ್ತಿದ್ದಾರೆ ಎಂಬುದನ್ನು ಅಂಬೇಡ್ಕರರು ಕಂಡುಕೊಂಡದ್ದು ಬಹಳ ಮುಖ್ಯವಾಗಿದೆ.

ಕೆಳಜಾತಿಯವರು ಶ್ರೀಮಂತರಾಗುವುದು ಕಠಿಣ ಸಾಧ್ಯ. ಏಕೆಂದರೆ ಕೆಳಜಾತಿಗಳವರು ಆರ್ಥಿಕವಾಗಿ ದುರ್ಬಲರಾಗಿರುತ್ತಾರೆ. ಐತಿಹಾಸಿಕವಾಗಿ ದಲಿತರು ಮೃತ ಆಹಾರಿಗಳು. ಅಂದರೆ ತಂಗುಳನ್ನ ತಿನ್ನುವವರು. ಅವರಿಗೆ ಬಿಸಿ ಆಹಾರ ಸೇವನೆಯ ಮತ್ತು ಹೊಸ ಬಟ್ಟೆ ತೊಡುವ ಹಕ್ಕೂ ಇರಲಿಲ್ಲ. ಇಂಥ ಮಹಾರ್ (ಮೃತ ಆಹಾರ) ಕುಲದಿಂದ ಮೇಲೆದ್ದು ಬಂದು ವಿಶ್ವಮಾನವರಾದ ಬಾಬಾಸಾಹೇಬ ಅಂಬೇಡ್ಕರರ ಮತ್ತು ಜಗಜ್ಜ್ಯೋತಿ ಬಸವೇಶ್ವರರ ತತ್ತ್ವಗಳನ್ನು ಆಚರಣೆಗೆ ತಂದಾಗ ಮಾತ್ರ ಈ ದೇಶ ಮನುವಾದಿಗಳ ಭೇದ ಸಂಸ್ಕೃತಿಯಿಂದ ವಿಮೋಚನೆಗೊಂಡು ಬುದ್ಧ, ಬಸವ ಮತ್ತು ಅಂಬೇಡ್ಕರರ ಕೂಡುಸಂಸ್ಕೃತಿಯೊಂದಿಗೆ ಸರ್ವೋದಯ ಸಾಧಿಸುತ್ತದೆ.

ಬಸವಣ್ಣನವರು ಮೇಲ್ಜಾತಿಯಿಂದ ಮತ್ತು ಅಂಬೇಡ್ಕರರು ಕೆಳಜಾತಿಯಿಂದ ಸಾಮಾಜಿಕ ನ್ಯಾಯದ ಕಡೆಗೆ ಬರುತ್ತಾರೆ. ಕಾಲಮಾನದ ಮತ್ತು ಅವರವರ ಹಿನ್ನೆಲೆಯ ವ್ಯತ್ಯಾಸದಿಂದ ಚಳವಳಿಗಳ ಮಾದರಿಗಳೂ ಬೇರೆ ಬೇರೆಯಾಗುತ್ತವೆ. ಬಸವಣ್ಣನವರು ಮಂದಿರ ನಿರಾಕರಣೆ ಚಳವಳಿ ಆರಂಭಿಸಿದರೆ ಅಂಬೇಡ್ಕರರು ಕೆಳಜಾತಿಯವರನ್ನು ಮಂದಿರಗಳ ಒಳಗೆ ಕಳುಹಿಸುವ ಚಳವಳಿ ಆರಂಭಿಸುತ್ತಾರೆ.

> "ಲಿಂಗಾರ್ಚನೆ ಮಾಡುವ ಮಹಿಮರೆಲ್ಲರೂ ಸಲಿಗೆವಂತರಾಗಿ ಒಳಗೈದಾರೆ.
> ಆನುದೇವಾ ಹೊರಗಣವನು. ಸಂಬೋಳಿ ಸಂಬೋಳಿ
> ಎನ್ನುತ್ತ ಇಂಬಿನಲ್ಲಿ ಇದ್ದೇನೆ. ಕೂಡಲಸಂಗಮದೇವಾ
> ನಿಮ್ಮ ನಾಮವಿಡಿದ ಅನಾಮಿಕ ನಾನು."

ಎಂದು ಬಸವಣ್ಣನವರು ಮಂದಿರಗಳಲ್ಲಿನ ಸವರ್ಣೀಯರನ್ನು ಎಚ್ಚರಿಸುತ್ತಾರೆ. 'ಹೊರಗಿಣವನು', 'ಸಂಬೋಳಿ', 'ಇಂಬಿನಲ್ಲಿ', 'ಅನಾಮಿಕ' ಪದಗಳನ್ನು ಬಳಸುವುದರ ಮೂಲಕ ತಾವು ಅಸ್ಪೃಶ್ಯರ ಜೊತೆ, ಅಂದರೆ ದೇವಾಸ್ಥಾನಕ್ಕೆ ಪ್ರವೇಶ ಇಲ್ಲದವರ ಜೊತೆ ನಿಂತಿರುವುದಾಗಿ ತಿಳಿಸುತ್ತಾರೆ. ಮಂದಿರದ ಗರ್ಭಗುಡಿಯೊಳಗೆ ಹೋಗುವ ಜಾತಿಗೆ ಸೇರಿದ ಬಸವಣ್ಣನವರು, ಮಂದಿರ ಪ್ರವೇಶ ಇಲ್ಲದವರ ಜೊತೆ ಒಂದಾಗಿ ನಿಂತು, ಮಂದಿರದ ಒಳಗೆ ಇರುವವರ ವಿರುದ್ಧ ಪ್ರತಿಭಟಿಸುತ್ತಾರೆ. ಆ ಮೂಲಕ ಚಳವಳಿಗಳ ಜನಕರಾಗುತ್ತಾರೆ. ಅವರು ಈ ಪ್ರತಿಭಟನೆಯ ವಚನದಲ್ಲಿ 'ಸಂಬೋಳಿ' ಎಂಬ ವಿಶಿಷ್ಟ ಪದ ಬಳಸಿದ್ದಾರೆ. ಹಿಂದಿನ ಶತಮಾನಗಳಲ್ಲಿ ದಲಿತರು ಸವರ್ಣೀಯರ ಕೇರಿಗೆ ಬರುವಾಗ 'ಸಂಬೋಳಿ', 'ಸಂಬೋಳಿ' ಎಂದು ಹೇಳುತ್ತ ಬರುತ್ತಿದ್ದರು. ಆಗ ಸವರ್ಣೀಯರು ಸರಿದು ದೂರ ನಿಲ್ಲುತ್ತಿದ್ದರು. ಹಾಗೆ ಬರುವಾಗ ಅವರ ಎದೆಯ ಮೇಲೆ ಗಡಿಗೆ ಇರುತ್ತಿತ್ತು. ಏಕೆಂದರೆ ಅವರು ರಸ್ತೆ ಬದಿ ಉಗಳುವ

ಹಾಗಿರಲಿಲ್ಲ. ಅವರು ಟೊಂಕಕ್ಕೆ ಪೊರಕೆ ಕಟ್ಟಿಕೊಂಡಿರುತ್ತಿದ್ದರು. ಏಕೆಂದರೆ ಆ ಪೊರಕೆ, ನೆಲವನ್ನು ಗುಡಿಸುತ್ತ ಅವರ ಹೆಜ್ಜೆಗುರುತುಗಳನ್ನು ಅಳಿಸಿಹಾಕುತ್ತಿತ್ತು!

'ಸಂಬೋಳಿ'ಗೆ ಎಚ್ಚರ ಎಂಬ ಅರ್ಥವೂ ಇದೆ. ಬಸವಣ್ಣನವರು ಹೀಗೆ ಇಡೀ ವಚನವನ್ನು ಶ್ಲೇಷಾರ್ಥಗಳಲ್ಲಿ ರಚಿಸುವ ಮೂಲಕ ಮೇಲ್ಜಾತಿಯವರಿಗೆ ಎಚ್ಚರಿಕೆಯನ್ನೂ ಕೆಳಜಾತಿಯವರಿಗೆ ಅಭಯವನ್ನೂ ಕೊಟ್ಟಿದ್ದಾರೆ. ಮಂದಿರದ ಹೊರಗೆ ದಲಿತರ ಜೊತೆ ನಿಂತು 'ದೇವರಿಗೆ ಸಲಿಗೆವಂತರಾದ ಮಹಿಮರು' ಎಂದು ಒಳಗಿದ್ದವರ ಕುರಿತು ವ್ಯಂಗ್ಯೋಕ್ತಿಯಲ್ಲಿ ಸಾತ್ವಿಕ ಕೋಪ ವ್ಯಕ್ತಪಡಿಸಿದ್ದಾರೆ.

'ಯಾವ ಅರ್ಥದಲ್ಲಿ ದಲಿತರನ್ನು ಹಿಂದುಗಳು ಎನ್ನುವಿರಿ? ನೀವು ಎಂದಾದರೂ ದಲಿತರೊಂದಿಗೆ ಊಟ, ಉಪಚಾರ, ಮದುವೆ, ಸಾವುಗಳಲ್ಲಿ ಒಂದಾಗಿದ್ದೀರಾ?' ಎಂದು ಪ್ರಶ್ನಿಸಿದ ಅಂಬೇಡ್ಕರರು ೧೯೩೦ನೇ ಮಾರ್ಚ್ ೩ರಂದು ನಾಸಿಕ್‌ನಲ್ಲಿರುವ ಕಾಳಾರಾಮ ಮಂದಿರ ಪ್ರವೇಶ ಚಳವಳಿ ಪ್ರಾರಂಭಿಸಿದರು. ೧೫ ಸಾವಿರ ಸತ್ಯಾಗ್ರಹಿಗಳು ಆ ಚಳವಳಿಯಲ್ಲಿ ಭಾಗವಹಿಸಿದ್ದರು. ಈ ಸತ್ಯಾಗ್ರಹ ಐದು ವರ್ಷಗಳ ವರೆಗೆ ನಡೆಯಿತು.

ಹೀಗೆ ಮಂದಿರಕ್ಕೆ ಸಂಬಂಧಿಸಿದ ಬಸವ ಮತ್ತು ಅಂಬೇಡ್ಕರರ ಚಳವಳಿಗಳು ಕಾಲದ ಕಟ್ಟಳೆಯಲ್ಲಿ ತದ್ವಿರುದ್ಧವಾಗಿದ್ದರೂ ಒಂದೇ ಉದ್ದೇಶವನ್ನು ಹೊಂದಿದ್ದವು. ಮಾನವಘನತೆಯನ್ನು ಎತ್ತಿ ಹಿಡಿಯುವುದೇ ಈ ಚಳವಳಿಗಳ ಉದ್ದೇಶವಾಗಿತ್ತು.

❖❖

೬

❖

ಬಸವಣ್ಣನವರ ಸಪ್ತಶೀಲ ಮತ್ತು ಲೋಹಿಯಾರ ಸಪ್ತಕ್ರಾಂತಿ

ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ.
ಮುನಿಯಬೇಡ, ಅನ್ಯರಿಗೆ ಅಸಹ್ಯ ಪಡಬೇಡ,
ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ,
ನಮ್ಮ ಕೂಡಲಸಂಗಮದೇವರನೊಲಿಸುವ ಪರಿ.

–ಬಸವಣ್ಣ

ಬಸವಣ್ಣನವರ ಈ ವಚನ ಶರಣಧರ್ಮದ ಪ್ರಣಾಳಿಕೆಯಾಗಿದೆ. ಶರಣರು ನವಸಮಾಜದ ನಿರ್ಮಾಪಕರು. ಜಾತಿ, ಕುಲ, ವರ್ಗ ಮತ್ತು ಲಿಂಗಭೇದಗಳನ್ನು ಮೀರಿ ನಿಂತವರು. ಇಂಥ ಭೇದಗಳ ನಾಶಕ್ಕಾಗಿ ಹೋರಾಡಿದರು. ಮಾನವನನ್ನು ಇಂಥ ಸಂಕೋಲೆಗಳಿಂದ ಬಿಡಿಸಿ ತಮ್ಮಂತೆ ಸ್ವತಂತ್ರಧೀರರನ್ನಾಗಿಸಲು ಶ್ರಮಿಸಿದರು. ಅರಿವು–ಆಚಾರದ ದರ್ಶನದ ಮೂಲಕ ನಡೆನುಡಿ ಸಿದ್ಧಾಂತವನ್ನು ರೂಪಿಸಿದರು. ಲೌಕಿಕ ಅನುಭವದ ಮೂಲಕ ಅಲೌಕಿಕ ಅನುಭಾವದ ಆನಂದವನ್ನು ಸವಿದರು.

ಇವರಿಗೆ ಬಸವಣ್ಣನವರು ತಿಳಿಸಿದ ಮರ್ತ್ಯಲೋಕವೇ ಕರ್ತಾರನ ಕಮ್ಮಟವಾಯಿತು. ಶರಣರು ನಡೆನುಡಿ ಒಂದಾಗಿಸಿ ಅಯ್ಯಾ ಎನ್ನುವ ಮೂಲಕ ತಮ್ಮೊಳಗೇ ಸ್ವರ್ಗದ ಸುಖವನ್ನು ಅನುಭವಿಸಿದರು. ನುಡಿ ಲೇಸಾಗಿ ನಡೆ ಅಧಮವಾಗಿ ಎಲವೋ ಎನ್ನುವ ಮೂಲಕ ತಮ್ಮೊಳಗೇ ನರಕ ಸೃಷ್ಟಿಸಿಕೊಳ್ಳುವವರನ್ನು ವ್ಯಕ್ತಿತ್ವ ವಿಕಸನದ ಮೂಲಕ ಮೇಲಕ್ಕೆತ್ತಲು ಯತ್ನಿಸಿದರು.

ಸಾಮಾಜಿಕ ಅನ್ಯಾಯಗಳ ವಿರುದ್ಧ ಹೋರಾಡಲು ನೈತಿಕ ಶಕ್ತಿಯನ್ನು ಬೆಳೆಸಿಕೊಳ್ಳಬೇಕಾಗುತ್ತದೆ. 'ತಾನು ಜಗತ್ತಿನೊಳಗೆ, ತನ್ನೊಳಗೆ ಜಗತ್ತು' ಎಂಬ ಭಾವ ಮೂಡಿಸಿಕೊಳ್ಳಬೇಕಾಗುತ್ತದೆ. ನಂತರ ಅದು ಸತ್ಯ ಎಂಬುದನ್ನು ಸಾಕ್ಷಾತ್ಕರಿಸಿಕೊಳ್ಳಬೇಕಾಗುತ್ತದೆ. ಅಂದಾಗ ಮಾತ್ರ ಸಕಲ ಜೀವಾತ್ಮರಿಗೆ ಲೇಸಾಗುವಂಥ

ಕ್ರಿಯೆಗಳಲ್ಲಿ ತೊಡಗಲು ಸಾಧ್ಯವಾಗುವುದು. ಹೆಣ್ಣು ಗಂಡು ಜಾತಿ ಮತ ಪಂಥ ದೇಶ ಮತ್ತು ಭಾಷೆಗಳಿಗೆ ಸಂಬಂಧಿಸಿದ ಸಂಕುಚಿತ ಮನಸ್ಥಿತಿಯಿಂದ ಹೊರಬಂದು ವಿಶ್ವಮಾನವತೆಯೆಡೆಗೆ ಸಾಗುವುದಕ್ಕೆ ಮೊದಲು ಅದಕ್ಕೆ ತಕ್ಕಂತೆ ನಮ್ಮೊಳಗೇ ಬದಲಾವಣೆಗಳಾಗಬೇಕಾಗುತ್ತದೆ. ಬಸವಣ್ಣನವರು ಮೇಲೆ ಹೇಳಿದ ಸಪ್ತಶೀಲಗಳನ್ನು ಆಚರಿಸಲು ಸಾಧ್ಯವಾದಾಗ ಮಾತ್ರ ಪರಿಪೂರ್ಣ ಮಾನವನಾಗಲು ಸಾಧ್ಯ. ಅಂಥ ಮಾನವ ಮಾತ್ರ ತಾನು ಜಗತ್ತಿನೊಳಗೆ ಒಂದಾಗಿ ಆ ಜಗತ್ತನ್ನು ತನ್ನೊಳಗೆ ಇಟ್ಟುಕೊಳ್ಳುತ್ತ ಅದರ ದುಃಖ ನಿವಾರಣೆಗೆ ನಿರಂತರ ಹೋರಾಟದಲ್ಲಿ ತೊಡಗುತ್ತಾನೆ. ಸಹಜವಾಗಿಯೆ ವಿಶ್ವಮಾನವನಾಗುತ್ತಾನೆ.

ಕಳ್ಳರು, ಕೊಲೆಗಡುಕರು, ಸುಳ್ಳುಗಾರರು, ಕೋಪಿಷ್ಠರು, ಅನ್ಯರನ್ನು ಕೀಳಾಗಿ ಕಾಣುವವರು, ತಮ್ಮ ಗುಣಗಾನವನ್ನು ತಾವೇ ಮಾಡುವವರು, ಯಾರಾದರೂ ತಪ್ಪು ಎತ್ತಿ ತೋರಿಸಿದರೆ ಪ್ರತಿಯಾಗಿ ಬೈಯ್ಯುವವರು ಅಂತರಂಗ ಶುದ್ಧಿಯನ್ನಾಗಲಿ, ಬಹಿರಂಗ ಶುದ್ಧಿಯನ್ನಾಗಲಿ ಹೊಂದುವುದಿಲ್ಲ. ಆದ್ದರಿಂದ ಅವರು ದೇವರ ಪ್ರೀತಿಗೆ ಪಾತ್ರರಾಗಲು ಸಾಧ್ಯವಿಲ್ಲ. ಈ ಸಪ್ತ ಅನಿಷ್ಟಗಳನ್ನು ಬಿಟ್ಟ ಮಾನವ ಮಾತ್ರ ಅಂತರಂಗ ಮತ್ತು ಬಹಿರಂಗ ಶುದ್ಧಿಯನ್ನು ಹೊಂದುವನು. ದೇವರನ್ನು ಒಲಿಸುವುದಕ್ಕಾಗಿ ಈ ಸಪ್ತಶೀಲಗಳನ್ನು ಆಚರಿಸುವುದೊಂದೇ ಮಾರ್ಗವಾಗಿದೆ. ಈ ಸಪ್ತಶೀಲಗಳನ್ನು ಹೊಂದಲು ಮಾಡಬೇಕಾದುದು ಏನೂ ಇಲ್ಲ. ಈ ಎಲ್ಲವನ್ನೂ ಮಾಡದೆ ಇರುವುದರ ಮೂಲಕ ಸಾಧಿಸಬೇಕಾಗುತ್ತದೆ. ಅಂತೆಯೆ ಬಸವಣ್ಣನವರು ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯ ಬೇಡ, ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ ಎಂದು ತಿಳಿಸಿದ್ದಾರೆ. ಈ ಏಳು 'ಬೇಡ'ಗಳನ್ನು ಸಾಧಿಸಿದಾಗ ಮಾತ್ರ ಮಾನವನು ನಿಜಮಾನವನಾಗುವನು. ಆತನೇ ಶರಣ, ಆತನೇ ವಿಶ್ವಮಾನವ.

ಈ ವಚನದಲ್ಲಿ ಮೂರು ಹಂತಗಳಿವೆ. ಮೊದಲನೆಯ ಹಂತದಲ್ಲಿ ಏಳು ಕ್ರಿಯೆಗಳನ್ನು ಮಾಡದೆ ಇರುವುದನ್ನು ಸಾಧಿಸುವುದು. ಹಾಗೆ ಸಾಧನೆ ಮಾಡಿದ ನಂತರ ಎರಡನೆಯ ಹಂತದಲ್ಲಿ ಅಂತರಂಗ ಮತ್ತು ಬಹಿರಂಗ ಶುದ್ಧಿಯಾಗುವುದು. ಈ ಶುದ್ಧಿಯ ನಂತರ ಮೂರನೆಯ ಹಂತದಲ್ಲಿ ನಮ್ಮೊಳಗೆ ಅಂತಃಸಾಕ್ಷಿಯ ರೂಪದಲ್ಲಿರುವ ದೇವರು ಒಲಿಯುತ್ತಾನೆ. ಹೀಗೆ ದೇವರನ್ನು ಒಲಿಸಲು ಮೇಲೆ ಹೇಳಿದ ಏಳು ಕ್ರಿಯೆಗಳನ್ನು ಮಾಡದೆ ಇರುವುದೊಂದೇ ಮಾರ್ಗವಾಗಿದೆ. ಗುರು. ಲಿಂಗ. ಜಂಗಮ. ಪಾದೋದಕ (ಜ್ಞಾನೋದಕ) ಪ್ರಸಾದ. ವಿಭೂತಿ. ರುದ್ರಾಕ್ಷಿ. ಮಂತ್ರಗಳೆಂಬ ಅಷ್ಟಾವರಣಗಳು; ಭಕ್ತ. ಮಾಹೇಶ. ಪ್ರಸಾದಿ. ಪ್ರಾಣಲಿಂಗಿ. ಶರಣ.

ಐಕ್ಯ ಎಂಬ ಷಟ್‌ಸ್ಥಲಗಳು ಮತ್ತು ಲಿಂಗಾಚಾರ, ಶಿವಾಚಾರ, ಸದಾಚಾರ, ಗಣಾಚಾರ, ಭೃತ್ಯಾಚಾರಗಳೆಂಬ ಪಂಚಾಚಾರಗಳು ಆ ಏಳು ಕ್ರಿಯೆಗಳನ್ನು ಮಾಡದೆ ಇರುವುದರ ಮೂಲಕ ಸಪ್ತಶೀಲಗಳನ್ನು ಪಡೆದುಕೊಳ್ಳುವುದಕ್ಕೆ ಸಹಾಯಕವಾಗಿವೆ.

ಅಷ್ಟಾವರಣಗಳು ಮಾನವನನ್ನು ಐಹಿಕ ಆಸೆಗಳಿಂದ ರಕ್ಷಿಸುತ್ತವೆ. ಷಟ್‌ಸ್ಥಲಗಳು ಆ ಏಳು ಕ್ರಿಯೆಗಳನ್ನು ಮಾಡದೆ ಇರುವಂಥ ಶಕ್ತಿಯನ್ನು ಸಂಪಾದಿಸುವುದಕ್ಕಾಗಿ ಬೇಕಾದ ಮಾನಸಿಕ ಅಭ್ಯುದಯಕ್ಕಾಗಿ ಇವೆ. ಪಂಚಾಚಾರಗಳು ಆ ಸಪ್ತಶೀಲಗಳ ಅರಿವನ್ನು ಅಚರಣೆಯಲ್ಲಿ ತಂದು ಮಾನವ ನಿಜಮಾನವನಾಗಿದ್ದನ್ನು ದೃಢೀಕರಿಸುತ್ತವೆ. ಇಂಥ ನಿಜಮಾನವರಿಂದ ಮಾತ್ರ ಜಗತ್ತು ಸರ್ವೋದಯದ ಕಡೆಗೆ ಸಾಗಬಲ್ಲುದು ಇಲ್ಲದಿದ್ದರೆ ಅಭಿವೃದ್ಧಿಯ ಹೆಸರಿನಲ್ಲಿ ವಿನಾಶದ ಕಡೆ ಸಾಗುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ.

ಈ ಸಪ್ತಶೀಲಗಳು ಲೋಹಿಯಾ ಅವರ ಸಪ್ತಕ್ರಾಂತಿಗೆ ಪೂರಕವಾಗಿವೆ. ಲೋಹಿಯಾ ಅವರು ಈ ಸಪ್ತಶೀಲಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಐಹಿಕ ಆಸೆಗಳಿಂದ ಮುಕ್ತವಾಗಿದ್ದರು. ಆದರೆ ಬಸವಣ್ಣನವರಂತೆ 'ಸಕಲ ಜೀವಾತ್ಮರು ಐಹಿಕ ಜಗತ್ತಿನ ಪಾಲುದಾರರು' ಎಂದು ಪ್ರತಿಪಾದಿಸಿದರು. ಅಂತೆಯೆ ಅವರಿಗೆ 'ಸಪ್ತಕ್ರಾಂತಿ' ಕುರಿತು ಮಾತನಾಡಲು ಸಾಧ್ಯವಾಯಿತು. 'ಎಲ್ಲ ನನ್ನದು ಅನ್ನುವುದನ್ನು ಬಿಟ್ಟು, ಎಲ್ಲ ನಮ್ಮದು' ಎನ್ನುವುದೇ ಸಪ್ತಕ್ರಾಂತಿಯ ಮೂಲೋದ್ದೇಶವಾಗಿದೆ. ಇದನ್ನು ಸಾಧಿಸುವುದಕ್ಕಾಗಿ ಸಪ್ತಶೀಲಗಳ ಮೂಲಕ ಅಂತರಂಗ ಮತ್ತು ಬಹಿರಂಗದ ಶುದ್ಧಿಯಾಗಬೇಕು. ತದನಂತರ ಲೋಹಿಯಾರ ಸಪ್ತಕ್ರಾಂತಿಗೆ ಸಿದ್ಧರಾಗಬೇಕು. ಇಂಥ ಸಾಧನೆಗಾಗಿ ಹೋರಾಡುವಲ್ಲಿ ಬಸವಣ್ಣಣವರು ಹೇಳಿದ ಹಾಗೆ 'ಮರಣವೇ ಮಹಾನವಮಿ'ಯಾಗುತ್ತದೆ. ಸಮತೆಯ ಬದುಕಿಗಾಗಿ ಎಲ್ಲವನ್ನು ಎದುರಿಸುತ್ತ ಸಾಗುವಾತ ಮಾತ್ರ ಬಸವಣ್ಣನವರ ಶರಣನಾಗಬಲ್ಲ ಮತ್ತು ಲೋಹಿಯಾರ ಕ್ರಾಂತಿಕಾರಿಯಾಗಬಲ್ಲ.

ಸಪ್ತಕ್ರಾಂತಿ:

೧ ಸ್ತ್ರೀ–ಪುರುಷರ ನಡುವೆ ಸಮಾನತೆ.

೨ ವರ್ಣಭೇದವನ್ನು ಅನುಸರಿಸುವ ಅಸಮಾನತೆಯ ನಾಶ.

೩ ಹುಟ್ಟಿನ ಆಧಾರವನ್ನು ಅನುಸರಿಸುವ ಅಸಮಾನತೆ ನಿವಾರಣೆ.

೪ ವಿದೇಶಿ ದಬ್ಬಾಳಿಕೆಯ ಅಂತ್ಯವಾಗಿ ವಿಶ್ವ ಸರ್ಕಾರ ಸ್ಥಾಪನೆ.

೫ ವ್ಯಕ್ತಿಗತ ಸಂಪತ್ತಿನಿಂದ ಉದ್ಭವಿಸುವ ಆರ್ಥಿಕ ಅಸಮಾನತೆಯ ನಾಶ ಹಾಗೂ ಸಮಾನತೆಯ ಸಾಧನೆ.

೬ ಶಸ್ತ್ರಾಸ್ತ್ರಗಳ ಬಯಕೆಯ ಮೇಲಿನ ಹತೋಟಿ ಮತ್ತು ಸಾರ್ವಜನಿಕ ಕಾನೂನುಭಂಗ ತತ್ತ್ವದ ಪ್ರತಿಷ್ಠಾಪನೆ.

೭ ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ಆಗುವ ಅತಿಕ್ರಮಣದ ವಿರುದ್ಧ ಹೋರಾಟ.

೨೦ನೇ ಶತಮಾನದ ರಾಮಮನೋಹರ ಲೋಹಿಯಾ ಅವರು ಹೇಳಿದ ಈ ಸಪ್ತಕ್ರಾಂತಿಯ ಎಲ್ಲ ಅಂಶಗಳು ೧೨ನೇ ಬಸವಣ್ಣನವರ ಚಳವಳಿಯಲ್ಲಿ ಅಡಕವಾಗಿವೆ. ಬಸವಣ್ಣ ಮತ್ತು ಲೋಹಿಯಾ ಅವರ ಮಧ್ಯೆ ೮ ಶತಮಾನಗಳ ಅಂತರವಿದೆ. ಆದರೆ ಸಾಮಾಜಿಕ ಪರಿಸ್ಥಿತಿಯಲ್ಲಿ ಅವರಿಬ್ಬರ ಮಧ್ಯೆ ಅಂತರ ಕಂಡುಬರುತ್ತಿಲ್ಲ. ಮನುವಾದಿ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯು ಅವರಿಬ್ಬರ ಮಧ್ಯದ ಎಂಟುನೂರು ವರ್ಷಗಳನ್ನು ನುಂಗಿಹಾಕಿದೆ. ಹೀಗಾಗಿ ಅವರಿಬ್ಬರ ಮಧ್ಯೆ ಕಾಲದ ಅಂತರವಿದ್ದರೂ ಪರಿಸ್ಥಿತಿಯ ಅಂತರವಿಲ್ಲ. ಅವರಿಬ್ಬರೂ ನಮಗೆ ತೀರ ಹತ್ತಿರದವರಾಗುತ್ತಾರೆ ಏಕೆಂದರೆ ಅವರ ಮತ್ತು ನಮ್ಮ ಮಧ್ಯದ ಪರಿಸ್ಥಿತಿಯಲ್ಲೂ ಹೇಳಿಕೊಳ್ಳುವಂಥ ಅಂತರವಿಲ್ಲ. ಮನುವಾದದಿಂದಾಗಿ ಅನೇಕ ಸಹಸ್ರವರ್ಷಗಳಿಂದ ಭಾರತೀಯ ಸಮಾಜ ಸ್ಥಗಿತಗೊಂಡು ಅಸಹಿಷ್ಣುತೆಯ ದುರ್ವಾಸನೆಯಿಂದಾಗಿ ಅಸಹನೀಯವಾಗುತ್ತಿದೆ. ಕರ್ಮಸಿದ್ಧಾಂತದಿಂದಾಗಿ ಬಹುಪಾಲು ಭಾರತೀಯ ಆತ್ಮಗಳು ಜಾತಿಕತ್ತಲೆಯಲ್ಲಿ ಮುದುಡಿಹೋಗಿವೆ. ಈ ಆತ್ಮಗಳನ್ನು ಅರಳಿಸಲು ಜಗಜ್ಜ್ಯೋತಿ ಬಸವೇಶ್ವರರ ಮತ್ತು ಸಮಾಜವಾದಿ ಜ್ಯೋತಿ ಲೋಹಿಯಾ ಅವರ ಚಿಂತನೆಯ ಬೆಳಕಿನ ಅವಶ್ಯಕತೆ ಇದೆ. ಬಸವಣ್ಣನವರ ಚಿಂತನೆಗಳು ಅನುಭವ ಮತ್ತು ಅನುಭಾವದ ಲೋಕಗಳಿಗೆ ವಿಸ್ತರಿಸಿವೆ. ಆಶ್ಚರ್ಯವೆಂದರೆ ಅವರ ಅನುಭಾವವೆಂಬ ದರ್ಶನ ದೈನಂದಿನ ಬದುಕಿನ ಅನುಭವದ ಆಧಾರದ ಮೇಲೆ ನಿಂತಿದೆ. ಈ ದೈನಂದಿನ ಬದುಕನ್ನು ಎಲ್ಲ ತೆರನಾದ ಅನಿಷ್ಟಗಳಿಂದ ಸ್ವಚ್ಛಗೊಳಿಸುವುದೇ ಲೋಹಿಯಾರ ಉದ್ದೇಶವಾಗಿದೆ. ಹೀಗಾಗಿ ಬಸವಣ್ಣ ಮತ್ತು ಲೋಹಿಯಾ ಅವರ ಸಾಮಾಜಿಕ ಚಿಂತನೆಗಳಲ್ಲಿ ಸಾಮ್ಯತೆ ಮೂಡಿದೆ.

'ಇದೇಕೊ ಮರುಳ ಮಾನವಾ ಜಾತಿಯಲ್ಲಿ ಅಧಿಕನೆಂಬೆ?' ಎಂದು ಬಸವಣ್ಣನವರು ಪ್ರಶ್ನಿಸುವ ಮೂಲಕ ದೈನಂದಿನ ಬದುಕಿನ ದಾರಿಯಲ್ಲಿ ಬಿದ್ದ ಜಾತಿಗಲ್ಲುಗಳನ್ನು ತೆಗೆಯಲು ಶ್ರಮಿಸಿದ್ದಾರೆ. 'ಜಾತಿ ಒಂದು ದೇಶವನ್ನು ವಿಕಾರಗೊಳಿಸಿ ಬೌದ್ಧಿಕಶೂನ್ಯವನ್ನಾಗಿ ಮಾಡಿರುವುದಕ್ಕೆ ಭಾರತವೇ ಒಂದು ಉದಾಹರಣೆ' ಎಂದು ರಾಮಮನೋಹರ ಲೋಹಿಯಾ ತಿಳಿಸಿದ್ದಾರೆ.

ಜಾತಿಗಳು ಮಾನವರ ವ್ಯಕ್ತಿತ್ವವನ್ನು ಕುಬ್ಜಗೊಳಿಸಿವೆ. ಮೇಲ್ಜಾತಿಯವರು ತಾವು ದೊಡ್ಡವರು ಎಂದು ಕುಬ್ಜರಾಗಿದ್ದಾರೆ. ಕೆಳಜಾತಿಯವರು ತಾವು ಸಣ್ಣವರು ಎಂದು ಕುಬ್ಜರಾಗಿದ್ದಾರೆ.

ಲೋಹಿಯಾರ ಸಪ್ತಕ್ರಾಂತಿಯಲ್ಲಿ ಬಸವಣ್ಣನವರ ದರ್ಶನ:

ಲೋಹಿಯಾ ಅವರ 'ಸಪ್ತಕ್ರಾಂತಿ' ಅವರ ಚಿಂತನೆಗಳ ಸಾರವಾಗಿದೆ. ಈ ಸೂತ್ರದ ಒಳಗೆ ಬಸವಣ್ಣವರ ಜೀವನದರ್ಶನ ಅಡಕವಾಗಿದೆ. ಇದೊಂದು ಅಪೂರ್ವ ಸಮಾಗಮ. ಎಲ್ಲ ದೃಷ್ಟಿಯಿಂದಲೂ ಈ ಮಹಾನ್ ಚೇತನಗಳ ಚಿಂತನಾ ಕ್ರಮಗಳು ನವಭಾರತದ ನಿರ್ಮಾಣಕ್ಕೆ ಬುನಾದಿಯಾಗಿವೆ.

ಇಷ್ಟಲಿಂಗ ಪೂಜೆಯ ಫಲದ ಕುರಿತು ಬಸವಣ್ಣನವರು ಬಹು ಮಾರ್ಮಿಕವಾದ ಈ ವಚನವನ್ನು ರಚಿಸಿದ್ದಾರೆ.

ಲಿಂಗವ ಪೂಜಿಸಿ ಫಲವೇನಯ್ಯಾ,
ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ.
ಲಿಂಗವ ಪೂಜಿಸಿ ಫಲವೇನಯ್ಯಾ,
ಕೂಡಲಸಂಗಮದೇವರ ಪೂಜಿಸಿ
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ?

ಎಂದು ಬಸವಣ್ಣನವರು ಹೇಳುವ ಮೂಲಕ ಅರಿವೆಂಬುದು ಲಿಂಗಪೂಜಾ ಫಲ ಎಂದು ಸಾರಿದ್ದಾರೆ. ಇಲ್ಲಿ ಅರಿವು ಎನ್ನುವುದು ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದ ಮಾಡದೆ ಇರುವ ಮನಸ್ಥಿತಿ. ಸಮರತಿ (ಲಿಂಗಭೇದ ಇಲ್ಲದುದು), ಸಮಕಳೆ (ವರ್ಣಭೇದ ಇಲ್ಲದುದು) ಸಮಸುಖ (ವರ್ಗಭೇದ ಇಲ್ಲದುದು) ಎಂಬ ಮೂರು ಪದಗಳನ್ನು ಅರ್ಥ ಮಾಡಿಕೊಂಡಾಗ ಮಾತ್ರ ಇಷ್ಟಲಿಂಗ ಪೂಜೆಯ ನಿಜರೂಪ ಗೊತ್ತಾಗುವುದು. ಇಷ್ಟಲಿಂಗ ಪೂಜೆ ಎಂಬುದು ಇಂಥ ಅರಿವಿನ ಧ್ಯಾನವಾಗಿದೆ ಮತ್ತು ನದಿಯೊಳಗೆ ನದಿ ಬೆರೆಯುವ ಹಾಗೆ ನಾವು ಜಾತಿ ಮತ ಧರ್ಮಗಳನ್ನು ಮೀರುತ್ತ ಮಾನವ ಕುಲ ಒಂದಾಗುವುದರ ಕಲ್ಪನೆ ಮೂಡಿಸುತ್ತದೆ.

ಇಂಥ ಬಸವತತ್ತ್ವದ ಹಿನ್ನೆಲೆಯಲ್ಲಿ ಲೋಹಿಯಾರ 'ಸಪ್ತಕ್ರಾಂತಿ'ಯನ್ನು ನೋಡಬೇಕಾಗಿದೆ.

ಸ್ತ್ರೀ–ಪುರುಷರ ನಡುವೆ ಸಮಾನತೆ:

'ಸಮರತಿ'ಯು ಬಸವತತ್ತ್ವದ ಅವಿಭಾಜ್ಯ ಅಂಗವಾಗಿದೆ. ದೈನಂದಿನ ಬದುಕಿನ ಹೆಣ್ಣು ಗಂಡಿನ ಮಧ್ಯದ ಸಮತೆಯ ಸಂಬಂಧವನ್ನು ಸೂಚಿಸುವ ಈ ಪದ, ಅನುಭಾವದ ನೆಲೆಯಲ್ಲಿ ಜೀವ–ದೇವರ ಸಂಬಂಧ ಕುರಿತ ಲಿಂಗಾಂಗ ಸಾಮರಸ್ಯಕ್ಕೂ ಇದು ಅನ್ವಯವಾಗುತ್ತದೆ. ಹೀಗೆ ಎಲ್ಲದರಲ್ಲೂ ಸಮಾನತೆ ಕಾಣುವುದೇ ಬಸವತತ್ತ್ವವಾಗಿದೆ.

'ಹೊಲೆಗಂಡಲ್ಲದೆ ಪಿಂಡದ ನೆಲೆಗಾಶ್ರಯವಿಲ್ಲ; ಜಲಬಿಂದುವಿನ ವ್ಯವಹಾರ ಒಂದೇ.' ಎಂದು ಬಸವಣ್ಣನವರು ಜೈವಿಕ ಕ್ರಿಯೆಯನ್ನು ಉದಾಹರಿಸುವ ಮೂಲಕ

ಹೆಣ್ಣು ಗಂಡಿನ ಮಧ್ಯೆ ಸಮಾನತೆಯು ನೈಸರ್ಗಿಕವಾಗಿಯೇ ಇದೆ. ಆದರೆ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ ಹೆಣ್ಣು ಅಸಮಾನತೆಯನ್ನು ಅನುಭವಿಸುತ್ತಾಳೆ. ಬಸವಣ್ಣನವರ ಹೋರಾಟ ಲಿಂಗಭೇದ ನೀತಿಯ ವಿರುದ್ಧವೂ ಇದೆ.

'ತನ್ನೊಡನೆ ಮಲಗಿರ್ದ ಸತಿಯನೆಬ್ಬಿಸದೆ ಶಿವಲಿಂಗಕ್ಕೆರೆವ ಸದ್ಭಕ್ತನ ಶ್ರೀಪಾದವ ತೋರಿ ಬದುಕಿಸಯ್ಯಾ ಕೂಡಲಸಂಗಮದೇವಾ' ಎಂದು ಬಸವಣ್ಣನವರು ಹೇಳುವಲ್ಲಿ ಲಿಂಗಪೂಜೆಯಲ್ಲಿ ಕೂಡ ಮಹಿಳೆಯರಿಗೆ ತೊಂದರೆಕೊಡಬಾರದು ಎಂದು ಸೂಚಿಸಿದ್ದಾರೆ. 'ಶರಣಸತಿ, ಲಿಂಗಪತಿ' ಎಂದು ಬಸವಣ್ಣನವರು ಹೇಳುವಲ್ಲಿ 'ದೇವರ ಮುಂದೆ ಹೆಣ್ಣು ಗಂಡು ಸಮಾನ' ಎಂಬ ಭಾವ ಅಡಗಿದೆ.

ವರ್ಣಭೇದವನ್ನು ಅನುಸರಿಸುವ ಅಸಮಾನತೆಯ ನಾಶ:

ವರ್ಣಭೇದವು ಕರ್ಮ ಸಿದ್ಧಾಂತದ ಕುತಂತ್ರವಾಗಿದೆ. ಜಾತಿ ಮತ್ತು ವರ್ಣಭೇದದ ವಿರುದ್ಧ ಬಸವಣ್ಣನವರು ಬಹು ಕಠಿಣ ನಿಲವನ್ನು ತಾಳಿದ್ದಾರೆ. 'ಸಮಕಳೆ' ಎಂದು ಬಸವಣ್ಣನವರು ಹೇಳುವಲ್ಲಿ ಬ್ರಹ್ಮಕಳೆ (ಬ್ರಹ್ಮತೇಜಸ್), ಕ್ಷಾತ್ರಕಳೆ (ಕ್ಷಾತ್ರತೇಜಸ್) ಎಂದು ಹೇಳುವುದು ಸತ್ಯಕ್ಕೆ ದೂರವಾದುದು. ಎಲ್ಲ ಮಾನವರಿಗೆ ಇರುವಂಥದ್ದು ಮಾನವಕಳೆಯೊಂದೇ ಎಂದು ಬಸವಣ್ಣನವರು ಪ್ರತಿಪಾದಿಸಿದ್ದಾರೆ.

"ಸಪ್ತಧಾತು ಸಮಂ ಪಿಂಡಂ ಸಮಯೋನಿ ಸಮುದ್ಭವಂ ಆತ್ಮಜೀವ ಸಮಾಯುಕ್ತಂ ವರ್ಣಾನಾಂ ಕಿಂ ಪ್ರಯೋಜನಂ?" ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ನಾಲ್ಕು ವರ್ಣಗಳಲ್ಲಿ ಮೊದಲಿಗರಾದ ಬ್ರಾಹ್ಮಣರು ವಿರಾಟ್ ಪುರುಷನ ಬಾಯಿಯಿಂದ, ಎರಡನೆಯವರಾದ ಕ್ಷತ್ರಿಯರು ಭುಜದಿಂದ, ಮೂರನೆಯವರಾದ ವೈಶ್ಯರು ತೊಡೆಯಿಂದ ಮತ್ತು ಕೊನೆಯವರಾದ ಶೂದ್ರರು ಪಾದದಿಂದ ಜನಿಸಿಲ್ಲ. ಎಲ್ಲರೂ ಯೋನಿಜರೇ ಆಗಿದ್ದಾರೆ. ಎಲ್ಲ ಜೀವರುಗಳ ಹುಟ್ಟಿನ ಕ್ರಮ ಒಂದೇ ಆಗಿದೆ ಎಂದು ಬಸವಣ್ಣನವರು ಸತ್ಯದ ಪ್ರತಿಪಾದನೆ ಮಾಡಿದ್ದಾರೆ. ಆ ಮೂಲಕ ವರ್ಣವ್ಯವಸ್ಥೆಯನ್ನು ಅಲ್ಲಗಳೆದಿದ್ದಾರೆ. "ವೇದಾತೀತ, ಷಡುವರ್ಣಾತೀತ, ಅಷ್ಟತ್ರಿಂಶತ್ಕಳಾತೀತ, ವ್ಯೋಮಾತೀತ ಕೂಡಲಸಂಗಮದೇವ" ಎಂದು ಹೇಳುವ ಮೂಲಕ ತಮ್ಮ ಪರಿಕಲ್ಪನೆಯ ದೇವರು, ವೇದಗಳು ಮತ್ತು ಅವು ಹುಟ್ಟುಹಾಕಿದ ವರ್ಣಗಳಿಂದ ಅತೀತನಾಗಿದ್ದಾನೆ ಎಂದು ಸ್ಪಷ್ಟಪಡಿಸಿದ್ದಾರೆ. "ಶಿವಭಕ್ತಿಯೆ ಅಂಗವಾದ ಲಿಂಗೈಕ್ಯ ಲಿಂಗಪೂಜಕರಿಗೆ ಪೂರ್ವವರ್ಣಾಶ್ರಮಾದಿ ಸೂತಕವಿಲ್ಲ, ಕೂಡಲಸಂಗಯ್ಯಾ" ಎಂದು ಬಸವಣ್ಣನವರು ತಿಳಿಸಿದ್ದಾರೆ.

ಹುಟ್ಟಿನ ಆಧಾರವನ್ನು ಅನುಸರಿಸುವ ಅಸಮಾನತೆ ನಿವಾರಣೆ:

"ಆವ ಕುಲವಾದಡೇನು ಶಿವಲಿಂಗವಿದ್ದವನೆ ಕುಲಜನು. ಕುಲವನರಸುವರೆ ಶರಣರಲ್ಲಿ, ಜಾತಿ ಸಂಕರವಾದಬಳಿಕ?" ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ.

ವರ್ಣಗಳನ್ನು ಮತ್ತೆ ಮತ್ತೆ ಜಾತಿ ಉಪಜಾತಿಗಳಲ್ಲಿ ಭಾಗ ಮಾಡುತ್ತ ಬಹುಸಂಖ್ಯಾತ ಕಾಯಕ ಜೀವಿಗಳು ಒಂದಾಗದಂತೆ ನೋಡಿಕೊಂಡಿರುವ ವೈದಿಕ ಸಿದ್ಧಾಂತವನ್ನು ತಿರಸ್ಕರಿಸಿದ್ದಾರೆ. 'ಕಾಯಕವಾವುದೆಂದು ಕೇಳ್ದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ನಿಮ್ಮ ರಾಣಿವಾಸದಾಣೆ ಕೂಡಲಸಂಗಮದೇವಾ' ಎಂದು ಹೇಳುವ ಮೂಲಕ ಎಲ್ಲ ಕಾಯಕಗಳು ಸಮಾನ ಎಂಬುದನ್ನು ಸೂಚಿಸಿದ್ದಾರೆ. ಆ ಮೂಲಕ ಕಾಯಕಗಳಿಗೆ ಅಂಟಿಕೊಂಡ ಜಾತಿಗಳನ್ನು ಅಲ್ಲಗಳೆದಿದ್ದಾರೆ.

"ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ, ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ, ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೆ ಯೋಗ್ಯ" ಎಂದು ಬಸವಣ್ಣನವರು ತಿಳಿಸಿದ್ದಾರೆ. ಇಷ್ಟಲಿಂಗ ದೀಕ್ಷೆಯಾದ ಮೇಲೆ ರಾಜಪುತ್ರನೂ ಅಷ್ಟೇ, ದಾಸಿ ವೇಶ್ಯೆಯರ ಪುತ್ರನೂ ಅಷ್ಟೇ ಎಂದು ಪ್ರತಿಪಾದಿಸಿದ್ದಾರೆ. ಹೀಗೆ ಹುಟ್ಟಿನ ಆಧಾರದಿಂದ ಬರುವ ಜಾತಿಗಳನ್ನು ವಿನಾಶ ಮಾಡುವುದರ ಮೂಲಕ ಅವುಗಳಿಂದಾಗುವ ಅಸಮಾನತೆಯನ್ನು ನಿವಾರಣೆ ಮಾಡುವಂಥ ಸರ್ವ ಸಮಾನತೆಯ 'ಶರಣಸಂಕುಲ' ಎಂಬ ನವಸಮಾಜವನ್ನು ಬಸವಣ್ಣನವರು ಸೃಷ್ಟಿಸಿದರು.

ವ್ಯಕ್ತಿಗತ ಸಂಪತ್ತಿನಿಂದ ಉದ್ಭವಿಸುವ ಆರ್ಥಿಕ ಅಸಮಾನತೆಯ ನಾಶ ಹಾಗೂ ಸಮಾನತೆಯ ಸಾಧನೆ:

ಕಾಯಕ, ಪ್ರಸಾದ, ದಾಸೋಹ ಎಂಬ ಮೂರು ಮುಖ್ಯ ಆಧಾರ ಸ್ತಂಭಗಳ ಮೇಲೆ ವಿಶ್ವಕ್ಕೇ ಮಾದರಿಯಾದ ಬಸವಣ್ಣನವರ ಅರ್ಥಶಾಸ್ತ್ರ ನಿಂತಿದೆ. ಕಾಯಕ ಎಂಬುದು ಉದ್ದಂಡ ವೃತ್ತಿಯಲ್ಲ. ನಿಸರ್ಗ ಸಮತೋಲನವನ್ನು ಕಾಪಾಡುತ್ತ, ಭೂಮಿಯನ್ನು ಬದುಕಲು ಹೆಚ್ಚು ಯೋಗ್ಯ ಮಾಡುತ್ತ, ಸಕಲಜೀವಾತ್ಮರಿಗೆ ಲೇಸನೆ ಬಯಸುತ್ತ, ಸಾಮಾಜಿಕ ಕಾಳಜಿಯೊಂದಿಗೆ ಸ್ವಾವಲಂಬಿಯಾಗುತ್ತ ವ್ಯಕ್ತಿತ್ವವಿಕಸನಕ್ಕೆ ಕಾರಣವಾಗುವ ಉತ್ಪಾದನಾ ಕ್ರಿಯೆಗೆ ಶರಣರು 'ಕಾಯಕ' ಎಂದು ಕರೆದಿದ್ದಾರೆ. ಜೀವಹತ್ಯೆ ಮಾಡುವ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸುವುದು ಕಾಯಕವಲ್ಲ. ನಿಸರ್ಗವನ್ನು ಲೂಟಿ ಮಾಡುವುದು ಕಾಯಕವಲ್ಲ. ಶೋಷಣೆ ಮಾಡುವುದು ಕಾಯಕವಲ್ಲ. ಕಾಯಕದ ಉದ್ದೇಶ ಸ್ವಾವಲಂಬಿಯಾಗುತ್ತ, ಸ್ವಾವಲಂಬಿ ಸಮಾಜ ಸೃಷ್ಟಿಸುವುದಾಗಿದೆ. ಯುದ್ಧಗಳು, ಜಾತಿಮದ, ಕುಲಮದ, ಪುರುಷ ಪ್ರಾಧಾನ್ಯ ಮತ್ತು ಜೀವಜಾಲಸಮತೋಲನವನ್ನು ಹದಗೆಡಿಸುವ ಕೃತ್ಯಗಳು ಸರ್ವೋದಯಕ್ಕೆ ಮಾರಕಗಳಾಗಿವೆ.

ನಾನು ಆರಂಬವ ಮಾಡುವೆನಯ್ಯಾ, ಗುರುಪೂಜೆಗೆಂದು
ನಾನು ಬೆವಹಾರವ ಮಾಡುವೆನಯ್ಯಾ, ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನಯ್ಯಾ, ಜಂಗಮದಾಸೋಹಕ್ಕೆಂದು,
ನಾನಾವಾವ ಕರ್ಮಂಗಳ ಮಾಡಿದಡೆಯು

ಆ ಕರ್ಮಫಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು.
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು,
ನಿಮ್ಮ ಸೊಮ್ಮಿಂಗೆ ಸಲಿಸುವೆನು,
ನಿಮ್ಮಾಣೆ ಕೂಡಲಸಂಗಮದೇವಾ.

ಬಸವಣ್ಣನವರ ಈ ವಚನ ದಾರಿತಪ್ಪಿದ ಇಂದಿನ ಜಾಗತಿಕ ವ್ಯವಸ್ಥೆಗೆ ದಾರಿದೀಪವಾಗಿದೆ. ಮಾನವರು ಉತ್ಪಾದನೆಯಲ್ಲಿ ತೊಡಗಬೇಕಾಗಿರುವುದು ಕೇವಲ ತಮ್ಮ ಮತ್ತು ತಮ್ಮ ಕುಟುಂಬದ ದೈನಂದಿನ ಬದುಕಿನ ನಿರ್ವಹಣೆಗಾಗಿ ಅಲ್ಲ. ಸಂಪತ್ತನ್ನು ಕ್ರೋಡೀಕರಿಸುವುದಕ್ಕೆ ಅಲ್ಲ.

ಕೃಷಿಯು ಮಾನವ ಸಂಸ್ಕೃತಿಯ ತಾಯಿಬೇರಾಗಿದೆ. ಜ್ಞಾನದ ಮೂಲವಾಗಿದೆ. ಆದ್ದರಿಂದ ಜ್ಞಾನದ ಪೂಜೆಗಾಗಿ ತಾವು ಕೃಷಿಕಾರ್ಯದಲ್ಲಿ ತೊಡಗುವುದಾಗಿ ಬಸವಣ್ಣನವರು "ನಾನು ಆರಂಬವ ಮಾಡುವೆನಯ್ಯಾ, ಗುರುಪೂಜೆಗೆಂದು" ಹೇಳಿದ್ದಾರೆ.

ಲಿಂಗತತ್ತ್ವವೆಂಬ ನೀತಿಯ ಎಚ್ಚರಿಕೆಯೊಂದಿಗೆ ನಾನು ವ್ಯವಹಾರ ಮಾಡುತ್ತೇನೆ ಎಂದು ತಿಳಿಸಿದ್ದಾರೆ. ಸರ್ವ ಸಮಾನತೆಯನ್ನು ಸಾರುವ ಲಿಂಗತತ್ತ್ವವನ್ನು ಆಚರಣೆಯಲ್ಲಿ ತರುವುದಕ್ಕಾಗಿ ತಮ್ಮ ವ್ಯವಹಾರದಿಂದ ಬರುವ ಆದಾಯವನ್ನು ಬಳಸುವುದಾಗಿ ಸೂಚನೆ ನೀಡಿದ್ದಾರೆ. "ನಾನು ಬೆವಹಾರವ ಮಾಡುವೆನಯ್ಯಾ, ಲಿಂಗಾರ್ಚಣೆಗೆಂದು" ಎಂದು ಹೇಳುವಲ್ಲಿ ಈ ಧ್ವನ್ಯರ್ಥ ಅಡಗಿದೆ.

ತಾವು ನಿಭಾಯಿಸುತ್ತಿರುವ ಕಲ್ಯಾಣರಾಜ್ಯದ ಪ್ರಧಾನಿ ಹುದ್ದೆಯನ್ನು 'ಪರಸೇವೆ' ಎಂದು ಗುರುತಿಸಿದ್ದಾರೆ. ಬಿಜ್ಜಳನ ಆಸ್ಥಾನದಲ್ಲಿ ಪರಸೇವೆ ಮಾಡುವ ಉದ್ದೇಶ ಸಮಾಜ ಸೇವೆ (ಜಂಗಮದಾಸೋಹ) ಆಗಿದೆ. ಈ ಮೂರು ಪ್ರಕಾರದ ಕಾಯಕಗಳಲ್ಲಿ ಸಮಾಜವೇ ಪ್ರಮುಖ ಸ್ಥಾನ ಪಡೆಯುತ್ತದೆ. ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುವ ಕ್ರಮವನ್ನು ಇಲ್ಲಿ ಸೂಚಿಸಲಾಗಿದೆ.

ವಚನದ ಎರಡನೆಯ ಭಾಗದಲ್ಲಿ "ನಾನಾವಾವ ಕರ್ಮಂಗಳ ಮಾಡಿದಡೆಯು ಆ ಕರ್ಮಫಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು." ಎಂದು ಬಸವಣ್ಣನವರು ತಿಳಿಸುತ್ತಾರೆ. ಇಲ್ಲಿ 'ಕಾಯಕ' ಪದ ಬಳಸದೆ 'ಕರ್ಮ' ಶಬ್ದ ಬಳಸಿದ್ದಾರೆ. "ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ" (ನಿನಗೆ ಕರ್ಮ ಮಾಡುವುದರಲ್ಲಿ ಮಾತ್ರವೇ ಅಧಿಕಾರ, ಫಲದಲ್ಲಿ ಎಂದಿಗೂ ಇಲ್ಲ.) ಎಂಬ ಭಗವದ್ಗೀತೆಯ ಮಾತನ್ನು ಬಸವಣ್ಣನವರು ಅಲ್ಲಗಳೆದಿದ್ದಾರೆ. ನಾನು ಯಾವುದೇ ಕೆಲಸ ಮಾಡಿದರೂ ಅದರ ಪ್ರತಿಫಲವನ್ನು ಪಡೆದೇ ತೀರುವೆನೆಂಬ ದೃಢನಿರ್ಧಾರದ ಭಾವ ಇಲ್ಲಿದೆ. ಕಾಯಕಜೀವಿಗಳನ್ನು ವಿಶ್ವದಲ್ಲೇ ಪ್ರಥಮ ಬಾರಿಗೆ ಸಂಘಟಿಸಿದ ಬಸವಣ್ಣನವರಿಗೆ ಅವರ ಹಕ್ಕುಗಳ ಬಗ್ಗೆ ಮಾತನಾಡುವುದು ಸಹಜವೇ ಆಗಿದೆ.

ಆದರೆ ಫಲಭೋಗದ ಸದುಪಯೋಗದ ಕ್ರಮವನ್ನು ವಚನದ ಮೂರನೇ ಭಾಗದಲ್ಲಿ ತಿಳಿಸಿದ್ದಾರೆ.

"ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು, ನಿಮ್ಮ ಸೊಮ್ಮಿಂಗೆ ಸಲಿಸುವೆನು ನಿಮ್ಮಾಣೆ ಕೂಡಲಸಂಗಮದೇವಾ." ಎಂದು ಹೇಳುವಲ್ಲಿ 'ಫಲಭೋಗ' ಎಂಬುದು ಮಿಗುತಾಯ ಮೌಲ್ಯದ ರೂಪ ತಾಳುತ್ತ ವ್ಯಕ್ತಿಗತ ಸಂಪತ್ತಾಗದೆ ಸಾಮಾಜಿಕ ಸಂಪತ್ತಾಗಿ ಪರಿವರ್ತನೆಗೊಳ್ಳಬೇಕು ಎಂಬ ಚಿಂತನೆಯನ್ನು ಈ ಸಾಲು ಒಳಗೊಂಡಿದೆ. ಆ ಕಾಲದ ಜಗತ್ತಿಗೆ ಹೊಸದಾದ ಈ ಚಿಂತನೆ ಇಂದು ವಿಶ್ವರಕ್ಷಣೆಯ ಸೂತ್ರವಾಗಿದೆ. ವ್ಯಕ್ತಿಗತ ಸಂಪತ್ತಿನಿಂದ ಉದ್ಭವಿಸುವ ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸುತ್ತ, ಸಮಾನತೆಯನ್ನು ಸಾಧಿಸುತ್ತ, ಮಿಗುತಾಯ ಮೌಲ್ಯವನ್ನು 'ಶಿವನ ಸೊಮ್ಮು' ಎಂಬ ಸಾಮಾಜಿಕ ನಿಧಿಯಾಗಿ ಪರಿವರ್ತಿಸುವ ಮೂಲಕ ದೇವರಿಂದ ಪಡೆದದ್ದನ್ನು ದೇವರ ಕಾಣುವ ರೂಪವಾದ ಸಮಾಜಕ್ಕೆ ಅರ್ಪಿಸುವ ಸೂತ್ರ ಈ ವಾಕ್ಯದಲ್ಲಿದೆ.

ಶರಣ ಸಂಕುಲದಲ್ಲಿ ಶರಣರು ಸತ್ಯಶುದ್ಧ ಕಾಯಕ ಮಾಡುತ್ತಿದ್ದರು. ಕಾಯಕ ಮಾಡಿ ಬಂದುದನ್ನು ದೇವರ ಪ್ರಸಾದ ಎಂದು ಸ್ವೀಕರಿಸುತ್ತಿದ್ದರು. ದೇವರ ಪ್ರಸಾದವೆಂದು ಭಾವಿಸಿದ ಮೇಲೆ ಹಿತಮಿತವಾಗಿ ಬಳಸಲೇ ಬೇಕು. ಹೀಗೆ ಕಾಯಕ ಎಂಬುದು ಯೋಗ್ಯ ಉತ್ಪಾದನೆಯಾದರೆ ಪ್ರಸಾದವು ಸದ್ಬಳಕೆಯನ್ನು ಸೂಚಿಸುತ್ತದೆ. ನಂತರ ಬರುವ 'ದಾಸೋಹ' ಎಂಬುದು ಯೋಗ್ಯ ಸಾಮಾಜಿಕ ವಿತರಣೆಯಾಗಿದೆ. ಇದೆಲ್ಲ ಸಮಾಜವೇ ದೇವರು (ಜಂಗಮಲಿಂಗ) ಎಂಬ ನೈತಿಕ ಮತ್ತು ಆನುಭಾವಿಕ ಜವಾಬ್ದಾರಿಯಿಂದ ಮಾಡುವಂತದ್ದಾಗಿದೆ.

ವೈಯಕ್ತಿಕ ಸ್ವಾತಂತ್ರ್ಯದ ಮೇಲೆ ಆಗುವ ಅತಿಕ್ರಮಣದ ವಿರುದ್ಧ ಹೋರಾಟ:

'ಕಲ್ಯಾಣ ಕ್ರಾಂತಿ' ಎಂದು ಕರೆಯಿಸಿಕೊಳ್ಳುವ ಕಲ್ಯಾಣಹತ್ಯಾಕಾಂಡದಲ್ಲಿ ಶರಣರ ನರಮೇಧವಾಯಿತು. ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆಯ ವಿರುದ್ಧ ಶರಣರು ಪ್ರಬಲ ಚಳವಳಿ ನಡೆಸಿದ್ದರು. ತಮ್ಮದೇ ಆದ ಶರಣಸಂಕುಲ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದರು. ಕಾಯಕದ ಮೂಲಕ ಊರ ಮುಂದೆ ಹಾಲಹಳ್ಳ ಹರಿಯುವಂತೆ ಮಾಡಿದ್ದರು. ಅವರಿಗೆ ಬಿಜ್ಜಳನ ಭಂಡಾರದ ಅವಶ್ಯಕತೆ ಇದ್ದಿದ್ದಿಲ್ಲ. "ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು ... .. ಬಿಜ್ಜಳನ ಭಂಡಾರವೆನಗೇಕಯ್ಯಾ' ಎಂದು ಬಸವಣ್ಣನವರು ಹೇಳಿದ್ದಾರೆ. ಶರಣಸಂಕುಲವು ಜಾತಿ ಮತ್ತು ವರ್ಗರಹಿತ ಸ್ವಯಂಪರಿಪೂರ್ಣ ಸಮಾಜವಾಗಿತ್ತು. 'ಕೂಡಲಸಂಗನ ಶರಣರು ಸ್ವತಂತ್ರಧೀರರು' ಎಂದು ಬಸವಣ್ಣನವರು ಹೇಳುವಷ್ಟರಮಟ್ಟಿಗೆ ಕಾಯಕಜೀವಿಗಳು ಸ್ವಾತಂತ್ರ್ಯ ಮತ್ತು ಸಮಾನತೆ ಅನುಭವಿಸುವುದನ್ನು ಗಮನಿಸಿದ ಬಿಜ್ಜಳನ ರಾಜ್ಯಶಕ್ತಿ ಗಾಬರಿಗೊಂಡಿತು. ಸಮಗಾರ ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆ ವಿಲೋಮ ವಿವಾಹವಾದ ಕಾರಣ ಮನುಧರ್ಮಶಾಸ್ತ್ರಕ್ಕೆ ವಿರುದ್ಧವಾದುದು ಎಂದು

ಪುರೋಹಿತಶಾಹಿಗಳು ಗುಲ್ಲೆಬ್ಬಿಸಿದರು. ಬಿಜ್ಜಳನ ಶಸ್ತ್ರಗಳು ವೈದಿಕರ ಶಾಸ್ತ್ರಗಳ ಮಾತು ಕೇಳಿದವು. ಶರಣರ ಮೇಲೆ ದಾಳಿ ಮಾಡಿದವು. ಕೊಲೆ ಸುಲಿಗೆ ಮೂಲಕ ಇಡೀ ಶರಣಸಂಕುಲ ವ್ಯವಸ್ಥೆಯನ್ನು ಹಾಳುಗೆಡವಿದವು. ಶರಣರು ತಮ್ಮ ಹಕ್ಕುಗಳ ಪ್ರತಿಪಾದನೆಗಾಗಿ ಅನ್ಯಾಯದ ವಿರುದ್ಧ ಹೋರಾಡುತ್ತ ಹುತಾತ್ಮರಾದರು.

ಶಸ್ತ್ರಾಸ್ತ್ರಗಳ ಬಯಕೆಯ ಮೇಲಿನ ಹತೋಟಿ ಮತ್ತು ಸಾರ್ವಜನಿಕ ಕಾನೂನುಭಂಗ ತತ್ತ್ವದ ಪ್ರತಿಷ್ಠಾಪನೆ:

ಮನುಧರ್ಮದ ಕಾನೂನನ್ನು ಭಂಗಗೊಳಿಸುವುದೇ ಶರಣ ಚಳವಳಿಯ ಬಹುಮುಖ್ಯ ಉದ್ದೇಶವಾಗಿತ್ತು. ಕರ್ಮಸಿದ್ಧಾಂತವೆಂಬ ಕ್ರೂರ ತತ್ತ್ವದ ಮೇಲೆ ಜನಸಮುದಾಯವನ್ನು ಛಿದ್ರ ಛಿದ್ರಗೊಳಿಸಿ ತುಳಿತಕ್ಕೊಳಗಾದ ಬಹುಜನರನ್ನು 'ಇದು ನಿಮ್ಮ ಹಿಂದಣ ಜನ್ಮದ ಕರ್ಮ' ಎಂದು ಹೇಳುತ್ತ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಬರುವುದರಲ್ಲೇ ವರ್ಣ, ಜಾತಿ, ಅಸ್ಪೃಶ್ಯತೆಯಿಂದ ಕೂಡಿದ ಮನುವಿನ ಕಾನೂನು ತಲ್ಲೀನವಾಗಿತ್ತು. ಶರಣರು ಈ ಅನ್ಯಾಯದ ವಿರುದ್ಧ ಹೋರಾಡಿದರು.

ನಟುವರ ಜನಾಂಗದಿಂದ ಬಂದ ಮಹಾಜ್ಞಾನಿ ಅಲ್ಲಮಪ್ರಭುಗಳನ್ನು ಬಸವಣ್ಣನವರು ಅನುಭವ ಮಂಟಪದ ಶೂನ್ಯಸಿಂಹಾಸನಾಧೀಶ್ವರರನ್ನಾಗಿಸಿದರು. ಸಮಗಾರ ಮತ್ತು ಬ್ರಾಹ್ಮಣ ಮೂಲದಿಂದ ಬಂದ ಲಿಂಗವಂತರ ಮಕ್ಕಳ ಮದುವೆ ಮಾಡುವ ಮೂಲಕ ಮನುವಿನ ಕಾನೂನಿಗೆ ಇನ್ನೊಂದು ಭಾರಿ ಆಘಾತವನ್ನುಂಟು ಮಾಡಿದರು. ಚಳವಳಿಯ ಉದ್ದಕ್ಕೂ ಶಾಂತಿ ಮತ್ತು ಅಹಿಂಸೆಯನ್ನು ಪ್ರತಿಪಾದಿಸುವ ಮೂಲಕ ಶಸ್ತ್ರಾಸ್ತ್ರಗಳ ರಾಜ್ಯಶಕ್ತಿಯನ್ನು ವಿರೋಧಿಸಿದರು.

ವಿದೇಶಿ ದಬ್ಬಾಳಿಕೆಯ ಅಂತ್ಯವಾಗಿ ವಿಶ್ವ ಸರ್ಕಾರ ಸ್ಥಾಪನೆ:

ಶರಣರ ಪರಿಪೂರ್ಣ ಸಮಾಜವು ರಾಜ್ಯಶಕ್ತಿ ನಿರ್ನಾಮದ ಉದ್ದೇಶವನ್ನು ಹೊಂದಿತ್ತು. ಆ ಕಾರಣದಿಂದಲೇ ಶರಣರು ರಾಜ್ಯಶಕ್ತಿಯ ಸಹಾಯವಿಲ್ಲದೆ ಬದುಕುವ ಕಾಯಕ ವ್ಯವಸ್ಥೆಯನ್ನು ರೂಪಿಸಿಕೊಂಡಿದ್ದರು. ಶರಣರ ಸ್ವತಂತ್ರ ಮನೋಭಾವ ವ್ಯವಸ್ಥೆಗೆ ವಿರುದ್ಧವಾಗಿತ್ತು. ಶೂನ್ಯಸಿಂಹಾಸನದ ಮುಂದೆ ಮನುಧರ್ಮ ಸಿಂಹಾಸನ ಹಾಗೂ ರಾಜಸಿಂಹಾಸನ ಕಳೆಗುಂದುವಂತೆ ಜನಸಮುದಾಯವೆಲ್ಲ ಬಸವಣ್ಣನವರ ಅನುಯಾಯಿಗಳಾಗುವ ರೀತಿಯು ರಾಜ್ಯಶಕ್ತಿಯನ್ನು ಧೃತಿಗೆಡಿಸಿತು. ದಬ್ಬಾಳಿಕೆಯ ಮೂಲಗಳಾದ ರಾಜ್ಯಶಕ್ತಿ, ದೇವಾಲಯ ಶಕ್ತಿ, ಇವೆರಡನ್ನೂ ಪೋಷಿಸುವ ವೈದಿಕಶಕ್ತಿ ಹಾಗೂ ಈ ಎಲ್ಲ ಶಕ್ತಿಗಳಿಗೆ ಧರ್ಮಸಮ್ಮತ ಕಾನೂನಿನ ಬೆಂಬಲ ನೀಡಿದ ಮನುಸ್ಮೃತಿ ಮುಂತಾದ ಅನಿಷ್ಟಗಳ ವಿರುದ್ಧ ಇಷ್ಟಲಿಂಗವನ್ನು ಕಟ್ಟಿಕೊಂಡ ಕಾಯಕಜೀವಿಗಳು ಜೀವದ ಹಂಗುದೊರೆದು ಹೋರಾಡಿದರು.

೧೨ನೇ ಶತಮಾನದಲ್ಲಿ ನೂರು ಮೈಲಿಗೊಂದು ಸಂಸ್ಥಾನರೂಪಿ ದೇಶಗಳಿದ್ದವು. ಲೋಹಿಯಾ ಅವರ ಕಾಲದಲ್ಲಿದ್ದ ರಾಷ್ಟ್ರದ ಸ್ವರೂಪ ಬಸವಣ್ಣನವರ ಕಾಲದಲ್ಲಿ ಇರಲಿಲ್ಲ. ಈ ಹಿನ್ನೆಲೆಯಲ್ಲಿ ನೋಡಿದರೆ ಶರಣ ಚಳವಳಿಯಲ್ಲಿ ವಿವಿಧ ದೇಶಗಳ ಕಾಯಕಜೀವಿಗಳು ಸೇರಿದ್ದರು. ಶರಣಸಂಕುಲವು ಸಕಲಜೀವಾತ್ಮರಿಗೆ ಲೇಸ ಬಯಸುವ ವಿಶ್ವಸರ್ಕಾರದ ಸಂಕೇತವೇ ಆಗಿತ್ತು.

ಬಂಡವಾಳಶಾಹಿ ವ್ಯವಸ್ಥೆಯ ಸಂದರ್ಭದಲ್ಲಿ ಲೋಹಿಯಾ ಬದುಕಿದ್ದರು. ಆದರೆ ಬಸವಣ್ಣನವರ ಕಾಲದಲ್ಲಿ ಬಂಡವಾಳಶಾಹಿ ಉತ್ಪಾದನಾ ಪರಿಕರಗಳಾಗಲಿ, ಉತ್ಪಾದನಾ ವ್ಯವಸ್ಥೆಯಾಗಲಿ ಇರಲಿಲ್ಲ. ಊಳಿಗಮಾನ್ಯ ಪದ್ಧತಿಯ ಉತ್ಪಾದನಾ ಸಾಧನಗಳು ಮತ್ತು ಉತ್ಪಾದನಾ ರೀತಿ ಇದ್ದ ಸಂದರ್ಭದಲ್ಲಿ ಬಸವಣ್ಣನವರು, 'ಬಡವರು' ಮತ್ತು 'ಉಳ್ಳವರು' ಪದಗಳ ಪ್ರಯೋಗ ಮಾಡುತ್ತ ವ್ಯವಸ್ಥೆಯ ವರ್ಗಗುಣವನ್ನು ಗ್ರಹಿಸುವ ಮೂಲಕ ಬಡವರ, ದಲಿತರ, ಹೆಣ್ಣುಮಕ್ಕಳ ಮತ್ತು ನಿರ್ಗತಿಕರ ಪರವಾಗಿ ನಿಂತದ್ದು ಆ ಕಾಲದ ಜಾಗತಿಕ ಇತಿಹಾಸದಲ್ಲಿ ಅನನ್ಯವಾಗಿದೆ.

ಬುದ್ಧ, ಬಸವ, ಕಾರ್ಲ್ ಮಾರ್ಕ್ಸ್, ಗಾಂಧಿ, ಅಂಬೇಡ್ಕರ್ ಮುಂತಾದ ದಾರ್ಶನಿಕರ ಮತ್ತು ನವಸಮಾಜದ ಚಿಂತಕರ ಮೂಲಕ ಆಧುನಿಕ ತವಕ ತಲ್ಲಣಗಳನ್ನು ನಿವಾರಿಸುವ ದಾರಿ ಕಂಡುಕೊಳ್ಳಬೇಕಿದೆ. ಆ ಮೂಲಕ ಅಸಹಿಷ್ಣುತೆಯನ್ನು ಕೊನೆಗೊಳಿಸಬೇಕಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಎಲ್ಲ ಆವಿಷ್ಕಾರಗಳನ್ನು ಬಂಡವಾಳಶಾಹಿ ವ್ಯವಸ್ಥೆಯು ಅಭಿವೃದ್ಧಿಯ ಹೆಸರಿನಲ್ಲಿ ಬಳಸಿಕೊಳ್ಳುವುದರ ಮೂಲಕ ನೈಸರ್ಗಿಕ ಸಂಪನ್ಮೂಲಗಳನ್ನು ಬೇಕಾಬಿಟ್ಟಿಯಾಗಿ ದುರ್ಬಳಕೆ ಮಾಡುತ್ತಿದೆ. ಆ ಮೂಲಕ ಜಗತ್ತನ್ನು ವಿನಾಶದ ಅಂಚಿಗೆ ಒಯ್ಯುತ್ತಿದೆ. ಬಡರಾಷ್ಟ್ರಗಳ ಶೋಷಣೆಯಲ್ಲಿ ಸಾಮ್ರಾಜ್ಯಶಾಹಿ ದೇಶಗಳು ತಲ್ಲೀನವಾಗಿವೆ. ಬಡರಾಷ್ಟ್ರಗಳ ಮಧ್ಯೆ ಯುದ್ಧದ ಸನ್ನಿವೇಶ ಸೃಷ್ಟಿಸುತ್ತ ಶಸ್ತ್ರಾಸ್ತ್ರಗಳ ಮಾರಾಟದಲ್ಲಿ ತಲ್ಲೀನವಾಗಿದೆ. ಜಾತಿ, ಕುಲಗೋತ್ರಗಳ ತಂತ್ರದೊಂದಿಗೆ ತಮ್ಮ ದೇಶದ ಜನರೊಳಗೆ ಭೇದಭಾವ ಕಲ್ಪಿಸುವವರನ್ನು ಬೆಂಬಲಿಸುವುದರ ಮೂಲಕ ಅಶಾಂತಿಯನ್ನು ಹೆಚ್ಚಿಸುತ್ತ ಜನಾಂಗದ್ವೇಷವನ್ನು ಉದ್ದೀಪನಗೊಳಿಸುತ್ತವೆ. ಆ ಮೂಲಕ ಆಯಾ ದೇಶಗಳ ರಾಜ್ಯಶಕ್ತಿಗಳು ತಾವು ಹೇಳಿದಂತೆ ಕೇಳುವ ಹಾಗೆ ಮಾಡುತ್ತವೆ.

ಭಾರತೀಯರು ಈ ಕುತಂತ್ರವನ್ನು ಅರಿತು ಒಂದಾಗುವ ಮೂಲಕ ಸಾಮ್ರಾಜ್ಯಶಾಹಿ ಮತ್ತು ಕೋಮುವಾದಿ ಷಡ್ಯಂತ್ರವನ್ನು ನಿರ್ನಾಮ ಮಾಡುವುದು ಈ ಕ್ಷಣದ ಅವಶ್ಯಕತೆಯಾಗಿದೆ. ಇಲ್ಲದಿದ್ದರೆ ಅಭಿವೃದ್ಧಿಯ ಹೆಸರಿನಲ್ಲಿ ಸರ್ವೋದಯದ ಚಿಂತನೆಗಳನ್ನು ನಾಶ ಮಾಡುತ್ತ ಸಾಗುವವರು ಬುದ್ಧ, ಬಸವ, ಅಂಬೇಡ್ಕರರ ಕನಸುಗಳು ನನಸಾಗದಂತೆ ನೋಡಿಕೊಳ್ಳುತ್ತಾರೆ.

❖❖

೭

❖

ಬಸವಣ್ಣ, ಪೈಗಂಬರ್ ಮತ್ತು ಕಾರ್ಮಿಕರು

ಐರೋಪ್ಯ ರಾಷ್ಟ್ರಗಳಲ್ಲಿ ಮೇ ೧, ವಸಂತ ಋತುವಿನ ಆರಂಭದ ದಿನವಾಗಿದೆ. ವಸಂತ ಋತುವಿನಲ್ಲಿ ಇಡೀ ನಿಸರ್ಗ ವರ್ಣರಂಜಿತವಾಗಿರುತ್ತದೆ. ಆದರೆ ಕಾರ್ಮಿಕರು ಈ ಸಂತೋಷದಿಂದ ವಂಚಿತರಾಗಿದ್ದರು. ಸೂರ್ಯೋದಯದಿಂದ ಸೂರ್ಯಾಸ್ತದ ವರೆಗೆ ದುಡಿಯುವ ಪರಿಸ್ಥಿತಿ ಇತ್ತು. ಅವರ ಬದುಕಿನಲ್ಲಿ ವಿಶ್ರಾಂತಿ ಮತ್ತು ಮನರಂಜನೆ ಎಂಬುವು ಗೌಣವಾಗಿದ್ದವು. ಇಂಥ ಕಠಿಣ ಬದುಕಿನಿಂದ ಒಂದಿಷ್ಟು ಬಿಡುವು ಮಾಡಿಕೊಳ್ಳುವುದಕ್ಕಾಗಿ ಕೆಲಸದ ಅವಧಿಯನ್ನು ೮ ಗಂಟೆಗೆ ಸೀಮಿತಗೊಳಿಸಬೇಕೆಂದು ಒತ್ತಾಯಿಸಿ ಅಮೆರಿಕದ ಷಿಕಾಗೊ ನಗರದ ೪೦ ಸಾವಿರಕ್ಕೂ ಹೆಚ್ಚು ಕಾರ್ಮಿಕರು ೧೮೮೬ನೇ ಮೇ ೧ರಂದು ಶಾಂತಿಯುತ ಹೋರಾಟ ಆರಂಭಿಸಿದರು.

ಮೇ ೩ರಂದು ಷಿಕಾಗೊದ ಮ್ಯಾಕೊರ್ಮಿಕ್ ಹಾರ್ವೆಸ್ಟರ್ ಪ್ಲಾಂಟ್‌ನಲ್ಲಿ ಪೊಲೀಸರು ಗುಂಡು ಹಾರಿಸಿದಾಗ ೬ ಮಂದಿ ಸತ್ತು ೫೦ ಮಂದಿ ಗಾಯಗೊಂಡರು. ಮೇ ೪ರಂದು ಹೇ ಮಾರ್ಕೆಟ್ ಚೌಕದಲ್ಲಿ ಭಾರಿ ಪ್ರತಿಭಟನಾ ಮೆರವಣಿಗೆ ಹೊರಡಿಸಲಾಯಿತು. ರ್‍ಯಾಲಿ ಮುಗಿಯುವ ಸಂದರ್ಭದಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ಎಸೆದ ಬಾಂಬ್ ಸ್ಫೋಟಗೊಂಡಾಗ ಒಬ್ಬ ಪೊಲೀಸ್ ಮೃತಪಟ್ಟ. ನಂತರ ಆರಂಭವಾದ ಗಲಭೆಯಲ್ಲಿ ಆರು ಮಂದಿ ಪೊಲೀಸರು ಮತ್ತು ನಾಲ್ವರು ಕಾರ್ಮಿಕರು ಸತ್ತು ಅನೇಕರು ಗಾಯಗೊಂಡರು. ಹೀಗೆ ವಿಶ್ವಾದ್ಯಂತ ಕಾರ್ಮಿಕರ ಹೋರಾಟದ ದಿನವಾಗಿ ಮೇ ದಿನಾಚರಣೆ ಆರಂಭವಾಯಿತು.

ಷಿಕಾಗೊ ದುರಂತಕ್ಕೆ ೩೮ ವರ್ಷಗಳ ಮೊದಲೇ ಮಾರ್ಕ್ಸ್ ಮತ್ತು ಏಂಗೆಲ್ಸ್ ಅವರು ರಚಿಸಿದ ಕಮ್ಯೂನಿಸ್ಟ್ ಪ್ರಣಾಳಿಕೆಯಲ್ಲಿ ಅಂತರ್‍ರಾಷ್ಟ್ರೀಯ ಮಟ್ಟದ ಕಾರ್ಮಿಕ ಚಳವಳಿಯ ಮಹತ್ವದ ಕುರಿತು ತಿಳಿಸಲಾಗಿದೆ. ಕಾರ್ಮಿಕರ ಶೋಷಣೆಯ ಕಾರಣಗಳನ್ನು ವಿವರಿಸಲಾಗಿದೆ. ವರ್ಗ ಹೋರಾಟದಿಂದ ಕಾರ್ಮಿಕರ ವಿಮೋಚನೆಯಾಗುವುದರ ಬಗ್ಗೆ ಸೂಚಿಸಲಾಗಿದೆ.

ಕಳೆದ ನೂರು ವರ್ಷಗಳ ಅವಧಿಯಲ್ಲಿ ವಿವಿಧ ಹೋರಾಟಗಳ ಫಲವಾಗಿ ವಿವಿಧ ಕ್ಷೇತ್ರಗಳ ಕಾರ್ಮಿಕರು ೮ ಗಂಟೆಗಳ ಕೆಲಸವೂ ಸೇರಿದಂತೆ ಅನೇಕ ಸೌಲಭ್ಯಗಳನ್ನು ಪಡೆದರು. ಅಂತರ್‌ರಾಷ್ಟ್ರೀಯ ಪ್ರಜ್ಞೆಯನ್ನೂ ಪಡೆದರು. ಆದರೆ ಕಳೆದ ೨೫ ವರ್ಷಗಳ ಅವಧಿಯಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಹೆಚ್ಚು ಹೆಚ್ಚು ಕಂಪ್ಯೂಟರ್ ತಂತ್ರಜ್ಞಾನದ ಬಳಕೆ ಮತ್ತು ಜಾಗತೀಕರಣದಿಂದಾಗಿ ವಿಶ್ವದ ಮುಖವೇ ಬದಲಾಗುತ್ತಿದೆ. ಕಾರ್ಮಿಕರು ಉದ್ಯೋಗಗಳನ್ನು ಕಳೆದುಕೊಳ್ಳುತ್ತಿದ್ದಾರೆ. ಇನ್ನು ಮುಂದೆ ಉತ್ಪಾದನೆಯಲ್ಲಿ ಕಾರ್ಮಿಕರ ಪಾತ್ರ ಇಲ್ಲವೇನೋ ಎನ್ನುವ ರೀತಿಯಲ್ಲಿ ಕಂಪ್ಯೂಟರ್ ತಂತ್ರಜ್ಞಾನದ ಬಳಕೆಯಾಗುತ್ತಿದೆ. ದುಡಿಯುವ ಕೈಗಳು ಕೆಲಸ ಕಳೆದುಕೊಂಡಷ್ಟೂ ಹೋರಾಟಗಳು ಗೌಣವಾಗಿ ಅಪರಾಧಗಳು ಹೆಚ್ಚುತ್ತಿವೆ. ಕೌಟುಂಬಿಕ ಮತ್ತು ಸಾಮಾಜಿಕ ಬದುಕು ಅಸಹನೀಯವಾಗುತ್ತಿದೆ.

ಮಾನವನನ್ನು ಸನ್ಮಾರ್ಗದಲ್ಲಿ ಮುನ್ನಡೆಸುತ್ತ ಸುವ್ಯವಸ್ಥಿತ ಸಮಾಜವೊಂದನ್ನು ಸೃಷ್ಟಿಸಿ, ಉಳಿಸಿ ಬೆಳೆಸುವುದಕ್ಕಾಗಿ ಅನೇಕ ಧರ್ಮಸಂಸ್ಥಾಪಕರು ಪ್ರಯತ್ನಪಟ್ಟಿದ್ದಾರೆ. ಅವರೆಲ್ಲ ದುಡಿಯುವ ವರ್ಗಕ್ಕೆ ಹೆಚ್ಚಿನ ಮಹತ್ವ ಕೊಟ್ಟಿದ್ದಾರೆ. ಬಡವರ ಹಕ್ಕುಗಳ ರಕ್ಷಣೆಯಾಗುವ ಹಾಗೆ ಧಾರ್ಮಿಕ ಕಟ್ಟಳೆಗಳನ್ನು ವಿಧಿಸಿದ್ದಾರೆ. ಆ ಮೂಲಕ ತಾವು ಸ್ಥಾಪಿಸಿದ ಅಥವಾ ವಿಕಾಸಗೊಳಿಸಿದ ಧರ್ಮಗಳು ಬಡವರ ಪರ ಎಂಬುದನ್ನು ಸೂಚಿಸಿದ್ದಾರೆ. ಅಂಥವರಲ್ಲಿ ೭ನೆಯ ಶತಮಾನದ ಮುಹಮ್ಮದ್ ಪೈಗಂಬರ್ ಮತ್ತು ೧೨ನೆಯ ಶತಮಾನದ ಬಸವಣ್ಣನವರು ಪ್ರಮುಖರಾಗಿದ್ದಾರೆ. ಕ್ರಿಸ್ತ ಪೂರ್ವ ೬ನೆಯ ಶತಮಾನದ ಭಗವಾನ ಬುದ್ಧ ಮತ್ತು ಕ್ರಿಸ್ತ ಶಕೆಗೆ ಕಾರಣವಾದ ಏಸು ಕ್ರಿಸ್ತ ಕೂಡ ಬಡವರ ಪರವಾಗಿಯೇ ಧರ್ಮ ಸ್ಥಾಪನೆ ಮಾಡಿದವರು.

ದುಡಿಯುವ ವರ್ಗಕ್ಕೆ ಸಂಬಂಧಿಸಿದ ಶೂದ್ರರು ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಕಟ್ಟಳೆಗಳಿಂದಾಗಿ ನರಕಯಾತನೆಯನ್ನು ಅನುಭವಿಸುತ್ತಿದ್ದ ಸಂದರ್ಭದಲ್ಲಿ ಭಗವಾನ ಬುದ್ಧ ದುಡಿಯುವ ಜನರ ಧರ್ಮ ಸ್ಥಾಪನೆ ಮಾಡಿದ. ವರ್ಣ ಮತ್ತು ವರ್ಗಭೇದಗಳನ್ನು ತಿರಸ್ಕರಿಸಿದ ಬೌದ್ಧಧರ್ಮವು ಕೆಳಜಾತಿ ಮತ್ತು ಕೆಳವರ್ಗದ ಜನರಿಗೆ ಹೊಸ ಆಶಾಕಿರಣವಾಯಿತು. ಏಸು ಕ್ರಿಸ್ತ ಕೂಡ ಭೇದಭಾವವಿಲ್ಲದ ಸಮಾಜಕ್ಕಾಗಿ ಧರ್ಮಮಾರ್ಗವನ್ನು ಹಾಕಿಕೊಟ್ಟ. ಪೈಗಂಬರರು ಮತ್ತು ಬಸವೇಶ್ವರರು ಬಡವರ ಪರವಾದ ಸಾಮಾಜಿಕ ಮತ್ತು ಧಾರ್ಮಿಕ ವ್ಯವಸ್ಥೆಯನ್ನು ರೂಪಿಸುವಲ್ಲಿ ತಲ್ಲೀನರಾಗಿದ್ದರು.

"ಸಂಪತ್ತಿನ ಗುಲಾಮನನ್ನು ದೇವರು ತಿರಸ್ಕರಿಸುವನು" ಎಂದು ಪೈಗಂಬರರು ಎಚ್ಚರಿಸಿ ಮಾನವರ ಸಂಗ್ರಹ ಬುದ್ಧಿಯನ್ನು ವಿರೋಧಿಸಿದ್ದಾರೆ. "ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ

ಬೇಕೆಂದೆನಾದಡೆ ನಿಮ್ಮಾಣೆ, ನಿಮ್ಮ ಪ್ರಮಥರಾಣೆ" ಎಂದು ಬಸವಣ್ಣನವರು ತಿಳಿಸುವ ಮೂಲಕ ಸಂಪತ್ತಿನ ಸಂಗ್ರಹವನ್ನು ಅಲ್ಲಗಳೆದಿದ್ದಾರೆ.

ಸಂಗ್ರಹ ಬುದ್ಧಿಯು ಮಾನವನ ಎಲ್ಲ ದುರಂತಗಳಿಗೆ ಕಾರಣವಾಗಿದೆ. ಆತ ಸಂಪತ್ತನ್ನು ಗಳಿಸಿದಷ್ಟೂ ತಾನು ಬೇರೆಯವರಿಗಿಂತ ಭಿನ್ನ ಎಂಬ ಭಾವನೆ ತಾಳುತ್ತ ಹೋಗುತ್ತಾನೆ. ಅಂಥವರು ಹೆಚ್ಚಾಗುತ್ತ ಮೇಲ್ವರ್ಗವಾಗಿ ಪರಿಣಮಿಸುತ್ತಾರೆ. ಈ ಮೇಲ್ವರ್ಗದಿಂದಾಗಿ ಮೇಲ್ಜಾತಿಗಳ ಮತ್ತು ಉತ್ತಮವೆಂದು ಕರೆಯಿಸಿಕೊಳ್ಳುವ ಕುಲಗಳ ನಿರ್ಮಾಣವಾಗುತ್ತದೆ. ಎಲ್ಲ ರೀತಿಯ ಮೇಲು-ಕೀಳುಗಳಿಗೆ ನಾಂದಿಯಾಗುತ್ತದೆ. ಆದ್ದರಿಂದ ಪೈಗಂಬರರ ಮೂಲಕ ಅವತೀರ್ಣಗೊಂಡ ಕುರಾನ್‌ನಲ್ಲಿ ಮತ್ತು ಬಸವಣ್ಣನವರ ವಚನಗಳಲ್ಲಿ ನರನ ಸಂಗ್ರಹಬುದ್ಧಿಯನ್ನು ತಿರಸ್ಕರಿಸಲಾಗಿದೆ.

"ಕಾಯಕ ಜೀವಿಗಳು ದೇವರ ಪ್ರೀತಿಗೆ ಪಾತ್ರರಾಗುವರು" ಎಂದು ಹೇಳಿದ ಪೈಗಂಬರರು, "ಕೂಲಿಯ ಒರಟು ಕೈಗಳನ್ನು ನಾನು ಪ್ರೀತಿಸುತ್ತೇನೆ" ಎಂದು ತಿಳಿಸಿದ್ದಾರೆ. "ಅಪ್ಪನು ನಮ್ಮ ಮಾದಾರ ಚೆನ್ನಯ್ಯ, ಬೊಪ್ಪನು ನಮ್ಮ ಡೋಹಾರ ಕಕ್ಕಯ್ಯ" ಎಂದು ಬಸವಣ್ಣನವರು ಕಾಯಕಜೀವಿಗಳನ್ನು ಗೌರವಿಸಿದ್ದಾರೆ. ದುಡಿದು ಉತ್ಪಾದಿಸುತ್ತ ನಾವೆಲ್ಲ ಬದುಕಲು ಸಾಧ್ಯವಾಗುವಂತೆ ಮಾಡುವ ಕಾಯಕಜೀವಿಗಳ ಒರಟು ಕೈಗಳು ಅತ್ಯಂತ ಮಹತ್ವದ್ದಾಗಿವೆ ಎಂದು ಪೈಗಂಬರರು ಸೂಚಿಸಿದರೆ, ಅವರೇ ನಮ್ಮ ಹಿರಿಯರು ಎಂದು ಬಸವಣ್ಣನವರು ಶ್ಲಾಘಿಸುತ್ತಾರೆ.

"ನಿಮಗೆ ಅತ್ಯಧಿಕ ಪ್ರಿಯವಾದುದನ್ನು ದೇವಮಾರ್ಗದಲ್ಲಿ ವ್ಯಯಿಸುವ ತನಕ ನೀವು ಪುಣ್ಯ ಗಳಿಸಲಾರಿರಿ" ಎಂದು ಕುರಾನಿನಲ್ಲಿ ತಿಳಿಸಲಾಗಿದೆ. ಧನವನಿರಿಸದಿರಾ, ಇರಿಸಿದಡೆ ಭವ ಬಪ್ಪುದು ತಪ್ಪದು, ಕೂಡಲಸಂಗನ ಶರಣರಿಗೆ ಸವೆಸಲೇ ಬೇಕು" ಎಂದು ಬಸವಣ್ಣನವರು ಎಚ್ಚರಿಸಿದ್ದಾರೆ.

ಸಂಪತ್ತನ್ನು ಕೂಡಿಸುವುದರಿಂದ ಅದು ದಿನಗಳೆದಂತೆ ಮಾನವಕುಲಕ್ಕೆ ಕಂಟಕಪ್ರಾಯವಾಗುತ್ತ ಹೋಗುತ್ತದೆ. ದುಡಿಯುವ ಮತ್ತು ಸುಲಿಯುವ ವರ್ಗಗಳ ನಿರ್ಮಾಣಕ್ಕೆ ನಾಂದಿ ಹಾಡುತ್ತದೆ. ವರ್ಗರಹಿತವಾದ ಸಮಾಜದಲ್ಲಿ ಮಾತ್ರ ಮಾನವ ಏಕೋಭಾವದಿಂದ ಬದುಕಲು ಸಾಧ್ಯ ಎಂಬ ಆಶಯ ಪೈಗಂಬರರದ್ದು ಮತ್ತು ಬಸವಣ್ಣನವರದ್ದು ಆಗಿದೆ.

"ನಮಾಜನ್ನು ಸ್ಥಿರಗೊಳಿಸಿರಿ; ಜಕಾತ್ ಕೊಡಿರಿ" ಎಂದು ಕುರಾನ್ ಆದೇಶಿಸುತ್ತದೆ. " ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು, ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು, ನಾನು ಪರಸೇವೆಯ ಮಾಡುವೆನಯ್ಯಾ ಜಂಗಮ ದಾಸೋಹಕ್ಕೆಂದು" ಎಂದು ಬಸವಣ್ಣನವರು ಹೇಳುತ್ತಾರೆ. ದೇವರ ಒಲುಮೆಯನ್ನು ಎರಡು ರೀತಿಯಿಂದ ಗಳಿಸಬೇಕೆಂಬುದು ಕುರಾನಿನ

ಆದೇಶವಾಗಿದೆ ಎಂದು ಪೈಗಂಬರರು ಸೂಚಿಸಿದ್ದಾರೆ. ನಮಾಜ್ ಮಾಡುವುದು ದೇವರ ಆರಾಧನೆಯಾಗಿರುವಂತೆಯೆ ಜಕಾತ್ ಕೊಡುವುದು ಸಮಾಜವೆಂಬ 'ದೇವರ' ಆರಾಧನೆಯಾಗಿದೆ. ಸೃಷ್ಟಿಗೆ ಸೃಷ್ಟಿಕರ್ತನೇ ಕಾರಣನಾಗಿರುವುದರಿಂದ ಎಲ್ಲವೂ ದೇವರದ್ದೇ ಆಗಿದೆ. ಬಸವಣ್ಣನವರು ಇಷ್ಟಲಿಂಗ ಪೂಜೆ ಮತ್ತು ಜಂಗಮಲಿಂಗ ಪೂಜೆಯ ಬಗ್ಗೆ ಹೇಳುತ್ತಾರೆ. ಇಷ್ಟಲಿಂಗ ಪೂಜೆಯು ನಮಾಜ್ ಸ್ಥಾನದಲ್ಲಿದ್ದರೆ ಜಂಗಮಲಿಂಗ ಪೂಜೆಯು ಜಕಾತ್ ಸ್ಥಾನದಲ್ಲಿದೆ. ಜಕಾತ್ ಎಂದರೆ ಶ್ರೀಮಂತರ ಸಂಪತ್ತಿನಲ್ಲಿ ಬಡವರ ಪಾಲು. ಜಂಗಮಲಿಂಗ ಪೂಜೆ ಎಂದರೆ ಕಾಯಕ ಮಾಡಿ ಗಳಿಸಿದ್ದನ್ನು ದಾಸೋಹ ರೂಪದಲ್ಲಿ ಸಮಾಜಕ್ಕೆ ಅರ್ಪಿಸುವುದು. ಇದುವೆ ಜಂಗಮ ದಾಸೋಹ. ದೇವರು ಸಮಾಜದ ರೂಪದಲ್ಲಿಯೂ ಇರುತ್ತಾನೆ ಎಂಬ ಭಾವವು ವರ್ಗರಹಿತ ಸಮಾಜದ ಭಾವವೇ ಆಗಿದೆ. ಹೀಗೆ ಪೈಗಂಬರರು ಮತ್ತು ಬಸವಣ್ಣನವರು ಮಾನವರಲ್ಲಿ ಸಾಮಾಜಿಕ ಪ್ರಜ್ಞೆಯನ್ನು ತುಂಬುತ್ತ ಮೇಲಿಲ್ಲದ ಮತ್ತು ಕೀಳಿಲ್ಲದ ವ್ಯವಸ್ಥೆಯನ್ನು ಸೃಷ್ಟಿಸಲು ಮಾರ್ಗ ತೋರಿಸಿಕೊಟ್ಟರು.

"ವ್ಯಾಪಾರವನ್ನು ಅಲ್ಲಾಹನು ಧರ್ಮಬದ್ಧಗೊಳಿಸಿದ್ದಾನಲ್ಲದೆ ಬಡ್ಡಿಯನ್ನು ನಿಷೇಧಗೊಳಿಸಿದ್ದಾನೆ" ಎಂದು ಕುರಾನ್ ಸಾರಿದೆ. "ಹಡೆದೊಡವೆ ವಸ್ತುವನು ಮೃಡಭಕ್ತರಿಗಲ್ಲದೆ ಕಡಬಡ್ಡಿಯ ಕೊಡಲಾಗದು" ಎಂದು ಬಸವಣ್ಣನವರು ತಿಳಿಸುತ್ತಾರೆ. ದುಡಿಯದೆ ಬದುಕುತ್ತ ಸಂಪತ್ತನ್ನು ಸಂಗ್ರಹಿಸುವಲ್ಲಿ ಬಡ್ಡಿಯ ಪಾತ್ರ ಹಿರಿದಾಗಿದೆ. ಅದು ಅನೈತಿಕ ಬದುಕಿಗೆ ದಾರಿ ಮಾಡಿಕೊಡುವುದು. ಬಡ್ಡಿಯ ಹಣದಿಂದ ಮೌಲ್ಯಹೀನ ಸಮಾಜ ನಿರ್ಮಾಣವಾಗುವುದು. ಅಂತೆಯೆ ಏಸು ಕ್ರಿಸ್ತ ಮತ್ತು ಕಾರ್ಲ್ ಮಾರ್ಕ್ಸ್ ಅವರ ಹಾಗೆ ಪೈಗಂಬರರು ಮತ್ತು ಬಸವಣ್ಣನವರು ಬಡ್ಡಿಯನ್ನು ತೀಕ್ಷ್ಣವಾಗಿ ವಿರೋಧಿಸಿದ್ದಾರೆ. ಬಡ್ಡಿಯ ಹಣದಿಂದಲೇ ವಿಶ್ವದಲ್ಲಿ ಕೆಲವೊಂದು ರಾಷ್ಟ್ರಗಳು ದೈತ್ಯರಾಷ್ಟ್ರಗಳಾಗಿ ರೂಪುತಾಳಿದರೆ ನೂರಾರು ರಾಷ್ಟ್ರಗಳು ಅವುಗಳಿಗೆ ಬಡ್ಡಿಯನ್ನು ಕೊಡುತ್ತ ಬಡವಾಗಿವೆ. ಬಡ್ಡಿಯು ಇಡೀ ಜಗತ್ತನ್ನು ತಲ್ಲಣಗೊಳಿಸುವತ್ತ ಸಾಗಿದೆ.

"ಜನರಿಗೆ ಕೃತಜ್ಞನಾಗಿರದವನು ಅಲ್ಲಾಹನಿಗೂ ಕೃತಜ್ಞನಾಗಿರಲಾರನು" ಎಂದು ಪೈಗಂಬರರು ಹೇಳುತ್ತಾರೆ. "ಜಂಗಮುವಾಪ್ಯಾಯನವಾದಡೆ ಲಿಂಗ ಸಂತುಷ್ಟಿಯಹುದಯ್ಯಾ" ಎಂದು ಬಸವಣ್ಣವರು ತಿಳಿಸುತ್ತಾರೆ. ಜನಸಮುದಾಯದ ಸುಂದರ ಬದುಕಿಗಾಗಿ ಚಿಂತಿಸುವುದು ಮತ್ತು ಅದಕ್ಕಾಗಿ ತನು ಮನ ಧನಗಳನ್ನು ಅರ್ಪಿಸುವುದು ನಿಜವಾದ ದೇವರ ಸೇವೆಯಾಗಿದೆ.

"ನನ್ನನ್ನು ಬಲಹೀನರ ಮತ್ತು ಬಡವರ ಮಧ್ಯೆ ಹುಡುಕಿರಿ. ನಿಶ್ಚಯವಾಗಿಯೂ ನೀವು ಅವರ ದುಡಿಮೆಯಿಂದಲೇ ಆಹಾರವನ್ನು, ಸಹಾಯವನ್ನು ಪಡೆಯುತ್ತೀರಿ" ಎಂದು ಪೈಗಂಬರರು ಹೇಳುತ್ತಾರೆ. "ಕುದುರೆ ಸತ್ತಿಗೆಯವರ ಕಂಡರೆ ಹೊರಳಿಬಿದ್ದು

ಕಾಲ ಹಿಡಿವರು, ಬಡಭಕ್ತರು ಬಂದರೆ 'ಎಡೆಯಿಲ್ಲ ಅತ್ತ ಸನ್ನಿ' ಎಂಬರು" ಎಂದು ಬಸವಣ್ಣನವರು ಸಾತ್ವಿಕ ಕೋಪವನ್ನು ವ್ಯಕ್ತಪಡಿಸುತ್ತಾರೆ. ಹೀಗೆ ಪೈಗಂಬರರು ಮತ್ತು ಬಸವಣ್ಣನವರು ಸದಾ ಬಡವರ ಪರವಾಗಿ ನಿಲ್ಲುತ್ತಾರೆ. ಬಡವರ ಬದುಕನ್ನು ಹಸನಾಗಿಸುವುದೇ ಧರ್ಮದ ಗುರಿ ಎಂದು ಸಾರುತ್ತಾರೆ.

"ನಿಮ್ಮ ಧನವನ್ನು ನೀವು ಅನ್ಯಾಯವಾಗಿ ತಿನ್ನಬಾರದು" ಎಂಬುದು ಕುರಾನಿನ ಆದೇಶವಾಗಿದೆ. "ಧನವ ಕೊಟ್ಟು ಜಂಗಮವನೊಲಿಸಬೇಕು" ಎಂದು ಬಸವಣ್ಣನವರು ಹೇಳುತ್ತಾರೆ. ಧನವು ಸದಾ ಸಮಾಜದ ಸ್ವಾಸ್ಥ್ಯ ಕಾಪಾಡುವುದಕ್ಕೆ ಬಳಕೆಯಾಗಬೇಕು. ಇಲ್ಲದಿದ್ದರೆ ಅದು ಅಪರಾಧಗಳಿಗೆ ಮೂಲವಾಗುತ್ತದೆ. ಮನುಷ್ಯನನ್ನು ಮೌಲ್ಯವಂತನನ್ನಾಗಿ ಮಾಡುವುದು ಧರ್ಮದ ಕರ್ತವ್ಯವಾಗಿದೆ. ಆದರೆ ಆತ ಮೌಲ್ಯ ಕಳೆದುಕೊಳ್ಳತೊಡಗಿದಾಗ ಅಪರಾಧಗಳ ಸಮಾಜದ ಹುಟ್ಟಿಗೆ ಕಾರಣನಾಗುತ್ತಾನೆ. ಸಮಾಜದಲ್ಲಿ ನಡೆಯುವ ಸುಲಿಗೆಯಿಂದ ಅಪರಾಧಗಳ ಸೃಷ್ಟಿಯಾಗುತ್ತದೆ. ಸಮಾಜಸೇವೆಯಿಂದ ಸುಂದರ ಸಮಾಜದ ನಿರ್ಮಾಣವಾಗುತ್ತದೆ. ಆದ್ದರಿಂದ ನಮ್ಮ ಹಣ ಸತ್ಪಾತ್ರಕ್ಕೆ ಸಲ್ಲುವಂತೆ ನೋಡಿಕೊಳ್ಳುವುದು ಅವಶ್ಯವಾಗಿದೆ.

"ಪೂರ್ವ ಪಶ್ಚಿಮದ ಕಡೆಗೆ ನಿಮ್ಮ ಮುಖವನ್ನು ತಿರುಗಿಸುವಲ್ಲಿ ಧರ್ಮಶೀಲತೆ ಇಲ್ಲ. ಆದರೆ ಅಲ್ಲಾಹನಲ್ಲಿ, ಅಂತಿಮ ದಿವಸದಲ್ಲಿ, ದೇವದೂತರಲ್ಲಿ, ಪ್ರವಾದಿಗಳಲ್ಲಿ ವಿಶ್ವಾಸವಿಡುವವರು ತಮ್ಮ ಧನವನ್ನು ಆತನ ಸಂಪ್ರೀತಿಗಾಗಿ ಬಂಧುಗಳಿಗೆ, ಅನಾಥರಿಗೆ, ದರಿದ್ರರಿಗೆ, ಸಂಚಾರಿಗಳಿಗೆ, ಸಹಾಯಾರ್ಥಿಗಳಿಗೆ ಮತ್ತು ದಾಸ್ಯ ವಿಮೋಚನೆಗೆ (ಗುಲಾಮರನ್ನು ಸ್ವತಂತ್ರಗೊಳಿಸುವುದಕ್ಕೆ) ಕೊಡುವವರು, ನಮಾಜನ್ನು ಸ್ಥಿರಗೊಳಿಸುವವರು, ತಾವು ವಾಗ್ದಾನವಿತ್ತಿದ್ದರೆ ಅದನ್ನು ಪೂರ್ಣಗೊಳಿಸುವವರು, ಕಷ್ಟಕಾರ್ಪಣ್ಯದಲ್ಲಿ ಹಾಗೂ ಸಮರದಲ್ಲಿ ಸಹನೆ ಕಳೆದುಕೊಳ್ಳದವರೇ ಪುಣ್ಯಶೀಲರು, ಇಂಥವರೇ ದೈವಭಕ್ತರು ಆಗಿರುತ್ತಾರೆ" ಎಂದು ಕುರಾನ್ ಸ್ಪಷ್ಟಪಡಿಸಿದೆ. "ಉಂಬ ಜಂಗಮ ಬಂದಡೆ ನಡೆಯೆಂಬರು, ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ" ಎಂದು ಬಸವಣ್ಣನವರು ವಿಷಾದ ವ್ಯಕ್ತಪಡಿಸುತ್ತಾರೆ. ಜಗತ್ತನ್ನು ದುಃಖದಿಂದ ಮತ್ತು ಎಲ್ಲ ರೀತಿಯ ಅಸಹಾಯಕತೆಗಳಿಂದ ಪಾರು ಮಾಡುವಂಥ ಕ್ರಿಯೆಯಲ್ಲಿ ತೊಡಗುವುದು ಅವಶ್ಯವಾಗಿದೆ. ಸುಮ್ಮನೆ ನಮಾಜ್ ಮಾಡುತ್ತ ಇಲ್ಲವೆ ಇಷ್ಟಲಿಂಗ ಪೂಜೆ ಮಾಡುತ್ತ ಕೂಡುವುದರಲ್ಲಿ ಅರ್ಥವಿಲ್ಲ. ಅವುಗಳ ಜೊತೆ ಸತ್ಕಾರ್ಯಗಳನ್ನು ಮಾಡುವುದರಲ್ಲೇ ಬದುಕಿನ ಸಾರ್ಥಕತೆ ಇದೆ.

"ತುಳಿತಕ್ಕೀಡಾದವರು ಜಗತ್ತಿನ ನಾಯಕರು ಮತ್ತು ನೇರ ವಾರಸುದಾರರು ಆಗಬೇಕೆಂದು ನಾವು ಇಚ್ಛಿಸಿದ್ದೇವೆ" ಎಂದು ಕುರಾನ್ ಹೇಳುತ್ತದೆ. ಬಸವಣ್ಣನವರ ಕೂಡಲಸಂಗಮದೇವ ಮಾನವ ಹಕ್ಕುಗಳ ದೇವರಾಗಿದ್ದಾನೆ. ಆತ ಅಸ್ಪೃಶ್ಯ ಮಾದಾರ

ಚೆನ್ನಯ್ಯನ ಮನೆಯಲ್ಲಿ ಅಂಬಲಿ ಕುಡಿಯುತ್ತಾನೆ. "ವೇದ ನಡನಡುಗಿತ್ತು, ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ!....... ನಮ್ಮ ಕೂಡಲಸಂಗಯ್ಯನು ಮಾದಾರ ಚೆನ್ನಯ್ಯನ ಮನೆಯಲ್ಲುಂಡಕಾರಣ" ಎಂದು ಬಸವಣ್ಣನವರು ಹೇಳುತ್ತಾರೆ. ಹೀಗೆ ಪೈಗಂಬರರ ಅಲ್ಲಾಹ್ ಮತ್ತು ಬಸವಣ್ಣನವರ ಕೂಡಲಸಂಗಮದೇವ ಸದಾ ಬಡವರ, ದುಡಿಯುವವರ, ನಿರ್ಗತಿಕರ ಮತ್ತು ತುಳಿತಕ್ಕೊಳಗಾದವರ ಪರ ಇದ್ದಾರೆ. ಸದ್ಗುಣಗಳ ಆಗರವಾದವರ ಜೊತೆ ಇದ್ದಾರೆ. ಅವರಿಬ್ಬರೂ ಒಂದೇ ಆಗಿದ್ದಾರೆ. ದೇವನೊಬ್ಬ ನಾಮ ಹಲವು" ಎಂದು ಬಸವಣ್ಣನವರು ಹೇಳಿದ್ದಾರೆ.

"ದುಡಿದು ಸಂಪಾದಿಸುವ ಮುಸ್ಲಿಮನನ್ನು ಅಲ್ಲಾಹನು ಪ್ರೀತಿಸುತ್ತಾನೆ" ಎಂದು ಪೈಗಂಬರರು ಹೇಳುವಲ್ಲಿ ಪ್ರತಿಯೊಬ್ಬ ಮುಸ್ಲಿಮನು ಕಾಯಕಜೀವಿಯಾಗಿರಬೇಕಾಗುತ್ತದೆ ಎಂದು ಎಚ್ಚರಿಸುತ್ತಾರೆ. "ಶರಣರ ಬರವೆನಗೆ ಪ್ರಾಣಜೀವಾಳವಯ್ಯಾ" ಎಂದು ಬಸವಣ್ಣನವರು ತಮ್ಮ ಧರ್ಮದ ಮೂಲಾಧಾರಗಳಾದ ಕಾಯಕಜೀವಿಗಳನ್ನು ಕೊಂಡಾಡುತ್ತಾರೆ.

"ತನ್ನ ಕೈಯಿಂದ ಸಂಪಾದಿಸಿದುದಕ್ಕಿಂತ ಉತ್ತಮ ಆಹಾರವನ್ನು ಎಂದೂ ಯಾರೂ ತಿಂದಿಲ್ಲ" ಎಂದು ಪೈಗಂಬರರು ಹೇಳುತ್ತಾರೆ. "ಕೊಲುವನೆ ಮಾದಿಗ, ಹೊಲಸು ತಿಂಬುವನೆ ಹೊಲೆಯ, ಕುಲವೇನೊ ಅವಂದಿರ ಕುಲವೇನೊ, ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು" ಎಂದು ಬಸವಣ್ಣನವರು ಹೇಳುತ್ತಾರೆ. ಯಜ್ಞಯಾಗಾದಿಗಳಲ್ಲಿ ಪ್ರಾಣಿಬಲಿ ಕೊಡುವವರೇ ಮಾದಿಗರು. ಕಾಯಕ ಮಾಡದೆ ವರ್ಷಗಟ್ಟಲೆ ನಡೆಯುವ ಆ ಯಜ್ಞಯಾಗಾದಿಗಳಲ್ಲಿ ಬರಿ ತಿನ್ನುವುದು ಹೊಲಸು. ಆದರೆ ಹೊಲೆ ಮಾದಿಗರು ಮೊದಲುಮಾಡಿ ಜಾತಿಸಂಕರವಾಗಿ, ಎಲ್ಲರೂ ಒಂದಾಗಿ ದುಡಿಯುತ್ತ ಬದುಕುವ ಕೂಡಲಸಂಗನ ಶರಣರೇ ಕುಲಜರು ಎಂದು ಬಸವಣ್ಣನವರು ಘೋಷಿಸುತ್ತಾರೆ.

ಕಾಯಕವು ಕಾಯವನ್ನು ಸುಂದರಗೊಳಿಸುತ್ತದೆ, ಸದೃಢಗೊಳಿಸುತ್ತದೆ. ಕಾಯಕದಿಂದ ಆಗುವ ಮಾನವನ ಬದುಕಿನಲ್ಲಿ ಹಸಿವು ಬಹುಮುಖ್ಯವಾಗಿದೆ. ಈ ಹಸಿವು ಮಾನವನ ರುಚಿಶಕ್ತಿಯನ್ನು ಹೆಚ್ಚಿಸುತ್ತದೆ. ಅದರಿಂದಾಗಿ ಸಾದಾ ಆಹಾರ ಕೂಡ ರುಚಿಕಟ್ಟಾಗುತ್ತದೆ. ಚೆನ್ನಾಗಿ ದುಡಿದಾಗ ಒಳ್ಳೆಯ ನಿದ್ರೆ ಬಂದು ನಿಜವಾದ ವಿಶ್ರಾಂತಿ ಲಭಿಸುವುದು. ಹೀಗೆ ಹಸಿವು, ರುಚಿ ಮತ್ತು ವಿಶ್ರಾಂತಿ ಎಂಬುವು ನಿಜವಾದ ಅರ್ಥದಲ್ಲಿ ಬಡವರ ಸೊತ್ತಾಗಿವೆ. ಶ್ರೀಮಂತರು ಎಷ್ಟೇ ಸಂಪತ್ತು ಗಳಿಸಿದರೂ ಬಡವರ ಈ ಸೊತ್ತು ಅವರ ಪಾಲಾಗಲು ಸಾಧ್ಯವಿಲ್ಲ. ಬಡವರಿಗೆ ಕಾಯಕದಿಂದ ಸಿಗುವ ಆನಂದವನ್ನು ಶ್ರೀಮಂತರು ಖರೀದಿಸಲು ಸಾಧ್ಯವಿಲ್ಲ. ಇಂಥ ಬಡವರೇ ಬಸವಣ್ಣನವರ ಶರಣಸಂಕುಲದಲ್ಲಿ ಇದ್ದವರು. ಇವರು ಸ್ವತಂತ್ರಧೀರರು. ಯಾವುದಕ್ಕೂ

ಆಸೆಪಟ್ಟವರಲ್ಲ. ಕಾಯಕದಲ್ಲಿ ದೇವರನ್ನು ಕಂಡವರು. ಸಕಲ ಜೀವಾತ್ಮರಿಗೆ ಲೇಸ ಬಯಸಿದವರು. ಆ ಮೂಲಕ ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದವಿಲ್ಲದ ಸಮಾಜವನ್ನು ಸೃಷ್ಟಿಸಿದವರು. ಪೈಗಂಬರರು ಕೂಡ ಇಂಥದೆ ಸಮಾಜದ ನಿರ್ಮಾಣವನ್ನು ಬಯಸಿದ್ದರು.

❖❖

೮

❖

ಬ್ರಾಹ್ಮಣಿಕೆ ವಿರುದ್ಧ ಸಿಡಿದೆದ್ದ ಶರಣರು

ಕಲ್ಲಿಯ ಹಾಕಿ ನೆಲ್ಲವ ತುಳಿದು
ಗುಬ್ಬಿಯ ಸಿಕ್ಕಿಸುವ ಕಳ್ಳನಂತೆ
ವಾಗದ್ವೈತವ ಕಲಿತು
ಸಂಸ್ಕೃತದ ಮಾತಿನ ಪಸರವ ಮುಂದೆ ಇಕ್ಕಿಕೊಂಡು
ಮತ್ಸ್ಯದ ವಕ್ತ್ರದಲ್ಲಿ ಗ್ರಾಸವ ಹಾಕುವನಂತೆ
ಅದೇತರ ನುಡಿ? ಮಾತಿನ ಮರೆ
ಆತುರವೈರಿ ಮಾರೇಶ್ವರ. **–ನಗೆಯ ಮಾರಿತಂದೆ**

ಬಲೆಬೀಸಿ ಕಾಳು ಹಾಕಿ ಗುಬ್ಬಿಗಳನ್ನು ಹಿಡಿಯುವ ಹಾಗೂ ಗಾಳ ಹಾಕಿ ಮೀನು ಹಿಡಿಯುವ ಎರಡು ಚಿತ್ರಣಗಳೊಂದಿಗೆ ನಗೆಯ ಮಾರಿ ತಂದೆ ವಾಗದ್ವೈತದ ಹಿಂದಿರುವ ಮೋಸದಾಟವನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಹಕ್ಕಿಗೆ ಹಾಕುವ ಧಾನ್ಯ ಮತ್ತು ಮೀನಿಗೆ ಹಾಕುವ ಆಹಾರ ಅವುಗಳನ್ನು ಬದುಕಿಸಲಿಕ್ಕಲ್ಲ, ಸಾಯಿಸಲಿಕ್ಕೆ! ಸಂಸ್ಕೃತವೆಂಬ ಮಾತಿನಂಗಡಿಯ ಸರಕಿನಿಂದ ಈ ಮೋಸವನ್ನು ಸಾಧಿಸಲಾಗಿದೆ. ಅದೇತರ ಮಾತು? ಅದು ಸತ್ಯವನ್ನು ಮರೆಮಾಚುವಂಥದ್ದು ಎಂದು ನಗೆಯ ಮಾರಿತಂದೆ ಸಾತ್ವಿಕ ಕೋಪ ವ್ಯಕ್ತಪಡಿಸಿದ್ದಾರೆ. ಅನುಭವದಿಂದ ಕೂಡಿದ ಈ ಪ್ರಜ್ಞೆಯೊಂದಿಗೆ ವಚನಕಾರರು ಅನುಭಾವದ ಮೆಟ್ಟಲೇರಿದ್ದಾರೆ.

ಇಟ್ಟಿಯ ಹಣ್ಣ ನರಿ ತಿಂದು ಸೃಷ್ಟಿ ತಿರುಗಿತ್ತೆಂಬಂತೆ
ಮಟ್ಟಿಯನಿಟ್ಟ ದ್ವಿಜರ ಮಾತದೇಕೋ?
ಹಗಲು ಕಾಣದ ಗೂಗೆ ಇರುಳಾಯಿತ್ತೆಂದರೆ, ಜಗಕ್ಕೆ ಇರುಳಪ್ಪುದೆ?
ಹೋಮದ ನೇಮದಲ್ಲಿ ಹೋತವ ಕೊಂದು ತಿಂಬ
ಅನಾಮಿಕರೊಡನಾಡಿ ಗೆಲುವುದೇನು, ಕೂಡಲಸಂಗಮದೇವಾ?

–ಬಸವಣ್ಣನವರು

ಶರಣರು ವ್ಯರ್ಥ ವಾಗ್ಯುದ್ಧಕ್ಕೆ ಇಳಿಯುವವರಲ್ಲ. ತಲೆಸುತ್ತುವ ಇಟ್ಟಿಯ ಹಣ್ಣನ್ನು ತಿಂದು ತನ್ನ ಮುಂದಿರುವುದೆಲ್ಲ ತಿರುಗುತ್ತಿದೆ ಎಂದು ಹೇಳುವ ನರಿಯ ಹಾಗೆ ನಾಮ ಬಡಿದುಕೊಂಡ ದ್ವಿಜರು ಹೇಳುತ್ತಾರೆ. ಗೂಬೆಗೆ ಹಗಲೆಂದರೆ ಆಗದು. ಅದು 'ಕತ್ತಲಾಯಿತು' ಎಂದರೆ ಕತ್ತಲಾಗುವುದೆ? ಹೀಗೆ ಇಲ್ಲದ್ದನ್ನು ಇರುವ ಹಾಗೆ ಹೇಳುತ್ತ ಭ್ರಮೆಯ ಸೃಷ್ಟಿಸುವ ವೈದಿಕ ಸಾಹಿತ್ಯದಿಂದ ಪ್ರಭಾವಿತರಾದ ದ್ವಿಜರು ಯಜ್ಞಕ್ಕೆ ಬಲಿ ಕೊಟ್ಟ ಹೋತವನ್ನು ತಿಂದು ಉಪದೇಶ ಮಾಡುವವರು. ಇಂಥವರೇ ಹೊಲೆಯರು. (ಮನುಸ್ಮೃತಿಯ ಒತ್ತಡದಿಂದಾಗಿ ಹೊಲಗೇರಿಯಲ್ಲಿ ಉಳಿದವರು ಹೊಲೆಯರಲ್ಲ.) ಹೀಗೆ ಬಸವಣ್ಣನವರು ತಮ್ಮ ಕಾಲದ ವಾಸ್ತವವನ್ನು ವಚನದಲ್ಲಿ ದಾಖಲಿಸಿದ್ದಾರೆ. ಇಂಥ ವಿತಂಡವಾದಿಗಳ ಜೊತೆ ವಾಗ್ವಾದ ಮಾಡಿ ಗೆಲ್ಲುವುದು ಕೂಡ ವ್ಯರ್ಥ ಎಂದು ಸೂಚಿಸಿದ್ದಾರೆ. "ಏನಯ್ಯಾ ವಿಪ್ರರು ನುಡಿದಂತೆ ನಡೆಯರು. ತಮಗೊಂಡು ಬಟ್ಟೆ (ದಾರಿ) ಶಾಸ್ತ್ರಕ್ಕೊಂದು ಬಟ್ಟೆ" ಎಂದು ಬೇಸರ ವ್ಯಕ್ತ ಪಡಿಸಿದ ಬಸವಣ್ಣನವರು "ವಿಪ್ರರು ಕೀಳು ನೋಡಾ ಜಗವೆಲ್ಲ ಅರಿಯಲು" ಎಂದು ಸಾತ್ವಿಕ ಕೋಪ ವ್ಯಕ್ತಪಡಿಸಿದ್ದಾರೆ. ಬ್ರಾಹ್ಮಣ ಕುಲದಲ್ಲಿ ಹುಟ್ಟಿದ ಬಸವಣ್ಣನವರು ಅದರ ನಿಜಸ್ವರೂಪವನ್ನು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ.

ವೇದಂಗಳ ಹಿಂದೆ ಹರಿಯದಿರು.
ಶಾಸ್ತ್ರಂಗಳ ಹಿಂದೆ ಸುಳಿಯದಿರು, ಸುಳಿಯದಿರು.
ಪುರಾಣಂಗಳ ಹಿಂದೆ ಬಳಸದಿರು, ಬಳಸದಿರು.
ಆಗಮಂಗಳ ಹಿಂದೆ ತೊಳಲದಿರು, ತೊಳಲದಿರು.
ಸೌರಾಷ್ಟ್ರ ಸೋಮೇಶ್ವರನ ಕೈವಿಡಿದು
ಶಬ್ದಜಾಲಂಗಳಿಗೆ ಬಳಲದಿರು, ಬಳಲದಿರು. –ಆದಯ್ಯ

ವೇದಾಗಮಗಳ ಸಂಸ್ಕೃತಿಯು ಶಬ್ದಜಾಲಗಳ ಸಂಸ್ಕೃತಿಯೇ ಆಗಿದೆ. ಈ ಶಬ್ದಜಾಲಗಳಲ್ಲಿ ಅಸಮಾನತೆ, ಜಾತಿ, ಅಸ್ಪೃಶ್ಯತೆ ಮತ್ತು ಅರ್ಧ ಜಗತ್ತನ್ನು ಪ್ರತಿನಿಧಿಸುವ ಹೆಣ್ಣಿನ ವ್ಯಕ್ತಿತ್ವವನ್ನು ಹಿಡಿದಿಡಲಾಗಿದೆ. ಕಾಯಕಜೀವಿಗಳು ಈ ಶಬ್ದಜಾಲಗಳಿಗೆ ಸಿಲುಕಿ ಬಳಲಬಾರದು. ವೇದ, ಶಾಸ್ತ್ರ, ಪುರಾಣ, ಆಗಮಗಳಿಗೆ ಮೋಹಗೊಂಡು ತಮ್ಮತನವನ್ನು ಕಳೆದುಕೊಳ್ಳಬಾರದು ಎಂಬುದು ಆದಯ್ಯನವರ ಆಶಯವಾಗಿದೆ.

ವೇದದವರನೊಲ್ಲದೆ ನಮ್ಮ ಮಾದಾರ ಚನ್ನಯ್ಯಂಗೊಲಿದ.
ಶಾಸ್ತ್ರದವರನೊಲ್ಲದೆ ಶಿವರಾತ್ರಿಯ ಸಂಕಣ್ಣಂಗೊಲಿದ.
ಆಗಮದವರನೊಲ್ಲದೆ ತೆಲುಗು ಜೊಮ್ಮಯ್ಯಂಗೊಲಿದ.
ಪುರಾಣಕರ್ಮಿಗಳೆಂಬ ವಿಶಿಷ್ಟಬ್ರಹ್ಮರನೊಲ್ಲದೆ ಉದ್ಭಟಯ್ಯಂಗೊಲಿದ
ಅಣ್ಣಾ ಕೇಳಾ ಸೋಜಿಗವ:

ದಾಸ ದುಗ್ಗಳೆಯರಿಗೊಲಿದ
ಮುಕ್ಕಣ್ಣ ಸೊಡ್ಡಳ, ಹಾರುವಣ್ಣಗಳಿಗೆ ಹೇಸಿ ಕದವಸಿಕ್ಕಿಗೊಂಡನು.
–ಸೊಡ್ಡಳ ಬಾಚರಸ

ದೇವರು ಕೂಡ ದುಡಿಯುವವರ, ಹಿಂದುಳಿದವರ, ಅಸ್ಪೃಶ್ಯರ ಮತ್ತು ಮಹಿಳೆಯರ ಪರವಾಗಿ ಇದ್ದಾನೆ. ದೇವರು ಯಾರನ್ನು ತಿರಸ್ಕರಿಸುವನು ಮತ್ತು ಯಾರನ್ನು ಪುರಸ್ಕರಿಸುವನು ಎಂಬುದನ್ನು ಸೊಡ್ಡಳ ಬಾಚರಸರು ಸ್ಪಷ್ಟಪಡಿಸಿದ್ದಾರೆ. ಹೀಗೆ ವಚನಕಾರರು ಶೋಷಣೆಗೊಳಗಾದ ವರ್ಗದಲ್ಲಿ ಆತ್ಮಸ್ಥೈರ್ಯ ತುಂಬುತ್ತ ಶೋಷಕವರ್ಗ ನಿಬ್ಬೆರಗಾಗುವಂತೆ ಮಾಡಿದರು. ದುಡಿಯುವ ವರ್ಗಕ್ಕೆ ಈ ಸೋಜಿಗದ ವಿಷಯವನ್ನು ಉತ್ಸಾಹದಿಂದ ಉಸುರಿದರು.

ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ,
ಸಕಲ ವೇದ ಶಾಸ್ತ್ರವೆಂಬ ನೇಣ ಕಟ್ಟಿ ಹಿಡಿದು ತೂಗಿ
ಜೋಗುಳವಾಡುತ್ತಾ ಇದ್ದಾಳೆ ಭ್ರಾಂತಿ ಎಂಬ ತಾಯಿ.
ತೊಟ್ಟಿಲು ಮುರಿದು, ನೇಣು ಹರಿದು, ಜೋಗುಳ ನಿಂದಲ್ಲದೆ
ಗುಹೇಶ್ವರನೆಂಬ ಲಿಂಗವ ಕಾಣಬಾರದು. **–ಅಲ್ಲಮಪ್ರಭು**

ಅಜ್ಞಾನವೆಂಬ ತೊಟ್ಟಿಲಲ್ಲಿ ಜ್ಞಾನವನ್ನು ಮಲಗಿಸುವುದರ ಮೂಲಕ ಅದನ್ನು ಹಾಗೇ ನಿಷ್ಕ್ರಿಯಗೊಳಿಸಿ ಇಡಲಾಗಿದೆ. ಸಕಲವೇದಶಾಸ್ತ್ರಗಳು ಈ ಅಜ್ಞಾನದ ತೊಟ್ಟಿಲನ್ನು ಗಟ್ಟಿಯಾಗಿ ಹಿಡಿದುಕೊಂಡಿವೆ. ಭ್ರಾಂತಿ ಎಂಬ ತಾಯಿ ವಾಸ್ತವವನ್ನು ಮರೆಸುವ ಜೋಗುಳವಾಡುತ್ತ ಆ ಶಿಶುರೂಪಿ ಜ್ಞಾನವನ್ನು ಮಲಗಿಸುತ್ತಲೇ ಇದ್ದಾಳೆ. ವೇದಶಾಸ್ತ್ರಗಳನ್ನು ನಿಷ್ಕ್ರಿಯ ಮಾಡುವುದರ ಮೂಲಕ ಅಜ್ಞಾನವನ್ನು ಹೋಗಲಾಡಿಸಿ ಭ್ರಾಂತಿಯಿಂದ ಹೊರಗೆ ಬಂದನಂತರವೇ ಸರ್ವಸಮತ್ವದ ನಿಜಾದ್ವೈತದಿಂದ ಕೂಡಿದ ಜ್ಞಾನವೆಂಬ ಗುಹೇಶ್ವರನ ಕಾಣಲು ಸಾಧ್ಯ ಎಂಬುದನ್ನು ಅಲ್ಲಮಪ್ರಭುಗಳು ಮಾರ್ಮಿಕವಾಗಿ ನುಡಿದಿದ್ದಾರೆ.

ಯಾರು ಹಿರಿಯರು?: ಬಸವಣ್ಣನವರ ಯಾರು ಹಿರಿಯರು ಎಂಬ ಪ್ರಶ್ನೆಯಲ್ಲಿ ಸಾಮಾಜಿಕ ನ್ಯಾಯ ಅಡಗಿದೆ. ಹೀಗೆ ಪ್ರಶ್ನಿಸುವ ಮೂಲಕ ಅವರು ವಿಶ್ವದ ಬಡವರ ಪರವಾಗಿ ಧ್ವನಿ ಎತ್ತಿದ್ದಾರೆ.

ವೇದ ಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ?
ಕವಿ, ಗಮಕಿ, ವಾದಿ, ವಾಗ್ಮಿಗಳು ಹಿರಿಯರೆ?
ನಟಿನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?

ಹಿರಿಯತನವಾವುದೆಂದಡೆ ಗುಣಜ್ಞಾನ
ಆಚಾರಧರ್ಮ ಕೂಡಲಸಂಗನ ಶರಣರು ಸಾಧಿಸಿದ ಹಿರಿಯತನ.
–ಬಸವಣ್ಣ

ಮಾನವನು ಭೂಮಿಯ ಮೇಲೆ ಬದುಕಲು ಸಾಧ್ಯವಾಗುವಂಥ ಕೆಲಸ ಕಾರ್ಯಗಳನ್ನು ಕಾಯಕಜೀವಿಗಳು ಮಾಡುತ್ತಾರೆ. ಆದರೆ ಅವರ ಜ್ಞಾನಕ್ಕೆ ಬೆಲೆ ಸಿಗುತ್ತಿಲ್ಲ. ಜ್ಞಾನವನ್ನು ಕ್ರಿಯೆಗೆ ಇಳಿಸುವವರಿಗಿಂತ ಜ್ಞಾನದ ಕುರಿತು ಮಾತನಾಡುವವರೇ ಈ ಸಮಾಜದಲ್ಲಿ ಸಕಲ ಸೌಲಭ್ಯಗಳನ್ನು ಪಡೆಯುತ್ತಾರೆ. ಸೂಕ್ಷ್ಮಮತಿಗಳಾದ ಬಸವಣ್ಣನವರು ಈ ಬೌದ್ಧಿಕ ಮತ್ತು ದೈಹಿಕ ತಾರತಮ್ಯವನ್ನು ಗಮನಿಸಿದರು. ಬೀದಿಯಲ್ಲಿ ಅದ್ಭುತವಾಗಿ ನರ್ತಿಸುತ್ತ ಜನಮನವನ್ನು ಸೂರೆಗೊಳ್ಳುವ ನರ್ತಕಿ, ಬಾಣವನ್ನು ಪ್ರಯೋಗಿಸುವ ಗುರಿಕಾರ, ವಾಕ್ಚಾತುರ್ಯದಿಂದ ಜನರನ್ನು ನಗೆಗಡಲಲ್ಲಿ ಮುಳುಗಿಸುವ ಹಾಸ್ಯಗಾರ ಮತ್ತು ದೈಹಿಕ ಕಸರತ್ತಿನೊಂದಿಗೆ ಜಾಣ್ಮೆಯನ್ನು ಪ್ರದರ್ಶಿಸುತ್ತ ಬದುಕಿನ ಸಮತೋಲನ ತತ್ತ್ವವನ್ನು ಸಾರುವ ಡೊಂಬ ಅದು ಹೇಗೆ ಕಿರಿಯರಾಗುತ್ತಾರೆ ಎಂಬುದು ಬಸವಣ್ಣನವರ ಸವಾಲಾಗಿದೆ.

ವೇದಾಗಮಗಳನ್ನು ಓದಿದವರು ಅದು ಹೇಗೆ ದೊಡ್ಡವರಾಗುತ್ತಾರೆ? ಕವಿಗಳು, ಕಾವ್ಯವನ್ನು ರಾಗಬದ್ಧವಾಗಿ ಓದುವ ಗಮಕಿಗಳು, ವ್ಯಾಖ್ಯಾನಕಾರರು ಮತ್ತು ವಾಕ್ಪಟುಗಳು ಅದು ಹೇಗೆ ದೊಡ್ಡವರಾಗುತ್ತಾರೆ? ಬದುಕುವ ಕಲೆಯನ್ನು ಕಲಿತ ಡೊಂಬರು ಮುಂತಾದವರು ಅದು ಹೇಗೆ ಸಣ್ಣವರಾಗುತ್ತಾರೆ? ಎಂಬುವು ಬಸವಣ್ಣನವರು ಸಮಾಜದ ಮುಂದೆ ಇಟ್ಟ ಪ್ರಶ್ನೆಗಳಾಗಿವೆ.

ಸಾತ್ವಿಕ ಗುಣಜ್ಞಾನದೊಂದಿಗೆ ಶರಣರು ಆಚಾರಧರ್ಮದ ಸಾಧನೆ ಮಾಡಿದ್ದಾರೆ ಎಂದು ಬಸವಣ್ಣನವರು ಹೆಮ್ಮೆಯಿಂದ ಹೇಳುತ್ತಾರೆ.

ಅಹಿಂಸಾ ಸಮಾಜ: ಬಸವಣ್ಣನವರು ಎಲ್ಲ ಪ್ರಕಾರದ ಕಾಯಕಜೀವಿಗಳ ಜೀವನಾನುಭವದಿಂದ ಹೊಸ ಸಮತಾ ಸಿದ್ಧಾಂತವನ್ನು ರೂಪಿಸಿದರು. ಕೆಳಜಾತಿ ಮತ್ತು ಕೆಳವರ್ಗಗಳ ಬದುಕು ಅಹಿಂಸಾ ಪ್ರಧಾನವಾಗಿದೆ. ಆದರೆ ವೈದಿಕಶಾಹಿಯ ವರ್ಣಭೇದ, ವರ್ಗಭೇದ ಮತ್ತು ಲಿಂಗಭೇದ ವ್ಯವಸ್ಥೆ ಹಿಂಸಾ ಪ್ರಧಾನ ಸಮಾಜವನ್ನು ರೂಪಿಸಿದೆ. ಇಂಥ ಕ್ರೂರ ವೈದಿಕ ಹಿಂಸಾ ವ್ಯವಸ್ಥೆಯನ್ನು ಕೊನೆಗಾಣಿಸುವುದರ ಬಗ್ಗೆ ಬಸವಣ್ಣನವರು ಚಿಂತಿಸಿದರು. ಎಲ್ಲ ಜಾತಿಗಳಲ್ಲಿ ಹರಿದು ಹಂಚಿ ಹೋಗಿರುವ ಬಡವರನ್ನು ಒಂದಾಗಿಸಿ ಶರಣಸಂಕುಲವೆಂಬ ಜಾತಿ ಮತ್ತು ವರ್ಗರಹಿತ ಸಮಾಜವನ್ನು ನಿರ್ಮಿಸುವುದರ ಮೂಲಕ ಸರ್ವವಿಧದ ಶೋಷಣೆಗಳಿಂದ ಕೂಡಿದ ಹಿಂಸಾ ವ್ಯವಸ್ಥೆಯನ್ನು ಕೊನೆಗಾಣಿಸುವುದೇ ಬಸವಣ್ಣನವರ ಪರಮ ಗುರಿಯಾಗಿತ್ತು.

ಭಕ್ತಿ ಇಲ್ಲದ ಬಡವ ನಾನಯ್ಯಾ
ಕಕ್ಕಯ್ಯನ ಮನೆಯಲ್ಲೂ ಬೇಡಿದ
ಚೆನ್ನಯ್ಯನ ಮನೆಯಲ್ಲೂ ಬೇಡಿದೆ
ದಾಸಯ್ಯನ ಮನೆಯಲ್ಲೂ ಬೇಡಿದೆ
ಎಲ್ಲ ಪುರಾತರು ನೆರೆದು ಭಕ್ತಿಭಿಕ್ಷವನಿಕ್ಕಿದಡೆ
ಎನ್ನ ಪಾತ್ರೆ ತುಂಬಿತ್ತು ಕೂಡಲಸಂಗಮದೇವಾ. –ಬಸವಣ್ಣ

ಬಸವಣ್ಣನವರು ಇಂಥ ಭಕ್ತಿಯ ಕುರಿತು ಈ ವಚನದಲ್ಲಿ ತಿಳಿಸುತ್ತಾರೆ. ಬಸವಣ್ಣನವರು ಎಲ್ಲ ಸ್ತರದ ಜನಸಮುದಾಯಗಳ ಅನುಭವ ಮತ್ತು ಸಂಸ್ಕಾರಗಳಿಗೆ ಭಕ್ತಿ ಎಂದು ಕರೆಯುತ್ತಾರೆ. ಎಲ್ಲರ ಅನುಭವ ಮತ್ತು ಸಂಸ್ಕಾರಗಳನ್ನು ತಮ್ಮದಾಗಿಸಿಕೊಳ್ಳುವುದರ ಮೂಲಕ ಮಹಾನುಭಾವಿಯಾಗುತ್ತಾರೆ. ಹೀಗಾಗಿ ಅವರಿಗೆ ಜಗತ್ತಿನ ಎಲ್ಲ ರಹಸ್ಯಗಳು ಗೋಚರಿಸತೊಡಗುತ್ತವೆ. ಎಲ್ಲರ ಭಕ್ತಿಭಿಕ್ಷೆಯಿಂದ ಅವರ ಅನುಭವದ ಪಾತ್ರೆ ತುಂಬಿದೆ. ಅಂತೆಯೆ ಅವರಿಗೆ ಮಾನವನನ್ನು ಎಲ್ಲರೀತಿಯ ಬಂಧನಗಳಿಂದ ವಿಮೋಚನೆಗೊಳಿಸುವ ಮಾರ್ಗವನ್ನು ಕಂಡುಹಿಡಿಯಲು ಸಾಧ್ಯವಾಯಿತು. ಮೇಲ್ಜಾತಿಯವರ ಪುಸ್ತಕ ಜ್ಞಾನ ಮತ್ತು ಕೆಳಜಾತಿಗಳವರ ಅನುಭವಾಮೃತದಿಂದ ಅವರು ಸತ್ಯ ಮತ್ತು ಅಸತ್ಯದ ಅಂತರವನ್ನು ಕಂಡುಕೊಂಡರು. ನ್ಯಾಯ ಮತ್ತು ಅನ್ಯಾಯದ ರೀತಿಗಳನ್ನು ಗುರುತಿಸಿದರು. ಸುಲಿಗೆಯ ಮೂಲವನ್ನು ಅರಿತರು. ಹೀಗಾಗಿ ಜಾತಿ, ಮತ, ಪಂಥ, ವರ್ಗ, ವರ್ಣ, ಲಿಂಗ ಮುಂತಾದ ಭೇದಗಳಿಂದ ಮಾನವಕುಲವನ್ನು ಮೇಲಕ್ಕೆತ್ತುವ ಸಿದ್ಧಾಂತವನ್ನು ರೂಪಿಸಲು ಅವರಿಗೆ ಸಾಧ್ಯವಾಯಿತು. ಮನುಷ್ಯರನ್ನು ಮೂಢನಂಬಿಕೆಯ ಬಲೆಯಲ್ಲಿ ಸಿಲುಕಿಸುವುದರ ಮೂಲಕ ಅವರೆಂದೂ ಸ್ವತಂತ್ರವಾಗಿ ಚಿಂತನೆ ಮಾಡದ ಹಾಗೆ ನೋಡಿಕೊಳ್ಳುವ ಕರ್ಮಸಿದ್ಧಾಂತವನ್ನು ಆಮೂಲಾಗ್ರವಾಗಿ ವಿರೋಧಿಸುವ ಶಕ್ತಿಯನ್ನು ಪಡೆಯಲು ಸಾಧ್ಯವಾಯಿತು.

ಎಲ್ಲಿಯವರೆಗೆ ನಾವು ಕಾಯಕಜೀವಿಗಳ ಅನುಭವಕ್ಕೆ ಬೆಲೆ ಕೊಡುವುದಿಲ್ಲವೋ ಅಲ್ಲಿಯವರೆಗೆ ನಾಗರಿಕ ಸಮಾಜವನ್ನು ನಿರ್ಮಿಸಲು ಸಾಧ್ಯವಿಲ್ಲ ಎಂಬುದನ್ನು ಭಕ್ತಿಯ ಪರಿಕಲ್ಪನೆಯ ಮೂಲಕ ತೋರಿಸಿಕೊಟ್ಟರು. ಭಕ್ತಿ ಎಂಬ ಇಂಥ ಕ್ರಾಂತಿಕಾರಿ ಮಾನವೀಯ ಪ್ರಜ್ಞೆ ಇಲ್ಲದವನೇ ನಿಜವಾದ ಬಡವ ಎಂಬುದನ್ನು ಸೂಚಿಸಿದರು. ವೈದಿಕರ ಭಕ್ತಿ ಗುಲಾಮರನ್ನು ಸೃಷ್ಟಿಸುವಂಥದ್ದು. ಆದರೆ ಶರಣರ ಭಕ್ತಿ ಮಾನವರನ್ನು ಎಲ್ಲ ತೆರನಾದ ಗುಲಾಮಗಿರಿಯಿಂದ ವಿಮೋಚನೆಗೊಳಿಸುವಂಥದ್ದು.

ಹೀಗೆ ಬಸವಣ್ಣನವರು ಎಲ್ಲ ಜಾತಿ ಜನಾಂಗಗಳ ಅನುಭವವನ್ನು ತಮ್ಮದಾಗಿಸಿಕೊಂಡರು. ಅವರಲ್ಲೇ ಒಬ್ಬರಾಗಿ ಸಮಾಜವನ್ನು ನೋಡಿದರು.

ಅಸಮಾನತೆಯ ಸಮಾಜ ಅಸಹನೀಯವೆನಿಸಿತು. ಇಂಥ ಕುರೂಪ ಸಮಾಜವನ್ನು ಸುಂದರ ಸಮಾಜವನ್ನಾಗಿಸಲು ಪಣ ತೊಟ್ಟರು. ಕೆಳಜಾತಿಗಳಿಂದ ಬಂದ ಸತ್ಪುರುಷರಾದ ಡೋಹರ ಕಕ್ಕಯ್ಯ, ಮಾದಾರ ಚೆನ್ನಯ್ಯ, ದಾಸಯ್ಯ ಮುಂತಾದವರ ಅನುಭವ ಬಸವಣ್ಣನವರಿಗೆ ಶ್ರೀರಕ್ಷೆಯಾಯಿತು. ಅವರ ಅನುಭವದ ಪಾತ್ರೆಯನ್ನು ತುಂಬಿಸಿದವರೇ ಇಂಥ ಕಾಯಕಜೀವಿಗಳು. ಈ ಲಕ್ಷಾಂತರ ಜನರ ಅನುಭವದಿಂದ ಒಂದು ನಾಗರೀಕತೆ ನಿರ್ಮಾಣವಾಗುವುದು. ಅವರೆಲ್ಲರ ಅನುಭವದ ಸಾರವಾದ ಅನುಭಾವದಿಂದ ಮಾನವೀಯ ಸಂಸ್ಕೃತಿ ಅರಳುವುದು. ಹೀಗೆ ನಿರ್ಮಾಣವಾದ ನಾಗರೀಕತೆಯಲ್ಲಿ ಅರಳಿದ ಸಂಸ್ಕೃತಿಯಲ್ಲಿ ವಿಶ್ವಮಾನವನ ಉದಯವಾಗುವುದು.

ಕರ್ಮಸಿದ್ಧಾಂತಕ್ಕೆ ವಿರೋಧ: ಶೋಷಣೆಯ ಮೂಲವಾದ ಕರ್ಮಸಿದ್ಧಾಂತವನ್ನು ಬಸವಣ್ಣನವರು ಕಾಯಕಸಿದ್ಧಾಂತದ ಮೂಲಕ ವಿರೋಧಿಸಿದರು. ಕರ್ಮ ಎನ್ನುವುದು ನಮ್ಮ ಮನದೊಳಗಿನ ಕತ್ತಲೆ. ಅದನ್ನು ಇಷ್ಟಲಿಂಗವೆಂಬ ನಮ್ಮೊಳಗಿನ ಅರಿವಿನ ಬೆಳಕಿನ ಮೂಲಕ ಇಲ್ಲವಾಗಿಸಬೇಕು.

ಕಬ್ಬುನ ಪರುಷವೇಧಿಯಾದಡೇನು,
ಕಬ್ಬುನ ಹೊನ್ನಾಗದಡಾ ಪರುಷವದೇಕೊ?
ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ?
ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ
ಕರ್ಮ ಹರಿಯದೊಡಾ ಪೂಜೆಯದೇಕೊ? –ಬಸವಣ್ಣ

ಸಂಚಿತಕರ್ಮ, ಪ್ರಾರಬ್ಧಕರ್ಮ ಮತ್ತು ಆಗಾಮಿಕರ್ಮ ಎಂದು ಕರ್ಮಗಳಲ್ಲಿ ಮೂರು ಪ್ರಕಾರಗಳಿವೆ. ಜನ್ಮಜನ್ಮಾಂತರಗಳಿಂದ ಸಂಗ್ರಹವಾಗುತ್ತ ಬಂದಿರುವ ಪಾಪಕರ್ಮಕ್ಕೆ ಸಂಚಿತಕರ್ಮ ಎಂದು ಕರೆಯುವರು. ಹಿಂದಿನ ಜನ್ಮದಲ್ಲಿ ಮಾಡಿದ ಪಾಪಕರ್ಮಕ್ಕೆ ಪ್ರಾರಬ್ಧಕರ್ಮ ಎನ್ನುವರು. ಇದೇ ಜನ್ಮದಲ್ಲಿ ಮಾಡುವ ಪಾಪಕ್ಕೆ ಆಗಾಮಿಕರ್ಮ ಎಂದು ಹೇಳುವರು. ಭಾರತೀಯರ ಮನಸ್ಸಿನಲ್ಲಿ ಈ ಕರ್ಮಸಿದ್ಧಾಂತ ಆಳವಾಗಿ ಬೇರೂರಿದೆ. ಸಾಮಾಜಿಕ ಮನೋವಿಜ್ಞಾನಕ್ಕೆ ಇದೊಂದು ದೊಡ್ಡ ಸವಾಲಾಗಿದೆ. ನಮ್ಮ ಜನ ತಮ್ಮ ಮೇಲೆ ಆಗುವ ಅನ್ಯಾಯಕ್ಕೆ ಕೂಡ 'ಇದೆಲ್ಲ ನಮ್ಮ ಹಣೆಬರಹ' ಎಂದು ಹೇಳುತ್ತ ನ್ಯಾಯಕ್ಕಾಗಿ ಹೋರಾಡುವ ಶಕ್ತಿಯನ್ನೇ ಕಳೆದುಕೊಳ್ಳುತ್ತಾರೆ. ಮನುಷ್ಯನನ್ನು ಮಾನಸಿಕವಾಗಿ ದುರ್ಬಲನನ್ನಾಗಿಸಿ ಆತನ ಕ್ರಿಯಾಶಕ್ತಿಯನ್ನೇ ಹಾಳುಮಾಡುವಂಥ ಕರ್ಮಸಿದ್ಧಾಂತವನ್ನು ಮಹಾನುಭಾವಿ ಬಸವಣ್ಣನವರು ನಿಷ್ಕ್ರಿಯಗೊಳಿಸಲು ಪಣತೊಟ್ಟು ಇಂಥ ವಚನಗಳನ್ನು ಬರೆದಿದ್ದಾರೆ.

ಸರ್ವಸಮತ್ವವನ್ನು ಸಾರುವ ಇಷ್ಟಲಿಂಗದಲ್ಲಿ ಕರ್ಮವನ್ನು ನಾಶಗೊಳಿಸುವ ಶಕ್ತಿ ಇದೆ. ಇಷ್ಟಲಿಂಗ ಪೂಜಕರು ಕರ್ಮಸಿದ್ಧಾಂತವನ್ನು ನಂಬಬಾರದು.

ಮಾನವಕಲ್ಯಾಣದ ತತ್ತ್ವಕ್ಕೆ ಬದ್ಧರಾದವರಿಗೆ ಕರ್ಮಸಿದ್ಧಾಂತ ಬಾಧಿಸಲು ಸಾಧ್ಯವಿಲ್ಲ. ದುರ್ಬಲ ಮನಸ್ಸಿನವರ ಮೇಲೆ ಮಾತ್ರ ಕರ್ಮಸಿದ್ಧಾಂತ ಸವಾರಿ ಮಾಡುವುದು. ಒಂದುವೇಳೆ ಇಷ್ಟಲಿಂಗ ಪೂಜೆ ಮಾಡಿಯೂ ಕರ್ಮಸಿದ್ಧಾಂತದ ಮೇಲೆ ನಂಬಿಕೆ ಇಟ್ಟರೆ ಪೂಜೆ ಮಾಡಿ ಉಪಯೋಗವಿಲ್ಲ. ಏಕೆಂದರೆ ಇಷ್ಟಲಿಂಗತತ್ತ್ವ ಮತ್ತು ಕರ್ಮಸಿದ್ಧಾಂತ ತದ್ವಿರುದ್ಧವಾಗಿವೆ. ಕರ್ಮಸಿದ್ಧಾಂತ ಕತ್ತಲೆಯಾದರೆ, ಇಷ್ಟಲಿಂಗ ಬೆಳಕು. ಕರ್ಮಸಿದ್ಧಾಂತವನ್ನು 'ಕಬ್ಬಿಣ' ಎಂದು ಭಾವಿಸಿದರೆ, ಇಷ್ಟಲಿಂಗ ಪರುಷ. ಇಷ್ಟಲಿಂಗವೆಂಬ ಬೆಳಕು ಕರ್ಮಸಿದ್ಧಾಂತವೆಂಬ ಕತ್ತಲೆ ಕಳೆಯದಿದ್ದರೆ ಆ ಇಷ್ಟಲಿಂಗ ಪೂಜೆಯ ಅವಶ್ಯಕತೆ ಏನು? ಎಂದು ಪ್ರಶ್ನಿಸುವಷ್ಟು ಬಸವಣ್ಣನವರು ಕರ್ಮಸಿದ್ಧಾಂತವನ್ನು ತಿರಸ್ಕಾರದಿಂದ ನೋಡುತ್ತಾರೆ. ಏಕೆಂದರೆ ಯುಗಯುಗಗಳಿಂದಲೂ ಜನಸಮುದಾಯ ಈ ಕರ್ಮಸಿದ್ಧಾಂತದ ಬಲೆಗೆ ಸಿಕ್ಕಿ ಒದ್ದಾಡುತ್ತಿದೆ.

ಪರುಷಮಣಿಯನ್ನು ಕಬ್ಬಿಣಕ್ಕೆ ಮುಟ್ಟಿಸಿದಾಗ ಆ ಕಬ್ಬಿಣ ಬಂಗಾರವಾಗುತ್ತದೆ ಎಂಬುದು ಕಾವ್ಯಸತ್ಯ. ಒಂದುವೇಳೆ ಪರುಷಮಣಿ ಮುಟ್ಟಿದ ನಂತರವೂ ಆ ಕಬ್ಬಿಣ ಬಂಗಾರವಾಗದಿದ್ದರೆ ಪರುಷಮಣಿ ನಿರರ್ಥಕ. ಕತ್ತಲೆ ಕಳೆಯಲೆಂದು ಜ್ಯೋತಿಯನ್ನು ಹಚ್ಚುತ್ತೇವೆ. ಜ್ಯೋತಿ ಹಚ್ಚಿದ ನಂತರವೂ ಗಾಢಾಂಧಕಾರ ಹಾಗೆಯೆ ಉಳಿದುಕೊಂಡರೆ, ಆ ಜ್ಯೋತಿಯನ್ನು ಹಚ್ಚಿ ಪ್ರಯೋಜನವೇನು? ಅದೇ ರೀತಿ ಕರ್ಮಬಂಧನದಿಂದ ಮುಕ್ತವಾಗುವುದಕ್ಕಾಗಿಯೇ ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಬೇಕು. ಆದರೂ ಕರ್ಮಪಾಶ ಹರಿದುಹೋಗದಿದ್ದರೆ ಆ ಪೂಜೆ ಮಾಡಿ ಪ್ರಯೋಜನವೇನು ಎಂದು ಬಸವಣ್ಣನವರು ಕೇಳುತ್ತಾರೆ. ಅರಿವಿನ ಸಂಕೇತವಾದ ಇಷ್ಟಲಿಂಗವು ಅಜ್ಞಾನದ ಸಂಕೇತವಾದ ಕರ್ಮಸಿದ್ಧಾಂತದಂಥ ಅನಿಷ್ಟಗಳನ್ನು ಹೊಡೆದೋಡಿಸುವಂಥದ್ದು.

ಇಷ್ಟಲಿಂಗ ಪೂಜೆಯು, ದುರ್ಬಲ ಮನಸ್ಸಿನವರಲ್ಲಿ ಶಕ್ತಿ ತುಂಬುವುದು. ಸಮರ್ಪಣಾ ಭಾವದ ಇಷ್ಟಲಿಂಗ ಪೂಜಕನು ಹೀಗೆ ಮಾನಸಿಕ ಸ್ಥೈರ್ಯವನ್ನು ಹೊಂದುವನು. ವೈಚಾರಿಕ ನೆಲೆಯಲ್ಲಿ ಬದುಕನ್ನು ನೋಡುವ ದೃಷ್ಟಿಕೋನವನ್ನು ಪಡೆಯುವನು. ಸುಲಿಗೆಯ ವಿಷವರ್ತುಲಗಳಿಂದ ಹೊರ ಬರುವ ಮಾರ್ಗ ಕಂಡುಕೊಳ್ಳುವನು. ಕರ್ಮಸಿದ್ಧಾಂತದಿಂದ ಜಾತಿಗಳು, ಅಸ್ಪೃಶ್ಯತೆ, ಮೇಲುಕೀಳು ಮತ್ತು ಶೋಷಣೆ ಜನ್ಮತಾಳಿದ್ದನ್ನು ಆತ ಬಹುಬೇಗ ಅರ್ಥಮಾಡಿಕೊಳ್ಳುವನು. ಮಾನವ ಈ ಎಲ್ಲ ರೀತಿಯ ಮನೋದೌರ್ಬಲ್ಯ, ಅಸಹಾಯಕತೆ, ಕೀಳರಿಮೆ ಮತ್ತು ಶೋಷಣೆಯಿಂದ ಹೊರಬಂದು ಕಾಯಕದ ಮೂಲಕ ಆತ್ಮಗೌರವದೊಂದಿಗೆ ಬದುಕುವ ಪ್ರಜ್ಞೆಯನ್ನು ಇಷ್ಟಲಿಂಗ ಪೂಜೆಯು ಮೂಡಿಸುವುದು.

ಇಷ್ಟಲಿಂಗವನ್ನು ಕೊಡುವುದರ ಮೂಲಕ ಬಸವಣ್ಣನವರು ಶೋಷಣೆಯ ಕೇಂದ್ರವಾಗಿರುವ ದೇವಾಲಯಗಳಿಗೆ ಜನ ಹೋಗದಂತೆ ಮಾಡಿದರು. ದೇವರು ಮತ್ತು ಭಕ್ತರ ಮಧ್ಯೆ ಮಧ್ಯವರ್ತಿಗಳು ಇಲ್ಲದಂತೆ ಮಾಡಿದರು. ಆಗ ಜನ ಆರ್ಥಿಕ ಮತ್ತು ಮಾನಸಿಕ ಶೋಷಣೆಯಿಂದ ಮುಕ್ತರಾದರು. ದೇವರು ತಮ್ಮೊಳಗೇ ಇರುವುದರಿಂದ ಅವರಿಗೆ ಎಲ್ಲ ಕಾಲವೂ ಒಳ್ಳೆಯ ಕಾಲವೇ ಆಯಿತು. ಎಲ್ಲ ದಿನಗಳೂ ಒಳ್ಳೆಯ ದಿನಗಳೇ ಆದವು. ತಮ್ಮೊಳಗಿನ ದೇವರು 'ಕರ್ಮಹರ' ಎಂಬ ನಂಬಿಕೆ ಅವರಲ್ಲಿ ಮೂಡಿತು. ಎಲ್ಲ ಕಾಯಕಗಳೂ ದೇವರ ದೃಷ್ಟಿಯಲ್ಲಿ ಸಮ ಎಂಬ ಅರಿವು ಮೂಡಿದಾಗ ಎಲ್ಲ ಕಾಯಕಜೀವಿಗಳು ಸಮಾನರು ಎಂಬ ಸತ್ಯವನ್ನು ಸಾರಿದರು. ಹೀಗೆ ಇಷ್ಟಲಿಂಗವು ಎಲ್ಲ ಕಾಯಕಜೀವಿಗಳನ್ನು ಒಂದುಗೂಡಿಸಿ ಸಮುದಾಯದ ಶಕ್ತಿಯನ್ನು ನೀಡಿತು. ವೈದಿಕರು ಸೃಷ್ಟಿಸಿದ ಎಲ್ಲರೀತಿಯ ಧಾರ್ಮಿಕ ಭಯ, ಮೂಢನಂಬಿಕೆ ಮತ್ತು ಮೇಲುಕೀಳು ಭಾವಗಳಿಂದ ಮುಕ್ತನಾಗುವ ಮೂಲಕ 'ಭಯವೇ ಧರ್ಮದ ಮೂಲ' ಎಂಬುದನ್ನು ಅಲ್ಲಗಳೆದು 'ದಯವೇ ಧರ್ಮದ ಮೂಲ' ಎಂಬ ಲಿಂಗತತ್ತ್ವವನ್ನು ಸಾರಿದರು. ಬದುಕಿಗೆ ಅಂಜದ ಈ ಶರಣರು ಸಕಲ ಜೀವಾತ್ಮರಿಗೆ ಲೇಸನೇ ಬಯಸುತ್ತ ಬದುಕಿ ಮಾನವಕುಲಕ್ಕೇ ಮಾರ್ಗದರ್ಶಿಯಾದರು.

ಕರ್ಮಸಿದ್ಧಾಂತವು ಬಹುಸಂಖ್ಯಾತ ಬಡವರ ಜೀವ ಹಿಂಡುವ ಕ್ರೂರ ಸಿದ್ಧಾಂತವಾಗಿದೆ. ಅವರು ಬದುಕಿನಲ್ಲಿ ಮೇಲೇಳದಂಥ ಮಾನಸಿಕ ವಾತಾವರಣವನ್ನು ಅದು ಸೃಷ್ಟಿಸುತ್ತದೆ. ಕಳ್ಳರು, ಸುಳ್ಳರು, ಸುಲಿಗೆಕೋರರು, ಅನ್ಯಾಯದಿಂದ ಧನ ಗಳಿಸುವವರು, ಧನಾಢ್ಯರು ಮತ್ತು ರಾಜ ಮಹಾರಾಜರಂಥವರು ಕೂಡ ತಮ್ಮ 'ಸೇವೆ' ಮಾಡುವಂಥ ವ್ಯವಸ್ಥೆಯನ್ನು ವೈದಿಕರು ಮೂಢನಂಬಿಕೆಗಳ ತಾಯಿಯಾದ ಕರ್ಮಸಿದ್ಧಾಂತದ ಮೂಲಕ ಸೃಷ್ಟಿಸಿದರು.

ಕರ್ಮ ಎಂದರೆ ಕೆಲಸ. ಕರ್ಮ ಎಂದರೆ ಒಬ್ಬ ವ್ಯಕ್ತಿಯ ಸುಖ ಮತ್ತು ದುಃಖಕ್ಕೆ ಕಾರಣವಾದ ಪೂರ್ವಜನ್ಮದ ಕೃತ್ಯ. ಹೀಗೆ ಕರ್ಮವನ್ನು ಅರ್ಥೈಸುತ್ತಾರೆ. ಆದರೆ ಜನಮನದಲ್ಲಿ 'ಕರ್ಮ' ಎಂದ ಕೂಡಲೇ ಪೂರ್ವಜನ್ಮದ ಪಾಪಕೃತ್ಯ ಎಂಬ ವಿಚಾರವೇ ಹೊಳೆಯುತ್ತದೆ. ಜನ್ಮ ಕಾಲದ ತಿಥಿ. ವಾರ, ನಕ್ಷತ್ರ ಮುಂತಾದ ವಿವರಗಳನ್ನೂ ಆಗಿನ ಗ್ರಹಗಳ ಸ್ಥಿತಿಯನ್ನು (ಯಾವುದೇ ವೈಜ್ಞಾನಿಕ ಆಧಾರಗಳಿಲ್ಲದೆ) ತಿಳಿಸುವುದೇ ಜಾತಕ. ಜಾತಕ ಬರೆಯುವುದೆಂದರೆ, ೧೨ ಮನೆಗಳ ರೇಖಾಕೃತಿಯಿಂದ ಜನ್ಮಕುಂಡಲಿಯನ್ನು ತಯಾರಿಸುವುದು. ಕರ್ಮಸಿದ್ಧಾಂತವನ್ನು ನಂಬುವವರ ಜನ್ಮಕುಂಡಲಿಯನ್ನು ವೈದಿಕರು ಜಾಲಾಡಿಸುತ್ತ ಅವರ ಕರ್ಮ ಪರಿಹಾರ ಮಾಡುವ ಭರವಸೆ ನೀಡುತ್ತಾರೆ. ಗ್ರಹಗಳು ಅವರ ಪರವಾಗಿ ಇರುವಂತೆ ನೋಡಿಕೊಳ್ಳುವುದಾಗಿ

ತಿಳಿಸುತ್ತಾರೆ. ಕರ್ಮ ಪರಿಹಾರಕ್ಕಾಗಿ ಯಜ್ಞ, ಯಾಗ, ಬಲಿ ಮತ್ತು ದಾನ ಮುಂತಾದ ಸಲಹೆಗಳನ್ನು ನೀಡುತ್ತಾರೆ. ಹೀಗೆ ಜನರನ್ನು ಸುಲಿದು ಬದುಕುವಂಥವರನ್ನೂ ಸುಲಿಯುತ್ತಾರೆ. ಅಂಥವರನ್ನು ಪಾಪದಿಂದ ವಿಮೋಚನೆಗೊಳಿಸುವ ನಾಟಕವೇ ಇವರ ಉದ್ಯೋಗವಾಗಿರುತ್ತದೆ.

ಲಿಂಗಾಯತ ಧರ್ಮ ನಿರ್ಜಾತಿ ಧರ್ಮವಾಗಿರುವುದರಿಂದ ಜಾತಿ ಉಪಜಾತಿ ಭ್ರಮೆಯಿಂದ ಹೊರಬರುವುದು ಅವಶ್ಯವಾಗಿದೆ. ಇಲ್ಲದಿದ್ದರೆ ವೈದಿಕದ ಎಲ್ಲ ಅನಿಷ್ಟಗಳ ಒಟ್ಟುರೂಪವಾದ ಬ್ರಾಹ್ಮಣಿಕೆಗೆ ಬಲಿಯಾಗುತ್ತಲೇ ಇರಬೇಕಾಗುತ್ತದೆ.

ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ,
ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯುವೆ ನೋಡಯ್ಯಾ
ಮಹಾದಾನಿ ಕೂಡಲಸಂಗಮದೇವಾ,
ಮಾದಾರ ಚೆನ್ನಯ್ಯನ ಮನೆಯ ಮಗ ನಾನಯ್ಯಾ.

–ಬಸವಣ್ಣನವರು

❖❖

೯

❖

ಹೊಲೆ ಮಾದಿಗರು ಯಾರು?

ಕೊಲುವನೇ ಮಾದಿಗ ಹೊಲಸು ತಿಂಬವನೇ ಹೊಲೆಯ
ಕುಲವೇನೋ ಅವದಿರ ಕುಲವೇನೋ?
ಸಕಲಜೀವಾತ್ಮರಿಗೆ ಲೇಸನೆ ಬಯಸುವ
ನಮ್ಮ ಕೂಡಲಸಂಗನ ಶರಣರೆ ಕುಲಜರು. –ಬಸವಣ್ಣ

ಇಂಥ ವಚನಗಳು ಮತ್ತು ವಚನಗಳಲ್ಲಿ ವಿವಿಧ ಕಡೆ ಬರುವ ಹೊಲೆ ಮಾದಿಗ ಶಬ್ದಗಳು ಹಾಗೂ ತಳಸಮುದಾಯದ ವಿವಿಧ ದೈವಗಳ ಬಗ್ಗೆ ಬಸವಣ್ಣನವರು ತಿರಸ್ಕರಿಸುವ ರೀತಿಯಿಂದ ಅನೇಕ ದಲಿತ ವಿದ್ವಾಂಸರು ಕೂಡ ಸಿಡಿಮಿಡಿಗೊಂಡಿದ್ದನ್ನು ಕಂಡಿದ್ದೇನೆ, ಕೇಳಿದ್ದೇನೆ. ಮೊನ್ನೆ ಒಬ್ಬರು ದೂರವಾಣಿ ಮೂಲಕ ಸಂಪರ್ಕಿಸಿ ಮೇಲಿನ ವಚನದ ಬಗ್ಗೆ ಸಿಡಿಮಿಡಿಗೊಂಡರು. ತಮ್ಮದು ಮಾದಿಗ ಜಾತಿ. ತಮ್ಮ ಮಗನ ಸಹಪಾಠಿಗಳು 'ಕೊಲ್ಲುವವರು ಮಾದಿಗರು' ಎಂದು ಹೀಯಾಳಿಸುತ್ತಾರೆ ಎಂದು ಹೇಳಿದರು. ಬೃಹನ್ಮಠವೊಂದರ ಗೋಡೆಯ ಮೇಲೆ ಕೂಡ ಈ ವಚನವನ್ನು ಬರೆದದ್ದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು. ನಿಮ್ಮ ಅಭಿಪ್ರಾಯವೇನು ಎಂದು ಕೇಳಿದರು. ನನ್ನ ಅಭಿಪ್ರಾಯ ಏನು ಎಂಬುದನ್ನು ಕೇಳುವುದಕ್ಕೂ ಅವರಿಗೆ ತಾಳ್ಮೆ ಇರಲಿಲ್ಲ. 'ಮಾದಿಗರು ಎಂದಾದರೂ ಕೊಲ್ಲುವುದನ್ನು ನೋಡಿದ್ದೀರಾ? ಹೊಲೆಯರು ಹೊಲಸು ತಿಂಬುವುದನ್ನು ನೋಡಿದ್ದೀರಾ?' ಎಂದು ಕೇಳಿದೆ. 'ಇಲ್ಲ' ಎಂದರು. 'ಹಾಗಾದರೆ ಕೊಲುವನೇ ಮಾದಿಗ ಹೊಲಸು ತಿಂಬವನೇ ಹೊಲೆಯ ಎಂದು ಬಸವಣ್ಣನವರು ಹೇಳಿದ್ದರಲ್ಲಿ ತಪ್ಪೇನಿದೆ?' ಎಂದು ಪ್ರಶ್ನಿಸಿದೆ. 'ಯಜ್ಞದಲ್ಲಿ ಪ್ರಾಣಿವಧೆ ಮಾಡುವವರ ಮತ್ತು ಕಾಯಕ ಮಾಡದೆ ಯಜ್ಞಮೂಟದಲ್ಲೇ ಬದುಕುವವರ ಕುರಿತು ಬಸವಣ್ಣನವರು ಈ ವಚನ ಬರೆದಿದ್ದಾರೆ' ಎಂದು ವಿವರಿಸಿದೆ. ಆದರೂ ಆ ವ್ಯಕ್ತಿಗೆ ತೃಪ್ತಿಯಾಗಲಿಲ್ಲ. ಜನರಲ್ಲಿ ದಲಿತರ ಬಗ್ಗೆ ಕೀಳುಭಾವನೆ ಹುಟ್ಟಿಸುವ ಇಂಥ ವಚನಗಳ ಬಳಕೆ ನಿಲ್ಲಬೇಕು ಎಂದೇ ವಾದಿಸಿದರು.

ಯಜ್ಞದಲ್ಲಿ ಕೊಲ್ಲುವವನೇ ಮಾದಿಗ. ಕಾಯಕ ಮಾಡದೆ ತಿನ್ನುವವನೇ ಹೊಲೆಯ. 'ಕುಲವೇನೋ ಅವದಿರ' ಅಂದರೆ ಕೊಲ್ಲದವರನ್ನು ಮಾದಿಗರು ಎನ್ನುವ ಮತ್ತು ದುಡಿದು ತಿನ್ನುವವರನ್ನು ಹೊಲೆಯರು ಎಂದು ಕರೆಯುವ ಆ ವೈದಿಕರ ಕುಲವೇನೋ ಎಂದು ಬಸವಣ್ಣನವರು ಈ ವಚನದಲ್ಲಿ ಸಾತ್ವಿಕ ಕೋಪ ವ್ಯಕ್ತಪಡಿಸಿದ್ದಾರೆ. ಹಲವು ಹದಿನೆಂಟು ಜಾತಿಗಳ ಕಾಯಕಜೀವಿಗಳು ತಮ್ಮ ಜಾತಿಗಳ ಕುರುಹುಗಳನ್ನು ಕಳೆದುಕೊಂಡು, ಸಕಲಜೀವಾತ್ಮರಿಗೆ ಲೇಸನೆ ಬಯಸುತ್ತ, ನಿರ್ಜಾತಿ ಶರಣಸಂಕುಲದಲ್ಲಿ ಒಂದಾಗಿ ಬದುಕುತ್ತಿರುವ ಕೂಡಲಸಂಗನ ಶರಣರೇ ಕುಲಜರು ಹೊರತಾಗಿ ಇಂಥವರನ್ನು ನಿಂದಿಸುವವರು ಕುಲಜರಲ್ಲ. ಹಾಗೆ ನಿಂದಿಸುತ್ತ ಯಜ್ಞದ ಮೂಲಕ ಹೊಟ್ಟೆಹೊರೆಯುವವರೇ ಹೊಲೆ ಮಾದಿಗರು ಎಂದು ಬಸವಣ್ಣನವರು ಸೂಚಿಸಿದ್ದಾರೆ.

ರಾಜರು ಯಜ್ಞಗಳನ್ನು ವರ್ಷಗಟ್ಟಲೆ ಮಾಡುತ್ತಿದ್ದರು. ವೈದಿಕರು ವರ್ಷಗಟ್ಟಲೆ ಅಲ್ಲೇ ಉಳಿದು ದಕ್ಷಿಣೆ ಪಡೆಯುತ್ತ, ಮಾಂಸದೂಟ ಸವಿಯುತ್ತ ಕೂಡುತ್ತಿದ್ದರು. ಇಂಥ ಒಂದು ಪ್ರಸಂಗ ಕಾಳೀದಾಸನ ಮೇಘದೂತ ಖಂಡಕಾವ್ಯದಲ್ಲಿ ಬರುತ್ತದೆ. ರಂತಿದೇವ ಎಂಬ ರಾಜನ ಯಜ್ಞಕ್ಕಾಗಿ ವೈದಿಕರು ಪ್ರತಿದಿನ ಪಶುಗಳನ್ನು ಕೊಂದು ಅವುಗಳ ಚರ್ಮವನ್ನು ರಾಶಿ ಹಾಕುತ್ತಿದ್ದರು. ವರ್ಷಗಟ್ಟಲೆ ನಡೆದ ಈ ಯಜ್ಞದ ಕೊನೆಯ ದಿನದ ಕೊನೆಯ ಗಳಿಗೆಯಲ್ಲಿ ಬಹು ದೂರದಿಂದ ವೈದಿಕರ ಗುಂಪೊಂದು ಬಂದಿತು. ಆಗ ಮಾಂಸದ ತುಂಡುಗಳು ಖಾಲಿಯಾಗಿ ಬರಿ ಸೂಪ್ (ಸಂಸ್ಕೃತದ ಈ ಸೂಪ್ ಇಂಗ್ಲಿಷ್ ಭಾಷೆ ಸೇರಿದೆ) ಮಾತ್ರ ಉಳಿದಿತ್ತು. ಇದರಿಂದ ಕೆಂಡಾಮಂಡಲವಾದ ವೈದಿಕರು ರಂತಿದೇವನಿಗೆ ಶಾಪ ಕೊಡಲು ಮುಂದಾದರು. ಆಗ ಭಯಭೀತನಾದ ರಂತಿದೇವ 'ತಾವು ತಡಮಾಡಿ ಬಂದಿದ್ದೀರಿ. ಈ ದೀರ್ಘಕಾಲದ ಯಜ್ಞದಲ್ಲಿ ಅದೆಷ್ಟು ಪಶುಗಳ ಬಲಿ ಕೊಡಲಾಗಿದೆ ಎಂಬುದಕ್ಕೆ ಈ ಚರ್ಮಗಳ ರಾಶಿಯನ್ನು ನೋಡಿರಿ. ಇವುಗಳ ರಕ್ತದಿಂದಲೇ ಹರಿಯುತ್ತಿರುವ ನದಿಯನ್ನು ನೋಡಿರಿ. ಇದು ಚರ್ಮಣ್ವತಿ ನದಿ ಎಂದು ಹೆಸರು ಪಡೆದಿದೆ' ಎಂದು ಮನವಿ ಮಾಡಿದ. (ಆ ಚರ್ಮಣ್ವತಿ ನದಿಯೇ ಇಂದಿನ ಚಂಬಲ್ ನದಿ)

ಈ ರಾಜರು ಇಷ್ಟೊಂದು ಪಶುಗಳನ್ನು ಎಲ್ಲಿಂದ ತರುತ್ತಿದ್ದರು ಎಂಬುದಕ್ಕೆ ಧರ್ಮಾನಂದ ಕೋಸಂಬಿಯವರ 'ಭಗವಾನ ಬುದ್ಧ' ಗ್ರಂಥದಲ್ಲಿ ಮಾಹಿತಿ ದೊರೆಯುತ್ತದೆ. ರಾಜರು, ಶ್ರೀಮಂತರು ಮತ್ತು ವೈದಿಕರು ಯಜ್ಞಕ್ಕಾಗಿ ರೈತರ ಸಾಕುಪ್ರಾಣಿಗಳನ್ನು ಯಾವುದೇ ಹಣ ಕೊಡದೆ ತರುತ್ತಿದ್ದರು. ರೈತಾಪಿ ಜನರಿಗೆ ದನವೇ ಧನವಾಗಿತ್ತು. (ದನ ಎಂಬುದು ಧನದಿಂದ ಬಂದಿದೆ. ದನವೇ ಧನ. ಇಂಗ್ಲಿಷ್‌ನಲ್ಲಿ ಕ್ಯಾಟಲ್‌ನಿಂದ ಕ್ಯಾಪಿಟಲ್ ಬಂದಿದೆ.) ಆದ್ದರಿಂದ ರಾಜ ಮುಂತಾದ ಬಲಾಢ್ಯರು ಮಹಾಯಜ್ಞ ಆರಂಭಿಸಿದರೆ ರೈತಾಪಿ ಜನ ಒಬ್ಬರಿಗೊಬ್ಬರು ತಬ್ಬಿಕೊಂಡು

ಅಳುತ್ತಿದ್ದರು. ರೈತರು ತಮ್ಮ ದನಗಳನ್ನು ಯಜ್ಞಕ್ಕೆ ಬಲಿಪಶುಗಳಾಗಿ ಕೊಡದಿದ್ದಾಗ ಅವರ ಮೇಲೆ ಹಲ್ಲೆ ಮಾಡಿ ತೆಗೆದುಕೊಂಡು ಹೋಗುತ್ತಿದ್ದರು! ದೀರ್ಘ ಕಾಲದ ಆ ಮಹಾಯಜ್ಞಕ್ಕೆ ಬೇಕಾದ ಬಲಿಪಶುಗಳನ್ನು ಸೈನಿಕರು ಬಂದು ಕಂಡ ಕಂಡ ರೈತರ ಮನೆಗಳ ಮುಂದೆ ಕಟ್ಟಿದ ಪಶುಗಳನ್ನು ಹೊಡೆದುಕೊಂಡು ಹೋಗುತ್ತಿದ್ದರು. ಹಾಗೆ ದನಗಳನ್ನು ಹೊಡೆದುಕೊಂಡು ಹೋಗುವುದನ್ನು ಬುದ್ಧ ಗಮನಿಸಿದ್ದರಿಂದಲೇ ಯಜ್ಞಹಿಂಸೆಯನ್ನು ತಡೆಯಲು ನಿರ್ಧರಿಸಿದ. ದೊಡ್ಡವರ ಯಜ್ಞಕ್ಕಾಗಿ ತಮ್ಮ ದನಕರುಗಳನ್ನು ಪುಕ್ಕಟೆ ಕೊಡಬೇಕಾಗಿ ಬಂದದ್ದರಿಂದಲೇ ಬಡವರು ಮತ್ತು ರೈತಾಪಿ ಜನರು ಸಹಜವಾಗಿಯೆ ಯಜ್ಞವಿರೋಧಿಯಾಗಿದ್ದರು. ಜನ ಬೆಂಬಲವಿದ್ದ ಕಾರಣದಿಂದಲೇ ಬುದ್ಧನ ಯಜ್ಞವಿರೋಧಿ ನಿಲವಿಗೆ ಮಾನ್ಯತೆ ದೊರೆಯಿತು.

ಮಹಾ ಮೇಧಾವಿ ಧರ್ಮಾನಂದ ಕೋಸಂಬೀ ಅವರು ಮರಾಠಿಯಲ್ಲಿ ರಚಿಸಿದ ಭಗವಾನ್ ಬುದ್ಧ ಗ್ರಂಥವನ್ನು ಆದ್ಯ ರಂಗಾಚಾರ್ಯ (ಶ್ರೀರಂಗ)ರು ಕನ್ನಡಕ್ಕೆ ಅನುವಾದ ಮಾಡಿದ್ದಾರೆ. ಕೇಂದ್ರ ಸಾಹಿತ್ಯ ಅಕಾಡೆಮಿ ಈ ಅನುವಾದ ಗ್ರಂಥವನ್ನು ೧೯೫೬ ರಲ್ಲಿ ಪ್ರಕಟಿಸಿದೆ. ಆ ಗ್ರಂಥದ ಯಜ್ಞಯಾಗ ಅಧ್ಯಾಯದಲ್ಲಿನ 'ಜನರಿಗೆ ಗೋ ಹಿಂಸೆ ಬೇಕಿದ್ದಿಲ್ಲ' ಎಂಬ ಉಪಶೀರ್ಷಿಕೆಯಲ್ಲಿ ಕೆಳಗಿನ ವಿಚಾರ ವ್ಯಕ್ತವಾಗಿದೆ.

'ಈ ದಾಸ, ದೂತ ಮತ್ತು ಆಳುಗಳು ಯಜ್ಞದ ಕೆಲಸಗಳನ್ನು ಅಳುತ್ತ ಅಳುತ್ತ ಯಾಕೆ ಮಾಡುತ್ತಿರಬಹುದಾಗಿದೆ? ಯಾಕೆಂದರೆ ಈ ಯಜ್ಞದಲ್ಲಿ ದನಗಳನ್ನು ಕೊಲ್ಲಲಾಗುತ್ತಿತ್ತು. ಅದನ್ನು ಬಡ ರೈತರಿಂದ ಕಸಿದುಕೊಳ್ಳಲಾಗುತ್ತಿತ್ತು. ಅದಕ್ಕಾಗಿ ರೈತರಿಗೆ ಬಹಳ ಕೆಡುಕೆನಿಸುತ್ತಿತ್ತು.. .. ..

ರಾಜರು ಮತ್ತು ಶ್ರೀಮಂತ ಜನರು ಸ್ವಂತ ತಮ್ಮ ಹಸುಗಳನ್ನೆ ಕೊಲ್ಲುತ್ತಿದ್ದರೆ ದಾಸರೂ ಆಳುಗಳೂ ಅಳುವ ಪ್ರಸಂಗಗಳು ಕಡಿಮೆ ಪ್ರಮಾಣದಲ್ಲಿ ಬರಬಹುದಾಗಿತ್ತು. ಆದರೆ ಈ ದನಗಳನ್ನು ತಮ್ಮಂತಹ ಬಡ ರೈತರ ಮೇಲೆ ಒತ್ತಾಯ ಮಾಡಿ ಕಸಿದುಕೊಳ್ಳುತ್ತಿದ್ದುದಕ್ಕಾಗಿ ಅವರಿಗೆ ಹೇಳದಷ್ಟು ದುಃಖವಾಗುವುದು ಸಹಜವಾಗಿದೆ.

ಯಜ್ಞಯಾಗದಂತೆ ಉದರ ನಿರ್ವಾಹದ ಸಲುವಾಗಿಯೂ ಆ ಕಾಲದಲ್ಲಿ ಅನೇಕ ಪ್ರಾಣಿಗಳು ಕೊಲ್ಲಲ್ಪಡುತ್ತಿದ್ದವು. ಹಸುವನ್ನು ವಧಿಸಿ ಅದರ ಮಾಂಸವನ್ನು ಕೂಟದಾರಿಯಲ್ಲಿ ಮಾರುವ ರೂಢಿ ಹೆಚ್ಚಾಗಿತ್ತು. [ಈ ಮಾತು ಸತಿ ಪಟ್ಠಾನ ಸುತ್ತದಲ್ಲಿ ಬರುತ್ತದೆ] ಬುದ್ಧನು ಯಜ್ಞ ಯಾಗವನ್ನು ನಿಷೇಧಿಸಿದಷ್ಟು ಈ ಕೃತ್ಯಗಳನ್ನು ನಿಷೇಧಿಸಿದಂತೆ ಕಾಣುವುದಿಲ್ಲ. ಕೂಟದಾರಿಯಲ್ಲಿ ಮಾಂಸವನ್ನು ಮಾರುವ ಪದ್ಧತಿ ಬುದ್ಧನಿಗೆ ಸರಿಬರುತ್ತಿತ್ತು ಎಂದು ತಿಳಿಯಬಾರದು. ಆದರೆ ಒಂದು ಯಜ್ಞಯಾಗದ ಮುಂದೆ ಅದಕ್ಕೆ ಏನೂ ಬೆಲೆ ಇರಲಿಲ್ಲ. ಕಟಕನ ಕೈಗೆ ಬಿದ್ದ ಹಸು ಹಾಲನ್ನು

ಕೊಡುತ್ತಿರಲಿಲ್ಲ. ಎತ್ತು ವ್ಯವಸಾಯಕ್ಕೆ ನಿರುಪಯೋಗದ್ದಿರುತ್ತಿತ್ತು. ಅದಕಾಗಿ ಯಾರೂ ಕಣ್ಣೀರನ್ನು ಸುರಿಸುತ್ತಿರಲಿಲ್ಲ. ಯಜ್ಞದ ಮಾತು ಬೇರೆಯಾಗಿದ್ದಿತು. ಅಯ್ನೂರು ಇಲ್ಲವೆ ಏಳುನೂರು ಮಣಕಗಳನ್ನು, ಇಲ್ಲವೆ ಹೋರಿಗಳನ್ನು ಒಂದು ಯಜ್ಞದಲ್ಲಿ ವಧಿಸುವುದೆಂದರೆ ಒಕ್ಕಲುತನ್ನಕ್ಕೆ ಹಾನಿ ಎಷ್ಟಾಗುತ್ತಿರಬೇಕು? ಆ ಬಗ್ಗೆ ರೈತರು ಎಷ್ಟು ದುಃಖಿತರಾಗುತ್ತಿದ್ದರು ಎಂಬುದನ್ನು ಕಲ್ಪನೆಯಲ್ಲಿ ಮಾತ್ರವೆ ತಿಳಿಯಬೇಕು! ಇಂತಹ ಬಲುಮೆಯನ್ನು ಬುದ್ಧನು ನಿಷೇಧಿಸಿದರೆ ಅವನಿಗೆ ವೇದನಿಂದಕ ಎಂದು ಯಾಕೆ ಹೇಳಬೇಕು?'

ಇದೇ ಅಧ್ಯಾಯದ 'ಯಜ್ಞವು ಪಾಪವೇಕೆ?' ಎಂಬ ಉಪಶೀರ್ಷಿಕೆಯಲ್ಲಿ ಬುದ್ಧನು ಶ್ರಾವಸ್ತಿಯ ಜೇತವನದ ಅನಾಥಪಿಂಡಿಕಾರಾಮದಲ್ಲಿ ಇದ್ದಾಗ ಉದ್ಗತಶರೀರ ಎಂಬ ಬ್ರಾಹ್ಮಣ ಮಹಾಯಜ್ಞದ ಸಿದ್ಧತೆ ನಡೆಸಿದ್ದ. ಬುದ್ಧನು ಯಜ್ಞಹಿಂಸೆಯ ಕುರಿತು ತಿಳಿಹೇಳಿದ ಮೇಲೆ ಆತ ಹೀಗೆ ನುಡಿಯುತ್ತಾನೆ. 'ಭೋ ಗೋತಮಾ [ನಾನು ಯೂಪಸ್ತಂಭಗಳಿಗೆ ಕಟ್ಟಿದ್ದ ಬಡ ರೈತರ] ಅಯ್ನೂರು ಎತ್ತುಗಳನ್ನು , ಅಯ್ನೂರು ಹೋರಿಗಳನ್ನು, ಅಯ್ನೂರು ಮಣಕಗಳನ್ನು, ಅಯ್ನೂರು ಕುರಿ ಮತ್ತು ಅಯ್ನೂರು ಆಡುಗಳನ್ನು – ಎಲ್ಲ ಪ್ರಾಣಿಗಳನ್ನು ಯೂಪದಿಂದ ಬಿಚ್ಚಿ ಬಿಡುವೆ. ಅವಕ್ಕೆ ಜೀವದಾನ ಕೊಡುವೆ. ಹಚ್ಚನ್ನ ಹುಲ್ಲನ್ನು ಮೇಯ್ದು, ತಣ್ಣೀರನ್ನು ಕುಡಿದು ಶೀತಲ ಛಾಯೆಯಲ್ಲಿ ಅವು ಆನಂದದಿಂದಿರಲಿ.'

'ಹಿಂದೂ ಧರ್ಮಶಾಸ್ತ್ರಕ್ಕೆ ಬುನಾದಿಯಾಗಿರುವ ಮನುಸ್ಮೃತಿಯ ವಸ್ತುನಿಷ್ಠ ಸಮಗ್ರ ಅನುವಾದ' ಎಂದು ಹೇಳಿಕೊಂಡ ದಿವಂಗತ ಶೇಷ ನವರತ್ನ ಅವರು ಮನುಸ್ಮೃತಿಯ ಅನುವಾದವನ್ನು ನಿಜವಾಗಿಯೂ ನಿಷ್ಪಕ್ಷಪಾತಿಯಾಗಿ ಮಾಡಿದ್ದಾರೆ. ಮನು ಎಷ್ಟೊಂದು ಪಕ್ಷಪಾತಿ ಎಂಬುದಕ್ಕೆ ಆತನ ಮನುಸ್ಮೃತಿ ಗ್ರಂಥ ಸಾಕ್ಷಿಯಾಗಿದೆ.

ಮೇಲಿನ ಮೂರೂ ವರ್ಣದವರು ಮಾತ್ರ ಶುದ್ಧ ಮಾಂಸ ಭಕ್ಷಣೆ ಮಾಡಬೇಕು; ಶೂದ್ರರು ಮತ್ತು ಅತಿಶೂದ್ರರಿಗೆ ಇಂಥ ಮಾಂಸಾಹಾರ ಸೇವನೆಗೆ ಅವಕಾಶವಿರಬಾರದು ಎಂಬ ಕುತಂತ್ರದಿಂದ ಮನು ಅನೇಕ ಶ್ಲೋಕಗಳನ್ನು ರಚಿಸಿದ್ದಾನೆ. 'ಯಜ್ಞಹಿಂಸೆ ಎಂಬುದು ಹಿಂಸೆ ಅಲ್ಲ' ಎಂಬುದು ಅವನ ವಾದವಾಗಿದೆ. ಆದರೆ 'ಶೂದ್ರರು ಪ್ರಾಣಿಹಿಂಸೆ ಮಾಡಬಾರದು' ಎಂದು ಉಪದೇಶಿಸುತ್ತಾನೆ. ವೈದಿಕರು ಪ್ರಾಣಿಗಳನ್ನು ಯಜ್ಞದಲ್ಲಿ ಕೊಲ್ಲುವುದು ಧರ್ಮಸಮ್ಮತ. ಆದರೆ ಶೂದ್ರರು ಪ್ರಾಣಿವಧೆ ಮಾಡುವುದು ಧರ್ಮಬಾಹಿರ ಎಂದು ಎಚ್ಚರಿಸುತ್ತಾನೆ.

ಆಹಾರ ಸಂಸ್ಕೃತಿಯ ಮೇಲೆ ಪ್ರತಿಬಂಧ ಹೇರುವ ಕೆಳಗಿನ ಶ್ಲೋಕಗಳು ಮನುವಿನ ವರ್ಣಭೇದ ನೀತಿಗೆ ಕನ್ನಡಿ ಹಿಡಿಯುತ್ತವೆ.

ಪ್ರಾಣಸ್ಯಾನ್ನಮಿದಂ ಸರ್ವಂ ಪ್ರಜಾಪತಿರಕಲ್ಪಯತ್ ।

ಸ್ಥಾವರಂ ಜಂಗಮಂ ಚೈವ ಸರ್ವಂ ಪ್ರಾಣಸ್ಯ ಭೋಜನಂ ॥

(ಮನುಸ್ಮೃತಿ ಅಧ್ಯಾಯ ೫ ಶ್ಲೋಕ ೨೮)

(ಈ ಜಗತ್ತಿನಲ್ಲಿರುವ ಸಮಸ್ತ ಸ್ಥಾವರ ಜಂಗಮ ಜೀವಜಂತುಗಳನ್ನು, ಚರಾಚರ ವಸ್ತುಗಳನ್ನು ತಿನ್ನಲಿಕ್ಕೆಂದೇ ಪರಮಾತ್ಮನು ಸೃಷ್ಟಿಸಿದ್ದಾನೆ.)

ಚರಣಾಮನ್ನಮಚರಾ ದಂಷ್ಟ್ರಿಣಾಮಪ್ಯದಂಷ್ಟ್ರಿಣಃ ।

ಅಹಸ್ತಾಶ್ಚ ಸಹಸ್ತಾನಾಂ ಶೂರಾಣಾಂ ಚೈವ ಭೀರವಃ ॥

(ಮನುಸ್ಮೃತಿ ಅಧ್ಯಾಯ ೫ ಶ್ಲೋಕ ೨೯)

(ಚಲಿಸುವ ಪಶುಪ್ರಾಣಿಗಳಿಗೆ ಚಲಿಸದಿರುವ ಹುಲ್ಲು ಸಸ್ಯಗಳು ಆಹಾರ. ಕೋರೆದಾಡೆಗಳಿರುವ ಸಿಂಹ ಹುಲಿಗಳಿಗೆ ಕೋರೆದಾಡೆಗಳಿರದ ಜಿಂಕೆ ಇತ್ಯಾದಿಗಳು ಆಹಾರ. ಕೈಗಳಿರುವ ಮನುಷ್ಯರಿಗೆ ಕೈಗಳಿಲ್ಲದ ಪಶು ಪ್ರಾಣಿಗಳು ಆಹಾರ. ಶೂರವಾದ ಕ್ರೂರವಾದ ಪ್ರಾಣಿಗಳಿಗೆ ಸಾಧುವಾದ ಭೀರುವಾದ ಪ್ರಾಣಿಗಳು ಆಹಾರ.)

ಮಧುಪರ್ಕೇ ಚ ಯಜ್ಞೇ ಚ ಪಿತೃದೈವತ ಕರ್ಮಣಿ ।

ಅತ್ರೈವ ಪಶವೋ ಹಿಂಸ್ಯಾ ನಾನ್ಯತ್ರೇತ್ಯಬ್ರವೀನ್ಮನುಃ ॥

(ಮನುಸ್ಮೃತಿ ಅಧ್ಯಾಯ ೫ ಶ್ಲೋಕ ೪೧)

(ಮಧುಪರ್ಕದಲ್ಲಿ, ಯಜ್ಞದಲ್ಲಿ, ದೇವ–ಪಿತೃ ಕರ್ಮಗಳಲ್ಲಿ ಮಾತ್ರ ಪಶುಗಳನ್ನು ಕೊಲ್ಲಬೇಕೇ ಹೊರತಾಗಿ ಬೇರೆ ಸಂದರ್ಭಗಳಲ್ಲಿ ಪಶುಹಿಂಸೆ ಸಲ್ಲದು ಎಂದು ಮನುವು ಹೇಳಿದ್ದಾನೆ.)

ಏಷ್ವರ್ಥೇಷು ಪಶೂನ್ ಹಿಂಸನ್ ವೇದತತ್ತ್ವಾರ್ಥವಿದ್ದ್ವಿಜಃ ।

ಆತ್ಮಾನಂ ಚ ಪಶುಂ ಚೈವ ಗಮಯತ್ಯುತ್ತಮಾಂ ಗತಿಂ ॥

(ಮನುಸ್ಮೃತಿ ಅಧ್ಯಾಯ ೫ ಶ್ಲೋಕ ೪೨)

(ಹೀಗೆ ಯಜ್ಞ, ಶ್ರಾದ್ಧ ಹಾಗೂ ಮಧುಪರ್ಕ ಮುಂತಾದ ಕಾರ್ಯಗಳಿಗಾಗಿ ಮಾತ್ರ ವೇದಜ್ಞನಾದ ಬ್ರಾಹ್ಮಣನು ಪಶುವನ್ನು ಕೊಂದರೆ ತನ್ನ ಜೊತೆಗೆ ಆ ಪಶುವಿಗೂ ಉತ್ತಮ ಗತಿಯನ್ನುಂಟುಮಾಡುತ್ತಾನೆ.)

ಯಾ ವೇದ ವಿಹಿತಾ ಹಿಂಸಾ ನಿಯತಾಸ್ಮಿಂಶ್ಚರಾಚರೇ ।

ಅಹಿಂಸಾಮೇವ ತಾಂ ವಿದ್ಯಾದ್ವೇದಾದ್ಧರ್ಮೋ ಹಿ ನಿರ್ಬಭೌ ॥

(ಮನುಸ್ಮೃತಿ ಅಧ್ಯಾಯ ೫ ಶ್ಲೋಕ ೪೪)

(ವೇದವಿಹಿತವಾದ ಎಂದರೆ ವೇದಗಳಲ್ಲಿ [ಯಜ್ಞಗಳಲ್ಲಿ] ಹೇಳಿದ ಹಿಂಸೆಯು ಶಾಸ್ತ್ರನಿಯಮ ರೀತ್ಯಾ ನಡೆಯುವುದರಿಂದ ಅದನ್ನು ಅಹಿಂಸೆಯೆಂದೇ ಪರಿಗಣಿಸಬೇಕು. ಏಕೆಂದರೆ ವೇದಗಳಿಂದಲೇ ಧರ್ಮ ಹುಟ್ಟಿದೆ.)

ಯಜ್ಞಾಯ ಜಗ್ಧಿರ್ಮಾಂಸಸ್ಯೇತ್ಯೇಷ ದೈವೋ ವಿಧಿಃ ಸ್ಮೃತಃ ।
ಅತೋ ನ್ಯಥಾ ಪ್ರವೃತ್ತಿಸ್ತು ರಾಕ್ಷಸೋ ವಿಧಿರುಚ್ಯತೇ ॥

(ಮನುಸ್ಮೃತಿ ಅಧ್ಯಾಯ ೫ ಶ್ಲೋಕ ೩೧)

(ಯಜ್ಞಕ್ಕಾಗಿ ಪಶುವನ್ನು ಕೊಂದು ಮಾಡಿದ ಮಾಂಸಭಕ್ಷಣವು 'ದೈವಿಕರೀತಿ' ಎಂದು ಹೇಳಲ್ಪಟ್ಟಿದೆ. ಇದಕ್ಕೆ ವಿರುದ್ಧವಾಗಿ ಅನ್ಯಸಂದರ್ಭಗಳಲ್ಲಿ ಮಾಡುವ ಅಕಾರಣ ಪಶುವಧೆ ಮತ್ತು ಮಾಂಸಭಕ್ಷಣವು 'ರಾಕ್ಷಸರೀತಿ' ಎಂದು ಹೇಳಲ್ಪಟ್ಟಿದೆ.)

ವೇದ ಪ್ರಮಾಣವಾದ ಮನುಸ್ಮೃತಿಯ ಪ್ರಕಾರ ಶೂದ್ರರಿಗೆ ಯಜ್ಞ ಮಾಡುವ ಹಕ್ಕಿಲ್ಲ. ಆದ್ದರಿಂದ ಅವರು ಪ್ರಾಣಿಹಿಂಸೆ ಮಾಡುವ ಹಾಗಿಲ್ಲ. (ಏನಿದ್ದರೂ ಅವರು ಸತ್ತದ್ದನ್ನೇ ತಿನ್ನಬೇಕು.) ಶೂದ್ರರು ಆಹಾರಕ್ಕಾಗಿ ಪ್ರಾಣಿವಧೆ ಮಾಡಿದರೆ ಅದು ರಾಕ್ಷಸೀ ಕೃತ್ಯ. ಸವರ್ಣೀಯರು ಯಜ್ಞದಲ್ಲಿ ಪ್ರಾಣಿಗಳನ್ನು ಕೊಂದು ತಿಂದರೆ ಅದು ದೈವಿಕರೀತಿ. ದೇವಮಾರ್ಗದಲ್ಲಿ ಪ್ರಾಣಿಗಳನ್ನು ಕೊಲ್ಲುವ ಹಕ್ಕು ವೈದಿಕರಿಗೆ ಮಾತ್ರ ಇದೆ. ಶೂದ್ರರಿಗೆ ಪ್ರಾಣಿಗಳನ್ನು ಆಹಾರವಾಗಿಸುವ ಹಕ್ಕಿಲ್ಲ. ಹೇಗಿದೆ ಮನುಧರ್ಮ ನ್ಯಾಯ?

'ನುಡಿ ಲೇಸು ನಡೆ ಅಧಮವಾದಲ್ಲಿ ಬಿಡಿಸಲಾಗದ ಹೊಲೆ' ಎಂದು ಮಾದಾರ ಚೆನ್ನಯ್ಯನವರು ಹೇಳುತ್ತಾರೆ. ಮನುವಾದಿಗಳು ಬಿಡಿಸಲಾಗದ ಹೊಲೆಯಲ್ಲಿ ಒದ್ದಾಡುತ್ತಿದ್ದಾರೆ. ಹೊಲಗೇರಿಯಲ್ಲಿರುವವರು ಹೊಲೆಯರಲ್ಲ ಮನುವಾದಿಗಳೇ ಹೊಲೆಯರು ಎಂಬುದನ್ನು ಶರಣರು ೧೨ನೇ ಶತಮಾನದಲ್ಲೇ ತೋರಿಸಿಕೊಟ್ಟಿದ್ದಾರೆ.

'ಬೆಟ್ಟದ ಲಿಂಗವ ಹಿರಿದು ಮಾಡಿ ತನ್ನ ಇಷ್ಟಲಿಂಗವ ಕಿರಿದು ಮಾಡುವ ಮೂಳ ಹೊಲೆಯರಿರಾ' ಎಂದು ಅಂಬಿಗರ ಚೌಡಯ್ಯನವರು ಲಿಂಗವಂತರಾದ ಮೇಲೆ ಕೂಡ ಸ್ಥಾವರಲಿಂಗಕ್ಕೆ ಎರಗುವವರನ್ನು ಟೀಕಿಸಿದ್ದಾರೆ. 'ಊರೊಳಗಣ ಹೊಲೆಯ, ಊರ ಹೊರಗಣ ಕುಲಜ' ಎಂದು ಬಾಲಸಂಗಣ್ಣ ಅಸ್ಪೃಶ್ಯರನ್ನು ಎತ್ತಿ ಹಿಡಿದಿದ್ದಾರೆ. 'ಸತ್ತುದನೆಳವನೆತ್ತಣ ಹೊಲೆಯ ಹೊತ್ತು ತಂದು ನೀವು ಕೊಲುವಿರಿ' ಎಂದು ಬಸವಣ್ಣನವರು ವೈದಿಕರಿಗೆ ಎಚ್ಚರಿಸಿದ್ದಾರೆ. 'ಸವಣನ ಮನದ ಕೊನೆಯ ಮೊನೆಯ ಮೇಲೆ ಹೊಲೆಯಿದ್ದಿತ್ತಾಗಿ ಜಿನನಿಲ್ಲ' ಎಂದು ಸಕಳೇಶ ಮಾದರಸ ತಿಳಿಸುತ್ತಾರೆ. 'ಅನೀತಿ ದೇವರುಗಳ ಎಡೆಯ ತಿನ್ನುವಂತಹ ಮಾದಿಗರು ನೀವು ಕೇಳಿರೊ' ಎಂದು ಅಂಬಿಗರ ಚೌಡಯ್ಯನವರು ಹೇಳುತ್ತಾರೆ. 'ಚತುರ್ವೇದಿಯಾದಡೇನು ಲಿಂಗವಿಲ್ಲದವನೆ ಹೊಲೆಯ' ಎಂದು ಬಸವಣ್ಣನವರು ಸ್ಪಷ್ಟಪಡಿಸುತ್ತಾರೆ.

'ಹೊಲೆಯರ ಬಾವಿಯಲೊಂದು ಎಲು ನಟ್ಟಿದ್ದಡೆ
ಹೊಲೆಯೆಂಬುದು ಲೋಕವೆಲ್ಲ.
ಹಲವೆಲುವಿದ್ದ ಬಾಯಿ ಒಲವರ [ಪಕ್ಷಪಾತಿಯಾಗಿ] ನುಡಿದಡೆ
ಹೊಲೆಯರ ಬಾವಿಯಿಂದ ಕರಕಷ್ಟ ಕಾಣಾ ರಾಮನಾಥ.' ಎಂದು ಜೇಡರ ದಾಸಿಮಯ್ಯನವರು ಮಾನಸಿಕವಾಗಿ ಕೀಳಾದವರ ಕುರಿತು ತಿಳಿಸುತ್ತಾರೆ.

'ಹೊಲೆಯ ಹೊಲೆಯನೆಂದು ಹೊರಗಿರು ಎಂದೆಂಬರು
ಹೊಲೆಯನೆಂತವನಯ್ಯಾ?
ತನ್ನ ಹೊಲೆಯ ತಾನರಿಯದೆ
ಮುನ್ನಿನವರ ಹೊಲೆಯನರಸುವ
ಭ್ರಷ್ಟರಿಗೆ ಏನೆಂಬೆನಯ್ಯಾ
ಮಹಾದಾನಿ ಕೂಡಲಚೆನ್ನಸಂಗಮದೇವಾ.' ಎಂದು ಚೆನ್ನಬಸವಣ್ಣನವರು ಸವರ್ಣೀಯರ ಮಾನಸಿಕ ಭ್ರಷ್ಟತೆಯನ್ನು ಎತ್ತಿ ತೋರಿಸುತ್ತಾರೆ.

ಹೀಗೆ ವಚನಕಾರರು ಬರಿ ದಾರ್ಶನಿಕರಾಗಿರದೆ ಅರ್ಥ, ಸಮಾಜ, ಭಾಷಾ ಮತ್ತು ಮನೋವಿಜ್ಞಾನಿಗಳೂ ಆಗಿದ್ದರು. ಕಾಳೀದಾಸ ಹೇಳುವಂತೆ ಶಬ್ದ ಮತ್ತು ಅರ್ಥಗಳ ಸಂಬಂಧ ಪಾರ್ವತೀಪರಮೇಶ್ವರರ ಹಾಗೆ ಇಲ್ಲ. ಶಬ್ದವೆಂಬ ಪರಮೇಶ್ವರನಿಗೆ ಅರ್ಥಗಳೆಂಬ ಅನೇಕ ಪಾರ್ವತಿಯರಿದ್ದಾರೆ. ಶರಣರ ಪ್ರಕಾರ ಶಬ್ದವು ಅನೇಕ ಅರ್ಥಗಳನ್ನು ಆಯಾ ಕಾಲದ, ಪರಿಸರದ ಮತ್ತು ಪರಿಸ್ಥಿತಿಯ ಹಿನ್ನೆಲೆಯಲ್ಲಿ ವಿವಿಧಾರ್ಥಗಳನ್ನು ಸ್ಫುರಿಸುತ್ತಲೇ ಇರುತ್ತದೆ. ಒಂದೇ ಶಬ್ದ ವಿವಿಧ ವಚನಗಳಲ್ಲಿ ವಿವಿಧ ಅರ್ಥಗಳನ್ನು ಧ್ವನಿಸುವ ರೀತಿಯಲ್ಲಿ ವಚನಕಾರರು ಶಬ್ದಗಳ ಪ್ರಯೋಗ ಮಾಡಿದ್ದಾರೆ. ಅವು ಬರಿ ಶಬ್ದಾರ್ಥಕ್ಕೆ ಮಾತ್ರ ಸೀಮಿತವಾಗದೆ ಲಕ್ಷಣಾರ್ಥ, ಧ್ವನ್ಯರ್ಥ ಮತ್ತು ತತ್ತ್ವಾರ್ಥಗಳನ್ನು ಒಳಗೊಂಡಿವೆ.

ಶರಣರು ಹೊಲೆ ಮಾದಿಗ ಶಬ್ದಗಳನ್ನು ಬಳಸಿದ ಕ್ರಮ ವಿನೂತನವಾಗಿದೆ. ಆ ಬಳಕೆಯ ಹಿಂದೆ ಸಾಮಾಜಿಕ ನ್ಯಾಯವಿದೆ. ಶಬ್ದಗಳನ್ನು ಲೀಲಾಜಾಲವಾಗಿ ಬಳಸುವ ಸೃಜನಶೀಲತೆ ಇದೆ. ಯಾರು ಬಹುಜನರನ್ನು ಕೀಳಾಗಿಸುತ್ತ ತಾವು ಉನ್ನತ ಕುಲದವರೆಂದು ಸಾವಿರಾರು ವರ್ಷಗಳಿಂದ ಬೀಗುತ್ತಿದ್ದರೋ ಅಂಥವರನ್ನು ಕೀಳಾಗಿ ನೋಡುವ ನೈತಿಕ ಧೈರ್ಯವಿದೆ. 'ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ ನೋಡಾ ಕೂಡಲಸಂಗಮದೇವಾ' ಎಂದು ತುಳಿತಕ್ಕೊಳಗಾದವರನ್ನು ದೇವರಿಗಿಂತಲೂ ಮೇಲೆತ್ತಿ ತೋರಿಸುವ ಸೈದ್ಧಾಂತಿಕ ಸಾಮರ್ಥ್ಯವಿದೆ.

ಬಸವಣ್ಣನವರು ಯಾರ ವಿರೋಧಿಗಳೂ ಅಲ್ಲ. ಅವರು ಅನ್ಯಾಯದ ವಿರೋಧಿಗಳು. ಎಲ್ಲರೂ ಜಾತ್ಯತೀತರಾಗಿ ನಿಜಮಾನವರಾಗಬೇಕೆಂಬ ಆಶಯ

ಹೊಂದಿದ್ದರು. ಅವರು ವೈದಿಕ ದೇವತೆಗಳನ್ನು ಅಲ್ಲಗಳೆದಂತೆ ಶೂದ್ರದೈವಗಳನ್ನೂ ಅಲ್ಲಗಳೆದರು. ಏಕದೇವೋಪಾಸನೆಯ ಮೂಲಕ ನಮ್ಮೆಲ್ಲರೊಳಗೆ ಇರುವ ದೇವರು ಒಬ್ಬನೇ, ಒಂದೇ ವಿಶ್ವ, ಒಂದೇ ಮಾನವ ಜನಾಂಗ ಎಂಬ ಸತ್ಯದ ಅರಿವು ಮೂಡಿಸಿದರು.

❖❖

೧೦

❖

ಮಾನವಘನತೆ

ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಪರಮೇಶ್ವರರೆಂಬ ಸಂದಣಿ
ತಲೆದೋರುವ ಮುನ್ನ, ಅಲ್ಲಿಂದತ್ತ ಬಯಲೆ ಸ್ವರೂಪವಾಯಿತ್ತು.
ಆ ಸ್ವರೂಪಿನ ಘನತೆಯ ಉಪಮಿಸಬಾರದು.
ನೋಡಬಾರದ ಬೆಳಗು, ಕೂಡಬಾರದ ಮೂರ್ತಿ.
ಅಖಂಡ ಅಪ್ರತಿಮ ನಮ್ಮ ಗುಹೇಶ್ವರಲಿಂಗದ ಬೆಳಗಿನ ಮೂಲವ
ಲಿಂಗಸಂಗಿಗಳಲ್ಲದೆ ಮಿಕ್ಕಿನ ಅಂಗವಿಕಾರಿಗಳೇನಬಲ್ಲರೊ?

–ಅಲ್ಲಮಪ್ರಭುದೇವರು

ಈ ವಚನವು ವಿಜ್ಞಾನದ ತಾಯಿಯಾಗಿದೆ. ಗುಹೇಶ್ವರನು ಗುಹೆ ಎಂಬ ವಸ್ತುವಿನೊಳಗಿನ ಚೈತನ್ಯವಾಗಿದ್ದಾನೆ. ಚೈತನ್ಯದ ಮೂಲರೂಪವೇ ಬಯಲು. ಆ ಬಯಲೆಂಬುದು ಸ್ವರೂಪವನ್ನು ಪಡೆದುಕೊಂಡಾಗ ಚೈತನ್ಯವನ್ನೊಳಗೊಂಡ ವಿಶ್ವದ ನಿರ್ಮಾಣವಾಯಿತು.

ಬಯಲೇ ಚೈತನ್ಯವಾಗಿದೆ. ಆ ಚೈತನ್ಯದಿಂದಲೇ ವಸ್ತುವೆಂಬ ವಿಶ್ವವು ರೂಪುಗೊಂಡಿದೆ. ಆ ವಿನಾಶಕ್ಕೊಳಗಾಗುವ ವಿಶ್ವ ಎಂಬ ವಸ್ತುವಿನೊಳಗೆ ಚೈತನ್ಯವು ತನ್ನ ಅವಿನಾಶವಾದ ಮೂಲರೂಪಿನೊಂದಿಗೆ ಉಳಿದುಕೊಂಡಿದೆ. ಕಾಲಮಿತಿಯನ್ನು ಹೊಂದಿರುವ ವಸ್ತು ಎಂಬುದು ಚೈತನ್ಯದ ತೋರಿಕೆಯ ರೂಪವಾದರೆ ಕಾಲಾತೀತವಾದ ಚೈತನವು ವಸ್ತುವಿನ ನಿರಾಕಾರ ಸ್ಥಿತಿಯಾಗಿದೆ. ವಿಶ್ವವೆಂಬ ಗುಹೆಯು ಗುಹೇಶ್ವರನ ಅಂಶದಿಂದಲೇ ರೂಪುಗೊಂಡಿದೆ. 'ರೂಪಿಂಗೆ ಕೇಡುಂಟು' ಎಂದು ಅಲ್ಲಮ ಇನ್ನೊಂದು ವಚನದಲ್ಲಿ ಹೇಳಿದ್ದಾರೆ. ವಸ್ತುರೂಪವು ವಾಸ್ತವವಾಗಿದೆ ಆದರೆ ಸತ್ಯವಲ್ಲ. ವಾಸ್ತವ ಎಂಬುದು ಕಾಲಮಿತಿಯೊಳಗೆ ಇರುವಂಥದ್ದು. ಆದ್ದರಿಂದಲೇ ವಾಸ್ತವದೊಳಗೆ ಇರುವ ವಸ್ತುವಿಗೆ ಸಾವು ಉಂಟು ಎಂದು ಅಲ್ಲಮ ತಿಳಿಸುತ್ತಾರೆ. ಚೈತನ್ಯವೆಂಬುದು ಶಾಶ್ವತ ಮತ್ತ ನಿರಂತರ ಚಲನಶೀಲವಾದುದು. ಚೈತನ್ಯವು ಕಾಲಾತೀತವಾದುದು.

ಅದಕ್ಕೆ ಸಾವಿಲ್ಲ. ವಸ್ತುರೂಪವಾದ ವಿಶ್ವವೆಂಬ ಅಶಾಶ್ವತ ಗುಹೆಯಲ್ಲಿ ಚೈತನ್ಯವೆಂಬ ಶಾಶ್ವತ ಈಶ್ವರನಿದ್ದಾನೆ. ಇಂಥ ಚೈತನ್ಯರೂಪಿ ಈಶ್ವರನೇ ವಿಶ್ವದ ಮೂಲಾಧಾರ.

ಬಯಲು ಬಯಲನೆ ಬಿತ್ತಿ, ಬಯಲು ಬಯಲವ ಬೆಳೆದು
ಬಯಲು ಬಯಲಾಗಿ ಬಯಲಾಯಿತಯ್ಯಾ.
ಬಯಲ ಜೀವನ, ಬಯಲ ಭಾವನೆ,
ಬಯಲ ಬಯಲಾಗಿ ಬಯಲಾಯಿತಯ್ಯಾ.
ನಿಮ್ಮ ಪೂಜಿಸಿದವರು ಮುನ್ನವೆ ಬಯಲಾದರು.
ನಾ ನಿಮ್ಮ ನಂಬಿ ಬಯಲಾದೆ ಗುಹೇಶ್ವರಾ.

–ಅಲ್ಲಮಪ್ರಭುದೇವರು

ಎಂದು ಅಲ್ಲಮಪ್ರಭುದೇವರು ಬಯಲೆಂಬ ಚೈತನ್ಯದ ಲೀಲೆಯನ್ನು ತಿಳಿಸಿದ್ದಾರೆ. ಈ ಪರಮಸತ್ಯವನ್ನು ತಾವು ಅರಿತುಕೊಂಡ ಬಗ್ಗೆ ಈ ವಚನದಲ್ಲಿ ಸೂಚಿಸಿದ್ದಾರೆ. ಈ ಘನತ್ವದ ಬಯಲೇ ಗುಹೇಶ್ವರನ ಮೂಲರೂಪವಾಗಿದೆ. ಈ ಬಯಲು ರೂಪು ತಾಳಿದ ನಂತರವೇ ಬ್ರಹ್ಮ ವಿಷ್ಣು ರುದ್ರ ಈಶ್ವರ ಸದಾಶಿವ ಪರಮೇಶ್ವರರೆಂಬ ಸಂದಣಿ ತಲೆದೋರಿದೆ.

ಈ ಬಯಲೆಂಬ ಘನವನ್ನು ಅರಿತು ಸರ್ವಸಮತ್ವ ಭಾವದೊಂದಿಗೆ ಮುನ್ನಡೆಯುವವನು ಘನತೆಯುಳ್ಳವನಾಗುತ್ತಾನೆ. ಅವನೇ ಘನತೆಯುಳ್ಳ ಮಾನವ ಎಂದೆನಿಸಿಕೊಳ್ಳುತ್ತಾನೆ. ಆತ ಯಾವುದೇ ಧರ್ಮದಲ್ಲಿರಲಿ, ಯಾವುದೇ ಜಾತಿಯವನಾಗಿರಲಿ ಆತನೆ ಮಾನವಘನತೆಯನ್ನು ಎತ್ತಿಹಿಡಿದ ಮಾರ್ಗದರ್ಶಿಯಾಗುತ್ತಾನೆ. "ಹೊಲೆಯ ಹೊಲಬಿಗನಾದಡೆ ಅವನ ಹೊರೆಯಲಿಪ್ಪುದು ಲೇಸು" ಎಂದು ಬಸವಣ್ಣನವರು ಹೇಳಿದ್ದಾರೆ. ಮಾನವ ಘನತೆಯೊಂದಿಗೆ ಯಾರು ಬದುಕಿನ ಮಾರ್ಗವನ್ನು ಕಂಡುಕೊಂಡಿರುವರೊ ಅವರ ಮಾರ್ಗದರ್ಶನದಲ್ಲಿ ಬದುಕಬೇಕೆಂಬುದು ಬಸವಣ್ಣನವರ ಆಶಯವಾಗಿದೆ. ಮನುವಾದಿಗಳು ಮೂದಲಿಸುವ ಹೊಲೆ ಮಾದಿಗ ಜಾತಿಗಳಲ್ಲೇ ಅಂಥ ಘನತೆವೆತ್ತವರು ಜನಿಸಿರಬಹುದು; ಆದರೆ ಅವರೇ ಗುರುಸ್ಥಾನದಲ್ಲಿ ಇರುವವರು ಎಂದು ಬಸವಣ್ಣನವರು ಮಾನವಘನತೆಯ ಮಹತ್ವವನ್ನು ಸಾರಿದ್ದಾರೆ.

ಮೇಲು ಕೀಳೆಂಬ ಜಾತಿಗಳು, ಬಡವ ಶ್ರೀಮಂತ ಎಂಬ ವರ್ಗಗಳು, ಹೆಣ್ಣು ಗಂಡೆಂಬ ಭೇದಭಾವಗಳು, ಕರಿಯ ಬಿಳಿಯ ಎಂಬ ವರ್ಣಭೇದಗಳು ಮಾನವಘನತೆಗೆ ಕಳಂಕ ತರುವಂಥವುಗಳಾಗಿವೆ. ಈ ಎಲ್ಲ ಭೇದಭಾವಗಳನ್ನು ಎತ್ತಿಹಿಡಿಯುವ ವೈದಿಕಧರ್ಮವು ಮಾನವಘನತೆಯ ಕಡುವೈರಿಯಾಗಿದೆ. ಅಂತೆಯೆ ಬಸವಾದಿ ಶರಣರು ವೈದಿಕಧರ್ಮವನ್ನು ಅಲ್ಲಗಳೆದು ತುಳಿತಕ್ಕೊಳಗಾದ ಅಸ್ಪೃಶ್ಯರು ಮೊದಲು

ಮಾಡಿ ಎಲ್ಲ ಜಾತಿ ಜನಾಂಗಗಳ ಕಾಯಕಜೀವಿಗಳ ಘನತೆಯನ್ನು ಎತ್ತಿಹಿಡಿಯುವ ಜನಸಾಮಾನ್ಯರ ಧರ್ಮವಾದ ಲಿಂಗವಂತ ಧರ್ಮವನ್ನು ದಯೆ ಮತ್ತು ಅಹಿಂಸೆಯ ನೆಲೆಯ ಮೇಲೆ ಚಳವಳಿಯ ಧರ್ಮವಾಗಿಸಿ ಎಲ್ಲ ತೆರನಾದ ಅಸಮಾನತೆಗಳ ವಿರುದ್ಧ ಹೋರಾಡಿದರು. ಈ ಕಾರಣದಿಂದಲೇ ಲಿಂಗವಂತ ಧರ್ಮವು ನಿಜವಾದ ಅರ್ಥದಲ್ಲಿ ಮಾನವಘನತೆಯ ಧರ್ಮವೇ ಆಗಿದೆ.

ಮಾನವಘನತೆ ಎಂಬ ಅರಿವಿನ ಕುರುಹು ಆದಂಥ ಇಷ್ಟಲಿಂಗವನ್ನು ಬಸವಣ್ಣನವರು ಸೃಷ್ಟಿಸಿದರು. ಎಲ್ಲ ಅನಿಷ್ಟಗಳನ್ನು ಪರಿಹರಿಸುವಂಥ ವಿವೇಚನಾ ಶಕ್ತಿಯನ್ನು ಕೊಡುವುದರ ಸಂಕೇತವಾದ ಈ ಇಷ್ಟಲಿಂಗವು ಮಹಾಘನವೆಂಬ ಲಿಂಗದೇವನ ಕುರುಹು ಆಗಿ ಮಾನವಘನತೆಯನ್ನು ಎತ್ತಿಹಿಡಿಯಿತು. ಯಾವ ಅಸ್ಪೃಶ್ಯರಿಗೆ ಮತ್ತು ತುಳಿತಕ್ಕೊಳಗಾದವರಿಗೆ ಮಂದಿರಗಳಲ್ಲಿ ಪ್ರವೇಶವನ್ನು ಮನುವಾದಿಗಳು ನಿರಾಕರಿಸಿದ್ದರೋ ಅಂಥವರಿಗಾಗಿ ಇಷ್ಟಲಿಂಗ ಜನ್ಮತಾಳಿದ್ದು ಕ್ರಾಂತಿಕಾರಿಯಾದ ಅನನ್ಯ ಘಟನೆಯಾಗಿದೆ. ಯಾರ ಎದೆಯ ಮೇಲೆ ಲಿಂಗವಿದೆಯೊ ಅವರು ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳನ್ನು ಮಾಡುಂತಿಲ್ಲ. ಇಷ್ಟಲಿಂಗ ಪೂಜೆ ಎಂಬುದು ಎಲ್ಲ ರೀತಿಯ ಅಸಮಾನತೆಗಳನ್ನು ತೊಡೆದು ಹಾಕುತ್ತ ಮಾನವ ಏಕತೆಯನ್ನು ಸಾಧಿಸುವ ಅರಿವನ್ನು ಕೊಡುವಂಥದ್ದು.

ಲಿಂಗವ ಪೂಜಿಸಿ ಫಲವೇನಯ್ಯಾ,
ಸಮರತಿ ಸಮಕಳೆ ಸಮಸುಖವನರಿಯದನ್ನಕ್ಕ?
ಲಿಂಗವ ಪೂಜಿಸಿ ಫಲವೇನಯ್ಯಾ,
ಕೂಡಲಸಂಗಮದೇವರ ಪೂಜಿಸಿ
ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ? –ಬಸವಣ್ಣನವರು

ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಈ ವಚನವು ಲೌಕಿಕ ಅನುಭವ ಮತ್ತು ಅಲೌಕಿಕ ಅನುಭಾವಕ್ಕೆ ಸಂಬಂಧಿಸಿದಂತೆ ಏಕಕಾಲಕ್ಕೇ ಸಮತೆಯನ್ನು ಎತ್ತಿಹಿಡಿಯುವ ವಚನವಾಗಿದೆ. ಮಾನವರು ಸೃಷ್ಟಿಯಲ್ಲಿನ ಎಲ್ಲದರ ಜೊತೆ ಹಾಗೂ ಸೃಷ್ಟಿಕರ್ತನ ಜೊತೆ ಸಮಾನತೆಯನ್ನು ಹೊಂದುತ್ತ ಒಂದಾಗಬೇಕು ಎಂಬ ಮಹದಾಶಯವನ್ನು ಈ ವಚನ ಹೊಂದಿದೆ. ಮಧುರಭಕ್ತಿಯು 'ಶರಣ ಸತಿ ಲಿಂಗ ಪತಿ' ಎಂಬ ಭಾವದೊಂದಿಗೆ ದೇವರ ಜೊತೆ ಭಕ್ತನು ಅಭೇದ್ಯನಾಗುವಂತೆ ಮಾಡುತ್ತದೆ. ದೇವಕಳೆ ಮತ್ತು ಭಕ್ತಕಳೆಯಲ್ಲಿ ಸಮತೆಯನ್ನು ಸಾಧಿಸುವುದರ ಮೂಲಕ ಎಲ್ಲವೂ ಸಮಸುಖದಲ್ಲಿ ಬೆರೆತುಹೋಗುವಂತೆ ಮಾಡುತ್ತದೆ. ತನ್ನ ತಾನರಿದು ತಾನೇ ಸ್ವಯಂಭೂವಾಗುವಂಥ ಎತ್ತರಕ್ಕೇರುವ ಸಾಧ್ಯತೆಯನ್ನು ಭಕ್ತ ತನ್ನೊಳಗಿನ ಮಹಾಘನವನ್ನು ಅರಿತಾಗ ಪಡೆದುಕೊಳ್ಳುವಂತಾಗುವನು.

ಈ ವಚನ ಲೌಕಿಕದ ಸಂದರ್ಭದಲ್ಲೂ ಮಹತ್ವದ್ದನ್ನೇ ಸಾಧಿಸಿದೆ. ಸಮರತಿ ಪದವು ಲಿಂಗಭೇದವನ್ನು ತಿರಸ್ಕರಿಸುತ್ತದೆ. ಸಮಕಳೆಯು ಬ್ರಹ್ಮತೇಜಸ್ಸು, ಕ್ಷಾತ್ರತೇಜಸ್ಸು ಭ್ರಮಾತ್ಮಕವಾದುವು ಎಂದು ಸಾರುತ್ತದೆ. ಘನತೆಯುಳ್ಳ ಮಾನವರೆಲ್ಲರ ತೇಜಸ್ಸು ಒಂದೇ ಆಗಿರುತ್ತದೆ ಎಂಬುದನ್ನು ಸೂಚಿಸುತ್ತದೆ. ಸಮಸುಖದ ಅರಿವು ವರ್ಗಭೇದವನ್ನು ಅಳಿಸಿಹಾಕುತ್ತದೆ. ಬಡವರಿಗೊಂದು ಬದುಕು, ಶ್ರೀಮಂತರಿಗೊಂದು ಬದುಕು ಎಂಬ ಮಿಥ್ಯೆಯನ್ನು ಒಡೆದುಹಾಕುತ್ತದೆ. ನದಿಯೊಳಗೆ ನದಿ ಬೆರೆಯುವ ಹಾಗೆ ಇಡೀ ಮಾನವಕುಲ ಜಾತಿ, ಮತ, ಕುಲ, ವರ್ಣ, ವರ್ಗ, ಲಿಂಗ ಮತ್ತು ಧರ್ಮಭೇದಗಳಿಲ್ಲದೆ ಒಂದಾಗುವಂಥ ಅರಿವನ್ನು ಮೂಡಿಸುತ್ತ ಅದನ್ನು ಆಚರಣೆಯಲ್ಲಿ ತರುವುದೇ ಲಿಂಗಪೂಜಾ ಫಲ ಎಂದು ಬಸವಣ್ಣನವರು ಈ ವಚನದಲ್ಲಿ ಸ್ಪಷ್ಟಪಡಿಸಿದ್ದಾರೆ.

ನಮ್ಮೊಳಗಿನ ಮಹಾಘನದ ಅರಿವಿಲ್ಲದೆ ನಾವು ಘನತೆಯುಳ್ಳವರಾಗುವುದಿಲ್ಲ ಎಂಬುದು ಬಸವಣ್ಣನವರ ದೃಢನಿರ್ಧಾರವಾಗಿದೆ.

ಘನಗಂಭೀರ ಮಹಾಘನದೊಳಗೆ
ಘನಕ್ಕೆ ಘನವಾಗಿದ್ದೆನಯ್ಯಾ.
ಕೂಡಲಸಂಗಮದೇವಯ್ಯನೆಂಬ
ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬ ಶಬ್ದ
ಮುಗ್ಧವಾದುದೇನೆಂಬೆನಯ್ಯಾ. –ಬಸವಣ್ಣನವರು

ನಮ್ಮೊಳಗಿನ ಘನದ ಅರಿವಾದಾಗ ಮಾತ್ರ ನಾವು ಘನತೆವೆತ್ತರಾಗುತ್ತೇವೆ. ಮಾನವಘನತೆ ಎಂಬುದು ಮಾನವ ತನ್ನೊಳಗಿನ ಮಹಾಘನದ ಅರಿವನ್ನು ಹೊಂದಿದಾಗ ಮಾತ್ರ ಬರುವಂಥದ್ದು. ಘನತೆವೆತ್ತ ಮಾನವ ಪ್ರಜ್ಞಾಪೂರ್ಣವಾದ ಮುಗ್ಧತೆಯನ್ನು ಹೊಂದಿದವನಾಗಿರುತ್ತಾನೆ. ಆತ ಮಹಾಬೆಳಗಿನ ಬೆಳಗಿನೊಳಗಿದ್ದೇನೆಂಬುದನ್ನು ಮುಗ್ಧತೆಯೊಂದಿಗೆ ಅನುಭವಿಸುತ್ತ ಎಲ್ಲರೊಳಗೆ ಒಂದಾಗಿಹೋಗುತ್ತಾನೆ. ಆತನ ದೃಷ್ಟಿಯಲ್ಲಿ ಎಲ್ಲರೂ ಶಿವಸ್ವರೂಪಿಗಳಾಗಿರುತ್ತಾರೆ. ಆತ ಚಾತುರ್ವರ್ಣಾತೀತನಾಗಿ ಸರ್ವಸಮತ್ವದ ದೃಷ್ಟಾರನಾಗುತ್ತಾನೆ. ಆ ಮೂಲಕ ಮಾನವಕುಲದ ವಿಮೋಚನೆಯ ಲಿಂಗತತ್ತ್ವವನ್ನು ವಚನಗಳ ಮೂಲಕ ಸಾರುತ್ತಾನೆ. ಹೀಗೆ ಮಾನವಘನತೆ ಎಂಬುದು ಪರಿಪೂರ್ಣವಾದುದು, ಸರಳವಾದುದು, ಸಹಜವಾದುದು, ಉತ್ಕೃಷ್ಟವಾದುದು.

ಇಂಥ ಮಾನವಘನತೆಯುಳ್ಳ ಶರಣರು ಶ್ರೀಮಂತಿಕೆಯನ್ನು ತಿರಸ್ಕರಿಸುತ್ತ ಶರಣಸಂಕುಲವೆಂಬ ಮೇಲಿಲ್ಲದ, ಕೀಳಿಲ್ಲದ ಮತ್ತು ಸರ್ವಸಮತ್ವದ ಶ್ರೀಮಂತ ಸಮಾಜವನ್ನು ಸೃಷ್ಟಿಸಿದರು. ಶರಣರ ಘನತೆವೆತ್ತ ವ್ಯಕ್ತಿತ್ವವನ್ನು ಬಸವಣ್ಣನವರು ಬಹುಸುಂದರವಾಗಿ ಚಿತ್ರಿಸಿದ್ದಾರೆ.

ಮನೆ ನೋಡಾ ಬಡವರು; ಮನ ನೋಡಾ ಘನ
ಸೋಂಕಿನಲ್ಲಿ ಶುಚಿ; ಸರ್ವಾಂಗ ಕಲಿಗಳು.
ಪಸರಕ್ಕನುವಿಲ್ಲ; ಬಂದ ತತ್ಕಾಲಕ್ಕೆ ಉಂಟು.
ಕೂಡಲಸಂಗನ ಶರಣರು ಸ್ವತಂತ್ರಧೀರರು. –ಬಸವಣ್ಣನವರು

ಶರಣರು ಭೌತಿಕ ಜಗತ್ತಿನಲ್ಲಿ ಬಡವರಾಗಿದ್ದಾರೆ. ಆದರೆ ಅನುಭಾವದ ಜಗತ್ತಿನಲ್ಲಿ ಘನತೆಯುಳ್ಳ ಮನಸ್ಥಿತಿಯವರಾಗಿದ್ದಾರೆ. ಅವರು ಪರಧನ, ಪರಸ್ತ್ರೀಯರನ್ನು ಮುಟ್ಟದೆ ಶುಚಿತ್ವವನ್ನು ಸಾಧಿಸಿದ್ದಾರೆ. ಅವರು ಯಾವುದೇ ರೀತಿಯ ಸೋಂಕಿಗೆ ಒಳಗಾಗದ ಪವಿತ್ರಾತ್ಮರಾಗಿದ್ದಾರೆ. ಅವರು ಸರ್ವಾಂಗಗಳ ಮೇಲೆ ವಿಜಯವನ್ನು ಸಾಧಿಸಿದ ಕಲಿಗಳಾಗಿದ್ದಾರೆ. ಅವರು ಕಣ್ಣಿನ ಮೇಲೆ ವಿಜಯವನ್ನು ಸಾಧಿಸಿದ್ದರಿಂದ ಅವರ ಕಣ್ಣುಗಳು ಕೆಟ್ಟದ್ದನ್ನು ನೋಡ ಬಯಸುವುದಿಲ್ಲ. ಮೂಗಿನ ಮೇಲೆ ವಿಜಯ ಸಾಧಿಸಿದ್ದರಿಂದ ವಾಸನಾಮಯ ಜಗತ್ತಿನ ಕಡೆಗೆ ಅವರು ಹೋಗುವಂಥವರಲ್ಲ. ಕಿವಿಯ ಮೇಲೆ ವಿಜಯ ಸಾಧಿಸಿದ್ದರಿಂದ ಕೆಟ್ಟದ್ದನ್ನು ಕೇಳುವ ತವಕ ಅವರಿಗಿಲ್ಲ. ಕೈಗಳ ಮೇಲೆ ವಿಜಯ ಸಾಧಿಸಿದ್ದರಿಂದ ಕೆಟ್ಟದ್ದನ್ನು ಮುಟ್ಟಲಾರರು. ಕಾಲುಗಳ ಮೇಲೆ ವಿಜಯ ಸಾಧಿಸಿದ್ದರಿಂದ ಕೆಟ್ಟದ್ದರ ಕಡೆಗೆ ಹೋಗಲಾರರು. ನಾಲಗೆಯ ಮೇಲೆ ವಿಜಯ ಸಾಧಿಸಿದ್ದರಿಂದ ಕೆಟ್ಟದ್ದನ್ನು ಸೇವಿಸಲಾರರು. ಹೀಗೆ ಅವರು ಸರ್ವಾಂಗ ಕಲಿಗಳು.

ಬಡತನದ ಮೇಲೂ ವಿಜಯ ಸಾಧಿಸಿದ್ದರಿಂದ ಅವರು ಸಂಗ್ರಹಬುದ್ಧಿಯನ್ನು ಹೊಂದಿಲ್ಲ. ಸ್ವಾರ್ಥಕ್ಕಾಗಿ ಸಂಗ್ರಹಿಸುವುದನ್ನು ಅವರು ತಿರಸ್ಕರಿಸುತ್ತಾರೆ. ಆದರೆ ಕಾಯಕಜೀವಿಗಳಾದ ಅವರು ತಮ್ಮ ಶಕ್ತಿ ಸಾಮರ್ಥ್ಯದ ಮೇಲೆಯೆ ಬದುಕುವುದರಿಂದ ಅವರಿಗೆ ದೈನಂದಿನ ಬದುಕಿನಲ್ಲಿ ಯಾವ ಕೊರತೆಯೂ ಇಲ್ಲ. ಅವರ ಬಳಿ ಹೋದ ಸಂದರ್ಭದಲ್ಲಿ ಯಾರೂ ನಿರಾಶರಾಗದಂಥ ವಾತಾವರಣ ಸಹಜವಾಗಿಯೇ ಇರುತ್ತದೆ. ತತ್ಕಾಲಕ್ಕೆ ಸಿಗುವ ಪದಾರ್ಥಗಳ ಜೊತೆಗೆ ಅವರ ದಾಸೋಹಂಭಾವ ಇದಕ್ಕೆ ಕಾರಣವಾಗಿದೆ. ಈ ಎಲ್ಲ ಕಾರಣಗಳಿಂದ ಕೂಡಲಸಂಗನ ಶರಣರು ಸ್ವತಂತ್ರಧೀರರಾಗಿದ್ದಾರೆ. ಅಂಥ ಸಾತ್ವಿಕ ಶಕ್ತಿಯೊಂದಿಗೆ ಮಾನವಘನತೆಯ ರಕ್ಷಣೆಗಾಗಿ ಹೋರಾಡುವ ಕಲಿಗಳಾಗಿದ್ದಾರೆ.

ಇಂಥವರೇ ನಿಜವಾದ ಲಿಂಗವಂತರು. ಇಂಥ ಲಿಂಗವಂತರು ಇದ್ದಲ್ಲಿ ಮೇಲು ಕೀಳಿನ ನಿಂದೆ ಇರುವುದಿಲ್ಲ. ಮಾನವರಿಗೆ ಅಪಮಾನವಾಗುವ ಸ್ಥಾನದಲ್ಲಿ ಈ ಲಿಂಗವಂತರು ಇರುವುದಿಲ್ಲ. ಅಂತೆಯ ಕೂಡಲಸಂಗನ ಶರಣರಾದ ಅವರನ್ನು ಯಾರೊಂದಿಗೂ ಹೋಲಿಸಲು ಸಾಧ್ಯವಿಲ್ಲ. ಅವರು ನಿಜಮಾನವರಾಗಿ ಮಹಾಘನವಾಗಿದ್ದಾರೆ. ಆ ಮೂಲಕ ಶಿವಸ್ವರೂಪಿಗಳೇ ಆಗಿದ್ದಾರೆ ಎಂದು ಬಸವಣ್ಣನವರು ಸೂಚಿಸಿದ್ದಾರೆ.

ಲಿಂಗವಿದ್ದಲ್ಲಿ ನಿಂದೆಯಿರದು, ನಿಂದೆಯಿದ್ದಲ್ಲಿ ಲಿಂಗವಿರದು.
ಅವರೆಂತಿದ್ದಡೇನು? ಹೇಗಿದ್ದಡೇನು? ಲಿಂಗವಂತರವರು.
ಉಪಮಿಸಬಾರದ ಮಹಾಘನವು ಕೂಡಲಸಂಗನ ಶರಣರು.

–ಬಸವಣ್ಣನವರು

ಆದರೆ ಬರಿ ಇಷ್ಟಲಿಂಗವನ್ನು ಕಟ್ಟಿಕೊಂಡವರು ಲಿಂಗವಂತರಾಗುವುದಿಲ್ಲ ಎಂದು ಬಸವಣ್ಣನವರು ಎಚ್ಚರಿಸಿದ್ದಾರೆ. "ಎನ್ನ ತನು ಭಕ್ತ, ಮನ ಭವಿ" ಎಂದು ತಿಳಿಸುವ ಮೂಲಕ ಅಂತರಂಗ ಶುದ್ಧಿಯಾಗದೆ ಹೊರಗೆ ಶುದ್ಧಿಯಾಗದು ಎಂದು ಸ್ಪಷ್ಟಪಡಿಸಿದ್ದಾರೆ. ಶುದ್ಧವಾಗಿ ಕಾಣುವುದೆಲ್ಲವೂ ಶುದ್ಧವಾದುದಲ್ಲ ಎಂಬುದನ್ನು ಎತ್ತಿ ತೋರಿಸಿದ್ದಾರೆ.

ನಮ್ಮೊಳಗಿನ ಮಹಾಘನವನ್ನು ಅರಿಯದೆ ನಾವು ಪರಿಶುದ್ಧರಾಗೆವು. ಮಾನವಘನತೆಯನ್ನು ಹೊಂದಬೇಕಾದಲ್ಲಿ ನಮ್ಮೊಳಗಿನ ಮಹಾಘನವನ್ನು ಅರಿಯುವುದೊಂದೇ ಮಾರ್ಗ ಎಂದು ಅಕ್ಕಮಹಾದೇವಿ ತಿಳಿಸುತ್ತಾರೆ. ಐಹಿಕ ಜಗತ್ತಿನ ವಸ್ತುಮೋಹದಲ್ಲೇ ಮುಳುಗಿದವರು ತಮ್ಮೊಳಗಿನ ಮಹಾಘನವನ್ನು ಅರಿಯುವುದಿಲ್ಲ ಎಂಬುದು ಅಕ್ಕನ ಉವಾಚವಾಗಿದೆ.

ಹಗಲು ನಾಲ್ಕು ಜಾವ ಅಶನಕ್ಕೆ ಕುದಿವರು.
ಇರುಳು ನಾಲ್ಕು ಜಾವ ವ್ಯಸನಕ್ಕೆ ಕುದಿವರು.
ಅಗಸ ನೀರೊಳಗಿರ್ದು ಬಾಯಾರಿ ಸತ್ತಂತೆ,
ತಮ್ಮೊಳಗಿರ್ದ ಮಹಾಘನವನರಿಯರು ಚೆನ್ನಮಲ್ಲಿಕಾರ್ಜುನಾ.

–ಅಕ್ಕಮಹಾದೇವಿ

ಬಸವಧರ್ಮ ಎಂಬ ಲಿಂಗವಂತ ಧರ್ಮ ಜನ್ಮತಾಳಿದ ಕನ್ನಡದ ನೆಲದಲ್ಲಿ ಇಂದಿಗೂ ಅಸ್ಪೃಶ್ಯತೆ, ಜಾತೀಯತೆ ಮತ್ತು ಎಲ್ಲೆಡೆ ಮನುವಾದಿ ವೈದಿಕತೆ ತಾಂಡವವಾಡುತ್ತ ಮಾನವಘನತೆಗೆ ಕುಂದು ತರುತ್ತಿರುವುದು ವಿಪರ್ಯಾಸವಾಗಿದೆ.

❖❖

೧೧

❖

ಬಸವಣ್ಣನವರ ಆರ್ಥಿಕ ಪ್ರಜ್ಞೆ

ಬಸವಣ್ಣನವರು ೮೫೦ ವರ್ಷಗಳ ಹಿಂದೆ ಜಾತಿಭೇದ, ವರ್ಣಭೇದ, ಲಿಂಗಭೇದ, ವರ್ಗಭೇದ ಮತ್ತು ಕಾಯಕಭೇದಗಳಿಲ್ಲದ ಹೊಸ ಪರ್ಯಾಯ ಸಮಾಜವನ್ನು ನಿರ್ಮಿಸುವಲ್ಲಿ ಯಶಸ್ಸು ಸಾಧಿಸಿದರು, ಅವರ ಸರ್ವಸಮಾನತೆಯ ಪ್ರಜಾಪ್ರಭುತ್ವವಾದಿ ಸಮಾಜ, "೨೧ನೇ ಶತಮಾನದ ನಮ್ಮ ಸಮಾಜ ಹೇಗಿರಬೇಕು" ಎಂಬುದಕ್ಕೆ ಮುನ್ಸೂಚನೆಯಾಗಿದೆ.

ಪ್ರಜಾಪ್ರಭುತ್ವವಾದಿ ನೆಲೆಯ ಚಿಂತನಮಂಥನಕ್ಕಾಗಿ ಬೇಕಾದ ಅನುಭವ ಮಂಟಪ "ಅನುಭವ ಮಂಟಪ" ಎಂಬುದು ವಿಶಿಷ್ಟವಾದ ಸಮಾಜೋ ಧಾರ್ಮಿಕ ಸಂಸತ್ ಆಗಿದೆ.

ಬಸವಣ್ಣನವರು ಅನುಭವ ಮಂಟಪ ಸ್ಥಾಪಿಸುವುದರ ಮೂಲಕ ಜನರಲ್ಲಿ ಪ್ರಜಾಪ್ರಭುತ್ವದ ಅರಿವು ಮೂಡಿಸಿದ್ದರು. ಅಸ್ಪೃಶ್ಯರು ಮೊದಲು ಮಾಡಿ ವಿವಿಧ ಜಾತಿಗಳ ಜನ ಅನುಭವ ಮಂಟಪದಲ್ಲಿದ್ದರು. ೭೭೦ ಅಮರಗಣಂಗಳಲ್ಲಿ ಬಹುಪಾಲು ಮಂದಿ ವಿವಿಧ ಕಾಯಕಜೀವಿಗಳೇ ಆಗಿದ್ದರು. ಲೋಕವೇ ತಾನಾದವನು ಅಂದರೆ ಸಕಲಜೀವಾತ್ಮರಿಗೆ ಲೇಸನೇ ಬಯಸುವವನು ಮಾತ್ರ ಗಣ ಎಂದು ಕರೆಯಿಸಿಕೊಳ್ಳುತ್ತಾನೆ. ಹೀಗೆ ಶರಣರು ಎಲ್ಲ ರೀತಿಯ ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಅಸಮಾನತೆಗಳಿಗೆ ವಿರುದ್ಧವಾಗಿದ್ದರು.

ಪ್ರಜಾಪ್ರಭುತ್ವದ ಆಶಯಗಳಿಗೆ ಪೂರಕವಾದ ವಿಚಾರಗಳನ್ನು ವಚನಕಾರರೆಲ್ಲ ಹೊಂದಿದ್ದರು ಎಂಬುದಕ್ಕೆ ಅವರ ಚಳವಳಿ ಮತ್ತು ವಚನಗಳು ಸಾಕ್ಷಿಯಾಗಿವೆ. ಬಸವಣ್ಣನವರು ಇಷ್ಟಲಿಂಗದ ಮೂಲಕ ದೇವರನ್ನು ಖಾಸಗೀಕರಣಗೊಳಿಸಿದರು. ಜಂಗಮಲಿಂಗದ ಮೂಲಕ ಮನುಷ್ಯನನ್ನು ಸಾಮಾಜೀಕರಣಗೊಳಿಸಿದರು. ಮನುಷ್ಯ ನಿಜವಾಗಿಯೂ ಸಾಮಾಜೀಕರಣಗೊಂಡಾಗ ಜೀವಕಾರುಣ್ಯದಿಂದ ತುಂಬಿದ ಸರ್ವಸಮಾನತೆಯ ಪ್ರಜ್ಞೆಯುಳ್ಳ ಶರಣನೆಂದೆನಿಸಿಕೊಳ್ಳುತ್ತಾನೆ.

೧೯ನೇ ಶತಮಾನದಲ್ಲಿ ಕಮ್ಯೂನಿಸ್ಟ್ ತತ್ತ್ವಜ್ಞಾನಿ ಕಾರ್ಲ್ ಮಾರ್ಕ್ಸ್ "ಜಗತ್ತಿನ ಕಾರ್ಮಿಕರೇ ಒಂದಾಗಿರಿ ನೀವು ಒಂದಾದರೆ ನಿಮ್ಮ ಸಂಕೋಲೆಗಳನ್ನು ಹೊರತುಪಡಿಸಿ ನೀವು ಏನನ್ನೂ ಕಳೆದುಕೊಳ್ಳುವುದಿಲ್ಲ" ಎಂದು ಸಾರಿದರು. ಬಸವಣ್ಣನವರು ೧೨ನೇ ಶತಮಾನದಲ್ಲೇ ಭಾರಿ ತೆರಿಗೆ ಮತ್ತು ಸುಲಿಗೆಯಿಂದ ನರಳುತ್ತಿದ್ದ ಕಾಯಕಜೀವಿಗಳನ್ನು, ಅಸ್ಪೃಶ್ಯತೆಯಿಂದ ಬಳಲುತ್ತಿದ್ದ ದಲಿತರನ್ನು, ಎಲ್ಲ ಹಕ್ಕುಗಳಿಂದ ವಂಚಿತರಾಗಿದ್ದ ಮಹಿಳೆಯರನ್ನು ವಿಮೋಚನೆಯ ದಾರಿಯೆಡೆಗೆ ತಂದರು.

ವಿಶ್ವಸಂಸ್ಥೆಯ ಮಾನವಹಕ್ಕುಗಳು ಕೂಡ ಬಸವಪ್ರಜ್ಞೆಯಿಂದ ಹೊರತಾಗಿಲ್ಲ. ಜೀವಿಸುವ ಹಕ್ಕು, ಮಾತನಾಡುವ ಹಕ್ಕು, ವರ್ಗ, ವರ್ಣ ಮತ್ತು ಲಿಂಗಭೇದ ನೀತಿಯ ವಿರುದ್ಧ ಹೋರಾಡುವ ಹಕ್ಕುಗಳು ಮಾನವಹಕ್ಕುಗಳಾಗುತ್ತವೆ. ವಿಶ್ವಸಂಸ್ಥೆಯ ಮಾನವಹಕ್ಕುಗಳ ವಿಭಾಗ ತನ್ನ ೩೦ ಅಂಶಗಳ ಕಾರ್ಯಕ್ರಮದಲ್ಲಿ ಈ ಮಾನವಹಕ್ಕುಗಳನ್ನು ಕುರಿತು ವಿವರಿಸಿದೆ. ಈ ಎಲ್ಲ ಮಾನವ ಹಕ್ಕುಗಳನ್ನು ಸಾಧಿಸುವುದೇ ವಚನಚಳವಳಿಯ ಗುರಿಯಾಗಿತ್ತು.

ಕುಟುಂಬ ಪ್ರೇಮ, ಸಮಾಜ ಪೇಮ, ದೇಶಪ್ರೇಮ ಮತ್ತು ವಿಶ್ವಪ್ರೇಮ ಬಸವಧರ್ಮದ ಪ್ರೇಮತತ್ತ್ವವಾಗಿದೆ. ಇವೆಲ್ಲ ಕೂಡಿದಾಗಲೆ ಲಿಂಗಪ್ರೇಮವಾಗುತ್ತದೆ. "ಸತಿಪತಿಗಳೊಂದಾದ ಭಕ್ತಿ ಹಿತವಪ್ಪುದು ಶಿವಂಗೆ" ಎಂದು ಜೇಡರ ದಾಸಿಮಯ್ಯನವರು ಕುಟುಂಬ ಪ್ರೇಮದ ಮಹತ್ವವನ್ನು ತಿಳಿಸಿದ್ದಾರೆ. "ಜೀವಿಸುವ ಜೀವಕ್ಕೆ ಶೃಂಗಾರ ಗಣಮೇಳಾಪ" ಎಂದು ಅಕ್ಕ ಮಹಾದೇವಿ ಸಮಾಜ ಪ್ರೇಮ ಸಾರಿದ್ದಾರೆ. "ಕಳ್ಳ ನಾಣ್ಯ ಸಲುಗೆಗೆ ಸಲ್ಲದು ಎಂದು ಬಸವಣ್ಣ ದೇಶಪ್ರೇಮ ಸೂಚಿಸಿದ್ದಾರೆ. "ಆರಂಬವ ಮಾಡಿ ಸಂಸಾರ ಸ್ಥಿತಿ ಕಳೆಯದಿದ್ದರೆ ಆ ಆರಂಬವೆ ಕೇಡು' ಎಂದು ಚನ್ನಬಸವಣ್ಣನವರು ವಿಶ್ವಪ್ರೇಮ ಮೆರೆದಿದ್ದಾರೆ.

ಬಸವಪ್ರಜ್ಞೆಯು ಆರ್ಥಿಕ ಸಮಾನತೆಯಿಂದ ಕೂಡಿದ ಮಾನವಹಕ್ಕುಗಳ ಪ್ರಜ್ಞೆಯಾಗಿದೆ; ಪ್ರಜಾಪ್ರುತ್ತ್ವವಾದಿ ಪ್ರಜ್ಞೆಯಾಗಿದೆ; ಮುಂದುವರಿದ ಸಮಾಜವಾದಿ ಪ್ರಜ್ಞೆಯಾಗಿದೆ, ಅದಕ್ಕೂ ಮುಂದುವರಿದ ಸಮತಾವಾದಿ ಪ್ರಜ್ಞೆಯಾಗಿದೆ. ಅಂತೆಯೆ ಬಸವಣ್ಣನವರು ಹಳೆಯ ೩೩ ಕೋಟಿ ದೇವತೆಗಳನ್ನು ಆಚೆ ತಳ್ಳಿದ ನಂತರ ನಮಗೆ ಹೊಸ ಸರ್ವಸಮತಾವಾದಿ ದೇವರನ್ನು ಕೊಟ್ಟರು. ಬಸವಣ್ಣನವರ ಕೂಡಲಸಂಗಮದೇವ ಮಾದಾರ ಚನ್ನಯ್ಯನ ಮನೆಯಲ್ಲಿ ಅಂಬಲಿಯನ್ನು ಕುಡಿಯುವ ದೇವರಾಗಿದ್ದಾನೆ. ಬಡವರ, ಹಿಂದುಳಿದವರ, ದಲಿತರ, ಕಾಯಕಜೀವಿಗಳ ಒಟ್ಟಾರೆ ಇಡೀ ಮಾನವಕುಲದ ದೇವರಾಗಿದ್ದಾನೆ.

"ಲಿಂಗ ವ್ಯಸನಿ ಜಂಗಮ ಪ್ರೇಮಿ" ಎಂದೆನಿಸಯ್ಯಾ ಎಂದು ಬಸವಣ್ಣನವರು ಹೇಳುವಲ್ಲಿ ಮೌಲ್ಯಗಳಿಂದ ತುಂಬಿದ ಒಳಜಗತ್ತು ಹೊರ ಜಗತ್ತನ್ನು ಆಳಬೇಕೆಂದು

ಸೂಚಿಸುತ್ತಾರೆ. ನಮ್ಮ ವ್ಯಸನಗಳೆಲ್ಲ ಒಳಜಗತ್ತಿಗೆ ಸಂಬಂಧಿಸಿರಬೇಕು. ಆದರೆ ನಮ್ಮ ಪ್ರೇಮಭಾವ ಹೊರಜಗತ್ತಿಗೆ ಸಂಬಂಧಿಸಿರಬೇಕು ಎಂದು ಬಸವಣ್ಣನವರು ಬಯಸುತ್ತಾರೆ. ಬಸವ ತತ್ತ್ವದ ಪ್ರಕಾರ ಮಾನವೀಯ ಮೌಲ್ಯಗಳು ಜಗತ್ತನ್ನು ಆಳಬೇಕು. ಆದರೆ ಇಂದು ಮಾರುಕಟ್ಟೆ ಮೌಲ್ಯಗಳು ಜಗತ್ತನ್ನು ಆಳತೊಡಗಿವೆ. ಸಕಲ ಜೀವಾತ್ಮರನ್ನು ಬಯಸುವವನು ಭಕ್ತ. ಸಕಲ ವಸ್ತುಗಳನ್ನು ಬಯಸುವವನು ಭವಿ. ಸದ್ಯ ಜಗತ್ತು ಭವಿಗಳ ಸಾಮ್ರಾಜ್ಯವಾಗುತ್ತಿದೆ. ಈ ಜಗತ್ತನ್ನು ಭಕ್ತರ ಸಾಮ್ರಾಜ್ಯ ಮಾಡಿದಾಗ ಮಾತ್ರ ಮೇಲು ಕೀಳಿಲ್ಲದ, ಸುಲಿಗೆ ಇಲ್ಲದ, ಘನತೆವೆತ್ತ ಸ್ವತಂತ್ರ ಮಾನವನ ಉದಯವಾಗುತ್ತದೆ. ಇಂಥ ಹೊಸ ಮನುಷ್ಯರ ಸಮಾಜವನ್ನು ಸೃಷ್ಟಿಸುವುದು ಬಸವಣ್ಣನವರ ಉದ್ದೇಶವಾಗಿತ್ತು. ದೇವರಿಗೆ ಶರಣಾಗುವುದೆಂದರೆ ಭವದಲ್ಲಿ ಯಾರಿಗೂ ಶರಣಾಗತರಾಗದೆ ಸ್ವತಂತ್ರಧೀರರಾಗಿ ಬದುಕುವುದು. "ಕೂಡಲಸಂಗನ ಶರಣರು ಸ್ವತಂತ್ರಧೀರರು" ಎಂದು ಬಸವಣ್ಣನವರು ಹೇಳುತ್ತಾರೆ. ಸ್ವತಂತ್ರಧೀರರ ಸಮಾಜದಲ್ಲಿ ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಾಗುತ್ತದೆ. ಇಲ್ಲದಿದ್ದರೆ ಅದು ಸ್ವಾರ್ಥಿಗಳ ಕಮ್ಮಟವಾಗುತ್ತದೆ.

ಮಾನವನ ವ್ಯಕ್ತಿತ್ವ ವಿಕಸನಗೊಳ್ಳಬೇಕಾದರೆ ಮೊದಲಿಗೆ ಕಾಯಕ ಮಾಡಬೇಕು. ಅಂತರಂಗ ಶುದ್ಧಿಗಾಗಿ ಸಮರ್ಪಣಾ ಭಾವದ ಮೂಲಕ ಧ್ಯಾನ ಅಂದರೆ ಇಷ್ಟಲಿಂಗ ಪೂಜೆ ಮತ್ತು ಬಹಿರಂಗ ಶುದ್ಧಿಗಾಗಿ ಕಾಯಕ ದಾಸೋಹದ ಮೂಲಕ ಜಂಗಮಲಿಂಗದ ಪೂಜೆ ಮಾಡಬೇಕು. ಅಂತರಂಗ ಶುದ್ಧಿಯಿಂದ ಆತ್ಮಕಲ್ಯಾಣವಾಗುತ್ತದೆ. ಬಹಿರಂಗ ಶುದ್ಧಿಯಿಂದ ಲೋಕಕಲ್ಯಾಣವಾಗುತ್ತದೆ. ಆತ್ಮಕಲ್ಯಾಣ ಸ್ವಾತಂತ್ರ್ಯದ ಆನಂದ ನೀಡಿದರೆ ಲೋಕಕಲ್ಯಾಣ ಜವಾಬ್ದಾರಿಯ ಪ್ರಜ್ಞೆ ಮೂಡಿಸುವುದು. ಇವೆಲ್ಲ ಸೇರಿ ವ್ಯಷ್ಟಿ ಅನುಭವವಾಗುವುದು. ಅನುಭವ ಮಂಟಪದ ಚಿಂತನ-ಮಂಥನದಲ್ಲಿ ಸರ್ವರೂ ಸಮಷ್ಟಿ ಅನುಭವ ಪಡೆಯುವರು. ಈ ಸಮಷ್ಟಿ ಅನುಭವದ ಅರಿವೇ ಗುರುವಾಗಿ ಅನುಭಾವದೆಡೆಗೆ ಒಯ್ಯುವುದು. ಆಗ ಮಾನವ ನಿಜ ಮಾನವನಾಗುವನು. ಆ ನಿಜಮಾನವನೇ ಶರಣ. ಆತನೇ ನವಮಾನವ. ಜಗತ್ತು ಇಂಥ ಶರಣರ ಸಂಕುಲವಾಗಬೇಕು ಎಂದು ಬಸವಣ್ಣನವರು ಬಯಸಿದ್ದರು.

ನಮ್ಮೊಳಗೇ ನಾವು ಬಯಲಾಗುವ ಕ್ರಮವನ್ನು ಅರಿತುಕೊಳ್ಳಲು ಕೂಡ ಬಸವಣ್ಣನವರು ಮಾರ್ಗದರ್ಶನ ಮಾಡಿದ್ದಾರೆ. ಅವುಗಳಲ್ಲಿ ಗುರು-ಲಿಂಗ-ಜಂಗಮ ಮತ್ತು ಕಾಯಕ-ಪ್ರಸಾದ-ದಾಸೋಹ ವಿಚಾರಗಳು ಬಹುಮುಖ್ಯವಾಗಿವೆ.

"ನಾನು ಆರಂಭವ ಮಾಡುವೆನಯ್ಯಾ ಗುರುಪೂಜೆಗೆಂದು, ನಾನು ಬೆವಹಾರವ ಮಾಡುವೆನಯ್ಯಾ ಲಿಂಗಾರ್ಚನೆಗೆಂದು, ನಾನು ಪರಸೇವೆಯ ಮಾಡುವೆನಯ್ಯಾ ಜಂಗಮದಾಸೋಹಕ್ಕೆಂದು" ಎಂದು ಬಸವಣ್ಣನವರು ಹೇಳುವಾಗ ಕಾಯಕ ಕೇವಲ

ಸ್ವಾವಲಂಬನೆಗಾಗಿ ಅಲ್ಲ, ಅದಕ್ಕೆ ತ್ರಿವಿಧ ದಾಸೋಹದ ಜವಾಬ್ದಾರಿಗಳಿವೆ ಎಂಬುದನ್ನು ಸೂಚಿಸುತ್ತಾರೆ. ನಮ್ಮ ಕಾಯಕದಿಂದ ಬಂದದ್ದನ್ನು ದೇವರ ಪ್ರಸಾದವಾಗಿ ಸ್ವೀಕರಿಸುವುದರ ಮೂಲಕ ಗಳಿಕೆಯ ಅಹಂನಿಂದ ಹೊರಬಂದು, ಆ ಗಳಿಸಿದ್ದನ್ನೆಲ್ಲ ನಮಗಾಗಿಯೇ ಖರ್ಚು ಮಾಡದೆ ಸಾಮಾಜಿಕ ಜವಾಬ್ದಾರಿಯನ್ನು ಸಮರ್ಪಣಾ ಭಾವದಿಂದ ನಿಭಾಯಿಸುವುದಕ್ಕೆ ದಾಸೋಹವೆಂದು ಕರೆಯುತ್ತಾರೆ. ಅಂತೆಯೆ ಬಸವಧರ್ಮದಲ್ಲಿ ಗುರು–ಲಿಂಗ–ಜಂಗಮಕ್ಕೂ ಕಾಯಕ–ಪ್ರಸಾದ–ದಾಸೋಹಕ್ಕೂ ಅವಿನಾಭಾವ ಸಂಬಂಧವಿದೆ. ಇವುಗಳನ್ನು ಪ್ರತಿಪಾದಿಸುವ ವಚನ ಸಾಹಿತ್ಯ ನಿಜವಾದ ಕ್ರಾಂತಿಕಾರಿ ಸಾಹಿತ್ಯವಾಗಿದೆ. ವಚನಗಳಲ್ಲಿ ಸಂಪೂರ್ಣ ಕ್ರಾಂತಿಯ ಬೀಜಮಂತ್ರಗಳಿವೆ. ವಚನಗಳು ಲೋಕಹಿತದ ಸಾಹಿತ್ಯ ಮತ್ತು ತತ್ತ್ವದ ಆಗರಗಳಾಗಿವೆ.

ಸಾಮ್ರಾಜ್ಯಶಾಹಿಗಳು ಬೀಸಿದ ಜಾಗತೀಕರಣದ ಜಾಲದಲ್ಲಿ ಜಗತ್ತು ಸಿಕ್ಕಿಕೊಂಡು ಒದ್ದಾಡುತ್ತಿದೆ. ವಚನ ಸಾಹಿತ್ಯ ಸಾರುವ ಭಕ್ತಿಸಾಮ್ರಾಜ್ಯದ ಸ್ಥಾಪನೆಯಾದಾಗ ಮಾತ್ರ ಜಗತ್ತು ಎಲ್ಲರೀತಿಯ ಹಿಂಸೆ, ಸುಲಿಗೆ, ಗಲಭೆ ಮತ್ತು ಕ್ರೌರ್ಯದಿಂದ ಮುಕ್ತವಾಗುವುದು. ಸುಲಿಗೆಯ ಸಾಮ್ರಾಜ್ಯಕ್ಕೆ ಭಕ್ತಿಸಾಮ್ರಾಜ್ಯವೊಂದೇ ಉತ್ತರ ಎಂಬುದನ್ನು ಜಗತ್ತು ಅರಿತುಕೊಳ್ಳುವ ದಿನಗಳು ದೂರವಿಲ್ಲ. ಬಸವಣ್ಣನವರ ಬಡ್ಡಿರಹಿತ ಅರ್ಥಶಾಸ್ತ್ರವೊಂದೇ ಈ ಜಗತ್ತನ್ನು ಕಾಪಾಡಬಲ್ಲುದು. ಯೋಗ್ಯ ಉತ್ಪಾದನೆ, ಯೋಗ್ಯ ಬಳಕೆ ಮತ್ತು ಯೋಗ್ಯ ವಿತರಣೆ ಇವು ಮೂರು ಬಸವಣ್ಣನವರ ಅರ್ಥಶಾಸ್ತ್ರದ ಪ್ರಮುಖ ಅಂಶಗಳಾಗಿವೆ. ಕಾಯಕವೆಂದರೆ ಯೋಗ್ಯವಾದುದನ್ನೇ ಉತ್ಪಾದಿಸುವ ಕ್ರಿಯೆ. ಪ್ರಸಾದವೆಂದರೆ ಯೋಗ್ಯ ಬಳಕೆ, ದಾಸೋಹವೆಂದರೆ ಯೋಗ್ಯ ವಿತರಣೆ. ಈ ಮೂರು ಆರ್ಥಿಕ ಪ್ರಕ್ರಿಯೆಗಳನ್ನು ಜಾಗತೀಕರಣದ ಮೂಲಕ ಹಾಳುಗೆಡವಿ ಭಾರತದಂಥ ಬಡರಾಷ್ಟ್ರಗಳನ್ನು ತಮ್ಮ ಕಪಿಮುಷ್ಟಿಯಲ್ಲಿಟ್ಟುಕೊಳ್ಳುವುದೇ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಮುಖ್ಯ ಉದ್ದೇಶವಾಗಿದೆ. ರೈತರು, ಕೃಷಿಕಾರ್ಮಿಕರು, ದಲಿತರು, ಮಹಿಳೆಯರು ಮತ್ತು ಎಲ್ಲ ವಿಧವಾದ ಕಾಯಕಜೀವಿಗಳ ಧರ್ಮವಾದ ಬಸವಧರ್ಮ ಇಂಥ ಜಾಗತಿಕ ಬಿಕ್ಕಟ್ಟನ್ನು ಪರಿಹರಿಸುವ ಸಾಮರ್ಥ್ಯವನ್ನು ಹೊಂದಿದೆ. ಹೊಸ ಮಾನವೀಯ ಜಗತ್ತಿಗಾಗಿ ಬಸವಧರ್ಮದ ರಹಸ್ಯವನ್ನು ಅರಿತುಕೊಳ್ಳುವುದು ಈ ಕಾಲದ ತುರ್ತು ಅವಶ್ಯಕತೆಯಾಗಿದೆ.

ಕಾಯಕವು ನಮ್ಮ ದೈಹಿಕ ಮತ್ತು ಬೌದ್ಧಿಕ ಶಕ್ತಿಯನ್ನು ಹೆಚ್ಚಿಸುವುದು. ನಮ್ಮ ಆರೋಗ್ಯ ಮತ್ತು ಸೌಂದರ್ಯವನ್ನು ಕಾಪಾಡುವುದು. ಮಾನಸಿಕ ಒತ್ತಡಗಳಿಂದ ರಕ್ಷಿಸುವುದು. ಪರಾವಲಂಬಿಗಳಾಗದಂತೆ ನೋಡಿಕೊಳ್ಳುವುದು. ಕೊನೆಗೆ ನಮ್ಮನ್ನು ಸ್ವತಂತ್ರಧೀರರನ್ನಾಗಿ ಮಾಡುವುದು. "ಕೂಡಲಸಂಗನ ಶರಣರು ಸ್ವತಂತ್ರ ಧೀರರು"

ಎಂದು ಬಸವಣ್ಣನವರು ಹೇಳುತ್ತಾರೆ. ಕಾಯಕ ಮಾಡದವನಿಗೆ ಹಸಿವು, ರುಚಿ, ವಿಶ್ರಾಂತಿ ಮತ್ತು ನಿದ್ರೆಯ ಮಹತ್ವ ಗೊತ್ತಾಗುವುದಿಲ್ಲ. ಕಾಯಕ ಜೀವಿಯ ಹಸಿವು ಎಲ್ಲ ಆಹಾರ ಪದಾರ್ಥಗಳನ್ನು ಪ್ರಸಾದವಾಗಿಸುತ್ತದೆ. ರುಚಿಕರವಾಗಿಸುತ್ತದೆ. ಆತನಿಗೆ ವಿಶ್ರಾಂತಿ ಮತ್ತು ನಿದ್ರೆಯ ಸುಖ ಸಹಜವಾಗಿಯೇ ಸಿಗುತ್ತದೆ. ಸತ್ಯಶುದ್ಧ ಕಾಯಕದಿಂದ ಮನಸ್ಸು ಪವಿತ್ರವಾಗಿರುತ್ತದೆ. ಆದ್ದರಿಂದ ಕಾಯಕ ತತ್ತ್ವವು ವಿಶ್ವಮಾನ್ಯವಾಗಿದೆ.

ಮನಶುದ್ಧವಿಲ್ಲದವಂಗೆ ದ್ರವ್ಯದ ಬಡತನವಲ್ಲದೆ
ಚಿತ್ತಶುದ್ಧದಲ್ಲಿ ಕಾಯಕವ ಮಾಡುವಲ್ಲಿ
ಸದ್ಭಕ್ತಂಗೆ ಎತ್ತ ನೋಡಿದತ್ತ ಲಕ್ಷ್ಮಿ ತಾನಾಗಿಪ್ಪಳು
ಮಾರಯ್ಯಪ್ರಿಯ ಅಮರೇಶ್ವರ ಲಿಂಗದ
ಸೇವೆಯುಳ್ಳನ್ನಕ್ಕರ

ಬಸವಧರ್ಮ ಮನುಧರ್ಮಕ್ಕೆ ಮುಖಾಮುಖಿಯಾಗಿ ನಿಲ್ಲುವ ಮೂಲಕ ಜಾತಿ, ವರ್ಣಗಳ ಮಹತ್ವವನ್ನು ಅಲ್ಲಗಳೆದು ಕಾಯಕದ ಮಹತ್ವವನ್ನು ಎತ್ತಿ ಹಿಡಿಯುತ್ತದೆ.

ವಾನರನಿಂದ ನರನಾಗುವ ಪ್ರಕ್ರಿಯೆಯಲ್ಲಿ ಕಾಯಕದ ಪಾತ್ರ ಮಹತ್ವದ್ದಾಗಿದೆ ಎಂದು ಕಾರ್ಲ್ ಮಾರ್ಕ್ಸ್ ಅವರ ಆಪ್ತ ಸಂಗಾತಿಯಾಗಿದ್ದ ಫ್ರೆಡರಿಕ್ ಎಂಗೆಲ್ಸ್ ಅವರು ತಮ್ಮ "ದಿ ಪಾರ್ಟ್ ಪ್ಲೇಯ್ಡ್ ಬೈ ಲೇಬರ್ ಇನ್ ದಿ ಟ್ರಾಂಜಿಷನ್ ಫ್ರಾಂ ಏಪ್ ಟು ಮ್ಯಾನ್" ಕಿರುಹೊತ್ತಿಗೆಯಲ್ಲಿ ತಿಳಿಸಿದ್ದಾರೆ. "ಮಾನವನ ಎಲ್ಲ ಇರುವಿಕೆಗೆ ದುಡಿಮೆ ಮೊಟ್ಟಮೊದಲ ಆಧಾರ. ಇದು ಎಷ್ಟರ ಮಟ್ಟಿಗೆ ನಿಜವೆಂದರೆ ಒಂದರ್ಥದಲ್ಲಿ ದುಡಿಮೆಯೆ ಮನುಷ್ಯನನ್ನು ಸೃಷ್ಟಿಸಿತೆಂದು ನಾವು ಹೇಳಬೇಕಾಗುತ್ತದೆ." ಎಂದು ಎಂಗೆಲ್ಸ್ ಬರೆದಿದ್ದಾರೆ. ಇವೆಲ್ಲ ಕಾಯಕ ಸಿದ್ಧಾಂತ ಮೂಲಾಧಾರಗಳಾಗಿವೆ.

ಕಾಯಕವು ಮಾನವ ಏಕತೆಯನ್ನು ಸಾಧಿಸುವ ಮೂಲಮಂತ್ರವಾಗಿದೆ. ಕಾಯಕವು ಭೂಲೋಕದ ಮಹತ್ವವನ್ನು ತಿಳಿಸುತ್ತದೆ. ಈ ಭೂಮಿಯನ್ನು ಬದುಕಲು ಹೆಚ್ಚು ಯೋಗ್ಯವಾಗುವಂತೆ ಮಾಡುತ್ತದೆ. ಕಾಯಕವು ಮಾನವರ ಮಧ್ಯದ ಅಂತಸ್ತುಗಳನ್ನು ಒಡೆದು ಹಾಕುತ್ತದೆ. ಕಂದಕಗಳನ್ನು ತುಂಬುತ್ತದೆ. ಕಾಯಕ ಮಾಡುವುದೆಂದರೆ ಬದುಕನ್ನು ಪ್ರೀತಿಸುವುದು.

ಬಸವಣ್ಣನವರು ಭಕ್ತರಲ್ಲಿ ಸರ್ವಸಮಾನತೆಯನ್ನು ಕಾಣುತ್ತಾರೆ. ಶರಣರ ದೃಷ್ಟಿಯಲ್ಲಿ ಯಾವ ಕಾಯಕವೂ ಚಿಕ್ಕದಲ್ಲ ಅಥವಾ ದೊಡ್ಡದಲ್ಲ. ನಾವು ಗಳಿಸಿದ್ದೆಲ್ಲ ನಮ್ಮದು ಎಂಬ ಅಹಂಕಾರವನ್ನು ಪ್ರಸಾದ ಪ್ರಜ್ಞೆ ಹೊಡೆದು ಹಾಕುತ್ತದೆ. ನಾವು ಗಳಿಸಿದ್ದೆಲ್ಲ ದೇವರ ಕೃಪೆ ಎಂಬುದರ ಅರಿವಾದಾಗ ಅದನ್ನು ಪ್ರಸಾದವೆಂದು ಜೋಪಾನವಾಗಿಟ್ಟುಕೊಂಡು ಸುವ್ಯಸ್ಥಿತವಾಗಿ ಬಳಸುತ್ತೇವೆ. ಸತ್ಕಾರ್ಯಗಳಿಗಾಗಿ ವ್ಯಯಸುತ್ತೇವೆ. ಆ ವಸ್ತುವಿನ ಮಹತ್ವವನ್ನು ಅರಿತುಕೊಂಡು ಅನ್ಯಾಯವಾಗಿ

ದುಂದುವೆಚ್ಚ ಮಾಡದಂತೆ ಎಚ್ಚರಿಕೆ ವಹಿಸುತ್ತೇವೆ. ಸೇವಾ ಮನೋಭಾವ ತಾಳುತ್ತೇವೆ. ದುಃಖಿಗಳಿಗೆ ಮತ್ತು ಕಷ್ಟದಲ್ಲಿರುವವರಿಗೆ ಒಳ್ಳೆಯದಾಗುವ ಹಾಗೆ ನಮ್ಮಲ್ಲಿರುವ ದೇವರ ಸಂಪತ್ತನ್ನು ವಿನಿಯೋಗಿಸಬಯಸುತ್ತೇವೆ. ಜಗತ್ತಿನ ಬಗ್ಗೆ ತೀವ್ರವಾದ ಕಾಳಜಿ ಹೊಂದುತ್ತೇವೆ.

ಜಗತ್ತಿನಲ್ಲಿ ದಾಸೋಹ ಭಾವ ಇರುವುದರಿಂದಲೇ ಶೇಕಡಾ ೭೫ರಷ್ಟು ಮಂದಿ ಬದುಕುತ್ತಿದ್ದಾರೆ. "ಆಧುನಿಕ ಔಪಚಾರಿಕ ಅರ್ಥವ್ಯವಸ್ಥೆ ಜಗತ್ತಿನ ಕಾರ್ಮಿಕ ಶಕ್ತಿಯ ಶೇಕಾಡಾ ೨೫ರಷ್ಟನ್ನು ಮಾತ್ರ ಬಯಸುತ್ತದೆ. ಉಳಿದ ಶೇಕಡಾ ೭೫ರಷ್ಟು ಜನ ಅನೌಪಚಾರಿಕ ಅರ್ಥವ್ಯವಸ್ಥೆಯಿಂದಾಗಿ ಬದುಕುವುದರಲ್ಲಿ ತಲ್ಲೀನರಾಗಿದ್ದಾರೆ." ಎಂದು ಖ್ಯಾತ ಸಮಾಜವಿಜ್ಞಾನಿ ಮತ್ತು ಆರ್ಥಿಕ ತಜ್ಞ ಥಿಯೊಡೊರ್ ಶನಿನ್ ಹೇಳುತ್ತಾರೆ. ಅವರು ನೂರಾರು ದೇಶಗಳ ಜನರ ಆರ್ಥಿಕ ಸ್ಥಿತಿಗತಿಗಳ ಆಧ್ಯಯನ ಮಾಡಿ ಈ ನಿರ್ಣಯಕ್ಕೆ ಬಂದಿದ್ದಾರೆ. ಜಗತ್ತಿನ ಶೇಕಡಾ ೭೫ರಷ್ಟು ಮಂದಿ ನೆರೆಹೊರೆಯವರ ಸಹಾಯ ಸಹಕಾರದೊಂದಿಗೆ ಬದುಕುತ್ತಿದ್ದಾರೆ. ಜನ ಇನ್ನೂ ಪರಸ್ಪರ ಕಷ್ಟಸುಖಗಳಲ್ಲಿ ಭಾಗಿಯಾಗುತ್ತಿದ್ದಾರೆ ಎಂಬುದು ಇದರರ್ಥ. ಜಗತ್ತಿನಲ್ಲಿ ಇನ್ನೂ ದಾಸೋಹಂಭಾವ ಇದೆ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

> ಶಿವಭಕ್ತರೇ ಅಧಿಕರು ನೋಡಯ್ಯಾ
> ಇದಕ್ಕೆ ಅಧಿಕವಾಗಿ ಜಂಗಮವ ಕಂಡೆ.
> ಈ ದ್ವಿವಿಧವನೊಂದೆ ಎಂದು ನಂಬಿದೆ
> ಕೂಡಲಸಂಗಮದೇವಾ.

ಹೀಗೆ ವಚನ ಸಾಹಿತ್ಯ ಈ ಜಗತ್ತಿನ ಗೌರವ ಕಾಪಾಡುತ್ತದೆ. ಭೂಮಿಯ ಮಹತ್ವ ಸಾರುತ್ತದೆ. ಲೋಕದ ಜನರ ಹಿತಚಿಂತನೆ ಮಾಡುತ್ತದೆ. ಮಾನವರ ಹಿತ ಕಾಪಾಡುವುದೇ ಸಾಹಿತ್ಯದ ಮುಖ್ಯ ಉದ್ದೇಶವಾಗಿದೆ. ವಚನ ಸಾಹಿತ್ಯ ಮಾನವನ ಹಿತ ಕಾಪಾಡುವ ಕ್ರಮ ವಿಶ್ವಸಾಹಿತ್ಯಕ್ಕೆ ಮಾರ್ಗದರ್ಶಕವಾಗಿದೆ.

❖❖

೧೨

❖

ಲಿಂಗವಂತ ಧರ್ಮದಲ್ಲಿ ಏನುಂಟು ಏನಿಲ್ಲ?

ಲಿಂಗವಂತ ಧರ್ಮದ ಬಹುಪಾಲು ಅನುಯಾಯಿಗಳು ಕಾಲದ ಪ್ರವಾಹಕ್ಕೆ ಸಿಲುಕಿ ತಮ್ಮ ಧರ್ಮದ ಮೂಲಸತ್ತ್ವದಿಂದ ತಮಗರಿಯದಂತೆಯೆ ದೂರ ಸಾಗುತ್ತಿದ್ದಾರೆ. ಬಹುಶಃ ಜಗತ್ತಿನ ವಿವಿಧ ಧರ್ಮಗಳ ಅನುಯಾಯಿಗಳನೇಕರು ಇಂಥ ವಿಷಮಸ್ಥಿತಿಯ ಗೊಂದಲಗಳ ಮಧ್ಯೆ ಮುಂದುವರಿಯುತ್ತಿದ್ದಾರೆ. ವೈಜ್ಞಾನಿಕ ಮನೋಭಾವದಿಂದ ಕೂಡಿದ ಕಾಯಕಜೀವಿ ಶರಣರ ಬದುಕಿನ ಕ್ರಮದ ಮೂಲಕ ಜೀವನವಿಧಾನವಾದಂಥ ಲಿಂಗವಂತ ಧರ್ಮದ ತಿರುಳನ್ನು ಇಂದು ಪ್ರತಿಯೊಬ್ಬರು ಅರಿತುಕೊಳ್ಳುವುದು ಅವಶ್ಯವಾಗಿದೆ. ಆ ಮೂಲಕ ಹಿಂಸೆ, ಸುಲಿಗೆ ಮತ್ತು ಅಸಮಾನತೆಗಳಿಲ್ಲದ ಶಾಂತಿಯುತವಾದ ಸಮೃದ್ಧ ಬದುಕನ್ನು ಪಡೆಯಬೇಕಿದೆ. ಈ ಹಿನ್ನೆಲೆಯಲ್ಲಿ ಲಿಂಗವಂತ ಧರ್ಮಕ್ಕೆ ಸಂಬಂಧಿಸಿದ ಕೆಲವೊಂದು ಮುಖ್ಯ ಪ್ರಶ್ನೆಗಳಿಗೆ ಉತ್ತರಿಸುವುದು ಅವಶ್ಯವಾಗಿದೆ.

ಲಿಂಗವಂತ ಧರ್ಮದ ಮೂಲಾಧಾರ ಯಾವುದು?

ಕಾಯಕವೇ ಲಿಂಗವಂತ ಧರ್ಮದ ಮೂಲಾಧಾರವಾಗಿದೆ. ಇಡೀ ನಿಸರ್ಗ ಕಾಯಕದ ಉತ್ಪಾದನೆಯಾಗಿದೆ. ಅಂತೆಯೆ "ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು" ಎಂದು ಹೇಳುವ ಮೂಲಕ ಆಯ್ದಕ್ಕಿ ಮಾರಯ್ಯನವರು 'ಕಾಯಕವೇ ಕೈಲಾಸ' ಎಂದು ತಿಳಿಸಿದ್ದಾರೆ.

'ಲೋಕದ ಚೇಷ್ಟೆಗೆ ರವಿ ಬೀಜ' ಎಂದು ಅಕ್ಕಮಹಾದೇವಿ ಹೇಳುತ್ತಾಳೆ. ಸೃಷ್ಟಿ ರೂಪುಗೊಳ್ಳುವ ಕ್ರಿಯೆಯಲ್ಲಿ ಸೂರ್ಯನ ಪಾತ್ರವನ್ನು ಅಕ್ಕ ಸೂಚಿಸುತ್ತಾಳೆ. ಸೂರ್ಯನದು ಬೆಳಕು ಕೊಡುವ ಕಾಯಕ. ಚಂದ್ರನದು ಬೆಳದಿಂಗಳು ಕೊಡುವ ಕಾಯಕ. ವಾಯುವಿನದು ಸೃಷ್ಟಿಯನ್ನು ಜೀವಂತವಾಗಿಡುವ ಕಾಯಕ. ಭೂಮಿ ಮತ್ತು ಜಲಕ್ಕೆ ನಮ್ಮೆಲ್ಲರನ್ನು ಸಲಹುವ ಕಾಯಕ. ಮೋಡಗಳಿಗೆ ಮಳೆ ಸುರಿಸವ ಕಾಯಕ. ಲೋಕಕ್ಕೆ ನೀರುಣಿಸುತ್ತ ಸಮುದ್ರ ಸೇರಿ ಉಪ್ಪಿನಾಂಶವನ್ನು

ಸಮತೋಲನದಲ್ಲಿ ಇಡುವ ಮೂಲಕ ಜಲಚರಗಳನ್ನು ರಕ್ಷಿಸುವ ಕಾಯಕ ನದಿಯದು. ಹೀಗೆ ಕಾಯಕವು ನಿಸರ್ಗಧರ್ಮವಾಗಿದೆ. ಈ ಪ್ರಕಾರ ಲಿಂಗವಂತ ಧರ್ಮವು ನಿಸರ್ಗಧರ್ಮವಾಗಿರುವುದರಿಂದ ಕಾಯಕವು ಅದರ ಮೂಲಾಧಾರವಾಗಿದೆ.

ಬಸವಧರ್ಮ ಎಂಬ ಲಿಂಗವಂತ ಧರ್ಮವು ಕಾಯಕ ಪ್ರಧಾನ ಧರ್ಮವಾಗಿರುವುದರಿಂದ ಕಾಯಕ ಜೀವಿಗಳೇ ಈ ಧರ್ಮದ ಮೂಲಪುರುಷರು. ಬಸವಣ್ಣನವರ ಅನುಭವದ ಪಾತ್ರೆಯನ್ನು ತುಂಬಿಸಿದವರೇ ಕಾಯಕಜೀವಿಗಳು. "ಭಕ್ತಿ ಇಲ್ಲದ ಬಡವ ನಾನಯ್ಯಾ. ಕಕ್ಕಯ್ಯನ ಮನೆಯಲ್ಲೂ ಬೇಡಿದೆ; ಚೆನ್ನಯ್ಯನ ಮನೆಯಲ್ಲೂ ಬೇಡಿದೆ" ಎಂದು ಬಸವಣ್ಣನವರು ಮನದುಂಬಿ ಹೇಳಿದ್ದಾರೆ. ಉನ್ನತ ಕುಲ, ಉನ್ನತ ಶಿಕ್ಷಣ, ಉನ್ನತ ವರ್ಗ ಮತ್ತು ಪ್ರಧಾನ ಮಂತ್ರಿಯಂಥ ಉನ್ನತ ಹುದ್ದೆಯನ್ನು ಹೊಂದಿ ಕ್ರಿಯಾಶೀಲರಾಗಿದ್ದ ಬಸವಣ್ಣನವರು ಇವುಗಳನ್ನೆಲ್ಲ ಲೆಕ್ಕಿಸದೆ ಹೀಗೆ ಕೆಳಜಾತೀಕರಣಕ್ಕೆ ಒಳಗಾಗಿ ಬಸವಳಿದ ಜನರ ಕಣ್ಣೀರನ್ನು ಒರೆಸಲು ಮುಂದಾದರು. ಸಕಲ ವೇದ, ಶಾಸ್ತ್ರ, ಉಪನಿಷತ್, ಪುರಾಣ ಮತ್ತು ಆಗಮಗಳಲ್ಲಿ ಪಾರಂಗತರಾಗಿದ್ದರೂ ಹೊಸ ಜಗತ್ತಿನ ಸಿದ್ಧಾಂತ ರೂಪಿಸುವಲ್ಲಿ ಕಾಯಕಜೀವಿಗಳ ಅನುಭವವನ್ನೇ ಪ್ರಮಾಣವಾಗಿ ಸ್ವೀಕರಿಸಿದರು.

ಲಕ್ಷಾಂತರ ಜನರ ಅನುಭವದಿಂದ ಒಂದು ನಾಗರೀಕತೆಯ ನಿರ್ಮಾಣವಾಗುವುದು. ಅವರೆಲ್ಲರ ಅನುಭವದ ಸಾರವಾದ ಅನುಭಾವದಿಂದ ಮಾನವಸಂಸ್ಕೃತಿ ಅರಳುವುದು. ಹೀಗೆ ನಿರ್ಮಾಣವಾದ ನಾಗರೀಕತೆಯಲ್ಲಿ ಅರಳಿದ ಸಂಸ್ಕೃತಿಯಲ್ಲಿ ವಿಶ್ವಮಾನವನ ಉದಯವಾಗುವುದು. ನಮ್ಮ ಬಸವಾದಿ ಶರಣರು ಅಂಥ ವಿಶ್ವಮಾನವರು.

ಕಾಯಕ, ಪ್ರಸಾದ ಮತ್ತು ದಾಸೋಹ ವ್ಯವಸ್ಥೆಯನ್ನು ಲಿಂಗವಂತ ಧರ್ಮ ಹೊಂದಿದೆ. ಗುರು, ಲಿಂಗ ಮತ್ತು ಜಂಗಮಕ್ಕೆಲ್ಲ ಕಾಯಕ ಅವಶ್ಯವಾಗಿದೆ. ಲಿಂಗವಂತ ಧರ್ಮದಲ್ಲಿ ಅರಿವೇ ಗುರು. ಅರಿವಿನ ಮೂಲವಾದ ಸಮತಾ ತತ್ತ್ವವೇ ಲಿಂಗತತ್ತ್ವ. ಸಕಲ ಜೀವಾತ್ಮರಿಂದ ಕೂಡಿರುವ ಲೋಕವೇ ಜಂಗಮ. ಕಾಯಕದಿಂದ ಪಡೆದದ್ದನ್ನು ಲಿಂಗಪ್ರಸಾದವೆಂದು ಸ್ವೀಕರಿಸಬೇಕು. ಆ ಪಡೆದದ್ದನ್ನು ಲಿಂಗದ ವಿರಾಟ್ ಸ್ವರೂಪವಾದ ಸಮಾಜವೆಂಬ ಜಂಗಮಕ್ಕೆ ದಾಸೋಹ ಎಂಬ ಸಾಮಾಜಿಕ ವಿತರಣಾ ವ್ಯವಸ್ಥೆ ಮೂಲಕ ಕೊಟ್ಟು ಅಸಮಾನತೆಯನ್ನು ತೊಡೆದು ಹಾಕಬೇಕು.

ಹೀಗೆ ಕಾಯಕವು ಲಿಂಗವಂತ ಧರ್ಮದ ಮೂಲಾಧಾರವಾಗಿದೆ. 'ಮಾನವನ ಎಲ್ಲ ಇರುವಿಕೆಗೆ ದುಡಿಮೆಯೆ ಮೊಟ್ಟ ಮೊದಲ ಆಧಾರ. ಇದು ಎಷ್ಟರಮಟ್ಟಿಗೆ ನಿಜವೆಂದರೆ ಒಂದರ್ಥದಲ್ಲಿ ದುಡಿಮೆಯೆ ಮನುಷ್ಯನನ್ನು ಸೃಷ್ಟಿಸಿತು' ಎಂದು

೧೯ನೇ ಶತಮಾನದ ಫ್ರೆಡ್ರಿಕ್ ಎಂಗೆಲ್ಸ್ ಅವರು 'ದ ಪಾರ್ಟ್ ಪ್ಲೇಯ್ಡ್ ಬೈ ಲೇಬರ್ ಇನ್ ದ ಟ್ರಾಂಜಿಶನ್ ಫ್ರಾಮ್ ಏಪ್ ಟು ಮ್ಯಾನ್' ಎಂಬ ಪುಸ್ತಕದಲ್ಲಿ ಬರೆದಿದ್ದಾರೆ. ವಾನರ ನರ ಆಗುವಲ್ಲಿ ದುಡಿಮೆಯ ಪಾತ್ರ ಹಿರಿದಾಗಿದೆ. ಆತನ ಅನುಭವ ಮತ್ತು ಅನುಭಾವಕ್ಕೆ ಕೂಡ ದುಡಿಮೆಯೆ ಮೂಲ ಕಾರಣವಾಗಿದೆ ಎಂದು ಎಂಗೆಲ್ಸ್ ವಿವರಿಸಿದ್ದಾರೆ. ಕಾರ್ಲ್ ಮಾರ್ಕ್ಸ್ ಮತ್ತು ಎಂಗೆಲ್ಸ್ ಅವರು ೧೯ನೇ ಶತಮಾನದಲ್ಲಿ ರೂಪಿಸಿದ ಸಮತಾವಾದ ಕೂಡ ದುಡಿಯುವ ವರ್ಗದ ಅನುಭವದ ಮೇಲೆಯೆ ನಿಂತಿದೆ.

ಲಿಂಗವಂತ ಧರ್ಮದಲ್ಲಿ ಅಧ್ಯಾತ್ಮ ಮತ್ತು ಯೋಗದ ಸ್ಥಾನವೇನು?

ಶರಣರು ಸಕಾರಾತ್ಮಕವಾಗಿ ಅಧ್ಯಾತ್ಮ ಪದಪ್ರಯೋಗ ಮಾಡುವುದಿಲ್ಲ. ಅವರಿಗೆ ಇಷ್ಟಲಿಂಗಪೂಜೆಯೆ ಶಿವಯೋಗವಾಗಿದೆ. ಶರಣರ ಪ್ರಕಾರ ಯೋಗಗಳಲ್ಲಿ ಶಿವಯೋಗವೇ ಪರಿಪೂರ್ಣವಾದುದು.

> ಮಾಡಿ ಮಾಡಿ ನಿತ್ಯ ಲಿಂಗಾರ್ಚನೆಯ,
> ಮಾಡಿ ಮಾಡಿ ನಿತ್ಯ ಜಂಗಮಾರ್ಚನೆಯ,
> ಮಾಡಿ ಮಾಡಿ ಎಂದು ವಿಸ್ತಾರವೆಂದು
> ಮಾಡಿ ಕೂಡಿದವರೆಲ್ಲ ನಿತ್ಯರಾದರು.
> ಮಾಡದೆ, ಕೂಡದೆ ಯೋಗವೆಂದು
> ಅಧ್ಯಾತ್ಮವ ನುಡಿದು ಶಿವಪೂಜೆಗೆ ದೂರವಾಗಬೇಡ,
> ಅಲ್ಲದೆ ಕೆಲವರೊಳಗೆ
> ಆಡಿ ಕಪಿಲಸಿದ್ಧಮಲ್ಲಿಕಾರ್ಜುನನ ಚಿತ್ತಕ್ಕೆ ದೂರವಾಗದೆ
> ಶಿವಾರ್ಚನೆಯ ಮಾಡಿದಡೆ ದಿವ್ಯಯೋಗಿಯಪ್ಪೆ

ಎಂದು ಸಿದ್ಧರಾಮೇಶ್ವರರು ಹೇಳುವ ಮೂಲಕ ಇಷ್ಟಲಿಂಗಯೋಗದ ರಹಸ್ಯವನ್ನು ತಿಳಿಸುತ್ತಾರೆ. ಲಿಂಗವಂತ ಧರ್ಮದಲ್ಲಿ ಎರಡು ಪ್ರಕಾರದ ಶಿವಯೋಗ ವಿಧಾನಗಳಿವೆ. ಮೊದಲನೆಯದು ಆತ್ಮಕಲ್ಯಾಣಕ್ಕಾಗಿ ಇರುವ ಇಷ್ಟಲಿಂಗಯೋಗ. ಎರಡನೆಯದು ಲೋಕಕಲ್ಯಾಣಕ್ಕಾಗಿ ಇರುವ ಜಂಗಮಲಿಂಗಯೋಗ. ಇಷ್ಟಲಿಂಗಯೋಗದಲ್ಲಿ ಶರಣರು ಇಡೀ ವಿಶ್ವವನ್ನು ತಮ್ಮೊಳಗೆ ತುಂಬಿಕೊಳ್ಳುತ್ತಾರೆ. ಇದುವೆ ಲಿಂಗಾರ್ಚನೆ. ತಮ್ಮೊಳಗಿನ ಮಹಾಘನದ ಜೊತೆ ಅವರು ಒಂದಾದಾಗ ಆ ಮಹಾಘನದ ಒಂದಂಶವಾದ ಇಡೀ ವಿಶ್ವ ಅವರೊಳಗೆ ಸಹಜವಾಗಿಯೆ ಒಂದಾಗುವುದು. ವಿಶ್ವದ ಪ್ರತಿಯೊಂದು ಅಂಶದಲ್ಲಿ ತಾವು ತಮ್ಮೊಳಗಿನ ಘನದ ಜೊತೆಗೂಡಿ ಇರುವ ಸತ್ಯದ ಅರಿವಾಗುವುದು. ಆಗ ಅವರಿಗೆ ಎಲ್ಲವೂ ಶಿವಸ್ವರೂಪವಾಗೇ ಕಾಣತೊಡಗುವುದು. ಸಕಲಜೀವಾತ್ಮರಿಗೆ ಲೇಸನೆ ಬಯಸಿ

ಕಾರ್ಯೋನ್ಮುಖವಾಗುವುದೇ ಜಂಗಮಯೋಗ. ಇದುವೆ ಜಂಗಮಾರ್ಚನೆ. ಅಂದರೆ ಲೋಕಕಲ್ಯಾಣಕ್ಕಾಗಿ ಕಾಯಕ, ಪ್ರಸಾದ ಮತ್ತು ದಾಸೋಹಂಭಾವದೊಂದಿಗೆ ಜೀವಿಸುತ್ತ ಸರ್ವಸಮತ್ವದ ವ್ಯವಸ್ಥೆಗಾಗಿ ಬದುಕನ್ನೇ ಮುಡಿಪಿಡುವುದು. ಹೀಗೆ ಆತ್ಮಾನುಸಂಧಾನ ಮತ್ತು ಲೋಕಾನುಸಂಧಾನದೊಂದಿಗೆ ಕ್ರಿಯಾಶೀಲವಾಗಿ ಬದುಕುವವರೇ ದಿವ್ಯಯೋಗಿಗಳು. ಇದುವೆ ಶಿವಾರ್ಚನೆ. ಅಂದರೆ ಒಳಲೋಕ ಮತ್ತು ಹೊರಲೋಕ ಒಂದಾಗಿಸಿ ಸಮತೆಯನ್ನು ಸಾಧಿಸುವುದು.

"ಲಿಂಗಾರ್ಚನಂ ನ ಕರ್ತವ್ಯಂ, ಜಂಗಮಾರ್ಚನಂ ಕರ್ತವ್ಯಂ" ಎಂದು ಬಸವಣ್ಣನವರು ತಿಳಿಸಿದ್ದಾರೆ. ನಮ್ಮ ಆತ್ಮೋದ್ಧಾರ ಕರ್ತವ್ಯವಲ್ಲ. ಅದು ಸ್ವಸಂತೋಷಕ್ಕಾಗಿ ಇರುವಂಥದ್ದು. ಲೋಕೋದ್ಧಾರವೇ ಕರ್ತವ್ಯ. ಅದುವೇ ಜಂಗಮಾರ್ಚನ. "ನಿನ್ನ ನಾನರಿಯದ ಮುನ್ನ ನೀನೆಲ್ಲಿ ಇದ್ದೆ. ಎನ್ನೊಳಗಿದ್ದು ನಿನ್ನ ತೋರಲಿಕೆ ನೀನೆ ರೂಪಾದೆ. ಇನ್ನು ಜಂಗಮವೇ ಲಿಂಗವೆಂದು ನಂಬಿದೆ" ಎಂದು ಹೇಳುವ ಮೂಲಕ ಬಸವಣ್ಣನವರು ಸಕಲಜೀವಾತ್ಮರ ಸಮೂಹವೇ ದೇವರೆಂದು ಸೂಚಿಸುತ್ತಾರೆ. ಇಂಥ ಪ್ರಜ್ಞೆಯನ್ನು ಹೊಂದುವ ಉದ್ದೇಶದಿಂದ ಅಂತರಂಗದ ಅರಿವನ್ನು ಪಡೆಯುವುದಕ್ಕಾಗಿಯೇ ಇಷ್ಟಲಿಂಗ ಪೂಜೆ ಇರುವುದು. ಸಮರತಿ (ಹೆಣ್ಣು ಗಂಡು ಸಮಾನ), ಸಮಕಳೆ (ಕೆಳಜಾತಿ ಮತ್ತು ಮೇಲ್ಜಾತಿ ಸಮಾನ) ಸಮಸುಖ (ಬಡವರು ಮತ್ತು ಶ್ರೀಮಂತರು ಸಮಾನ) ಎಂಬುದನ್ನು ಅರಿಯುವುದೇ ಇಷ್ಟಲಿಂಗ ಪೂಜಾಫಲ ಎಂದು ಬಸವಣ್ಣನವರು ಸಾರಿದ್ದಾರೆ.

ಎಲ್ಲ ಜೀವಗಳ ಮಧ್ಯೆ ಸಮಾನತೆಯನ್ನು ಸಾಧಿಸಬೇಕಿದೆ. "ಅರಿವೇ ಗುರು, ಆಚಾರವೇ ಶಿಷ್ಯ, ಜ್ಞಾನವೇ ಲಿಂಗ, ಪರಿಣಾಮವೇ ತಪ, ಸಮತೆ ಎಂಬುದೇ ಯೋಗದಾಗು ನೋಡಾ" ಎಂದು ಹಾವಿನಾಳ ಕಲ್ಲಯ್ಯನವರು ಸಮತಾವಾದದ ಮಹತ್ವವನ್ನು ಎತ್ತಿ ಹಿಡಿದಿದ್ದಾರೆ.

ಗುಹೆಗಳಲ್ಲಿ, ಅರಣ್ಯಗಳಲ್ಲಿ ಮತ್ತು ಹಿಮಾಲಯದಂಥ ಪರ್ವತಗಳಲ್ಲಿ ಏಕಾಂಗಿಯಾಗಿ ಉಳಿದು ಧ್ಯಾನಿಸುತ್ತ ಅಧ್ಯಾತ್ಮ ಸಾಧನೆ ಮಾಡುವುದನ್ನು ಶರಣರು ಅಲ್ಲಗಳೆಯುತ್ತಾರೆ. ಲಿಂಗವಂತ ಧರ್ಮದಲ್ಲಿ ಇಂಥ ಅಧ್ಯಾತ್ಮದ ಬದಲು ಅನುಭಾವದ ಪರಿಕಲ್ಪನೆ ಇದೆ. ಈ ಅನುಭಾವವನ್ನು ಹಿಮಾಲಯಕ್ಕೆ ಹೋಗಿ ಪಡೆದುಕೊಳ್ಳುವಂಥದ್ದಲ್ಲ. ಕಾಯಕದ ಅನುಭವದ ಮೂಲಕ ಸಾಧಿಸುವಂಥದ್ದು. ಅನೇಕ ಶರಣರು ಅನುಭಾವವನ್ನು ಸೂಚಿಸಲು ತಮ್ಮ ದೈನಂದಿನ ಕಾಯಕದ ಅನುಭವ ಮತ್ತು ಆ ಕಾಯಕಕ್ಕೆ ಬೇಕಾದ ವಸ್ತುಗಳನ್ನೇ ಬಳಸುತ್ತಾರೆ. "ಹದ ಮಣ್ಣಿಲ್ಲದೆ ಮಡಕೆಯಾಗದು" ಎಂದು ಕುಂಬಾರ ಗುಂಡಯ್ಯನವರ ಪುಣ್ಯಸ್ತ್ರೀ ಕೇತಲದೇವಿ ಹೇಳುತ್ತಾಳೆ. "ಕೈ ತಪ್ಪಿ ಕೆತ್ತಲು ಕಾಲಿಗೆ ಮೂಲ" ಎಂದು ಬಾಚಿ

ಕಾಯಕದ ಬಸವಯ್ಯಗಳ ಪುಣ್ಯಸ್ತ್ರೀ ಕಾಳವ್ವೆ ತಿಳಿಸುತ್ತಾಳೆ. ಈ ರೀತಿ ಶರಣರು ಅನುಭವದ ಮೂಲಕ ಅನುಭಾವವನ್ನು ಸಾಧಿಸುತ್ತಾರೆ. 'ಬದುಕು ಹದಗೊಂಡಾಗಲೆ ಭಕ್ತನ ವ್ಯಕ್ತಿತ್ವ ವಿಕಸನಗೊಳ್ಳುತ ಸಾಗುವುದು. ಕೊನೆಯಲ್ಲಿ ಆತ ಐಕ್ಯಸ್ಥಲವನ್ನು ತಲುಪುವನು.' ಎಂಬುದನ್ನು ಕೇತಲದೇವಿ ಸೂಚಿಸುತ್ತಾಳೆ. 'ಅದಕ್ಕಾಗಿ ಎಚ್ಚರಿಕೆಯಿಂದ ಬದುಕದಿದ್ದರೆ ಅನಾಹುತವಾಗುವುದು' ಎಂದು ಕಾಳವ್ವೆ ತಿಳಿಸುತ್ತಾಳೆ. ಹೀಗೆ ಅನ್ಯೋಕ್ತಿಗಳ ಮೂಲಕ ಶರಣರು ಅನುಭಾವದ ಮಟ್ಟಕ್ಕೆ ಏರುವುದನ್ನು ತಿಳಿಸುತ್ತಾರೆ. ಶರಣರ ಪ್ರಕಾರ ವಸ್ತುಜಗತ್ತಿನ ಅನುಭವವಿಲ್ಲದೆ ಪರವಸ್ತುವಿನ ಅನುಭಾವ ಆಗದು.

ಲಿಂಗವಂತ ಧರ್ಮದಲ್ಲಿ ಗುರು-ಶಿಷ್ಯ ಸಂಬಂಧ ಎಂತಹುದು?

ಈ ಧರ್ಮದ ಪ್ರಕಾರ ಅರಿವನ್ನುಂಟುಮಾಡುವವರೆಲ್ಲ ಗುರುಗಳೇ. ಈ ಧರ್ಮದಲ್ಲಿನ ಗುರು-ಶಿಷ್ಯ ಸಂಬಂಧ ಲೋಕಕ್ಕೇ ಮಾದರಿಯಾಗಿದೆ. "ಅಜಕೋಟಿ ಕಲ್ಪವರುಷದವರೆಲ್ಲರು ಹಿರಿಯರೆ?" ಎಂದು ಚೆನ್ನಬಸವಣ್ಣನವರು ಪ್ರಶ್ನಿಸಿದ್ದಾರೆ. ಅರಿವುಳ್ಳವರೇ ಹಿರಿಯರು ಎಂದು ಸೂಚಿಸಿದ್ದಾರೆ. "ಗುರು ಶಿಷ್ಯ ಸಂಬಂಧವಾದುದಕ್ಕೆ ಇದು ಚಿಹ್ನೆ; ಹಿಂದ ಬಿಟ್ಟು ಮುಂದ ಹಿಡಿಯಲೇ ಬೇಕು. ಕೂಲಸಂಗಮದೇವ ಕೇಳಯ್ಯಾ, ಕಿಚ್ಚಿನೊಳಗೆ ಕೋಲ ಬಯ್ಚಿಟ್ಟಂತಿರಬೇಕು" ಎಂದು ಬಸವಣ್ಣನವರು ಹೇಳಿದ್ದಾರೆ. ಎರಡು ಕೋಲುಗಳನ್ನು ಕಿಚ್ಚಿನಲ್ಲಿ ಇಟ್ಟಾಗ ಅವು ನಿಗಿನಿಗಿಯಾಗಿ ಒಂದೇ ಆಗಿರುತ್ತವೆ. ಜ್ಯೋತಿ ಮುಟ್ಟಿ ಜ್ಯೋತಿಯಾದಾಗ ಎರಡೂ ಒಂದೇ ತೆರನಾದ ಪ್ರಕಾಶವನ್ನೇ ಕೊಡುತ್ತವೆ.

ಲಿಂಗವಂತ ಧರ್ಮದಲ್ಲಿ ಪೂಜಾರ್ಹ ವಸ್ತು ಯಾವುದು?

ಲಿಂಗವಂತ ಧರ್ಮದಲ್ಲಿ ಇಷ್ಟಲಿಂಗ ಮಾತ್ರ ಪೂಜಾರ್ಹ ವಸ್ತು. ಇಷ್ಟಲಿಂಗವು ಅರಿವಿನ ಕುರುಹು ಆಗಿದೆ. "ಅರಿಯದ ಕಾರಣ ಕುರುಹುವಿಡಿವೆನಲ್ಲದೆ ಅರಿದ ಬಳಿಕ ಇನ್ನೇನೊ?" ಎಂದು ಅಲ್ಲಮಪ್ರಭುಗಳು ಪ್ರಶ್ನಿಸುತ್ತಾರೆ. ಇಷ್ಟಲಿಂಗವೇ ದೇವರಲ್ಲ. ಲಿಂಗದೇವನ ಕುರುಹು. ಲಿಂಗವಂತ ಧರ್ಮದಲ್ಲಿ ದೇವರ ಹೆಸರು ಲಿಂಗದೇವ ಎಂದಿದೆ. ಶರಣರು ಶಿವ ಮುಂತಾದ ಶಬ್ದಗಳನ್ನು ಕೇವಲ ರೂಢಿಗತವಾಗಿ ಬಳಸಿದ್ದಾರೆ. ಇದರ ಅರ್ಥ ಕೂಡಲಸಂಗಮದೇವ ವಚನಾಂಕಿತವನ್ನು ಲಿಂಗದೇವ ಎಂದು ತಿದ್ದಬೇಕು ಎಂದಲ್ಲ. ಆ ಕೂಡಲಸಂಗಮದೇವ ವಚನಾಂಕಿತವು ಬಸವಣ್ಣನವರ ಸಿಗ್ನೆಚರ್ ಆಗಿದೆ ಎಂಬುದನ್ನು ಮರೆಯಬಾರದು. ಕೂಡಲಸಂಗಮದೇವನಿಗೆ ಎಲ್ಲಿಯೂ ಗುಡಿ ಇಲ್ಲ. ಕೂಡಲಸಂಗಮದಲ್ಲಿರುವುದು ಸಂಗಮೇಶ್ವರ/ಸಂಗಮನಾಥ ದೇವಸ್ಥಾನವೇ ಹೊರತು ಕೂಡಲಸಂಗಮ ದೇವಸ್ಥಾನವಲ್ಲ. "ತೋರಲಿಲ್ಲದ ಸಿಂಹಾಸನದ ಮೇಲೆ ಹೇಳಬಾರದ ಘನವು

ಬಂದೆರಗಿದಡೆ ತೋರಿ ಮರೆವ ಸಂಗಮನಾಥನು ಎದ್ದು ಹೋದನು" ಎಂದು ಬಸವಣ್ಣನವರು ಕೂಡಲಸಂಗಮದಲ್ಲಿನ ಸ್ಥಾವರಲಿಂಗವನ್ನು ಅಲ್ಲಗಳೆದಿದ್ದಾರೆ.

ಶರಣರು ತಮ್ಮೊಳಗಿನ ಲಿಂಗದೇವನ ಅನುಸಂಧಾನಕ್ಕಾಗಿ ಇಷ್ಟಲಿಂಗವೆಂಬ ಮಾಧ್ಯಮವನ್ನು ಬಳಸಿದರು. ಆ ಮೂಲಕ ತಮ್ಮೊಳಗೇ ಇರುವ ಮಹಾಘನದ ಜೊತೆ ಒಂದಾದರು. ಹೀಗೆ ಒಂದಾಗುವುದೇ ಇಷ್ಟಲಿಂಗಯೋಗ (ಶಿವಯೋಗ). ಆದ್ದರಿಂದ ಲಿಂಗವಂತ ಧರ್ಮದಲ್ಲಿ ಪೂಜೆ ಇಲ್ಲ. ಆದರೆ ಪೂಜೆ ಮಾಡಿಕೊಳ್ಳುವುದು ಇದೆ. ಪೂಜೆ ಮಾಡಿಕೊಳ್ಳುವುದೆಂದರೆ ತಮ್ಮೊಳಗಿನ ಘನದ ಜೊತೆ ಶೂನ್ಯ (ಪೂಜಿ) ಆಗುವುದು. ಹೀಗೆ ಶರಣರು ತಮ್ಮನ್ನು ತಾವು ಶೂನ್ಯ ಮಾಡಿಕೊಳ್ಳುತ್ತಿದ್ದರು. ಲಿಂಗವಂತ ಜ್ಞಾನಿಗಳು 'ಪೂಜೆ ಮಾಡಿರಿ' ಎಂದು ಹೇಳುವುದಿಲ್ಲ. 'ಪೂಜೆ ಮಾಡಿಕೊಳ್ಳಿರಿ' ಎಂದು ಹೇಳುತ್ತಾರೆ.

ದೇವರು ಅಗಮ್ಯ, ಅಗೋಚರ, ಅಪ್ರತಿಮ ಮತ್ತು ಅಪ್ರಮಾಣ ಎಂದು ಬಸವಣ್ಣನವರು ಹೇಳಿದ್ದಾರೆ. ರೂಪಿಲ್ಲದ ವಿಶ್ವಚೇತನವಾಗಿರುವ ಇಷ್ಟಲಿಂಗವು ಲಿಂಗದೇವ ಎಂಬ ಅರಿವಿನ ಕುರುಹು ಹೊರತಾಗಿ ಮೂರ್ತಿ ಅಲ್ಲ. ಆದ್ದರಿಂದ ಲಿಂಗವಂತ ಧರ್ಮದಲ್ಲಿ ಮೂರ್ತಿಪೂಜೆ ನಿಷಿದ್ಧ. ಮೂರ್ತಿಯೇ ಇಲ್ಲವೆಂದಮೇಲೆ ಮಂದಿರದ ಪ್ರಶ್ನೆಯೇ ಇಲ್ಲ. ದೇಹವೇ ದೇಗುಲವಾಗಿರುವುದರಿಂದ ದೇವರು ನಮ್ಮೊಳಗೇ ಇದ್ದಾನೆ. ನಾವೆಲ್ಲ ಜೀವಂತ ಮಂದಿರಗಳೇ ಆಗಿದ್ದೇವೆ.

ಸಮಷ್ಟಿಯನ್ನು ವ್ಯಷ್ಟಿಯಲ್ಲಿ ಒಂದಾಗಿಸಿ ಲೋಕಕಲ್ಯಾಣದಲ್ಲಿ ತೊಡಗುವುದೇ ಲಿಂಗವಂತನು ದೇವರನ್ನು ಮೆಚ್ಚಿಸುವ ಕ್ರಮ. ಲಿಂಗಾಯತ ಎಂದರೆ 'ಲಿಂಗಧಾರಣೆ ಮಾಡಿದವನು' ಎಂಬುದು ಸಾಮಾನ್ಯ ಅರ್ಥವಾದರೆ. 'ಲಿಂಗಕ್ಕೆ ಪ್ರಿಯನಾದವನು' ಎಂಬುದು ಅದರ ತಾತ್ತ್ವಿಕ ಅರ್ಥವಾಗಿದೆ. (ಆಯತ ಎಂದರೆ ಪ್ರಿಯ ಎಂಬ ಅರ್ಥವೂ ಇದೆ.)

ಈ ಧರ್ಮದಲ್ಲಿ ಬಸವಾದಿ ಶರಣರು ಗೌರವಾರ್ಹವಾಗಿದ್ದಾರೆ. ಬಸವಾದಿ ಶರಣರ ಪಾದಸ್ಪರ್ಶದಿಂದಾಗಿ ಬಾಗೇವಾಡಿ, ಕೂಡಲಸಂಗಮ, ಕಲ್ಯಾಣ ಮುಂತಾದವು ಸ್ಫೂರ್ತಿಯ ತಾಣಗಳಾಗಿವೆ. ಶರಣರಿಗೆ ಇಡೀ ಭೂಲೋಕವೇ ಶ್ರದ್ಧಾ ಕೇಂದ್ರವಾಗಿದೆ. ಏಕೆಂದರೆ ಇದು ಕರ್ತಾರನ ಕಮ್ಮಟವಾಗಿದೆ.

ಲಿಂಗವಂತರು ಪೂಜೆಗಾಗಿ ತೆಂಗು, ಲಿಂಬೆಹಣ್ಣು, ಬೂದುಗುಂಬಳ ಬಳಸುವುದು ಸರಿಯೆ?

ಅದು ಹೇಗೆ ಸರಿಯಾಗುತ್ತದೆ? ಬಲಿಪ್ರಜ್ಞೆಯ ಶಾಖಾಹಾರಿಗಳು ಇವುಗಳನ್ನು ಬಲಿಯ ವಸ್ತುಗಳನ್ನಾಗಿ ಪರಿವರ್ತಿಸಿದ್ದಾರೆ. ನಮ್ಮ ದೇಶದಲ್ಲಿ ನರಬಲಿ, ಪ್ರಾಣಿಬಲಿ

ಮತ್ತು ಪಕ್ಷಿಬಲಿ ಇರುವಂತೆಯೆ ಇಂಥ ಕಾಯಿಗಳನ್ನು ಮತ್ತು ಹಿಟ್ಟಿನ ಮೂರ್ತಿಗಳನ್ನು ಕೂಡ ಬಲಿ ಕೊಡಲು ಬಳಸಲಾಗುತ್ತಿದೆ. ದೇವರ ಮುಂದೆ ಕಾಯಿಗಳನ್ನು ಒಡೆಯುವುದು ಬಲಿ ಸಂಪ್ರದಾಯ ಎಂಬುದನ್ನು ಜನ ಮರೆತಿದ್ದರೂ ಅದು ಸುಪ್ತಪ್ರಜ್ಞೆಯಲ್ಲಿ ಹಾಗೇ ಉಳಿದುಕೊಂಡು ಬಂದಿದೆ. ಬಸವಣ್ಣನವರು ಇಂಥ ಬಲಿಯನ್ನೂ ನಿಷೇಧಿಸಿದ್ದರು. ಬಸವಣ್ಣನವರು ಸೃಷ್ಟಿಸಿದ ಇಷ್ಟಲಿಂಗ ಪೂಜೆಯಲ್ಲಿ ತೆಂಗಿನಕಾಯಿ, ಲಿಂಬೆಕಾಯಿ ಮತ್ತು ಕುಂಬಳಕಾಯಿ ಅಥವಾ ಹಿಟ್ಟಿನ ಮೂರ್ತಿಗಳ ಬಳಕೆಯಾಗುವುದಿಲ್ಲ. ಇಷ್ಟಲಿಂಗಕ್ಕೆ ಯಾರೂ ಹರಕೆ ಹೊರುವುದಿಲ್ಲ. ಬೆಳ್ಳಿಯ ತೊಟ್ಟಿಲು, ಬಂಗಾರದ ಬಟ್ಟಲು, ವಜ್ರದ ಕಣ್ಣುಗಳು ಅದಕ್ಕೆ ಬೇಕಿಲ್ಲ. ಯಾವುದೇ ಖರ್ಚಿಲ್ಲದ ಪೂಜಾ ವಿಧಾನ ಅದು! ಉಳಿದ ಪೂಜೆಗಳು ಬಡವರ ಆರ್ಥಿಕ ವ್ಯವಸ್ಥೆಯನ್ನೇ ಹದಗೆಡಿಸಿವೆ.

ಲಿಂಗವಂತ ಧರ್ಮದಲ್ಲಿ ಸ್ವಾಮಿಗಳು ಇದ್ದಾರೆಯೆ? ಮಠಗಳು ಇವೆಯೆ?

"ಸ್ವಾಮಿ ನೀನು ಶಾಶ್ವತ ನೀನು" ಎಂದು ಬಸವಣ್ಣನವರು ಹೇಳುತ್ತಾರೆ. ಅರಿವೇ ಗುರು, ಗುರುವೇ ದೇವರು, ದೇವರೇ ಸ್ವಾಮಿ, ಆ ಸ್ವಾಮಿಯೇ ಶಾಶ್ವತ. ಉಳಿದೆಲ್ಲವೂ ಕಾಲಮಿತಿಯೊಂದಿಗೆ ಅಸ್ತಿತ್ವದಲ್ಲಿರುವಂಥವು. ದೇವರನ್ನು ಬಿಟ್ಟು ಸೂರ್ಯ ಚಂದ್ರ ಮೊದಲುಮಾಡಿ ಸಕಲವೂ ಮರಣಕ್ಕೆ ಒಳಗಾಗುವಂಥವು. ಆದ್ದರಿಂದ ಲಿಂಗವಂತ ಧರ್ಮದಲ್ಲಿ ಸ್ವಾಮಿಗಳಿಲ್ಲ. ಆದರೆ ತತ್ತ್ವಜಂಗಮರು ಇದ್ದಾರೆ. ಅವರು ಲಿಂಗವಂತ ಧರ್ಮದ ತತ್ತ್ವವನ್ನು ಜನಮನಗಳಲ್ಲಿ ಬಿತ್ತುವವರು.

ಲಿಂಗವಂತ ಧರ್ಮದಲ್ಲಿ ಮಠಗಳಿಲ್ಲ. ಅವುಗಳಿಗೆ ಪರ್ಯಾಯವಾಗಿ ಮಹಾಮನೆ ಇದೆ. ಈ ಮಹಾಮನೆಯ ಪರಿಕಲ್ಪನೆಯು ಸಕಲಜೀವಾತ್ಮರಿಗೆ ಲೇಸನೆ ಬಯಸುವಂಥದ್ದಾಗಿದೆ. ಲಿಂಗವಂತ ಧರ್ಮದ ಗುರಿ ಲೋಕಕಲ್ಯಾಣವಾಗಿದೆ. ಅಂತೆಯೆ ಇಲ್ಲಿ ಜಂಗಮಕ್ಕೆ ಬಹಳ ಮಹತ್ವವಿದೆ. ಜಂಗಮಕ್ಕೆ ಅನೇಕ ಅರ್ಥಗಳಿವೆ. ಲೋಕ, ಸಮಾಜ, ವಚನಗಳಲ್ಲಿನ ಲಿಂಗತತ್ತ್ವ ಪ್ರತಿಪಾದಕ, ಚೈತನ್ಯ ಮುಂತಾದ ಅರ್ಥಗಳನ್ನು ಅದು ಹೊಂದಿದೆ.

ಶರಣರ ಮೂಲ ಉದ್ದೇಶ ಈ ಬದುಕನ್ನು ಹಸನುಗೊಳಿಸುವಂಥದ್ದಾಗಿತ್ತು. ಅನುಭಾವದ ನೆಲೆಯಲ್ಲಿ ಸುಲಿಗೆ ಇಲ್ಲದ ಮತ್ತು ಸರ್ವರಿಗೂ ಘನತೆವೆತ್ತ ಬದುಕನ್ನು ಒದಗಿಸುವ ಸಮಾಜ ನಿರ್ಮಾಣವೇ ಅವರ ಗುರಿಯಾಗಿತ್ತು. ಆದ್ದರಿಂದ ಅವರ ಅನುಭಾವದ ಬದುಕು (ಸ್ಪಿರಿಚ್ಯುವಲ್ ಲೈಫ್) ಜೀವನಪ್ರೇಮದಿಂದ ಕೂಡಿದ್ದು ಸರ್ವಜೀವದಯಾಪಾರವಾಗಿತ್ತು.

ಲಿಂಗವಂತ ಧರ್ಮದಲ್ಲಿ ಪಾದಪೂಜೆ ಮತ್ತು ಪಾದೋದಕ ಸೇವನೆಯ ಸಂಪ್ರದಾಯ ಇದೆಯೆ?

ಸ್ವಾಮಿಗಳೇ ಇಲ್ಲವೆಂದಮೇಲೆ ಅವರ ಪಾದಗಳು ಎಲ್ಲಿಂದ ಬರುವವು? ಮುಂಬರುವ ದಿನಗಳಲ್ಲಿ ಸ್ವಾಮಿಗಳು ಜಾತಿಜಂಗಮತ್ವವನ್ನು ಕಳೆದುಕೊಂಡು ತತ್ತ್ವಜಂಗಮರಾಗಿ ಬಸವಾದಿ ಶರಣರ ತತ್ತ್ವಗಳನ್ನು ಪ್ರಚಾರ ಮಾಡುವ ಸಂದರ್ಭದಲ್ಲೂ ಪಾದಪೂಜೆ ಮತ್ತು ಪಾದೋದಕ ಸೇವನೆ ಸಲ್ಲದು. ಲಿಂಗವಂತ ಧರ್ಮದಲ್ಲಿ ಪಾದಪೂಜೆ ಎಂದರೆ ಜ್ಞಾನದ ಪೂಜೆ. ಪಾದ ಎಂಬ ಶಬ್ದಕ್ಕೆ ಕಿರಣ, ಹೊಳವು ಮತ್ತು ಜ್ಞಾನ ಎಂಬ ಅರ್ಥಗಳೂ ಇವೆ ಎಂಬುದನ್ನು ಮರೆಯ ಬಾರದು. 'ನಿಮ್ಮ ಶ್ರೀಪಾದಕ್ಕೆ ಶರಣೆಂಬೆ' ಎಂದರೆ 'ನಿಮ್ಮ ಜ್ಞಾನಸಂಪತ್ತಿಗೆ ಶರಣು' ಎಂದರ್ಥ. ಈ ಶರಣ ಧರ್ಮವು ಬಾಗಿದ ಶಿರ ಮತ್ತು ಮುಗಿದ ಕೈಗಳೊಂದಿಗೆ ಶರಣು ಶರಣಾರ್ಥಿ ಎಂದು ಗೌರವ ಸೂಚಿಸುವ ಧರ್ಮವಾಗಿದೆ. ಸರ್ವರು ಶಿವಸ್ವರೂಪಿಗಳೇ ಆಗಿರುವುದರಿಂದ ಯಾರು ಯಾರ ಕಾಲಿಗೆ ಬೀಳುವುದು? ಎದುರಿಗೆ ಇರುವವರ ಒಳಗಿನ ಶಿವಸ್ವರೂಪಕ್ಕೆ ಒಬ್ಬರಿಗೊಬ್ಬರು ಶರಣು ಶರಣಾರ್ಥಿ ಎನ್ನುತ್ತಾರೆ. ಪಾದೋದಕ ಎಂದರೆ ಜ್ಞಾನೋದಕ. ಜ್ಞಾನವೇ ಲಿಂಗವಾದ ಕಾರಣ ಚೆನ್ನಬಸವಣ್ಣನವರು "ಪಾದೋದಕವೆಂಬುದು ಲಿಂಗಕ್ಕೆ ಮಜ್ಜನಕ್ಕೆರೆದುದು" ಎಂದು ಸ್ಪಷ್ಟಪಡಿಸಿದ್ದಾರೆ. ಆದರೂ ಬಹುಪಾಲು ಸ್ವಾಮಿಗಳು ಈ ಸತ್ಯವನ್ನು ಭಕ್ತರಿಗೆ ವಿವರಿಸಿ ಹೇಳುತ್ತಿಲ್ಲ.

ಹಾಗಾದರೆ ಮಠಗಳು ಬೇಡವೆ?

ಖಂಡಿತ ಬೇಕು. ಆದರೆ ಅವೆಲ್ಲ ಮಹಾಮನೆಗಳಾಗಿ ಪರಿವರ್ತನೆಗೊಳ್ಳಬೇಕು. ಸ್ವಾಮಿಗಳೆಲ್ಲ ಸೇರಿ ವಚನಗಳಲ್ಲಿನ ಸರ್ವಸಮತ್ವದ ಲಿಂಗತತ್ತ್ವವನ್ನು ಜನಸಮುದಾಯದ ಬದುಕಿನ ಮೂಲ ಸೆಲೆಯಾಗಿಸುವಲ್ಲಿ ಕಾರ್ಯೋನ್ಮುಖ ರಾಗಬೇಕು. ಎಂಜಿನಿಯರಿಂಗ್ ಮತ್ತು ವೈದ್ಯಕೀಯ ಶಿಕ್ಷಣ ಮುಂತಾದ ವೃತ್ತಿಪರ ಸಂಸ್ಥೆಗಳನ್ನು ಸ್ಥಾಪಿಸಲು ಬಂಡವಾಳಶಾಹಿಗಳು ತುದಿಗಾಲ ಮೇಲೆ ನಿಂತಿದ್ದಾರೆ. ಆದ್ದರಿಂದ ಸಂಪದ್ಭರಿತ ಮಠಗಳ ಸ್ವಾಮಿಗಳು ಆ ಕಡೆ ಗಮನ ಹರಿಸಬೇಕಿಲ್ಲ. ಇಂದು ಜನಸಮುದಾಯಕ್ಕೆ ಬೇಕಿರುವುದು ಅನುಭವ ಮತ್ತು ಅನುಭಾವಪೂರ್ಣ ಬದುಕಿನ ಶಿಕ್ಷಣ. ಶರಣರ ವಚನಗಳು ಅಂಥ ಶಿಕ್ಷಣದ ಆಗರವಾಗಿವೆ. ಈ ಜೀವಪರ ಶಿಕ್ಷಣ ಪಡೆಯದೆ ಬದುಕುವುದು ಪ್ರಾಣಿಸದೃಶವಾಗುತ್ತದೆ. ಧನಾಢ್ಯರು ಮಾಡಲು ಮುಂದೆ ಬರದ ಈ ಮಹಾಕಾರ್ಯವನ್ನು ಸ್ವಾಮಿಗಳು ತತ್ತ್ವಜಂಗಮರಾಗಿ ಮಾಡಬೇಕು.

ಲಿಂಗವಂತ ಧರ್ಮದಲ್ಲಿ ಸ್ವರ್ಗ, ನರಕ, ಪುಣ್ಯ, ಪಾಪ, ಪುನರ್ಜನ್ಮ, ಮೋಕ್ಷ ಇವೆಯೆ?

ಇವೆಲ್ಲವುಗಳ ತಾಯಿಬೇರು ಕರ್ಮಸಿದ್ಧಾಂತ. ಕರ್ಮಸಿದ್ಧಾಂತದ ಪುಷ್ಪಗಳಿವು. ಬಸವಣ್ಣನವರು ಕರ್ಮಸಿದ್ದಾಂತವನ್ನೇ ಕೊಚ್ಚಿಹಾಕಿ 'ಕರ್ಮಹರ ಬಸವ' ಎನಿಸಿದ್ದಾರೆ. "ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ? ಕೂಡಲಸಂಗಮ ದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯದೇಕೊ?" ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಈ ಧರ್ಮದಲ್ಲಿ ಆಚಾರವೇ ಸ್ವರ್ಗ, ಅನಾಚಾರವೇ ನರಕ, ಸ್ವರ್ಗದ ಆಸೆ ಮತ್ತು ನರಕದ ಭಯ ಹುಟ್ಟಿಸುವ ಪುಣ್ಯ ಪಾಪಗಳಿಗೆ ಇಲ್ಲಿ ಸ್ಥಾನವಿಲ್ಲ. "ಪುಣ್ಯ ಪಾಪವೆಂಬ ಉಭಯಕರ್ಮವನಾರು ಬಲ್ಲರಯ್ಯಾ? ಇವನಾರುಂಬರು? ಕಾಯ ತಾನುಂಬಡೆ ಕಾಯ ತಾ ಮಣ್ಣು. ಜೀವ ತಾನುಂಬಡೆ ಜೀವ ತಾ ಬಯಲು." ಎಂದು ಹೇಳುವ ಮೂಲಕ ಪುಣ್ಯ ಪಾಪಗಳ ಜೊತೆ ಪುನರ್ಜನ್ಮ ಮತ್ತು ಮೋಕ್ಷವನ್ನೂ ಹೊಡೆದು ಹಾಕಿದ್ದಾರೆ.

ಲಿಂಗವಂತ ಧರ್ಮದಲ್ಲಿ ಇಷ್ಟಲಿಂಗ ದೀಕ್ಷೆಯೆ ಪುನರ್ಜನ್ಮ. "ಕೂಡಲಸಂಗನ ಶರಣರು ಅಚ್ಚ ಲಿಂಗೈಕ್ಯರು" ಎಂದು ಬಸವಣ್ಣನವರು ಹೇಳುತ್ತಾರೆ. ಅಂದರೆ ಶರಣರು ಬದುಕಿರುವಾಗಲೇ ಮೋಕ್ಷ ಸಾಧನೆ ಮಾಡಿದವರು. ಆದ್ದರಿಂದ ಲಿಂಗವಂತ ಧರ್ಮದಲ್ಲಿ ಅದಮ್ಯ ಜೀವನಪ್ರೀತಿಯಿಂದ ಕೂಡಿದ ದಯಾಭಾವ ಬಿಟ್ಟರೆ ಬೇರೇನೂ ಇಲ್ಲ. ಅದುವೇ ಸಕಲಜೀವಾತ್ಮರ ಕೂಡ ದೇವರ ಜೊತೆ ಒಂದಾಗಿಸುವಂಥ ಮಾರ್ಗ.

ಲಿಂಗವಂತರು ಪಂಚಾಂಗವನ್ನು ನಂಬಬೇಕೆ? ಲಿಂಗವಂತ ಧರ್ಮವು ಮೂಢನಂಬಿಕೆಗೆ ವಿರುದ್ಧವಾಗಿದೆ.

ಇಪ್ಪತ್ತುನಾಲ್ಕು ತಿಥಿಯಿಂದ ವೆಗ್ಗಳ,
ಗ್ರಹಣ ಸಂಕ್ರಾಂತಿಯಿಂದ ವೆಗ್ಗಳ,
ಏಕಾದಶಿ ವ್ಯತೀಪಾತದಿಂದ ವೆಗ್ಗಳ,
ಸೂಕ್ಷ್ಮ ಶಿವಪಥನರಿದಂಗೆ
ಹೋಮ, ನೇಮ, ಜಪ, ತಪದಿಂದ ವೆಗ್ಗಳ
ಕೂಡಲಸಂಗಮದೇವಾ ನಿಮ್ಮ ಮಾಣದೆ ನೆನೆವಂಗೆ.

ಎಂದು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ. ಲಿಂಗಪಥವನ್ನು ಅರಿಯುವುದು ಎಲ್ಲಕ್ಕಿಂತ ಹೆಚ್ಚಿನದಾಗಿದೆ. "ವಾರ, ತಿಥಿ, ಸುಮುಹೂರ್ತವೆಂಬ ಲೌಕಿಕದ ಕರ್ಮವ ಮಾಡಿದಡೆ ನಿಮ್ಮ ಸದ್ಭಕ್ತರಿಗೆ ದೂರವಯ್ಯಾ ಕೂಡಲಚೆನ್ನಸಂಗಮದೇವಾ" ಎಂದು ಚೆನ್ನಬಸವಣ್ಣನವರು ಹೇಳಿದ್ದಾರೆ.

ಅಷ್ಟಾವರಣ, ಷಟ್‌ಸ್ಥಲ ಮತ್ತು ಪಂಚಾಚಾರ ಅಂದರೆ?

ಇವು ಲಿಂಗವಂಥ ಧರ್ಮಾಚರಣೆಯ ಮೂರು ಅವಿಭಾಜ್ಯ ಅಂಗಗಳು. ಆದರೆ ಇವೆಲ್ಲ ೧೨ನೇ ಶತಮಾನದ ಮೊದಲೇ ಇದ್ದವು ಎಂದು ಪಟ್ಟಭದ್ರ ಹಿತಾಸಕ್ತಿಗಳು ಪ್ರತಿಪಾದಿಸುತ್ತಿವೆ. ಕಳೆದ ೮೦೦ ವರ್ಷಗಳ ಅವಧಿಯಲ್ಲಿ ಇಂಥ ಅನೇಕ ಅನ್ಯಾಯಗಳನ್ನು ಶರಣರ ಲಿಂಗವಂತ ಧರ್ಮದ ಮೇಲೆ ಮಾಡಲಾಗಿದೆ. ಹೀಗೆ ಹಿಂದಿನ ಗ್ರಂಥಗಳಲ್ಲಿ ಈ ವಿಚಾರಗಳನ್ನು ಪ್ರಜ್ಞಾಪೂರ್ವಕವಾಗಿ ಸೇರಿಸಿದ್ದನ್ನು ಎತ್ತಿ ತೋರಿಸುವ ಪಟ್ಟಭದ್ರ ಹಿತಾಸಕ್ತಿಗಳು 'ಬಸವಣ್ಣನವರು ಇಷ್ಟಲಿಂಗದ ಜನಕರು' ಎಂಬುದನ್ನೂ ಒಪ್ಪಿಕೊಳ್ಳುವುದಿಲ್ಲ. ಇಷ್ಟಲಿಂಗ ಕೂಡ ಮೊದಲೇ ಇತ್ತು ಎಂದು ವಾದಿಸುತ್ತಾರೆ! "ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ, ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ" ಎಂದು ಹೇಳುವ ಬಸವಣ್ಣನವರು ಇಷ್ಟಲಿಂಗದ ಮೂಲಕ ಜಾತಿವ್ಯವಸ್ಥೆಗೆ ಕೊಡಲಿ ಪೆಟ್ಟು ಕೊಟ್ಟಿದ್ದಾರೆ. ಆದರೆ ಮೇಲು ಕೀಳುಗಳಲ್ಲಿ ನಂಬಿಕೆ ಇರುವ ಲಿಂಗೋದ್ಭವವಾದಿಗಳು ಬಸವಣ್ಣನವರಿಗೆ ಇಷ್ಟಲಿಂಗ ಕೊಟ್ಟವರು ತಮ್ಮ ಆಚಾರ್ಯರೇ ಎಂದು ಸಾಧಿಸಲು ವಿಫಲ ಪ್ರಯತ್ನ ಮಾಡುತ್ತಲೇ ಇದ್ದಾರೆ.

'ಗುರು, ಲಿಂಗ, ಜಂಗಮ, ಪಾದೋದಕ (ಜ್ಞಾನೋದಕ), ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ' ಇವು ಅಷ್ಟಾವರಣಗಳು. ಐಹಿಕ ಜಗತ್ತಿನ ವಸ್ತುಮೋಹದಿಂದ ರಕ್ಷಿಸುವಂಥವು.

'ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ' ಇವು ಷಟ್‌ಸ್ಥಲಗಳು. ಲಿಂಗವಂತರ ಮಾನಸಿಕ ಮಜಲುಗಳನ್ನು ಸೂಚಿಸುತ್ತವೆ. ವ್ಯಷ್ಟಿಯಿಂದ ಸಮಷ್ಟಿಪ್ರಜ್ಞೆ ವರೆಗಿನ ವ್ಯಕ್ತಿತ್ವ ವಿಕಸನವನ್ನುಂಟು ಮಾಡುವ ಸ್ಥಲಗಳಿವು.

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ, ಭೃತ್ಯಾಚಾರ ಇವು ಪಂಚಾಚಾರಗಳು. ಇವುಗಳನ್ನು ಆಚರಣೆಯಲ್ಲಿ ತರುವುದೇ ಲಿಂಗವಂತರ ಕರ್ತವ್ಯವಾಗಿದೆ.

ಇಷ್ಟಲಿಂಗದಲ್ಲಿ ನಂಬಿಕೆ ಇಟ್ಟು ಏಕದೇವೋಪಾಸಕರಾಗುವುದು ಲಿಂಗಾಚಾರ. ಪರಹಿತ ಬಯಸುವುದು ಸದಾಚಾರ. ಜಾತಿಭೇದ ಮಾಡದಿರುವುದು ಶಿವಾಚಾರ. ಶಿವಭಕ್ತರ ನಿಂದೆಯನ್ನು ಸಹಿಸದಿರುವುದು ಗಣಾಚಾರ. ಶಿವಭಕ್ತರಲ್ಲಿ ಸೇವಾಭಾವದಿಂದ ಇರುವುದು ಭೃತ್ಯಾಚಾರ.

ಲಿಂಗವಂತ ಧರ್ಮದಲ್ಲಿ ಜಾತಿಗಳಿವೆಯೆ?

ಲಿಂಗವಂತ ಧರ್ಮ ನಿರ್ಜಾತಿ ಧರ್ಮವಾಗಿದೆ. ಮನುವಾದಿಗಳ ವರ್ಣ, ಜಾತಿ ಮತ್ತು ಉಪಜಾತಿಗಳನ್ನು ನಿರ್ನಾಮ ಮಾಡುವ ಉದ್ದೇಶದಿಂದಲೇ ಈ

ಧರ್ಮ ಜನ್ಮತಾಳಿದೆ. ದುರಂತವೆಂದರೆ ಈ ಧರ್ಮ ಕಾಲಾನುಕ್ರಮದಲ್ಲಿ ಉಪಜಾತಿಗಳಿಂದ ತುಂಬಿಹೋಗಿದೆ. ಲಿಂಗಾಯತರು ಯಾವಾಗ ಹಿಂದೂ ಲಿಂಗಾಯತರಾದರೊ ಆವಾಗಲೇ ಅವರು ತಮ್ಮ ಸ್ವತಂತ್ರ ಧರ್ಮವನ್ನು ಕಳೆದುಕೊಂಡು ಹಿಂದೂ ಧರ್ಮದೊಳಗಿನ ಲಿಂಗಾಯತ ಜಾತಿಯಾದರು. ಈ ದುರಂತ ಎಲ್ಲಿಯ ವರೆಗೆ ಮುಂದುವರಿಯಿತೆಂದರೆ ಜಾತಿಗಳಿಲ್ಲದ ಲಿಂಗಾಯತ ಧರ್ಮಕ್ಕೆ ಸಂಬಂಧಿಸಿದ ಕಾಯಕಗಳು ಉಪಜಾತಿಗಳಾಗಿ ರೂಪುಗೊಂಡವು. ಸ್ವತಂತ್ರ ಲಿಂಗವಂತ ಧರ್ಮದಲ್ಲಿ ಸಮಗಾರ ಹರಳಯ್ಯನವರು ಎಂದರೆ ಸಮಗಾರ ಕಾಯಕದ ಲಿಂಗವಂತ ಹರಳಯ್ಯನವರು. ಆದರೆ ಲಿಂಗಾಯತವು ಹಿಂದೂ ಧರ್ಮದ ಭಾಗವಾದಾಗ ಸಮಗಾರ ಎಂಬುದು ಜಾತಿಯಾಯಿತು. ಹೀಗೆ ಲಿಂಗಾಯತ ಜಾತಿಯಾದ ನಂತರ ಜಂಗಮ, ಆರಾಧ್ಯ, ಬಣಜಿಗ, ಪಂಚಮಸಾಲಿ, ಕುಡು ಒಕ್ಕಲಿಗ, ಸಾದರ, ನೊಣಬ, ನಗರ್ತ, ಗೌಡಲಿಂಗಾಯತ, ಲಿಂಗಾಯತ ರೆಡ್ಡಿ, ಕುರುಹಿನಶೆಟ್ಟಿ, ಗಾಣಿಗ, ಬಣಗಾರ, ನೇಕಾರ, ಶಿವಸಿಂಪಿ, ಶೀಲವಂತ, ಹೂಗಾರ ಮುಂತಾದ ಉಪಜಾತಿಗಳು ಹುಟ್ಟಿಕೊಂಡಾಗ ಕಾಯಕದ ಪ್ರಾಮುಖ್ಯ ಹೊರಟುಹೋಯಿತು.

ಮೈಸೂರು ರಾಜ್ಯದ ೧೮೯೧ನೇ ಜನಗಣತಿಯ ಪ್ರಕಾರ ಲಿಂಗಾಯತದಲ್ಲಿ ೩೮ ಉಪಜಾತಿಗಳಿವೆ. ೧೯೦೧ರ ಬಾಂಬೆ-ಕರ್ನಾಟಕದ ಜನಗಣತಿಯ ಪ್ರಕಾರ ೪೩ ಉಪಜಾತಿಗಳಿವೆ.

ಲಿಂಗಾಯತರು ತಮ್ಮ ಸ್ವತಂತ್ರ ಧರ್ಮವನ್ನು ಮರೆತು ಉಪಜಾತಿಗಳಲ್ಲಿ ಒಡೆದು ಹೋದಾಗ ಸಹಜವಾಗಿಯೆ ಅವರ ತಲೆಯಲ್ಲಿ ಮನು ವಾಸ ಮಾಡುವನು. ಆಗ ಬಸವಣ್ಣ ನಾಲಿಗೆಯ ಮೇಲೆ ಮಾತ್ರ ಇರುತ್ತಾರೆ. ಲಿಂಗವಂತ ಧರ್ಮ ಉಳಿಯಬೇಕಾದರೆ ಲಿಂಗಾಯತರು ಜಾತಿಗಳನ್ನು ನಿರ್ನಾಮ ಮಾಡುವುದು ಅವಶ್ಯವಾಗಿದೆ. ಇಷ್ಟಲಿಂಗಪೂಜಕರು ವಿವಿಧ ಉಪಜಾತಿಗಳ ಮಧ್ಯದ ಬೇಲಿಗಳನ್ನು ಕಿತ್ತೆಸೆಯಬೇಕು. ಉಪಜಾತಿಗಳ ಮಧ್ಯೆ ಯುದ್ಧೋಪಾದಿಯಲ್ಲಿ ರಕ್ತಸಂಬಂಧ ಸಾಧಿಸುವುದರ ಮೂಲಕ ಲಿಂಗಾಯತ ಒಂದು ಸ್ವತಂತ್ರ ಧರ್ಮ ಎಂಬ ಸತ್ಯವನ್ನು ಜಗತ್ತಿಗೆ ಸಾರುತ್ತ ಯಶಸ್ಸನ್ನು ಸಾಧಿಸಿದಾಗ ಮಾತ್ರ ಬಸವಾದಿ ಶರಣರು ಸ್ಥಾಪಿಸಿದ ಲಿಂಗವಂತ ಧರ್ಮ ಉಳಿಯಲು ಸಾಧ್ಯ. ಇಲ್ಲದಿದ್ದರೆ ಜಾತೀಯತೆ ಮತ್ತು ಅಸ್ಪೃಶ್ಯತೆಯನ್ನು ಆಚರಿಸುವುದರೊಂದಿಗೆ ಹೋಮ ಹವನಗಳಿಗೆ ಬಲಿಯಾಗುತ್ತ ಗುಡಿ ಗುಡಿ ಸುತ್ತುವ ಸೋ ಕಾಲ್ಡ್ ಲಿಂಗಾಯತರನ್ನೇ ನೋಡುವ ದುರಂತ ಸ್ಥಿತಿಯನ್ನು ತಲುಪಬೇಕಾಗುತ್ತದೆ.

ಲಿಂಗವಂತ ಧರ್ಮ ರಕ್ಷಣೆಗಾಗಿ ಅನುಯಾಯಿಗಳು ಏನು ಮಾಡಬೇಕು?

ಲಿಂಗವಂತ ಧರ್ಮವು ಸರಳ ಸಹಜ ಧರ್ಮವಾಗಿದೆ.

೧. ಬಹುದೇವೋಪಾಸನೆಯಿಂದ ಏಕದೇವೋಪಾಸನೆ ಕಡೆಗೆ

೨. ಸ್ಥಾವರಲಿಂಗದಿಂದ ಇಷ್ಟಲಿಂಗದ ಕಡೆಗೆ

೩. ಮಂದಿರದಿಂದ ಅನುಭವಮಂಟಪದ ಕಡೆಗೆ

೪. ಮಠಗಳಿಂದ ಮಹಾಮನೆಯ ಕಡೆಗೆ

೫. ಜಾತಿಯಿಂದ ನೀತಿಯ ಕಡೆಗೆ

೬. ಕರ್ಮಸಿದ್ಧಾಂತದಿಂದ ಕಾಯಕಸಿದ್ಧಾಂತದ ಕಡೆಗೆ.

೭. ದಾನದಿಂದ ದಾಸೋಹದ ಕಡೆಗೆ

೮. ಮೂಢನಂಬಿಕೆಯಿಂದ ವೈಚಾರಿಕತೆಯ ಕಡೆಗೆ

೯. ವ್ಯಷ್ಟಿಪ್ರಜ್ಞೆಯಿಂದ ಸಮಷ್ಟಿಪ್ರಜ್ಞೆಯ ಕಡೆಗೆ

೧೦. ವ್ಯಕ್ತಿಪ್ರಭುತ್ವದಿಂದ ಪ್ರಜಾಪ್ರಭುತ್ವದ ಕಡೆಗೆ

೧೧. ಹೆಂಡಿರು ಮಕ್ಕಳುಳ್ಳ ಸಾಕಾರ ಶಿವಮೂರ್ತಿಯಿಂದ ನಿರಾಕಾರ ಶಿವನೆಡೆಗೆ

೧೨. ಪುರುಷಪ್ರಧಾನ ಸಮಾಜದಿಂದ ಲಿಂಗಭೇದವಿಲ್ಲದ ಸಮಾಜದೆಡೆಗೆ

೧೩. ಅಸಮಾನತೆಯ ಸಮಾಜದಿಂದ ಸಮಾನತೆಯ ಸಮಾಜದೆಡೆಗೆ

೧೪. ಭ್ರಮಾತ್ಮಕ ಬದುಕಿನಿಂದ ವಾಸ್ತವದ ಬದುಕಿನೆಡೆಗೆ

೧೫. ಹಿಂಸೆಯಿಂದ ಅಹಿಂಸೆಯ ಕಡೆಗೆ

ಈ ೧೫ ಅಂಶಗಳನ್ನು ತನ್ನ ಅರಿವಿನಲ್ಲಿ ಅಳವಡಿಸಿಕೊಂಡು ಕಾಯಕ, ಪ್ರಸಾದ ಮತ್ತು ದಾಸೋಹಂಭಾವದಿಂದ ಸ್ವಾವಲಂಬಿ ಬದುಕನ್ನು ಸಾಗಿಸುವವನೇ ಲಿಂಗಾಂಗಸಾಮರಸ್ಯದ ಆನಂದವನ್ನು ಪಡೆಯುವ ಲೋಕೋಪಯೋಗಿ ಲಿಂಗವಂತನಾಗುತ್ತಾನೆ.

❖❖

೧೩

❖

ಮೂಢನಂಬಿಕೆಗಳು ಬಸವಧರ್ಮಕ್ಕೆ ವಿರುದ್ಧ

ಮೂಢನಂಬಿಕೆ ಹೋಗಬೇಕಾದರೆ ವಿಚಾರಕ್ರಾಂತಿಯಾಗಬೇಕು. ಆದರೆ ದಯಾಭಾವವಿಲ್ಲದೆ ವಿಚಾರಕ್ರಾಂತಿಯಾಗದು. ಅಂತೆಯ ಬಸವಣ್ಣನವರು ದಯವೇ ಧರ್ಮದ ಮೂಲ ಎಂದು ತಿಳಿಸಿದ್ದಾರೆ. ದಯೆಯು ಧರ್ಮದ ಮೂಲವೂ ಆಗುವುದು, ಸಮಾನತೆಯು ಮೂಲವೂ ಆಗುವುದು, ಮೂಢನಂಬಿಕೆಗಳನ್ನು ಹೊಡದೋಡಿಸುವುದಕ್ಕೂ ಇದೇ ಮೂಲವಾಗುವುದು.

ದಲಿತರನ್ನು ಕೆಲವರು ಮೇಲ್ಜಾತಿಯವರು ಮುಟ್ಟಿಸಿಕೊಳ್ಳಲು ಹಿಂಜರಿಯುತ್ತಾರೆ. ಮುಟ್ಟಿದರೆ ಮೈಲಿಗೆಯಾಗುವುದೆಂಬ ಮೂಢನಂಬಿಕೆಯಿಂದಾಗಿ ಅವರು ಮಾನಸಿಕವಾಗಿ ಹಿಂದುಳಿದವರಾಗಿರುತ್ತಾರೆ. ಆದರೆ ದಲಿತರ ಮಗುವೊಂದು ನೀರಿನಲ್ಲಿ ಮುಳುಗುತ್ತಿರುವ ಸಂದರ್ಭದಲ್ಲಿ ಅಂಥವರು ಆ ಮಗುವನ್ನು ರಕ್ಷಿಸಿದರೆ, ಮೂಢನಂಬಿಕೆಯಿಂದ ಹೊರಬಂದು ವೈಚಾರಿಕತೆಯಕಡೆಗೆ ಸಾಗುವಂಥವರಾಗುತ್ತಾರೆ. ಅಸ್ಪೃಶ್ಯತೆ ಕೂಡ ಮೂಢನಂಬಿಕೆ ಎಂಬುದರ ಅರಿವಾದಾಗ ಮಾತ್ರ ಮೇಲ್ಜಾತಿಯವರು ಅಂಥ ಅನಿಷ್ಟ ಪದ್ಧತಿಯಿಂದ ಹೊರಬರಲು ಸಾಧ್ಯ. ಹೀಗೆ ಪ್ರತಿಯೊಬ್ಬರಲ್ಲಿ ವಿಚಾರಕ್ರಾಂತಿಯಾದಾಗ ಬಸವಣ್ಣನವರು ಕಟ್ಟಿದ್ದ ಸಮಾನತೆಯ ಸಮಾಜ ಮತ್ತೆ ರೂಪ ತಾಳಲು ಸಾಧ್ಯ. ಹೀಗೆ ಎಲ್ಲರೀತಿಯ ಸಮಾನತೆಯನ್ನು ಬಯಸುವ ಮನುಷ್ಯರು ಮಾತ್ರ ವ್ಯಕ್ತಿತ್ವ ವಿಕಸನಗೊಂಡ ಮನುಷ್ಯರು.

ಜೀವಕಾರುಣ್ಯವಿಲ್ಲದೆ ವ್ಯಕ್ತಿತ್ವವಿಕಸನಗೊಳ್ಳದು. ವ್ಯಕ್ತಿತ್ವವಿಕಸನಗೊಳ್ಳದೆ ಸಮತಾಭಾವ ಬರವುದಿಲ್ಲ. ಸಮತಾಭಾವ ಬರದೆ ದಾಸೋಹ ಭಾವ ಬರುವುದಿಲ್ಲ. ದಾಸೋಹ ಭಾವ ಬರದೆ ಲಿಂಗವಂತನಾಗುವುದಿಲ್ಲ. ಇದು ಲಿಂಗತತ್ತ್ವ. ಹೀಗೆ ಲಿಂಗವಂತನ ಮೂಲ ಹೃದಯವಂತಿಕೆಯಲ್ಲಿದೆ. ಈ ಹೃದಯವಂತಿಕೆ ಮೂಲಕವೇ ಸಕಲ ಜೀವಾತ್ಮರಿಗೆ ಲೇಸನೇ ಬಯಸುವ ಮಾನವಧರ್ಮದ ಅರಿವು, ಸಮತಾ ಭಾವ ಮತ್ತು ವೈಚಾರಿಕ ಪ್ರಜ್ಞೆ ಮೂಡಲು ಸಾಧ್ಯ. ಆ ಮೂಲಕ ಮೂಢನಂಬಿಕೆಗಳಿಂದ ಹೊರಬರಲು ಸಾಧ್ಯ.

ಜಗತ್ತಿನಲ್ಲಿ ವಿವಿಧ ಧರ್ಮಗಳಿವೆ. ಅವುಗಳಲ್ಲಿ ಕೆಲವು ಹಿಂಸಾ ಭಕ್ತಿಯಿಂದ ಕೂಡಿವೆ. ಮತ್ತೆ ಕೆಲವು ದಯಾಭಕ್ತಿಯಿಂದ ಕೂಡಿವೆ. ಹಿಂಸಾಭಕ್ತಿಯಲ್ಲಿ ಬಲಿ ಕೊಡುವ ಪದ್ಧತಿ ಇದೆ. ವೈದಿಕರು ಯಜ್ಞ ಯಾಗಗಳಲ್ಲಿ ಪಶುಬಲಿ ಕೊಡುವ ಹಿಂಸಾ ಪದ್ಧತಿ ಇಂದಿಗೂ ಅಲ್ಲಲ್ಲಿ ಉಳಿದುಕೊಂಡು ಬಂದಿದೆ. ದೇವಿಗೆ ನರಬಲಿ ಮತ್ತು ಕೋಣಬಲಿ ಕೊಡುವ ಕ್ರೂರ ಪದ್ಧತಿಕೂಡ ಭಾರತದಲ್ಲಿ ಇಂದಿಗೂ ಜೀವಂತವಿದೆ. ಮಾಯ ಮಾಟಗಳಿಗೆ ಸಂಬಂಧಿಸಿದಂತೆ ಮಕ್ಕಳ ಬಲಿ ಕೊಡುವ ಸುದ್ದಿಗಳು ಆಗಾಗ ಪ್ರಕಟವಾಗುತ್ತಲೇ ಇರುತ್ತವೆ. ಕುರಿ ಕೋಳಿ ಬಲಿಯಂತೂ ಸಾಮಾನ್ಯವಾಗಿದೆ.

ಬೌದ್ಧಧರ್ಮದಿಂದಾಗಿ ಬ್ರಾಹ್ಮಣರು ಯಜ್ಞದಲ್ಲಿ ಪಶುಬಲಿ ಕೊಡುವ ಪದ್ಧತಿ ಬಹಳ ಕಡಿಮೆಯಾಯಿತು. ಆದರೆ ಅವರು ಆಹಾರ ಪದಾರ್ಥಗಳನ್ನು ಹಾಗೂ ರೇಷ್ಮೆ ಬಟ್ಟೆಗಳನ್ನು ಯಜ್ಞಕ್ಕೆ ಹಾಕಿ ಸುಡುವ ಪದ್ಧತಿ ಇಂದಿಗೂ ಜಾರಿಯಲ್ಲಿದೆ. ಬಲಿ ಕೊಡುವ ಮತ್ತು ಪ್ರಸಾದವನ್ನು ಬೆಂಕಿಗೆ ಸುರಿಯುವಂತೆ ಮಾಡುವ ಯಜ್ಞಪದ್ಧತಿಯನ್ನು ಬಸವಾದಿ ಶರಣರು ತೀವ್ರವಾಗಿ ವಿರೋಧಿಸಿದ್ದಾರೆ.

ಸುಗ್ಗಿಯ ದಿನಗಳಲ್ಲಿ ಶಾಖಾಹಾರಿ ರೈತರು ಕೂಡ ಮಾಂಸಾಹಾರಿಗಳ ಮೂಲಕ ರಾಶಿಗೆ ಕುರಿ ಬಲಿ ಕೊಡುವ ಪದ್ಧತಿ ಹೈದರಾಬಾದ ಕರ್ನಾಟಕ ಪ್ರದೇಶದ ಕೆಲವೆಡೆ ಇಂದಿಗೂ ಉಳಿದುಕೊಂಡು ಬಂದಿದೆ. ತೆಂಗಿನಕಾಯಿ, ಲಿಂಬೆಹಣ್ಣು ಮತ್ತು ಬೂದುಗುಂಬಳಕಾಯಿ ಮುಂತಾದ ಆಹಾರಪದಾರ್ಥಗಳನ್ನು ಬಲಿಕೊಡುವ ಪದ್ಧತಿಯನ್ನು ಬಹುಪಾಲು ಲಿಂಗವಂತರು ಕೂಡ ಇಂದಿಗೂ ಉಳಿಸಿಕೊಂಡು ಬಂದಿರುವುದು ದುಃಖಕರ ಸಂಗತಿ. ಈ ಹಣ್ಣು ಕಾಯಿಗಳು ಲಿಂಗವಂತಧರ್ಮದ ಪ್ರಕಾರ ಪ್ರಸಾದ ಎನ್ನಿಸಿಕೊಳ್ಳುವವು. ಪ್ರಸಾದವನ್ನು ಹಾಳು ಮಾಡುವುದು ಲಿಂಗವಂತಧರ್ಮಕ್ಕೆ ಲಿಂಗವಂತರೇ ಅಪಮಾನ ಮಾಡುವಂಥದ್ದು.

ತೆಂಗಿನಕಾಯಿ ಒಡೆಯುವುದರ ಮೂಲ ಹಿಂಸಾ ಪದ್ಧತಿಯಲ್ಲಿದೆ. ಎಷ್ಟೋ ಜನರು ಪೂಜಾ ದಿನಗಳಲ್ಲಿ ತಮ್ಮ ಅಂಗಡಿಯ ಮುಂದಿರುವ ರಸ್ತೆಯಲ್ಲಿ ತೆಂಗಿನ ಕಾಯಿ ಒಡೆಯುವರು. ಆಗ ಆ ಕಾಯಿಗಳು ಚೂರುಚೂರಾಗಿ ಮಣ್ಣುಪಾಲಾಗುವವು. ಹೀಗೆ ಪ್ರಸಾದವು ಬಲಿಯಾಗುವ ಪದ್ಧತಿ ಲಿಂಗವಂತರಿಗಂತೂ ಗೌರವ ತರುವಂಥದ್ದಲ್ಲ. ಅಮಾವಾಸ್ಯೆ ಮುಂತಾದ ಸಂದರ್ಭದಲ್ಲಿ ಹಾಗೂ ಹೊಸ ವಾಹನಗಳನ್ನು ಖರೀದಿಸಿದಾಗ ವಾಹನಗಳ ಗಾಲಿಗಳ ಕೆಳಗೆ ಲಿಂಬೆ ಹಣ್ಣುಗಳನ್ನು ಇಟ್ಟು ಬಲಿಕೊಡುವ ಪದ್ಧತಿ ಕೂಡ ಭಾರತದಾದ್ಯಂತ ಜಾರಿಯಲ್ಲಿದೆ. ಹೀಗೆ ಪ್ರಸಾದವನ್ನು ಮಣ್ಣುಗೂಡಿಸುವ ಮತ್ತೊಂದು ಅಸಹ್ಯ ಪದ್ಧತಿ ಎಂದರೆ ದೀಪಾವಳಿ ಮತ್ತು ದಸರಾದಂಥ ಹಬ್ಬಗಳ ಸಂದರ್ಭದಲ್ಲಿ ಅಂಗಡಿ ಮಾಲೀಕರು ತಮ್ಮ ಅಂಗಡಿಗಳ ಮುಂದೆ ಕುಂಕುಮ

ತುಂಬಿದ ಬೂದುಗುಂಬಳಗಳನ್ನು ಒಡೆದು ಬೀದಿಗೆ ಎಸೆಯುವುದು. ಗೃಹಪ್ರವೇಶದ ಸಂದರ್ಭದಲ್ಲಿ ಕೂಡ ಇದೇ ರೀತಿ ಬೂದುಗುಂಬಳವನ್ನು ಹಾಳುಗೆಡವುತ್ತಾರೆ. ಇದೊಂದು ವಿಕೃತ ಆಚರಣೆ. ಏಕೆಂದರೆ ಬೂದುಗುಂಬಳ ಬಹಳ ಉಪಯುಕ್ತ ಆಹಾರ ಪದಾರ್ಥವಾಗಿದೆ. ಅದರಲ್ಲಿನ ರಂಜಕದ ಅಂಶ ನಮ್ಮ ಮೆದುಳಿನ ಬೆಳವಣಿಗೆಗೆ ಅವಶ್ಯವಾಗಿದೆ. ಬೌದ್ಧಿಕ ಶಕ್ತಿಯನ್ನು ಹೆಚ್ಚಿಸುವ ಆಹಾರ ಅದಾಗಿದೆ. ಅಂಥ ಬೂದುಗುಂಬಳವನ್ನು ಮಣ್ಣುಪಾಲು ಮಾಡುವ ಪದ್ಧತಿ ನಮ್ಮ ಅನಾಗರಿಕ ಮನಸ್ಸಿನ ಪ್ರತೀಕವಾಗಿದೆ. ಹೀಗೆ ನಮ್ಮ ದೇಶದಲ್ಲಿ ಕೋಟ್ಯಂತರ ಲಿಂಬೆಹಣ್ಣು, ಬೂದುಗುಂಬಳ ಮತ್ತು ತೆಂಗಿನಕಾಯಿಗಳು ಜನರ ಬಾಯಿಗೆ ಹೋಗುವ ಬದಲು ಮಣ್ಣಿನ ಬಾಯಿಗೆ ಹೋಗುತ್ತವೆ. ಸ್ಥಾವರಲಿಂಗಕ್ಕೆ ಮತ್ತು ಇತರೆ ಮೂರ್ತಿಗಳಿಗೆ ಅಭಿಷೇಕದ ಹೆಸರಿನಲ್ಲಿ ಹಾಲು, ಮೊಸರು ಮತ್ತು ತುಪ್ಪ ಮುಂತಾದ ಪದಾರ್ಥಗಳನ್ನು ಚರಂಡಿಯ ಬಾಯಿಗೆ ಹೋಗುವಂತೆ ಮಾಡುವುದುಕೂಡ ಅನಾಗರಿಕ ಪದ್ಧತಿಯೇ ಆಗಿದೆ.

ಇಷ್ಟಲಿಂಗ ಪೂಜೆಗೆ ಬೇಕಾಗಿರುವುದು ವಿಭೂತಿ, ಬಿಲ್ವಪತ್ರೆ, ನೀರು ಮುಂತಾದ ಪದಾರ್ಥಗಳು ಮಾತ್ರ. ಇವೆಲ್ಲ ಔಷಧೀಯ ಗುಣಗಳನ್ನು ಹೊಂದಿವೆ. ಇವುಗಳಲ್ಲಿ ಯಾವುದನ್ನೂ ಹಾಳು ಮಾಡಲಿಕ್ಕಾಗದು. ಅಷ್ಟೊಂದು ಎಚ್ಚರಿಕೆಯಿಂದ ಹಾಗೂ ಪ್ರಸಾದ ಪ್ರಜ್ಞೆಯಿಂದ ಇವುಗಳ ಬಳಕೆಯಾಗುತ್ತದೆ. ಯಾವ ವಸ್ತುಗಳನ್ನು ಲಿಂಗಪೂಜೆಗೆ ಬಳಸುವುದಿಲ್ಲವೋ ಅವುಗಳನ್ನು ಲಿಂಗವಂತರು ಪೂಜೆಯ ಹೆಸರಿನಲ್ಲಿ ಬಳಸಬಾರದು. ಬಲಿ ಪದ್ಧತಿಗೆ ವಿರುದ್ಧವಾಗಿಯೇ ದಯಾ ಪದ್ಧತಿಯನ್ನು ಬಸವಣ್ಣನವರು ಜಾರಿಗೆ ತಂದಿದ್ದಾರೆ. ತೆಂಗಿನಕಾಯಿ ಒಡೆಯುವುದು, ಲಿಂಬೆಹಣ್ಣುಗಳನ್ನು ವಾಹನಗಳ ಚಕ್ರಗಳ ಕೆಳಗೆ ಇಡುವುದು ಮತ್ತು ಬೂದುಗುಂಬಳವನ್ನು ವಿಕಾರವಾಗಿ ಸೀಳಿಹಾಕುವುದು ಮುಂತಾದ ಬಲಿಮೂಲದ ಪದ್ಧತಿಗಳು ಲಿಂಗವಂತರಿಗೆ ಮತ್ತು ವಿಚಾರವಾದಿಗಳಿಗೆ ಸಮ್ಮತವಲ್ಲ.

ಪ್ರಾಣಿಬಲಿ ಕೊಡಲಾಗದವರು ತೆಂಗಿನಕಾಯಿ ಒಡೆಯುತ್ತಾರೆ. ಆ ಮೂಲಕ ಬಲಿ ಕೊಡುವ ಸಂಪ್ರದಾಯವನ್ನು ಉಳಿಸಿಕೊಳ್ಳುತ್ತಾರೆ. ಇಷ್ಟಲಿಂಗಕ್ಕೆ ಯಾರಾದರೂ ತೆಂಗಿನಕಾಯಿ ಒಡೆಯುತ್ತಾರಾ? ಇಲ್ಲ. ಆದ್ದರಿಂದ ಇದು ಬಸವ ಪರಂಪರೆಯಲ್ಲ. ಶರಣರ ಭಕ್ತಿ ಪ್ರೇಮಮಯ ಭಕ್ತಿ. ದಯಾಮಯ ಭಕ್ತಿ. ಬಲಿ ಕೊಡುವ ಭಕ್ತಿ ಅಲ್ಲ.

ಶರಣರ ಯಾವುದೇ ವಚನದಲ್ಲಿ ತೆಂಗಿನಕಾಯಿ, ಲಿಂಬೆಕಾಯಿ ಮತ್ತು ಬೂದುಗುಂಬಳವನ್ನು ಪೂಜೆಗೆ ಬಳಸಬೇಕೆಂದು ಹೇಳಿಲ್ಲ. ಲಿಂಗವಂತರಿಗೆ ಇಷ್ಟಲಿಂಗವೊಂದೇ ಪೂಜಾರ್ಹ. ಬಸವಣ್ಣನವರು ಗೌರವಾರ್ಹ. ಆದರೆ ಕೆಲ ಅಕ್ಕಗಳು, ಅಣ್ಣಗಳು, ಮಾತೆಗಳು ಮತ್ತು ಸ್ವಾಮಿಗಳು ಗುಡಿ ಕಟ್ಟಿ ಅಥವಾ ಗುಡಿಯಂಥ ಪ್ರದೇಶದಲ್ಲಿ ಬಸವಣ್ಣನವರ ಮೂರ್ತಿ ಇಟ್ಟು ತೆಂಗಿನಕಾಯಿ ಒಡೆಯುತ್ತಾರೆ. ಭಕ್ತರಿಂದ

ತೆಂಗಿನಕಾಯಿ ಒಡೆಯಲು ಹಚ್ಚುತ್ತಾರೆ. ಮಂದಿರ ಮತ್ತು ಮೂರ್ತಿಗಳನ್ನು ತಿರಸ್ಕರಿಸಿ 'ಸ್ಥಾವರ ಪ್ರತಿಷ್ಠೆ ನಾಯಕ ನರಕ' ಎಂದು ಹೇಳಿದ ಬಸವಾದಿ ಶರಣರ ತತ್ತ್ವಗಳಿಗೆ ಮಾಡುವ ಅಪಮಾನವಿದು ಎಂದು ಈ ಮೂರ್ತಿಪೂಜಾಪ್ರಿಯ ಲಿಂಗಾಯತ ಧರ್ಮದ ಪ್ರಚಾರಕರಿಗೆ ಯಾವಾಗ ಪ್ರಜ್ಞೆ ಮೂಡುವುದೊ ಗೊತ್ತಿಲ್ಲ.

❖❖

೧೪

❖

ಪುರೋಹಿತಶಾಹಿಗಳ ಶಬ್ದಜಾಲ

"ವೇದಂಗಳ ಹಿಂದೆ ಹರಿಯದಿರು,
ಶಾಸ್ತ್ರಂಗಳ ಹಿಂದೆ ಸುಳಿಯದಿರು, ಸುಳಿಯದಿರು,
ಪುರಾಣಂಗಳ ಹಿಂದೆ ಬಳಸದಿರು, ಬಳಸದಿರು,
ಆಗಮಂಗಳ ಹಿಂದೆ ತೊಳಲದಿರು, ತೊಳಲದಿರು
ಸೌರಾಷ್ಟ್ರ ಸೋಮೇಶ್ವರನ ಕೈವಿಡಿದು
ಶಬ್ದಜಾಲಂಗಳಿಗೆ ಬಳಲದಿರು, ಬಳಲದಿರು."

ಎಂದು ಶರಣ ಆದಯ್ಯನವರು ೧೨ನೇ ಶತಮಾನದಲ್ಲೇ ಹೇಳಿದ್ದಾರೆ. ಬಸವಣ್ಣನವರ ಲಿಂಗವಂತ ಧರ್ಮ ಸೇರುವ ಮೊದಲು ಶೈವರಾಗಿದ್ದ ಇವರು ವೇದ, ಶಾಸ್ತ್ರ, ಪುರಾಣ ಮತ್ತು ಆಗಮಗಳ ಹಿಂದೆ ಹರಿದಾಡಿ, ಸುಳಿದಾಡಿ, ತೊಳಲಿ, ಬಳಲಿ ಬಂದವರೇ ಆಗಿದ್ದಾರೆ. ಇವು 'ಶಬ್ದಜಾಲ' ಎಂದು ಸ್ವಾನುಭವದಿಂದ ಕರೆದಿದ್ದಾರೆ. ಮನುಷ್ಯರ ಮೆದುಳಿಗೆ ಶಬ್ದಗಳ ಮೂಲಕ ಜಾಲ ಬೀಸಿ ಬೌದ್ಧಿಕ ಗುಲಾಮಗಿರಿಗೆ ತಳ್ಳುವಂಥವು ಇವೆಲ್ಲ ಎಂಬುದನ್ನು ಸೂಚಿಸಿದ್ದಾರೆ.

"ವೇದದವರನೊಲ್ಲದೆ ನಮ್ಮ ಮಾದಾರ ಚೆನ್ನಯ್ಯಂಗೊಲಿದ. ಶಾಸ್ತ್ರದವರನೊಲ್ಲದೆ ನಮ್ಮ ಶಿವರಾತ್ರಿ ಸಂಕಣ್ಣಂಗೊಲಿದ, ಆಗಮದವರನೊಲ್ಲದೆ ತೆಲುಗು ಜೊಮ್ಮಯ್ಯಂಗೊಲಿದ" ಹೀಗೆ ಕೆಳಜಾತಿ, ಕೆಳವರ್ಗದವರಿಗೆ ಒಲಿದ ದೇವರು "ಹಾರುವಣ್ಣಗಳಿಗೆ ಹೇಸಿ ಕದವನಿಕ್ಕಿಕೊಂಡನು" ಎಂದು ಸೊಡ್ಡಳ ಬಾಚರಸ ಹೇಳುತ್ತಾರೆ.

"ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ, ಸಕಲ ವೇದ ಶಾಸ್ತ್ರವೆಂಬ ನೇಣ ಕಟ್ಟಿ ಹಿಡಿದು ತೂಗಿ ಜೋಗುಳವಾಡುತ್ತಾ ಇದ್ದಾಳೆ ಭ್ರಾಂತಿ ಎಂಬ ತಾಯಿ" ಎಂದು ಅಲ್ಲಮಪ್ರಭುಗಳು ವೇದಗಳು ಮತ್ತು ಮನುಸ್ಮೃತಿಯಂಥ ಶಾಸ್ತ್ರಗಳು ಹೇಗೆ ಅಜ್ಞಾನ ಮತ್ತು ಭ್ರಾಂತಿಯ ಜೊತೆಗಿವೆ ಎಂಬುದನ್ನು ಸೂಚಿಸಿದ್ದಾರೆ.

"ವೇದ ಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ? .. .. .. ಡೊಂಬನೇನು ಕಿರಿಯನೆ?" ಎಂದು ಬಸವಣ್ಣನವರು ಪ್ರಶ್ನಿಸುತ್ತ ಜನಸಾಮಾನ್ಯರ ಅನುಭವಜನ್ಯ ಜ್ಞಾನವನ್ನು ಎತ್ತಿಹಿಡಿದಿದ್ದಾರೆ. "ಏನಯ್ಯಾ ವಿಪ್ರರು ನುಡಿದಂತೆ ನಡೆಯರು" ಎಂದು ಟೀಕಿಸಿದ್ದಾರೆ. "ವಿಪ್ರರು ಕೀಳು ನೋಡಾ ಜಗವೆಲ್ಲ ಅರಿಯಲು" ಎಂದು ಸಾರಿದ್ದಾರೆ.

"ವೇದ ನಡನಡುಗಿತ್ತು ಶಾಸ್ತ್ರವಗಲಿ ಕೆಲಕ್ಕೆ ಸಾರಿದ್ದಿತ್ತಯ್ಯಾ!
ತರ್ಕ ತರ್ಕಿಸಲರಿಯದೆ ಮೂಗುವಟ್ಟೆದ್ದಿತ್ತಯ್ಯಾ!
ಆಗಮ ಹೊರತೊಲಗಿ ಅಗಲಿದ್ದಿತ್ತಯ್ಯಾ!
ನಮ್ಮ ಕೂಡಲಸಂಗಯ್ಯನು
ಮಾದಾರ ಚೆನ್ನಯ್ಯನ ಮನೆಯಲ್ಲುಂಡ ಕಾರಣ."

ಎಂದು ಬಸವಣ್ಣನವರ್ಯು ವೈದಿಕರು ಸೃಷ್ಟಿಸಿದ ಅಮಾನವೀಯ ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಟೀಕಿಸುತ್ತಾರೆ. ಮನುವಾದಿ ಸಮಾಜದ ಕಟ್ಟಕಡೆಯ ಮಾದಾರ ಜಾತಿಯಿಂದ ಬಂದ ಮಾದಾರ ಚೆನ್ನಯ್ಯನವರ ಮನೆಯಲ್ಲಿ ಬಸವಣ್ಣನವರ ದೇವರು ಉಣ್ಣುವ ಮೂಲಕ ಇಡೀ ವರ್ಣ ಮತ್ತು ಜಾತಿ ವ್ಯವಸ್ಥೆಯನ್ನು ತಿರಸ್ಕರಿಸುತ್ತಾರೆ. "ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ, ನಿಮ್ಮಿಂದಧಿಕ ಕೂಡಲಸಂಗಮದೇವಾ" ಎಂದು ಹೇಳಿದ ಬಸವಣ್ಣನವರು ವ್ಯಕ್ತಿಯೊಬ್ಬ ತನ್ನ ಘನತೆಯಿಂದ ಉನ್ನತ ಸ್ಥಾನ ಹೊಂದುವನು ಹೊರತಾಗಿ ಮೇಲ್ಜಾತಿಯಲ್ಲಿ ಜನಿಸಿದ ಮಾತ್ರಕ್ಕೆ ದೊಡ್ಡವನಾಗುವುದಿಲ್ಲ ಎಂದು ಸೂಚಿಸಿದ್ದಾರೆ.

"ಧರ್ಮಸ್ಯ ಬ್ರಾಹ್ಮಣೋ ಮೂಲಂ।
ಬ್ರಾಹ್ಮಣಃ ಸಂಭವೇನಮ್ಯೈವ ದೇವಾನುನಾಮಪಿ ದೈವತಂ।
ಪ್ರಮಾಣ ಚೈವ ಲೋಕಸ್ಯ ಬ್ರಹ್ಮಾತ್ರೈವ ಹಿ ಕರಣಂ॥

–ಮನುಸ್ಮೃತಿ (೧೧.೮೩, ೮೪)

(ಬ್ರಾಹ್ಮಣನೇ ಧರ್ಮದ ಮೂಲ. ತನ್ನ ಹುಟ್ಟಿನಿಂದಲೇ ಅವನು ದೇವತೆಗಳಿಗೂ ದೇವರಾಗಿದ್ದಾನೆ. ಅವನ ಮಾತು ಜನರಿಗೆ ಪ್ರಮಾಣೀಭೂತವಾದುದು.)

ಎಂಬ ಮನುವಾದಿಗಳ ಮಾತು ಬಸವಣ್ಣನವರ ನಿಲವಿಗೆ ತದ್ವಿರುದ್ಧವಾದುದು. ಬಸವಾದಿ ಶರಣರು ಪ್ರತಿ ಹಂತದಲ್ಲೂ ವೇದ, ಆಗಮ ಮತ್ತು ಮನುಸ್ಮೃತಿಯನ್ನು ಅಲ್ಲಗಳೆಯುತ್ತ ಅವೈದಿಕವಾದವನ್ನು ಎತ್ತಿ ಹಿಡಿದಿದ್ದಾರೆ ಎಂಬ ಸತ್ಯವನ್ನು 'ಲಿಂಗಾಯತ, ವೀರಶೈವ ಮತ್ತು ಹಿಂದು' ಒಂದೇ ಎಂದು ಸಾಧಿಸಲು ಹೆಣಗುವ ಸಂಶೋಧಕ ಮಹಾಶಯರು ಅಲ್ಲಗಳೆಯಲು ಯಾವ ಕಾಲಕ್ಕೂ ಸಾಧ್ಯವಿಲ್ಲ.

ಕೆಲವರು ಭಗವದ್ಗೀತೆಯನ್ನು ರಾಷ್ಟ್ರಗ್ರಂಥ ಮಾಡಲು ಹೊರಟಿದ್ದಾರೆ. ಬಹುಧರ್ಮೀಯ ಮತ್ತು ಬಹುಸಂಸ್ಕೃತಿಯ ದೇಶದಲ್ಲಿ ಯಾವುದೇ ಒಂದು ಧರ್ಮದ

"ಭಕ್ತಿಯ ಪಿತ್ತ ತಲೆಗೇರಿ ಕೈಲಾಸ ಬಟ್ಟೆಯ ಹತ್ತುವ ವ್ಯರ್ಥರ ಕಂಡು ಎನ್ನ ಮನ ನಾಚಿತ್ತು, ನಾಚಿತ್ತು. ಕೈಲಾಸವೆಂಬುದೇನೋ ಪೃಥ್ವಿಯ ಮೇಲೊಂದು ಮೊರಡಿ" ಎಂದು ಬಸವಣ್ಣನವರು ಕೈಲಾಸದ ಅಸ್ತಿತ್ವವನ್ನೇ ಅಲ್ಲಗಳೆದಿದ್ದಾರೆ.

"ಕೈಲಾಸವೆಂಬುದೊಂದು ಭೂಮಿಯೊಳಗಿರುವ ಹಾಳುಬೆಟ್ಟ. ಅಲ್ಲಿರುವ ಮುನಿಗಳೆಲ್ಲ ಜೀವಗಳ್ಳರು. ಅಲ್ಲಿರ್ದ ಚಂದ್ರಶೇಖರನು ಬಹು ಎಡ್ಡ' ಎಂದು ಸಿದ್ಧರಾಮೇಶ್ವರರು ಹೇಳುತ್ತಾರೆ.

"ಜಲ ದೈವವೆಂದಡೆ ಶೌಚವ ಮಾಡಲಿಲ್ಲ. ನೆಲ ದೈವವೆಂದಡೆ ಕಾಲೂರಿ ನಡೆಯಲಿಲ್ಲ." ಎಂದು ಮುಂತಾಗಿ ಮಡಿವಾಳ ಮಾಚಿದೇವರು ಹೇಳುವ ಮೂಲಕ ಪಂಚಮಹಾಭೂತಗಳ ದೈವತ್ವವನ್ನು ಅಲ್ಲಗಳೆಯುತ್ತಾರೆ.

"ಕಲ್ಲುದೇವರು ದೇವರಲ್ಲ,
ಮಣ್ಣು ದೇವರು ದೇವರಲ್ಲ
ಮರ ದೇವರು ದೇವರಲ್ಲ,
ಪಂಚಲೋಹದಲ್ಲಿ ಮಾಡಿದ ದೇವರು ದೇವರಲ್ಲ.
ಸೇತುರಾಮೇಶ್ವರ, ಗೋಕರ್ಣ, ಕಾಶಿ, ಕೇದಾರ ಮೊದಲಾಗಿ
ಅಷ್ಟಾಷಷ್ಟಿ ಕೋಟಿ ಪುಣ್ಯಕ್ಷೇತ್ರಂಗಳಲ್ಲಿಯ ದೇವರು ದೇವರಲ್ಲ.
ತನ್ನ ತಾನರಿದು ತಾನಾರೆಂದು ತಿಳದಡೆ ತಾನೇ ದೇವ ನೋಡಾ
ಅಪ್ರಮಾಣಕೂಡಲಸಂಗಮದೇವಾ."

ಎಂದು ಬಾಲಸಂಗಯ್ಯನವರು ಇತ್ತೀಚಿನ ಶತಮಾನಗಳಲ್ಲಿ ಹಿಂದೂಧರ್ಮ ಎಂದು ಕರೆಯಿಸಿಕೊಳ್ಳುವ ವೈದಿಕ ಅಥವಾ ಮನುಧರ್ಮದ ಎಲ್ಲವನ್ನೂ ಅಲ್ಲಗಳೆಯುತ್ತಾರೆ.

ತಮ್ಮದು ಸ್ವತಂತ್ರ ಧರ್ಮ ಅಥವಾ ಜೀವನವಿಧಾನ ಎಂಬುದನ್ನು ಶರಣರು ಸಹಸ್ರಾರು ವಚನಗಳಲ್ಲಿ ಸಾಬೀತುಪಡಿಸಿದ್ದಾರೆ. ಆದರೆ ಕೆಲ ಸಂಶೋಧಕರು ಸ್ವತಂತ್ರಧರ್ಮಗಳಾದ ಹಿಂದು, ವೀರಶೈವ ಮತ್ತು ಲಿಂಗಾಯತ ಧರ್ಮಗಳನ್ನು ಒಂದೆಡೆ ಕಟ್ಟಿಹಾಕಲು ಶತಪ್ರಯತ್ನ ಮಾಡುತ್ತಿದ್ದಾರೆ.

ವರ್ಣ, ಕುಲ, ಮತ, ಜಾತಿ ಮತ್ತು ಉಪಜಾತಿಗಳಲ್ಲೇ ಉಸಿರಾಡುವ ಜನರನ್ನು ಒಟ್ಟಾರೆಯಾಗಿ 'ಹಿಂದು' ಎಂದು ಕರೆಯುವ ಮೂಲಕ ಪಟ್ಟಭದ್ರ ಹಿತಾಸಕ್ತಿಗಳು ತಮ್ಮ ಸ್ವಾರ್ಥಸಾಧಿಸುವಲ್ಲಿ ಶತಮಾನಗಳಿಂದ ಯಶಸ್ಸನ್ನು ಗಳಿಸಿವೆ. ಹಬ್ಬ ಹರಿದಿನಗಳು ಮತ್ತು ಇತರೆ ಸಾಂಪ್ರದಾಯಿಕ ಸಂಬಂಧಗಳು ಇವನ್ನು ಒಂದುಗೂಡಿಸಿರುವುದರಿಂದ 'ಹಿಂದು' ಎಂಬ ಒಂದೇ ಒಂದು ಶಬ್ದಜಾಲದಲ್ಲಿ ಇವರೆನ್ನೆಲ್ಲ ಹಿಡಿದಿಡುವಲ್ಲಿ ಶೋಷಕ ಶಕ್ತಿಗಳು ಸಫಲವಾಗಿವೆ. ಬ್ರಾಹ್ಮಣರಲ್ಲಿನ ತ್ರಿಮಸ್ಥರೇ ಒಂದಾಗಿ ಇರಲು

ಸಾಧ್ಯವಿಲ್ಲ. ದ್ವೈತ, ಅದ್ವೈತ ಮತ್ತು ವಿಶಿಷ್ಟಾದ್ವೈತ ಮತಗಳ ಮಧ್ಯದ ಜಿಜ್ಞಾಸೆ ಶತಮಾನಗಳಿಂದ ಮುಂದುವರಿಯುತ್ತಲೇ ಇದೆ. ಈ ತ್ರಿಮತಗಳ ನಿಲವು ಭಿನ್ನ ವಿಭಿನ್ನವಾಗಿವೆ. ಇನ್ನು ಉಳಿದ ಸಹಸ್ರಾರು ಜಾತಿ ಉಪಜಾತಿಗಳಲ್ಲಿನ ವೈರುಧ್ಯಗಳು ಜನಜೀವನದ ಮಧ್ಯೆ ಭಾರಿ ಕಂದರಗಳನ್ನೇ ಉಂಟುಮಾಡಿವೆ. ದಲಿತರು, ಹಿಂದುಳಿದವರು ಮತ್ತು ಇತರೆ ಹಿಂದುಳಿದವರು ದಿನನಿತ್ಯ ಸಂಪ್ರದಾಯಗಳ ದೈಹಿಕ ಮತ್ತು ಮಾನಸಿಕ ಹಿಂಸೆಗೆ ಬಲಿಯಾಗುತ್ತಲೇ ಇರುತ್ತಾರೆ. ಇಂಥ ಅನಿಷ್ಟಗಳ ಕಡೆಗೆ ಗಮನ ಹರಿಸಿ ಸಮಾನತೆಯ ಬದುಕನ್ನು ಸಾಧಿಸುವುದಕ್ಕಾಗಿ ಬದುಕನ್ನು ಸವೆಸದೆ ಅಸತ್ಯವನ್ನು ಸತ್ಯ ಎಂದು ಹೇಳುವುದಕ್ಕೇ ಬದುಕನ್ನು ಮುಡಿಪಾಗಿಡುವುದು ಅಸಹ್ಯಕರವಾದುದು.

ಆದರೆ ಈ ಎಲ್ಲ ವೈರುಧ್ಯಗಳನ್ನು ತಿರಸ್ಕರಿಸುವ 'ಲಿಂಗಾಯತ' ಎಂಬ ಸರ್ವಸಮತ್ವದಿಂದ ಕೂಡಿದ ಹೊಸ ಜೀವನವಿಧಾನದ ಧರ್ಮವನ್ನು ಸ್ಥಾಪಿಸಲು ಬಸವಾದಿ ಶರಣರು ತಮ್ಮ ಇಡೀ ಬದುಕನ್ನು ಸವೆಸಿದರು. ಈ ಮಾನವಧರ್ಮದ ನಿಜಸ್ವರೂಪವನ್ನು ಉಳಿಸಿಕೊಳ್ಳುವುದಕ್ಕಾಗಿ ಶ್ರಮಿಸುವುದು ಪ್ರತಿಯೊಬ್ಬ ಮಾನವತಾವಾದಿಯ ಆದ್ಯ ಕರ್ತವ್ಯವಾಗಿದೆ. ಹಿಂದೂಧರ್ಮದ ಹೆಸರಿನಲ್ಲಿ ತಲೆಯೆತ್ತುತ್ತಿರುವ ಕೋಮುವಾದಿಗಳು ಮತ್ತು ಇಸ್ಲಾಂಧರ್ಮದ ಹೆಸರಿನಲ್ಲಿ ತಲೆಯೆತ್ತುತ್ತಿರುವ ಮೂಲಭೂತವಾದಿಗಳು ಹೆಚ್ಚಿದಂತೆಲ್ಲ ಶರಣ ಮತ್ತು ಸೂಫಿ ಸಿದ್ಧಾಂತಗಳಿಗೆ ಗಂಡಾಂತರ ಬಂದೊದಗುವುದರಲ್ಲಿ ಸಂಶಯವಿಲ್ಲ.

ಸೂಫಿ, ಶರಣ, ದಾಸ ಮತ್ತು ಸಂತರ ಭಕ್ತಿಪಂಥ ಆಂತರ್ಯದಲ್ಲಿ ಅತ್ಯಂತ ಕ್ರಾಂತಿಕಾರಿಯಾಗಿದೆ. ಭಕ್ತಿಪಂಥ ಚಳವಳಿಯಿಂದಾಗಿಯೆ ಇಲ್ಲಿಯವರೆಗೆ ದೇಶ, ಕೋಮುವಾದಿಗಳು ಮತ್ತು ಮೂಲಭೂತವಾದಿಗಳ ಹಿಡಿತಕ್ಕೆ ಸಿಗದೆ ಹೋಗಿದೆ. ಲೋಕಾಯತರು, ಬುದ್ಧ ಮತ್ತು ಭಕ್ತಿ ಚಳವಳಿಗಳು ರಕ್ಷಿಸಿದ ಭಾರತವನ್ನು ಕೋಮುವಾದಿ, ಮೂಲಭೂತವಾದಿ ಮತ್ತು ಉಗ್ರಗಾಮಿ ಶಕ್ತಿಗಳ ಹಿಡಿತಕ್ಕೆ ಸಿಗದಂತೆ ನೋಡಿಕೊಳ್ಳುವುದು ಪ್ರತಿಯೊಬ್ಬ ಪ್ರಜ್ಞಾವಂತರ ಆದ್ಯ ಕರ್ತವ್ಯವಾಗಿದೆ. ಅದಕ್ಕಾಗಿ ಸೂಫಿ, ಶರಣ, ದಾಸ, ಸಂತ ಮತ್ತು ತತ್ತ್ವಪದಕಾರರ ಸಾಹಿತ್ಯದಿಂದ ಸ್ಫೂರ್ತಿ ಪಡೆಯುವುದು ಅವಶ್ಯವಾಗಿದೆ.

❖❖

೧೫

❖

ಸಮಗ್ರ ಕ್ರಾಂತಿಗೆ ಕರೆ ನೀಡುವ ಇಷ್ಟಲಿಂಗ

ಎಡದ ಕೈಯಲಿ ಕತ್ತಿ, ಬಲದ ಕೈಯಲಿ ಮಾಂಸ,
ಬಾಯಲಿ ಸುರೆಯ ಗಡಿಗೆ, ಕೊರಳಲಿ ದೇವರಿರಲು
ಅವರ ಲಿಂಗನೆಂಬೆ, ಸಂಗನೆಂಬೆ,
ಕೂಡಲಸಂಗಮದೇವಾ, ಅವರ ಮುಖಲಿಂಗಿಗಳೆಂಬೆನು.

–ಬಸವಣ್ಣ

ಆರ್ಥಿಕ ಮತ್ತು ಪಾರಮಾರ್ಥಿಕ ಸಮಾನತೆಯ ಸಮಾಜದ ನಿರ್ಮಾಣಕ್ಕೆ ಬಸವಣ್ಣನವರು ಇಡೀ ಬದುಕನ್ನೇ ಮುಡಿಪಾಗಿಟ್ಟರು. ಈ ನವಸಮಾಜ ನಿರ್ಮಾಣಕ್ಕಾಗಿ ಬಸವಣ್ಣನವರು ಒಳ್ಳೆಯವರನ್ನು ಸ್ವರ್ಗದಿಂದ ತರುವ ಕನಸು ಕಾಣಲಿಲ್ಲ. ದೇವರೇ ಬಂದು ಎಲ್ಲವನ್ನೂ ಸರಿಪಡಿಸಬೇಕೆಂದು ಪ್ರಾರ್ಥಿಸಲಿಲ್ಲ. ಒಳ್ಳೆಯವರನ್ನು ಈ ಭೂಮಿಯ ಮೇಲೆಯೆ ರೂಪಿಸಬೇಕೆಂಬುದು ಬಸವಣ್ಣನವರ ಆಶಯವಾಗಿದೆ.

ಮಾನವನ ಒಳಗೂ ಹೊರಗೂ ಮಾನವೀಯ ಪರಿಸರ ನಿರ್ಮಾಣ ಮಾಡಿದಾಗ ಎಂಥವರೂ ಒಳ್ಳೆಯವರಾಗುತ್ತಾರೆ. ಕೆಟ್ಟ ಮನುಷ್ಯರು ಹುಟ್ಟಿನಿಂದಲೇ ಕೆಟ್ಟವರಾಗಿರುವುದಿಲ್ಲ. ಅವರಿಗೆ ಲಭ್ಯವಾಗುವ ಅನಾಗರಿಕ ವಾತಾವರಣ ಮತ್ತು ಅದರಿಂದ ರೂಪುಗೊಳ್ಳುವ ಅಸಭ್ಯ ಮನಸ್ಸಿನ ಕಾರಣ ಅವರು ಹಾಗೆ ವರ್ತಿಸುತ್ತಿರುತ್ತಾರೆ. ಮನುಷ್ಯರ ಒಳಗನ್ನು ಸ್ವಚ್ಛಗೊಳಿಸುವುದರ ಜೊತೆಗೆ ಹೊರಗಿನ ಸಮಾಜವನ್ನೂ ಸ್ವಚ್ಛಗೊಳಿಸುವುದು ಈ ಶರಣರ ಪ್ರಮುಖ ಕಾಯಕವಾಗಿದೆ. ಚಾಕು ಚೂರಿ ಹಿಡಿದುಕೊಂಡು ಮಾಂಸ ತಿನ್ನುತ್ತ ಮತ್ತು ರಸ್ತೆಯ ಮೇಲೆಯೆ ಸಾರಾಯಿ ಕುಡಿಯುತ್ತ ಬರುವವರ ವಿಕೃತ ದೃಶ್ಯವನ್ನು ನೆನೆಪಿಸಿಕೊಳ್ಳಲೂ ಹೇಸಿಕೆ ಎನಿಸುತ್ತದೆ. ಆದರೆ ದಾರಿ ತಪ್ಪಿದವರನ್ನು ಸನ್ಮಾರ್ಗಕ್ಕೆ ತರಲೇಬೇಕು ಎಂಬ ದೃಢನಿರ್ಧಾರದವನ್ನು ಬಸವಣ್ಣನವರು ಹೊಂದಿದ್ದರು. ಒಳ್ಳೆಯ ಸಮಾಜ ನಿರ್ಮಾಣ

ಮಾಡಲು ಒಳ್ಳೆಯವರು ಬೇಕು. ಅಂಥ ಒಳ್ಳೆಯ ಸಮಾಜವೇ ಒಳ್ಳೆಯವರನ್ನು ರೂಪಿಸುತ್ತದೆ ಎಂಬುದನ್ನು ಬಸವಣ್ಣನವರು ಜಗತ್ತಿಗೆ ತೋರಿಸಿಕೊಟ್ಟರು. ಅವರು ಶರಣರೆಂಬ ಮಹೋನ್ನತ ವ್ಯಕ್ತಿಗಳನ್ನು ಜನಸಾಮಾನ್ಯರೊಳಗೆ ಗುರುತಿಸಿದರು. ಅಂಥ ಮಹಾನುಭಾವಿಗಳೊಂದಿಗೆ ಕಾಯಕಜೀವಿಗಳನ್ನು ಒಂದುಗೂಡಿಸಿದರು. ಅವರೆಲ್ಲರಿಗೆ ಸರ್ವಸಮತ್ವದ ಲಿಂಗತತ್ತ್ವದ ಮಹತ್ವವನ್ನು ಅರುಹಿದರು. ಆ ಮೂಲಕ ಶರಣ ಸಂಕುಲವೆಂಬ ಮಹೋನ್ನತ ಸಮಾಜವನ್ನು ಸೃಷ್ಟಿಸಿ ತೋರಿಸಿದರು. ಅಂತೆಯೆ ಬಸವಣ್ಣನವರಿಗೆ 'ಲಿಂಗಾನುಭಾವಿಗಳ ಮಧ್ಯೆ ಎಂಥವರೂ ಒಳ್ಳೆಯವರಾಗುತ್ತಾರೆ' ಎಂಬುದರ ಬಗ್ಗೆ ಎಲ್ಲಿಲ್ಲದ ಆತ್ಮವಿಶ್ವಾಸವಿದೆ.

ಇಷ್ಟಲಿಂಗವು ಪರಿವರ್ತನೆಯ ಲಾಂಛನ ಎಂಬ ಅವರ ನಂಬಿಕೆ ಅನನ್ಯವಾದುದು. ವ್ಯಕ್ತಿಯೊಬ್ಬ ಎಷ್ಟೇ ಅಧೋಗತಿಗೆ ಇಳಿದರೂ ಇಷ್ಟಲಿಂಗದ ಜೊತೆ ಶರಣಸಂಕುಲದಲ್ಲಿ ಬದಲಾಗುತ್ತಾನೆ ಎಂಬುದನ್ನು ಅವರು ಸಾಧಿಸಿ ತೋರಿಸಿದರು. ತಾವು ಕಂಡುಹಿಡಿದ ಸರ್ವಸಮತ್ವ ಸಾರುವ ಇಷ್ಟಲಿಂಗತತ್ತ್ವದ ಬಗ್ಗೆ ಮತ್ತು ಜನರು ಬದಲಾಗುತ್ತಾರೆ ಎಂಬ ಸತ್ಯದ ಬಗ್ಗೆ ಅವರಿಗೆ ಎಂದೂ ಸಂಶಯ ಬರಲಿಲ್ಲ. ಆ ಕಾರಣದಿಂದಲೇ ಅವರು ಜಿಗುಪ್ಸೆ ಹುಟ್ಟಿಸುವಂಥ ಜನರ ಕೊರಳಿಗೂ ಇಷ್ಟಲಿಂಗ ಕಟ್ಟಲು ಮುಂದಾದರು. ಅಷ್ಟೇ ಅಲ್ಲ ಅವರಿಗೆ ಸಾಕ್ಷಾತ್ ಕೂಡಲಸಂಗಮದೇವ ಎಂದರು. ಅವರನ್ನು ಮಾತನಾಡುವ ದೇವರುಗಳೆಂದು ಹೇಳಿದರು. ಈ 'ಮಾತನಾಡುವ ದೇವರುಗಳು' ಬಸವಣ್ಣನವರ ಜೀವನಪ್ರೇಮವನ್ನು ಕಂಡು ದಂಗಾಗಿ ಬದಲಾಗುವುದರಲ್ಲಿ ಸಂಶಯವಿಲ್ಲ.

ಬಸವಣ್ಣನವರಂಥ ಮಹಾಮಹಿಮರು ಇಷ್ಟೊಂದು ವಿಶ್ವಾಸವಿಟ್ಟು ಗೌರವ ತೋರಿಸುತ್ತಿರುವಾಗ ಮತ್ತು ಶರಣರು ಆದರ್ಶ ಸಮಾಜ ನಿರ್ಮಿಸುತ್ತಿರುವಾಗ ಆ ಸಮಾಜದಲ್ಲಿ ಘನತೆಯಿಂದ ಬದುಕುವುದಕ್ಕಿಂತ ಹೆಚ್ಚಿನ ಆನಂದವಿಲ್ಲ ಎಂಬುದರ ಅರಿವು ಆ ದಾರಿತಪ್ಪಿದ ಜನರಿಗೆ ಬಾರದೆ ಇರದು.

ಮನುವಾದಿಗಳ ಹಳೆಯ ಸಮಾಜದಲ್ಲಿ ಎಲ್ಲ ಘನತೆ ಗೌರವಗಳನ್ನು ಕಳೆದುಕೊಂಡು ಹೀಗೆ ಹೀನಸ್ಥಿತಿಗೆ ಇಳಿಸಲ್ಪಟ್ಟ ಅವರು, ಶರಣರ ಹೊಸ ಸಮಾಜದಲ್ಲಿ ಹೊಸ ಬದುಕನ್ನು ಪಡೆದು ಶಿವಸ್ವರೂಪಿಗಳಾಗಿ ಬದುಕುವುದನ್ನು ಅದು ಹೇಗೆ ನಿರಾಕರಿಸುತ್ತಾರೆ? ಇದೇ ಬಸವಣ್ಣನವರ ಮಹಾಸಾಧನೆ.

ಅನಿಷ್ಟಗಳನ್ನು ಹೊಡೆದೋಡಿಸುವ ಪರಿಕಲ್ಪನೆಯ ಇಷ್ಟಲಿಂಗವು ಶರಣಸಂಕುಲವೆಂಬ ನವಸಮಾಜ ನಿರ್ಮಿಸುವ ಮಹತ್ಕಾರ್ಯಕ್ಕೆ ಪ್ರೇರಕವಾಗುತ್ತದೆ. ಈ ವಾತಾವರಣ ವ್ಯಕ್ತಿಯ ಮೇಲೆ ಪರಿಣಾಮ ಬೀರುತ್ತದೆ. ಒಬ್ಬ ವ್ಯಕ್ತಿ ತನ್ನನ್ನು ತಾನು ಅರಿತುಕೊಳ್ಳಲು ಸಮಾಜವು ಅವಶ್ಯವಾಗಿದೆ. ಸಾಮಾಜಿಕ ವಾತಾವರಣವು ಮಾನವನ ವ್ಯಕ್ತಿತ್ವ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಅದೇ ರೀತಿ ಘನತೆಯುಳ್ಳ ವ್ಯಕ್ತಿಗಳು ಒಳ್ಳೆಯ ಸಮಾಜ ನಿರ್ಮಾಣಕ್ಕೆ ಪ್ರೇರಕರಾಗುತ್ತಾರೆ.

ಇಷ್ಟಲಿಂಗವು ವ್ಯಕ್ತಿ ಮತ್ತು ಸಮಾಜದ ಮಧ್ಯದ ಸಂಬಂಧವನ್ನು ಆಧ್ಯಾತ್ಮಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಸೃಷ್ಟಿಸುವ ತಾತ್ತ್ವಿಕ ಸಂಕೇತವಾಗಿದೆ. ಅದು ಮನುಷ್ಯರ ಒಳಗನ್ನು ಮತ್ತು ಹೊರಗನ್ನು ಸ್ವಚ್ಛಗೊಳಿಸುವ ಮನಸ್ಥಿತಿಯನ್ನು ಸೃಷ್ಟಿಸುವ ಸಾಧನ. ಈ ರೀತಿ ಮಾನವಕುಲವನ್ನು ಒಂದಾಗಿಸುತ್ತ ಸುಂದರ ಸಮಾಜವನ್ನು ನಿರ್ಮಿಸುವ ಉದ್ದೇಶ ಶರಣರದಾಗಿತ್ತು.

ಇಂಥ ಅನುಭಾವದ ಮನಸ್ಥಿತಿಗೆ ಶರಣರು 'ಅರಿವು' ಎಂದು ಕರೆದರು. ಇಷ್ಟಲಿಂಗವೆಂಬ ಕುರುಹು ಇಂಥ ಅರಿವಿನ ಸಂಕೇತವಾಗಿದೆ ಎಂದು ಅಲ್ಲಮಪ್ರಭುಗಳು ತಮ್ಮ ವಚನದಲ್ಲಿ ತಿಳಿಸಿದ್ದಾರೆ. ಶರಣ ಸಂಕುಲದ ಪರಿಸರದಲ್ಲಿ ಮಾನವರು ಇಂಥ ಅರಿವು ಹೊಂದಿದಾಗ ಅವರಿಗೆ ಲಿಂಗಧ್ಯಾನದ ಹೊರತಾಗಿ ಮತ್ತೇನೂ ಹಿಡಿಸದು. ಅವರು ಲಿಂಗಸಾನಿಧ್ಯದಿಂದಾಗಿ ಮತ್ತು ಶರಣಸಂಕುಲದ ಕಾರಣ ಎಲ್ಲ ದೌರ್ಬಲ್ಯಗಳಿಂದ ಮುಕ್ತರಾಗುವರು ಎಂಬ ಅಚಲವಾದ ನಂಬಿಕೆ ಬಸವಣ್ಣನವರಿಗೆ ಇದ್ದುದರಿಂದಲೇ ಇಂಥ ಆತ್ಮವಿಶ್ವಾಸದ ವಚನ ಬರೆಯಲು ಸಾಧ್ಯವಾಯಿತು.

ಈ ವಚನದಲ್ಲಿ ಬರುವ ಕತ್ತಿ, ಮಾಂಸ ಮತ್ತು ಮದ್ಯ ಒಬ್ಬ ವ್ಯಕ್ತಿಯ ಹೀನಾಯ ಸ್ಥಿತಿಯನ್ನು ಸೂಚಿಸುತ್ತವೆ. ಆತ ತನ್ನ ಈ ಇರುವಿಕೆಯ ಬಗ್ಗೆ ಯಾವುದೇ ರೀತಿಯ ಪಶ್ಚಾತ್ತಾಪ ಪಡುವುದಿಲ್ಲ ಎಂಬುದನ್ನೂ ಈ ವಚನ ಸೂಚಿಸುತ್ತದೆ. ಆದರೆ ಆ ವ್ಯಕ್ತಿಯ ಬಗ್ಗೆ ಬಸವಣ್ಣನವರಿಗೆ ಇರುವ ಒಂದೇ ಒಂದು ಆಶಾಭಾವವೆಂದರೆ ಆತನ ಕೊರಳಲ್ಲಿ ಎಲ್ಲ ಅನಿಷ್ಟಗಳಿಗೆ ತದ್ವಿರುದ್ಧವಾದ ಇಷ್ಟಲಿಂಗವಿದೆ. ಇಷ್ಟಲಿಂಗವಂತೂ ಅವನ ಹಾಗೆ ಆಗುವುದಿಲ್ಲ. ಆದರೆ ಆತ ಇಷ್ಟಲಿಂಗದ ಹಾಗೆ ಆಗುವದರಲ್ಲಿ ಅಂದರೆ ಕಾಯಕ, ಪ್ರಸಾದ ಮತ್ತು ದಾಸೋಹ ಪ್ರಜ್ಞೆಯಿಂದ ಕೂಡಿದ ಘನತೆವೆತ್ತ ಬದುಕನ್ನು ಪಡೆಯುವುದರಲ್ಲಿ ಬಸವಣ್ಣನವರಿಗೆ ನಂಬಿಕೆ ಇದೆ. ಮನುವಾದಿ ಸಮಾಜದಲ್ಲಿ ಅಧೋಗತಿಗೆ ಇಳಿಸಲ್ಪಟ್ಟ ಆತ ಬಸವವಾದಿ ಸಮಾಜದಲ್ಲಿ ಇಷ್ಟಲಿಂಗಧಾರಿ ಆಗಿರುವುದರಿಂದ ಸಹಜವಾಗಿಯೇ ಶರಣಸಂಕುಲದ ಭಾಗವಾಗಿದ್ದಾನೆ. ಶರಣಸಂಕುಲದ ಒಡನಾಟದಲ್ಲಿರುವ ಆತನ ಮೇಲೆ ಅಲ್ಲಿನ ಸಾತ್ವಿಕ ಬದುಕಿನ ವಾತಾವರಣ ಪರಿಣಾಮ ಬೀರದೆ ಇರದು. ಶರಣಸಂಕುಲದ ಒಡನಾಟ ಮತ್ತು ಇಷ್ಟಲಿಂಗದ ಸಂಬಂಧದಲ್ಲಿ ಆತನಿಗೆ ಅರಿವು ಮೂಡುವುದರಲ್ಲಿ ಸಂಶಯವಿಲ್ಲ. ಆ ಅರಿವು ಗುರುವಾಗುವುದು. ನಂತರ ಆ ಗುರುವೇ ದೇವರಾಗುವುದು. ಹೀಗೆ ಮನುವಾದಿ ಸಮಾಜದಲ್ಲಿ ಅಸಹ್ಯ ಬದುಕನ್ನು ಬದುಕುತ್ತಿರುವವರಿಗಾಗಿ ಕೂಡ ಬಸವಣ್ಣನವರು ಇಂಥ ಪವಿತ್ರ ಬದುಕಿನ ಮಾರ್ಗ ಕಂಡುಹಿಡಿದರು. ಅರಿವುಂಟಾದಾಗ ಇಂಥವರೂ ದೇವಸ್ವರೂಪರೇ ಆಗುವರು.

ಮಂದಿರಕ್ಕೆ ಪ್ರವೇಶ ಸಿಗದ ಶೂದ್ರರು, ಅಸ್ಪೃಶ್ಯರು ಮತ್ತು ಮಂದಿರ ಸಂಸ್ಕೃತಿಯನ್ನು ನಿರಾಕರಿಸಿ ಬಸವತತ್ತ್ವವನ್ನು ಎತ್ತಿಹಿಡಿದ ಸವರ್ಣೀಯರೇ ಎದೆಯ ಮೇಲೆ ಇಷ್ಟಲಿಂಗವುಳ್ಳವರ ಪೂರ್ವಜರು.

ಈ ರೀತಿಯಲ್ಲಿ ಬಸವಣ್ಣನವರು ಸಮಾಜದ ಕೆಳಸ್ತರದ ಜನರನ್ನು ಮತ್ತು ಮೇಲ್ ಸ್ತರದ ಪ್ರಜ್ಞಾವಂತರನ್ನು ಒಂದುಗೂಡಿಸಿದರು ಮತ್ತು ಅವರಿಗಾಗಿ ಹೊಸ ಸಮಾಜವೊಂದನ್ನು ಸೃಷ್ಟಿಸಿದರು. ಮನುವಾದಿ ಸಮಾಜದಲ್ಲಿ ಯಾರನ್ನು ತಮ್ಮ ಸಾಕುಪ್ರಾಣಿಗಳಿಗಿಂತ ಕೀಳು ಎಂದು ಭಾವಿಸಲಾಗುತ್ತಿತ್ತೋ ಮತ್ತು ನಿಷ್ಕರುಣೆಯಿಂದ ನೋಡಲಾಗುತ್ತಿತ್ತೋ ಅಂಥವರಿಗಾಗಿ ಬಸವಣ್ಣನವರು ದಯೆಯ ವಾತಾವರಣ ಸೃಷ್ಟಿಸಿ ಅವರಲ್ಲಿ ಅಗಾಧವಾದ ಪರಿವರ್ತನೆಯಾಗುವಂತೆ ನೋಡಿಕೊಂಡರು. ಹೀಗೆ ನಿಜಮನುಷ್ಯರಾಗ ಬಯಸಿದ ಎಲ್ಲರನ್ನೂ ಸೇರಿಸಿ ಶರಣಸಂಕುಲವನ್ನು ಸ್ಥಾಪಿಸಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ.

ಬಸವಣ್ಣನವರ ಇಂಥ ನವಸಮಾಜದ ಪರಿಕಲ್ಪನೆಯಿಂದಾಗಿ ನಾಡಿನ ವಿವಿಧ ಸ್ತರಗಳ ಜನಸಮಾನ್ಯರು ಸ್ವಾಭಿಮಾನದಿಂದ ದುಡಿದು ಬದುಕುವುದನ್ನು ಕಲಿತರು. ತಮ್ಮ ಕಾಯಕದೊಂದಿಗೆ ತತ್ತ್ವಚಿಂತನೆಯಲ್ಲಿ ತೊಡಗಿದರು. ಲೋಕಕ್ಕೆ ಮಾದರಿಯಾದರು.

ಇಷ್ಟಲಿಂಗವು ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಧಾರ್ಮಿಕ, ಸ್ತ್ರೀ ಮತ್ತು ಪುರುಷ ಸಮಾನತೆಯನ್ನು ಮನದಲ್ಲಿ ತುಂಬುವ ಅರಿವಿನ ಬೆಳಕಾಗಿದೆ. ಇಷ್ಟಲಿಂಗವನ್ನು ಧರಿಸುವವರು ಜಾತಿಭೇದ, ಲಿಂಗಭೇದ, ವರ್ಣಭೇದ, ವರ್ಗಭೇದ ಮತ್ತು ಕಾಯಕಭೇದಗಳನ್ನು ಮಾಡುವ ಹಾಗಿಲ್ಲ. ಲಿಂಗವಂತರಲ್ಲಿ ಒಳಪಂಗಡಗಳನ್ನು ಎತ್ತಿಕಟ್ಟುವಂತಿಲ್ಲ. ಒಳಪಂಗಡಗಳಲ್ಲಿನ ಮೇಲುಕೀಳುಗಳನ್ನು ಪರಿಗಣಿಸುವಂತಿಲ್ಲ. ಇಷ್ಟಲಿಂಗ ದೀಕ್ಷೆಯನ್ನು ತೆಗೆದುಕೊಂಡವರ ಮೂಲವನ್ನು ಹುಡುಕುವಮಂತಿಲ್ಲ. ಅವರು ದಾಸೀಪುತ್ರರಾದರೂ ಸರಿಯೆ, ವೇಶ್ಯಾಪುತ್ರರಾದರೂ ಸರಿಯೆ. ಲಿಂಗವಂತರಾದವರಾದವರೆಲ್ಲ ಶಿವಸ್ವರೂಪಿಗಳೇ ಆಗಿರುತ್ತಾರೆ ಎಂಬ ದೃಢ ನಿಲವನ್ನು ಮಹಾತ್ಮಾ ಬಸವೇಶ್ವರರು ಹೊಂದಿದ್ದರು.

ಇಷ್ಟಲಿಂಗಧಾರಿಗಳು ಸ್ಥಾವರಲಿಂಗವನ್ನು ಅಥವಾ ಅದರ ಕಿರಿಯ ಸ್ವರೂಪವಾದ ಚರಲಿಂಗವನ್ನು ಪೂಜಿಸುವಂತಿಲ್ಲ. ತಮ್ಮಲ್ಲೇ ದೇವರಿರುವ ಕಾರಣ ಯಾವುದೇ ಗುಡಿ ಗುಂಡಾರಗಳಿಗೆ ಹೋಗುವಂತಿಲ್ಲ. ಗುಡಿಗಳ ಶೋಷಣೆಗೆ ಬಲಿಯಾಗುವಂತಿಲ್ಲ.

ಮಂದಿರಗಳಿಗೆ ಹೋಗುವವರು ಮತ್ತು ಮೂರ್ತಿ ಪೂಜೆ ಮಾಡುವವರು ತಮಗರಿಯದಂತೆಯೆ ವೈದಿಕದ ಕಡೆಗೆ ಜಾರಿರುತ್ತಾರೆ. ನಮ್ಮ ಅರಿವಿಗೆ ಮತ್ತು ಸೃಷ್ಟಿಗೆ ಮೂಲವಾದ ಪರವಸ್ತುವಿನ ಕುರುಹು ಆದ ಇಷ್ಟಲಿಂಗದ ಯೌಗಿಕ ಮಹತ್ವವನ್ನು

ಅರಿಯದೆ ಪೂಜಿಸುವವರು ಉಣ್ಣದ ಲಿಂಗಕ್ಕೆ ನೈವೇದ್ಯ ಹಿಡಿದಂತಾಗುತ್ತದೆ. ಆ ಮೂಲಕ ಮತ್ತೆ ವೈದಿಕದ ಕಡೆಗೇ ಹೋದಂತಾಗುತ್ತದೆ.

ಇಷ್ಟಲಿಂಗವು ಸಂಪೂರ್ಣವಾಗಿ ಅವೈದಿಕ ಪೂಜೆಯಾಗಿದೆ. ಅಂದರೆ ಅದು ಶಿವಯೋಗ, ಶಿವಧ್ಯಾನ ಮತ್ತು ನಿತ್ಯಲಿಂಗೈಕ್ಯಸ್ಥಿತಿಯನ್ನೇ ಹೊಂದುವ ಶಿವತಪಸ್ಸಾಗಿದೆ. ಶರಣರ ಶಿವ, ಸತ್ಯ ಮತ್ತು ಸೌಂದರ್ಯದಿಂದ ಕೂಡಿದ ಮಂಗಳಮಯ ಪರಮಾತ್ಮನಾಗಿದ್ದಾನೆ. ಅನಿಷ್ಟವನ್ನು ಕೊನೆಗಾಣಿಸುವ 'ಇಷ್ಟ'ವಾಗಿದ್ದಾನೆ. ಈ ಶಿವನಿಗೆ ಹೆಂಡಿರು ಮಕ್ಕಳಿಲ್ಲ. ಶೈವ ಬ್ರಾಹ್ಮಣರು, ಜಾತಿಜಂಗಮರು ಮತ್ತು ಬಸವಣ್ಣನವರನ್ನು ಧರ್ಮಗುರು ಎಂದು ಒಪ್ಪಿಕೊಳ್ಳದ ಪಂಚಾಚಾರ್ಯರು, ವೀರಶೈವ ಹಾಗೂ ಲಿಂಗಾಯುತರು ಎಂದು ಕರೆಯಿಸಿಕೊಳ್ಳುವ ಅನೇಕರು ಪೂಜಿಸುವ ಸ್ಥಾವರಲಿಂಗವಾಗಲೀ ಶಿವಮೂರ್ತಿಯಾಗಲೀ ಶರಣರು ಧ್ಯಾನಿಸುವ ಶಿವನಲ್ಲ. ಇಷ್ಟಲಿಂಗದೇವನೇ ಶರಣರ ಶಿವ. ಪೂಜಿಸುವ ಇಷ್ಟಲಿಂಗಕ್ಕೆ ಮೂಲಾಧಾರ ವಾಗಿರುವವನೇ ಇಷ್ಟಲಿಂಗದೇವ. ಸರ್ವ ಶರಣರ ವಚನಾಂಕಿತಗಳ ಮೂಲ ಸ್ವರೂಪನೇ ಇಷ್ಟಲಿಂಗದೇವ. ನಮ್ಮ ಒಳ ಮತ್ತು ಹೊರಜಗತ್ತುಗಳನ್ನು ರೂಪಿಸಿದವನೇ ಇಷ್ಟಲಿಂಗದೇವ. 'ದೇವನೊಬ್ಬ ನಾಮ ಹಲವು' ಎಂದು ಬಸವಣ್ಣನವರು ಹೇಳುವಂತೆ ಈ ನಿರಾಕಾರ ಮತ್ತು ನಿರ್ಗುಣನಾದ ದೇವನಿಗೆ ವಿವಿಧ ಧರ್ಮಗಳವರು ವಿವಿಧ ಹೆಸರುಗಳಿಂದ ಕರೆದು ವಿವಿಧ ರೀತಿಯಲ್ಲಿ ಆರಾಧನೆ ಮಾಡುತ್ತಾರೆ. ಅನೇಕರು ತಾವು ಪೂಜಿಸುವ ಕಲ್ಲು, ಕಾಷ್ಠ ಮತ್ತು ಲೋಹಗಳ ದೇವರನ್ನೇ ಸುಲಿಗೆಯ ಸಾಧನ ಮಾಡಿಕೊಂಡಿದ್ದಾರೆ. ಈ ಅನೀತಿಯನ್ನು ತಪ್ಪಿಸುವ ಮೂಲಕ ಜನರನ್ನು ದೇವರೊಡನೆ ಒಂದಾಗಿಸುವ ಘನ ಉದ್ದೇಶದಿಂದಲ್ಲೇ ಬಸವಣ್ಣನವರು ಮಂದಿರಗಳನ್ನು ತಿರಸ್ಕರಿಸಿ ಮತ್ತು ಮೂರ್ತಿ ಪೂಜೆಯನ್ನು ನಿಷೇಧಿಸಿ ಇಷ್ಟಲಿಂಗ ಪೂಜೆಯನ್ನು ಜಾರಿಗೊಳಿಸಿದರು.

ಇಷ್ಟಲಿಂಗ ಪೂಜೆಯು ಹೊರಗಿನ ಮೂರ್ತಿಗಳಿಗೆ ಮಾಡುವ ಪೂಜೆಯಲ್ಲ. ತಮ್ಮನ್ನು ತಾವು ಪೂಜೆ ಮಾಡಿಕೊಳ್ಳುವುದೂ ಅಲ್ಲ. ಆದರೆ ತಮ್ಮೊಳಗಿನ ತೋರಬಾರದ ಘನಕ್ಕೆ ಮಾಡುವ ಪೂಜೆಯೇ ಇಷ್ಟಲಿಂಗ ಪೂಜೆ. ಹೀಗೆ ಒಳಜಗತ್ತನ್ನು ಅರಿತುಕೊಳ್ಳುವ ಕ್ರಮ ಇದಾಗಿದೆ. ಹಾಗೆ ಅರಿತುಕೊಂಡ ಮೇಲೆ ಕಾಯಕ, ಪ್ರಸಾದ ಮತ್ತು ದಾಸೋಹ ತತ್ತ್ವದ ಮೂಲಕ ಹೊರಜಗತ್ತಿನಲ್ಲಿ ಸಮಾನತೆಯನ್ನು ತರುವುದಾಗಿದೆ.

'ಅರಿವಿನ ಮನೆ' ಮತ್ತು 'ಮಹಾಮನೆ' ಎಂಬುವು ಬಸವಕಲ್ಯಾಣದಲ್ಲಿ ಸಾಂಕೇತಿಕವಾಗಿ ಇದ್ದವು. ಆದರೆ ತಾತ್ತ್ವಿಕವಾಗಿ ನೋಡಿದಾಗ ಅರಿವಿನ ಮನೆ ಎಂಬುದು ನಮ್ಮ ಒಳಜಗತ್ತನ್ನು ಮತ್ತು 'ಮಹಾಮನೆ' ಎಂಬುದು ನಮ್ಮ ಹೊರಗಿನ ಜಗತ್ತನ್ನು ಸೂಚಿಸುವ ಪದಗಳಾಗಿವೆ. ಅರಿವಿನ ಮನೆಯಲ್ಲಿ ಇಷ್ಟಲಿಂಗ ಪೂಜೆ

ನಡೆಯಬೇಕು. ಅಂದರೆ ಇಷ್ಟಲಿಂಗದ ಮೂಲಕ ನಮ್ಮ ಒಳಗಿನ ಅರಿವು-ಅಂತಃಸಾಕ್ಷಿ ಎಂಬ ಘನದ ಪೂಜೆ ಮಾಡಬೇಕು. ಸೃಷ್ಟಿಕರ್ತನ ಸೃಷ್ಟಿಯೇ ಆಗಿರುವ ವಿಶ್ವವೆಂಬ 'ಮಹಾಮನೆ'ಯಲ್ಲಿ ಕಾಯಕ, ಪ್ರಸಾದ ಮತ್ತು ದಾಸೋಹ ಪ್ರಜ್ಞೆಯೊಂದಿಗೆ ಸಮಾಜವೆಂಬ ಜಂಗಮಲಿಂಗದ ಪೂಜೆ ಮಾಡಬೇಕು. ಅಂದರೆ ಸರ್ವಸಮತ್ವದ ಸಮಾಜ ನಿರ್ಮಾಣದಲ್ಲಿ ತೊಡಗಬೇಕು. ಹೀಗೆ ಅರಿವಿನ ಮನೆಯಲ್ಲಿ ಇಷ್ಟಲಿಂಗ ಪೂಜೆ ಮತ್ತು ಮಹಾಮನೆಯಲ್ಲಿ ಜಂಗಮಲಿಂಗ ಪೂಜೆ ನಡೆಯಬೇಕು. ಇದುವೇ ಉಭಯಕುಳ.

ಇಷ್ಟಲಿಂಗದ ಅರಿವು ಆಚರಣೆಯಲ್ಲಿ ಬಂದಾಗ ಮಾತ್ರ ಬಸವಣ್ಣನವರ ಕನಿಸಿನ ನವಸಮಾಜ ನಿರ್ಮಾಣ ಮಾಡಲು ಸಾಧ್ಯ. ಬಸವಣ್ಣನವರ ಅನುಭಾವದ ಅರಿವು ಮತು ಅನುಭವದ ಪ್ರಜ್ಞೆಯ ಕೂಡಲಸಂಗಮವಾದಾಗಲೇ ಇಷ್ಟಲಿಂಗದ ಜನನವಾಯಿತು. ನಂತರ ಬಸವಧರ್ಮದ ಲಾಂಛನವಾಯಿತು. ಅರಿವಿನ ಕುರುಹು ಆಗಿರುವ ಇಷ್ಟಲಿಂಗ ಸರ್ವಸಮತ್ವದ ಸಂಕೇತವಾಗಿ ಕಂಗೊಳಿಸುತ್ತಿದೆ. ಇಷ್ಟಲಿಂಗವು ಸಮಗ್ರ ಕ್ರಾಂತಿಯ ಮಾರ್ಗದರ್ಶಿ. ಸರ್ವರನ್ನು, ಅವರೊಳಗಿನ ಪರಮಾತ್ಮನೊಡನೆ ಒಂದುಗೂಡಿಸುವ ಸಾಧನ. ಆನಂದಮಯವಾಗಿ ಬದುಕಲೆಂದು ಬಸವಣ್ಣನವರು ಲೋಕಕ್ಕೆ ಕೊಟ್ಟ ಅನುಪಮ ಕಾಣಿಕೆ.

❖❖

೧೬

❖

ಶರಣ ಸಂಸ್ಕೃತಿಯ ಮೂಲ ರೈತಾಪಿ ಸಂಸ್ಕೃತಿ

ಸೂಫಿಗಳ, ಶರಣರ, ತತ್ತ್ವಪದಕಾರರ, ರೈತಾಪಿ ಜನರ ಮತ್ತು ಕಾಯಕಜೀವಿಗಳ ಸಮ್ಮಿಶ್ರ ಸಂಸ್ಕೃತಿಯಿಂದಾಗಿ ಕಲಬುರ್ಗಿಯು ಕಲ್ಲರಳಿ ಹೂವಾದ ಕಾರಣ ಗುಲ್ಬರ್ಗಾ ಆಗಿ ಕಂಗೊಳಿಸುತ್ತಿದೆ. ಇಲ್ಲಿಯ ಜನರ ಹೃದಯವಂತಿಕೆ ಮತ್ತು ಸರ್ವಧರ್ಮ ಸಮಭಾವದ ಜೀವನಕ್ರಮ ದೇಶಕ್ಕೆ ಮಾದರಿಯಾಗಿದೆ.

ಮೌರ್ಯ ಚಕ್ರವರ್ತಿ ಅಶೋಕನ ಕ್ರಿಸ್ತಪೂರ್ವ ೩ನೇ ಶತಮಾನದ ಶಾಸನಗಳು ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಸನ್ನತಿಯಲ್ಲಿ ಸಿಕ್ಕಿವೆ. ಇಲ್ಲಿ ಸಿಕ್ಕ ಶಾಸನವೊಂದರಲ್ಲಿ ಅಶೋಕನು ಕಳಿಂಗ ಯುದ್ಧದಲ್ಲಿ ಸಂಭವಿಸಿದ ಸಾವುನೋವಿಗೆ ಸಂಬಂಧಿಸಿದಂತೆ ಪಶ್ಚಾತ್ತಾಪ ಪಟ್ಟ ಉಲ್ಲೇಖವಿದೆ. ಕಳಿಂಗ ದೇಶವನ್ನು ಅಶೋಕ ಗೆದ್ದರೂ ಯುದ್ಧವಿರೋಧಿಯಾಗಿ ದುಃಖಿಸುವುದು ಮಾನವೀಯತೆಗೆ ಹಿಡಿದ ಕನ್ನಡಿಯಗಿದೆ. ಗುಲ್ಬರ್ಗಾ ಪ್ರದೇಶ ಇಂಥ ಚಕ್ರವರ್ತಿಯ ಆಳ್ವಿಕೆಗೆ ಒಳಪಟ್ಟು ಬೌದ್ಧಧರ್ಮದ ಮಹೋನ್ನತ ವಿಚಾರಗಳಿಗೆ ತೆರೆದುಕೊಂಡಿದ್ದು ಅವಿಸ್ಮರಣೀಯವಾಗಿದೆ.

ಒಂಬತ್ತನೇ ಶತಮಾನದಲ್ಲಿ ಇಲ್ಲಿನ ಸೇಡಂ ತಾಲ್ಲೂಕಿನ ಮಳಖೇಡದ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷ ನೃಪತುಂಗನ ಆಸ್ಥಾನದಲ್ಲಿದ್ದ ಶ್ರೀವಿಜಯ ಬರೆದ ಲಕ್ಷಣಗ್ರಂಥ ಕವಿರಾಜಮಾರ್ಗದಲ್ಲಿ "ಕಸವರಮೆಂಬುದು ನೆರೆ ಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ" ಎಂದು ಹೇಳಲಾಗಿದೆ. ಅನ್ಯರ ವಿಚಾರನ್ನು, ಧರ್ಮವನ್ನು ಸಂಪೂರ್ಣವಾಗಿ ಸಹಿಸಲು ಸಾಧ್ಯವಾದರೆ ಅದೇ ಶುದ್ಧ ಬಂಗಾರ ಎಂಬ ಈ ಮಾತು ಇಲ್ಲಿನ ಜನರ ಮನೋಭಾವಕ್ಕೆ ಹಿಡಿದ ಕನ್ನಡಿಯಂತಿದೆ. ಕಲ್ಯಾಣ ನಾಡಿನ ಜನರು ಗುಣಗ್ರಾಹಿಗಳಾಗಿದ್ದಾರೆ.

೧೪ನೇ ಶತಮಾನದಲ್ಲಿ ಅಲ್ಲಾವುದ್ದೀನ್ ಹಸನ್ ಗಂಗೂ ಬಹಮನ್ ಶಹಾ ಗುಲ್ಬರ್ಗದಲ್ಲಿ ಬಹಮನಿ ಸಾಮ್ರಾಜ್ಯ ಸ್ಥಾಪಿಸಿದ. ಈತ ಸೂಫಿಗಳ ಅನುಯಾಯಿಯಾಗಿದ್ದ. ತನಗೆ ಸಹಾಯ ಮಾಡಿದ ಗಂಗೂ ಎಂಬ ಬ್ರಾಹ್ಮಣನ ಹೆಸರನ್ನು ತನ್ನ ಹೆಸರಿನಲ್ಲಿ ಸೇರಿಸಿಕೊಂಡು ಸದ್ಭಾವದ ಸಮ್ಮಿಶ್ರ ಸಂಸ್ಕೃತಿಗೆ ನಾಂದಿ ಹಾಡಿದ. ಇಂಥ ಸೂಫಿ

ಮನೋಭಾದಿಂದಾಗಿ ಗುಲ್ಬರ್ಗ, ಬೀದರ್ ಮತ್ತು ವಿಜಾಪುರ ಪ್ರದೇಶಗಳು ಇಡೀ ಭರತಖಂಡದಲ್ಲಿ ಪ್ರಥಮಬಾರಿಗೆ ಸದ್ಭಾವದ ಸಮ್ಮಿಶ್ರ ಸಂಸ್ಕೃತಿಯ ಕೇಂದ್ರಗಳಾಗಿ ಮಾರ್ಪಟ್ಟವು. ಅಕ್ಬರ್ ಚಕ್ರವರ್ತಿ ಈ ಪರಂಪರೆಯ ಪ್ರಭಾವದಿಂದಲೇ ಸಮ್ಮಿಶ್ರ ಸಂಸ್ಕೃತಿಯ ಪ್ರತೀಕವಾಗಿ ವಿಶ್ವವಿಖ್ಯಾತವಾದುದಕ್ಕೆ ಇತಿಹಾಸ ಸಾಕ್ಷಿ ಇದೆ.

೧೨ನೇ ಶತಮಾನದಲ್ಲಿ ಕಲ್ಯಾಣದ ಶರಣರು ಮಾಡಿದ ಕ್ರಾಂತಿ ಮತ್ತು ಸೂಫಿಗಳ ಮಾನವ ಏಕತೆಯ ಕ್ರಾಂತಿಕಾರಿ ನಿಲುವುಗಳು ೧೬ನೇ ಶತಮಾನದ ಆರಂಭದ ಹೊತ್ತಿಗೆ ಕೊಡೇಕಲ್ ಬಸವಣ್ಣನವರ ಕಾಣ್ಕೆಯಿಂದಾಗಿ ಸಮ್ಮಿಲನಗೊಂಡು ಸೂಫಿ-ಶರಣ ತತ್ತ್ವಗಳಿಂದ ಕೂಡಿದ ನವಸಮಾಜದ ನಿರ್ಮಾಣವಾಯಿತು. ಆ ಮೂಲಕ ಬಂದ ಅನುಭಾವಿ ಕವಿಗಳು ಜಾತಿಗಳನ್ನು ಮೀರಿದರು ಮತ್ತು ಧರ್ಮಗಳನ್ನು ಒಂದುಗೂಡಿಸಿದರು.

೧೪ನೇ ಶತಮಾನದ ಖಾಜಾ ಬಂದಾ ನವಾಜ್ ಮತ್ತು ೧೮ನೇ ಶತಮಾನದ ಶರಣಬಸವೇಶ್ವರರು. ಈ ಪ್ರದೇಶದ ಜನರ ಮೇಲೆ ಗಾಢವಾದ ಪ್ರಭಾವ ಬೀರಿದ್ದಾರೆ. ಅವರು ಬೇರೆ ಬೇರೆ ಶತಮಾನಗಳಿಗೆ ಸೇರಿದ್ದರೂ ಜನರ ಹೃನ್ಮಂದಿರದಲ್ಲಿ ಏಕಕಾಲಕ್ಕೇ ಮಿಡಿಯುತ್ತಿದ್ದಾರೆ. ಬಂದಾ ನವಾಜರು ಉರ್ದು ಗದ್ಯದ ಜನಕರು. ಸಂಸ್ಕೃತ ಭಾಷಾ ಜ್ಞಾನವನ್ನೂ ಹೊಂದಿದ್ದ ಅವರು ಪಾರ್ಸಿ ಮತ್ತು ದಖನಿ ಉರ್ದು ಭಾಷೆಗಳಲ್ಲಿ ೧೦೫ ಗ್ರಂಥಗಳ ರಚನೆ ಮಾಡಿದ್ದಾರೆ. ಶರಣಬಸವೇಶ್ವರರು ರೈತಾಪಿ ಜನರ ಸಂಕೇತ. ಅವರು ಯಾವುದೇ ಗ್ರಂಥ ಬರೆದಿಲ್ಲ. ಆದರೆ ಅವರೂ ಜನಮಾನಸದಲ್ಲಿ ಕಂಗೊಳಿಸುತ್ತಿದ್ದಾರೆ. ಅವರು ಹೆಚ್ಚಿಗೆ ಮಾತನಾಡಲಿಲ್ಲ. ಆದರೆ ದಾಸೋಹದ ಮಹತ್ವವನ್ನು ಕೃತಿಗೆ ಇಳಿಸಿ ಜನಸಮುದಾಯಕ್ಕೆ ತೋರಿಸಿಕೊಟ್ಟರು. ರೈತಾಪಿ ಸಂಸ್ಕೃತಿಯ ಪ್ರತೀಕವಾದರು. ಕೃಷಿ ಕಾಯಕ ಮತ್ತು ಪ್ರಸಾದ ಪ್ರಜ್ಞೆಯೊಂದಿಗೆ ದಾಸೋಹಂಭಾವದಿಂದ ಬದುಕಿ ತೋರಿಸಿದರು. ಪಾಲಿಗೆ ಬಂದ ಕರ್ಕಿ ಹೊಲವನ್ನು ಹಸನುಗೊಳಿಸಿದರು. ಬೇಲಿಯಿಲ್ಲದ ಹೊಲದಲ್ಲಿ ಸಮೃದ್ಧ ಬೆಳೆ ಬೆಳೆದರು. ಕಾಳು ತಿನ್ನಲು ಹೊಲಕ್ಕೆ ಬರುವ ಹಕ್ಕಿಗಳಿಗಾಗಿ ಕುಡಿಯುವ ನೀರಿನ ವ್ಯವಸ್ಥೆ ಮಾಡಿದರು. ಹಕ್ಕಿಗಳು ಕಾಳಿನ ಜೊತೆ ಕೀಟಗಳನ್ನೂ ತಿನ್ನುವುದರ ಮೂಲಕ ಸಹಜ ಕೀಟನಾಶಕಗಳಾದವು. ಬೇಲಿ ಇಲ್ಲದ ಹೊಲ ಮೆಯ್ದ ದನಕರುಗಳು ಸೆಗಣಿ ಹಾಕಿ ಗೊಬ್ಬರ ಪೂರೈಸಿದವು. ಹೀಗೆ ಸಕಲ ಜೀವಾತ್ಮರು ಕೂಡಿ ಬದುಕಲು ಸಾಧ್ಯ ಎಂಬ ಶರಣ ತತ್ತ್ವವನ್ನು ಶರಣಬಸವೇಶ್ವರರು ಕೃತಿ ಮೂಲಕ ಸಾಧಿಸಿ ತೋರಿಸಿದರು. ಶರಣಬಸವೇಶ್ವರರು ಅಂದು ಸಾಧಿಸಿದ್ದನ್ನು ಇಂದು ಕೃಷಿ ವಿಜ್ಞಾನಿಗಳು ಹೇಳುತ್ತಿದ್ದಾರೆ. ಶರಣಬಸವೇಶ್ವರರ ಕಾಯಕ- ಪ್ರಸಾದ- ದಾಸೋಹ ಪ್ರಜ್ಞೆ ಕೋಟ್ಯಂತರ ರೈತರ ಮೇಲೆ ಪ್ರಭಾವ ಬೀರಿದೆ. ಶರಣಬಸವೇಶ್ವರರು ರೈತಾಪಿ ಜನರ ಮತ್ತು ಕಲ್ಯಾಣ

ನಾಡಿನ ಇಡೀ ಜನಸಮುದಾಯದ ಆರಾಧ್ಯ ದೈವವಾಗಿದ್ದಾರೆ. ಜೀವನ ಶ್ರದ್ಧೆ ಮತ್ತು ಸರ್ವಸಮತ್ವವನ್ನು ಸಾರುವ ಇಷ್ಟಲಿಂಗ ನಿಷ್ಠೆಯಿಂದಾಗಿ ಅವರು ೧೨ನೇ ಶತಮಾನದ ಶರಣರ ಪ್ರತಿರೂಪವಾದರು. ಅಂತೆಯೆ ಅವರ ತೋರುಗದ್ದುಗೆಗಳು ೫೦೦ ಕಡೆಗಳಲ್ಲಿವೆ. ಗುಲ್ಬರ್ಗಾದಲ್ಲಿ ಇರುವ ಅವರ ಗದ್ದುಗೆ ಅಪ್ಪನ ಗುಡಿ ಎಂದೇ ಪ್ರಸಿದ್ಧವಾಗಿದೆ. ಅಪ್ಪನ ಗುಡಿ ಮತ್ತು ಖಾಜಾ ಬಂದಾ ನವಾಜ್ ದರ್ಗಾಗಳು ನಗರದ ಎರಡು ಅರಿವಿನ ಕಣ್ಣುಗಳೆಂದೇ ಜನ ಭಾವಿಸಿದ್ದಾರೆ. ಜೇವರ್ಗಿಯ ಷಣ್ಮುಖ ಶಿವಯೋಗಿಗಳು, ಕಡಕೋಳ ಮಡಿವಾಳಪ್ಪ ಮುಂತಾದವರು ಇಂಥದೇ ಪರಂಪರೆಯ ಸಾಲಿಗೆ ಸೇರುತ್ತಾರೆ. ಹೀಗೆ ಶರಣಬಸವೇಶ್ವರರಿಂದಾಗಿ ರೈತಾಪಿ ಸಂಸ್ಕೃತಿ ಈ ಭಾಗದ ಮೂಲ ಸಂಸ್ಕೃತಿಯಾಗಿದೆ.

ಹಾಗೆ ನೋಡಿದರೆ ಇಡೀ ಶರಣ ಸಂಸ್ಕೃತಿಯ ಮೂಲವೇ ರೈತಾಪಿ ಸಂಸ್ಕೃತಿಯಾಗಿದೆ. ವೈದಿಕ ಸಂಸ್ಕೃತಿಯಲ್ಲದೆ ಜಗತ್ತಿನ ಎಲ್ಲ ನಾಗರೀಕತೆ ಮತ್ತು ಸಂಸ್ಕೃತಿಗಳಿಗಿಂತ ರೈತಾಪಿ ಸಂಸ್ಕೃತಿ ಹಳೆಯದಾಗಿದೆ. ನೈಲನದಿ ಸಂಸ್ಕೃತಿ, ಮಹೆಂಜೊದಾರೊ ಸಂಸ್ಕೃತಿ, ಗ್ರೀಕ್ ಸಂಸ್ಕೃತಿ ಹೀಗೆ ಯಾವುದೇ ಸಂಸ್ಕೃತಿ ತೆಗೆದುಕೊಂಡರೂ ಅವುಗಳಿಗೆ ೧೦ ಸಾವಿರ ವರ್ಷಗಳ ಇತಿಹಾಸವಿಲ್ಲ. ಆದರೆ ಭಾರತದ ಕೃಷಿಗೆ ಹತ್ತು ಸಾವಿರ ವರ್ಷಗಳ ಇತಿಹಾಸವಿದೆ. ಹೀಗಾಗಿ ಕೃಷಿ ಸಂಸ್ಕೃತಿಯೇ ಎಲ್ಲ ಸಂಸ್ಕೃತಿ ಮತ್ತು ನಾಗರೀಕತೆಗಳಿಗೆ ಮೂಲವಾಗಿದೆ. ಕೃಷಿಯು ಒಂದೆಡೆ ನೆಲೆನಿಂತ ಮಾತೃಕುಟುಂಬ ವ್ಯವಸ್ಥೆಯ ಕಾಣಿಕೆಯಾಗಿದೆ. ಕೃಷಿಯನ್ನು ಮಹಿಳೆ ಕಂಡುಹಿಡಿದದ್ದೊಂದು ವಿಶೇಷ. ಆದ್ದರಿಂದಲೇ ಮಹಿಳೆ ಮತ್ತು ಕೃಷಿ ಎಲ್ಲ ನಾಗರೀಕತೆಗಳ ಮೂಲ. ಆದರೆ ದುರಂತವೆಂದರೆ ಮಾತೃಪ್ರಧಾನ ಕುಟುಂಬ ವ್ಯವಸ್ಥೆ ನಾಶವಾದಮೇಲೆ ಎಲ್ಲ ನಾಗರೀಕತೆಗಳು ಕೃಷಿ ಮತ್ತು ಮಹಿಳೆಯನ್ನು ಗೌಣವಾಗಿ ಕಾಣುತ್ತ ಬಂದವು. ಕೃಷಿಯು ರೈತರಿಗಷ್ಟೇ ಅಲ್ಲದೆ ವಿವಿಧ ಕಾಯಕಜೀವಿಗಳಿಗೆ ಮೂಲಾಧಾರವಾಗಿದೆ. ಭೂಮಿಯಿಂದ ಪಡೆದದ್ದನ್ನು ದಾಸೋಂಭಾವದಿಂದ ಹಂಚಿಕೊಂಡು ತಿನ್ನುವುದು ರೈತರ ಮೌಲ್ಯವಾಗಿತ್ತು. ಕಂಬಾರ, ಕುಂಬಾರ, ಮಡಿವಾಳ, ಹಡಪದ, ಮುಂತಾದ ಬಾರಾಬಲೂತಿದಾರರ ಜೊತೆ ಮಾತ್ರ ಆತ ತನ್ನ ಉತ್ಪನ್ನಗಳನ್ನು ಹಂಚಿಕೊಳ್ಳುತ್ತಿರಲಿಲ್ಲ. ಪಶು ಪಕ್ಷಿಗಳು ಮತ್ತು ಹುಳ ಹುಪ್ಪಡಿಗಳು ಕೂಡ ಅವನ ಕೃಷಿ ಉತ್ಪನ್ನದ ಪಾಲುದಾರರು. ಹೀಗೆ ರೈತ ಉದಾತ್ತವಾಗೇ ಬದುಕಿದ್ದಾನೆ. ಆತ ಎಲ್ಲ ಕಾಯಕಜೀವಿಗಳಿಗೆ ಕೇಂದ್ರಬಿಂದುವಾಗಿ ತಾನಿರುವ ಹಳ್ಳಿಯ ಎಲ್ಲ ಸಮುದಾಯಗಳು ಹಾಸುಹೊಕ್ಕಾಗಿರುವಂಥ ವ್ಯವಸ್ಥೆಯನ್ನು ಹೊಂದಿದ್ದ. ಇಂಥ ಜಾನಪದ ಜಗತ್ತಿಗೆ 'ಸ್ವಯಂ ಪರಿಪೂರ್ಣ ಗ್ರಾಮ ವ್ಯವಸ್ಥೆ' ಎಂದು ಕರೆಯುತ್ತಾರೆ. ರಾಜ್ಯಶಕ್ತಿ ಮತ್ತು ವೈದಿಕ ಶಕ್ತಿಗಳು ಒಂದಾಗಿ ಈ ಸ್ವಯಂ ಪರಿಪೂರ್ಣ ಗ್ರಾಮ

ವ್ಯವಸ್ಥೆಯನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದವು. ದುಡಿಯುವವರು ಕೀಳಾಗಿ ಪರಾವಲಂಬಿಗಳು ಮೇಲಾಗಿ ಬದುಕುವಂಥ ಸಮಾಜ ವ್ಯವಸ್ಥೆಯ ಬಗ್ಗೆ ಬಸವಣ್ಣನವರು ಕೂಲಂಕಷ ಅಧ್ಯಯನ ಮಾಡಿದರು. ವೈದಿಕದ ಒಳಹೊರಗನ್ನು ಚೆನ್ನಾಗಿ ಅರಿತಿದ್ದ ಬಸವಣ್ಣನವರು ಅವೈದಿಕ ರೈತಾಪಿ ಸಂಸ್ಕೃತಿ ಸರ್ವಶ್ರೇಷ್ಠ ಎಂಬುದನ್ನು ಮನಗಂಡರು. ಮನುವಾದಿಗಳಿಂದಾಗಿ ರೈತಾಪಿ ಸಂಸ್ಕೃತಿಯಲ್ಲಿ ನುಸುಳಿರುವ ಜಾತಿಗಳನ್ನು ನಿರ್ನಾಮ ಮಾಡಿ ಕಾಯಕ ಜೀವಿಗಳ ಕೇಂದ್ರಿತ ಸಮಾಜ ಸ್ಥಾಪನೆ ಮಾಡುವ ಮೂಲಕ ರೈತಾಪಿ ಸಮಾಜಕ್ಕೆ ಹೊಸ ರೂಪ ಕೊಟ್ಟರು. ಜಾತಿ ನಾಶಮಾಡಿ ಕಾಯಕಪ್ರಧಾನ ಸಮಾಜ ಕಟ್ಟಿದರು.

ಇಂಥ ಅತ್ಯಾಧುನಿಕ ಸಮಾಜ ಕಟ್ಟುವುದಕ್ಕಾಗಿ ಅವರು ಜಾನಪದ ಲೋಕದ ಸಂಪೂರ್ಣ ಅಧ್ಯಯನ ಮಾಡಿದರು.

"ಹತ್ತು ಸಾವಿರ ಪದವ ಎತ್ತಿನ ಮೇಲೆ ಹೇರ್ಕೊಂಡು
ಮತ್ತೆ ಸಾವಿರ ಪದವ ಹಿಡಕೊಂಡು ಕೋಲೆ...
ಎಂಟು ಸಾವಿರ ಪದವ ಒಂಟೆ ಮೇಲೆ ಹೇರ್ಕೊಂಡು
ಬಸವಣ್ಣನ ಸಭೆಗೆ ಬಂದೇವು ಕೋಲೆ...
ಕೋಲಿನ ಮೇಲೊಬ್ಬ ಬಸವಣ್ಣ ಕೂತ್ಕೊಂಡು
ಲಾಲಿಸಿ ಪದವ ಬರಕೊಂಡು ಕೋಲೆ..."

ಎಂಬ ಜನಪದ ಹಾಡಿನಿಂದ ಬಸವಣ್ಣನವರು ಜಾನಪದ ಜೀವನ ಕ್ರಮವನ್ನು ಆಳವಾಗಿ ಅರಿತುಕೊಂಡದ್ದು ತಿಳಿದುಬರುತ್ತದೆ.

ಶರಣಧರ್ಮವೆಂಬುದು ಜನಪದ ಧರ್ಮದ ಆಧುನಿಕ ರೂಪವಾಗಿದೆ. ಭೂಮಿಯ ಮಹತ್ವವನ್ನು ಸಾರುವ ಜೀವನ್ಮುಖಿ ಧರ್ಮವಾಗಿದೆ. ಸ್ವರ್ಗದ ಮಹತ್ವವನ್ನು ಅಲ್ಲಗಳೆಯುವ ಧರ್ಮವಾಗಿದೆ. "ಕೈಲಾಸವೆಂಬುದೇನೋ ಪೃಥ್ವಿಯ ಮೇಲೊಂದು ಮೊರಡಿ" ಎಂದು ಬಸವಣ್ಣನವರು ಹೇಳಿದ್ದಾರೆ. "ಲೋಕವೇ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ" ಎಂದು ಅಕ್ಕ ಮಹಾದೇವಿ ಪ್ರಶ್ನಿಸಿದ್ದಾರೆ. ಭೂಮಿಯ ಮಹತ್ವವನ್ನು ಸಾರುವ ಧರ್ಮವು ಶಾಸ್ತ್ರಕರ್ಮಪ್ರಧಾನ ಆಗಿರುವುದಿಲ್ಲ. ಜೀವಕಾರುಣ್ಯ ಪ್ರಧಾನವಾಗಿರುತ್ತದೆ. ಕಾಯಕದಲ್ಲೇ ಕೈಲಾಸವನ್ನು ಕಾಣುವಂಥದ್ದಾಗಿರುತ್ತದೆ. ದೇವರು ಇಲ್ಲಿ ನಿರಾಕಾರ. ಶರಣಧರ್ಮವು ಇಂಥ ಕಾಯಕ ಪ್ರಧಾನ ಧರ್ಮವಾಗಿದೆ. ಇಷ್ಟಲಿಂಗವು ಇಂಥ ಅರಿವಿನ ಕುರುಹು ಆಗಿ ಇದೆ. "ದೇಹಾರ (ಇಷ್ಟಲಿಂಗ ಪೂಜೆ) ಮಾಡುವ ಅಣ್ಣಗಳಿರಾ, ಒಂದು ತುತ್ತು ಆಹಾರವನಿಕ್ಕಿರೆ" ಎಂದು ಅಂಬಿಗರ ಚೌಡಯ್ಯನವರು ಹಸಿದವರ ಪರವಾಗಿ ನಿಲ್ಲುತ್ತಾರೆ. "ಲಿಂಗ ಪ್ರತಿಷ್ಠೆಯ ಮಾಡಿದವಂಗೆ ನಾಯಕ ನರಕ" ಎಂದು ಅಲ್ಲಮ ಪ್ರಭುಗಳು ಎಚ್ಚರಿಸಿದ್ದಾರೆ. "ಕಾಲಿಲ್ಲದವಂಗೆ ಕಾಲು ಕೊಟ್ಟೆ

ಬಸವಾ, ಕಣ್ಣಿಲ್ಲದವಂಗೆ ಕಣ್ಣು ಕೊಟ್ಟೆ ಬಸವಾ" ಎಂದು ಸಿದ್ಧರಾಮ ಬಸವಣ್ಣನವರನ್ನು ಕೊಂಡಾಡುವುದರ ಮೂಲಕ ಬದುಕಿನ ಮಹತ್ವ ಸಾರಿದ್ದಾರೆ. "ಒಡಲುಗೊಂಡವ ಹಸಿವ; ಒಡಲುಗೊಂಡವ ಹುಸಿವ... ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡಾ ರಾಮನಾಥ." ಎಂದು ಜೇಡರ ದಾಸಿಮಯ್ಯನವರು ದೇವರಿಗೇ ಸವಾಲು ಹಾಕಿದ್ದಾರೆ. "ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು." ಎಂದು ಆಯ್ದಕ್ಕಿ ಮಾರಯ್ಯನವರು ತಿಳಿಸಿದ್ದಾರೆ. "ಹೆಣ್ಣ ಬಿಟ್ಟು ಲಿಂಗವನೊಲಿಸಬೇಕೆಂಬರು. ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?" ಎಂದು ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ಪ್ರಶ್ನಿಸಿದ್ದಾಳೆ. "ಜಾಗ್ರಸ್ವಪ್ನಸುಷುಪ್ತಿಗಳಲ್ಲಿ ಕಾಮವಿಕಾರ ತೋರಿತ್ತೆಂದು ಶಸ್ತ್ರ ಸಮಾಧಿ ನೀರು ನೇಣು ವಿಷ ಔಷಧಿಗಳಿಂದ ಘಟವ ಬಿಟ್ಟಡೆ ಆತ ಗುರುದ್ರೋಹಿ, ಲಿಂಗದ್ರೋಹಿ, ಜಂಗಮದ್ರೋಹಿ." ಎಂದು ಅವಸರದ ರೇಕಣ್ಣ ಜೀವಪರ ನಿಲುವು ತಾಳಿದ್ದಾನೆ. "ಕುಲಛಲವೆಂದೇನೊ ಮನದ ಹೊಲೆಯ ಕಳೆದವಂಗೆ?" ಎಂದು ಹಡಪದ ಅಪ್ಪಣ್ಣನವರು ಪ್ರಶ್ನಿಸಿದ್ದಾರೆ. "ಜೀವ ಹೋದಡೆ ಸಾಯಿ ಇದಕಾ ದೇವರ ಹಂಗೇಕೆ" ಎಂದು ಲದ್ದೆಯ ಸೋಮಣ್ಣ ಏನನ್ನು ಬಯಸದೆ ದೇವರನ್ನು ಮತ್ತು ಲೋಕವನ್ನು ಪ್ರೀತಿಸುವುದನ್ನು ಕಲಿಸಿದ್ದಾನೆ. ವೇದಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ? .... ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?" ಎಂದು ಬಸವಣ್ಣನವರು ಬಡವರ ಪರವಾಗಿ ನಿಂತು ಅವರ ಪ್ರತಿಭೆಯನ್ನು ಕೊಂಡಾಡಿ ಅವರಲ್ಲಿ ಆತ್ಮಸ್ಥೈರ್ಯ ತುಂಬುತ್ತಾರೆ. "ಕೂಡಲಸಂಗನ ಶರಣರು ಸ್ವತಂತ್ರಧೀರರು" ಎಂದು ಸಾರುತ್ತಾರೆ. ಬಡವರ ಧರ್ಮವನ್ನು ಸ್ಥಾಪಿಸಿ ಅವರೇ ಈ ಭೂಮಿಯ ವಾರಸುದಾರರು ಎಂಬುದನ್ನು ಸಿದ್ಧಪಡಿಸುತ್ತಾರೆ. ಹೀಗೆ ಬಸವಣ್ಣನವರು ಕಾಯಕಜೀವಿಗಳಾದ ಶರಣರೆಲ್ಲರನ್ನು ಸೇರಿಸಿಕೊಂಡು ಮನುಧರ್ಮಕ್ಕೆ ವಿರುದ್ಧವಾದ ಮಾನವಧರ್ಮದ ಸನ್ಮಾರ್ಗವನ್ನು ರಚಿಸುತ್ತಾರೆ.

ಬುದ್ಧನ ತರುವಾಯ ಭಾರತೀಯ ಸಮಾಜವನ್ನು ಬಸವಣ್ಣನವರಷ್ಟು ವೈವಿಧ್ಯಮಯವಾಗಿ ಅಧ್ಯಯನ ಮಾಡಿದಂಥವರು ಇನ್ನೊಬ್ಬರಿಲ್ಲ. ಬಸವಣ್ಣನವರ ಕಾಲದಲ್ಲಿ ಸಾಮಾಜಿಕ ಪರಿಸ್ಥಿತಿ ಬಹಳೇ ಉಲ್ಬಣಗೊಂಡಿತ್ತು. ಹೀಗಾಗಿ ಸಮಾಜವನ್ನು ಇನ್ನೂ ಚೆನ್ನಾಗಿ ಅರ್ಥೈಸಿಕೊಳ್ಳುವ ಅವಕಾಶ ಬಸವಣ್ಣನವರಿಗೆ ಲಭಿಸಿತು. ತಮ್ಮನ್ನೇ ಲೋಕಕ್ಕೆ ಅರ್ಪಿಸಿಕೊಂಡಿದ್ದ ಮಹಾನುಭಾವಿ ಬಸವಣ್ಣನವರು ಸಕಲ ವೇದಶಾಸ್ತ್ರಪುರಾಣಾಗಮ ಪಾರಂಗತರಾಗಿದ್ದರು. ಮಹಾನ್ ಆಡಳಿತಗಾರರೂ ಆಗಿದ್ದರು. ರಾಜರು ಮತ್ತು ರಾಜಗುರುಗಳು ಸೇರಿ ಯಾವರೀತಿ ಜನಸಾಮಾನ್ಯರ ಸುಲಿಗೆ ಮಾಡುತ್ತಾರೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು. ಇಡೀ ದುಡಿಯುವ ವರ್ಗವನ್ನು ಶೋಷಣೆಯಿಂದ ರಕ್ಷಿಸುವ ಪಣತೊಟ್ಟರು. ಶೋಷಣೆಯ ಬಲೆಗೆ

ಬಿದ್ದು ಒದ್ದಾಡುವ ಅಸ್ಪೃಶ್ಯರು, ಮಹಿಳೆಯರು ಮತ್ತು ವಿವಿಧ ಕಾಯಕಜೀವಿಗಳನ್ನು ವಿಮೋಚನೆಗೊಳಿಸುವುದು ಅವರ ಬಹುಮುಖ್ಯ ಗುರಿಯಾಯಿತು. ವಿಮೋಚನೆ ಬೇರೆಯವರಿಂದ ಆಗುವುದಿಲ್ಲ. ನಮ್ಮ ವಿಮೋಚನೆಯನ್ನು ನಾವೇ ಮಾಡಿಕೊಳ್ಳಬೇಕು. ಹಾಗೆಂದ ಮಾತ್ರಕ್ಕೆ ವ್ಯಕ್ತಿಗತವಾಗಿ ವಿಮೋಚನೆಗೊಳ್ಳಲಿಕ್ಕಾಗದು. ಶೋಷಣೆಗೆ ಮತ್ತು ಅಪಮಾನಕ್ಕೆ ಒಳಪಟ್ಟ ಜನರೆಲ್ಲ ಸಾತ್ವಿಕವಾಗಿ ಮತ್ತು ತಾತ್ತ್ವಿಕವಾಗಿ ಒಂದಾಗಿ ಸರ್ವಸಮತ್ವದ ಕನಸಿನೊಂದಿಗೆ ಮುನ್ನಡೆದಾಗ ಮಾತ್ರ ಎಲ್ಲ ತೆರನಾದ ಶೋಷಣೆ ಮತ್ತು ಅಪಮಾನಗಳಿಂದ ಮುಕ್ತರಾಗಲು ಸಾಧ್ಯ. ಬಸವಣ್ಣನವರ ದೃಷ್ಟಿಯಲ್ಲಿ ಮುಕ್ತಿ ಎಂದರೆ ಮಾನವ ವಿಮೋಚನೆಯೇ ಆಗಿದೆ.

ಹೊಸ ಧರ್ಮವನ್ನು ಸೃಷ್ಟಿಸುವುದು ಬಸವಣ್ಣನವರ ಉದ್ದೇಶವಾಗಿರಲಿಲ್ಲ. ಹೊಸ ಮಾನವನ ಸೃಷ್ಟಿಯೇ ಅವರ ಉದ್ದೇಶವಾಗಿತ್ತು. ಅವರ ಕಲ್ಪನೆಯ ಹೊಸ ಮಾನವ ಯಾವುದೇ ತೆರನಾದ ಶೋಷಣೆಗೆ ಒಳಗಾಗಿರಬಾರದು, ಯಾರನ್ನು ಶೋಷಣೆಗೆ ಒಳಪಡಿಸಬಾರದು, ತಾನು ಬೇರೆಯವರಿಗಿಂತ ಮೇಲು ಎಂದು ತಿಳಿದುಕೊಳ್ಳಬಾರದು, ತಾನು ಕೀಳು ಎಂದೂ ತಿಳಿದುಕೊಳ್ಳಬಾರದು, ಆತ ಕಾಯಕಜೀವಿಯಾಗಿರಬೇಕು, ತಾನು ಗಳಿಸಿದ್ದನ್ನು ತಾನೇ ಉಣ್ಣಬಾರದು, ಪರಹಿತ ಪ್ರಜ್ಞೆಯೊಂದಿಗೆ ಹಂಚಿಕೊಂಡು ತಿನ್ನಬೇಕು. ವಾಕ್ ಸ್ವಾತಂತ್ರ್ಯದಿಂದ ಸಮಾನತೆ, ಆತ್ಮಗೌರವ, ಮಾನವ ಘನತೆ ಮತ್ತು ಜ್ಞಾನ ಲಭಿಸುವುದೆಂಬುದನ್ನು ಬಸವಣ್ಣನವರು ಕಂಡುಕೊಂಡಿದ್ದರು. ಅಂತೆಯೆ ಅವರು ಯಾರ ಅಭಿಪ್ರಾಯವನ್ನು ಹತ್ತಿಕ್ಕಲಿಲ್ಲ. ಯಾರ ಅಭಿಪ್ರಾಯವನ್ನೂ ಕೀಳಾಗಿ ನೋಡಲಿಲ್ಲ. ಪ್ರತಿಯೊಬ್ಬರ ಅಭಿಪ್ರಾಯದಲ್ಲಿನ ಮಹತ್ವವನ್ನು ಅರಿತುಕೊಳ್ಳುವ ತಾಳ್ಮೆ ಮತ್ತು ಶಕ್ತಿಯನ್ನು ಅವರು ಹೊಂದಿದ್ದರು. ಅಂತೆಯ ಬಸವಣ್ಣನವರ ಸಮ್ಮುಖದಲ್ಲಿ ದಲಿತರು, ಹೆಣ್ಣುಮಕ್ಕಳು ಮತ್ತು ಮಕ್ಕಳು ಕೂಡ ನಿರ್ಭಯದಿಂದ ಮಾತನಾಡತೊಡಗಿದರು. ಅವು ಬರಿ ನಿರ್ಭಯದ ಮಾತುಗಳಾಗಿ ಹೊರಹೊಮ್ಮಲಿಲ್ಲ; ಎಚ್ಚರಿಕೆಯ, ಜವಾಬ್ದಾರಿಯ ಮತ್ತು ಆತ್ಮಜ್ಞಾನದ ಮಾತುಗಳಾದವು. ಆ ಮಾತುಗಳಿಗೇ ನಾವು ವಚನಗಳೆಂದು ಕರೆಯುತ್ತೇವೆ. ಮಾತು ಕೊಡುವುದು, ಭಾಷೆ ಕೊಡುವುದು ಮತ್ತು ವಚನ ಕೊಡುವುದರಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಹೀಗೆ ಕಾಯಕಜೀವಿಗಳು ಸಕಲಜೀವಾತ್ಮರಿಗೆ ಲೇಸಾಗುವ ಮಾತುಗಳನ್ನೇ ಆಡಿದರು. ಈ ಸೂಳ್ನುಡಿಗಳೇ ವಚನಗಳು. ಎಂದೂ ಮಾತನಾಡಲಾರದವರು ಮಾತನಾಡಿದಾಗ ಎಷ್ಟು ಅದ್ಭುತವಾಗಿ ಮಾತನಾಡುತ್ತಾರೆ ಮತ್ತು ಅಂಥವರಿಗೆ ಮಾತನಾಡಲು ಹಚ್ಚುವವರು ಎಂಥ ಅನುಪಮ ವಾಕ್ ಶಕ್ತಿಯನ್ನು ಪಡೆದಿರುತ್ತಾರೆ ಎಂಬುದಕ್ಕೆ ೧೨ನೇ ಶತಮಾನದ ಶರಣರ ವಚನಗಳೇ ಸಾಕ್ಷಿ. ಅಂತೆಯೆ ಅವು ಇಡೀ ವಿಶ್ವದಲ್ಲೇ ಅನನ್ಯವಾಗಿವೆ.

ಬದುಕು, ಸಾಹಿತ್ಯ ಮತ್ತು ದರ್ಶನದ ತ್ರಿವೇಣಿಸಂಗಮವಾಗಿವೆ. ಈ ತ್ರಿವೇಣಿ ಸಂಗಮದಲ್ಲಿ ನಮ್ಮ ಆತ್ಮಗಳು ಮಿಂದೆದ್ದಾಗ ಖಂಡಿತವಾಗಿಯೂ ಪವಿತ್ರವಾಗುವವು.

ಬಸವಣ್ಣನವರು ಇದನ್ನೆಲ್ಲ ಹೇಗೆ ಸಾಧಿಸಿದರು ಎಂಬುದು ಜಗತ್ತಿನ ಆಶ್ಚರ್ಯಗಳಲ್ಲಿ ಒಂದಾಗಿದೆ. ಅವರು ಹೊರಲೋಕವನ್ನು ತೀವ್ರವಾಗಿ ಅನುಭವಿಸಿದರು ಮತ್ತು ಒಳಲೋಕವನ್ನು ತೀವ್ರವಾಗಿ ಅನುಭಾವಿಸಿದರು. ಈ ಎರಡೂ ಲೋಕಗಳ ಮೂಲ ಸೆಲೆ ಒಂದೇ ಎಂಬುದನ್ನು ಬಹುಬೇಗ ಅರಿತುಕೊಂಡರು. ಒಳಗೆ ಅನುಭಾವ ನೀಡುವ ಪರವಸ್ತುವಿದೆ; ಹೊರಗೆ ಅನುಭವ ನೀಡುವ ವಸ್ತುವಿದೆ. ಪರವಸ್ತುವಿನಿಂದ ವಸ್ತುವಿನ ನಿರ್ಮಾಣವಾಗಿದೆ. ಆದ್ದರಿಂದ ವಸ್ತು ಒಂದಿಲ್ಲೊಂದು ದಿನ ಪರವಸ್ತುವಿನಲ್ಲಿ ಲಯವಾಗಲೇ ಬೇಕು. ಪರವಸ್ತು ಚೈತನ್ಯಮಯವಾಗಿದೆ. ವಸ್ತು ಭೌತಿಕಮಯವಾಗಿದೆ. ಚೈತನ್ಯದಿಂದ ವಸ್ತುವಿನ ನಿರ್ಮಾಣವಾದ ಕಾರಣ ಚೈತನ್ಯ ಬಿಟ್ಟು ವಸ್ತುವಿಲ್ಲ. ಆದ್ದರಿಂದ ಚೈತನ್ಯಾತ್ಮಕ ಭೌತಿಕವಾದವೇ ನಿಜವಾದ ತತ್ತ್ವಜ್ಞಾನ. ಬಸವಣ್ಣನವರ ಈ ತತ್ತ್ವಜ್ಞಾನ ವಿಶಿಷ್ಟವಾಗಿದೆ. ಪರಿಪೂರ್ಣವಾಗಿದೆ. ಸೃಷ್ಟಿಕರ್ತ ಅದ್ವೈತ. ಸೃಷ್ಟಿ ದ್ವೈತ. ಈ ದ್ವೈತವಾದ ಬ್ರಹ್ಮಾಂಡವೆಂಬ ಸೃಷ್ಟಿಗೆ ಲಯ ಉಂಟಾದಾಗ, ಶೂನ್ಯದಿಂದ ಬಂದ ಅದು ಶೂನ್ಯವನ್ನೇ ಸೇರುವುದು. ಅದ್ವೈತವು ದ್ವೈತರೂಪ ತಾಳಿ ಅದ್ವೈತದಲ್ಲೇ ಕೊನೆಗೊಳ್ಳುವುದು. ಇದು ಪರಮಸತ್ಯ. ಈ ಪರಮಸತ್ಯದ ಜೊತೆ ಮಾನವರು ಬದುಕಬೇಕಾದರೆ ಅವರು ತಮ್ಮ ಜಾತಿ, ವರ್ಗ, ವರ್ಣ, ಜ್ಞಾನ ಮತ್ತು ಪದವಿಯ ಅಹಂಕಾರದಿಂದ ಹೊರಬರಬೇಕಾಗುತ್ತದೆ. ಜಾತಿ ಮತ್ತು ವರ್ಗ ಅಷ್ಟೇ ಅಲ್ಲ ಮಾನವಕೇಂದ್ರಿತವೂ ಅಲ್ಲದ ಸಕಲಜೀವಕೇಂದ್ರಿತವಾದ ಜಗತ್ತಿದು ಎಂಬ ಸತ್ಯವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈ ಸತ್ಯವನ್ನು ಒಪ್ಪಿಕೊಂಡಾಗ ಅದರಂತೆ ನಡೆಯಬೇಕಾಗುತ್ತದೆ. ಹಾಗೆ ನಡೆಯುವುದೆಂದರೆ ಬಸವಣ್ಣನವರು ಹೇಳುವ "ಜೀವಜಾಲದಲ್ಲಿದೆ ಚರಾಚರವೆಲ್ಲ" ಎಂಬ ಜ್ಞಾನವನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವುದು. ಪ್ರಾಣಿಲೋಕ, ಪಕ್ಷಿಲೋಕ ಮತ್ತು ಸಸ್ಯಲೋಕವಷ್ಟೇ ಅಲ್ಲದೆ ಕಲ್ಲುಮಣ್ಣು, ಖನಿಜ ಪದಾರ್ಥಗಳೂ ಸೇರಿದಂತೆ ನೈಸರ್ಗಿಕ ಸಂಪನ್ಮೂಲಗಳು ಕೂಡ ಜೀವಜಾಲದ ಒಳಗಡೆ ಬರುತ್ತವೆ. ಇಂದಿನ ಪರಿಸರ ವಿಜ್ಞಾನಿಗಳು ಹೇಳುವ ಲೈಫ್ ವೆಬ್‌ಗೆ ಸಂವಾದಿಯಾದ ಪದವನ್ನು ಬಸವಣ್ಣನವರು ೧೨ನೇ ಶತಮಾನದಲ್ಲೇ ಬಳಸಿದ್ದಾರೆ. ಚೈತನ್ಯಾತ್ಮಕ ಭೌತಿಕವಾದದಲ್ಲಿ ನಂಬಿಕೆಯುಳ್ಳವರು ಜೀವಜಾಲ ಸಮತೋಲನದ ಬಗ್ಗೆ ಕಾಳಜಿ ವಹಿಸಲೇಬೇಕು. ಹೀಗೆ ಶರಣರು ಪ್ರತಿಯೊಂದರ ಬಗ್ಗೆಯೂ ಕಾಳಜಿ ಹೊಂದಿದ್ದರು. ಈ ಜೀವಜಾಲದ ಪರಿಕಲ್ಪನೆಯಲ್ಲಿ ಎಲ್ಲ ಮಾನವರಷ್ಟೇ ಅಲ್ಲದೆ ಪಶು, ಪಕ್ಷಿ, ಸಸ್ಯ ಮತ್ತು ಕಲ್ಲುಮಣ್ಣು ಕೂಡ ಜೀವಾತ್ಮ ಹೊಂದಿದ ವಸ್ತುಗಳಾಗುತ್ತವೆ. ಏಕೆಂದರೆ ಕಲ್ಲಿನಲ್ಲೂ ಚೈತನ್ಯವಿದೆ. ಪ್ರತಿ ಅಣುವಿನಲ್ಲೂ ಚೈತನ್ಯವಿದೆ. ಇದಕ್ಕೆ ಕಾರ್ಲ್ ಮಾರ್ಕ್ಸ್ "ಮ್ಯಾಟರ್ ಇನ್

ಮೋಷನ್" ಎಂದು ಕರೆದಿದ್ದಾನೆ. ಶರಣರು ಹೀಗೆ ಜೀವಾತ್ಮಭಾವದಿಂದ ವಸ್ತುಗಳನ್ನು ನೋಡುತ್ತಾರೆ. ಅಂತೆಯೆ ಸಕಲ ಜೀವಾತ್ಮರಿಗೆ ಲೇಸನೆ ಬಯಸುವುದು ಎಂದರೆ ಯಾವುದೇ ತೆರನಾದ ನೈಸರ್ಗಿಕ ಸಂಪತ್ತನ್ನು ಹಾಳು ಮಾಡಬಾರದು. ಜಲಮಾಲಿನ್ಯ ಮಾಡಬಾರದು, ವಾಯುಮಾಲಿನ್ಯ ಮಾಡಬಾರದು. ಅರಣ್ಯನಾಶ ಮಾಡಬಾರದು. ಭೂಮಿ ತನ್ನ ಸತ್ವ ಕಳೆದುಕೊಳ್ಳುವಂತೆ ಮಾಡಬಾರದು. ಜಾತಿಸಂಘರ್ಷ, ಕೋಮುಗಲಭೆ, ಭಯೋತ್ಪಾದನೆ, ಯುದ್ಧ ಮುಂತಾದ ಕ್ರೂರ ಕೃತ್ಯಗಳಲ್ಲಿ ತೊಡಗಬಾರದು. ಎಲ್ಲವನ್ನೂ ಎಲ್ಲರನ್ನೂ ಆತ್ಮಸಾಂಗತ್ಯದಿಂದ ಕಾಣಬೇಕು. ಸಂಗ್ರಹಬುದ್ಧಿ ಇರಬಾರದು. ಇಡೀ ಬ್ರಹ್ಮಾಂಡವನ್ನು ದೇವರ ಪ್ರಸಾದವೆಂದು ಭಾವಿಸಬೇಕು. ನಮಗೆ ಬೇಕಾದ ವಸ್ತುಗಳನ್ನೆಲ್ಲ ಪವಿತ್ರಭಾವದಿಂದ ಸ್ವೀಕರಿಸುವ ಮನಸ್ಥಿತಿಯನ್ನು ತಲುಪಬೇಕು. ಒಂದು ಬೊಗಸೆ ನೀರನ್ನು ದೇವರ ಪ್ರಸಾದವೆಂದು ಕುಡಿಯುವಾಗ ಅದು ಅಮೃತವೆನಿಸುತ್ತದೆ. ವಿಜ್ಞಾನಿಗಳು ನೀರನ್ನು ೨ಎಚ್೨ + ಓ೨ ಎಂದು ಬೇರ್ಪಡಿಸಬಹುದು. ಆದರೆ ಹೈಡ್ರೋಜನ್ ಮತ್ತು ಆಕ್ಸಿಜನ್ ಕೂಡಿಸಿ ಒಂದು ಬೊಗಸೆ ನೀರನ್ನು ಸೃಷ್ಟಿಸಲಾರರು. ಇದರ ಅರಿವು ಆದಾಗ ನಮಗೆ ನೀರಿನ ಮಹತ್ವ ಗೊತ್ತಾಗುವುದು. ಅದೇ ರೀತಿ ಪ್ರಯೋಗಾಲಯದಲ್ಲಿ ಒಂದು ಜೋಳದ ಕಾಳನ್ನು ಕೂಡ ತಯಾರಿಸಲು ಸಾಧ್ಯವಿಲ್ಲ. ಈ ಭೂಮಿ ರೂಪುಗೊಳ್ಳುವಾಗ ಇದರಲ್ಲಿ ಯಾವುದೇ ಜೀವಿಗಳು ಇರಲಿಲ್ಲ. ತದನಂತರದಲ್ಲಿ ಎಲ್ಲವೂ ಇದೇ ಭೂಮಿ ಮತ್ತು ಭೂಮಿಯ ಮೇಲಿನ ನೀರಿನಿಂದ ಉದ್ಭವವಾಗಿವೆ. ಹಾವು, ಕ್ರಿಮಿಕೀಟ, ಚೇಳು, ಹುಲಿ, ಚಿಗರೆ ಮೊದಲು ಮಾಡಿ ಎಲ್ಲ ಜಾತಿ ಜನಾಂಗ ಮತ್ತು ಧರ್ಮಗಳ ಜನರಿಗೆ ಭೂಮಿಯೇ ತಾಯಿಯ ಸ್ಥಾನದಲ್ಲಿದೆ. ಅಂದಮೇಲೆ ಈ ಭೂಮಿಯ ಮೇಲೆ ಸಕಲ ಜೀವಿಗಳಿಗೆ ಮಾನವರಷ್ಟೇ ಹಕ್ಕಿದೆ. ಎಲ್ಲ ಮಾನವರು ಕೂಡ ಸಮಾನವಾದ ಹಕ್ಕನ್ನು ಹೊಂದಿದ್ದಾರೆ. ಆದ್ದರಿಂದಲೇ ಶರಣರ ಸಮತಾ ತತ್ತ್ವ ಎಲ್ಲರೀತಿಯಿಂದಲೂ ಶ್ರೇಷ್ಠವಾಗಿದೆ. ಇಂಥ ಸಮಾಜದಲ್ಲಿ ಯಾರೂ ಏನನ್ನೂ ವೈಯಕ್ತಿಕ ನೆಲೆಯಲ್ಲಿ ಸಂಗ್ರಹ ಮಾಡುವುದಿಲ್ಲ. ಯಾವ ವಸ್ತುವನ್ನೂ ಹಾಳುಮಾಡುವುದಿಲ್ಲ. ಒಂದುವೇಳೆ ಈ ಶರಣಸಮಾಜ ವಿಶ್ವಸಮಾಜವಾದರೆ ವಿಶ್ವದಲ್ಲಿ ಸಾವಿರಾರು ಕೋಟಿ ಜನಸಂಖ್ಯೆಯಾದರೂ ಶಾಂತಿ ಸಮಾಧಾನದಿಂದ ಬದುಕಲು ಸಾಧ್ಯ. ಇಂಥ ಸಮಾಜ ನಿರ್ಮಾಣಕ್ಕಾಗಿಯೇ ಬಸವಣ್ಣನವರು "ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲಸಂಗಮದೇವಾ" ಎಂದು ಹೇಳಿದ್ದಾರೆ. "ಆನೆ ಕುದುರೆ ಭಂಡಾರವಿರ್ದಡೇನೊ? ತಾನುಂಬುದು ಪಡಿಯಕ್ಕಿ, ಒಂದಾವಿನ ಹಾಲು, ಮಲಗುವುದರ್ಧ ಮಂಚ." ಎಂದು ಮೋಳಿಗೆ ಮಾರಯ್ಯನವರು ಹೇಳಿದ್ದಾರೆ. ಇವರು ಪೂರ್ವಾಶ್ರಮದಲ್ಲಿ ಕಾಶ್ಮೀರದಲ್ಲಿನ ಸವಾಲಾಕ್ಷದ ದೊರೆ ಮಹಾದೇವ

ಭೂಪಾಲ. ಎಲ್ಲ ಬಿಟ್ಟು ರಾಣಿ ಗಂಗಾದೇವಿ (ಮೋಳಿಗೆ ಮಹಾದೇವಿ) ಜೊತೆ ಕಲ್ಯಾಣಕ್ಕೆ ಬಂದು ಕಟ್ಟಿಗೆ ಮಾರುವ ಕಾಯಕದಲ್ಲಿ ತೃಪ್ತಿ ಪಟ್ಟರು. "ಬಟ್ಟೆ (ದಾರಿ)ಯಲ್ಲಿ ಹೊನ್ನ ವಸ್ತ್ರ ಬಿದ್ದಿದ್ದರೆ, ನಾ ಕೈಮುಟ್ಟಿ ಎತ್ತಿದೆನಾದರೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ" ಎಂದು ಕಸಗುಡಿಸುವ ಸತ್ಯಕ್ಕ ದೇವರಿಗೆ ಹೇಳುತ್ತಾಳೆ. "ಆಸೆ ಎಂಬುದು ಭವದ ಬೀಜ" ಎಂದು ಉರಿಲಿಂಗಪೆದ್ದಿಗಳ ಪುಣ್ಯಸ್ತ್ರೀ ಕಾಳವ್ವೆ ತಿಳಿಸಿದ್ದಾಳೆ. "ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೇ ಅಯ್ಯಾ" ಎಂದು ಆಯ್ದಕ್ಕಿ ಲಕ್ಕಮ್ಮ, ಹೆಚ್ಚು ಅಕ್ಕಿ ತಂದ ಗಂಡ ಆಯ್ದಕ್ಕಿ ಮಾರಯ್ಯನವರನ್ನು ಪ್ರಶ್ನಿಸುತ್ತಾಳೆ. "ಅರ್ಥವೆಂಬುದೇ ಪಾಪ ಬೇರೆ ಪಾಪವಿಲ್ಲ ಕಂಡಯ್ಯಾ" ಎಂದು ಹಾವಿನಾಳ ಕಲ್ಲಯ್ಯನವರು ಸಾರಿದ್ದಾರೆ. ಸಾಮ್ರಾಜ್ಯಶಾಹಿಗಳು ಸುಲಿಗೆಯನ್ನೇ ಬದುಕಿನ ಮಂತ್ರವಾಗಿಸಿದ್ದಾರೆ. ಸಂಪತ್ತಿಗಾಗಿ ಬಡರಾಷ್ಟ್ರಗಳ ಶೋಷಣೆ ಮಾಡುತ್ತಿದ್ದಾರೆ. ಪ್ರತಿಭಟಿಸಿದ ದೇಶಗಳ ಮೇಲೆ ಯುದ್ಧ ಸಾರುತ್ತಿದ್ದಾರೆ. ಶಸ್ತ್ರಾಸ್ತ್ರಗಳನ್ನು ಮಾರುವ ಉದ್ದೇಶದಿಂದ ದೇಶ ದೇಶಗಳ ಮಧ್ಯೆ ಯುದ್ಧಕ್ಕಾಗಿ ಪ್ರಚೋದಿಸುತ್ತಿದ್ದಾರೆ. ಭಯೋತ್ಪಾದಕರನ್ನು ಹುಟ್ಟುಹಾಕುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಹಾವಿನಾಳ ಕಲ್ಲಯ್ಯನವರ ಅರ್ಥವಿರೋಧಿ ಮಾತು ಎಷ್ಟೊಂದು ಅರ್ಥಪೂರ್ಣವಾಗಿ ಧ್ವನಿಸುತ್ತದೆ! "ಅಳುಪಿಲ್ಲದಿರ್ಪುದೇ ವ್ರತ" ಎಂದು ಸೊಡ್ಡಳ ಬಾಚರಸ ಹೇಳಿದ್ದಾನೆ. ಬಯಕೆ ಇಲ್ಲದೆ ಬದುಕುವುದೆ ಆತನ ವ್ರತವಾಗಿತ್ತು. ಹೀಗೆ ಬದುಕುವ ಶರಣರ ಸಮಾಜ ವಿಶ್ವದಾದ್ಯಂತ ಬೆಳೆದಾಗ ಮಾತ್ರ ಈ ಜಗತ್ತು ವಿನಾಶದ ಅಂಚಿನಿಂದ ಪಾರಾಗಲು ಸಾಧ್ಯ.

ಶರಣಸಮಾಜದಲ್ಲಿ ಎಲ್ಲರೂ ಕಾಯಕ ಮಾಡಲೇಬೇಕು. ಕುಳಿತು ಉಣ್ಣುವವರಿಗೆ ಅಲ್ಲಿ ಸ್ಥಾನವಿಲ್ಲ. ಕಾಯಕದಿಂದ ಬಂದು ಸಂಗ್ರಹವಾಗುವುದನ್ನು ಐಶಾರಾಮಿ ಜೀವನಕ್ಕೆ ಬಳಸದೆ ದಾಸೋಹಂಭಾವದಿಂದ ಸಮಾಜಕ್ಕಾಗಿ ಸಂಗ್ರಹಿಸುವ ಶಿವನಿಧಿಗೆ ಕೊಡಬೇಕು. ಯಾವುದೇ ಸತ್ಯಶುದ್ಧ ಕಾಯಕದ ಶಿವಶರಣರು ಸಂಕುಲದಲ್ಲಿ ಸಮಾನ ಗೌರವ ಹೊಂದಿದವರಾಗಿರುತ್ತಿದ್ದರು. ಅಲ್ಲಿ ಜಾತಿಗಳು ಅಳಿದು ಕಾಯಕಧರ್ಮ ಮಾತ್ರ ಉಳಿದಿತ್ತು. ಇಂದು ಕೂಡ ಸಹಸ್ರಾರು ಜಾತಿ ಉಪಜಾತಿಗಳಿಂದ ತುಂಬಿದ ಭಾರತೀಯ ಸಮಾಜದಲ್ಲಿ ಬಸವಣ್ಣನವರ ಸಮತಾ ಸಮಾಜವನ್ನು ಕಲ್ಪಿಸಿಕೊಳ್ಳಲು ಕೂಡ ಸಾಧ್ಯವಿಲ್ಲ. ಆದರೆ ಬಸವಣ್ಣನವರು ತಮ್ಮ ಜೀವಿತಾವಧಿಯಲ್ಲೇ ಅಂಥದೊಂದು ಸಮಾಜವನ್ನು ನಿರ್ಮಿಸಿ ತೋರಿಸಿ ವಿಶ್ವಕ್ಕೇ ಮಾದರಿಯಾದರು.

ಅಸ್ಪೃಶ್ಯರ ಮತ್ತು ಕೆಳವರ್ಗದ ಕಾಯಕಜೀವಿಗಳಲ್ಲಿ ಬದುಕುವ ಸ್ಥೈರ್ಯ ತುಂಬಿ ಭವಿಷ್ಯದ ಬಗ್ಗೆ ಆಶಾಭಾವ ಮೂಡಿಸುವುದಕ್ಕಾಗಿ ಕೆಳಜಾತೀಕರಣಕ್ಕೆ ಒಳಗಾದ ಒಬ್ಬನೇ ಒಬ್ಬ ಮಹಾಪುರುಷನೆಂದರೆ ಬಸವಣ್ಣ. ಅನೇಕ ಮಹಾತ್ಮರು ದಲಿತರಿಗಾಗಿ

ಜೀವ ತೆತ್ತಿದ್ದಾರೆ. ಆದರೆ ಬಸವಣ್ಣನವರ ಹಾಗೆ ಕೆಳಜಾತೀಕರಣಕ್ಕೆ ಒಳಗಾದ ಇನ್ನೊಂದು ಉದಾಹರಣೆ ಇಲ್ಲ. ಬಸವಣ್ಣನವರು ಆರಂಭಿಸಿದ ಸರ್ವಸಮತಾ ಚಳವಳಿ ಅನೇಕ ದೃಷ್ಟಿಯಿಂದ ಅದ್ವಿತೀಯವಾಗಿದೆ. ದಲಿತರು, ಮಹಿಳೆಯರು ಮತ್ತು ಇತರ ಕಾಯಕಜೀವಿಗಳೆಲ್ಲ ಒಂದಾಗಿ ನವಸಮಾಜಕ್ಕೆ ನಾಂದಿ ಹಾಡುವಂಥ ಶರಣಸಂಕುಲವನ್ನು ಸೃಷ್ಟಿಸಿ ಕಾಯಕ ಮತ್ತು ದಾಸೋಹ ಪ್ರಜ್ಞೆಯೊಂದಿಗೆ ಒಂದಾಗಿ ಬದುಕಿದ್ದು ಇಂದಿಗೂ ಮಾರ್ಗದರ್ಶಿಯಾಗಿದೆ. ಪ್ರತಿಯೊಬ್ಬರು ಸಮರತಿ (ಲಿಂಗಸಮಾನತೆ) ಸಮಕಳೆ (ಜಾತಿ ಮತ್ತು ವರ್ಣ ಸಮಾನತೆ) ಸಮಸುಖ (ವರ್ಗಸಮಾನತೆ) ಅರಿಯಬೇಕೆಂಬುದು ಬಸವಣ್ಣನವರ ಒತ್ತಾಸೆಯಾಗಿದೆ.

೧೨ನೇ ಶತಮಾನದ ಐರೋಪ್ಯ ರಾಷ್ಟ್ರಗಳಲ್ಲಿ ಇಂಥ ಸಮಾನತೆಯ ಕನಸು ಕೂಡ ಬಿದ್ದಿದ್ದಿಲ್ಲ. ಅನುಭವ ಮಂಟಪದಂಥ ಸರ್ವ ಜಾತಿ ಜನಾಂಗಗಳ ಸಮೂಹ ಪ್ರಜ್ಞೆಯ ಸಮಾಜೋ ಧಾರ್ಮಿಕ ಸಂಸತ್ತಿನ ಪ್ರಜ್ಞೆಯೂ ಇರಲಿಲ್ಲ. ಮಹಿಳೆಯರ ಶಿಕ್ಷಣ, ಕೆಳಜಾತಿಗಳ ಶಿಕ್ಷಣ, ಮತ್ತು ವಯಸ್ಕರ ಶಿಕ್ಷಣದ ವಿಚಾರ ಕೂಡ ಹೊಳೆದಿರಲಿಲ್ಲ. ಬಸವಣ್ಣನವರ ನೇತೃತ್ವದಲ್ಲಿ ಪ್ರಜಾಪ್ರಭುತ್ವದ ಈ ಎಲ್ಲಾ ಪ್ರಯೋಗಗಳು ಕಲ್ಯಾಣದಲ್ಲಿ ನಡೆದದ್ದೊಂದು ವಿಶೇಷ.

ಗುಲಾಮಗಿರಿ ಮೊದಲು ಮಾಡಿ ಭಾರತದ ಎಲ್ಲ ದುರಂತಗಳಿಗೆ ಜಾತಿ ವ್ಯವಸ್ಥೆಯೇ ಕಾರಣವಾಗಿದೆ. ಜಾತಿಯನ್ನು ಮೀರಿ ಬಹುಜನರ ಹಿತಕ್ಕಾಗಿ ಚಿಂತಿಸುವ ಕ್ರಮವನ್ನು ಭಗವಾನ ಬುದ್ಧ ೨೬೦೦ ವರ್ಷಗಳ ಹಿಂದೆ ತೋರಿಸಿಕೊಟ್ಟ. ಬಸವಣ್ಣನವರು ೮೫೦ ವರ್ಷಗಳ ಹಿಂದೆ ಅದನ್ನೊಂದು ಚಳವಳಿಯಾಗಿ ರೂಪಿಸಿದರು. ಜಾತಿ ವಿನಾಶ ಮಾಡದೆ ಏನನ್ನೂ ಸಾಧಿಸಲಿಕ್ಕಾಗದು ಎಂಬುದು ಬಸವಣ್ಣನವರ ದೃಢ ನಿರ್ಧಾರವಾಗಿತ್ತು. "ಕುಲಮದಕ್ಕೆ ಹೋರಿ ಜಂಗಮಭೇದವ ಮಾಡುವೆ, ಫಲವೇನು? ನಿತ್ಯಲಿಂಗಾರ್ಚನೆ ಪ್ರಾಯಶ್ಚಿತ್ತ." ಹೀಗೆ ಲಿಂಗಾರ್ಚನೆಯು ಭೇದವನ್ನು ಅಳಿಸಿಹಾಕುವ ಉದ್ದೇಶವನ್ನು ಹೊಂದಿದೆ. "ಕುಲವನರಸುವರೆ ಶರಣರಲ್ಲಿ ಜಾತಿಸಂಕರವಾದ ಬಳಿಕ" ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಜಾತ್ಯತೀತ ಮತ್ತು ವರ್ಗರಹಿತ ಸಮಾಜ ನಿರ್ಮಾಣ ಮಾಡುವುದೇ ಬಸವಣ್ಣನವರ ಉದ್ದೇಶವಾಗಿತ್ತು. ಶರಣರು ಇಂಥ ಸುಂದರವಾದ ನವಸಮಾಜದ ನಿರ್ಮಾಣಕ್ಕಾಗಿ ಜೀವ ಸವೆಸಿದರು.

ಎಲ್ಲ ಜಾತಿ ಜನಾಂಗಗಳ ಕಾಯಕಪ್ರತಿಭೆಯೊಂದಿಗೆ ನವಮಾನವನ ಸೃಷ್ಟಿಮಾಡುವ ಕನಸನ್ನು ಬಸವಣ್ಣನವರು ಕಂಡಿದ್ದರು. "ಹೊಲೆಯ ಹೊಲಬಿಗನಾದಡೆ ಅವನ ಹೊರೆಯಲ್ಲಿಪ್ಪುದು ಲೇಸು ಕಂಡಯ್ಯ" ಎಂದು ಬಸವಣ್ಣನವರು ಹೇಳಿದ್ದಾರೆ. ಬದುಕಿನ ದಾರಿ ತೋರಿಸುವ ಶಕ್ತಿ ಅಸ್ಪೃಶ್ಯನಿಗೆ ಇದ್ದಾಗ ಅವನ ಜೊತೆಗಿರಬೇಕು ಎಂದು

ಬಸವಣ್ಣನವರು ತಿಳಿಸುತ್ತಾರೆ. "ಭಕ್ತಿ ಇಲ್ಲದ ಬಡವ ನಾನಯ್ಯ, ಕಕ್ಕಯ್ಯನ ಮನೆಯಲ್ಲೂ ಬೇಡಿದೆ. ಚೆನ್ನಯ್ಯನ ಮನೆಯಲ್ಲೂ ಬೇಡಿದೆ." ಎಂದು ಹೇಳುವ ಬಸವಣ್ಣನವರು ಎಲ್ಲ ಜನಜಾತಿಗಳನ್ನು ಸಮಾನವಾಗಿ ಕಂಡು ಅವುಗಳ ಅನುಭವವನ್ನು ಒಟ್ಟಾಗಿಸುತ್ತ ಮೇಲುಕೀಳಿಲ್ಲದ ಸಮಾಜವನ್ನು ನಿರ್ಮಿಸುವ ನಿಟ್ಟಿನಲ್ಲಿ ಅನೇಕ ವಿಧವಾಗಿ ಚಿಂತಿಸಿದರು. ಹೀಗೆ ಎಲ್ಲ ಸ್ತರದ ಜನರ ಪ್ರತಿಭೆ ಮತ್ತು ನೋವಿನ ಅನುಭವವನ್ನು ತಮ್ಮದಾಗಿಸಿಕೊಂಡರು. ಸರ್ವಜನಾಂಗಗಳ ಅನುಭವದ ಸಾರವನ್ನು ತಮ್ಮ ಪ್ರತಿಭೆ ಮತ್ತು ಆತ್ಮಜ್ಞಾನದ ಜೊತೆ ಬೆರೆಸುವುದರ ಮೂಲಕ ಮಹಾನುಭಾವಿಯಾದರು.

"ಜಲವ ತಪ್ಪಿದ ಮತ್ಸ್ಯ ಬದುಕೂದೇ ಸೋಜಿಗ. ಗಣತಿಂತಿಣಿಯೊಳಗಿರಿಸೆನ್ನ ಲಿಂಗವೆ" ಎಂದು ಎಲ್ಲಾ ಜನಸಮುದಾಯಗಳ ಜೊತೆಗೆ ಇರುವುದಾಗಿ ಘೋಷಿಸಿದರು. ದೇವಸಹಿತ ಭಕ್ತ ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡೆನಾದಡೆ ನಿಮ್ಮಾಣೆ! ನಿಮ್ಮ ಪುರಾತರಾಣೆ! ತಲೆದಂಡ! ತಲೆದಂಡ! ಕೂಡಲಸಂಗಮದೇವಾ, ಭಕ್ತರಲ್ಲಿ ಕುಲವನರಿಸಿದಡೆ ನಿಮ್ಮ ರಾಣಿವಾಸದಾಣೆ." ಎಂದು ಬಸವಣ್ಣನವರು ಹೇಳುವಲ್ಲಿ ಯಾವ ಕಾಯಕವೂ ಮೇಲಲ್ಲ, ಯಾವ ಕಾಯಕವೂ ಕೀಳಲ್ಲ ಎಂಬುದನ್ನು ಸೂಚಿಸಿದ್ದಾರೆ. ನಮ್ಮ ಕಾಯಕ ನಿಷ್ಠೆಯೇ ನಮ್ಮನ್ನು ದೇವರಾಗಿಸುವುದು. ಅದಕ್ಕೂ ಮಿಗಿಲಾಗಿಸುವುದು. ಅಂತೆಯೆ "ಕುಲಕ್ಕೆ ತಿಲಕ ನಮ್ಮ ಮಾದಾರ ಚೆನ್ನಯ್ಯ ನಿಮ್ಮಿಂದಧಿಕ ನೋಡಾ ಕೂಡಲಸಂಗಮದೇವಾ" ಎಂದು ಬಸವಣ್ಣನವರು ಸಾರಿದ್ದಾರೆ. ಶ್ರೇಣೀಕೃತ ಮನುವಾದಿ ಸಮಾಜದಲ್ಲಿ ಕಟ್ಟಕಡೆಯ ಜಾತಿಗೆ ಸೇರಿದ ವ್ಯಕ್ತಿಯೊಬ್ಬ ತನ್ನ ಕರ್ತವ್ಯನಿಷ್ಠೆ ಪ್ರಾಮಾಣಿಕತೆ, ಎಲ್ಲ ಜೀವಿಗಳಿಗೆ ಸೇವೆ ಸಲ್ಲಿಸುವ ಹಂಬಲದ ಮೂಲಕ ಎಷ್ಟೊಂದು ವ್ಯಕ್ತಿತ್ವ ವಿಕಸನ ಹೊಂದುತ್ತಾನೆಂದರೆ ಆತ ದೇವರಿಗಿಂತಲೂ ದೊಡ್ಡವನಾಗಿಬಿಡುತ್ತಾನೆ. ಇಂಥ ವ್ಯಕ್ತಿತ್ವವಿಕಸನ ಹೊಂದಿದ್ದ ಮಾದಾರ ಚೆನ್ನಯ್ಯನವರನ್ನು ಬಸವಣ್ಣನವರು ತಮ್ಮ ಆರಾಧ್ಯ ದೇವರಾದ ಕೂಡಲಸಂಗಮದೇವರಿಗಿಂತಲೂ ಮೇಲಿಟ್ಟು ನೋಡುತ್ತಾರೆ. ಹೀಗೆ ಕಟ್ಟಕಡೆಯ ಮನುಷ್ಯನೊಬ್ಬ ಉನ್ನತ ವ್ಯಕ್ತಿತ್ವ ಹೊಂದಿ ದೇವರಿಗಿಂತ ದೊಡ್ಡವನಾದ ಉದಾಹರಣೆ ಜಗತ್ತಿನ ಯಾವ ಧರ್ಮದಲ್ಲೂ ಕಾಣುವುದಿಲ್ಲ. ಹೀಗೆ ಬಸವಣ್ಣನವರು ಅದ್ವಿತೀಯರಾಗುತ್ತಾರೆ. ಜಗತ್ತಿನ ಎಲ್ಲ ದಾರ್ಶನಿಕರ ಮಧ್ಯೆ ವಿನಮ್ರ ಭಕ್ತನಾಗಿ ಕಂಗೊಳಿಸುತ್ತಾರೆ.

ಲಿಂಗದೀಕ್ಷೆ ಎಂಬುದು ಭೇದವಿಲ್ಲದ ಸಮಾಜವನ್ನು ಸೃಷ್ಟಿಸುವ ಪ್ರಕ್ರಿಯೆ. "ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆಯಾದಬಳಿಕ ಸಾಕ್ಷಾತ್ ಶಿವನೆಂದು ವಂದಿಸಿ, ಪೂಜಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ" ಎಂದು ಬಸವಣ್ಣನವರು ಹೇಳುತ್ತಾರೆ. ಲಿಂಗದೀಕ್ಷೆಯು ಕೇವಲ ಜಾತಿಗಳನ್ನಷ್ಟೇ

ನಾಶಗೊಳಿಸುವುದಿಲ್ಲ; ಅನೈತಿಕ ಸಂಬಂಧದಿಂದ ಜನಿಸಿದವರಿಗೆ ಅಂಟಿದ ಸಾಮಾಜಿಕ ಕಳಂಕವನ್ನೂ ಹೊಡೆದೋಡಿಸುತ್ತದೆ ಎಂದು ಈ ಮೂಲಕ ಘೋಷಿಸಿದ್ದಾರೆ. ಕೆಳಜಾತಿಗಿಂತಲೂ ಅತೀತರಾಗಿ ಅನೈತಿಕ ಸಂಬಂಧದಿಂದ ಹುಟ್ಟಿದ ಮಕ್ಕಳ ಕಡೆಗೂ ಬಸವಣ್ಣನವರ ಜೀವಕಾರುಣ್ಯ ಹರಿಯುವ ಕ್ರಮ ಹೃದಯಸ್ಪರ್ಶಿಯಾಗಿದೆ. "ಚೆನ್ನಯನ ಮನೆಯ ದಾಸನ ಮಗನು, ಕಕ್ಕಯ್ಯನ ಮನೆಯ ದಾಸಿಯ ಮಗಳು, ಇವರಿಬ್ಬರು ಹೊಲದಲು ಬೆರಣಿಗೆ ಹೋಗಿ ಸಂಗವ ಮಾಡಿದರು. ಇವರಿಬ್ಬರಿಗೆ ಹುಟ್ಟಿದ ಮಗ ನಾನು ಕೂಡಲಸಂಗಮದೇವ ಸಾಕ್ಷಿಯಾಗಿ" ಎಂದು ಹೇಳುವ ಮೂಲಕ ಬಸವಣ್ಣನವರು ಕೆಳಜಾತಿಯವರೂ ತಿರಸ್ಕರಿಸುವ ಅನೈತಿಕ ಸಂಬಂಧದಿಂದ ಜನಿಸಿದ ಮಗುವಾಗಿ ನಿಂತು ಅಂಥ ಮಕ್ಕಳ ಹಕ್ಕುಗಳ ಪ್ರತಿಪಾದಕರಾಗುತ್ತಾರೆ. "ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯ ಹೊರಿಸದಿರಯ್ಯಾ" ಎಂದು ಬಸವಣ್ಣನವರು ಹೇಳುವ ಮೂಲಕ ಬ್ರಾಹ್ಮಣ್ಯದ ಕರ್ಮಗಳಿಂದ ಬಿಡಿಸಿಕೊಂಡು ಕಾಯಕಜೀವಿಗಳಲ್ಲಿ ಒಂದಾಗಿಹೋಗುತ್ತಾರೆ.

ಮೇಲು ಕೀಳು ಸೃಷ್ಟಿಸುವ ಮತ್ತು ಯಾವುದೂ ನಮ್ಮ ಕೈಯಲ್ಲಿ ಇಲ್ಲ ಎಂಬ ಯಥಾಸ್ಥಿತಿವಾದವನ್ನು ಪ್ರತಿಪಾದಿಸುವ ಕರ್ಮ ಸಿದ್ಧಾಂತ ಹಾಗೂ ಪುಣ್ಯ ಪಾಪ ಮತು ಸ್ವರ್ಗ ನರಕಗಳನ್ನು ಸೃಷ್ಟಿಸುವ ಮೂಲಕ ಬಹುಪಾಲು ಜನಸಾಮಾನ್ಯರನ್ನು ಅಜ್ಞಾನದಲ್ಲಿಟ್ಟು ಸುಲಿಗೆ ವ್ಯವಸ್ಥೆಯನ್ನು ರೂಪಿಸಿದ ಮನುಧರ್ಮವನ್ನು ಬಸವಣ್ಣನವರು ಸ್ಪಷ್ಟವಾಗಿ ತಿರಸ್ಕರಿಸಿದ್ದಾರೆ. "ಒಮ್ಮೆ ಶರಣೆಂದಡೆ ಪಾಪ ಕರ್ಮ ಓಡುವವು" ಎಂದು ಧೈರ್ಯ ತುಂಬುತ್ತಾರೆ. "ಮನೆಯೊಳಗೆ ಕತ್ತಲೆ ಹರಿಯದೊಡಾ ಜ್ಯೋತಿಯದೇಕೊ? ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯದೇಕೊ?" ಎಂದು ಹೇಳುವ ಮೂಲಕ ಇಷ್ಟಲಿಂಗ ಪೂಜೆ ಇರುವುದೇ ಲೋಕದ ಜನರ ಬದುಕನ್ನು ನರಕ ಮಾಡಿದ ಕರ್ಮಸಿದ್ಧಾಂತವನ್ನು ಹೊಡೆದೋಡಿಸಲು ಎಂಬುದನ್ನು ಸೂಚಿಸುತ್ತಾರೆ. ಪುಣ್ಯಪಾಪವೆಂಬ ಉಭಯ ಕರ್ಮವನಾರು ಬಲ್ಲರಯ್ಯಾ? ಇವನಾರುಂಬರು? ಕಾಯ ತಾನುಂಬಡೆ ಕಾಯ ತಾ ಮಣ್ಣು, ಜೀವ ತಾನುಂಬಡೆ ಜೀವ ತಾ ಬಯಲು" ಎಂದು ಹೇಳುವ ಮೂಲಕ ಪುಣ್ಯ ಪಾಪಗಳನ್ನು ಅಲ್ಲಗಳೆದಿದ್ದಾರೆ. ಬಸವಣ್ಣನವರ ಪ್ರಕಾರ ಲೋಕಹಿತವನ್ನುಂಟು ಮಾಡುವುದೇ ಪುಣ್ಯ. ಲೋಕಕ್ಕೆ ಹಾನಿಯನ್ನುಂಟು ಮಾಡುವುದೇ ಪಾಪ. ಇನ್ನು ಸ್ವರ್ಗ ನರಕಗಳಂತೂ ಇಲ್ಲವೇ ಇಲ್ಲ. "ಆಚಾರವೇ ಸ್ವರ್ಗ, ಅನಾಚಾರವೇ ನರಕ" ಎಂದು ಬಸವಣ್ಣನವರು ಸ್ಪಷ್ಟಪಡಿಸಿದ್ದಾರೆ. ಸ್ವರ್ಗ ನರಕಗಳು ನಮ್ಮ ಸಂಸ್ಕಾರದಲ್ಲಿವೆ. ನಮ್ಮ ಮನಸ್ಸಿನಲ್ಲೇ ಇವೆ. ನಮ್ಮ ಸದ್ಭಾವನೆ ನಮ್ಮ ಮನಸ್ಸಿನಲ್ಲೇ ಸ್ವರ್ಗವನ್ನು ಸೃಷ್ಟಿಸುವುದು. ನಮ್ಮ ಕುಟಿಲತನದಿಂದಾಗಿ ನಾವು ನಮ್ಮ ಮನಸ್ಸಿನಲ್ಲೇ ನರಕವನ್ನು ಅನುಭವಿಸುವುವೆವು.

ಹೀಗೆ ಬಸವಣ್ಣನವರು ಮಾನವರನ್ನು ಎಲ್ಲ ರೀತಿಯ ಮೂಢನಂಬಿಕೆ ಮತ್ತು ಧಾರ್ಮಿಕ ಕಂದಾಚಾರದಿಂದ ಹೊರತಂದು ವಿಮೋಚನೆಗೊಳಿಸುತ್ತಾರೆ. ಪ್ರತಿಯೊಂದು ಧರ್ಮ ಕರ್ಮಕಾಂಡ ಮತ್ತು ಜ್ಞಾನಕಾಂಡಗಳನ್ನು ಹೊಂದಿರುತ್ತದೆ. ಕರ್ಮಕಾಂಡವು ದೈನಂದಿನ ಆಚರಣೆಗೆ ಸಂಬಂಧಿಸಿದ್ದು. ಜ್ಞಾನಕಾಂಡವು ಧರ್ಮದ ಸಾರವಾಗಿದ್ದು ವಿಶ್ವಮಾನ್ಯವಾದುದು. ಜ್ಞಾನಕಾಂಡವು ಬೆಳೆದುನಿಂತ ಹೊಲವಾದರೆ ಕರ್ಮಕಾಂಡವು ಅದನ್ನು ರಕ್ಷಿಸುವುದಕ್ಕಾಗಿ ಇರುವ ಬೇಲಿ. ಆದರೆ ಬೇಲಿಯೇ ಎದ್ದು ಹೊಲ ಮೆಯ್ದಂತೆ ಧರ್ಮದ ಕರ್ಮಕಾಂಡವು ಜ್ಞಾನಕಾಂಡವನ್ನು ಮೆಯ್ಯುತ್ತಿದೆ. ಹೀಗಾಗಿ ಧರ್ಮಗಳು ಕೊಲೆಗಡುಕರ ಮನೆಗಳಂತಾಗುತ್ತಿವೆ. ಜ್ಞಾನಕಾಂಡದ ಕರುಣೆ, ಪ್ರೀತಿ, ನಿರಹಂಕಾರ, ಪರೋಪಕಾರ, ಸಮತ್ವಪ್ರಜ್ಞೆ ಮತ್ತು ಭಕ್ತಿಭಾವ ಮಾಯವಾಗಿ ಜಾತಿಸಂಘರ್ಷ, ಕೋಮುಗಲಭೆ, ಭಯೋತ್ಪಾದನೆ ಮತ್ತು ಯುದ್ಧಗಳು ಹೆಚ್ಚುತ್ತಿವೆ. ಜ್ಞಾನಕಾಂಡವೇ ಪ್ರಧಾನವಾಗಿರುವ ಶರಣಧರ್ಮವು ಈ ಎಲ್ಲ ಅನಿಷ್ಟಗಳಿಗೆ ಮದ್ದಾಗಿದೆ. "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ." ಎಂದು ಹೇಳುವ ಮೂಲಕ ಬಸವಣ್ಣನವರು ಜ್ಞಾನಕಾಂಡವನ್ನು ಎತ್ತಿಹಿಡಿದಿದ್ದಾರೆ. ಅಂತೆಯೆ ಅವರು ಜಗಜ್ಜ್ಯೋತಿಯಾಗಿದ್ದಾರೆ. ಈ ಜ್ಯೋತಿ ಜಗತ್ತನ್ನು ಬೆಳಗುವಂಥ ವಾತಾವರಣ ಸೃಷ್ಟಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಸರ್ವಸಮತ್ವದ ಸಮಾಜ ನಿರ್ಮಾಣಕ್ಕಾಗಿ ನವಮಾನವ ಸೃಷ್ಟಿಯ ಘನೋದ್ದೇಶವನ್ನು ಶರಣಧರ್ಮ ಹೊಂದಿದೆ. ಈ ಉದ್ದೇಶದ ಈಡೇರಿಕೆಗಾಗಿ ವೈಜ್ಞಾನಿಕ ಮನೋಭಾವದಿಂದ ಕೂಡಿದ ಹೊಸ ಜೀವನವಿಧಾನ, ಹೊಸ ಆರ್ಥಿಕ ನೀತಿ, ಹೊಸ ಸಾಮಾಜಿಕ ನಿಯಮಗಳು, ಹೊಸ ಜೀವನ ಮೌಲ್ಯಗಳು, ಹೊಸ ಸಾಮಾಜಿಕ ಸಂಬಂಧಗಳು, ಹೊಸ ದೇವರು (ಅಂದರೆ ಸೃಷ್ಟಿಕರ್ತನಾದ ಮೂಲದೇವರು. ಅಗಮ್ಯ, ಅಗೋಚರ, ಅಪ್ರತಿಮ, ಅಪ್ರಮಾಣ, ಅನಾದಿ ಮತ್ತು ಅನಂತವಾದ ದೇವರು ಹೀಗೆ ಈ ಎಲ್ಲ ಸತ್ವಗಳಿಂದ ಕೂಡಿದ ಸನ್ಮಾರ್ಗವೊಂದರ ಸೃಷ್ಟಿಯಾಯಿತು. ಆ ಸನ್ಮಾರ್ಗ ಸಹಜವಾಗಿಯೇ ಜೀವನಧರ್ಮವಾಗಿ ರೂಪುಗೊಂಡಿತು. ಚಾತುರ್ವರ್ಣ್ಯವನ್ನು ಪ್ರತಿಪಾದಿಸುವ ಮನುಧರ್ಮಕ್ಕೆ ಮತ್ತು ಮನುಧರ್ಮದ ಸಂರಕ್ಷಣೆಗಾಗಿ ಇರುವ ರಾಜಧರ್ಮಕ್ಕೆ ಈ ಜೀವನಧರ್ಮ ವಿರುದ್ಧವಾಗಿತ್ತು. ಒಬ್ಬನೇ ದೇವರು, ಒಂದೇ ಭೂಮಿ ಮತ್ತು ಒಂದೇ ಮಾನವಜನಾಂಗವೆಂದು ಸಾರುವ ಈ ಮಾನವಧರ್ಮ ಸಕಲಜೀವಾತ್ಮರಿಗೆ ಲೇಸನೇ ಬಯಸಿತು. ಆದರೆ ಈ ಮಾನವಧರ್ಮವನ್ನು ಮತ್ತು ಈ ಧರ್ಮದ ಅನುಯಾಯಿಗಳನ್ನು

ಪಟ್ಟಭದ್ರ ಹಿತಾಸಕ್ತಿಗಳು ಕೆಂಗಣ್ಣಿನಿಂದ ನೋಡತೊಡಗಿದವು. ಮನುವಾದಿ ಧಾರ್ಮಿಕ ಮತ್ತು ರಾಜಕೀಯ ಪಟ್ಟಭದ್ರರಿಗೆ ಒಳ್ಳೆಯದನ್ನು ನೋಡುವ ತಾಳ್ಮೆ ಇರಲಿಲ್ಲ. ಏಕೆಂದರೆ ಸುಲಿಗೆ ಸಮಾಜದಲ್ಲಿ ಮಾತ್ರ ಅಸ್ತಿತ್ವದಲ್ಲಿ ಇರುವಂಥ ಪರಾವಲಂಬಿ ಜೀವಿಗಳು ಅವರು. ಧರ್ಮದ ಹೆಸರಿನಲ್ಲಿ ನಿರಂತರ ಶೋಷಣೆ ನಡೆದರೆ ಮಾತ್ರ ಅವರು ವಿಜ್ರಂಭಿಸಬಲ್ಲರು. ಅಂತೆಯೆ ಸುಲಿಗೆ ವ್ಯವಸ್ಥೆ ಮೇಲೆಯೆ ಧರ್ಮವನ್ನೂ ರಾಜ್ಯವನ್ನೂ ಕಟ್ಟುವುದಕ್ಕಾಗಿ ಷಡ್ಯಂತ್ರವನ್ನು ರೂಪಿಸುತ್ತ ಸಮಾಜದ ಮೇಲೆ ಹಿಡಿತ ಸಾಧಿಸುತ್ತಲೇ ಬಂದರು.

ಈ ಪರಾವಲಂಬಿಗಳು ದೇವರು, ಧರ್ಮ ಮತ್ತು ರಾಜಧರ್ಮದ ಹೆಸರಿನಲ್ಲಿ ನಿರಂತರ ಶೋಷಣೆಯನ್ನೇ ತಮ್ಮ ದೈನಂದಿನ ಕಾರ್ಯಚಟುವಟಿಕೆಯಾಗಿಸಿಕೊಂಡರು. ವರ್ಗಭೇದ, ವರ್ಣಭೇದ, ಜಾತಿಭೇದ, ಲಿಂಗಭೇದ, ಭಾಷಾಭೇದ, ದೇವಭೇದ, ಸಂಸ್ಕಾರಭೇದ- ಹೀಗೆ ಎಲ್ಲರೀತಿಯ ಭೇದಭಾವದಿಂದ ಕೂಡಿದ ಸಮಾಜವನ್ನು ಸೃಷ್ಟಿಸಿದರು.

ಶರಣರು ಈ ಪಟ್ಟಭದ್ರ ಹಿತಾಸಕ್ತಿಗಳ ಮತ್ತು ಯಥಾಸ್ಥಿತಿವಾದಿಗಳ ಅಸತ್ಯದ ನಿಲುವನ್ನು ಖಂಡಿಸಿದರು. ಮನುವಾದಿಗಳಿಗೆ ದೊಡ್ಡ ಸವಾಲಾದರು. ಜನಸಮುದಾಯದ ಮಧ್ಯೆ ಅಸಮಾನತೆಯ ಕಂದರಗಳನ್ನು ಸೃಷ್ಟಿಸಿದ ಮನುವಾದಿ ವೈದಿಕ ವ್ಯವಸ್ಥೆಯ ವಿರುದ್ಧ ಶರಣರು ತಾತ್ತ್ವಿಕ ನೆಲೆಯಲ್ಲಿ ಮತ್ತು ಅಹಿಂಸಾ ಮಾರ್ಗದಲ್ಲಿ ಸ್ಪಷ್ಟವಾದಿಗಳಾಗಿ ಹೋರಾಡಿದರು. ಈ ಹೋರಾಟವು ಜ್ಞಾನ ಮತ್ತು ಕ್ರಿಯೆಗಳಿಂದ ಕೂಡಿದ ಜೀವಕೇಂದ್ರಿತ ಪ್ರಜ್ಞೆಯ ಮಾನವತಾವಾದಿ ಹೋರಾಟವಾಗಿತ್ತು. ಸ್ವಾವಲಂಬನೆಯ ಹೋರಾಟವಾಗಿತ್ತು. ಮಾನವಘನತೆಯನ್ನು ಎತ್ತಿಹಿಡಿಯುತ್ತ ತಮ್ಮೊಳಗಿನ ಮಹಾಘನವನ್ನು ಅರಿಯುವ ಹೋರಾಟವಾಗಿತ್ತು. ವಸ್ತುಜಗತ್ತಿನ ಅನುಭವ ಮತ್ತು ಪರವಸ್ತು ಜಗತ್ತಿನ ಅನುಭಾವವನ್ನು ಒಟ್ಟಿಗೆ ಪಡೆಯುವ ಹೋರಾಟವಾಗಿತ್ತು. ಒಟ್ಟಾರೆ ಬದುಕಿನ ಸಾಕ್ಷಾತ್ಕಾರದ ಹೋರಾಟವಾಗಿತ್ತು. ಹಳೆಯ ಅಮಾನುಷ ವ್ಯವಸ್ಥೆಯನ್ನು ಸದ್ದುಗದ್ದಲವಿಲ್ಲದೆ ನಿರ್ನಾಮ ಮಾಡುತ್ತ ಹೊಸ ಮಾನವೀಯ ವ್ಯವಸ್ಥೆಯೊಂದನ್ನು ಜಾರಿಗೊಳಿಸುವಂಥ ಘನೋದ್ದೇಶದ ನಿರ್ಣಾಯಕ ಹೋರಾಟ ಇದಾಗಿತ್ತು. ಅಂತೆಯೆ ಈ ಅನನ್ಯ ಹೋರಾಟದಲ್ಲಿ ಮೇಲ್ಜಾತಿಯ ಸಂವೇದನಾಶೀಲರು ಮತ್ತು ಕೆಳಜಾತಿಗಳ ಕಾಯಕಜೀವಿಗಳು ಸೇರಿ ಬಸವಾದಿ ಪ್ರಮಥರ ಸಾಮೂಹಿಕ ನಾಯಕತ್ವದಲ್ಲಿ ಅಹಂಕಾರದ ಜೀವನಕ್ರಮಕ್ಕೆ ವಿರುದ್ಧ ಮತ್ತು ಸದಾಚಾರದಿಂದ ಕೂಡಿದ ಕಾಯಕ, ಪ್ರಸಾದ ಮತ್ತು ದಾಸೋಹ ತತ್ತ್ವದ ಜೀವನ ಕ್ರಮವನ್ನು ಅಳವಡಿಸಿಕೊಂಡರು. ಒಳ್ಳೆಯದನ್ನೇ ಉತ್ಪಾದಿಸುವುದು, ಉತ್ಪಾದಿಸಿದ್ದನ್ನು ದೇವರ ಪ್ರಸಾದವೆಂದು ತಿಳಿಯುವುದು. ನಿರಹಂಕಾರ ಭಾವದಿಂದ

ಕೂಡಿದ ದಾಸೋಹ ಪ್ರಜ್ಞೆಯೊಂದಿಗೆ ಆ ಉತ್ಪನ್ನದ ಮಿಗುತಾಯವನ್ನು ಸಮಾಜಕ್ಕೆ ಬಳಸುವುದು. ಆ ಮೂಲಕ ಸಮಾಜದಲ್ಲಿ ಆರ್ಥಿಕ ಸಮತೋಲನವನ್ನು ಕಾಪಾಡಿ ಭಾವೈಕ್ಯವನ್ನು ಸಾಧಿಸುವುದು ಶರಣರ ಉದ್ದೇಶವಾಗಿತ್ತು. ಹೀಗೆ ಶರಣರು ಮನುಧರ್ಮದ ಸಮಾಜದೊಳಗೆ ತಮ್ಮದೇ ಆದ ಮಾನವಧರ್ಮದ ಸಮಾಜವನ್ನು ಕಟ್ಟಿದರು.

ವಚನ ಚಳವಳಿಯ ಸೃಷ್ಟಿಯಾದ ಇಷ್ಟಲಿಂಗವನ್ನು ಧರಿಸಿದವರೆಲ್ಲ ಸಮಾನ ಗೌರವ ಹೊಂದಿದವರಾದರು. ಅವರು ಹೆಣ್ಣು ಗಂಡಿನ ಮಧ್ಯೆ, ಬಡವ ಶ್ರೀಮಂತರ ಮಧ್ಯೆ, ಹಳ್ಳಿಗರ ಮತ್ತು ನಗರವಾಸಿಗಳ ಮಧ್ಯೆ, ಸಾಕ್ಷರರು ಮತ್ತು ನಿರಕ್ಷರಿಗಳ ಮಧ್ಯೆ, ಪಂಡಿತರು ಮತ್ತು ಪಾಮರರ ಮಧ್ಯೆ, ಅಸ್ಪೃಶ್ಯರು ಮತ್ತು ಸವರ್ಣೀಯರ ಮಧ್ಯೆ ಹಾಗೂ ಕಾಯಕಜೀವಿಗಳ ಮಧ್ಯೆ ಭೇದ ಎಣಿಸಲಿಲ್ಲ. ಜಾತಿ ಸಂಕರಗೊಂಡು ನಿರ್ಮಾಣವಾದ ಶರಣಸಂಕುಲದಲ್ಲಿ ಪ್ರಧಾನಿ ಪದವಿಯ ಬಸವಣ್ಣನವರೂ ಸಮಗಾರ ಹರಳಯ್ಯನವರೂ ಸರಿಸಮಾನವಾಗೇ ಇದ್ದರು. ಪ್ರಧಾನಮಂತ್ರಿಯ ಕಾಯಕಕ್ಕೂ ಕಸಗುಡಿಸುವ ಕಾಯಕಕ್ಕೂ ಒಂದೇ ಜವಾಬ್ದಾರಿ ಇತ್ತು. ಅದೇನೆಂದರೆ ಸಮಾಜವನ್ನು ಸ್ವಚ್ಛಗೊಳಿಸುತ್ತ ವ್ಯಕ್ತಿತ್ವವಿಕಸನಗೊಳಿಸಿಕೊಳ್ಳುವುದು. ಹಿಂಸೆ ಮತ್ತು ಅಸಮಾನತೆಯನ್ನು ಸಂಕೇತಿಸುವ ಶಸ್ತ್ರಗಳಂತೆ ಇರುವ ಶಾಸ್ತ್ರಗಳನ್ನು ತಿರಸ್ಕರಿಸಿ ಅನುಭವ ಮೂಲದ ಜೀವನದರ್ಶನ (ಅನುಭಾವ) ಪಡೆಯುವುದು. ಇಂಥ ಸಮಾಜದಲ್ಲಿ ವ್ಯಕ್ತಿಗಳು ಶ್ರೀಮಂತರಾಗುತ್ತಿರಲಿಲ್ಲ. ಆದರೆ ಬದುಕು ಶ್ರೀಮಂತವಾಗುತ್ತಿತ್ತು. ಈ ಶ್ರೀಮಂತ ಬದುಕಿನಲ್ಲಿ ವಸ್ತುಮೋಹ ಇರುತ್ತಿರಲಿಲ್ಲ. ಕೀಳರಿಮೆಗೆ ಇಲ್ಲಿ ಸ್ಥಾನವಿರಲಿಲ್ಲ. ಕಾಯಕದ ಆನಂದದಲ್ಲಿ ಜೀವನದರ್ಶನವಾಗುತ್ತಿತ್ತು. ಜೀವಕಾರುಣ್ಯದ ಮನಸ್ಥಿತಿ ನಿರ್ಮಾಣವಾಗುತ್ತಿತ್ತು. ಯುದ್ಧ, ಆತಂಕ, ಶೋಷಣೆ, ಅಸಮಾನತೆ ಹೀಗೆ ಎಲ್ಲ ಅನಿಷ್ಟಗಳು ನಿರ್ನಾಮವಾಗಿ ಶರಣರ ನವಮಾನವ ಸಮಾಜದ ಉದಯವಾಯಿತು. ಶೋಷಣೆಯ ಸಾಧನವಾದ ಯಾವುದೇ ದೇವರು ಅಥವಾ ೩೩ ಕೋಟಿ ದೇವತೆಗಳು ಈ ಧರ್ಮದ ಮೂಲವಾಗಲಿಲ್ಲ. ದೇವರ ಮೂಲರೂಪವಾದ ದಯೆ ಧರ್ಮದ ಮೂಲವಾಯಿತು. "ದಯವಿಲ್ಲದ ಧರ್ಮ ಅದೇವುದಯ್ಯಾ" (ದಯವಿಲ್ಲದ ಧರ್ಮ ಅದೇನು ಮಾಡುವುದಯ್ಯಾ) ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ.

ಪಟ್ಟಭದ್ರ ಹಿತಾಸಕ್ತಿಗಳಿಗೆ ಇದು ಸಹಿಸಲಸಾಧ್ಯವಾಯಿತು. ಮನುಧರ್ಮದ ಭಯೋತ್ಪಾದಕರು ಮತ್ತು ಬಿಜ್ಜಳನ ರಾಜ್ಯಶಕ್ತಿಯ ಭಯೋತ್ಪಾದಕರು ಜೊತೆಗೂಡಿ ಶರಣರ ಚಳವಳಿಯನ್ನು ಹತ್ತಿಕ್ಕಲು ಹೊಂಚುಹಾಕಿದರು. ಕೆಳಜಾತಿಯಿಂದ ಬಂದ ಮಹಾಜ್ಞಾನಿ ಅಲ್ಲಮಪ್ರಭುಗಳು ಶೂನ್ಯಸಿಂಹಾಸನದಲ್ಲಿ ವಿರಾಜಮಾನರಾದಾಗ ಮನುಧರ್ಮ ಸಿಂಹಾಸನ ಮತ್ತು ರಾಜಸಿಂಹಾಸನ ಅಲುಗಾಡತೊಡಗಿದವು. ಇನ್ನು

ಕಾಯಕಜೀವಿಗಳ ರಾಜ್ಯ ಸ್ಥಾಪನೆಯಾಗುವುದರಲ್ಲಿ ಸಂಶಯವಿಲ್ಲ ಎಂಬ ಭಾವ ಮನುವಾದಿಗಳಲ್ಲಿ ಮೂಡಿತು. ಕೆಳಜಾತಿಯವರು ಸಿಂಹಾಸನ ಏರುವುದು ತಮ್ಮ ಸಮಾಜ ಹಾಳಾಗುವುದರ ಮುನ್ಸೂಚನೆ ಎಂದು ಅವರು ಭಾವಿಸಿದರು. ಒಮ್ಮೆ ಕಾಯಕಜೀವಿಗಳು ನಿರ್ಣಾಯಕ ಘಟ್ಟ ತಲುಪಿದರೆ ತಮ್ಮ ಐಶಾರಾಮಿ ಬದುಕು ಕೊನೆಗೊಳ್ಳುವುದರಲ್ಲಿ ಸಂಶಯವಿಲ್ಲ ಎಂಬ ಲೆಕ್ಕಾಚಾರ ಅವರದಾಗಿತ್ತು. ಬಿಜ್ಜಳನ ಮೇಲೆ ಹಿಡಿತ ಸಾಧಿಸತೊಡಗಿದರು. ಹೀಗೇ ಮುಂದುವರಿದರೆ ಶರಣರು ಅನಾಯಾಸವಾಗಿ ಕಲ್ಯಾಣವನ್ನು ಆಳತೊಡಗುತ್ತಾರೆ ಎಂದು ಬಿಜ್ಜಳನ ಮಗ ರಾಯಮುರಾರಿ ಸೋವಿದೇವನ ಕಿವಿ ಚುಚ್ಚಿದರು. ಸೋವಿದೇವ ತನ್ನ ಸಾಮ್ರಾಜ್ಯವನ್ನು ಕಳೆದುಕೊಳ್ಳಬಾರದು ಎಂದು ಪರಿಪರಿಯಿಂದ ಹೇಳಿದರು. ಅವನನ್ನು ಬಿಜ್ಜಳನ ಮೇಲೆ ಕೂಡ ಎತ್ತಿಕಟ್ಟುವಲ್ಲಿ ಯಶಸ್ಸನ್ನು ಸಾಧಿಸಿದರು. ಹೀಗೆ ತಮ್ಮ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವುದಕ್ಕಾಗಿ ಬಿಜ್ಜಳನ ಅರಮನೆಯನ್ನು ಗೊಂದಲದ ಗೂಡಾಗಿಸಿದರು. ತಂದೆ ಮಗನ ಮಧ್ಯೆ ವಿರಸ ತಂದಿಟ್ಟರು.

ಏತನ್ಮಧ್ಯೆ ಬ್ರಾಹ್ಮನ ಮಧುವರಸರ ಮಗಳು ಮತ್ತು ಸಮಗಾರ ಹರಳಯ್ಯನವರ ಮಗನ ಜೊತೆಗಿನ ವಿವಾಹ ಧರ್ಮವಿರೋಧಿ ಎಂದು ಸಾರಿದರು. ಅದು ಖಂಡಿತವಾಗಿಯೂ ಮನುಧರ್ಮಕ್ಕೆ ವಿರುದ್ಧವಾದುದೇ ಆಗಿತ್ತು. ಆದರೆ ಶರಣಧರ್ಮದ ಪ್ರಕಾರ ಅದು ಆದರ್ಶವಾಗಿತ್ತು. ಏಕೆಂದರೆ ಶರಣಧರ್ಮವನ್ನು ಸ್ವೀಕರಿಸಿದ ಮೇಲೆ ಮಧುವರಸರು ಬ್ರಾಹ್ಮಣ್ಯವನ್ನು ಕಳೆದುಕೊಂಡರು. ಹರಳಯ್ಯನವರು ಕೆಳಜಾತಿ ಮನೋಭಾವದಿಂದ ಹೊರಬಂದರು. ಅವರಿಬ್ಬರೂ ಶರಣರಾಗಿದ್ದರಿಂದ ಅವರಲ್ಲಿ ಯಾವುದೇ ಭೇದಭಾವ ಇರಲಿಲ್ಲ. ಅವರ ಮಕ್ಕಳ ಮದುವೆ ಶರಣಧರ್ಮದ ಪ್ರಕಾರ ಆಗಿತ್ತು. ಆದರೆ ಮನುವಾದಿಗಳು ಆ ಮದುವೆಯನ್ನು ಮನುಧರ್ಮದ ಪ್ರಕಾರ ನೋಡಿದರು. ವರ್ಣಾಶ್ರಮ ವ್ಯವಸ್ಥೆಯನ್ನು ಕಾಪಾಡುವುದು ರಾಜನ ಧರ್ಮ ಎಂದು ಬಿಜ್ಜಳನಿಗೆ ತಿಳಿಸಿದರು. ರಾಜಧರ್ಮ ಪಾಲಿಸದಿದ್ದರೆ ಸಮಾಜ ಸರ್ವನಾಶವಾಗುವುದೆಂದು ಬಿಜ್ಜಳನಿಗೆ ಎಚ್ಚರಿಕೆ ನೀಡಿದರು. ಬಿಜ್ಜಳ ದೊರೆ ಮಧುವರಸ ಮತ್ತು ಹರಳಯ್ಯನವರಿಗೆ ಎಳೆಹೂಟೆ ಶಿಕ್ಷೆ ಕೊಡುವಹಾಗೆ ನೋಡಿಕೊಂಡರು. ಕಲ್ಯಾಣ ಪ್ರಕ್ಷುಬ್ಧವಾಯಿತು. ಮನುಧರ್ಮದ ಭಯೋತ್ಪಾದಕರು ಶರಣರ ಕಗ್ಗೊಲೆಯಲ್ಲಿ ತೊಡಗಿದರು. ಶರಣರ ಬಹುಪಾಲು ವಚನಸಾಹಿತ್ಯ ಬೆಂಕಿಗೆ ಆಹುತಿಯಾಯಿತು. ಕಲ್ಯಾಣದಲ್ಲಿ ಸಹಸ್ರ ಸಹಸ್ರ ನಿಶ್ಯಸ್ತ್ರ ಶರಣರನ್ನು ಕೊಲ್ಲಲಾಯಿತು. ಕಲ್ಯಾಣವನ್ನು ಮನುವಾದಿ ಭಯೋತ್ಪಾದಕರು ಹಾಳುಗೆಡಹಿದರು. ಅಳಿದುಳಿದ ಶರಣರು ದಿಕ್ಕಾಪಾಲಾಗಿ ಹೋದರು. ಚೆನ್ನಬಸವಣ್ಣನವರು, ಅಕ್ಕನಾಗಮ್ಮ, ಗಂಗಾಂಬಿಕೆ, ಮಡಿವಾಳ ಮಾಚಿದೇವ ಕಿನ್ನರಿ ಬ್ರಹ್ಮಯ್ಯ ಮುಂತಾದ ಶರಣ ಶರಣೆಯರ ಸಾಹಸದಿಂದ ಒಂದಿಷ್ಟು

ವಚನಸಾಹಿತ್ಯದ ರಕ್ಷಣೆಯಾಯಿತು. ಅವರಲ್ಲಿ ಅನೇಕರು ಕಲ್ಯಾಣದಿಂದ ಉಳವಿ ತಲುಪುವುದರೊಳಗೆ ಹುತಾತ್ಮರಾದರು. ಹೀಗೆ ವಚನ ರಕ್ಷಣೆಗಾಗಿ ಶರಣರು ಜೀವದ ಹಂಗುದೊರೆದು ಹೋರಾಡಬೇಕಾಯಿತು. ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಕಟ್ಟಿದ ಕಲ್ಯಾಣವನ್ನೇ ತೊರೆಯಬೇಕಾಯಿತು. ಕನ್ನಡದ ನೆಲದಲ್ಲಿ ೧೨ನೇ ಶತಮಾನದಲ್ಲಿ ಈ ಮನುವಾದಿಗಳ ಭಯೋತ್ಪಾದನೆಯ ಅಟ್ಟಹಾಸ ಇಂದಿಗೂ ಭಯಂಕರ ಕರಾಳ ನೆನಪಾಗಿ ಕಾಡುತ್ತಿದೆ. ಯಾವುದೇ ಧರ್ಮದ ಜನರು ತಮ್ಮ ಧರ್ಮದ ಕರ್ಮಕಾಂಡವನ್ನೇ ಮೂಲಭೂತವಾಗಿ ನಂಬಿ ಅದರ ಜ್ಞಾನಕಾಂಡವನ್ನು ಮರೆತಾಗ ಕೋಮುವಾದಿಗಳಾಗುತ್ತಾರೆ. ನಂತರ ಅವಕಾಶ ಸಿಕ್ಕಾಗ ಭಯೋತ್ಪಾದಕರೂ ಆಗುತ್ತಾರೆ. ಧರ್ಮದ ಹೆಸರಿನಲ್ಲಿ ಸ್ವಹಿತಾಸಕ್ತಿಯನ್ನು ಕಾಪಾಡಿಕೊಳ್ಳುತ್ತಾರೆ. ಬಸವಣ್ಣನವರ ದಯಾಮೂಲದ ಧರ್ಮವು ವಿಶ್ವಪ್ರೇಮದಿಂದ ಕೂಡಿದ ಸರ್ವಸಮತ್ವದ ಅರಿವಿನ ಧರ್ಮವಾಗಿದೆ. ದಯವಿಲ್ಲದ ಧರ್ಮ ಏನು ಮಾಡುವುದಯ್ಯಾ ಎಂದು ಬಸವಣ್ಣನವರು ಕೇಳಿದ್ದು ಅರ್ಥಪೂರ್ಣವಾಗಿದೆ. ದಯವಿಲ್ಲದ ಧರ್ಮವು ಮೂಲಭೂತವಾದವನ್ನು ಸೃಷ್ಟಿಸುವುದು. ಆ ಮೂಲಕ ಕೋಮುವಾದವನ್ನು ಬೆಳೆಸುವುದು. ನಂತರ ಭಯೋತ್ಪಾದನೆಯಲ್ಲಿ ತನ್ನ ಕರಾಳ ಸ್ವರೂಪವನ್ನು ಬಹಿರಂಗಪಡಿಸುವುದು. ಭಯೋತ್ಪಾದನೆ ಎಂಬುದು ಧಾರ್ಮಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಗೊಂದಲದಲ್ಲಿ ಜನ್ಮತಾಳುವಂಥದ್ದು. ಕೈಮೀರಿ ಹೋಗುತ್ತಿರುವ ಆರ್ಥಿಕ, ಸಾಮಾಜಿಕ, ರಾಜಕೀಯ ಮತ್ತು ಜ್ಞಾನದ ಮೇಲಿನ ಹಿಡಿತವನ್ನು ತನ್ನ ಕಪಿಮುಷ್ಟಿಯಲ್ಲಿ ಹಿಡಿದಿಟ್ಟುಕೊಳ್ಳಬಯಸುವ ಒಂದು ವರ್ಗ, ಧರ್ಮ ಅಥವಾ ಕೋಮಿನ ಉದ್ದೇಶವು ಕ್ರೌರ್ಯಕ್ಕೆ ತಿರುಗಿದಾದ ಭಿನ್ನಮತೀಯರನ್ನು ಸದೆಬಡಿದು ಭಯೊತ್ಪಾದನೆಯೇ ಅತ್ಯುತ್ತಮ ವಿಧಾನವಾಗಿ ಕಾಣುತ್ತದೆ. ಅಧಿಕಾರವನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಳ್ಳುವ ತೀವ್ರತೆಯಲ್ಲಿ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವ ಹಪಾಹಪಿಯಲ್ಲಿ ಮತ್ತು ಸ್ವರೂಪಗೊಂದಲದಿಂದ ಹೊರಬರುವ ಗಡಿಬಿಡಿಯಲ್ಲಿ ದುಷ್ಟಶಕ್ತಿಗಳು ಧರ್ಮದ ಹೆಸರಿನಲ್ಲಿ ರಾಜಕೀಯ ಶಕ್ತಿಯಾಗಿ ಬೆಳೆಯುವ ದುರಾಸೆಯೊಂದಿಗೆ ಭಯೋತ್ಪಾದನೆಗೆ ಇಳಿಯುತ್ತವೆ. ಇಂಥ ಮಹತ್ವಾಕಾಂಕ್ಷೆ ಭಯೊತ್ಪಾದನೆಗೆ ಮುಖ್ಯ ಕಾರಣವಾಗಿದೆ. ಒಂದು ದೇಶದ ಮೇಲೆ ಇನ್ನೊಂದು ದೇಶ ಒಂದು ಧರ್ಮದ ಮೇಲೆ ಇನ್ನೊಂದು ಧರ್ಮ ಒಂದು ಕೋಮಿನ ಮೇಲೆ ಇನ್ನೊಂದು ಕೋಮು ಹಿಡಿತ ಸಾಧಿಸಲು ತೀವ್ರವಾಗಿ ಯತ್ನಿಸುತ್ತಿರುವಾಗ ಭಯೋತ್ಪಾದನೆ ತಲೆದೋರುತ್ತದೆ. ಅನೇಕಬಾರಿ ಈ ಭಯೋತ್ಪಾದನೆ ಯುದ್ಧದಲ್ಲಿ ಅವಸಾನಗೊಳ್ಳುವುದು.

ಶರಣಸಂಕುಲ ೧೨ನೇ ಶತಮಾನದಲ್ಲಿ ಕ್ರೌರ್ಯಕ್ಕೆ ಬಲಿಯಾದುದರ ಬಗ್ಗೆ ಕೂಲಂಕಷವಾಗಿ ಅಧ್ಯಯನ ಮಾಡಬೇಕಿದೆ. ಅದೇರೀತಿ ದೇಶದಲ್ಲಿ ಮತ್ತು ಜಗತ್ತಿನಲ್ಲಿ ನಮ್ಮ ಕಾಲಘಟ್ಟದಲ್ಲಿ ನಡೆಯುತ್ತಿರುವ ಭಯೋತ್ಪಾದಕ ಘಟನೆಗಳ ಹಿಂದೆ ಎಂಥೆಂಥವರು ಇದ್ದಾರೆಂಬುದನ್ನು ಅರ್ಥೈಸಿಕೊಳ್ಳಬೇಕಿದೆ. ಶರಣ ಸಮಾಜವನ್ನು ಮತ್ತೆ ಪಡೆಯುವುದರ ಮೂಲಕ ಭಯೋತ್ಪಾದನೆಯನ್ನು ಸಂಪೂರ್ಣವಾಗಿ ತಡೆಗಟ್ಟಲು ಸಾಧ್ಯ ಎಂಬುದನ್ನು ಜಗತ್ತಿಗೆ ಮನವರಿಕೆ ಮಾಡಿ ಕೊಡಬೇಕಿದೆ.

❖❖

೧೭

❖

ಅಧಿಕಾರವೆಂಬ ನಾಯಿತೇಜ

ಹರಗಣ ಪಂಕ್ತಿಯ ನಡುವೆ ಕುಳ್ಳಿರ್ದು
ನಾನು ಒಡೆತನದ ನಾಯಿತೇಜವ ಹೊತ್ತುಕೊಂಡು
ಮಡದಿಯೆನ್ನಗಲೊಳಗೆ ಸಕಲದೇವಾನ್ನವ
ಒಡೆಯರಿಂದಲೂ ಮಿಗಿಲಾಗಿ ಇಕ್ಕಲು, ತೆಗೆದಿರಿಸಿದೆನು.
ಈ ಪರಿಯ ಆಯ ಕಣ್ಗೆ ತೋರಲು ಕಿಲ್ಬಿಷವಾದವು.
ಕರುಣಿ ಚನ್ನಬಸವಣ್ಣಾ, ಮರೆದು ಕೊಂಡೆನಾದಡೆ,
ಒಡೆಯ ಕೂಡಲಸಂಗಯ್ಯಾ ಕೆಡಹಿ ನರಕದಲ್ಲಿಕ್ಕುವ.

–ಬಸವಣ್ಣನವರು

ಬಸವಣ್ಣನವರ ಈ ವಚನ ಪ್ರಭುತ್ವದ ಒಡೆಯರಾರು ಎಂಬುದನ್ನು ಸೂಚಿಸುವ ವಚನವಾಗಿದೆ. ಪ್ರಜೆಗಳನ್ನು ಕಡೆಗಣಿಸುವ ಪ್ರಭುತ್ವವು ಹಿಂಸೆಯ ಮೇಲೆ ತನ್ನ ಅಸ್ತಿತ್ವವನ್ನು ಕಾಪಾಡಿಕೊಂಡಿರುತ್ತದೆ. ಈ ಕಡೆಗಣಿಸುವ ಕ್ರಿಯೆ ಸರ್ವಾಧಿಕಾರದ ಹೆಸರಿನಲ್ಲಷ್ಟೇ ಅಲ್ಲದೆ ಹಿಂದುತ್ವದ, ಇಸ್ಲಾಮಿನ, ಪ್ರಜಾಪ್ರಭುತ್ವದ, ಸಮಾಜವಾದದ ಮತ್ತು ಕಮ್ಯೂನಿಸಂನ ಹೆಸರಿನಲ್ಲಿ ಕೂಡ ನಡೆಯಬಹುದು. ಪ್ರಜಾಹಿತ ಪ್ರಧಾನವಾದ ಪ್ರಭುತ್ವವನ್ನು ರಕ್ಷಿಸುವ ಕ್ರಮವನ್ನು ಬಸವಣ್ಣನವರು ಈ ವಚನದ ಮೂಲಕ ಮಾನವಕುಲಕ್ಕೆ ಅರುಹಿದ್ದಾರೆ. ಸದಾಕಾಲ ಆಳುವವರ್ಗಕ್ಕೆ ಮಾರ್ಗದರ್ಶಿಯಾದ ಈ ವಚನವನ್ನು ಅವರು ಅತ್ಯಂತ ಚಿಕ್ಕ ಘಟನೆಯ ಮೂಲಕ ರಚಿಸಿದ್ದಾರೆ.

ನಿಜವಾದ ಜನಪ್ರತಿನಿಧಿಯ ಲಕ್ಷಣ ಯಾವುದು? ಪ್ರಭುತ್ವದ ಒಡೆಯರಾರು? ಪ್ರಜೆಗಳ ಪ್ರತಿನಿಧಿಗಳು ಪ್ರಜೆಗಳ ಜೊತೆ ವ್ಯವಹರಿಸುವ ಕ್ರಮ ಯಾವುದು? ಪ್ರಭುತ್ವದ ಚುಕ್ಕಾಣಿ ಹಿಡಿದವರು ಹೇಗೆ ಎಚ್ಚರದಿಂದ ಇರಬೇಕು? ಯಾಕೆ ಅವರು ನಿರ್ಭಿಡೆಯಿಂದ ವರ್ತಿಸಬೇಕು? ತಮಗೆ ಒದಗಿ ಬರುವ ಅವಕಾಶ ಪ್ರಜಾಪ್ರಭುತ್ವಕ್ಕೆ ಪೂರಕವಾಗಿದೆಯೊ ಇಲ್ಲವೋ? ಎಂಬುದನ್ನು ಹೇಗೆ ಗುರುತಿಸಲಬೇಕು? ಎಂಬ ಪ್ರಶ್ನೆಗಳಿಗೆ ಈ ವಚನಗಳಲ್ಲಿ

ಉತ್ತರವಿದೆ. ನಮ್ಮ ರಾಜಕಾರಣಿಗಳು ಮತ್ತು ಧರ್ಮಕಾರಣಿಗಳಿಗೆ ಈ ವಚನ ಎಚ್ಚರಿಕೆ ಗಂಟೆ ಕೂಡ ಆಗಿದೆ.

ಬಸವಣ್ಣನವರು ಈ ವಚನದಲ್ಲಿ 'ಒಡೆಯರು' ಎಂಬ ಪದಪ್ರಯೋಗ ಮಾಡಿದ್ದಾರೆ. ಒಡೆಯ ಎಂದರೆ ದೇವರು, ರಾಜ, ಶ್ರೀಮಂತ, ಮಾಲೀಕ ಮುಂತಾದ ಅರ್ಥಗಳಿವೆ. ಆದರೆ ಬಸವಣ್ಣನವರು 'ಒಡೆತನ' ಪದವನ್ನು ಪ್ರಭುತ್ವಕ್ಕೆ ಮತ್ತು 'ಒಡೆಯರು' ಪದವನ್ನು ಜನಸಾಮಾನ್ಯರಿಗೆ ಬಳಸಿದ್ದು ತರ್ಕಬದ್ಧವಾಗಿದೆ. ಬಸವಣ್ಣನವರ ದೃಷ್ಟಿಯಲ್ಲಿ 'ಒಡೆಯರು' ಎಂದರೆ ಶ್ರೀಸಾಮಾನ್ಯರು, ಶರಣರು ಮತ್ತು ಇಷ್ಟಲಿಂಗತತ್ತ್ವವೆಂಬ ಸರ್ವಸಮತ್ವದ ವಚನತತ್ತ್ವವನ್ನು ಜನಮನದಲ್ಲಿ ಬಿತ್ತುವವರು. ಈ ಒಡೆಯರಿಗೂ ಒಡೆತನಕ್ಕೂ ಅಜಗಜಾಂತರವಿದೆ. ಈ ಒಡೆಯರು ಒಡೆತನವನ್ನು ಹೊಂದಿಲ್ಲ. ರಾಜರಾದವರು ಒಡೆತನವನ್ನು ಹೊಂದಿದ್ದಾರೆ. ಪ್ರಭುತ್ವವೆಂಬ ಆ ಒಡೆತನದ ನೌಕರಶಾಹಿಯ ಪ್ರತೀಕವಾದ ತಮ್ಮ ಪ್ರಧಾನಮಂತ್ರಿ ಪದವಿಯನ್ನು 'ನಾಯಿತೇಜ' ಎಂದು ಕರೆದು ತಾವು ಅದನ್ನು ನೆಚ್ಚಿಕೊಂಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಜನಸಮುದಾಯ ಕೂಡ ವ್ಯಕ್ತಿಗಳ ಪದವಿಯ ಮೂಲಕ ಅವರನ್ನು ಅಳೆಯಬಾರದು ಎಂಬ ಸೂಚನೆಯನ್ನು ಬಸವಣ್ಣನವರು ಈ ವಚನದ ಮೂಲಕ ನೀಡಿದ್ದಾರೆ.

ಬಸವಣ್ಣನವರು ಕಲ್ಯಾಣದ ಪ್ರಧಾನಿಯಾಗಿದ್ದರೂ ಶರಣಸಂಕುಲದ ಪಂಕ್ತಿಯಲ್ಲೇ ಪ್ರಸಾದ ಸ್ವೀಕರಿಸುವ ಮೂಲಕ ಪಂಕ್ತಿಭೇದವನ್ನು ಅಳಿಸಿಹಾಕಿದ ಮೂಲಪುರುಷರಾಗಿದ್ದಾರೆ. ಬಸವಧರ್ಮದ ಪರಿಪಾಲಕರೆಂದು ಹೇಳಿಕೊಳ್ಳುವ ಸ್ವಾಮಿಗಳಾಗಲೀ ಲಿಂಗಾಯತ ರಾಜಕಾರಣಿಗಳಾಗಲಿ ಈ ಪರಿಯಲ್ಲಿ ಬಸವಣ್ಣನವರನ್ನು ಅನುಸರಿಸುತ್ತಿರುವುದು ಕಣ್ಣಿಗೆ ಬಿದ್ದಿಲ್ಲ ಎಂದೇ ಹೇಳಬೇಕಾದ ಪರಿಸ್ಥಿತಿ ಇದೆ. ಬಸವಣ್ಣನವರ ಮೂರ್ತಿಗಾಗಿ ಮತ್ತು ಆ ಮೂಲಕ ಕೀರ್ತಿಗಾಗಿ ಹಂಬಲಿಸುವ ಸ್ವಾಮಿಗಳು ಹಾಗೂ ಅಂಥವರಿಗೆ, ಜನರ ಸಂಪತ್ತಾದ ರಾಜ್ಯದ ಬೊಕ್ಕಸದಿಂದ ಕೋಟಿಗಟ್ಟಲೆ ಹಣ ಸುರಿಯುವ ರಾಜಕಾರಣಿಗಳು ಸ್ವಲ್ಪ ಬಸವಣ್ಣನವರ ಆದರ್ಶಗಳ ಕಡೆಗೆ ಗಮನ ಹರಿಸುವುದು ಅವಶ್ಯಕತೆಯಾಗಿದೆ.

ಜನರಿಗೆ ಎಲ್ಲ ತೆರನಾದ ಬೂಟಾಟಿಕೆಗಳು ಅರ್ಥವಾಗುತ್ತಿವೆ. 'ಜನರ ವೋಟಿಗಾಗಿ ಸ್ವಾಮಿಗಳಿಗೆ ಮತ್ತು ವಿವಿಧ ಧರ್ಮಗಳ ಧರ್ಮಾಧಿಕಾರಿಗಳಿಗೆ ನೋಟು' ಎಂಬ ದುರಂತ ಸ್ಥಿತಿಯನ್ನು ನಮ್ಮ ರಾಜಕೀಯ ನಾಯಕರು ತಲುಪಿದ್ದಾರೆ. ಎಳ್ಳಷ್ಟು ಎಚ್ಚರಿಕೆ ಇಲ್ಲದೆ 'ನಾಯಿತೇಜ'ಕ್ಕಾಗಿ ಹಂಬಲಿಸುತ್ತಿದ್ದಾರೆ.

ಬಸವಣ್ಣನವರು ಕೇವಲ ಮಾನವಧರ್ಮದ ಸ್ಥಾಪಕರಾಗಿರಲಿಲ್ಲ. ಅವರು ರಾಜನೀತಿಜ್ಞರೂ ಆಗಿದ್ದರು. ಆಡಳಿತದ ಚುಕ್ಕಾಣಿ ಹಿಡಿದ ಪ್ರಧಾನಿಯೂ ಆಗಿದ್ದರು. ಆದರೆ ಅವರ ಆದರ್ಶಗಳು ಕಟ್ಟಕಡೆಯ ಮನುಷ್ಯರ ಕಡೆಗೆ ಅವರನ್ನು ಒಯ್ದು

ನಿಲ್ಲಿಸಿದ್ದವು. ಬಸವಣ್ಣ ಎಂದರೆ ಕಟ್ಟಕಡೆಯ ಮನುಷ್ಯರನ್ನು ಮೊಟ್ಟ ಮೊದಲು ಗುರುತಿಸುವ ಮಹೋನ್ನತ ಮಾನವ ಎಂಬುದು ಜಗಜ್ಜಾಹೀರವಾಗಿದೆ. ಆದರೂ ಬಸವಣ್ಣನವರ ಹೆಸರಿನಲ್ಲಿ ಬದುಕುವ ಅನೇಕ ಸ್ವಾಮಿಗಳಿಗೆ ಮತ್ತು ರಾಜಕಾರಣಿಗಳಿಗೆ ಬಸವಣ್ಣನವರ ಆದರ್ಶಗಳೇಕೆ ಅರ್ಥವಾಗುತ್ತಿಲ್ಲ? ಎಂಬುದು ಇಂದು ಪ್ರಶ್ನೆಯಾಗಿ ಉಳಿದಿಲ್ಲ. ಬಸವಣ್ಣನವರ ನಮೂನೆ ನಮೂನೆಯ ಚಿತ್ರಗಳಿಗೆ ಮತ್ತು ಮೂರ್ತಿಗಳಿಗೆ ಮಾರುಹೋದವರಿಗೆ ಬಸವಣ್ಣನವರ ವ್ಯಕ್ತಿತ್ವದ ಅರಿವಾಗಿಲ್ಲವೆಂದಲ್ಲ. ಅರಿವಾದರೂ ಅರಿವಾಗದವರಂತೆ ಬದುಕುವುದೇ ಅವರ ಚಾಣಾಕ್ಷ ನೀತಿಯಾಗಿದೆ.

ಬಸವಧರ್ಮ ಮಠೀಯ ಸಂಸ್ಕೃತಿಗೆ ಅತೀತವಾಗಿದೆ. ಈ ಧರ್ಮದಲ್ಲಿ ಮಠಗಳಿಲ್ಲ, ಸ್ವಾಮಿಗಳಿಲ್ಲ. ಇವೆಲ್ಲ ಬಸವಣ್ಣನವರ ಕಾಲಾನಂತರ ಸೇರಿದವು. ಇಲ್ಲಿ ದೇವನೊಬ್ಬನೇ ಸ್ವಾಮಿ. 'ಸ್ವಾಮಿ ನೀನು, ಶಾಸ್ವತ ನೀನು' ಎಂದು ಬಸವಣ್ಣನವರು ತಿಳಿಸಿದ್ದಾರೆ. ಆದರೆ ಬಸವಣ್ಣನವರ ಹೆಸರಿನಿಂದ ಅಸ್ತಿತ್ವಕ್ಕೆ ಬಂದ ಮಠಗಳ ಸ್ವಾಮಿಗಳನೇಕರು ಬಸವ ತತ್ತ್ವಕ್ಕೆ ವಿರುದ್ಧವಾದ ಪಂಚಾಂಗ ಹೇಳುವುದರ ಮೂಲಕ ಮತ್ತು ರಾಜಕಾರಣಿಗಳನ್ನು ಓಲೈಸುವುದರ ಮೂಲಕ ಬದುಕುತ್ತಿದ್ದೇವೆ ಎಂದು ಭಾವಿಸಿದ್ದಾರೆ. ರಾಜ್ಯದಲ್ಲಿ ಪಂಚಾಂಗವಿಲ್ಲದ ಮತ್ತು ರಾಜಕಾರಣಿಗಳನ್ನು ಓಲೈಸದ ಮಠಗಳು ಬೆರಳೆಣಿಕೆಯಷ್ಟು ಇರಬಹುದು.

ವಿಭೂತಿ ಮರೆತು ಕುಂಕುಮ ಹಚ್ಚಿಕೊಂಡು ಹೋಮ ಹವನಗಳಿಗೆ ಹಣ ಖರ್ಚು ಮಾಡುತ್ತ ಕಾಶ್ಮೀರದಿಂದ ಕನ್ಯಾಕುಮಾರಿ ವರೆಗಿನ ಗುಡಿಗುಂಡಾರಗಳಿಗೆ ಅಧಿಕಾರ ಉಳಿಸಿಕೊಳ್ಳುವ ಭ್ರಮೆಯಿಂದ ದಣಿವರಿಯದೆ ಓಡಾಡುತ್ತಿದ್ದ ಮಾಜಿ ಮುಖ್ಯಮಂತ್ರಿಯೊಬ್ಬರಿಗೆ ಯಾವ ಲಿಂಗಾಯತ ಮಠಾಧೀಶರೂ 'ಇದು ನಮ್ಮ ಬಸವಧರ್ಮದ ಸಂಸ್ಕಾರವಲ್ಲ' ಎಂದು ಹೇಳುವ ಧೈರ್ಯ ತೋರಲಿಲ್ಲ. ಏಕೆಂದರೆ ಬರಬಹುದಾದ ಕೋಟಿ ಕೋಟಿ ರೂಪಾಯಿಗೆ ಸಂಚಕಾರ ಬಂದರೆ ಅದನ್ನು ಭರಿಸುವವರಾರು ಎಂಬ ಲೆಕ್ಕಾಚಾರ ಅವರದು.

ಆದರೆ ಬಸವಣ್ಣನವರ ಆತ್ಮಗೌರವ, ಪ್ರಾಮಾಣಿಕತೆ ಮತ್ತು ಜನಸಮುದಾಯವನ್ನು ಪ್ರೀತಿಸುವ ಕ್ರಮ ಅನುಕರಣೀಯವಾಗಿದೆ. ಶರಣಸಂಕುಲದ ಶ್ರೀಸಾಮಾನ್ಯರ ಜೊತೆ ಬಸವಣ್ಣನವರು ಪ್ರಸಾದ ಸ್ವೀಕರಿಸುವ ವೇಳೆ ಮಡದಿ ಒಂದಿಷ್ಟು ಹೆಚ್ಚಿನ ಪ್ರಸಾದವನ್ನು ಉಣಬಡಿಸುತ್ತಾಳೆ. ಪ್ರಧಾನಿ ಪಟ್ಟವೆಂಬ 'ನಾಯಿತೇಜ'ದಿಂದಾಗಿ ತಮ್ಮ ಊಟದ ತಟ್ಟೆಯಲ್ಲಿ, ಪಂಕ್ತಿಯಲ್ಲಿ ಕುಳಿತ ಬೇರೆಯವರಿಗಿಂತ ಹೆಚ್ಚಿನ ಪ್ರಸಾದ ನೀಡಲಾಗಿದೆ ಎಂಬುದು ಅವರ ಗಮನಕ್ಕೆ ಬಂದ ತಕ್ಷಣ ಅವರು ಆ ಹೆಚ್ಚಿನದನ್ನು ತೆಗೆದಿಡುತ್ತಾರೆ. ಬದುಕಿನ ಎಲ್ಲ ಕ್ಷಣಗಳಲ್ಲಿ 'ಸರ್ವರಿಗೂ ಸಮಪಾಲು' ಎಂಬುದರ ಬಗ್ಗೆ ಅವರು ಎಷ್ಟೊಂದು ಎಚ್ಚರಿಕೆ ವಹಿಸಿದ್ದರು ಎಂಬುದು ಇದರಿಂದ ವ್ಯಕ್ತವಾಗುತ್ತದೆ. ಒಂದು

ವೇಳೆ ಹೀಗೆ ಎಚ್ಚರಿಕೆ ವಹಿಸದಿದ್ದರೆ ಕೂಡಲಸಂಗಮದೇವ ಎಂಬ ತಮ್ಮ ಸೈದ್ಧಾಂತಿಕ ದೇವರು ಮೆಚ್ಚುವುದಿಲ್ಲ ಎಂದು ದಾಕ್ಷಿಣ್ಯಪರರಲ್ಲದ ನ್ಯಾಯನಿಷ್ಠುರಿಯಾದ ಬಸವಣ್ಣನವರು ತೀಕ್ಷ್ಣವಾಗಿ ನುಡಿಯುತ್ತಾರೆ.

ಜನಸಮುದಾಯದ ಬಗೆಗಿನ ಅವರ ಪ್ರೇಮಭಾವ ಕೌಟುಂಬಿಕ ಪ್ರೇಮಭಾವವನ್ನೂ ಮೀರಿಸುವಂಥದ್ದಾಗಿತ್ತು. ಅಧಿಕಾರದ ಬಗೆಗಿನ ಮೋಹ ಅವರೆನ್ನೆಂದೂ ಕಾಡಲಿಲ್ಲ. ಆದ್ದರಿಂದಲೇ ಅವರಿಗೆ ಆ ಅಧಿಕಾರ ನಾಯಿತೇಜವಾಗಿ ಕಂಡಿತು. ಕಷ್ಟದಲ್ಲಿರುವವರು, ಅಸಹನೀಯ ಬದುಕನ್ನು ಬದುಕುತ್ತಿರುವವರು, ಅಸಹಾಯಕರು ಅವರಿಗೆ ತಾಯಿ, ತಂದೆಗಳಾಗಿದ್ದರು. ಅಂಥವರೆ ಅವರಿಗೆ 'ಒಡೆಯ'ರಾಗಿದ್ದರು. ಆ ಮೂಲಕ ಪ್ರಜಾಪ್ರಭುತ್ವದ ನಿಜವಾದ ಒಡೆಯರು ಯಾರು ಎಂಬುದನ್ನು ಅವರು ತಮ್ಮ ಕರ್ತವ್ಯ ಪಾಲನೆ ಮೂಲಕ ಸೂಚಿಸಿದ್ದಾರೆ. ದುರ್ಬಲರ ಸಬಲೀಕರಣವೇ ಅಧಿಕಾರದ ಗುರಿಯಾಗಿರಬೇಕು ಎಂಬುದರಲ್ಲಿ ಅವರು ಅಚಲ ವಿಶ್ವಾಸವನ್ನು ಹೊಂದಿದ್ದರು.

"ಗುಮ್ಮಡಿಯಂತಪ್ಪ ತಾಯಿ ನೋಡೆನಗೆ,
ಕಲಕೇತನಂತಪ್ಪ ತಂದೆ ನೋಡೆನಗೆ,
ಮೋಟನಂತಪ್ಪ ಗಂಡ ನೋಡೆನಗೆ,
ಮರಗಾಲಲಟ್ಟಟ್ಟಿ ಸದೆದ ನೋಡಯ್ಯಾ.
ಇಂದೆನ್ನ ಒಕ್ಕತನ ಹೋದಡೆ ಹೋಗಲಿ
ಮರಗಾಲ ಬಿಟ್ಟಡೆ, ಸಂಗಾ ನಿಮ್ಮಾಣೆ."

ಎಂದು ಬಸವಣ್ಣನವರು ಇನ್ನೊಂದು ವಚನದಲ್ಲಿ ತಿಳಿಸಿದ್ದಾರೆ.

ಮೆಕವೆಲ್ಲಿಯ (೧೪೬೯-೧೫೨೭) 'ಮಾಡರ್ನ್ ಪ್ರಿನ್ಸ್' ಜನರಲ್ಲಿ ಆತ್ಮವಿಶ್ವಾಸ ತುಂಬಿ, ಅವರನ್ನು ಸಂಘಟಿಸಿ, ಅವರ ಆಶಯಗಳನ್ನು ಸಾಮೂಹಿಕ ನಿರ್ಧಾರಗಳಾಗುವಲ್ಲಿ ಸಹಾಯ ಮಾಡುತ್ತಾನೆ. ಆತ ಕಾಯಕಜೀವಿಗಳ ಸಾಮೂಹಿಕ ಅಭಿವ್ಯಕ್ತಿಯಾಗಿದ್ದಾನೆ. ಹೊಸ ರಾಜ್ಯ ಮತ್ತು ಸಮಾಜ ನಿರ್ಮಾಣವಾಗಬೇಕಾದರೆ ವೈಜ್ಞಾನಿಕ ಮನೋಭಾವದಿಂದ ಕೂಡಿದ ವಾದಗಳೊಂದಿಗೆ ವ್ಯವಸ್ಥಿತವಾಗಿ ಬೆಳೆಯಬೇಕೆನ್ನುತ್ತಾನೆ. ಜನಸಮುದಾಯದ ಪ್ರಜ್ಞೆಯಾಗಿ, ಧ್ವನಿಯಾಗಿ, ಜನರ ಆಶೋತ್ತರಗಳ ಪ್ರತಿನಿಧಿಯಾಗಿ ನಿಲ್ಲುತ್ತಾನೆ. ೧೫ನೇ ಶತಮಾನದಲ್ಲಿ ಮೆಕವೆಲ್ಲಿ ಕಲ್ಪಿಸಿದ ನವೀನ ರಾಜಕುಮಾರನಿಗಿಂತ ೧೨ನೇ ಶತಮಾನದಲ್ಲಿ ನಮ್ಮ ಹಾಗೆ ಜನಿಸಿ ನಮಗೆ ಕಲಿಸಿದ ಬಸವಣ್ಣನವರು ಮುಂದುವರಿದವರಾಗಿದ್ದಾರೆ.

ಕಲ್ಯಾಣದ ಪ್ರಧಾನಿಯಾಗಿದ್ದ ಬಸವಣ್ಣನವರಿಗೆ ಜನಹಿತ ಮಹತ್ವದ್ದಾಗಿತ್ತು. ಜನರ ಹಿತಾಸಕ್ತಿಯ ಪ್ರಕಾರ ಬಿಜ್ಜಳ ರಾಜನ ಹಿತಾಸಕ್ತಿಗಳು ಬದಲಾಗಬೇಕು

ಎಂಬುದು ಅವರ ನಿಲುವಾಗಿತ್ತು. (ಈ ಕಾರಣಕ್ಕಾಗಿಯೇ ಅವರು ಕೊನೆಗೆ ಪ್ರಧಾನಿ ಪದವಿಯನ್ನೂ ತ್ಯಾಗ ಮಾಡಿದರು.) ಅಂದಿನ ಸಮಾಜದಲ್ಲಿ ತುಳಿತಕ್ಕೊಳಗಾದ ಜನರ ಜೊತೆ ಅವರು ತನು ಮನ ಧನಗಳೊಂದಿಗೆ ಗುರುತಿಸಿಕೊಂಡರು. ಜನಸಮುದಾಯವನ್ನು ತೀವ್ರವಾಗಿ ಪ್ರೀತಿಸಿದರು. ಅವರು ಜನಸಮುದಾಯಕ್ಕೆ ಸ್ಪಂದಿಸಿದಂತೆ ಜಗತ್ತಿನ ಯಾವ ಪ್ರಧಾನಿಯೂ ಸ್ಪಂದಿಸಿಲ್ಲ!

ಅಪಮಾನಕ್ಕೊಳಗಾದವರು, ಅಂಗವಿಕಲರು, ಅಸಹಾಯಕರು ತಮ್ಮ ತಂದೆ, ತಾಯಿ ಮತ್ತು ಒಡೆಯರು ಎಂದು ಈ ವಚನದಲ್ಲಿ ಬಸವಣ್ಣನವರು ಕರೆಯುತ್ತಾರೆ. ಅವರ ಜೊತೆ ಹೀಗೆ ರಕ್ತಸಂಬಂಧ ಬೆಳೆಸಿಕೊಳ್ಳುತ್ತಾರೆ. ಮೊಲೆ ಮೂಗು ಕೊಯ್ಸಿಕೊಂಡು ಅಪಮಾನಕ್ಕೆ ಒಳಗಾದ ಜೋಗಿತಿ ತಮ್ಮ ತಾಯಿ ಎಂದು ಹೇಳುತ್ತಾರೆ. ಅಂಥ ತಾಯಂದಿರ ಕಣ್ಣೀರನ್ನು ಒರೆಸಿ ಹೊಸ ಬದುಕು ಕೊಡುವುದು ಅವರ ಮಗನಾದ ತಮ್ಮ ಕರ್ತವ್ಯ ಎಂದು ಸ್ಪಷ್ಟಪಡಿಸುತ್ತಾರೆ. ಕಲ್ಲಿನಿಂದ ಎದೆಗೆ ಬಡಿದುಕೊಂಡು ಭಿಕ್ಷೆ ಕೇಳುವ ಕಲಕೇತಯ್ಯಗಳು ತಮ್ಮ ತಂದೆ ಎಂದು ಗೌರವಿಸುತ್ತಾರೆ. ಅಂಥವರನ್ನು ದುಃಖದಿಂದ ಮೇಲೆತ್ತುವುದು ಅವರ ಮಗನಾದ ತಮ್ಮ ಕರ್ತವ್ಯ ಎಂದು ನಿರ್ಧರಿಸುತ್ತಾರೆ. ಕೈ ಇಲ್ಲದ ಅಸಹಾಯಕರು ತಮ್ಮ ಒಡೆಯ ಎಂದು ಸಾರುತ್ತಾರೆ. ಅಂಥ ಒಡೆಯರಿಗೆ ತಾವು ಅಧೀನರಾಗಿರುವುದಾಗಿ ಘೋಷಿಸುತ್ತಾರೆ. ಕಾಲಿಲ್ಲದ ಒಡೆಯರು ಮರಗಾಲಿನಿಂದ ಒದೆಯುತ್ತಾರೆ ಎಂದು ಹೇಳುವ ಮೂಲಕ ಜನರ ಅಸಹಾಯಕ ಮನಸ್ಥಿತಿಯ ವಿರಾಟ್ ಸ್ವರೂಪದ ದರ್ಶನ ಮಾಡಿಸುತ್ತಾರೆ. 'ನನ್ನ ಪ್ರಧಾನಿ ಹುದ್ದೆಯ ನಂಟುತನ ಹೋದರೂ ಹೋಗಲಿ ದೇವರೇ ಮರಗಾಲ ಬಿಡುವುದಿಲ್ಲ ನಿಮ್ಮಾಣೆ' ಎಂದು ಪ್ರತಿಜ್ಞೆ ಮಾಡುತ್ತಾರೆ. ಅಂದರೆ ತಾವು ಎಂಥದೇ ಪ್ರಸಂಗದಲ್ಲಿ ಅಸಹಾಯಕರ ಪರವಾಗಿಯೇ ಇರುವುದಾಗಿ ತಿಳಿಸುತ್ತಾರೆ.

ಬಸವಣ್ಣನವರ ಹೆಸರಿನಿಂದ ಬದುಕುವ ಸ್ವಾಮಿಗಳು ಮತ್ತು ರಾಜಕಾರಣಿಗಳು ಬಸವಣ್ಣನವರಿಂದ ಪಾಠ ಕಲಿಯುವುದು ಯಾವಾಗ?

❖❖

೧೮

❖

ಬೆಟ್ಟ ಬಲ್ಲಿತ್ತೆಂದಡೆ, ಉಳಿಯ ಮೊನೆಯಲ್ಲಿ ಬಡತನವಿದ್ದಡೆ ಒಡೆಯದೆ?

ಶರಣರ ವಚನಚಳವಳಿಯಿಂದಾಗಿ ಕನ್ನಡ ನೆಲದ ೧೨ನೇ ಶತಮಾನ ಇಂದಿಗೂ ವಿಶ್ವವಿನೂತನವಾಗಿದೆ. ಅದನ್ನು ಅರಿಯದ ಬಹುಪಾಲು ಅನುಯಾಯಿಗಳು ಲಿಂಗಾಯತ ಧರ್ಮವನ್ನು ಹಿಂದೂ ಧರ್ಮದೊಳಗಿನ ಜಾತಿಯಾಗಿಸಿದರು. ಆ ಜಾತಿಯಲ್ಲಿ ಆದಿ, ಬಣಜಿಗ, ಪಂಚಮಸಾಲಿ, ಸಾದರ, ನೊಣಬ, ಕುರುಹಿನಶೆಟ್ಟಿ, ಶಿವಶಿಂಪಿ, ಶೀಲವಂತ, ನೇಕಾರ, ಬಣಗಾರ, ಹಟಗಾರ ಮುಂತಾದ ಹಲವು ಹದಿನೆಂಟು ಉಪಜಾತಿಗಳಾಗಿಸಿಕೊಂಡರು. ಒಟ್ಟಾರೆ ಹಿಂದೂಲಿಂಗಾಯತ ಆದರು. ಕಾಲಾನುಕ್ರಮದಲ್ಲಿ ಜಾತಿಮಠಗಳು ಬೆಳೆದು ಸಾವಿರಾರು ಸ್ವಾಮಿಗಳು ಹುಟ್ಟಿಕೊಂಡು ವಚನಚಳವಳಿಯ ಮೊದಲು ಜಾತಿ ಉಪಜಾತಿಗಳಿಂದ ಕೂಡಿದ್ದ ಸಾಮಾಜಿಕ ವ್ಯವಸ್ಥೆಯನ್ನೇ ಮುಂದುವರಿಸಿದರು. ಇಷ್ಟೆಲ್ಲ ಅವಾಂತರಗಳ ಮಧ್ಯೆ ಕೆಲ ಪಲಾಯನವಾದಿಗಳು ಸಮಾಜಮುಖಿಯಾಗದೆ, ಸ್ವಸಂತೋಷದ ಲಿಂಗಧ್ಯಾನವೇ ಮುಖ್ಯವೆಂದು ಸಮಾಜದಲ್ಲಿ ನಿರಂತರವಾಗಿ ನಡೆಯುತ್ತಿರುವ ಶೋಷಣೆಗೆ ವಿಮುಖರಾದರು. ಈ ಎಲ್ಲ ಮಾದರಿಗಳು ಇನ್ನೂ ಮುಂದುವರಿದಿವೆ. ಆದರೆ ಆಧುನಿಕ ಚಿಂತನಾಕ್ರಮಗಳು ಒಂದಿಷ್ಟು ಜನರ ಮೇಲೆ ಪ್ರಭಾವ ಬೀಳುತ್ತಿರುವ ಕಾರಣ ಶರಣರು ೮೫೦ ವರ್ಷಗಳ ಹಿಂದೆಯೆ ಕಂಡುಕೊಂಡ ನಿಜದ ನಿಲವಿನ ಅರಿವನ್ನು ಹೊಂದುತ್ತಿದ್ದಾರೆ.

ಶರಣರ ಚಳವಳಿ ಹೊಸ ವ್ಯವಸ್ಥೆಯನ್ನು ಜಾರಿಗೊಳಿಸಿತು. ಅದುವೆ ಲಿಂಗವಂತ ಧರ್ಮವಾಗಿ ಹೊಸ ಸಮಾಜದ ನಿರ್ಮಾಣವಾಯಿತು ಎಂಬ ಸತ್ಯವನ್ನು ಜನಮಾನಸದಲ್ಲಿ ಮೂಡಿಸುತ್ತ ಸುಲಿಗೆಯಿಲ್ಲದ ಸಮಾಜ ನಿರ್ಮಾಣಕ್ಕಾಗಿ ಮುಂದಾಗುವುದು ಈ ಕಾಲದ ಲಿಂಗವಂತರ ಮತ್ತು ಪ್ರಜ್ಞಾವಂತರ ನೈತಿಕ ಜವಾಬ್ದಾರಿಯಾಗಿದೆ.

ಶರಣರು ಸಮಾಜಮುಖಿಯಾಗಿದ್ದರು. ಗುರು, ಲಿಂಗ ಮತ್ತು ಜಂಗಮ (ಸಕಲ ಜೀವಾತ್ಮರನ್ನೊಳಗೊಂಡ ಸಮಾಜ)ದ ಪ್ರಜ್ಞೆಯೊಂದಿಗೆ ಅವರು ಶರಣಸಂಕುಲವೆಂಬ ನವಸಮಾಜವನ್ನೇ ನಿರ್ಮಿಸಿ ತೋರಿಸಿದರು. ಎಲ್ಲ ರೀತಿಯ ಸಮಾನತೆಯಿಂದ ಕೂಡಿದ್ದ ಶರಣಸಂಕುಲದಲ್ಲಿ ಬದುಕಿ ತೋರಿಸಿದರು. ಈ ಗುರು, ಲಿಂಗ ಮತ್ತು ಜಂಗಮದಲ್ಲಿ ಸಾಧಿಸಬೇಕಾದುದು ಯಾವುದು ಎಂಬುದನ್ನು ಆ ಕಾಲದ ವಚನಗಳ ಮೂಲಕ ಅರಿತುಕೊಳ್ಳುವುದು ಅವಶ್ಯವಾಗಿದೆ.

ನವಸಮಾಜ ನಿರ್ಮಾಣವೇ ಶರಣರ ಗುರಿಯಾಗಿತ್ತು. ಆ ನವಸಮಾಜವೆಂಬ ಜಂಗಮ (ಸಮಾಜ) ವ್ಯವಸ್ಥೆಗಾಗಿ ಗುರು ಮತ್ತು ಲಿಂಗದ ಅವಶ್ಯಕತೆಯನ್ನು ಅವರು ಬಲ್ಲವರಾಗಿದ್ದರು. ಈ ನಿರ್ಜಾತಿ ಜಂಗಮ ವ್ಯವಸ್ಥೆ ಕಲ್ಯಾಣದಲ್ಲಿ ಶರಣರ ಹತ್ಯಾಕಾಂಡದ ನಂತರದ ಶತಮಾನಗಳಲ್ಲಿ ಜಾತಿಜಂಗಮ ವ್ಯವಸ್ಥೆಯಾಗಿ ನಿರ್ಮಾಣಗೊಂಡ ನಂತರ ಜಂಗಮ ಎಂಬುದು ಗುರುವರ್ಗದ ಕುಲವಾಗಿ, ಲಿಂಗಾಯತ ಒಂದು ಜಾತಿಯಾಗಿ, ಇಷ್ಟಲಿಂಗ ಲಿಂಗಧಾರಿಗಳು ಜಾತಿ ಮತ್ತು ಉಪಜಾತಿಗಳಲ್ಲಿ ಒಡೆದು ಹೋದರು. ಲಿಂಗಾಯತ ಒಂದು ಸ್ವತಂತ್ರ ಧರ್ಮ. ಇದು ಕಾಯಕಪ್ರಧಾನ ಧರ್ಮ; ಜಾತಿಪ್ರಧಾನ ಧರ್ಮ ಅಲ್ಲ ಎಂಬುದನ್ನು ಅರ್ಥೈಸಿಕೊಂಡು, ಅದು ಮತ್ತೆ ತನ್ನ ಗತವೈಭವವನ್ನು ಮರಳಿ ಪಡೆಯುವಂತೆ ಮಾಡುವುದೇ ಈ ಕಾಲಘಟ್ಟದ ಲಿಂಗಾಯತರ ಮತ್ತು ಬಸವತತ್ತ್ವದಲ್ಲಿ ನಂಬಿಕೆ ಇಟ್ಟವರ ಆದ್ಯ ಕರ್ತವ್ಯವಾಗಿದೆ.

ಈ ಕಾರ್ಯಸಾಧಿಸುವಲ್ಲಿ ಅನೇಕ ತೊಡಕುಗಳಿವೆ ಅವುಗಳಲ್ಲಿ ಮುಖ್ಯವಾಗಿ ಲಿಂಗಾಯತದಲ್ಲಿನ ಉಪಜಾತಿ ಮಠಗಳು, ಉಪಜಾತಿ ಮಠಗಳು ಎಂದು ಕರೆಯಿಸಿಕೊಳ್ಳದಿದ್ದರೂ ಒಂದೇ ಉಪಜಾತಿಯ ಹಿಡಿತದಲ್ಲಿರುವ ಮಠಗಳು, ಕಾಯಕಜೀವಿಗಳ ಮತ್ತು ಸರ್ವವಿಧದ ಸಮಾನತೆಯ ಸಮಾಜದ ಹಾಗೂ ಕಾಯಕಜೀವಿಗಳ ಅನುಭವದ ಗಂಧವಿಲ್ಲದೆ 'ಅನುಭಾವ, ಅನುಭಾವ' ಎಂದು ಹೇಳುತ್ತ ಬಸವಣ್ಣನವರ ಹೆಸರಿನಲ್ಲಿ ಸಮಿತಿಗಳನ್ನು, ಪ್ರತಿಷ್ಠಾನಗಳನ್ನು ಸ್ಥಾಪಿಸಿಕೊಂಡು ವಚನಚಳವಳಿಯ ಮೂಲ ಉದ್ದೇಶವನ್ನೇ ಬದಿಗೊತ್ತಿ ಬದುಕುತ್ತಿರುವ ಅಕ್ಕ, ಅಣ್ಣ, ಅಪ್ಪ ಮತ್ತು ಅಮ್ಮಗಳು ಬದಲಾಗುವವರೆಗೆ ಶರಣರ ಸಮಾನತೆಯ ಪರಿಕಲ್ಪನೆಯನ್ನು ಕಾರ್ಯರೂಪಕ್ಕೆ ತರುವುದು ಸಾಧ್ಯವಿಲ್ಲ. ನಡೆ ಮತ್ತು ನುಡಿಗಳಲ್ಲಿ ಭೂಮಿ ಬಾಹ್ಯಾಕಾಶದಷ್ಟು ಅಂತರವಿರುವುದರಿಂದಲೇ ಶರಣರ ತತ್ತ್ವಗಳು ಹಾಡುವುದಕ್ಕೆ, ಓದುವುದಕ್ಕೆ, ಭಾಷಣ ಮತ್ತು ಪ್ರವಚನಕ್ಕೆ ಸೀಮಿತವಾಗಿವೆ. ಇಂಥ ವಿಷಮ ಸಂದರ್ಭದಲ್ಲಿ ವಚನಗಳ ನಿಜದ ನೆಲೆಯನ್ನು ಜನಸಮುದಾಯಕ್ಕೆ ತೋರಿಸುವುದರ ಮೂಲಕ ಲಿಂಗಾಯತ ಧರ್ಮದೊಳಗೆ ಮತ್ತು ಹೊರಗೆ ಜನಜಾಗೃತಿಯ ಚಳವಳಿಗಳಾಗುವುದು ಇಂದಿನ ತುರ್ತು ಅವಶ್ಯಕತೆಯಾಗಿದೆ.

ಕೆಲ ವಚನ ಪಂಡಿತರು ಕಾಯಕಜೀವಿಗಳ ಅನುಭವವನ್ನು ಮರೆತು 'ಅನುಭಾವ'ದ ಹೆಸರಿನಲ್ಲಿ ವಚನ ಸಾಹಿತ್ಯ ಮತ್ತು ದುಡಿಯುವ ಜನರ ಬದುಕಿನ ಮಧ್ಯೆ ಕಂದಕವನ್ನು ಏರ್ಪಡಿಸುತ್ತಿದ್ದಾರೆ. ವೈದಿಕರ ಅಧ್ಯಾತ್ಮದ ಬೇರುಗಳು ಜನಸಾಮಾನ್ಯರ ಬದುಕಿನಲ್ಲಿರದೆ ಗುಹೆಗಳಲ್ಲಿ, ಅರಣ್ಯಗಳಲ್ಲಿ, ಹಿಮಾಲಯದಲ್ಲಿ ಮತ್ತು ವಿವಿಧ ಏಕಾಂತದ ಸ್ಥಳಗಳಲ್ಲಿ ಇವೆ. ಅಂತೆಯ ಬಸವಾದಿ ಶರಣರು ಇಂಥ ಅಧ್ಯಾತ್ಮವನ್ನು ತಿರಸ್ಕರಿಸಿದ್ದಾರೆ. ಕೆಲ ಶರಣರು ಅಧ್ಯಾತ್ಮ ಪದವನ್ನು ತಿರಸ್ಕರಿಸುವ ಉದ್ದೇಶದಿಂದ ಮಾತ್ರ ಬಳಸಿದ್ದಾರೆ. ಯಾವೊಬ್ಬ ಶರಣನೂ ಅಧ್ಯಾತ್ಮವನ್ನು ಎತ್ತಿ ಹಿಡಿದಿಲ್ಲ. ಆದರೆ ಅದಕ್ಕೆ ಪರ್ಯಾಯವಾಗಿ 'ಅನುಭಾವ' ಎಂಬುದನ್ನು ಶರಣತತ್ತ್ವದ ಪಾರಿಭಾಷಿಕ ಪದವಾಗಿ ಬಳಸಿದ್ದಾರೆ. ಅಧ್ಯಾತ್ಮವು ಸ್ಥಾವರಲಿಂಗದ ಜೊತೆ ಇದೆ. ಆದರೆ ಅನುಭಾವ ಇಷ್ಟಲಿಂಗದ ಜೊತೆ ಇದೆ. ಕಾಯಕಜೀವಿಗಳ ಅನುಭವವನ್ನು ಅನುಭಾವದ ಮಟ್ಟಕ್ಕೆ ಏರಿಸುವುದರ ಮೂಲಕ ಮನುಷ್ಯ, ಪ್ರಾಣಿ, ಪಕ್ಷಿ ಮತ್ತು ನಿಸರ್ಗದ ಮಧ್ಯೆ ಅವಿನಾಭಾವ ಸಂಬಂಧದ ಅರಿವನ್ನು ಮೂಡಿಸುವುದೇ ಬಸವಣ್ಣನವರ ಉದ್ದೇಶವಾಗಿತ್ತು. ಕಾಯಕಜೀವಿಗಳ ಅನುಭವ; ಆ ಅನುಭವದ ಮೂಲಕ ಅವರ ಕಾಯಕದ ಪರಿಭಾಷೆಯಲ್ಲೇ ವಚನಗಳ ರಚನೆ; ಬದುಕನ್ನು ಪ್ರತಿನಿಧಿಸುವ ಆ ವಚನಗಳು ಸಾಹಿತ್ಯವಾಗಿ, ತತ್ತ್ವವಾಗಿ ಮತ್ತು ಕೊನೆಗೆ ಎಲ್ಲ ಒಂದಾಗಿ ದುಡಿಯುವ ವರ್ಗದ ಧರ್ಮವಾಗಿ ರೂಪುಗೊಳ್ಳುವ ಪ್ರಕ್ರಿಯೆ ವಿಶ್ವ ಸಾಹಿತ್ಯದಲ್ಲೇ ಅನನ್ಯವಾಗಿದೆ. ವಿಶ್ವದಲ್ಲಿ ದುಡಿಯುವ ವರ್ಗದ ಮೊದಲ ಸಾಹಿತ್ಯ ವಚನರೂಪದಲ್ಲಿ ರಚನೆಯಾದುದು ೧೨ನೇ ಶತಮಾನದ ಕನ್ನಡದಲ್ಲಿ ಎಂಬುದನ್ನು ಮರೆಯಬಾರದು. ಅದೇರೀತಿ ದುಡಿಯುವ ವರ್ಗದ ತತ್ತ್ವಜ್ಞಾನವೂ ಆ ಕಾಲದ ಪರಿಮಿತಿಯಲ್ಲಿ ಕನ್ನಡದಲ್ಲೇ ರೂಪುಗೊಂಡಿತು! ಆ ಮೂಲಕ ದುಡಿಯುವ ವರ್ಗದ ಮೊದಲ ಸಂಘಟನೆ ಕನ್ನಡದ ನೆಲದಲ್ಲೇ ಆಯಿತು. ಅಷ್ಟೇ ಅಲ್ಲ ಕಾಯಕಜೀವಿಗಳು ಬಸವಣ್ಣನವರ ಮಾರ್ಗದರ್ಶನದಲ್ಲಿ ಮತ್ತು ವಿವಿಧ ಕಾಯಕಸಮುದಾಯಗಳಿಂದ ಬಂದು ನಾಯಕ ಸ್ಥಾನಗಳಲ್ಲಿದ್ದ ಅಮರಗಣಂಗಳ ನೇತೃತ್ವದಲ್ಲಿ ಶರಣಸಂಕುಲ ಎಂಬ ವಿಶ್ವದಲ್ಲೇ ಅನನ್ಯವಾದ ವರ್ಗರಹಿತ ಸಮಾಜದ ನಿರ್ಮಾಣವಾಯಿತು! ಬಸವಣ್ಣನವರು ದುಡಿಯುವ ಜನರನ್ನು ಮೊದಲ ಬಾರಿಗೆ ಒಂದುಗೂಡಿಸಿದವರು. ಆ ಮೂಲಕ 'ಎಲ್ಲರಿಗಿಂತಲೂ ಕಿರಿಯ' ಎಂಬುದನ್ನು ಕಾಯಾ. ವಾಚಾ, ಮನಸಾ ಪಾಲಿಸಿದ ಬಸವಣ್ಣನವರು ದುಡಿಯುವ ವರ್ಗದ ಪ್ರಥಮ ನಾಯಕರಾದರು! ಈ ಬಸವ ನಾಯಕರು ಜನಸಾಮಾನ್ಯರ ಅನುಭವದ ಮೂಲಕ ಅನುಭಾವ ಎಂಬ ತತ್ತ್ವಜ್ಞಾನದ ಜನಕರಾದರು. ಕಾಯಕಜೀವಿಗಳ ಅನುಭವ ಎಂಬುದು ಮಕರಂದದಂತೆ. ಆ ಎಲ್ಲರ ಅನುಭವವನ್ನು

ಅನುಭವಮಂಟಪದಲ್ಲಿ ಒಂದಾಗಿಸಿ ಅನುಭಾವ ಎಂಬ ಜೇನು ತಯಾರಿಸಿದವರು ಬಸವಣ್ಣನವರು. ಆದ್ದರಿಂದ ಅದು ಅನುಭವ ಮಂಟಪವೇ ಹೊರತು ಅನುಭಾವ ಮಂಟಪವಲ್ಲ. ನೀಲಾಂಬಿಕೆಯುವರು 'ಅನುಭವಮಂಟಪವನನುಮಾಡಿ ಅನುಭವಮೂರ್ತಿಯಾದ ನಮ್ಮ ಬಸವಯ್ಯನು' ಎಂದು ತಿಳಿಸಿದ್ದಾರೆ. ಅನುಭಾವವನ್ನು ಅನುಭವದಿಂದ ಬೇರ್ಪಡಿಸುವುದು ಮತ್ತು ಆ ಮೂಲಕ ದುಡಿಯುವ ವರ್ಗವನ್ನು ದೂರ ಇಟ್ಟು ಅನುಭಾವದ ಮಾತನಾಡುತ್ತ ಬದುಕು ಸಾಗಿಸುವುದು ಶರಣ ಚಳವಳಿಗೆ ಮಾಡುವ ದ್ರೋಹವಾಗುತ್ತದೆ.

ಕಾಯಕ, ಪ್ರಸಾದ, ದಾಸೋಹ, ಗುರು, ಲಿಂಗ, ಜಂಗಮ, ಅನುಭವ, ಅನುಭಾವ, ಭಕ್ತಿ, ಅರಿವು, ಆಚಾರ ಮುಂತಾದ ಪಾರಿಭಾಷಿಕ ಪದಗಳು ಮತ್ತು ಶಬ್ದಗಳು ಅವೈದಿಕ ಬಸವಧರ್ಮದ ಜೀವಾಳಗಳಾಗಿವೆ. ಇವುಗಳನ್ನು ಬೇರ್ಪಡಿಸಿ ನೋಡುವಾಗ ಅವೈದಿಕದಲ್ಲಿ ವೈದಿಕ ಸೇರುತ್ತ ಹೋಗುತ್ತದೆ ಎಂಬ ಪರಿಜ್ಞಾನ ಕೂಡ ಅನುಭಾವವನ್ನು ಪ್ರತ್ಯೇಕವಾಗಿ ನೋಡ ಬಯಸುವವರಿಗೆ ಇಲ್ಲವಾಗಿದೆ. ಇದೊಂದು ಧಾರ್ಮಿಕ ದುರಂತವೇ ಸರಿ.

ಲಿಂಗವಂತ ಧರ್ಮ ಎಂಬ ಬಸವಧರ್ಮಕ್ಕೆ ಕಾಯಕವೇ ತಾಯಿಬೇರು. ಕಾಯಕದಿಂದ ಬಂದುದನ್ನು ದೇವರ ಪ್ರಸಾದ ಎಂದು ಸ್ವೀಕರಿಸುವುದೇ ಸರ್ವಸಮತ್ವದ ಮನಸ್ಥಿಯ ಭಕ್ತಿಭಾವ. ದೇವರಿಂದ ಪಡೆದುದನ್ನು ದೇವರ ಕಾಣುವ ರೂಪವಾದ ಸಮಾಜಕ್ಕೆ ಅರ್ಪಿಸಬೇಕೆಂಬ ಸಾಮಾಜಿಕ ಪ್ರಜ್ಞೆಯಿಂದ ಮೂಡಿದುದೇ ದಾಸೋಹಂಭಾವ. ಗುರು, ಲಿಂಗ ಮತ್ತು ಜಂಗಮದಲ್ಲಿ ಜೀವಜಗತ್ತಿನ ಜಂಗಮವೇ ಎಲ್ಲವನ್ನೂ ಒಳಗೊಂಡಿದೆ ಎಂಬುದನ್ನು ಸೂಚಿಸುವುದೇ ಅನುಭವದಿಂದ ಹೊರಹೊಮ್ಮಿದ ಅನುಭಾವ. ಈ ಅನುಭಾವದ ಅರಿವನ್ನು ಆಚರಣೆಯಲ್ಲಿ ತರುವುದೇ ಬಸವಧರ್ಮದ ಗುರಿ. ಈ ಗುರಿಯ ಕುರಿತು ಬಸವಾದಿ ಶರಣರು ನೂರಾರು ವಚನಗಳನ್ನು ರಚಿಸಿದ್ದರೂ ನಮ್ಮ ಅನುಭವವಿಲ್ಲದ ಅನುಭಾವವಾದಿಗಳು ಜಾಣ ಕುರುಡರಾಗುವುದರ ಮೂಲಕ ಯಥಾಸ್ಥಿತಿವಾದಿಗಳಾಗಿದ್ದಾರೆ. ಕೆಲ ಸ್ವಾಮಿಗಳಂತೂ ಧನದಾಸೆಗಾಗಿ, ಭಾರತದ ತುಂಬ ಗುಡಿಗುಂಡಾರ ಸುತ್ತುತ್ತ ಹೋಮ ಹವನಗಳಲ್ಲಿ ದಿನ ಕಳೆಯುವ ಲಿಂಗಾಯತ ರಾಜಕೀಯ ನಾಯಕರನ್ನು ಓಲೈಸುವುದರಲ್ಲೇ ತಲ್ಲೀನರಾಗಿದ್ದಾರೆ. ಆ ಮೂಲಕ ಬಸವಾದಿ ಶರಣರಿಗೆ ಅಪಮಾನ ಮಾಡುತ್ತಿದ್ದಾರೆ.

ಕಾಯಕಜೀವಿ ನುಲಿಯ ಚಂದಯ್ಯ ಮುಂತಾದ ವಚನಕಾರರ ವಚನಗಳು ಇಂಥ ಜನರ ಬೂಟಾಟಿಕೆಯನ್ನು ಅರ್ಥ ಮಾಡಿಕೊಳ್ಳುವಲ್ಲಿ ಬಹಳ ಸಹಕಾರಿಯಾಗಿವೆ ಮತ್ತು ಅನುಭಾವದ ಮೂಲ ಅನುಭವದಲ್ಲಿದೆ ಎಂಬುದನ್ನು ಸಾಬೀತು ಪಡಿಸುತ್ತವೆ. ಜಂಗಮವೇ (ಸಮಾಜವೇ) ಬಹು ಮುಖ್ಯ ಎಂಬುದನ್ನು ಸಾರಿ ಹೇಳುತ್ತವೆ.

ಗುರುಪೂಜಕರು ಲಿಂಗವನೆತ್ತ ಬಲ್ಲರು?
ಲಿಂಗಪೂಜಕರು ಜಂಗಮವನೆತ್ತ ಬಲ್ಲರು?
ಜಂಗಮದಾಸೋಹವೆಂಬುದು ಉಭಯದ ಸಂಗನಾಸ್ತಿ;
ಚಂದೇಶ್ವರಲಿಂಗವೆಂಬ ಲಿಂಗದ ಪೂಜೆ.

–ನುಲಿಯ ಚಂದಯ್ಯ

ಗುರು, ಲಿಂಗ ಮತ್ತು ಜಂಗಮದ ಅರ್ಥವನ್ನು ನಿರ್ಣಾಯಕವಾಗಿ ಈ ವಚನ ಸಾರುತ್ತದೆ. ಗುರುವಿನ ಪೂಜೆ ಮಾಡುವವರಿಗೆ ಇಷ್ಟಲಿಂಗದ ಜ್ಞಾನವಾಗುವುದಿಲ್ಲ. ಅನುಭಾವ ಅನುಭಾವ ಎನ್ನುತ್ತ ಇಷ್ಟಲಿಂಗದ ಪೂಜೆಯಲ್ಲೇ ಕಾಲ ಕಳೆಯುವವರಿಗೆ ಜಂಗಮ ಎಂಬ ಜೀವಜಗತ್ತಿನ ಅರಿವು ಉಂಟಾಗುವುದಿಲ್ಲ. ದಾಸೋಹಂಭಾವದಿಂದ ಕೂಡಿ ಕ್ರಿಯಾಶೀಲವಾಗಿರುವ ಅರಿವು–ಆಚಾರದ ಅಂದರೆ ನಡೆನುಡಿ ಸಿದ್ಧಾಂತದ ಪ್ರಕಾರ ಸಕಲಜೀವಾತ್ಮರಿಗೆ ಲೇಸನೇ ಬಯಸುತ್ತ ಕ್ರಿಯಾಶೀಲವಾಗುವ ಜಂಗಮತತ್ತ್ವದ ಅರಿವಿನಲ್ಲಿ ಗುರು ಮತ್ತು ಲಿಂಗ ಒಂದಾಗಿಹೋಗುತ್ತವೆ. ಇದನ್ನೆಲ್ಲ ಬಿಟ್ಟು ಗುರುವಿಗೆ ಮತ್ತು ನಂತರ ಲಿಂಗಕ್ಕೆ ಅಂಟಿಕೊಂಡು ಜಗತ್ತಿನ ನೋವು ನಿವಾರಿಸುವಲ್ಲಿ ಕ್ರಿಯಾಶೀಲವಾಗದೆ ಬದುಕುವವರು ನಿಷ್ಪ್ರಯೋಜಕರು ಎಂದು ನುಲಿಯ ಚಂದಯ್ಯನವರು ಸೂಚಿಸಿದ್ದಾರೆ. ಜೀವಜಗತ್ತಿನ ಸೇವೆಯೇ ನಿಜವಾದ ಇಷ್ಟಲಿಂಗ ಪೂಜೆ ಎಂಬುದನ್ನು ಸೂಚಿಸಿದ್ದಾರೆ.

ಈ ಅರಿವು ಇಲ್ಲದ ವಿರಕ್ತರನ್ನು 'ವಿರಕ್ತ ವಿರಕ್ತ ಎಂಬ ಹಾದಿಕಾರರ ವಿರಕ್ತರೆನ್ನಬಹುದೆ? ಕಾವಿಯ ಹೊದ್ದು ತಿರುಗುವ ಜೀವಗಳ್ಳರು ವಿರಕ್ತರೆ?' ಎಂದು ಅಮುಗೆ ರಾಯಮ್ಮ ಛೇಡಿಸಿದ್ದಾರೆ. ಶರಣರು ಕಾವಿ ಸಂಸ್ಕೃತಿಯನ್ನು ತಿರಸ್ಕರಿಸಿ ಕಾಯಕ ಸಂಸ್ಕೃತಿಯನ್ನು ಎತ್ತಿ ಹಿಡಿದವರು. ಶರಣರಿಗೂ ಕಾವಿಗೂ ಎಣ್ಣೆ ಸೀಗೆಕಾಯಿ ಸಂಬಂಧ. ಆದರೆ ಸಾಂಸಾರಿಗರಾಗಿದ್ದ ವಿಶ್ವಗುರು ಬಸವಣ್ಣನವರಿಗೂ ಸ್ವಾಮಿಗಳು ಕಾವಿ ತೊಡಿಸಿ ಅವರ ಭಾವಚಿತ್ರ ಬರೆಸಿದರು. ಹೀಗೆ ಕಳೆದ ಐದಾರು ನೂರು ವರ್ಷಗಳಿಂದ ಶರಣತತ್ತ್ವಗಳ ಮೇಲೆ ದಾಳಿ ನಡೆಯುತ್ತಲೇ ಇದೆ. ಇಷ್ಟಲಿಂಗದ ಅರಿವು ಮತ್ತು ಜಂಗಮಲಿಂಗದ ಪ್ರಜ್ಞೆಯ ಮೇಲೆ ಈ ಕಾಯಕಜೀವಿಗಳ ಧರ್ಮ ನಿಂತಿದೆ. ಇಷ್ಟಲಿಂಗದ ಅರಿವೆಂದರೆ ಇಷ್ಟಲಿಂಗದ ಮೂಲಕ ತನ್ನಂತೆ ಪರರ ಬಗೆಯುವ ಅರಿವನ್ನು ಪಡೆಯುವುದು. ಆ ಮೂಲಕ ಜೀವಜಗತ್ತಿಗೂ ತನಗೂ ಮತ್ತು ಸೃಷ್ಟಿಕರ್ತನಿಗೂ ಇರುವ ಅಭೇದ್ಯ ಸಂಬಂಧವನ್ನು ಅರಿತುಕೊಳ್ಳುವುದು. ಸಕಲಜೀವಿಗಳಿಂದ ಕೂಡಿರುವ ಲೋಕಾತ್ಮ ಮತ್ತು ಪರಮಾತ್ಮನೊಂದಿಗೆ ಜೀವಾತ್ಮವು ಸಮ್ಮಿಳಿತವಾಗಿದೆ ಎಂಬ ಸತ್ಯದೊಂದಿಗೆ ಜಂಗಮಲಿಂಗದ ಪ್ರಜ್ಞೆಯನ್ನು ಹೊಂದುವುದು. ಆ ಪ್ರಜ್ಞೆಯೊಂದಿಗೆ ಮೂಡುವ ಸಮತತ್ತ್ವದೊಂದಿಗೆ ಎಲ್ಲ ಪ್ರಕಾರದ ಅಸಮಾನತೆಯ

ವಿರುದ್ಧ ಹೋರಾಡುತ್ತ ಅರಿವನ್ನು ಆಚರಣೆಯಲ್ಲಿ ತರುವುದು. ಈ ಜವಾಬ್ದಾರಿಯಿಂದ ನುಸುಳಿಕೊಂಡು ಕಾವಿ ಹೊತ್ತು ತಿರುಗುವ ಜೀವಗಳ್ಳರು ವಿರಕ್ತರೆ ಎಂದು ಆಯ್ದಕ್ಕಿ ಅಮುಗೆ ರಾಯಮ್ಮ ಪ್ರಶ್ನಿಸಿದ್ದಾರೆ.

ಕೆಲವು ಸ್ವಾಮಿಗಳಂತೂ ಜಾತಿಗೊಬ್ಬ ಸ್ವಾಮಿಯನ್ನು ಮಾಡಿ ಪ್ರಸಿದ್ಧರಾಗಲು ಹೋಗಿ ಫಜೀತಿಗೆ ಒಳಗಾದರು. 'ಹಣದಾಸೆಗೆ ಹದಿನೆಂಟು ಜಾತಿಯ ಭಕ್ತರ ಮಾಡಿ, ಲಿಂಗವ ಕೊಟ್ಟು ಲಿಂಗದ್ರೋಹಿಯಾದ.' ಎಂದು ಮಡಿವಾಳ ಮಾಚಿದೇವರು ಇಂಥವರ ಕುರಿತೇ ಹೇಳಿದ್ದಾರೆ. ದಾಸಿ, ವೇಶ್ಯೆಯರ ಮಕ್ಕಳು ಕೂಡ ಶಿವದೀಕ್ಷೆಯಾದ ಬಳಿಕ ಶಿವಸ್ವರೂಪಿಗಳೇ ಆಗುತ್ತಾರೆ. ಜಾತಿ, ವರ್ಗ, ಮೇಲು, ಕೀಳು ನಾಶವಾಗಿ ಎಲ್ಲರೂ ಒಂದೇ ಸ್ಥಾನಮಾನ ಹೊಂದುತ್ತಾರೆ ಎಂದು ಬಸವಣ್ಣನವರು ಪ್ರತಿಪಾದಿಸಿದ್ದಾರೆ. 'ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ ಶಿವದೀಕ್ಷೆ (ಇಷ್ಟಲಿಂಗದೀಕ್ಷೆ)ಯಾದ ಬಳಿಕ ಸಾಕ್ಷಾತು ಶಿವನೆಂದು ವಂದಿಸಿ ಪಾದೋದಕ ಪ್ರಸಾದವ ಕೊಂಬುದೇ ಯೋಗ್ಯ' ಎಂದು ಬಸವಣ್ಣನವರು ಸಾರಿದ್ದಾರೆ. ಹೀಗೆ ಎಲ್ಲ ರೀತಿಯ ಶೋಷಣೆಗಳಿಂದ ಮುಕ್ತವಾದ ನವಸಮಾಜ ನಿರ್ಮಾಣ ಮಾಡುವುದೇ ಬಸವಣ್ಣನವರ ಅಂತಿಮ ಗುರಿಯಾಗಿತ್ತು. ಅಂತೆಯೆ ಬಸವಣ್ಣನವರು 'ಇನ್ನು ಜಂಗಮವೇ ಲಿಂಗವೆಂದು ನಂಬಿದೆ' ಎಂದು ಹೇಳುವ ಮೂಲಕ 'ಸಮಾಜವೇ ದೇವರು' ಎಂಬ ದೃಢನಿರ್ಧಾರವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಜಾತಿಗೊಬ್ಬ ಸ್ವಾಮಿಯನ್ನು ಸೃಷ್ಟಿಸುವ ಮಹಾಸ್ವಾಮಿಗಳು ಬಸವಣ್ಣನವರ ತತ್ತ್ವಕ್ಕೆ ತಿಲಾಂಜಲಿಯನ್ನಿಟ್ಟು ಅವರ ಮೂರ್ತಿಗಳನ್ನು ನಿರ್ಮಾಣ ಮಾಡುತ್ತ ಯಥಾಸ್ಥಿತಿವಾದಿಗಳಾಗಿ ಉಳಿಯುವಲ್ಲೇ ತಲ್ಲೀನರಾಗಿದ್ದಾರೆ. 'ಜಂಗಮ ನಮಸ್ಕಾರವೆ ಗುರುಪೂಜೆ. ಜಂಗಮಪೂಜೆಯೆ ಲಿಂಗಪೂಜೆ.' ಎಂದು ನುಲಿಯ ಚಂದಯ್ಯನವರು ಸಮಾಜಸೇವೆಯ ಬಗ್ಗೆ ಒತ್ತುಕೊಟ್ಟು ಹೇಳಿದ್ದನ್ನು ಮರೆತಿದ್ದಾರೆ. ಗುರುವಾದರೂ ಸಮಾಜಕ್ಕಾಗಿಯೇ, ಇಷ್ಟಲಿಂಗವಾದರೂ ಸಮಾಜಕ್ಕಾಗಿಯೇ ಎಂಬುದನ್ನು ಚಂದಯ್ಯ ಸ್ಪಷ್ಟಪಡಿಸಿದ್ದಾರೆ.

ಇಂಥ ಸಮಾಜಮುಖಿ ಧರ್ಮವನ್ನು ಅನೇಕ ಸ್ವಾಮಿಗಳು ಪಾದಪೂಜೆ, ಪಾದೋದಕ, ಇತರೆ ಪೂಜೆಮನಸ್ಕಾರಗಳ ಬಗ್ಗೆ ಉಪದೇಶಿಸುತ್ತಿದ್ದಾರೆ. ಜಾಣರು ಇಂಗ್ಲಿಷ್ ಪದವಾದ ಸ್ಪಿರಿಚ್ಚಲಿಸಂ ಬಳಸುತ್ತ ಹದಗೆಡಿಸುತ್ತಿದ್ದಾರೆ. ಏಕದೇವೋಪಾಸನೆಯ ಲಿಂಗವಂತ ಧರ್ಮದಲ್ಲಿ ಇಷ್ಟಲಿಂಗ ಪೂಜೆಯೊಂದೇ ಇದೆ. ಇನ್ನು ಪಾದಪೂಜೆ ಎಲ್ಲಿಂದ ಬಂತು ಎಂಬುದರ ಕುರಿತು ಚಿಂತಿಸುವುದು ಇಂದಿನ ಅವಶ್ಯಕತೆಯಾಗಿದೆ. ಪಾದಪೂಜೆ ಎಂದರೆ ಜ್ಞಾನಪೂಜೆ. ಪಾದ ಎಂಬ ಶಬ್ದಕ್ಕೆ ಅಡಿ ಎಂಬ ಅರ್ಥ ಮಾತ್ರ ಇಲ್ಲ. ಕಿರಣ, ಹೊಳವು ಎಂಬ ಅರ್ಥಗಳೂ ಇವೆ. ಲಿಂಗಾಯತ ಧರ್ಮದಲ್ಲಿ ಪಾದದ ಪಾರಿಭಾಷಿಕ ಅರ್ಥವೆಂದರೆ ಜ್ಞಾನ. ಶರಣರು ಈ ಪಾದ ಶಬ್ದವನ್ನು

ಶಬ್ದಾರ್ಥದ ಹಿನ್ನೆಲೆಯಲ್ಲಿ ಬಳಸಿರುವಂತೆಯೆ ಲಿಂಗವಂತ ಧರ್ಮದ ಪಾರಿಭಾಷಿಕ ಅರ್ಥದ ಹಿನ್ನೆಲೆಯಲ್ಲಿ ಕೂಡ ಬಳಸಿದ್ದಾರೆ. 'ಪಾದೋದಕವೆಂಬುದು ಲಿಂಗಕ್ಕೆ ಮಜ್ಜನಕ್ಕೆರೆದುದು' ಎಂದು ಚೆನ್ನಬಸವಣ್ಣನವರು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪಾದಪೂಜೆ ಎಂಬುದು ಜ್ಞಾನಪೂಜೆ ಎಂದಾಗುತ್ತದೆ. ಆ ಜ್ಞಾನಪೂಜೆಯೆ ಇಷ್ಟಲಿಂಗಪೂಜೆ. ಅರಿವೆಂಬುದು ಇಷ್ಟಲಿಂಗಪೂಜಾಫಲ. 'ಲಿಂಗವ ಪೂಜಿಸಿ ಫಲವೇನಯ್ಯಾ ಸಮರತಿ, ಸಮಕಳೆ, ಸಮಸುಖವನರಿಯದನ್ನಕ್ಕ?' ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ. ಲಿಂಗಭೇದ, ವರ್ಣಭೇದ ಮತ್ತು ವರ್ಗಭೇದ ದಾಟಿ ದೇವರ ಜೊತೆ ಒಂದಾಗುವ ರಹಸ್ಯವನ್ನು ಬಸವಣ್ಣನವರು ಈ ವಚನದಲ್ಲಿ ಭೇದಿಸಿದ್ದಾರೆ. ಆದರೆ ಅನೇಕ ಸ್ವಾಮಿಗಳು ಭಕ್ತರಿಂದ ಪಾದಪೂಜೆ ಮಾಡಿಸಿಕೊಳ್ಳುತ್ತ ಧನಸಂಪಾದನೆಯಲ್ಲೇ ತಲ್ಲೀನರಾಗಿದ್ದಾರೆ. ಬೆಂಜ್ ಕಾರು, ಬುಲೆಟ್ ಪ್ರೂಫ್ ಕಾರು ಮುಂತಾದ ಅತ್ಯಾಧುನಿಕ ಕಾರುಗಳಲ್ಲಿ ತಿರುಗುತ್ತ ಭಕ್ತರ 'ಉದ್ಧಾರ' ಮಾಡುತ್ತಿದ್ದಾರೆ!

ಇಷ್ಟಲಿಂಗ ಪೂಜೆಯಿಂದಲೇ ಮುಕ್ತಿ ಎಂಬುದನ್ನು ಹೇಳುವವರನ್ನು ಅಮುಗೆ ದೇವಯ್ಯನವರು ಅಲ್ಲಗಳೆದಿದ್ದಾರೆ. 'ಶಿವನ ನೆನೆದಡೆ ಭವ ಹಿಂಗೂದೆಂಬ ವಿವರಗೇಡಿಗಳ ಮಾತು ಕೇಳಲಾಗದು. ಹೇಳದಿರಯ್ಯಾ, ಜ್ಯೋತಿಯ ನೆನೆದಡೆ ಕತ್ತಲೆ ಕೆಡುವುದೆ?' ಇಷ್ಟಲಿಂಗಪೂಜೆ ಇರುವುದು ಆತ್ಮ, ಲೋಕಾತ್ಮ ಮತ್ತು ಪರಮಾತ್ಮರ ಸಂಬಂಧವನ್ನು ಅರಿಯುವುದಕ್ಕೆ. ಆ ಮೂಲಕ ಲೋಕಹಿತ ಕಾರ್ಯಗಳನ್ನು ಮಾಡಲು ಬೇಕಾದ ಮಾನಸಿಕ ಶಕ್ತಿಯನ್ನು ಸಂಪಾದಿಸುವುದಕ್ಕೆ. ಮುಕ್ತಿಯನ್ನು ಸಂಪಾದಿಸುವುದಕ್ಕಲ್ಲ. 'ಕೂಡಲಸಂಗನ ಶರಣರು ಅಚ್ಚಲಿಂಗೈಕ್ಯರು' ಎಂದು ಬಸವಣ್ಣನವರು ತಿಳಿಸಿದ್ದಾರೆ. ಜೀವಿತಾವಧಿಯಲ್ಲೇ ದೇವರು ಮತ್ತು ಜೀವಜಗತ್ತಿನ ಜೊತೆ ಒಂದಾಗಿ ಮುಕ್ತಿಯನ್ನು ಸಂಪಾದಿಸಿದವರು ಶರಣರು. 'ನಿನ್ನಲ್ಲಿ ನೀ ತಿಳಿದು ನೋಡಾ, ಜಗವು ನಿನ್ನೊಳಗೆಂದಾತ ನಮ್ಮ ಅಂಬಿಗ ಚೌಡಯ್ಯನು' ಎಂದು ಅಂಬಿಗರ ಚೌಡಯ್ಯನವರು ಹೇಳಿದ್ದಾರೆ. ಇಷ್ಟಲಿಂಗಯೋಗದ ಮೂಲಕ ಸಾಧಿಸಬೇಕಾದುದು ಇದನ್ನೇ.

'ಲಿಂಗಸಾಧಕರೆಲ್ಲ ಭೂಭಾರಕರಾದರು. ಕೂಡಲಚೆನ್ನಸಂಗಮದೇವಾ ನಿಮ್ಮ ಬಸವಣ್ಣ ಜಂಗಮಸಾಧಕನಾಗಿ ಸ್ವಯಂಲಿಂಗವಾದನು.' ಎಂದು ಚೆನ್ನಬಸವಣ್ಣನವರು ಹೇಳುತ್ತಾರೆ. ಆನಂದಮಯವಾದ ಜೀವಜಗತ್ತನ್ನು ರೂಪಿಸುವವರಿಗೆ ಜಂಗಮಸಾಧಕರು ಎನ್ನುತ್ತಾರೆ. ಬಸವಣ್ಣನವರು ಅಂಥ ಜಂಗಮಸಾಧಕರಾಗಿದ್ದರೇ ಹೊರತು. ಲಿಂಗಸಾಧನೆಯನ್ನೇ ಮಾಡುತ್ತ ಭೂಭಾರಕರಾಗಲಿಲ್ಲ. ಇಷ್ಟಲಿಂಗ ಸಾಧನೆ ಎನ್ನುವುದು ಮನಸ್ಸನ್ನು ಸದೃಢಗೊಳಿಸುವ ವ್ಯಾಯಾಮ ಶಾಲೆ. ಜಂಗಮ ಸಾಧನೆ ಎನ್ನುವುದು ಬದುಕೆಂಬ ಕುಸ್ತಿಯ ಕಣದಲ್ಲಿ ಜಯಶಾಲಿಯಾಗುವುದು. ಜೀವನವಿಡೀ ವ್ಯಾಯಮಶಾಲೆಯಲ್ಲೇ ಕಳೆದರೆ ಏನು ಪ್ರಯೋಜನ. ಕುಸ್ತಿಯ ಕಣದಲ್ಲಿ

ಜಯಶಾಲಿಯಾಗುವುದಕ್ಕಲ್ಲವೆ ವ್ಯಾಯಾಮಶಾಲೆಯಲ್ಲಿ ವ್ಯಾಯಮ ಮಾಡುವುದು? ಬಸವಣ್ಣ ಎಂದರೆ ಬದುಕೆಂಬ ಕುಸ್ತಿಯ ಕಣದಲ್ಲಿ ಗೆದ್ದ ಮಹಾವೀರ.

ಅನುಭಾವ ಎಂಬುದು ಏಕಾಂತದಲ್ಲಿ ಬರುವಂಥದ್ದಲ್ಲ. ಲೋಕವೇ ತಾನಾಗುವುದರ ಮೂಲಕ ಮತ್ತು ಜಗತ್ತಿನ ನೋವನ್ನು ತನ್ನ ನೋವಾಗಿಸಿಕೊಳ್ಳುವುದರ ಮೂಲಕ ಬರುವಂಥದ್ದು. ಅಂತೆಯೆ 'ಲೋಕವೇ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ ಚೆನ್ನಮಲ್ಲಿಕಾರ್ಜುನಾ?' ಎಂದು ಅಕ್ಕಮಹಾದೇವಿ ಪ್ರಶ್ನಿಸುತ್ತಾರೆ. ಹೀಗೆ ಅವರು ಇಡೀ ಜೀವಸಂಕುಲವನ್ನು ತಮ್ಮೊಳಗೆ ತುಂಬಿಕೊಳ್ಳುತ್ತಾರೆ. 'ಗುರುವಿಂಗೆ ಪರಮಗುರು ಜಂಗಮವೆಂದುದು ಕೂಡಲಸಂಗಯ್ಯನ ವಚನ.' ಎಂದು ಬಸವಣ್ಣನವರು ಹೇಳುತ್ತಾರೆ. ಜೀವಜಗತ್ತೇ ನಮಗೆ ಎಲ್ಲವನ್ನೂ ಕಲಿಸುವ ಪರಮಗುರು ಎಂದು ಬಸವಣ್ಣನವರು ಸೂಚಿಸುತ್ತಾರೆ. 'ಜಲ ತಪ್ಪಿದ ಮತ್ಸ್ಯ ಬದುಕೂದೇ ಸೋಜಿಗ; ಗಣತಿಂತಿಣಿಯೊಳಗೆ ಇರಿಸೆನ್ನ ಲಿಂಗವೆ.' ಎಂದು ಹಂಬಲಿಸುತ್ತಾರೆ. ಬಸವಣ್ಣನವರು ಬದುಕನ್ನು ಪ್ರೀತಿಸಿದ ಕ್ರಮ ಇದು. ಜನಸಮುದಾಯದ ಜೊತೆ ಬಸವಣ್ಣನವರು ಒಂದಾಗಿ ಹೋಗಿದ್ದರು. ವೈಯಕ್ತಿಕ ಎನ್ನುವುದು ಅವರಿಗೆ ಇರಲೇ ಇಲ್ಲ. ಅವರ ಪ್ರಕಾರ ಎಲ್ಲವೂ ಸಮಾಜದ ಸ್ವತ್ತು. ಇದು ನನ್ನದು ಎಂದು ಅವರು ಹೇಳಲಿಲ್ಲ. ಎಲ್ಲವೂ ನಮ್ಮದು ಎಂಬ ಪಾಠ ಕಲಿಸಿದರು. ಇಡೀ ಸೃಷ್ಟಿ ಇಲ್ಲಿರುವ ಸಕಲಜೀವಾತ್ಮರದು ಎಂದು ಹೇಳಿದರು. ಸಕಲಜೀವಿಗಳ ಲೇಸನ್ನೇ ಬಯಸುವ ಮೂಲಕ ಜೀವಜಾಲಸಮತೋಲನದ ಪಾಠ ಕಲಿಸಿದರು. ಈ ಭೂಮಿಯ ಮೇಲೆ ಮನುಷ್ಯರಿಗಿರುವ ಹಕ್ಕಿನಷ್ಟೇ ಹಕ್ಕು ಎರೆಹುಳು ಮೊದಲು ಮಾಡಿ ಸಕಲಜೀವಿಗಳಿಗೂ ಇದೆ ಎಂದು ಪ್ರತಿಪಾದಿಸಿದರು.

ಜಗತ್ತಿನ ಎಲ್ಲವೂ ಸಕಲಜೀವಾತ್ಮರಿಗೆ ಸಂಬಂಧಿಸಿದುದು ಎಂಬ ಜ್ಞಾನವೇ ಲಿಂಗಜ್ಞಾನ. ಈ ಜ್ಞಾನದ ಮೂಲಕ ಸಮಾಜ ಎಂದರೆ ಹೇಗಿರಬೇಕು ಎಂಬುದರ ಅರಿವನ್ನು ಪಡೆಯಬೇಕು ಎಂದು ಹೇಳಿದ ಮೊದಲ ಸಮತಾವಾದಿ ನಮ್ಮ ಬಸವಣ್ಣನವರು. 'ಲಿಂಗವ ಪೂಜಿಸುತ್ತ ಜಂಗಮದ ಮುಖವ ನೋಡುತ್ತಿಪ್ಪ ಸುಖವ ಕೊಡು, ಕಂಡಾ ಲಿಂಗವೆ.' ಎಂದು ಬಸವಣ್ಣನವರು 'ಲೋಕದ ಸುಖ ತಮ್ಮ ಸುಖ. ಲೋಕದ ದುಃಖ ತಮ್ಮ ದುಃಖ' ಎಂಬುದನ್ನು ಬದುಕಿ ತೋರಿಸಿದ ವಿಶ್ವಮಾನವರಾಗಿದ್ದಾರೆ.

'ಲಿಂಗವಿಡಿದು ಜಂಗಮವಾವುದೆಂದರಿಯಬೇಕು' ಎಂದು ಆದಯ್ಯನವರು ತಿಳಿಸುತ್ತಾರೆ. ಲಿಂಗಜ್ಞಾನವು ಎಂಥ ನವಸಮಾಜದ ನಿರ್ಮಾಣ ಮಾಡಬೇಕೆಂಬುದನ್ನು ತಿಳಿಸುವ ಜ್ಞಾನವೇ ಆಗಿದೆ ಎಂಬುದನ್ನು ತಿಳಿಸಿದ್ದಾರೆ. 'ಸಮತೆ ಎಂಬುದೆ ಯೋಗದಾಗ ನೋಡಾ' ಎಂದು ಹಾವಿನಾಳ ಕಲ್ಲಯ್ಯನವರು ತಿಳಿಸುತ್ತಾರೆ. ಹೀಗೆ ಶರಣರೆಲ್ಲರು

ಸಮಾನತೆಯಿಂದ ಕೂಡಿದ ಮಾನವೀಯ ಸಮಾಜವೊಂದರ ನಿರ್ಮಾಣಕ್ಕಾಗಿ ಕಾಯಕ, ಪ್ರಸಾದ, ದಾಸೋಹ, ಗುರು, ಲಿಂಗ, ಜಂಗಮ, ಅನುಭವ, ಅನುಭಾವ, ಅರಿವು, ಆಚಾರ, ಇಷ್ಟಲಿಂಗ, ಯೋಗ, ಭಕ್ತಿ ಮುಂತಾದ ಪದಗಳನ್ನು ಬಳಸಿದ್ದಾರೆಯೆ ಹೊರತು ಹೊಸ ಧರ್ಮಸ್ಥಾಪನೆಯ ಹಟದಿಂದ ಬಳಸಿಲ್ಲ. ಶರಣರ ಚಳವಳಿಯೊಂದು ಸಲ್ಲಲಿತ ಸನ್ಮಾರ್ಗವಾಗಿದೆ. ಅದುವೆ ಧರ್ಮವಾಗಿ ರೂಪುಗೊಂಡಿದೆ.

ಶರಣರು ಭೌತಿಕ ಬಡತನವನ್ನು ಮೆಟ್ಟಿನಿಂತು ಮನೋಬಲವನ್ನು ಹೊಂದಿದ್ದರು. ಅಂಥ ಮನೋಬಲದಿಂದ ಶೋಷಣೆಯ ಸಮಾಜವನ್ನು ನಿರ್ನಾಮ ಮಾಡಿ ಸುಂದರ ಸಮಾಜ ನಿರ್ಮಾಣ ಮಾಡುವ ಹೋರಾಟದ ಶಕ್ತಿಯನ್ನೂ ಸಂಪಾದಿಸಿದರು. 'ಅಂಗಕ್ಕೆ ಬಡತನವಲ್ಲದೆ ಮನಕ್ಕೆ ಬಡತನವುಂಟೆ? ಬೆಟ್ಟ ಬಲ್ಲಿತ್ತೆಂದಡೆ, ಉಳಿಯ ಮೊನೆಯಲ್ಲಿ ಬಡತನವಿದ್ದಡೆ ಒಡೆಯದೆ?' ಎಂದು ಆಯ್ದಕ್ಕಿ ಲಕ್ಕಮ್ಮನವರು ಪ್ರಶ್ನಿಸುತ್ತಾರೆ. ಬೆಟ್ಟ ಎಷ್ಟೇ ಬಲಿಷ್ಠವಾಗಿದ್ದರೂ ಅದನ್ನು ಚೂಪಾದ ಉಳಿಗಳಿಂದ ಒಡೆಯಬಹುದು ಎಂದು ಅವರು ಕಾಯಕಜೀವಿಗಳ ಒಗ್ಗಟ್ಟಿನ ಮಹತ್ವವನ್ನು ಸಾರಿದ್ದಾರೆ. ಕಾಯಕಜೀವಿಗಳು ಚೂಪಾದ ಉಳಿಗಳಿದ್ದಂತೆ. ಅಸಮಾನತೆಯ ಸಮಾಜ ಬಲಿಷ್ಠ ಬೆಟ್ಟದಂತೆ. ಆ ಮೂಲಕ ನವಸಮಾಜದ ಪರಿಕಲ್ಪನೆಯನ್ನು ಮೂಡಿಸುತ್ತಾರೆ. ಶರಣರ ಬಡತನವೆಂಬುದು ಉಳಿಯ ಮೊನೆಯಲ್ಲಿ ಇರುವ ಬಡತನ. ಆ ಬಡತನ ಬಹಳ ಚೂಪಾಗಿರುತ್ತದೆ. ಇಂಥ ಉಳಿಗಳು ಒಂದಾದಾಗ ಎಂಥ ಬೆಟ್ಟವನ್ನೂ ಒಡೆದು ಹಾಕಬಹುದು.

ಲಿಂಗಭೇದ, ಜಾತಿಭೇದ ಮತ್ತು ವರ್ಗಭೇದಗಳಿಂದ ಕೂಡಿರುವ ವೈದಿಕ ಸಮಾಜವನ್ನು ಕೊಣೆಗಾಣಿಸಿ ಸರ್ವಸಮತ್ವದ ಅವೈದಿಕ ಶರಣಸಮಾಜ ನಿರ್ಮಾಣ ಸಾಧ್ಯ ಎಂಬುದನ್ನು ಲಕ್ಕಮ್ಮನವರು ೮೫೦ ವರ್ಷಗಳಿಂದ ಹೇಳಿದ್ದನ್ನೇ ಕಾರ್ಲ್‌ಮಾರ್ಕ್ಸ್ ಅವರು ೧೯ನೇ ಶತಮಾನದಲ್ಲಿ. 'ದುಡಿಯುವ ಜನರು ಈ ಜಗತ್ತನ್ನು ಆಳುತ್ತಾರೆ' ಎಂದು ಹೇಳಿದ್ದಾರೆ.

❖❖

೧೯

ಶರಣರು ಚಳವಳಿಗಳ ಜನಕರು

ತಮ್ಮೆಲ್ಲರಿಗೆ ಶರಣು ಶರಣಾರ್ಥಿ,

ಬಹುಶಃ ಇಂಥ ಒಂದು ಅತ್ಯಂತ ನವೀನವಾದಂಥ ವಿಷಯವನ್ನ ಆಳ್ವಾಸ್ ನುಡಿಸಿರಿಯವರು ಈ ಬಾರಿ ಇಟ್ಟಿದ್ದು ನನಗೆ ಬಹಳ ಸಂತೋಷ ತಂದಿದೆ. 'ಕನ್ನಡ ಮನಸ್ಸು-ಜನಪರ ಚಳವಳಿಗಳು' ಇದು ಸಮ್ಮೇಳನದ ಪರಿಕಲ್ಪನೆಯಾಗಿದೆ. ಕನ್ನಡದ ಮನಸ್ಸೇ ಚಳವಳಿಯ ಮನಸ್ಸಾಗಿದೆ ಎನ್ನುವುದನ್ನು ನಾವು ನೆನಪಿಟ್ಕೋಬೇಕು. ಬಹುಶಃ ಕನ್ನಡ, ಚಳವಳಿಯ ಭಾಷೆಯಾಗಿ ಬೆಳೆದ ಹಾಗೆ ಜಗತ್ತಿನ ಯಾವ ಭಾಷೆಯೂ ಬೆಳೆದಿಲ್ಲ. ಕನ್ನಡ ಭಾಷೆ ಬೆಳೆದಿದ್ದೇ ಚಳವಳಿಯ ಮೂಲಕ ಅನ್ನೋದನ್ನ ನಾವು ಮರೆಯಬಾರದು. ಸಂಸ್ಕೃತ ಭಾಷೆಗೆ ಚಳವಳಿಯ ಪರಂಪರೆ ಇಲ್ಲ. ಆದರೆ ಕನ್ನಡ ಭಾಷೆಗೆ ಚಳವಳಿಯ ಪರಂಪರೆ ಇದೆ. ಇದು ಹ್ಯಾಗೆ ಸಾಧ್ಯ ಆಯಿತು ಅನ್ನೋದರ ಕುರಿತು ನಾವು ಚಿಂತನೆ ಮಾಡಬೇಕಾಗಿದೆ.

ನಾನು ಮುಖ್ಯವಾಗಿ ಕನ್ನಡ ಸಾಹಿತ್ಯಕ ಚಳವಳಿ ಕುರಿತು ಮಾತನಾಡ್ತೇನೆ. ನನ್ನ ಇಬ್ಬರು ಮಿತ್ರರು ಭಾಷಾ ಚಳವಳಿಯ ಕುರಿತು, ಅದರ ಎಚ್ಚರದ ಕುರಿತು ಮಾತನಾಡ್ತಾರೆ.

ಕನ್ನಡ ಭಾಷೆಯ ಇತಿಹಾಸ ಚಳವಳಿಯ ಇತಿಹಾಸವೇ ಆಗಿದೆ. ಚಳವಳಿಯಲ್ಲಿ ಅನೇಕ ಪ್ರಕಾರಗಳಿದಾವೆ. ಯಾವುದೇ ಸಾಹಿತ್ಯ ರಚನೆ ಚಳವಳಿಯ ಪ್ರಜ್ಞೆ ಇಲ್ದೆ ಆಗಲಾರದು ಎಂದು ನಾನು ಭಾವಿಸಿದ್ದೇನೆ. 'ಕವಯಾ ಕ್ರಾಂತ ದರ್ಶಿಃ' ಅನ್ನೋದು ನಾವು ಮರೀಬಾರ್ದು. ನಾವು ಯಾಕ್ ಬರೀತೇವ್ ಅಂದ್ರೆ... ನಮ್ಮಲ್ಲಿ ಅನೇಕ ಧರ್ಮಗ್ರಂಥಗಳಿದಾವೆ, ಹಿಂದಿನವರು ರಚಿಸಿದ ಸಾಹಿತ್ಯ ಇದೆ. ಅದರೂ ಮನುಷ್ಯ ಯಾಕ್ ಬರೀತಾನಂದ್ರೆ, ಒಬ್ಬ ಸೃಜನಶೀಲ ವ್ಯಕ್ತಿ ಯಾಕ್ ಬರೀತಾನಂದ್ರೆ, ಆತ ಹೊಸದನ್ನೇನೋ ಹೇಳ್ಲಿಕ್ ಇಷ್ಟಾ ಪಡ್ತಾ ಇದಾನೆ ಅಂತ.

ಚಳವಳಿಯ ಮೂಲ ಗುಣ ಹೊಸದನ್ನು ಹೇಳುವಂಥದ್ದು.'ಪ್ರಜ್ಞಾ ನವನವೋನ್ಮೇಷ ಶಾಲಿನೀ ಪ್ರತಿಭಾ ಮತಾ.'ಅಂತಾನೆ ನಾವು ಗುರ್ತಿಸ್ತೇವೆ. ಪ್ರತಿ ಕ್ಷಣದ ಈ ಒಂದು ಹೊಸದಾಗುವಿಕೆ ಇದೆಯಲ್ಲಾ ಅದು ಚಳವಳಿಯ ಬಹುದೊಡ್ಡ ಕಾಣಿಕೆ ಅಂತ·ನಾ ಭಾವಿಸಿದ್ದೇನೆ. ಹನ್ನೊಂದು ನೂರು ವರ್ಷಗಳ ಹಿಂದೆ ಕವಿರಾಜ ಮಾರ್ಗದಲ್ಲಿ ಒಂದು ಮಾತು ಬರ್ತದೆ. 'ಕಸವರಮೆಂಬುದು ನೆರ ಸೈರಿಸಲಾರ್ಪೊಡೆ ಪರ ವಿಚಾರಮಂ, ಧರ್ಮಮುಮಂ.' ಯಾವುದು ಶುದ್ಧ ಬಂಗಾರದಂಥ ಮನಸ್ಸು ಅಂದರೆ ಯಾವ ಮನಸ್ಸು ಬೇರೆಯವರ ಧರ್ಮವನ್ನ ಬೇರೆಯವರ ವಿಚಾರಗಳನ್ನ ನೆರೆ ಅಂದರೆ ಎಲ್ಲ ಮೆಚೂರ್ (ಪರಿಪಕ್ವ) ಆಗಿರುವಂಥದ್ದು. ನೆರೆ ಸೈರಿಸಲಾರ್ಪೊಡೆ, ಅಂದರೆ ಆ ಬೇರೆಯವರ ವಿಚಾರಗಳನ್ನು ಗೌರವಿಸುವಂಥ ಮನಸ್ಥಿತಿ ಇದೆಯಲ್ಲಾ, ಆ ಮನಸ್ಥಿತಿಯೇ ಚಳವಳಿಯ ಮೂಲ ಗುಣ ಆಗಿದೆ ಅಂತ ನಾನ್ ಹೇಳ್ಲಿಕ್ಕೆ ಇಷ್ಟಾ ಪಡ್ತೇನೆ.

ನಮ್ಮ ಕನ್ನಡ ಸಾಹಿತ್ಯದ ಈ ಲಕ್ಷಣಗ್ರಂಥದಲ್ಲಿನ ಬಹುದೊಡ್ಡ ಲಕ್ಷಣ ಏನೆಂದರೆ ಈ ರೀತಿಯಾದಂಥ ಕ್ರಿಯೆಟಿವಿಟಿ (ಸೃಜನಶೀಲತೆ), ಅದನ್ನ ನಾವ್ ಇವತ್ತು ಗುರ್ತಿಸ್‌ಬೇಕಾಗಿದೆ.

ಇವತ್ತು ಬಹಳ ದೊಡ್ಡ ಚಳವಳಿಯನ್ನ, ಜಗತ್ತಿನಲ್ಲೇ ಬಹಳ ದೊಡ್ಡದಾದಂಥ ಚಳವಳಿಯನ್ನ ಸಾಹಿತ್ಯದಲ್ಲಿ ನಾವು ಕಾಣ್ನೋದು ಕನ್ನಡದ ನೆಲದಲ್ಲಿ, ಕನ್ನಡ ಭಾಷೆಯಲ್ಲಿ, ಅದು ಶರಣರ ಚಳವಳಿಯಲ್ಲಿ ಎನ್ನೋದು ನಮಗೆಲ್ಲ ಗೊತ್ತಿದೆ. ಆದರೆ ಒಂದು ಮಾತ ಹೇಳ್ತೀನಿ. ಶರಣರ ಚಳವಳಿಗೆ ಪೂರಕವಾಗಿ ಒಂದು ಮಾತನ್ನ ಹೇಳಬೇಕಾಗಿದೆ. ಕನ್ನಡದಲ್ಲಿ ಜೈನ ಸಾಹಿತ್ಯ ಬಾರದೆ ಇದ್ದಿದ್ರೆ, ಬಹುಶಃ ವಚನ ಚಳವಳಿ ಪೂರ್ತಿ ಆಗ್ತಿದ್ದಿಲ್ಲಾ. ಯಾವುದನ್ನ ಸಮೂಹ ಪ್ರಜ್ಞೆಯಾಗಿ, ಚಳವಳಿಯ ಪ್ರಜ್ಞೆಯಾಗಿ ನಾವು ಶರಣರಲ್ಲಿ ಕಾಣುತ್ತೇವಲ್ಲಾ ಆ ಎಲ್ಲ ಪ್ರಜ್ಞೆ ಪಂಪಭಾರತದಲ್ಲಿ ಇದೆ ಅಂತ ನಾನ್ ಹೇಳ್ಲಿಕ್ಕೆ ಇಷ್ಟಾ ಪಡ್ತೀನಿ.

ಶರಣರ ಚಳವಳಿಗೆ ಮೊದಲು, ಇನ್ನೂರು ವರ್ಷಗಳ ಹಿಂದೆ 'ಮನುಷ್ಯ ಜಾತಿ ತಾನೊಂದೆ ವಲಂ' ಎಂದು ಪಂಪ ಹೇಳಿದ. ವಲಂ ಅಂದರೆ 'ಸತ್ಯ' ಅಥವಾ 'ಅಲ್ಲವೆ' ಅಂತ. ಮನುಷ್ಯ ಜಾತಿ ಒಂದೇ ಅಲ್ಲವೆ? ಅನ್ನುವ ಪ್ರಶ್ನೆ ಇದೆಯಲ್ಲ, ಇದು ಕನ್ನಡದ ಚಳವಳಿಯ ಬೀಜ ಪ್ರಶ್ನೆ ಆಗಿದೆ. ಆ ಮನುಷ್ಯ ಜಾತಿ ಒಂದೇ ಅಲ್ಲವೆ? ಅನ್ನುವ ಪ್ರಶ್ನೆಗೆ ನಾವು ಇವತ್ತಿಗೆ ಕೂಡ ಉತ್ತರ ಕೊಡ್ತಾ ಇಲ್ಲಾ. ಯಾಕಂತಂದ್ರೆ ನಾವು ಇನ್ನೂ ಜಾತಿವಾದಿಗಳಾಗಿಯೇ ಉಳಿದಿದೇವೆ. ಅಸ್ಪೃಶ್ಯತೆಯನ್ನ ಆಚರಿಸ್ತೇವೆ. ದಲಿತರ ಮೇಲೆ ಹಲ್ಲೆಗಳಾಗುವುದನ್ನ ನಾವು ಈ ನೆಲದಲ್ಲಿ ನೋಡ್ತೇವೆ. ಮತ್ತು ಜಾತಿ ವಿಜಾತಿಗಳಿಂದ ಮನುಷ್ಯನನ್ನು ಗುರ್ತಿಸುವ ಕ್ರಿಯೆಯಲ್ಲಿ ನಾವು ಇವತ್ತಿಗೂ ತೊಡಗಿದೇವೆ.

ಯಾವ ಪಶ್ನೆ ನಮಗೆ ಪಂಪ ಹಾಕ್ದ್ರಾ, ಸಾವಿರ ವರ್ಷಗಳ ಹಿಂದೆ; ಆ ಪ್ರಶ್ನೆ ಇವತ್ತಿಗೂ ನಮ್ಮ ಮನಸ್ಸಿನಲ್ಲಿ ಚಳವಳಿಯ ರೂಪದಲ್ಲಿ ಇದೆ ಅಂತ ಹೇಳ್ಲಿಕ್ಕೆ ನಾನು ಬಯಸ್ತೇನೆ.

ಪಂಪ ಮನುಷ್ಯನ ವಾಖ್ಯಾನವನ್ನ ಮಾಡ್ತಾನೆ. ಎಷ್ಟು ಅದ್ಭುತವಾದ ವ್ಯಾಖ್ಯಾನ ಅಂದರೆ ಇವತ್ತಿಗೂ ಈ ಕ್ಷಣಕ್ಕೂ ಮನುಷ್ಯ ಹೇಗೆ ಇರಬೇಕು ಅನ್ನೂದಕ್ಕೆ ಪಂಪನ ವ್ಯಾಖ್ಯಾನವೇ ಒಂದು ಮಾದರಿ ಅಂತ ನಾನು ಹೇಳ್ತೇನೆ. ಪಂಪ ಹೇಳ್ತಾನೆ: ಒತ್ತಿ ತರುಂಬಿ ನಿಂದ ರಿಪುಭೂಜ ಸಮಾಜದ ಬೇರ್ಗಳಂ ನಭಕ್ಕೆತ್ತದೆ, ಬಂದು ತನ್ನ ಮರೆವೊಕ್ಕಡೆ ಕಾಯದೆ, ಚಾಗದೊಳ್ಪಿನ ಅಚ್ಚೊತ್ತದೆ ಮಾಣ್ದು ಬಾಳ್ವ ಪುಳುವಾನಸಂ ಎಂಬಂ ಅಜಾಂಡಂ ಎಂಬುದೊಂದು ಅತ್ತಿಯ ಪಣ್ಣೊಳಿರ್ಪ ಪುಳುವಲ್ಲದೆ ಮಾನಸನೆ ಮುರಾಂತಕ' ಎಂದು.

ನೋಡಿ ಪಂಪ ಒಬ್ಬ ವೀರನ ಲಕ್ಷಣವನ್ನ ಹೇಳ್ತಾನೆ. ತಮಗ ಗೊತ್ತಿದೆ; ಹತ್ತನೇ ಶತಮಾನ ಯುದ್ಧಗಳ ಶತಮಾನ ಆಗಿತ್ತು. ಈ ಯುದ್ಧಗಳ ಶತಮಾನದಲ್ಲಿ ಮನುಷ್ಯನನ್ನ ಗುರ್ತಿಸುವ ಕ್ರಿಯೆ ಇದೆಯಲ್ಲಾ, ಈ ಪಂಪನಂಥವರು, ಅನಂತಮೂರ್ತಿ ಅಂಥವರು 'ಇಂಡಿವಿಜ್ಯುವಲ್ ಮೆನ್ ಆಫ್ ಸ್ಟ್ರಗಲ್' (ಏಕಾಂಗಿ ಹೋರಾಟಗಾರರು) ಅಂತ ನಾನ್ ಭಾವಿಸ್ತೇನೆ. ಅವರು ವ್ಯಕ್ತಿಗತವಾಗಿ ಸದಾ ಹೋರಾಟದಲ್ಲಿ ನಿರತರಾಗಿರುವವರು. ಪಂಪ ಹೇಳ್ತಾನೆ: ಒಬ್ಬ ವೀರ ಅವನ ವೈರಿ ಸೈನ್ಯವೆಂಬ ಅರಣ್ಯದ ಬೇರ್ಗಳನ್ನ ಆಕಾಶಕ್ಕೆ ಎತ್ತಿದರಷ್ಟೇ ಆತ ವೀರ ಅಲ್ಲ. ತನ್ನ ಮರೆವೊಕ್ಕಡೆ ಕಾಯದೆ, ಅಂದರೆ ಯಾರು ತಮ್ಮ ರಕ್ಷಣೆಯನ್ನ ಬಯಸ್ತಾರಲ್ಲಾ ಆ ರಕ್ಷಣೆಯ ಕೆಲಸವನ್ನು ಆತ ಮಾಡದೆ ಇದ್ದರೆ, ತನ್ನ ಕ್ರಿಯೆಯಲ್ಲಿ ತ್ಯಾಗದ ಮುದ್ರೆಯನ್ನು ಆತ ಒತ್ತದೆ ಇದ್ದರೆ ಅವನು ಮಾನಸನೆ? ಮನುಷ್ಯನೆ? ಅಜಾಂಡಂ ಎಂಬುದೊಂದು ಅತ್ತಿಯ ಪಣ್ಣೊಳಿರ್ಪ ಪುಳು. ಹೀಗೆ ಈ ಬ್ರಹ್ಮಾಂಡ ಎನ್ನುವ ಒಂದು ಅತ್ತಿಯ ಹಣ್ಣಿನಲ್ಲಿರುವ ಹುಳು ಆಗಿ ಆತ ಬದುಕಿ ಸತ್ಹೋಗಿ ಬಿಡ್ತಾನೆ ಅಂತ. ಮನುಷ್ಯನ ಬಗ್ಗೆ ಕಾಳಜಿಗಳಿದಾವೆಯಲ್ಲಾ, ಅವರು ಕನ್ನಡದ ಪರಪಂರೆಯಲ್ಲಿ ಅದ್ಭುತವಾಗಿದಾವೆ, ಅನನ್ಯವಾಗಿದಾವೆ. ಅಂಥ ಒಂದು ಕನಸನ್ನ ನನಸಾಗಿಸಿದವರು ನಮ್ಮ ಶರಣರು.

ಶರಣರ ಚಳವಳಿ ಇದೆಯಲ್ಲಾ ಎಷ್ಟು ಅದ್ಭುತವಾದಂಥದ್ದು. ಅನನ್ಯವಾದಂಥದ್ದು ಇಡೀ ವಿಶ್ವದಲ್ಲೇ ಅನ್ನೋದನ್ನ ಯೋಚನೆ ಮಾಡಿ. ೧೨ನೇ ಶತಮಾನದಲ್ಲಿ ಇಂಗ್ಲಿಷ್ ಭಾಷೆಯಲ್ಲಿ ಒಂದು ಸಾಲಿನ ಸಾಹಿತ್ಯ ಕೂಡ ಇದ್ದಿದ್ದಿಲ್ಲ. ಆ ಸಂದರ್ಭದಲ್ಲಿ ಕನ್ನಡದಲ್ಲಿ ವಚನಕಾರರು ವಿಶ್ವಸಾಹಿತ್ಯದ ರಚನೆಯನ್ನ ಮಾಡಿದರು. ಇವತ್ತಿಗೆ ಕೂಡ ಈ ವಚನ ಸಾಹಿತ್ಯ ಜಗತ್ತಿಗೆ ಬೇಕಾಗಿರುವಂಥದ್ದು ಅನ್ನೋದನ್ನ ನಾವು ಮರೀಬಾರ್ದು. ಯಾವರೀತಿ ಅವರು ಮಾಡಿದರು. ಯಾವ ರೀತಿ ಭಾಷೆಯ ಆಯ್ಕೆಯನ್ನು ಅವರು ಮಾಡಿದರು.

ನಾವು ಬಸವಣ್ಣನವರಿಗೆ ಹೇಳ್ತೇವೆ; ಸಕಲ ವೇದ ಶಾಸ್ತ್ರ ಪುರಾಣ ಆಗಮ ಪಾರಂಗತ ಅಂತ. ಅಂಥಾ ಬಸವಣ್ಣನವರು ಕನ್ನಡದಲ್ಲಿ ಯಾಕ್ ಬರದ್ರೂ, ಇದು ನಾವು ಚಿಂತನೆ ಮಾಡುವಂಥ ವಿಚಾರ ಆಗಿದೆ. ಬಸವಣ್ಣನವರಿಗೆ ಕೋಟ್ಯಂತರ ಜನರ ಜೊತೆ ಮಾತನಾಡಬೇಕಿತ್ತು. ಅಲ್ಲಿಯ ವರೆಗೆ ಕೂಡಲಸಂಗಮದೇವ ಸಂಸ್ಕೃತದಲ್ಲೇ ವ್ಯವಹರಸ್ತಾ ಇದ್ದಾ. ಮಧ್ಯವರ್ತಿಗಳಿದ್ರು, ದೇವರಿಗೆ ಕನ್ನಡಾ ಗೊತ್ತಿದ್ದಿದ್ದಿಲ್ಲಾ. ಆ ಮಧ್ಯವರ್ತಿಗಳು ಸಂಸ್ಕೃತದಲ್ಲಿ ಹೇಳ್ತಾ ಇದ್ರು, ಆ ದೇವರು ಸಂಸ್ಕೃತದಲ್ಲಿ ಹೇಳಿದ್ದನ್ನ ಮತ್ತೆ ಇವರು ಕನ್ನಡದಲ್ಲಿ ಏನೇನೋ ಅನುವಾದ ಮಾಡಿ ಹೇಳ್ತಾ ಇದ್ರು ಅಂತ ಇಟ್ಕೊಳ್ಳಿ. ಆದ್ದರಿಂದ ಬಸವಣ್ಣ ಏನ್ ಯೋಚನೆ ಮಾಡದ್ರು ಅಂದ್ರೆ, ಕೋಟ್ಯಂತರ ಜನರಿಗೆ ಸಂಸ್ಕೃತ ಕಲಿಸಲಿಕ್ಕಾಗಲ್ಲಾ. ಆದರೆ ದೇವರಿಗೆ ಕನ್ನಡ ಕಲಿಸಿದ ಮೇಲೆ ಆತ ನೇರವಾಗಿ ಶೋಷಣೆಗೆ ಒಳಗಾದವರ ಜೊತೆ ಮಾತನಾಡಬಲ್ಲಾ ಅನ್ನೋದು. ಇಂಥಾ ಒಂದು ಜನ ಭಾಷೆಯನ್ನ ಧರ್ಮದ ಭಾಷೆಯನ್ನಾಗಿ ಮಾಡಿದ ಕೀರ್ತಿ ನಮ್ಮ ಶರಣರಿಗೆ ಸಲ್ತದೆ. ಜಗತ್ತಿನಲ್ಲಿ ಇರಬಹುದಾದ ೧೫ ಧರ್ಮದ ಭಾಷೆಗಳಲ್ಲಿ ಕನ್ನಡ ಒಂದಾಗಿದೆ. ಆ ೧೫ ಭಾಷೆಗಳಲ್ಲಿ ಈ ಶರಣರ ಕಾರಣ ಕನ್ನಡ ತತ್ತ್ವದ ಭಾಷೆಯಾಯಿತು, ಧರ್ಮದ ಭಾಷೆಯಾಯಿತು. ಅಷ್ಟೇ ಅಲ್ಲ ಚಳವಳಿಯ ಭಾಷೆಯೂ ಆಯಿತು. ಕನ್ನಡವನ್ನ ಚಳವಳಿಯ ಭಾಷೆಯಾಗಿ ಮಾಡಿದ ಕೀರ್ತಿ ನಮ್ಮ ಶರಣರಿಗೆ ಸಲ್ತದೆ. ಶರಣರು ಕನ್ನಡವನ್ನು 'ಸಮೂಹ ಸಾಹಿತ್ಯ'ದ ಭಾಷೆಯನ್ನಾಗಿಯೂ ಮಾಡಿದ್ರು, ಇದು ಅತ್ಯಂತ ಮಹತ್ವದ್ದು. ಕನ್ನಡದಲ್ಲಿ ಸಮೂಹ ಸಾಹಿತ್ಯದ ದೊಡ್ಡ ಪರಿಕಲ್ಪನೆಯನ್ನ ಕೊಟ್ಟವರು ನಮ್ಮ ಶರಣರು ಎಂಬುದನ್ನ ನಾನು ಹೇಳ್ತೀನಿ. ಈ ರೀತಿಯ ಸಮೂಹ ಸಾಹಿತ್ಯದ ರಚನೆ ಇನ್ನೆಲ್ಲಿಯೂ ಆಗಿಲ್ಲ. ಇಂಥ ಸಮೂಹ ಸಾಹಿತ್ಯವನ್ನ ರಚನೆ ಮಾಡಿದವರು ಯಾರು? ಯಾರು ಐದು ಸಾವಿರ ವರ್ಷಗಳಿಂದ ಅಕ್ಷರವಂಚಿತರಾಗಿದ್ರೊ, ಯಾರಿಗೆ ಅಕ್ಷರ ಜಗತ್ತಿನ ಕಲ್ಪನೆ ಕೂಡ ಇದ್ದಿದ್ದಿಲ್ಲವೊ ಅಂಥ ಜನರು. ಯಾರು ಅವರು? ೭೭೦ ಅಮರಗಣಂಗಳು ಅಂದ್ರೆ, ನೋಡಿ ಎಂಥ ಕ್ರಾಸ್ ಸೆಕ್ಷನ್ ಆಫ್ ಸೊಸೈಟಿ! ೭೭೦ ಅಮರಗಣಂಗಳಲ್ಲಿ ಮಹಿಳೆಯರಿದಾರೆ. ದುಡಿಯುವ ವರ್ಗದ ಮಹಿಳೆಯರಿದಾರೆ. ಕಸಗುಡಿಸುವವರಿದಾರೆ, ಚಪ್ಪಲಿ ಹೊಲಿಯುವವರಿದಾರೆ, ತೊಗಲು ಹದ ಮಾಡುವವರಿದಾರೆ, ದೋಣಿ ನಡೆಸುವವರಿದಾರೆ, ಹುಲ್ಲ ಹೊರೆಯನ್ನ ಹೊತ್ತು ಮಾರುವವರಿದಾರೆ, ಕೃಷಿಕರಿದಾರೆ, ಕೃಷಿ ಕಾರ್ಮಿಕರಿದಾರೆ, ಮಡಿವಾಳರಿದಾರೆ ಹಡಪದರಿದಾ.ರೆ.ಇಂಥ ಜನರ ಒಂದು ಪಾರ್ಲಿಮೆಂಟನ್ನ, ಅಂದರೆ ಸೋಸಿಯೊ ರಿಲೀಜಿಯಸ್ ಪಾರ್ಲಿಮೆಂಟ್ (ಸಮಾಜೋ ಧಾರ್ಮಿಕ ಸಂಸತ್) ಅಂತ ನಾವು ಕರೀತೇವೆ. ದ್ಯಾಟ್ ಈಸ್ ದ ಫಸ್ಟ್ ಕನ್ಸೆಪ್ಟ್ ಅಂಡರ್ ದ ಸನ್. ಜಗತ್ತಿನಲ್ಲಿ ಪಾರ್ಲಿಮೆಂಟಿನ ಕಲ್ಪನೆ ಕೊಟ್ಟವರು ನಮ್ಮ ಚಳವಳಿಗಾರರು, ವಚನ ಚಳವಳಿಗಾರರು.

ಜಗತ್ತಿಗೆ ಸಂವಿಧಾನದ ಪರಿಕಲ್ಪನೆಯನ್ನು ಕೊಟ್ಟವರು ನಮ್ಮ ಶರಣರು. ಸಂವಿಧಾನದ ಪರಿಕಲ್ಪನೆ ಜಗತ್ತಿಗೆ ಇದ್ದಿದ್ದಿಲ್ಲ ೧೨ನೇ ಶತಮಾನದಲ್ಲಿ. 'ವಚನ ಸಂವಿಧಾನ' ಅಂತ ನಾವು ಕರೀತೇವೆ. ೧೨೧೫ರಲ್ಲಿ ಇಂಗ್ಲಂಡ್‌ನಲ್ಲಿ ಕಿಂಗ್ ಜಾನ್. ನಿಮಗೆ ಗೊತ್ತಿದೆ ಮ್ಯಾಗ್ನಾ ಕಾರ್ಟಾ ಅನ್ನೋದು. ಮ್ಯಾಗ್ನಾ ಕಾರ್ಟಾ ಅಂದರೆ ಮಹಾ ಒಪ್ಪಂದ. ಆ ಮ್ಯಾಗ್ನಾ ಕಾರ್ಟಾದಲ್ಲಿ ಏನ್ ಒಪ್ಪಂದ ಆಗ್ತದ ಅಂದ್ರೆ, ರಾಜನ ಹಕ್ಕನ್ನ ಮೊಟಕುಗೊಳಿಸುವ ಒಪ್ಪಂದ ಆಗ್ತದ. ಕಿಂಗ್ ಜಾನ್ ಮತ್ತೆ ಧರ್ಮಪಂಡಿತರು ಹಾಗೂ ಕುಲಕ್ಸ್ ಅಂದರೆ ಜಹಾಗೀರದಾರರು ಮತ್ತು ಜಮೀನುದಾರರ ಮಧ್ಯೆ ಒಪ್ಪಂದ ಆಗ್ತದೆ. ಜನಸಾಮಾನ್ಯರ ಮಧ್ಯೆ ಒಪ್ಪಂದ ಆಗೂದಿಲ್ಲಾ. ಅಲ್ಲಿಯ ಲ್ಯಾಂಡ್ ಲಾರ್ಡ್ಸ್‌ಗೆ ಒಂದಿಷ್ಟು ಹಕ್ಕುಗಳನ್ನು ಕೊಡುವಂಥ ಒಪ್ಪಂದ ಅದು. ಆಮೇಲೆ ಜಗತ್ತಿನ ಎಲ್ಲಾ ಸಂವಿಧಾನ ತಜ್ಞರು ಒಂದು ಮಾತನ್ನ ಹೇಳ್ತಾರೆ. ಏನಂದ್ರೆ ಮ್ಯಾಗ್ನಾ ಕಾರ್ಟಾ ಈಸ್ ದ ಮದರ್ ಆಫ್ ಆಲ್ ಕಾನ್ಸಿಟ್ಯೂಷನ್ಸ್ ಆಫ್ ದ ವರ್ಲ್ಡ್ ಅಂತ ಹೇಳ್ತಾರೆ. ಆದರೆ ಇದು ತಪ್ಪು ಅಂತ ಹೇಳುವ ಒಂದು ಸಾಧನೆಯನ್ನ ಕನ್ನಡಿಗರು ಇವತ್ತಿಗೂ ಮಾಡಲಿಲ್ಲ. ಯಾಕೆಂದರೆ ಈ ಒಪ್ಪಂದಕ್ಕಿಂತ ೬೦ ವರ್ಷ ಮೊದಲೇ ಬಸವಣ್ಣನವರು, ನಮ್ಮ ಶರಣರು ವಚನಗಳ ಮೂಲಕ, ಶರಣ ಸಂಕುಲವೆಂಬ ಸಮಾಜಕ್ಕೆ ಎಂಥ ಸಂವಿಧಾನ ಬೇಕು ಅನ್ನೋದನ್ನ ವಚನಗಳ ಮೂಲಕ ತೋರಿಸಿದಾರೆ. ಪಾರ್ಲಿಮೆಂಟನ್ನ ಅವರು ಸೃಷ್ಟಿ ಮಾಡಿದಾರೆ. ಇಂಥ ಒಂದು ಅದ್ಭುತವಾದ ಘಟನೆಯನ್ನ ಪಾಶ್ಚಿಮಾತ್ಯ ರಾಷ್ಟ್ರಗಳಿಗೆ ಇವತ್ತಿಗೆ ಕೂಡ ತಲುಪಿಸಲಿಕ್ಕೆ ನಮಗೆ ಆಗಿಲ್ಲ. ಇದು ಬಹಳ ವಿಷಾದದ ಸಂಗತಿ. ಇನೂ ಆಶ್ಚರ್ಯ ಅನಿಸಬಹುದು. ೧೯೪೮ನೇ ಡಿಸೆಂಬರ್ ೧೦ರಂದು ಯೂನಿವರ್ಸಲ್ ಡಿಕ್ಲೆರೇಷನ್ ಆಫ್ ಹ್ಯೂಮನ್ ರೈಟ್ಸ್ ಅಂತ ನಾವು ಯಾವುದಕ್ಕೆ ಹೇಳ್ತೇವೆ ಆ ೩೦ ಅಂಶಗಳ ಮಾನವ ಹಕ್ಕುಗಳನ್ನ ವಿಶ್ವಸಂಸ್ಥೆ ಲೇಡಿ ರೂಸ್ವೆಲ್ಟ್ ಅಧ್ಯಕ್ಷತೆಯಲ್ಲಿ ರಚಿಸಿದ ಸಮಿತಿಯಿಂದ ಪಡೆದು ಜಾರಿಗೊಳಿಸಿತು. ಆ ೩೦ ಅಂಶಗಳಲ್ಲಿ ೨೫ ಅಂಶಗಳು ಭಾರತದ ಸಂವಿಧಾನದಲ್ಲಿವೆ. ಆದರೆ ಇನ್ನೂ ನಿಮಗೆ ಆಶ್ಚರ್ಯ ಎನಿಸಬಹುದು; ೮೫೦ ವರ್ಷಗಳ ಹಿಂದೆ ಬಸವಣ್ಣನವರು ಬರೆದ ವಚನಗಳಲ್ಲಿ ಆ ಎಲ್ಲ ೩೦ ಅಂಶಗಳು ಇವೆ. ಇದನ್ನ ನಮಗೆ ಹೇಳಲಿಕ್ಕೆ ಆಗ್ತಾ ಇಲ್ಲಾ. ಯಾವ ಮಾನವ ಹಕ್ಕುಗಳ ಕುರಿತು ಬಸವಣ್ಣನವರು ಮಾತ್ನಾಡದ್ರೊ, ಶರಣರು ಮಾತ್ನಾಡದ್ರೋ ಆ ಕಾರಣಕ್ಕಾಗಿ ಅವರು ಹುತಾತ್ಮರಾಗಬೇಕಾಯಿತು. ಅವರ ವಚನಗಳನ್ನ ಸುಟ್ಟರು. ೧೨ ಶತಮಾನದ ಚಳವಳಿಗೆ ಸಂಬಂಧಿಸಿದ ಕೇವಲ ೧೫ ಸಾವಿರದಷ್ಟು ವಚನಗಳು ನಮಗೆ ಸಿಕ್ಕಿವೆ. ಪಟ್ಟಭದ್ರ ಹಿತಾಸಕ್ತಿಗಳು ಲಕ್ಷಾಂತರ ವಚನಗಳನ್ನ ಸುಟ್ಟು ಹಾಕದ್ರು, ಸಹಸ್ರಾರು ಶರಣರ ಕೊಲೆ ಮತ್ತು ಸಾವು ನೋವುಗಳು ಸಂಭವಿಸಿದವು. 'ಕೆಟ್ಟಿತ್ತು ಕಲ್ಯಾಣ ಹಾಳಾಯಿತ್ತು ನೋಡಾ' ಅನ್ನುವ ಮಾತನ್ನು ಬಸವಣ್ಣನವರು ಹೇಳ್ತಾರೆ.

ಬದುಕಿ ಉಳಿದ ಶರಣರು ದಿಕ್ಕಾಪಾಲಾಗಿ ಹೊಗ್ತಾರೆ. ಇಂಥ ಒಂದು ಚಳವಳಿಗೆ ಕನ್ನಡ ನೆಲ ಸಾಕ್ಷಿಯಾಯಿತು ಅನ್ನೊದನ್ನ ನಾವು ಮರೀಬಾರದು. ಈ ಚಳವಳಿ ಕುರಿತು ನಾವು ಚಿಂತನೆ ಮಾಡಬೇಕಾಗಿದೆ. ಮಾರ್ಕ್ಸ್ ಒಂದ್ಕಡೆ ಹೇಳ್ತಾರೆ. ದ ಹಿಸ್ಟ್ರಿ ಆಫ್ ಹಿದರ್ ಟು ಎಕ್ಸಿಸ್ಟಿಂಗ್ ಸೊಸೈಟಿ ಈಸ್ ದ ಹಿಸ್ಟ್ರಿ ಆಫ್ ಕ್ಲಾಸ್ ಸ್ಟಗಲ್ಸ್ ಅಂತ. ಇಡೀ ಮಾನವನ ಇತಿಹಾಸ ಇದೆಯಲ್ಲಾ ಅದು ವರ್ಗ ಹೋರಾಟಗಳ ಇತಿಹಾಸವಾಗಿದೆ. ನಿರಂತರವಾದ ವರ್ಗ ಹೋರಾಟಗಳಿಂದ ಮಾನವನ ಇತಿಹಾಸ ನಿರ್ಮಾಣವಾಗಿದೆ. ಆದರೆ ಇಡೀ ಜಗತ್ತಿನಲ್ಲಿ ಮೊದಲ ಬಾರಿಗೆ ಸಾಮೂಹಿಕ ಹೋರಾಟವನ್ನು ಮಾಡಿದಂಥ ಕೀರ್ತಿ ನಮ್ಮ ಶರಣರಿಗೆ, ಬಸವಣ್ಣನವರಿಗೆ ಸಲ್ತದೆ. ಇಡೀ ಜಗತ್ತಿನ ಇತಿಹಾಸದಲ್ಲಿ ಹಿ ವಾಜ್ ದ ಫಸ್ಟ್ ಆರ್ಗನೈಜರ್ ಆಫ್ ವರ್ಕಿಂಗ್ ಕ್ಲಾಸ್. ಬಸವಣ್ಣನವರೇ ದುಡಿಯುವ ವರ್ಗದ ಮೊದಲ ಸಂಘಟಕರು. ಯಾವುದನ್ನ ೧೯ನೇ ಶತಮಾನದಲ್ಲಿ ಕಾರ್ಲ್ ಮಾರ್ಕ್ಸ್ ಗುರುತಿಸಿದರೋ ಬಸವಣ್ಣನವರು ೧೨ನೇ ಶತಮಾನದಲ್ಲೇ ಗುರುತಿಸಿದರು. ಕಾಯಕ ಜೀವಿಗಳ ಸಂಘಟನೆ ಮಾಡಿದರು. ಕಾಯಕ ಜೀವಿಗಳ ಚಳವಳಿ ಮಾಡಿದರು. ಜಾತಿಗಳನ್ನ ಒಡೆದರು, ವರ್ಗವನ್ನ ನಿರ್ಮಾಣ ಮಾಡಿದರು. ಇನ್ನೂ ಆಶ್ಚರ್ಯ ಅನಿಸಬಹುದು. ೧೩ನೇ ಶತಮಾನದ ವರೆಗೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವರ್ಗ ಕಲ್ಪನೆ ಇದ್ದಿದ್ದಿಲ್ಲ. ದೆ ವೆಯರ್ ಹ್ಯಾವಿಂಗ್ ಗಿಲ್ಡ್ಸ್. ಅಲ್ಲಿ ವೃತ್ತಿಗುಂಪುಗಳಿದ್ದವು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ೧೩ನೇ ಶತಮಾನದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಬಂತು. ಆದರೆ ಬಸವಣ್ಣನವರು ೧೨ನೇ ಶತಮಾನದಲ್ಲಿ 'ಉಳ್ಳವರು ಶಿವಾಲಯವ ಮಾಡಿಹರು, ನಾನೇನು ಮಾಡಲಿ ಬಡವನಯ್ಯಾ' ಅಂದರೆ ಉಳ್ಳವರು ಮತ್ತು ಇಲ್ಲದವರು; ಹ್ಯಾವ್ಸ್ ಅಂಡ್ ಹ್ಯಾವ್ ನಾಟ್ಸ್ ಅನ್ನುವ ಪರಿಕಲ್ಪನೆಯನ್ನ ಜಗತ್ತಿಗೆ ಮೊದಲ ಬಾರಿಗೆ ಕೊಟ್ಟರು.

ಮತ್ತೆ ಬಸವಣ್ಣನವರು ಮತ್ತು ಶರಣರು ಈ ಜಗತ್ತಿಗೆ ಕೊಟ್ಟ ಬಹಳ ದೊಡ್ಡ ಸಂದೇಶ ಇದೆಯಲ್ಲಾ ಅದೇನೆಂದರೆ, ಅದು ಚಳವಳಿಯ ಸಂದೇಶ ಆಗಿದೆ. ಅವರು ಏನು ಹೇಳಿದ್ರು ಅಂದ್ರೆ; ಏನೂ ಇಲ್ಲದವರು, ಇದು ಬಹಳ ಮಹತ್ವದ ಮಾತು. ಏನೂ ಇಲ್ಲದವರು ಈ ಜಗತ್ತನ್ನು ಬದಲಾಯಿಸುವ ಶಕ್ತಿಯನ್ನು ಹೊಂದಿರುತ್ತಾರೆ ಅನ್ನೊದು. ಇದು ನಮ್ಮ ಶರಣ ಚಳವಳಿಯ ಒಂದು ಮಹಾಘೋಷ ಆಗಿದೆ ಎಂದು ನಾನು ಹೇಳ್ತೀನಿ. ಇವರ ಚಳವಳಿ ಮನುಧರ್ಮ ಸಿಂಹಾಸನವನ್ನೂ ಅಳಗಾಡಿಸ್ತದೆ, ಬಿಜ್ಜಳನ ಸಿಂಹಾಸನವನ್ನೂ ಅಳಗಾಡಿಸ್ತದೆ.

ಕಾಯಕಜೀವಿಗಳು ಈ ಮೊದಲು ಜಾತಿ ವಿಜಾತಿಗಳಲ್ಲಿ ಒಡೆದು ಹೋಗಿದ್ದರು. ಅವರಲ್ಲಿ ಬಹುಪಾಲು ಜನ ಬಸವಣ್ಣನವರ ಶರಣಸಂಕುಲ ಸೇರಿದರು. ನಿರ್ಜಾತಿ ಶರಣರಾದರು. 'ಕುಲವನರಸುವರೆ ಶರಣರಲ್ಲಿ, ಜಾತಿ ಸಂಕರವಾದಬಳಿಕ?' ಎಂದು

ಬಸವಣ್ಣನವರು ಕೇಳ್ತಾರೆ. ಶರಣಸಂಕುಲದ ಕಲ್ಪನೆ ಏನಿದೆ? ನೋಡಿ ಸಂಕುಲ ಅತ್ಯಂತ ಮಹತ್ವದ ಪದ. ಎಲ್ಲಿ ಕುಲಗಳಿಲ್ಲವೊ, ಎಲ್ಲಿ ಜಾತೀಯತೆ ಇಲ್ಲವೊ, ಎಲ್ಲಿ ಅಸ್ಪೃಶ್ಯತೆ ಇಲ್ಲವೊ, ಎಲ್ಲಿ ಹೆಣ್ಣು ಗಂಡಿನ ಭೇದ ಇಲ್ಲವೊ ಅದಕ್ಕೆ ಸಂಕುಲ ಅಂತಾರೆ. ಪ್ರಾಣಿಸಂಕುಲ ಅಂದರೆ ಅಲ್ಲಿ ಇಲಿಗೂ ಅಷ್ಟೇ ಕಿಮ್ಮತ್ತಿದೆ, ಹುಲಿಗೂ ಅಷ್ಟೇ ಕಿಮ್ಮತ್ತಿದೆ. ಹುಲಿಗೇನು ಸ್ಪೇಷಲ್ ಕಿಮ್ಮತ್ತಿಲ್ಲ. ಪ್ರಾಣಿಸಂಕುಲದಲ್ಲಿ ಇಲಿಯೂ ಅಷ್ಟೇ ಹುಲಿಯೂ ಅಷ್ಟೇ. ಅವುಗಳದೇ ಆದ ವಿಶಿಷ್ಟ ಶರೀರ ರಚನೆ ಮತ್ತು ಬದುಕುವ ಕ್ರಮಗಳಿರುತ್ತವೆ. ಶರಣಸಂಕುಲದಲ್ಲಿ ಯಾರೂ ಮೇಲಿನವರಿಲ್ಲ, ಯಾರೂ ಕೆಳಗಿನವರಿಲ್ಲ ಅನ್ನುವಂಥ ಒಂದು ದೊಡ್ಡ ಸಂದೇಶವನ್ನ ಬಸವಣ್ಣನವರು ನೀಡಿದರು.

ಇಡೀ ಪಾಶ್ಚಿಮಾತ್ಯ ರಾಷ್ಟ್ರಗಳು ಕತ್ತಲೆಯಲ್ಲಿದ್ದಾಗ ಪ್ರಜಾಪ್ರಭುತ್ವದ ಕನಸು ಇದ್ದಿದ್ದಿಲ್ಲ. ಸಂವಿಧಾನದ ಕನಸು ಇದ್ದಿದ್ದಿಲ್ಲಾ, ಪಾರ್ಲಿಮೆಂಟಿನ ಕನಸು ಇದ್ದಿದ್ದಿಲ್ಲಾ, ಮಹಿಳಾ ಶಿಕ್ಷಣದ ಕನಸು ಇದ್ದಿದ್ದಿಲ್ಲಾ. ೩೫ ಜನ ವಚನಕಾರ್ತಿಯರು ೧೨ನೇ ಶತಮಾನದಲ್ಲಿ ಸಿಗ್ತಾರೆ. ೧೨ನೇ ಶತಮಾನದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಇಂಥ ಲೇಖಕಿಯರು ಸಿಗುವುದಿಲ್ಲ. ನಿಮಗೆ ಇನ್ನೂ ಆಶ್ಚರ್ಯ ಅನಸ್ತದೆ. ಮಹಿಳೆಯರಿಗೆ ಶಿಕ್ಷಣ ಕೊಡಬಹುದು ಅನ್ನೋದನ್ನ ಲಂಡನ್ ಯೂನಿವರ್ಸಿಟಿ ನಿರ್ಧಾರ ಮಾಡಿದ್ದು ೧೮೭೫ರ ನಂತರ. ಅಲ್ಲಿಯ ವರೆಗೆ ಪ್ರಜಾಪ್ರಭುತ್ವವಾದಿ ಇಂಗ್ಲಂಡ್‌ನಲ್ಲಿ ಮಹಿಳೆಯರಿಗೆ ಶಿಕ್ಷಣ ಇದ್ದಿದ್ದಿಲ್ಲ. ನಮ್ಮ ಒಬ್ಬ ಮಹಿಳೆಯನ್ನ ಮೂರು ದಿವಸಗಳ ಹಿಂದೆ ಕಳಕೊಂಡೆವು. ಆ ಗರ್ಭಿಣಿ ಮಹಿಳೆಯ ಗರ್ಭಕೋಶದಲ್ಲಿ ಸಮಸ್ಯೆಯಾಗಿದ್ದರಿಂದ ಮಗುವನ್ನು ಉಳಿಸಿಕೊಳ್ಳಲು ಸಾಧ್ಯವಿದ್ದಿಲ್ಲ. ಆಪರೇಷನ್ ಮೂಲಕ ಆ ಮಹಿಳೆಯನ್ನು ಉಳಿಸಿಕೊಳ್ಳುವ ಸಾಧ್ಯತೆ ಇತ್ತು. ಆದರೆ ಅಲ್ಲಿನ ವೈದ್ಯರು ಆಪರೇಷನ್ ಮಾಡಲು ಮುಂದೆ ಬರುವುದಿಲ್ಲ. ನಮ್ಮದು ಕೆಥೊಲಿಕ್ ದೇಶ ಇದು, ಗರ್ಭಪಾತ ಮಾಡಲಿಕ್ಕೆ ಆಗೋದಿಲ್ಲ ಎಂದು ಡಬ್ಲಿನ್ ವೈದ್ಯರು ನಿರಾಕರಿಸಿದರು. ಆದರೆ ನೊಡಿ ೧೨ನೇ ಶತಮಾನದಲ್ಲೇ ಎಂಥ ವೈಚಾರಿಕ ಕ್ರಾಂತಿಯನ್ನ ನಮ್ಮ ಶರಣರು ಮಾಡಿದರು. ೩೫ ಜನ ವಚನಕಾರ್ತಿಯರು ಏಕಕಾಲಕ್ಕೆ ಸಿಗುವಂಥ ಇನ್ನೊಂದು ಘಟನೆ ಜಗತ್ತಿನ ಇತಿಹಾಸದಲ್ಲಿ ಇಲ್ಲ. ಒಂದೇ ತಲೆಮಾರಿನಲ್ಲಿ ಆಧುನಿಕ ಚಿಂತನೆಗಳನ್ನು ಒಳಗೊಂಡಂಥ ೩೫ ವಚನಕಾರ್ತಿಯರು ಬಂದರು. ಕಸಗುಡಿಸುವ ಸತ್ಯಕ್ಕ, ಕಳ್ಳನ ಹೆಂಡತಿ ಕಾಳವ್ವೆ... ನೋಡಿ ಉರಿಲಿಂಗ ಪೆದ್ದಿ ಒಬ್ಬ ಕಳ್ಳ ಇದ್ದ. ಶರಣ ಸಂಕುಲ ಸೇರಿ ಒಬ್ಬ ಮಹಾನ್ ತತ್ತ್ವಜ್ಞಾನಿ ಆಗ್ತಾನೆ. ಇದು ಏನು? ಚಳವಳಿಯ ಬಹಳ ಮುಖ್ಯ ಲಕ್ಷಣವಿದು.

ಬಸವಣ್ಣನವರು ಯಾವ ವಚನಗಳಲ್ಲಿ ಕೂಡ ತಮ್ಮ ಘನವ್ಯಕ್ತಿತ್ವದ ಬಗ್ಗೆ ಮಾತನಾಡಿಲ್ಲ. ಅವರು ಮಾತನಾಡಿದ್ದು ತಮ್ಮ ಮುಂದೆ ಇರುವ ಜೀವಗಳ ಬಗ್ಗೆ. ಕಸಗುಡಿಸುವ ಸತ್ಯಕ್ಕನ ಬಗ್ಗೆ, ಹುಲ್ಲು ಹೊರುವ ಸೋಮಣ್ಣನ ಬಗ್ಗೆ ಎಂಥಾ

ಮಾತುಗಳನ್ನ ಅವರು ಆಡಿದ್ದಾರೆ. ಯಾವ ರೀತಿಯಾದ ಚಿಂತನೆಯನ್ನ ಅವರು ಮಾಡಿದ್ದಾರೆ. ಬದಕನ್ನು ಅವರು ಹ್ಯಾಗೆ ಎದುರಿಸಿದ್ದಾರೆ ಎನ್ನುವುದರ ಕುರಿತು ನಾವು ಚಿಂತನೆ ಮಾಡಬೇಕಾಗಿದೆ. 'ಲಂಚವಂಚನಕ್ಕೆ ಕೈಯಾನದ ಭಾಷೆ' ಎಂದು ಕಸಗುಡಿಸುವ ದಲಿತ ಮಹಿಳೆ ಸತ್ಯಕ್ಕ ಹೇಳ್ತಾಳೆ. ಇದನ್ನ ಎಷ್ಟು ರಾಜಕಾರಣಿಗಳಿಗೆ ಹೇಳಲಿಕ್ಕೆ ಆಗ್ತದೆ? ಎಷ್ಟು ಜನ ಅಧಿಕರಿಗಳಿಗೆ ಹೇಳಲಿಕ್ಕಾಗ್ತದೆ. ಕಸಗುಡಿಸುವ ಹೆಣ್ಣುಮಗಳಿಗೆ ಅಂಥ ವ್ಯಕ್ತಿತ್ವ ನಿರ್ಮಾಣ ಆಗಲಿಕ್ಕೆ ಸಾಧ್ಯ ಆಗಬೇಕಾದರೆ ಆ ವಚನ ಚಳವಳಿ ಎಷ್ಟು ಅದ್ಭುತವಾಗಿತ್ತು. ಹುಲ್ಲು ಹೊರೆ ಹೊರುವ ಸೋಮಣ್ಣ ಹೇಳ್ತಾನೆ. 'ವ್ಯಾಧಿ ಬಂದರೆ ನರಳು, ಬೇನೆ ಬಂದಡೆ ಒರಲು, ಜೀವ ಹೋದಡೆ ಸಾಯಿ, ಇದಕ್ಕಾ ದೇವರ ಹಂಗೇಕೆ ಭಾಪು ಲದ್ದೆಯ ಸೋಮಾ' ಅಂತ ಹೇಳ್ತಾನೆ. ಎಂಥ ಆತ್ಮವಿಶ್ವಾಸ ಚಳವಳಿ ಮೂಡಿಸ್ತದೆ ನೋಡಿ. ನನ್ನ ಉದ್ದೇಶ ಏನೆಂದರೆ ಚಳವಳಿಯಲ್ಲಿ ಮಾನವ ಘನತೆಯ ವಿಕಾಸ ಆಗ್ತದೆ. ಚಳವಳಿಗಳು ಇಲ್ಲದಂಥ ಬದುಕು ನಿರರ್ಥಕವಾದ ಬದುಕು. ಬಸವಣ್ಣನವರ ನೇತೃತ್ವದಲ್ಲಿ ಚಳವಳಿ ಶಕ್ತಿಶಾಲಿಯಾಗಿ ಬೆಳಿತು. ಸಾಮಾಜಿಕ ಪರಿವರ್ತನೆಯಾಯ್ತು. ಆರ್ಥಿಕ ಪರಿವರ್ತನೆ ಆಯ್ತು. ಎಷ್ಟಾಯಿತಂದ್ರೆ 'ಕಲ್ಯಾಣದಲ್ಲಿ ಕೊಡುವವರುಂಟು, ಬೇಡುವವರಿಲ್ಲ' ಎಂದು ಬಸವಣ್ಣನವರು ಘೋಷಿಸಿದರು.

ಸುಭಿಕ್ಷೆಯ ಸಮಾಜ ಹ್ಯಾಂಗ ಸಾಧ್ಯ ಆಗಿರಬೇಕಂದ್ರೆ 'ವರ್ಕಿಂಗ್ ಕ್ಲಾಸ್ ಕ್ಯಾನ್ ಚೇಂಜ್ ದ ವರ್ಲ್ಡ್' (ದುಡಿಯುವ ವರ್ಗ ಜಗತ್ತನ್ನ ಬದಲಾಯಿಸಬಲ್ಲುದು) ಅನ್ನೊದನ್ನ ಬಸವಣ್ಣನವರು ತೋರಿಸಿಕೊಟ್ಟರು.

ನಿಮಗೆ ಒಂದು ಮಾತನ್ನ ಹೇಳಲಿಕ್ಕೆ ಇಷ್ಟಪಡ್ತಿನಿ. ಇವತ್ತು ಬಂಡವಾಳಶಾಹಿಗಳು ಮತ್ತು ಕಾರ್ಮಿಕರ ಮಧ್ಯೆ ಹೋರಾಟ ಇಲ್ಲ. ನಾನು ಕಳೆದ ತಿಂಗಳುಗಳಲ್ಲಿ ಐದು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಪ್ರವಾಸ ಮಾಡ್ತಾವಾಗ ನನಗ ಅನ್ಸಿದ್ದು ಏನೆಂದ್ರೆ, ಈಗ ಯುದ್ಧ ಆರಂಭವಾಗಿರೋದು ಬಂಡವಾಳ ಮತ್ತು ಶ್ರಮದ ಮಧ್ಯೆ. ನೇರವಾದ ಯುದ್ಧ ನಡದೀದೆ. ಇಂದು ಪ್ರತಿ ೭ ನಿಮಿಷಕ್ಕೆ ಒಂದು ದೊಡ್ಡ ಹಡಗು ವಿವಿಧ ಉತ್ಪನ್ನಗಳನ್ನು ತುಂಬಿಕೊಂಡು ಚೈನಾದಿಂದ ಅಮೆರಿಕಾಕ್ಕೆ ಬರ್ತಿದೆ. ಯಾಕಂದ್ರ ಅಷ್ಟು ಕಡಿಮೆ ಬೆಲೆಯಲ್ಲಿ ವಸ್ತುಗಳ ಉತ್ಪಾದನೆ ಮಾಡುವ ಶಕ್ತಿ ಅಮೆರಿಕಕೆ ಇಲ್ಲ. ಅಲ್ಲಿ ಇರುವವರೇ ೨೮ ಕೋಟಿ ಜನ. ಇವತ್ತು ಚೀನಕ್ಕೆ ಆ ಶಕ್ತಿ ಇದೆ. ಮಕ್ಕಳ ಆಟಿಗೆ ಸಾಮನುಗಳಿಂದ ಹಿಡಕೊಂಡು ವಿಮಾನದ ಸ್ಪೇರ್ ಪಾರ್ಟ್ಸ್ ವರೆಗೆ ಚೈನಾ ಕಳಸ್ತಾ ಇದೆ. ನೀವು ಆಸ್ಟ್ರೇಲಿಯಾದಲ್ಲಿ ನೋಡಿ, ಸಿಂಗಾಪುರದಲ್ಲಿ ನೋಡಿ, ನೀವು ನ್ಯೂಜಿಲೆಂಡ್‌ನಲಿ ನೋಡಿ, ಕೆನಡಾದಲ್ಲಿ ನೋಡಿ, ಅಮೆರಿಕಾದಲ್ಲಿ ನೋಡಿ. ಅಲ್ಲೆಲ್ಲ 'ಮೇಡ್ ಇನ್ ಚೈನಾ' ವಸ್ತುಗಳೇ ತುಂಬಿಕೊಂಡಿವೆ. ಇವತ್ತು ಚೈನೀಸ್ ಲೇಬರ್ ಅನ್ನೋದು ಇದೆಯಲ್ಲಾ. ಅಲ್ಲಿನ ನೂರು ಕೋಟಿ ಜನ ಯಾವರೀತಿ ದುಡೀತಾ

ಇದಾರೆ. ನಮಗೆ ಅಂಥ ದುಡಿಮೆ ಗೊತ್ತಿಲ್ಲ. ನೂರು ಕೋಟಿ ಅಲ್ಲಾ, ನೂರಾ ಇಪ್ಪತ್ತು ಕೋಟಿ ಇದೇವೆ. ಆದರೆ ಕಾಯಕದ ಮಹತ್ವ ನಮಗೆ ಗೊತ್ತಿಲ್ಲ. ಇವತ್ತು ಕಾಯಕದ ಸಂಸ್ಕೃತಿ ಚೈನಾದಲ್ಲಿದೆ. ಆ ದುಡಿಮೆಯ ಶಕ್ತಿಯಿಂದಲೇ ಅವರು ಅಮೆರಿಕಾವನ್ನ ನಡಗಸ್ತಾ ಇದಾರೆ. ಅವರೇನಾದರು ವಸ್ತುಗಳನ್ನು ಕಳುಹಿಸುವುದನ್ನು ಬಿಟ್ಟರೆ ಅಮೆರಿಕಾ ಬೆತ್ತಲೆ ಆಗಿ ಬಿಡ್ತದೆ. ಅಂಥ ಒಂದು ಪರಿಸ್ಥಿತಿಯನ್ನು ಅವರು ನಿರ್ಮಾಣ ಮಾಡಿದ್ದಾರೆ. ಕಾಯಕ ಸಂಸ್ಕೃತಿ. ಯಾವುದನ್ನ ನಮ್ಮ ಬಸವಣ್ಣನವರು, ಶರಣರು ಕಂಡು ಹಿಡದ್ರಲ್ಲಾ ಆ ಕಾಯಕ ಸಂಸ್ಕೃತಿಯ ಕ್ರಿಯಾತ್ಮಕವಾದ ರೂಪವನ್ನು ನೀವು ಅಲ್ಲಿ ಕಾಣ್ತೇರಿ. ಆದ್ದರಿಂದ ಒಂದು ದೇಶದ ಶಕ್ತಿ ಅನ್ನೋದು ಸಾಮೂಹಿಕವಾದಂಥ ಪ್ರಜ್ಞೆಯ ಮೂಲಕ, ಸಾಮೂಹಿಕ ವ್ಯಕ್ತಿತ್ವದ ಮೂಲಕ ನಿರ್ಮಾಣವಾಗುತ್ತದೆ.

'ಸೋಸಿಯಲ್ ಪರ್ಸ್ನಾಲಿಟಿ' ಅನ್ನೋದು ಮೊಟ್ಟ ಮೊದಲಬಾರಿಗೆ ಶರಣರಲ್ಲಿ ಕಾಣ್ತೇವೆ. ತದನಂತರ ಬಂದ ದಾಸರು ಸಮೂಹ ಚಳವಳಿ ಮಾಡಲಿಲ್ಲ. ಆದರೆ ಸಮೂಹ ಪ್ರಜ್ಞೆಯ ಚಳವಳಿಯನ್ನ ದಾಸರು ಮಾಡಿದರು. ಈ ಕಾರಣದಿಂದಲೇ ನಾವು ದಾಸ ಸಾಹಿತ್ಯವನ್ನ ಆತ್ಮೀಯವಾಗಿ ನೋಡಬೇಕಾಗುತ್ತದೆ. ಮಾನವ ಘನತೆಯನ್ನ ಕುರಿತು ನಮ್ಮ ದಾಸರು ಹಾಡಿದ್ದಾರೆ. ನಂತರ ಬಂದ ತತ್ತ್ವಪದಕಾರರು ಕೂಡ ಮಾನವನ ಘನತೆಯನ್ನು ಎತ್ತಿ ಹಿಡಿದರು. ತಾವು ಓದಬೇಕು 'ಗುರುದೇವ ರಾನಡೆ ಅವರ ಪಾಥ್ ವೇ ಟು ಗಾಡ್ ಇನ್ ಕನ್ನಡ ಲಿಟರೇಚರ್' ಪುಸ್ತಕವನ್ನು. ತಾವು ದಯವಿಟ್ಟು ಓದಬೇಕು. ೧೯ನೇ ಶತಮಾನದ ತತ್ತ್ವಪದಕಾರರು ಮನುಷ್ಯನ ಬಗ್ಗೆ ಯಾವರೀತಿ ಚಿಂತನೆ ಮಾಡಿದರು ಅನ್ನೋದು ಗೊತ್ತಾಗ್ತದೆ.

ಇನ್ನೊಂದು ಪುಸ್ತಕದಲ್ಲಿ ಓದಿದೆ. ಬೀದರಿನ ಒಬ್ಬ ಮುಸ್ಲಿಂ ತತ್ತ್ವಪದಕಾರ ಹೇಳ್ತಾನೆ. ... ನನಗೆ ಬಹಳ ಆಶ್ಚರ್ಯ ಅನಸ್ತು. ನಾವು ಎಕಾಲಾಜಿ ಬಗ್ಗೆ ಬಹಳ ಮಾತ್ನಾಡ್ತೇವೆ. ಅವನು ಹೇಳ್ತಾನೆ. ನಾವು ಸತ್ತರೆ ಈ ಭೂಮಿಯಲ್ಲಿ ಹುಗೀತಾರೆ, ಸುಡತಾರೆ. 'ಈ ಭೂಮಿ ಸತ್ತರೆ ಹುಗಿಯುವುದೆಲ್ಲಿ?'ಎಂದು ಆತ ಕೇಳ್ತಾನೆ. ಆದ್ದರಿಂದ ಡೋಂಟ್ ಟ್ರೈ ಟು ಕಿಲ್ ದ ಗ್ಲೋಬ್" ಅಂತ ಹೇಳ್ತಾನೆ. ಈ ಭೂಮಿಯನ್ನ ಕೊಲ್ಲಿಕ್ಕೆ ನೀವು ಹೋಗಬೇಡ್ರಿ, ಯಾಕಂದ್ರ ಇದನ್ನ ಹುಗೀಲಿಕ್ಕೆ ಜಾಗ ಇಲ್ಲ. ಇದು ಅವನ ಒಂದು ಪರಿಸರ ಪ್ರಜ್ಞೆ. ೧೯ನೇ ಶತಮಾನದ ತತ್ತ್ವ ಪದಕಾರ ಈತ. ಇದೇ ರೀತಿ ಬಹಳ ಜನ ಇದ್ದಾರೆ. ನೋಡಿ ೧೯ನೇ ಶತಮಾನದಲ್ಲಿ ಒಬ್ಬ ಸೂಫಿ ಬರ್ತಾನೆ. ಕನ್ನಡದ ಮೊದಲ ಸೂಫಿ ಕವಿ. ಬಹಳ ದೊಡ್ಡ ಚಳವಳಿಗಾರ. ಗುರು ಖಾದರಿ ಪೀರಾ ಅಂತ ಹೇಳಿ. ಅವನು ಎಷ್ಟು ಚನ್ನಾಗಿ ಹೇಳ್ತಾನೆ ಅಂದ್ರೆ, 'ಓ ಅಲ್ಲಾಕೆ ಬಂದೇ ತೊಗಲೆಲ್ಲಾ ಒಂದೇ' ಅಂತ ಹೇಳ್ತಾನೆ. ಒಂದೇ ಸಾಲು ಎಂಥ

ವೈಚಾರಿಕ ಶಕ್ತಿಯನ್ನು ಕೊಡ್ತದೆ ನೋಡಿ. ಈ ರೀತಿಯಾಗಿ ನಮ್ಮ ತತ್ತ್ವಪದಕಾರರು, ನಮ್ಮ ದಾಸರು, ನಮ್ಮ ಶರಣರು, ನಮ್ಮ ಸೂಫಿಗಳು ಬಹಳ ಅದ್ಭುತವಾದಂಥ ಚಿಂತನೆಯನ್ನ ಮಾಡಿದಾರೆ. ತದನಂತರ ಬಂಡಾಯ ಸಾಹಿತ್ಯ ಬರ್ತದೆ. ನೋಡಿ ಇದಕ್ಕೂ ಮೊದಲು ಬಂದ ನವೋದಯ ಕೂಡ ಒಂದು ಚಳವಳಿನೇ. ನವೋದಯ ಕವಿಗಳು ಮನುಷ್ಯನ ಒಳಗಿನ ಬ್ಯೂಟಿ ಆಫ್ ಲೈಫ್ ಅನ್ನ ಅಂದರೆ ಜೀವನ ಸೌಂದರ್ಯವನ್ನ ಕಂಡುಹಿಡಿಯಲಿಕ್ಕೆ ಹೋದರು. ನಮ್ಮ ನವ್ಯರು ಏನ್ ಮಾಡಿದ್ರು ಅಂದ್ರೆ, ಇದರ ಕೊಳಚೆ ಎಲ್ಲೆಲ್ಲಿದೆ? ನಾವು ಸ್ವಚ್ಛ ಆಗಲಿಕ್ಕೆ ಸ್ನಾನ ಮಾಡ್ತೇವು, ಆದರೆ ಕೊಳಚೆ ನೀರು ಎಲ್ಲೆಲ್ಲಿ ಹೋಗ್ತದೆ? ಏನಾಗ್ತಾ ಇದೆ ನಮ್ಮ ಸಮಾಜದಲ್ಲಿ? ಅನ್ನೋದನ್ನ ತೋರಿಸಿಕೊಟ್ಟರು. ಬಂಡಾಯದವರು ಅದಕ್ಕೆ ಕಾರಣಗಳನ್ನು ಹುಡುಕಿದರು. ದಲಿತರು; ನೋಡಿ ಬಸವಣ್ಣವರು, ಶರಣರು ಆದಮೇಲೆ ಸಾಹಿತ್ಯವನ್ನ ಚಳವಳಿಯನ್ನ ಏಕಕಾಲಕ್ಕೆ ತೆಗೆದುಕೊಂಡು ಹೋದವರೆಂದರೆ ದಲಿತರು. ನಾವು ನೆನಪಿಟ್ಕೊಬೇಕು. ದಲಿತ ಸಾಹಿತ್ಯ, ಚಳವಳಿಯ ಜೊತೆಗೇ ಇದೆ. ಬರಿ ಸಾಹಿತ್ಯಕ ಚಳವಳಿ ಅಲ್ಲ ಅವರದು. ಹೋರಾಟವೂ ಇದೆ, ಸಾಹಿತ್ಯವೂ ಇದೆ. ಮತ್ತೆ ೧೨ನೇ ಶತಮಾನ ೨೧ನೇ ಶತಮಾನದಲ್ಲಿ ದಲಿತ ಸಾಹಿತ್ಯ ಮತ್ತು ಚಳವಳಿಯ ಮೂಲಕ ಹೊರ ಬರುತ್ತಿದೆ.

ಇಂಥ ಒಂದು ಅನನ್ಯವಾದಂಥ ಪರಂಪರೆಯನ್ನ ಪಂಪನಿಂದ ಹಿಡಿದು, ಅದಕ್ಕೂ ಮೊದಲು ನೃಪತುಂಗ ಅಥವಾ ಶ್ರೀವಿಜಯನಿಂದ ಹಿಡಿದು ಇಲ್ಲಿಯ ದಲಿತ ಚಳವಳಿಯ ವರೆಗೆ ಅತ್ಯಂತ ಮಾನವೀಯವಾದಂಥ, ಅತ್ಯಂತ ಅಂತಃಕರಣದ ಇತಿಹಾಸವನ್ನು ಕನ್ನಡ ಚಳವಳಿಗಳು, ಕನ್ನಡ ಸಾಹಿತ್ಯ ಮತ್ತು ಕನ್ನಡ ಭಾಷೆ ಹೊಂದಿವೆ ಅಂಥ ಹೇಳಿ ನನ್ನ ಮಾತನ್ನು ಮುಗಿಸ್ತೇನೆ.

ಸರ್ವರಿಗೂ ಶರಣು ಶರಣಾರ್ಥಿ.

❖❖

('ಆಳ್ವಾಸ್ ನುಡಿಸಿರಿ –೨೦೧೨'ರ ವಿಚಾರಗೋಷ್ಠಿಯಲ್ಲಿ ಮಾಡಿದ ಭಾಷಣ.)

೨೦

❖

ಬಸವಾದಿ ಪ್ರಮಥರು ಕಟ್ಟಿದ ಸಮಾಜ ಎಂತಹದು?

ವರ್ಗಭೇದ, ವರ್ಣಭೇದ, ಲಿಂಗಭೇದ ಮತ್ತು ಅಸ್ಪೃಶ್ಯತೆ ಇಲ್ಲದ ಜಾತ್ಯತೀತ ಸಮಾಜವನ್ನು ಶರಣರು ಕಟ್ಟಬಯಸಿದ್ದರು. ಅದಕ್ಕಾಗಿ ಬಸವಣ್ಣನವರು 'ಶರಣಸಂಕುಲ' ವ್ಯವಸ್ಥೆ ತಂದರು. ಜಾತಿ ಸಂಕರವಾದ ಬಳಿಕ ಕುಲವನರಸುವರೆ? ಎಂದು ಪ್ರಶ್ನಿಸಿದರು. ಸಂಕುಲವೆಂದರೆ ಸರ್ವಸಮತ್ವದಿಂದ ಕೂಡಿದ ಸಮಾಜ. ೧೨ನೇ ಶತಮಾನದ ಶರಣರು ತಮ್ಮ ಜೀವಿತಾವಧಿಯಲ್ಲೇ ಇಂಥ ಮಾದರಿ ಸಮಾಜದ ನಿರ್ಮಾಣ ಮಾಡಿ ತೋರಿಸಿದರು.

ಶರಣ ಸಂಕುಲ ಹೀಗೆ ಜಗತ್ತಿನಲ್ಲೇ ವಿಶಿಷ್ಟವಾದ ಸಮಾಜವಾಯಿತು. ಎಲ್ಲ ಮೇಲುಕೀಳುಗಳನ್ನು ಅಳಿಸಿ ಹಾಕಿತು. ಎಲ್ಲ ನದಿಗಳು ಸಮುದ್ರ ಸೇರಿ ಒಂದಾಗುವ ಹಾಗೆ. ಸಮಾಜದ ವಿವಿಧ ಸ್ತರಗಳ ಕಾಯಕ ಜೀವಿಗಳು ಈ ಶರಣ ಸಂಕುಲದಲ್ಲಿ ಒಂದಾಗಿಹೋದರು.

ಈ ಶರಣ ಸಮಾಜದಲ್ಲಿ ಸರ್ವರಿಗೂ ಕಾಯಕದ ಮಹತ್ವ ತಿಳಿದಿತ್ತು. ಸಮಾಜವನ್ನು ದೇವರೆಂದು ತಿಳಿದು ಅದರ ಔನ್ನತ್ಯದ ಬಗ್ಗೆ ತನುಮನಧನದೊಂದಿಗೆ ಕಾಳಜಿ ವಹಿಸುವ ಮನೋಭಾವ ಬೆಳೆದಿತ್ತು. ಇಂಥ ಸಮಾಜದಲ್ಲಿ ಕೊಡುವವರಿದ್ದರು ಆದರೆ ಬೇಡುವವರಿರಲಿಲ್ಲ. ಕಾಯಕದಿಂದ ಬಂದದ್ದರಲ್ಲಿ ದಾಸೋಹಂಭಾವದಿಂದ ಶಿವನಿಧಿಗೆ ಅರ್ಪಿಸುವುದು ಸಾಮಾಜಿಕ ಮೌಲ್ಯವಾಗಿತ್ತು. ಸಾಮಾಜಿಕ ಭದ್ರತೆಯನ್ನು ಕಾಪಾಡುವುದು ಶಿವನಿಧಿಯ ಉದ್ದೇಶವಾಗಿತ್ತು. ಆಕಸ್ಮಿಕವಾಗಿ ಬಂದೆರಗುವ ಕಷ್ಟಗಳ ನಿವಾರಣೆಗಾಗಿ ಶರಣರು ಶಿವನಿಧಿಯನ್ನು ಬಳಸುತ್ತಿದ್ದರು. ಮತ್ತೆ ಕಾಯಕದಿಂದ ಪಡೆದದ್ದರಲ್ಲಿನ ಒಂದು ಭಾಗವನ್ನು ಶಿವನಿಧಿಗೆ ಅರ್ಪಿಸುತ್ತಿದ್ದರು. ಹೀಗೆ ಅವರು ಯಾವುದೇ ಸ್ವಾರ್ಥ ವ್ಯಕ್ತಿಗಳ ಹಂಗಿಲ್ಲದೆ ಸಾಮಾಜಿಕ ಪ್ರಜ್ಞೆಯೊಂದಿಗೆ ಬದುಕಿ ತೋರಿಸಿದರು. ಹೀಗೆ ಶರಣರು ಕಾಯಕದಿಂದ ಬಂದ ಹಣದಿಂದ ಬದುಕುವುದನ್ನು ಮತ್ತು ಸಾಮಾಜಿಕ ಸ್ವಾಸ್ಥ್ಯ ಕಾಪಾಡುವುದನ್ನು ಕಲಿಸಿದರು. ಸಮಾಜವನ್ನು

ಶಾಳಮಾಡುವ ಬಡ್ಡಿ ಹಣದಿಂದ ಬದುಕುವುದನ್ನು ವಿರೋಧಿಸಿದರು. ಇದು ಅವರ ಮಾದರಿ ಸಮಾಜ.

ಅನುಭವ ಮಂಟಪದ ಉದ್ದೇಶ

ಎಲ್ಲ ಕಾಯಕಜೀವಿಗಳು ತಮ್ಮ ಕಾಯಕ ಮುಗಿದ ನಂತರ ತಮ್ಮ ಜೀವನಾನುಭವದಿಂದ ಕಂಡುಕೊಂಡ ತಾತ್ತ್ವಿಕ ಚಿಂತನೆಗಳನ್ನು ಅನುಭವ ಮಂಟಪದಲ್ಲಿ ಹಂಚಿಕೊಳ್ಳುತ್ತಿದ್ದರು. ಕಾಯಕದ ಅನುಭವದಿಂದ ಅನುಭಾವ ಪಡೆಯುವುದು ಶರಣರ ವೈಶಿಷ್ಟ್ಯವಾಗಿದೆ. ಇದು ಮಕರಂದದಿಂದ ಜೇನುತುಪ್ಪ ಪಡೆದ ಹಾಗೆ. ಕಾಯಕಜೀವಿಗಳಾದ ಶರಣರು ತಮ್ಮ ಕಾಯಕದ ಅನುಭವದಿಂದಲೇ ತತ್ತ್ವಜ್ಞಾನಿಗಳಾದರು. ಈ ರೀತಿ ತತ್ತ್ವಜ್ಞಾನಿಯಾಗುವವರೇ ಅನುಭಾವಿಗಳು. ಕಾಯಕದ ಅನುಭವಿಗಳನ್ನು ಸರ್ವಸಮತ್ವ ಸಾರುವ ಲಿಂಗವಂತ ಧರ್ಮದ ಅನುಭಾವಿಗಳನ್ನಾಗಿ ರೂಪಿಸುವುದೇ ಅನುಭವ ಮಂಟಪದ ಉದ್ದೇಶವಾಗಿದೆ.

ಅನುಭವ ಮಂಟಪ ವಾಕ್ ಸ್ವಾತಂತ್ರ್ಯದ ಪ್ರತೀಕವಾಗಿದೆ. ಇದು ಪ್ರಜಾಪ್ರಭುತ್ವದ ಮೂಲಸೆಲೆಯಾಗಿದೆ. ೭೭೦ ಅಮರಗಣಂಗಳಿಂದ ಕೂಡಿದ್ದ ಈ ಅನುಭವ ಮಂಟಪ ಬಹುದೊಡ್ಡ ಸಮಾಜೋ ಧಾರ್ಮಿಕ ಸಂಸತ್ ಆಗಿತ್ತು. ಬಿಜ್ಜಳನ ಮನುಧರ್ಮ ಸಮಾಜಕ್ಕೆ ಪರ್ಯಾಯವಾದ ಬಸವಧರ್ಮ (ಲಿಂಗವಂತ ಧರ್ಮ) ಸಮಾಜದ ರೂಪುರೇಷೆಗಳನ್ನು ತಯಾರಿಸುವುದು ಈ ಅನುಭವ ಮಂಟಪದ ಉದ್ದೇಶವಾಗಿತ್ತು. ಈ ಅನುಭವ ಮಂಟಪದ ಅಮರಗಣಂಗಳು ಸರ್ವ ಸಮಾಜಗಳಿಂದ ಬಂದ ಕಾಯಕಜೀವಿಗಳಾಗಿದ್ದರು. ಹೀಗಾಗಿ ಅಸ್ಪೃಶ್ಯರೆಂದು ಮನುಧರ್ಮದವರಿಂದ ಕರೆಯಿಸಿಕೊಂಡವರಿಂದ ಹಿಡಿದು ವಿವಿಧ ಜಾತಿಮತಗಳ ಹಿನ್ನೆಲೆಯಿಂದ ಬಂದು ಶರಣಸಂಕುಲದಲ್ಲಿ ಒಂದಾದವರ ಪ್ರತಿನಿಧಿಗಳಾಗಿ ಈ ಅಮರಗಣಂಗಳು ಇದ್ದರು. ಈ ಅಮರಗಣಂಗಳಲ್ಲಿ ದಲಿತರಲ್ಲದೆ ಮಹಿಳೆಯರು ಕೂಡ ಇದ್ದದ್ದು ವಿಶಿಷ್ಟವಾಗಿದೆ.

ಶರಣರನ್ನು ವಚನಕಾರರನ್ನಾಗಿ ರೂಪಿಸಿದ ತಾಣವಿದು ಅನುಭವಮಂಟಪ. ಪ್ರತಿಯೊಬ್ಬ ವಚನಕಾರರ ವಚನಗಳಿಗೆ ಸಾಮೂಹಿಕ ಒಪ್ಪಿಗೆಯ ಮುದ್ರೆ ಬಿದ್ದದ್ದು ಇಲ್ಲಿಯೇ. ಹೀಗಾಗಿ ವಚನಗಳು ಅನುಭವದಿಂದ ಸೃಷ್ಟಿಯಾಗಿ ಅನುಭವ ಮಂಟಪದ ಅಮರಗಣಂಗಳ ಸಮ್ಮುಖದಲ್ಲಿ ಅನುಭಾವವಾಗಿ ಅರಳಿದ್ದೊಂದು ವಿಶೇಷ.

ಬಸವಾದಿ ಶರಣರ ಆರ್ಥಿಕ ಚಿಂತನೆ

ಕಾಯಕ, ಪ್ರಸಾದ ಮತ್ತು ದಾಸೋಹ ತತ್ತ್ವಗಳ ಮೇಲೆ ಶರಣರ ಆರ್ಥಿಕ ಚಿಂತನೆ ನಿಂತಿದೆ. ಕಾಯಕ ಮಾಡದೆ ಈ ಭೂಮಿಯ ಮೇಲೆ ಬದುಕುವ ಹಕ್ಕು ಯಾರಿಗೂ ಇಲ್ಲ ಎಂಬುದು ನಿಸರ್ಗ ತತ್ತ್ವವೇ ಆಗಿದೆ. ಸಕಲ ಪ್ರಾಣಿ ಪಕ್ಷಿಗಳು

ತಮ್ಮ ಆಹಾರವನ್ನು ತಾವೇ ಸಂಪಾದಿಸುತ್ತವೆ. ಆಹಾರ ಸಂಪಾದನಾ ಶಕ್ತಿಯನ್ನು ಕಳೆದುಕೊಂಡ ಮೇಲೆ ಅವು ಈ ಭೂಮಿಯ ಮೇಲೆ ಬದುಕಲಾರವು. ದುಡಿಯದೇ ಬದುಕವ ಜೀವಿಗಳು ಮಾನವ ಸಮಾಜದಲ್ಲಿ ಮಾತ್ರ ಕಂಡುಬರುತ್ತವೆ. ಬಲ ಪ್ರಯೋಗ ಮಾಡುತ್ತ ಬೇರೆಯವರ ದುಡಿಮೆಯ ಮೇಲೆ ಬದುಕುವವರು ಕಾಯಕ ತತ್ತ್ವಕ್ಕೆ ವಿರುದ್ಧವಾಗಿರುತ್ತಾರೆ.

'ಸಾಕ್ಷಾತ್ ಅಮರೇಶ್ವರ ಲಿಂಗವಾದರೂ ಕಾಯಕದೊಳಗು' ಎಂಬುದು ಶರಣರ ನಿಲವಾಗಿದೆ. ಕಾಯಕದಿಂದ ಬಂದುದನ್ನು ಶರಣರು ದೇವರು ಕೊಟ್ಟ ಪ್ರಸಾದವೆಂದು ಸ್ವೀಕರಿಸುತ್ತಾರೆ. ನಂತರ ಅದರಲ್ಲಿನ ಒಂದು ಭಾಗವನ್ನು ಜಂಗಮಲಿಂಗಕ್ಕೆ ಅಂದರೆ ಸಮಾಜವೆಂಬ ದೇವರಿಗೆ ದಾಸೋಹಂಭಾವದಿಂದ ಅರ್ಪಿಸುತ್ತಾರೆ.

ಕಾಯಕವು ಯೋಗ್ಯ ಉತ್ಪಾದನೆಯಾಗಿದೆ. ಪ್ರಸಾದವು ಯೋಗ್ಯರೀತಿಯಲ್ಲಿ ವಸ್ತುಗಳ ಬಳಕೆಯ ಕುರಿತು ಪ್ರಜ್ಞೆ ಮೂಡಿಸುತ್ತದೆ. ನಾವು ಪ್ರತಿಯೊಂದನ್ನೂ ಪ್ರಸಾದ ಪ್ರಜ್ಞೆಯಿಂದ ಉಪಯೋಗಿಸಿದಾಗ ಯಾವುದೂ ಹಾಳಾಗುವುದಿಲ್ಲ. ಆಹಾರ, ನೀರು, ನೈಸರ್ಗಿಕ ಸಂಪನ್ಮೂಲಗಳು ಮುಂತಾದ ವಸ್ತುಗಳ ಸದ್ಬಳಕೆಯಿಂದ ಮಾತ್ರ ಜಗತ್ತಿಗೆ ಅವುಗಳ ಕೊರತೆಯಾಗದಂತೆ ನೋಡಿಕೊಳ್ಳಲು ಸಾಧ್ಯ.

ಸದ್ಬಳಕೆಯಿಂದ ಉಳಿತಾಯ ಮಾಡಿದ ಎಲ್ಲವನ್ನೂ ದಾಸೋಹ ರೂಪದಲ್ಲಿ ಸಮಾಜಕ್ಕೆ ಅರ್ಪಿಸುವುದು ಯೋಗ್ಯ ವಿತರಣೆಯಾಗಿದೆ. ಈ ರೀತಿ ಯೋಗ್ಯ ಉತ್ಪಾದನೆ, ಸದ್ಬಳಕೆ ಮತ್ತು ಯೋಗ್ಯ ರೀತಿಯ ವಿತರಣಾ ವ್ಯವಸ್ಥೆ ಇದ್ದಾಗ. ಸಮಾಜದಲ್ಲಿ ಸುಖ ಶಾಂತಿ ನೆಲೆಸುವುದು ಸಹಜವಾಗಿದೆ.

ಬಸವಾದಿ ಶರಣರ ಧರ್ಮ ಪರಿಕಲ್ಪನೆ

ಬಸವಾದಿ ಶರಣರ ಧರ್ಮಕ್ಕೆ ಶರಣಧರ್ಮ, ಕಾಯಕಜೀವಿಗಳ ಧರ್ಮ, ವಚನಧರ್ಮ, ಲಿಂಗವಂತ ಧರ್ಮ, ಲಿಂಗಾಯತ ಧರ್ಮ ಮತ್ತು ಬಸವಧರ್ಮ ಎಂದು ಕರೆಯಬಹುದು. ಬಸವ ಧರ್ಮದಲ್ಲಿ ವರ್ಣಗಳಿಲ್ಲ, ಜಾತಿಗಳಿಲ್ಲ, ಹೆಣ್ಣು-ಗಂಡಿನ ಮಧ್ಯೆ ಅಸಮಾನತೆ ಇಲ್ಲ. ಅಸ್ಪೃಶ್ಯತೆ ಇಲ್ಲ ಮತ್ತು ಸಂಚಿತ, ಪ್ರಾರಬ್ಧ ಹಾಗೂ ಆಗಾಮಿ ಕರ್ಮಗಳಿಂದ ಕೂಡಿದ ಪುನರ್ಜನ್ಮವಿಲ್ಲ. ಯಜ್ಞಯಾಗಾದಿಗಳಿಲ್ಲ. ಬಸವಧರ್ಮದ ಆದರ್ಶದಲ್ಲಿ ಮೂಢನಂಬಿಕೆಗಳಿಗೆ ಅವಕಾಶವಿಲ್ಲ. ಬಸವಧರ್ಮದ ಸಮಾಜ ಶ್ರೀಮಂತವಾಗಿರುತ್ತದೆ. ಏಕೆಂದರೆ ಆ ಸಮಾಜದಲ್ಲಿ ಬಡವರಾಗಲೀ ಶ್ರೀಮಂತರಾಗಲೀ ಇರುವುದಿಲ್ಲ. ಕೇವಲ ನಿಜಮಾನವರು ಅಂದರೆ ಶರಣರು ಇರುತ್ತಾರೆ. ಬಸವಧರ್ಮವು ಶಾಖಾಹಾರವನ್ನು ಪ್ರತಿಪಾದಿಸುತ್ತದೆ. ಎಲ್ಲ ರೀತಿಯ ಹಿಂಸೆಯನ್ನು ವಿರೋಧಿಸುತ್ತದೆ.

ಅಷ್ಟಾವರಣ, ಷಟ್‌ಸ್ಥಲ ಮತ್ತು ಪಂಚಾಚಾರ

• ಗುರು, ಲಿಂಗ, ಜಂಗಮ, ಪಾದೋದಕ, ಪ್ರಸಾದ, ವಿಭೂತಿ, ರುದ್ರಾಕ್ಷಿ, ಮಂತ್ರ ಎಂಬ ಎಂಟು ಪ್ರಕಾರದ ಆವರಣಗಳಿಗೆ ಅಷ್ಟಾವರಣಗಳೆಂದು ಹೇಳುತ್ತಾರೆ. ಮಾನವರು ಐಹಿಕ ಜಗತ್ತಿನ ಮೋಹಕ್ಕೆ ಒಳಗಾಗದಂತೆ ಈ ಅಷ್ಟಾವರಣಗಳು ರಕ್ಷಿಸುತ್ತವೆ.

ಭಕ್ತನು ಇಷ್ಟಲಿಂಗದಲ್ಲಿ ನಂಬಿಕೆ ಇಟ್ಟು, ಧರ್ಮವಂತನಾಗಿ ಜೀವಿತಾವಧಿಯಲ್ಲೇ ಮುಕ್ತಿಯನ್ನು ಸಾಧಿಸಲು ಇರುವ ಆರು ಹಂತಗಳಿಗೆ ಷಟ್ಸ್ಥಲಗಳು ಎಂಗು ಹೆಸರು. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ ಮತ್ತು ಐಕ್ಯಸ್ಥಲಗಳೇ ಷಟ್ಸ್ಥಲಗಳು. ಮಾನವನ ವ್ಯಕ್ತಿತ್ವ ವಿಕಸನ ತತ್ತ್ವಗಳನ್ನು ಷಟ್‌ಸ್ಥಲಗಳು ಹೊಂದಿವೆ.

ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ ಎಂಬ ಐದು ಬಗೆಯ ಆಚಾರಗಳಿಗೆ ಪಂಚಾಚಾರಗಳೆಂದು ಕರೆಯುತ್ತಾರೆ. ಏಕದೇವೋಪಾಸಕರಾಗಿ ಇಷ್ಟಲಿಂಗದಲ್ಲಿ ಮಾತ್ರ ನಂಬಿಕೆ ಇಡುವುದು ಲಿಂಗಾಚಾರ. ಪರಹಿತ ಬಯಸುವುದು ಸದಾಚಾರ. ಜಾತಿಭೇದ ಮಾಡದಿರುವುದು ಶಿವಾಚಾರ. ಶಿವಭಕ್ತರ ನಿಂದೆಯನ್ನು ಸಹಿಸದಿರುವುದು ಗಣಾಚಾರ. ಶಿವಭಕ್ತರಲ್ಲಿ ಸೇವಾಭಾವದಿಂದ ಇರುವುದು ಭೃತ್ಯಾಚಾರ.

ಅಷ್ಟಾವರಣದಿಂದ ಐಹಿಕ ವಸ್ತುಗಳ ಮೋಹಕ್ಕೆ ಒಳಗಾಗದ ಮಾನವ, ಷಟ್‌ಸ್ಥಲದ ಮಾನಸಿಕ ವ್ಯಾಯಾಮದಿಂದ ವ್ಯಕ್ತಿತ್ವ ವಿಕಸನ ಹೊಂದುತ್ತಾನೆ. ನಂತರ ತಾನು ಸಾಧಿಸಿದ ಅರಿವಿನಿಂದ ಬಂದ ಪಂಚಾಚಾರದ ಮೂಲಕ ಸಕಲ ಜೀವಾತ್ಮರಿಗೆ ಲೇಸಾಗುವಂತೆ ಸಮಾಜ ಸೇವೆ ಮಾಡುತ್ತಾನೆ.

ಬಸವಾದಿಶರಣರು ಪ್ರತಿಪಾದಿಸಿದ ಜೀವನ ಮೌಲ್ಯಗಳು

ನುಡಿದಂತೆ ನಡೆಯುವುದು, ಕಾಯಕದಲ್ಲಿ ನಿರತರಾಗಿದ್ದುಕೊಂಡು ಬದುಕನ್ನು ಅರ್ಥಮಾಡಿಕೊಳ್ಳುವುದು. ಸಕಲಜೀವಾತ್ಮರಿಗೆ ಲೇಸನ್ನೇ ಬಯಸುವುದು. ತನುಮನಧನದೊಂದಿಗೆ ಸಮಾಜಸೇವೆ ಮಾಡುವುದು. ನೈತಿಕತೆಯನ್ನು ಕಾಪಾಡಿಕೊಳ್ಳುವುದು. ಸಮಾಧಾನಿಯಾಗಿರುವುದು, ವಿನಯವಂತರಾಗಿರುವುದು, ಪರರ ವಸ್ತುಗಳನ್ನು ಬಯಸದೆ ಇರುವುದು ಮುಂತಾದವು ಬಸವಾದಿ ಶರಣರು ಪ್ರತಿಪಾದಿಸಿದ ಜೀವನಮೌಲ್ಯಗಳಾಗಿವೆ.

❖❖

೨೧

❖

ವೃತ್ತಿಶೀಲತೆ ಮತ್ತು ಸೃಜನಶೀಲತೆ

ಇದೇ ಸೆಪ್ಟೆಂಬರ್ ೨೮ ವಿಜಯಕರ್ನಾಟಕದಲ್ಲಿ ಪ್ರಸನ್ನ ಅವರು ಪ್ರಸ್ತುತ ಕಾಲಂನಲ್ಲಿನ ಶೀಲವಿರದೆ ಸೃಜನಶೀಲತೆಯುಂಟೆ? ಎಂಬ ಅಂಕಣ ಬರಹ ಆಧುನಿಕ ಮಾನವರ ಮುಖಕ್ಕೆ ಹಿಡಿದ ಕನ್ನಡಿಯಾಗಿದೆ.

ಕಲಾವಿದರು, ಬುದ್ಧಿಜೀವಿಗಳು, ನರ್ತಕಿಯರು, ಸಾಹಿತಿಗಳು, ಸಿನಿಮಾ ತಾರೆಯರು, ಟಿವಿ ಸ್ಟಾರುಗಳು ಇತ್ಯಾದಿ ಸೃಜನಶೀಲ ವ್ಯಕ್ತಿಗಳ ನೆರವಿಗಿದೆ ಇಂದಿನ ಸಮಾಜ. ರೈತರು, ಶ್ರಮಜೀವಿಗಳು, ಸಹಜಪ್ರಕೃತಿ, ಪ್ರಾಣಿ ಪಕ್ಷಿಗಳು ಕಣ್ಮರೆಯಾಗುತ್ತಿವೆ. ಅವುಗಳ ಚಿತ್ರಗಳು, ಅವುಗಳ ಕಥೆಗಳು, ಸಿನಿಮಾ ನಾಟಕ ಸೀರಿಯಲ್ಲುಗಳು ವಿಜೃಂಭಿಸತೊಡಗಿವೆ ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ.

ಶಶಿಧರ ಹೆಮ್ಮಾಡಿ ಅವರು ಇತ್ತೀಚೆಗೆ ಫೇಸ್ ಬುಕ್ಕನಲ್ಲಿ ರಾಜಕಾರಣಿಗಳು ವೋಟಿನ ಆಸೆಗಾಗಿ ವಿವಿಧ ಜಾತಿ ಧರ್ಮಗಳವರನ್ನು ಓಲೈಸುವುದನ್ನು ಪ್ರಶ್ನಿಸಿದ್ದಾರೆ. ಕೆಲ ನಿರ್ದಿಷ್ಟ ಜಾತಿಯವರು ಸಂಘಟಿಸಿದ ಸಮಾರಂಭಗಳಿಗೆ ಹೋಗಿ ಸಮಾಜಕ್ಕೆ ನಿಮ್ಮ ಕೊಡುಗೆ ದೊಡ್ಡದು ಎಂದು ಹೇಳುತ್ತ ಚಪ್ಪಾಳೆ ಗಿಟ್ಟಿಸುತ್ತಾರೆ. ಆದರೆ ಮಂಗಳೂರು ಬೆಂಗಳೂರಿನಂಥ ನಗರಗಳನ್ನೇ ನಿರ್ಮಿಸುತ್ತಿರುವ ಕಟ್ಟಡ ಕಾರ್ಮಿಕರನ್ನು ಇವರಾರೂ ಹೊಗಳುವುದಿಲ್ಲ ಎಂಬ ಸತ್ಯವನ್ನು ಬಿಚ್ಚಿಟ್ಟಿದ್ದಾರೆ. ಹೀಗೆ ಅವರು ಜಾತಿಗಳನ್ನು ಮೀರಿದ ವರ್ಗಪ್ರಜ್ಞೆ ಮೂಡಿಸುತ್ತಾರೆ.

ಇಷ್ಟೊಂದು ಸ್ಪಷ್ಟವಾಗಿ ಏಳುತ್ತಿರುವ ಈ ಪ್ರಶ್ನೆಗಳಿಗೆ ಸರಿಯಾದ ಉತ್ತರ ಪಡೆಯುವುದರಲ್ಲೇ ಭಾರತದ ಭವಿಷ್ಯ ಅಡಗಿದೆ. ದುಡಿಯುವವರನ್ನು ಜಾತಿಯ ವಲಯಗಳಿಂದ ಹೊರತಂದು ಅವರನ್ನು ಒಂದು ವರ್ಗವಾಗಿಸಿ ಅವರ ವೃತ್ತಿಶೀಲತೆಯ ಮೂಲಕ ಹೊರಹೊಮ್ಮುವ ಸೃಜನಶೀಲತೆಯ ಕುರಿತು ಕಣ್ಣು ತೆರೆಯಿಸುವ ಮಾತುಗಳು ಇವು.

ಹುಲ್ಲು ಮಾರುತ್ತಿದ್ದ ಲದ್ದೆಯ ಸೋಮಣ್ಣ ಬಸವಣ್ಣನವರ ಸಮಕಾಲೀನ ಶರಣ. ಆವ ಕಾಯಕವಾದರೂ ಸ್ವಕಾಯಕವನ್ನಾಗಿಸುವ ಕುರಿತು ಆತ ತಿಳಿಸಿದ್ದಾನೆ.

ನಾವು ನಮ್ಮ ಕೆಲಸದಲ್ಲಿ ತಲ್ಲೀನರಾಗದೆ ಅನ್ಯರಾಗಿ ಉಳಿದಾಗ ವೃತ್ತಿಯು ಸೃಜನಶೀಲವಾಗದು. ನಮ್ಮ ಕಾಯಕದಲ್ಲಿ ನಾವು ಇಲ್ಲದೆ ಇರುವ ಅವಸ್ಥೆಗೆ ಏಲಿಯನೇಟಿಂಗ್ ಎಂದು ಮಾರ್ಕ್ಸ್ ಕರೆಯುತ್ತಾರೆ. ಈ ಹೊರಗಾಗುವಿಕೆಯಿಂದ ಮಾಡುವ ಕೆಲಸ ಎಂಬುದು ಕಾಯಕ ಆಗುವುದಿಲ್ಲ.

ಮೇಲಿನ ಇಬ್ಬರು ಗೆಳೆಯರು ಕಾಯಕದ ಕುರಿತು ಮಾತನಾಡುತ್ತಿದ್ದಾರೆ. ಈ ಕಾಯಕಜೀವಿಗಳು ವೃತ್ತಿಶೀಲರಾಗಿರುವುದರಿಂದ ಅವರು ಸೃಜನಶೀಲರೂ ಆಗಿದ್ದಾರೆ. ಸೃಜನಶೀಲತೆಯ ಮೂಲವಾದ ವೃತ್ತಿಶೀಲತೆಯನ್ನೇ ಮರೆಯುವುದು. ನಂತರ ಸೃಜನಶೀಲತೆಯನ್ನೇ ವಿಜೃಂಭಿಸುತ್ತ ದುಡಿಯುವ ವರ್ಗವನ್ನು ಕಡೆಗಣಿಸುವುದು. ತದನಂತರ ಸೃಜನಶೀಲತೆಯನ್ನು ವೃತ್ತಿಯಾಗಿಸಿಕೊಂಡವರ ಒಂದು ವರ್ಗವನ್ನೇ ಸೃಷ್ಟಿಸುವುದು. ಆ ಮೂಲಕ ಕಲೆಗಾಗಿ ಕಲೆ ಎಂಬ ಪ್ರತಿಪಾದನೆಯೊಂದಿಗೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ವೃತ್ತಿಶೀಲತೆಯನ್ನು ನಿರಾಕರಿಸಿ ದುಡಿಯುವ ವರ್ಗದ ಮಹತ್ವವನ್ನೇ ಕಡೆಗಣಿಸುವ ಮೂಲಕ ಅವರೆಲ್ಲ ಅಸಹಾಯಕರಾಗಿ ಬದುಕುವಂತೆ ಮಾಡುವ ಹುನ್ನಾರವನ್ನು ಪ್ರಸನ್ನ ಅವರು ಬಯಲಿಗೆಳೆದಿದ್ದಾರೆ. ಬಹುಶಃ ಕನ್ನಡದಲ್ಲಿ ಬಸವಣ್ಣನವರ ನಂತರ ಇಷ್ಟು ತೀಕ್ಷ್ಣವಾಗಿ ಈ ಷಡ್ಯಂತ್ರವನ್ನು ಗುರುತಿಸಿದವರೆಂದರೆ ಪ್ರಸನ್ನ ಅವರೇ ಇರಬೇಕು.

ವೇದಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ?
ಕವಿ, ಗಮಕಿ, ವಾದಿ, ವಾಗ್ಮಿಗಳು ಹಿರಿಯರೆ?
ನಟಿನಿ, ಬಾಣ, ವಿಲಾಸಿ, ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ?
ಹಿರಿಯತನವಾವುದೆಂದಡೆ ಗುಣಜ್ಞಾನ
ಆಚಾರಧರ್ಮ ಕೂಡಲಸಂಗನ ಶರಣರು ಸಾಧಿಸಿದ ಹಿರಿಯತನ.

ಎಂದು ಬಸವಣ್ಣನವರು ಪ್ರಶ್ನಿಸಿದ್ದಾರೆ.

ಸದಾ ಶೋಷಣೆಗೆ ಒಳಗಾಗುವ ದುಡಿಯುವ ವರ್ಗ ತನ್ನ ದುಡಿಮೆಯ ಮೂಲಕ ಈ ಭೂಮಿಯನ್ನು ಹೆಚ್ಚು ಹೆಚ್ಚು ಸುಂದರಗೊಳಿಸುವಲ್ಲಿ ತಲ್ಲೀನವಾಗಿದೆ. ಮಾನವರೆಲ್ಲ ಸಕಲ ಸೌಲಭ್ಯಗಳೊಂದಿಗೆ ಬದುಕುವಂಥ ವ್ಯವಸ್ಥೆ ಮಾಡುವಲ್ಲಿ ಕಾಯಕಜೀವಿಗಳ ಪಾತ್ರ ಹಿರಿದಾಗಿದೆ. ಆದರೆ ವೃತಿಶೀಲತೆಯಿಂದ ಪಡೆದುಕೊಂಡ ಅವರ ಸೃಜನಶೀಲತೆಗೆ ಮಾತ್ರ ಬೆಲೆ ಇಲ್ಲವಾಗಿದೆ. ದುಡಿಮೆಯ ಅನುಭವದಿಂದ ಪಡೆದ ಜ್ಞಾನವು ವೃತ್ತಿಶೀಲತೆಯನ್ನು ರೂಪಿಸುತ್ತದೆ. ಅದುವೆ ಸತತ ಕ್ರಿಯಾಶೀಲತೆಯಿಂದಾಗಿ ಸೃಜನಶೀಲವಾದಾಗಲೇ ಜಗತ್ತಿನ ಎಲ್ಲ ಉತ್ಪಾದನೆಗಳು ಗೋಚರಿಸತೊಡಗುತ್ತವೆ. ಜಗತ್ತಿನ ಎಲ್ಲ ಅದ್ಭುತಗಳು ದುಡಿಯುವ ವರ್ಗದ ಸೃಜನಶೀಲತೆಯ ಉತ್ಪನ್ನಗಳಾಗಿವೆ. ಮೈಸೂರು ಅರಮನೆಯಲ್ಲಿನ ದುಡಿಯುವ

ವರ್ಗದ ಸೃಜನಶೀಲತೆಯನ್ನು ಕಳೆದರೆ ಕಲ್ಲು ಮಣ್ಣು ಕಟ್ಟಿಗೆ ಇಟ್ಟಿಗೆ ಲೋಹಗಳು ಮಾತ್ರ ಉಳಿಯುತ್ತವೆ!

ಜ್ಞಾನವನ್ನು ಕ್ರಿಯೆಗೆ ಇಳಿಸುವವರಿಗಿಂತ ಜ್ಞಾನದ ಕುರಿತು ಮಾತನಾಡುವವರೇ ಈ ಸಮಾಜದಲ್ಲಿ ಸಕಲ ಸೌಲಭ್ಯಗಳನ್ನು ಪಡೆಯುತ್ತಾರೆ. ಸೂಕ್ಷ್ಮ ಮತಿಗಳಾದ ಬಸವಣ್ಣನವರು ಈ ಬೌದ್ಧಿಕ ಮತ್ತು ದೈಹಿಕ ತಾರತಮ್ಯವನ್ನು ಗಮನಿಸಿದರು. ಹೊಟ್ಟೆಪಾಡಿಗಾಗಿ ಬೀದಿಯಲ್ಲಿ ಅದ್ಭುತವಾಗಿ ನರ್ತಿಸುತ್ತ ಜನಮನವನ್ನು ಸೂರೆಗೊಳ್ಳುವ ನರ್ತಕಿ, ಬಾಣವನ್ನು ಪ್ರಯೋಗಿಸುವ ಗುರಿಕಾರ, ವಾಕ್ಚಾತುರ್ಯದಿಂದ ಜನರನ್ನು ನಗೆಗಡಲಲ್ಲಿ ಮುಳುಗಿಸುವ ಹಾಸ್ಯಗಾರ ಮತ್ತು ದೈಹಿಕ ಕಸರತ್ತಿನೊಂದಿಗೆ ಜಾಣ್ಮೆಯನ್ನು ಪ್ರದರ್ಶಿಸುತ್ತ ಬದುಕಿನ ಸಮತೋಲನ ತತ್ತ್ವವನ್ನು ಸಾರುವ ಡೊಂಬ ಅದು ಹೇಗೆ ಕಿರಿಯರಾಗುತ್ತಾರೆ ಎಂಬುದು ಬಸವಣ್ಣನವರ ಸವಾಲಾಗಿದೆ.

ವೇದಾಗಮಗಳನ್ನು ಓದಿದವರು ಅದು ಹೇಗೆ ದೊಡ್ಡವರಾಗುತ್ತಾರೆ? ಕವಿಗಳು, ಗಮಕಿಗಳು, ವೇದ, ಪುರಾಣ ಮತ್ತು ಮಹಾಕಾವ್ಯಗಳ ವ್ಯಾಖ್ಯಾನಕಾರರು ಮತ್ತು ಮಾತಿನ ಚಾತುರ್ಯದಿಂದಲೇ ಬದುಕುವ ವಾಕ್ಪಟುಗಳು ಅದು ಹೇಗೆ ದೊಡ್ಡವರಾಗುತ್ತಾರೆ? ಎಂಬುವು ಬಸವಣ್ಣನವರು ಸಮಾಜದ ಮುಂದೆ ಇಟ್ಟ ಪ್ರಶ್ನೆಗಳಾಗಿವೆ.

ಇಂಥ ಪ್ರಶ್ನೆಗಳಿಗೆ ಉತ್ತರ ಕೊಡುವ ಕಾಲ ಇದಾಗಿದೆ. ಜನಸಮುದಾಯವನ್ನು ಮರಳುಗೊಳಿಸುವ ಮಾತುಗಳನ್ನೇ ನಂಬಿ ಒಳ್ಳೆಯದಿನಗಳ ಭ್ರಮೆಯಲ್ಲಿ ಜೀವ ಹಿಡಿದುಕೊಂಡು ಕುಳಿತರೆ ನಮ್ಮ ವೃತ್ತಿಶೀಲತೆಯನ್ನು ಮತ್ತು ಆ ಮೂಲಕ ಹೊರಹೊಮ್ಮುವ ಸೃಜನಶೀಲತೆಯನ್ನು ಸಾಮ್ರಾಜ್ಯಶಾಹಿ ದೇಶಗಳ ಸುಲಿಗೆಯ ಸೃಜನಶೀಲತೆ ಕಾಲಕಸವಾಗಿಸುವ ದಿನಗಳು ದೂರವಿಲ್ಲ.

❖❖

೨೨

❖

ವಿಶ್ವದಲ್ಲೇ ವಿಶಿಷ್ಟ ಲಿಂಗವಂತ ಧರ್ಮ

೧೨ನೇ ಶತಮಾನದ ಶರಣರ ವಚನಗಳೆಲ್ಲ ಸೇರಿ ಲಿಂಗಾಯತರ 'ಗುರುವಚನ' ಎಂಬ ಧರ್ಮಗ್ರಂಥವಾಗಿದೆ. ಇದೊಂದು ವಿಶಿಷ್ಟ ಧರ್ಮಗ್ರಂಥ. ಜಗತ್ತಿನಲ್ಲಿ ಪ್ರಥಮ ಬಾರಿಗೆ ಕಂಡು ಬಂದ ಧರ್ಮಗ್ರಂಥವಿದು. ದೇವರನ್ನು ನಂಬುವ ಧರ್ಮಗಳಲ್ಲಿ ಎರಡು ಪ್ರಕಾರಗಳಿವೆ. ವೈದಿಕರ ಹಿಂದುಧರ್ಮ ಬಹುದೇವತೆಗಳನ್ನು ನಂಬುತ್ತದೆ. ವೇದಗಳು ಅಪೌರುಷೇಯ ಎಂದು ಹೇಳುತ್ತದೆ. ಭಗವದ್ಗೀತೆ ಕೃಷ್ಣ ಉವಾಚವಾಗಿದೆ ಎನ್ನುತ್ತದೆ. ಏಕದೇವೋಪಾಸನೆಯ ಧರ್ಮಗಳಾದ ಯಹೂದಿ, ಕ್ರೈಸ್ತ ಮತ್ತು ಇಸ್ಲಾಂ ಧರ್ಮಗ್ರಂಥಗಳು ಕೂಡ ಅಪೌರುಷೇಯವಾಗಿವೆ. ಆದರೆ ಲಿಂಗಾಯತ ಧರ್ಮಗ್ರಂಥ ಇವೆಲ್ಲವುಗಳಿಗಿಂತ ಭಿನ್ನವಾಗಿದೆ. ನುಡಿದಂತೆ ನಡೆದ ಶರಣರು ತಮ್ಮ ಅಂತಃಸಾಕ್ಷಿ ಎಂಬ ದೇವರಿಗೆ ಹೇಳಿದ ಮಾತುಗಳೇ ವಚನಗಳು.

ತಮ್ಮೊಳಗಿನ ದೇವರಿಗೆ ಕೊಟ್ಟ ಈ ವಚನ ಪಾಲನೆ ಮಾಡುವುದೇ ಶರಣರ ಗುರಿಯಾಗಿತ್ತು. ಭೌತಿಕ ಜೀವನದ ಅನುಭವ ಮತ್ತು ಅಭೌತಿಕ ಅನುಭಾವ ಅವರ ಬದುಕೆಂಬ ನಾಣ್ಯದ ಎರಡು ಮುಖಗಳಾಗಿದ್ದವು. 'ನಡೆ ನುಡಿ ಸಿದ್ಧಾಂತ'ದೊಂದಿಗೆ ಕಾಯಕದ ಅನುಭವದ ಮೂಲಕ ಅನುಭಾವದ ಮಟ್ಟಕ್ಕೇರುವುದು ಅವರ ಜೀವನವಿಧಾನವಾಗಿತ್ತು. ಅವರು ಸಂಸಾರದಲ್ಲಿದ್ದುಕೊಂಡೇ ಸದ್ಗತಿ ಕಂಡವರು. 'ಎಲ್ಲವು ನನ್ನದು ಎನ್ನುವಾತನೇ ಭವಿ' ಮತ್ತು 'ಎಲ್ಲವು ನಮ್ಮದು ಎನ್ನುವಾತನೇ ಭಕ್ತ' ಎಂಬುದನ್ನು ವಸ್ತುಮೋಹದಿಂದ ಹೊರಬಂದು ಬದುಕಿ ತೋರಿಸಿದ ಶ್ರೇಯಸ್ಸು ಶರಣರಿಗೆ ಸಲ್ಲುತ್ತದೆ. ಇಡೀ ವಿಶ್ವವನ್ನೇ ಒಳಗೊಂಡ ಶೂನ್ಯದೇವನು ಸಕಲ ಜೀವಾತ್ಮರಲ್ಲಿ ಇದ್ದಾನೆಂಬುದನ್ನು ಪ್ರತಿಪಾದಿಸಿದವರು ಶರಣರು. ಸರ್ವಸಮತ್ವದಿಂದಿರುವುದೇ ಅವರ ಭಕ್ತಿಯಾಗಿತ್ತು.

ಬಯಲೆಂಬ ಚೈತನ್ಯ ವಸ್ತುರೂಪ ತಳೆದು ಕಣ್ಣಿಗೆ ಕಾಣುತ್ತ, ಕಾಣುತ್ತ ಒಂದು ದಿನ ಶೂನ್ಯದಲ್ಲಿ ಕರಗಿ ಹೋಗಿ ಮತ್ತೆ ಚೈತನ್ನವನ್ನೇ ಸೇರುವುದು. ಹೀಗೆ ಚೈತನ್ಯವು ಕಣ್ಣಿಗೆ ಕಾಣುವುದರ ಮೂಲಕ ವಸ್ತುವಾದಾಗ ವಿಶ್ವದ ಸೃಷ್ಟಿಯಾಯಿತು. ಅದು ಮತ್ತೆ

ಅಂತಿಮವಾಗಿ ಚೈತನ್ಯದ ಸ್ಥಿತಿಗೆ ಮರಳುವಾಗ ವಿಶ್ವವೆಲ್ಲ ಬಯಲಾಗುವುದು. ಈ ಸೃಷ್ಟಿ ಮತ್ತು ಇದರ ಲಯದ ಮಧ್ಯೆ ಇರುವ ವಸ್ತುಸ್ಥಿತಿಯ ಕುರಿತು ಬಸವಾದಿ ಶರಣರು ಗಾಢವಾಗಿ ಚಿಂತನೆ ಮಾಡಿದರು. ಈ ಸೃಷ್ಟಿ ಮತ್ತು ಲಯದಲ್ಲಿ ಎಲ್ಲರೂ ಒಂದೇ ಆಗಿರುವಾಗ 'ಸ್ಥಿತಿ'ಯಲ್ಲಿ ಏಕೆ ಜಾತಿಭೇದ, ಕುಲಭೇದ, ವರ್ಣಭೇದ, ವರ್ಗಭೇದ, ಲಿಂಗಭೇದ ಎಂದು ಪ್ರಶ್ನಿಸಿದರು. ಭೇದತತ್ತ್ವವನ್ನು ಯಾವುದೇ ದಾಕ್ಷಿಣ್ಯವಿಲ್ಲದೆ ಖಂಡಿಸಿದರು. ಇಂಥ ಭೇದಲೋಕವನ್ನು ನಿರ್ದಾಕ್ಷಿಣ್ಯವಾಗಿ ವಿರೋಧಿಸುವುದಾಗಿ ಬಸವಣ್ಣನವರು ಹೇಳಿದರು. ಮಾನವಕುಲದ ಒಳಿತಿಗಾಗಿ ಅವರು ಕೆಟ್ಟದ್ದರ ವಿರುದ್ಧ ಹೋರಾಟ ಮಾಡಿದರು. ಯಥಾಸ್ಥಿತಿವಾದವನ್ನು ಸಾರುವ ಪಟ್ಟಭದ್ರ ಹಿತಾಶಕ್ತಿಗಳಾದ ಮನುವಾದಿಗಳನ್ನು ಎದುರು ಹಾಕಿಕೊಂಡು ಹೋರಾಡಿದರು. ಹರಳಯ್ಯ ಮಧುವರಸರ ಮಕ್ಕಳ ಮದುವೆಯ ನೆಪದಲ್ಲಿ ಮನುವಾದಿಗಳು ಅನೇಕ ಶರಣರ ಕೊಲೆ ಮಾಡಿ ಕಲ್ಯಾಣದ ಶರಣಸಂಕುಲ ವ್ಯವಸ್ಥೆಯನ್ನು ಹಾಳುಮಾಡಿದರು. ಈಗ ಮತ್ತೆ ಆ ಶರಣರ ಆಶಯಗಳನ್ನು ಈಡೇರಿಸುವ ಕಾಲ ಬಂದಿದೆ ಎಂಬುದನ್ನು ಲಿಂಗವಂತರು ಮತ್ತು ಬಸವತತ್ತ್ವನಿಷ್ಠರು ಅರಿತುಕೊಳ್ಳಬೇಕಿದೆ.

ಮನುವಾದಿಗಳು ತಮ್ಮ ಪೂರ್ವಜರು ಮಾಡಿದ ತಪ್ಪನ್ನು ಮುಂದುವರಿಸದೆ, ಬಸವತತ್ತ್ವವನ್ನು ಅರಿಯುವುದರ ಮೂಲಕ ಮೇಲ್ಜಾತಿಯ ಅಹಂಕಾರವನ್ನು ತೊರೆದು ಎಲ್ಲರೊಡನೆ ಸಮಭಾವದೊಂದಿಗೆ ಬದುಕಬೇಕು. ಮನುವಾದಿಗಳು ಕೂಡ ನಿಜಮಾನವರಾಗಲು ಬಸವತತ್ತ್ವ ಅತ್ಯುತ್ತಮ ಮಾರ್ಗವಾಗಿದೆ. ೧೨ನೇ ಶತಮಾನದಲ್ಲೇ ಮೇಲ್ಜಾತಿ ಮೇಲ್ವರ್ಗದ ಅನೇಕರು ಪರಿವರ್ತನೆಯನ್ನು ಬಯಸಿ, ಶರಣ ಸಂಕುಲ ಸೇರಿವುದರ ಮೂಲಕ ಲಿಂಗಾಯತ ಧರ್ಮದ ಮಹತ್ವವನ್ನು ತೋರಿಸಿಕೊಟ್ಟಿದ್ದಾರೆ. ತುಳಿತಕ್ಕೊಳಗಾದವರ ಪರವಾಗಿ ಹೋರಾಡಿದ ಬುದ್ಧ, ಜೀಸಸ್, ಪೈಗಂಬರ, ಬಸವಣ್ಣ, ಕಾರ್ಲ್ ಮಾರ್ಕ್ಸ್ ಮುಂತಾದವರು ಮೇಲ್ ಸ್ತರದ ಬದುಕಿನಿಂದ ಬಂದವರೇ ಆಗಿದ್ದಾರೆ ಎಂಬುದು ಬಹಳ ಮಹತ್ವದ ವಿಚಾರವಾಗಿದೆ. ಇವರಿಗೆಲ್ಲ ತಮ್ಮ ಅಂತಸ್ತಿಗಿಂತ ಜೀವಕಾರುಣ್ಯವೇ ಮುಖ್ಯವಾಗಿತ್ತು. ಅಂತೆಯೆ ಇವರೆಲ್ಲ ಅಪಮಾನಕ್ಕೊಳಗಾದವರ ಪರವಾಗಿ ನಿಂತು ಅವರ ಸುಂದರ ಬದುಕಿಗಾಗಿ ಹೋರಾಡಿದರು ಎಂಬುದನ್ನು ಮರೆಯಬಾರದು.

ಬಸವ ತತ್ತ್ವದ ಪ್ರಕಾರ ಬದುಕುವುದರ ಮೂಲಕ ಲಿಂಗವಂತರು ಅನುಪಮವಾದ ತಮ್ಮ ಧರ್ಮ ರಕ್ಷಣೆ ಮಾಡುವುದು ಅವಶ್ಯವಾಗಿದೆ. ಲಿಂಗಾಯತ ಧರ್ಮ ನಿರ್ಜಾತಿ ಧರ್ಮವಾಗಿರುವುದರಿಂದ ಜಾತಿ ಉಪಜಾತಿ ಭ್ರಮೆಯಿಂದ ಹೊರಬರುವುದು ಅವಶ್ಯವಾಗಿದೆ. ಶರಣರ ಹಾಗೆ ನಿರ್ಜಾತಿ ವಿವಾಹಗಳನ್ನು ಲಿಂಗವಂತರು ನಡೆಸಿಕೊಡುವುದರ ಮೂಲಕ ಜಾತಿ ವಿನಾಶಗೊಳಿಸುವುದರ ಕಡೆಗೆ ಗಮನ ಹರಿಸುವುದು ಕೂಡ ಧರ್ಮ ಪಾಲನೆಯ ಅಂಶವಾಗಿದೆ.

ಜಾತಿ, ಉಪಜಾತಿ ಭ್ರಮೆಗಳಿಂದ ಹೊರಬಂದು, ತಾವು ಜಾತಿಗಳಿಲ್ಲದ ಬಸವಧರ್ಮದವರೆಂದು ಲಿಂಗಾಯತರು ಅರಿತುಕೊಳ್ಳುವಂತೆ ಮಾಡಬೇಕೆನ್ನುವುದು ಕಾಲದ ಕರೆಯಾಗಿದೆ. ಬಸವ ತತ್ತ್ವದವರೆಂದು ಹೇಳಿಕೊಳ್ಳುವ ವಿರಕ್ತಮಠಗಳ ಸ್ವಾಮಿಗಳು ಒಂದುಗೂಡಿ ಈ ಐತಿಹಾಸಿಕ ಜವಾಬ್ದಾರಿಯನ್ನು ನಿರ್ವಹಿಸದಿದ್ದರೆ ಬಸವದ್ರೋಹಿಗಳಾಗುವುದರಲ್ಲಿ ಸಂಶಯವಿಲ್ಲ.

ಬಸವಾದಿ ಶರಣರು ರಾಹುಕಾಲ, ಗುಳಿಕಕಾಲ, ಶುಭಗಳಿಗೆ, ಅಶುಭಗಳಿಗೆ, ಶನಿವಾರ ಶನಿ, ಶುಕ್ರವಾರ ಲಾಭ ಎಂಬ ಮೂಢನಂಬಿಕೆಗಳನ್ನು ಸಾರುವ ಪಂಚಾಂಗವನ್ನು ವಿರೋಧಿಸಿದರು. ಮಂತ್ರ, ತಂತ್ರ, ತಾಯಿತ, ವಾಸ್ತು, ವಾರ, ತಿಥಿ, ನಕ್ಷತ್ರಗಳಿಗೂ ನಮ್ಮ ಬದುಕಿಗೂ ಯಾವುದೇ ಸಂಬಂಧ ಇಲ್ಲವೆಂದು ೮೫೦ ವರ್ಷಗಳ ಹಿಂದೆಯೆ ಶರಣರು ಸಾರಿದರು ಎಂಬುದನ್ನು ಭಕ್ತರಿಗೆ ತಿಳಿಸುವುದು ಸ್ವಾಮಿಗಳ ಆದ್ಯ ಕರ್ತವ್ಯವಾಗಿದೆ.

ಬಸವಧರ್ಮವಾದ ಲಿಂಗಾಯತ ಧರ್ಮದಲ್ಲಿ ಇಲ್ಲದ ಗುಡಿ ಗುಂಡಾರಗಳನ್ನು ಭಕ್ತರು ಸುತ್ತುವುದನ್ನು ತಪ್ಪಿಸಬೇಕು. ಯಾವ ಖರ್ಚೂ ಇಲ್ಲದ ಇಷ್ಟಲಿಂಗ ಪೂಜೆಯನ್ನು ಮಾತ್ರ ಲಿಂಗಾಯತರು ಮಾಡಬೇಕು. ಕಾಯಕ ಪ್ರಸಾದ ಮತ್ತು ದಾಸೋಹ ಪ್ರಜ್ಞೆಯೊಂದಿಗೆ ಸಮಾಜದಲ್ಲಿ ಮೇಲು ಕೀಳು ಭಾವ ಬರದಂತೆ ನೋಡಿಕೊಳ್ಳಬೇಕು. ದಯಾ ಸಂಸ್ಕೃತಿಯ ಲಿಂಗಾಯತರು, ಬಲಿ ಸಂಸ್ಕೃತಿಯ ಪ್ರತೀಕವಾಗಿರುವ ತೆಂಗಿನ ಕಾಯಿಗಳನ್ನು ಒಡೆಯುವುದನ್ನು ನಿಲ್ಲಿಸಬೇಕು. ತೆಂಗಿನ ಕಾಯಿ ಒಡೆಯಬೇಕೆಂದು ಯಾವ ವಚನದಲ್ಲಿಯೂ ಹೇಳಿಲ್ಲ. ನರಬಲಿ, ಕುರಿಬಲಿ, ಕೋಳಿಬಲಿ, ಬೂದುಗುಂಬಳ ಬಲಿ, ಅಮಾವಾಸ್ಯೆಯಂದು ವಾಹನಗಳ ಚಕ್ರಗಳಿಗೆ ಲಿಂಬೆಹಣ್ಣಿನ ಬಲಿಯಂತೆ ತೆಂಗಿನಕಾಯಿ ಒಡೆಯುವುದು ಕೂಡ ಬಲಿ ಸಂಪ್ರದಾಯಕ್ಕೆ ಸೇರಿದೆ. ತೆಂಗಿನಕಾಯಿ, ಲಿಂಬಿಕಾಯಿ ಮತ್ತು ಬೂದುಗುಂಬಳ ಒಡೆಯುವುದು ಅಡುಗೆ ಮನೆಯಲ್ಲಿ ಮಾತ್ರ. ಅವೆಲ್ಲ ಪ್ರಸಾದಕ್ಕೆ ಸಂಬಂಧಿಸಿದವುಗಾಳಗಿವೆ. ಲಿಂಗವಂತರು ಪ್ರಸಾದವನ್ನು ಹಾಳುಮಾಡಬಾರದು.

'ಪಾದಪೂಜೆ ಎಂದರೆ ಜ್ಞಾನಪೂಜೆ' ಮತ್ತು 'ಪಾದೋದಕ ಎಂದರೆ ಲಿಂಗಕ್ಕೆ ಮಜ್ಜನಕ್ಕೆರೆದುದು' ಎಂಬ ಸತ್ಯವನ್ನು ವಿರಕ್ತ ಸ್ವಾಮಿಗಳು ತಿಳಿಹೇಳಬೇಕು. (ಉಳಿದವರು ಅವರವರ ಧರ್ಮ ಹೇಳಿದಂತೆ ಮಾಡಲಿ. ಲಿಂಗಾಯತರು ತಮ್ಮ ಧರ್ಮ ಪಾಲಿಸಲಿ ಎಂಬುದನ್ನು ಸಾರುವುದು ಅವಶ್ಯವಾಗಿದೆ.) 'ಎಲ್ಲರೂ ಶಿವಸ್ವರೂಪಿಗಳು ಎಂದು ಸಾರುವ ಧರ್ಮ ನಮ್ಮದು' ಎಂಬುದನ್ನು ಪ್ರಚಾರ ಮಾಡಬೇಕು. ಬಾಗಿದ ಶಿರ ಮತ್ತು ಮುಗಿದ ಕೈಗಳೊಂದಿಗೆ ಶರಣು ಶರಣಾರ್ಥಿ ಎಂದು ಹೇಳುವುದು ಲಿಂಗಾಯತ ಧರ್ಮಸಂಸ್ಕಾರವಾಗಿದೆ. ಈ ಸತ್ಯವನ್ನು ಹೇಳುವುದರ ಮೂಲಕ, ಶಿವಸ್ವರೂಪಿಗಳಾದ

ಭಕ್ತರಿಂದ ಕಾಲು ಬೀಳಿಸಿಕೊಳ್ಳುವುದನ್ನು ವಿರಕ್ತ ಸ್ವಾಮಿಗಳು ನಿಲ್ಲಿಸಬೇಕು. ಹೀಗೆ ವಿರಕ್ತ ಸ್ವಾಮಿಗಳು ನೀತಿಜಂಗಮರಾಗಿ ಕಾಯಕ, ಪ್ರಸಾದ ಮತ್ತು ದಾಸೋಹ ತತ್ತ್ವದೊಂದಿಗೆ ಲಿಂಗಾಯತರಿಗೆ ಧರ್ಮದ ಮಹತ್ವವನ್ನು ತಿಳಿಹೇಳದಿದ್ದರೆ ಮುಂದಿನ ೫೦ ವರ್ಷಗಳಲ್ಲಿ ಈ ಅನುಪಮ ಧರ್ಮ ಮನುವಾದಿಗಳ ಧರ್ಮದಲ್ಲಿ ಲೀನವಾಗಿ ಹೋಗುವುದರಲ್ಲಿ ಸಂಶಯವಿಲ್ಲ.

ಸಹಸ್ರ ಸಹಸ್ರ ಶರಣರ ತ್ಯಾಗ ಬಲಿದಾನಗಳೊಂದಿಗೆ ಈ ಧರ್ಮ ಹುಟ್ಟಿ ಒಂಬತ್ತು ಶತಮಾನಗಳಾದರೂ ಬಹುಪಾಲು ಲಿಂಗಾಯತರಿಗೆ, 'ತಮ್ಮದು ಸ್ವತಂತ್ರ ಧರ್ಮ' ಎಂಬುದರ ಕಡೆಗೆ ಲಕ್ಷ್ಯವಿಲ್ಲದಿರುವುದು ವಿಷಾದನೀಯವಾಗಿದೆ. 'ಲಿಂಗಾಯತ ಧರ್ಮ ಸ್ವತಂತ್ರ ಧರ್ಮ' ಎಂಬುದನ್ನು ಸಾರಿ ಸಾರಿ ಹೇಳಬೇಕಿದೆ. ಆ ಮೂಲಕ ದೇಶದ ಏಕತೆ ಮತ್ತು ಮಾನವಕುಲದ ಏಳ್ಗೆಯನ್ನು ಸಾಧಿಸಬೇಕಿದೆ.

❖❖

೨೩

❖

ಬಸವಣ್ಣನವರ ಪರ್ಯಾಯ ಸಮಾಜ

"ಭೇರುಂಡ ಪಕ್ಷಿಗೆ ದೇಹವೊಂದೇ
ತಲೆ ಎರಡರ ನಡುವೆ ಕನ್ನವಡ ಕಟ್ಟಿ
ಒಂದು ತಲೆಯಲಿ ಹಾಲನೆರೆದು
ಒಂದು ತಲೆಯಲಿ ವಿಷವನೆರೆದಡೆ
ದೇಹವೊಂದೇ ವಿಷ ಬಿಡುವುದೆ ಅಯ್ಯಾ?
ಲಿಂಗದಲಿ ಪೂಜೆಯ ಮಾಡಿ ಜಂಗಮಲ್ಲಿ
ನಿಂದೆಯ ಮಾಡಿದಡೆ
ನಾ ಬೆಂದೆ ಕಾಣಾ ಕೂಡಲಸಂಗಮದೇವಾ."

ಬಸವಣ್ಣನವರ ಆಧ್ಯಾತ್ಮಿಕ (ಚೈತನ್ಯಾತ್ಮಕ) ಭೌತಿಕವಾದದ ಮಹತ್ವವನ್ನು ಸಾರುವ ವಚನವಿದು. ಗಂಡಭೇರುಂಡ ಪಕ್ಷಿಯ ಕಾವ್ಯಪ್ರತಿಮೆ ಮೂಲಕ ಅವರು ಆಧ್ಯಾತ್ಮಿಕ ಜಗತ್ತು ಮತ್ತು ಭೌತಿಕ ಜಗತ್ತಿನ ಮೂಲ ಒಂದೇ ಎಂದು ತೋರಿಸಿಕೊಟ್ಟಿದ್ದಾರೆ. ಭೇರುಂಡನ ಎರಡೂ ತಲೆಗಳ ಮಧ್ಯೆ ಕನ್ನವಡ (ಪರದೆ) ಕಟ್ಟಿ, ಒಂದು ಕಡೆ ಹಾಲು ಮತ್ತು ಇನ್ನೊಂದು ಕಡೆ ವಿಷ ಎರೆದರೆ ಅವೆರಡೂ ಒಂದೇ ಜಠರದಲ್ಲಿ ಕೂಡಿ ಎಲ್ಲವೂ ವಿಷವಾಗಿ ಪಕ್ಷಿ ಸಾಯುವುದರಲ್ಲಿ ಸಂಶಯವಿಲ್ಲ. ಅದೇ ರೀತಿ ಇಷ್ಟಲಿಂಗ ಪೂಜಿಸಿ ಜಂಗಮ (ಸಮಾಜ) ಲಿಂಗವನ್ನು ಕಡೆಗಣಿಸಿದರೆ, ಅಂದರೆ ಸಾಮಾಜಿಕ ಪ್ರಜ್ಞೆ ಇಲ್ಲದೆ ಬರಿ ಆಧ್ಯಾತ್ಮಿಕವಾಗಿ ಬದುಕಿದರೆ ಪ್ರಯೋಜನವಿಲ್ಲ ಎಂದು ಸೂಚಿಸಿದ್ದಾರೆ.

ವಿಜ್ಞಾನ ಮತ್ತು ಅಧ್ಯಾತ್ಮಗಳನ್ನು ಒಂದುಗೂಡಿಸುವ ಯತ್ನ ೨೧ನೇ ಶತಮಾನದಲ್ಲಿ ಬಿರುಸಿನಿಂದ ಪ್ರಾರಂಭವಾಗಿದೆ. ಹೀಗಾಗದಿದ್ದರೆ ಮಾನವಕುಲಕ್ಕೆ ಭವಿಷ್ಯವಿಲ್ಲ ಎಂಬ ತೀರ್ಮಾನಕ್ಕೆ ಜೀವಕಾರುಣ್ಯದಿಂದ ಕೂಡಿದ ವಿಜ್ಞಾನಿಗಳು ಮತ್ತು ತತ್ತ್ವಜ್ಞಾನಿಗಳು ವಿಶ್ವದ ಅನೇಕ ಕಡೆಗಳಲ್ಲಿ ಯತ್ನಿಸುತ್ತಿದ್ದಾರೆ. ಆದರೆ ಬಸವಣ್ಣನವರು ೮೫೦ ವರ್ಷಗಳ ಹಿಂದೆಯೆ ಆಧ್ಯಾತ್ಮಿಕ ಜಗತ್ತಿನ ಸುಜ್ಞಾನ ಮತ್ತು ಭೌತಿಕ ಜಗತ್ತಿನ ವಿಜ್ಞಾನವನ್ನು ಒಂದುಗೂಡಿಸುವುದರ ಮೂಲಕ ಹೊಸತನ್ನು

ಸಾಧಿಸಿದ್ದಾರೆ. ಈ ಸಂಗಮತತ್ತ್ವಕ್ಕೆ ಚೈತನ್ಯಾತ್ಮಕ ಭೌತಿಕವಾದವೆಂದೂ ಬಸವಾದ್ವೈತವೆಂದೂ ಕರೆಯಬಹುದು.

ಆಧ್ಯಾತ್ಮಿಕ ಭೌತಿಕವಾದದ ಪ್ರಕಾರ ಲಿಂಗಾಂಗಸಾಮರಸ್ಯವೆಂದರೆ ಆಧ್ಯಾತ್ಮಿಕ ಜಗತ್ತು ಮತ್ತು ಭೌತಿಕ ಜಗತ್ತಿನ ಮಧ್ಯೆ ಅದ್ವೈತ ಸಾಧಿಸುವ ಭೇರುಂಡ ತತ್ತ್ವವೇ ಆಗಿದೆ. ಇದೇ ಬಸವಾದ್ವೈತ ಎಂಬ ಚೈತನ್ಯಾತ್ಮಕ ಭೌತಿಕವಾದ. ವ್ಯಷ್ಟಿ-ಸಮಷ್ಟಿ, ಇಷ್ಟಲಿಂಗ-ಜಂಗಮಲಿಂಗ, ಮಾನವನ ಒಳಲೋಕ-ಹೊರಲೋಕ, ಆಧ್ಯಾತ್ಮಿಕ ಲೋಕ-ಭೌತಿಕ ಲೋಕ, ಆತ್ಮಜ್ಞಾನ-ವಿಜ್ಞಾನ ಇವುಗಳಲ್ಲಿ ಅದ್ವೈತ ಸಾಧಿಸುವುದರ ಮೂಲಕ ಮೇಲು-ಕೀಳುಗಳನ್ನು ಮೀರಿದ ಮಾನವೀಯ ಸಮಾಜದ ರಚನೆ ಮಾಡುವುದು ಬಸವಣ್ಣನವರ ಗುರಿಯಾಗಿತ್ತು. ಅವರು ಈ ನಿಟ್ಟಿನಲ್ಲಿ ಬಹಳಷ್ಟು ಸಾಧಿಸಿ ತೋರಿಸಿದರು.

ಸಾಂಪ್ರದಾಯಿಕವಾಗಿ ಬೆಳೆದು ಬಂದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ನೇರವಾಗಿ ಎದುರಿಸದೆ, ಆಧ್ಯಾತ್ಮಿಕ ಭೌತಿಕವಾದದ ಹಿನ್ನೆಲೆಯಲ್ಲಿ ಸರ್ವಸಮಾನತೆಯ ಪರ್ಯಾಯ ಸಮಾಜವೊಂದನ್ನು ಮೌನಕ್ರಾಂತಿಯ ಮೂಲಕ ಹೇಗೆ ರಚಿಸಬೇಕು ಎಂಬುದನ್ನು ತೋರಿಸಿಕೊಟ್ಟವರು ಮಹಾನುಭಾವಿ ಬಸವಣ್ಣನವರು. ಬಸವಣ್ಣನವರ ಈ ಮೌನಕ್ರಾಂತಿ ಇಡೀ ವಿಶ್ವಕ್ಕೆ ಮಾದರಿಯಾಗಿದೆ.

ಹೊರ ಜಗತ್ತು ಮನುಷ್ಯನನ್ನು ಆಳುತ್ತದೆ ಎಂಬುದು ಆಧುನಿಕ ಚಿಂತನೆಯಾಗಿದೆ. ಒಳಜಗತ್ತು ಮನುಷ್ಯನನ್ನು ಆಳುತ್ತದೆ ಎಂಬುದು ಪುರಾತನ ಭಾವನೆಯಾಗಿದೆ. ಆದರೆ ಅಂತರಂಗ-ಬಹಿರಂಗ ಶುದ್ಧಿಯ ಮೂಲಕ ಒಳ ಮತ್ತು ಹೊರ ಜಗತ್ತುಗಳನ್ನು ಹೇಗೆ ಆಳಬೇಕು ಎಂಬುದನ್ನು ಬಸವಾದ್ವೈತ ಸೂಚಿಸುತ್ತದೆ. ಬಸವಣ್ಣನವರು ಇಷ್ಟಲಿಂಗದ ಮೂಲಕ ವ್ಯಷ್ಟಿಪ್ರಜ್ಞೆ ಬೆಳೆಸಿದರು. ಕಾಯಕದ ಮೂಲಕ ಸಾಮಾಜಿಕ ಶಕ್ತಿ ವೃದ್ಧಿಯಾಗುವಂತೆ ಮಾಡಿದರು. ದಾಸೋಹದ ಮೂಲಕ ಸಮಷ್ಟಿ ಪ್ರಜ್ಞೆಯ ವಿಕಸನ ಮಾಡಿದರು. ಮಾನವನ ಆಂತರಿಕ ಜಗತ್ತು ಕಾಲಾತೀತವಾಗಿದೆ. ಆದರೆ ಬಾಹ್ಯ ಜಗತ್ತು ಸದಾ ಚಲನಶೀಲವಾಗಿದೆ ಎಂಬುದರ ಅರಿವು ಮೂಡಿಸಿದರು.

ದಾಸೋಹ ಪ್ರಜ್ಞೆಯ ಕಾಯಕತತ್ತ್ವವು ಸಮಾಜೋ ಕೌಟುಂಬಿಕ ಅರ್ಥಶಾಸ್ತ್ರವಾಗಿದೆ. 'ಶರಣ ಸತಿ, ಲಿಂಗ ಪತಿ' ಎಂದು ಹೇಳುವಲ್ಲಿ ಇಡೀ ವಿಶ್ವವೇ ಕುಟುಂಬಮಯವಾಗಿದೆ. ಕುಟುಂಬ ವ್ಯವಸ್ಥೆಯನ್ನು ಸಾವಕಾಶವಾಗಿ ಕಳೆದುಕೊಳ್ಳುತ್ತಿರುವ ಆಧುನಿಕ ಸಮಾಜ ಎಂಥ ದುರ್ಗತಿಯನ್ನು ತಲುಪಬಲ್ಲುದು ಎಂಬುದಕ್ಕೆ ದೈನಂದಿನ ವಿದ್ಯಮಾನಗಳೇ ಸಾಕ್ಷಿಯಾಗಿವೆ.

ಬಸವಣ್ಣನವರು ಗುರು-ಲಿಂಗ-ಜಂಗಮವನ್ನು ದೇವರ ಮೂರು ಸ್ವರೂಪ ಎಂದು ಪರಿಗಣಿಸುವುದರ ಮೂಲಕ ಅರಿವು, ಅಂತಃಸಾಕ್ಷಿ ಮತ್ತು ಸಮಾಜಕ್ಕೆ ಇರುವ ಸಮಾನ ಮಹತ್ವವನ್ನು ತೋರಿಸಿಕೊಟ್ಟರು. ವೈದಿಕ ದೇವತೆಗಳು ಮತ್ತು

ಕ್ಷುದ್ರ ದೇವತೆಗಳನ್ನು ಮೊದಲು ಮಾಡಿ ೩೩ ಕೋಟಿ ದೇವತೆಗಳನ್ನೆಲ್ಲ ದೂರ ಸರಿಸಿ ಅಂತಃಸಾಕ್ಷಿಯೆ ದೇವರೆಂದು ಹೇಳಿಕೊಟ್ಟರು. ಭೌತಿಕ ಆಸೆಗಳಿಂದ ಹೊರಬಂದು ಕೆಳವರ್ಗೀಕರಣವಾಗುವ ಮತ್ತು ಹುಟ್ಟಿನ ಮೂಲದ ಅಹಂನಿಂದ ಹೊರಬಂದು ಕೆಳಜಾತೀಕರಣವಾಗುವ ಬಗೆಯನ್ನು ಹೇಳಿಕೊಟ್ಟರು. ನಮ್ಮೊಳಗೆ ಕ್ರಾಂತಿಯಾಗದೆ ಹೊರಗಡೆ ಕ್ರಾಂತಿಯಾಗುವುದು ಸಾಧ್ಯವಿಲ್ಲ ಎಂಬುದನ್ನು ಜಗತ್ತು ತಿಳಿಯುವಂತೆ ಮಾಡಿದರು. ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಮನುಷ್ಯರು ತಮ್ಮ ವರ್ಗ ಮತ್ತು ವರ್ಣಗಳಿಂದ ಪ್ರಾಮುಖ್ಯ ಪಡೆಯದೆ ಗುಣ ಮತ್ತು ಕ್ರಿಯೆಯ ಮೂಲಕ ಪ್ರಾಮುಖ್ಯ ಪಡೆಯುತ್ತಾರೆ.

ಕಾಯಕಜೀವಿಗಳ ಸಮಾಜ

ನಮ್ಮ ಸಮಾಜ ಸಹಸ್ರಾರು ವರ್ಷಗಳಿಂದ ಜಮೀನದಾರ ಕೇಂದ್ರಿತ ಸಮಾಜವಾಗಿತ್ತು. ಭೂಪಾಲರು ಮತ್ತು ಜಮೀನುದಾರರು ವಿಧಿಸಿದ ಸಾಮಾಜಿಕ ನಿಯಮಗಳನ್ನು ಬಡ ರೈತರೂ ಪಾಲಿಸಬೇಕಿತ್ತು. ಯಥಾಸ್ಥಿತಿಯನ್ನು ಮುಂದುವರಿಸಿಕೊಂಡು ಹೋಗುವ ರೀತಿಯಲ್ಲಿ ಆಯ ಪದ್ಧತಿಯ ಸ್ವಯಂ ಪರಿಪೂರ್ಣ ಸಮಾಜ ವ್ಯವಸ್ಥೆ ಗಟ್ಟಿಗೊಂಡಿತ್ತು. ಕಾಯಕಜೀವಿಗಳು ಜಾತಿ ಉಪಜಾತಿ ಜೀವಿಗಳಾಗಿ ಪರಿವರ್ತನೆಗೊಂಡರು. ಹಿಂದಿನಿಂದ ಬಂದ ಜಮೀನದಾರ ಕೇಂದ್ರಿತ ಸಮಾಜದಲ್ಲೇ ಒಟ್ಟಾರೆ ಕಾಯಕಜೀವಿಗಳ ಕೇಂದ್ರಿತ ಪರ್ಯಾಯ ಸಮಾಜವನ್ನು ಮೊದಲಿಗೆ ರಚಿಸಿದ ಕೀರ್ತಿ ಬಸವಣ್ಣನವರಿಗೆ ಸಲ್ಲುತ್ತದೆ. ಈ ರೀತಿಯ ಬದಲಾವಣೆಯಿಂದ ಸಮಾಜದಲ್ಲಿ ಚಿಂತನ-ಮಂಥನ ಪ್ರಾರಂಭವಾಯಿತು. ಪ್ರಶ್ನಿಸುವ ಮತ್ತು ಸಮಾನತೆಯ ಪ್ರಜ್ಞೆ ಮೂಡಿತು. ಹೀಗೆ ಅಸಮಾನತೆಯ ಸಮಾಜದಲ್ಲಿ ಸಮಾನತೆಯ ಪ್ರಜ್ಞೆ ಮೂಡಿಸುವ ಪರ್ಯಾಯ ಸಮಾಜ ರಚನೆಯ ರಹಸ್ಯವನ್ನು ಬಸವಣ್ಣನವರು ತಿಳಿಸಿಕೊಟ್ಟರು. ಬಸವಣ್ಣನವರ ಕಾಯಕತತ್ತ್ವ ಅರ್ಥಶಾಸ್ತ್ರ ಮತ್ತು ಪರಮಾರ್ಥಶಾಸ್ತ್ರದ ತಿರುಳನ್ನು ಒಳಗೊಂಡಿದೆ. ಕಾಯಕಕ್ಕೆ ದಾಸೋಹದ ಚೌಕಟ್ಟಿದೆ. ಈ ದಾಸೋಹದ ಕಟ್ಟಳೆ ಇಲ್ಲದಿದ್ದರೆ ಸತ್ಕ್ರಿಯೆಯಿಂದ ಗಳಿಸಿದ ಹಣ ಸಂಗ್ರಹವಾದರೂ ಅಹಂ ಸೃಷ್ಟಿಯಾಗುವುದು. ಸಮಾಜದಲ್ಲಿ ಮೇಲು ಕೀಳಿಗೆ ನಾಂದಿಯಾಗುವುದು. ಜನರು ತಮ್ಮ ತಮ್ಮ ದೈಹಿಕ ಮತ್ತು ಮಾನಸಿಕ ಶಕ್ತಿಗೆ ಅನುಗುಣವಾಗಿ ವಿಭಿನ್ನವಾಗಿರಬಹುದು. ವೈವಿಧ್ಯವು ನಿಸರ್ಗದ ನಿಯಮವಾಗಿದೆ. ಆದರೆ ಆಧ್ಯಾತ್ಮಿಕತೆಯು ಅದರ ಅಭಿನ್ನ ರೂಪವಾಗಿದೆ. ದಾನ ಪಡೆಯುವವರು ದೈನ್ಯಭಾವ ತಾಳುತ್ತ ಹೋಗುವರು. ಕೊಡುವವರಲ್ಲಿ ಅಹಂಕಾರ ಸೃಷ್ಟಿಯಾಗುವ ಸಾಧ್ಯತೆಗಳಿವೆ. ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ದಾನಕ್ಕೆ ಸ್ಥಾನವಿಲ್ಲ. ಅದರ ಸ್ಥಾನದಲ್ಲಿ ದಾಸೋಹವಿದೆ. ದಾಸೋಹವು ಕೊಡುವವನಲ್ಲಿ ವಿನಮ್ರ ಭಾವವನ್ನೂ ಪಡೆದುಕೊಳ್ಳುವವನಲ್ಲಿ ಸಮತಾ ಭಾವವನ್ನೂ

ಸೃಷ್ಟಿಸುತ್ತದೆ. ಪರ್ಯಾಯ ಸಮಾಜವಾದ ಶರಣ ಸಮಾಜದಲ್ಲಿ ಬೇಡುವವರು ಸಿಗದ ಕಾರಣ ಕೊಡುವವರು ಬಡವಾಗುತ್ತಿದ್ದರು!

ಹೊಸ ಪ್ರಜ್ಞೆ

ಬಡ್ಡಿಯಿಂದ ಸೃಷ್ಟಿಯಾಗುವ ಹಣ ಎಲ್ಲ ಅನಿಷ್ಟಗಳ ಮೂಲ ಎಂಬುದನ್ನು ಬಸವಣ್ಣನವರು ಅರಿತಿದ್ದರು. ಬಸವಣ್ಣನವರ ವಿಮೋಚನಾ ಸಿದ್ಧಾಂತದಲ್ಲಿ ಉದ್ದಂಡ ವೃತ್ತಿಗೆ ಮತ್ತು ಬಡ್ಡಿ ಹಣಕ್ಕೆ ಅವಕಾಶವಿಲ್ಲ. ಬಸವಣ್ಣನವರು ಬಡವರಿಗೆ ಹೊಸ ಕಾಯಕ ಕೊಡಲಿಲ್ಲ. ಹೊಸ ಪ್ರಜ್ಞೆ ಕೊಟ್ಟರು. ಬೇರೆಯವರಿಗೆ ಸಮಸ್ಯೆಯುಂಟುಮಾಡದ ಯಾವುದೇ ಕಾಯಕ ಕೀಳಲ್ಲ ಎಂದರು.

ಮಾನವ ಒಳ ಮತ್ತು ಹೊರ ಜಗತ್ತುಗಳಲ್ಲಿ ಏಕಕಾಲಕ್ಕೆ ಬದುಕುವುದರಿಂದ ಎರಡೂ ಜಗತ್ತುಗಳನ್ನು ಸಮಾನವಾಗಿ ನೋಡಬೇಕು. ಹಾಗೆ ನೋಡುವ ಕ್ರಮವನ್ನು ಬಸವಣ್ಣನವರು ಬದುಕಿ ತೋರಿಸಿದರು.

ಬಸವಣ್ಣನವರು ಬಿಜ್ಜಳನ ರಾಜ್ಯಶಕ್ತಿಯನ್ನು ಪ್ರಶ್ನಿಸಲಿಲ್ಲ. ಆತನ ಸಮಾಜ ವ್ಯವಸ್ಥೆಗೂ ಭಂಗ ತರಲಿಲ್ಲ. ಅರ್ಥ ಸಚಿವರಾಗಿ, ಪ್ರಧಾನಿಯಾಗಿ ಬಿಜ್ಜಳನ ಭಂಡಾರ ತುಂಬಿತುಳುಕುವಂತೆ ಮಾಡಿದರು. ಕಾಯಕದ ಮಹತ್ವ ಸಾರಿ, ಜನ ದುಡಿಮೆಯ ಮೂಲಕ ಸಮೃದ್ಧ ಜೀವನ ಸಾಗಿಸುವಂತೆ ಮಾಡಿದರು. ಬಿಜ್ಜಳನ ಸಾಂಪ್ರದಾಯಿಕ ವ್ಯವಸ್ಥೆಗೂ ಅವರೇ ಮುಂದಾಳಾಗಿದ್ದರು. ಸೃಷ್ಟಿಯಾಗುತ್ತಿದ್ದ ಹೊಸ ಪರ್ಯಾಯ ಸಮಾಜಕ್ಕೂ ಅವರೇ ಮುಂದಾಳಾಗಿದ್ದರು! ಜಾಗತಿಕ ಇತಿಹಾಸದಲ್ಲಿ ಇಂಥ ಇನ್ನೊಂದು ಉದಾಹರಣೆ ಇಲ್ಲ. ಹೀಗೆ ತಾವು ವಿರೋಧಿಸುವ ವ್ಯವಸ್ಥೆಯನ್ನೂ ಸೃಷ್ಟಿಸುವ ವ್ಯವಸ್ಥೆಯನ್ನೂ ಏಕಕಾಲಕ್ಕೆ ನಿಭಾಯಿಸಿದ ಧೀರೋದಾತ್ತ ನಾಯಕರು ಬಸವಣ್ಣನವರು.

ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಇರುವಿಕೆಗೆ ಮತ್ತು ಬದುಕಿಗೆ ಸಮಾನ ಸ್ಥಾನವಿತ್ತು. ಇರುವಿಕೆಯು ಭೌತಿಕ ಪ್ರಕ್ರಿಯೆಯಾದರೆ, ಬದುಕು ಆಧ್ಯಾತ್ಮಿಕ ಪ್ರಕ್ರಿಯೆಯಾಗಿದೆ. ಹೀಗೆ ಬಸವಣ್ಣನವರ ತತ್ತ್ವವು ಈ ಬದುಕನ್ನು ಗೌರವಿಸುವ ತತ್ತ್ವವಾಗಿದೆ.

ಬಸವಣ್ಣನವರು ಸಮಾಜದಲ್ಲಿ ಭವಿ ಮತ್ತು ಭಕ್ತ ವರ್ಗಗಳನ್ನು ಗುರುತಿಸಿದರು. ಈ ಜಗತ್ತು ಭೋಗವಸ್ತು ಎಂದು ಭಾವಿಸುವವರು ಭವಿಗಳು. ಯಾವುದೇ ಜೀವಿಗೆ ತೊಂದರೆಯಾಗದಂತೆ ಬದುಕುತ್ತ ಕಾಯಕದ ಮೂಲಕ ಈ ಜಗತ್ತಿನ ವಸ್ತುಗಳನ್ನು ಹಿತಮಿತವಾಗಿ ಬಳಸಿಕೊಳ್ಳುತ್ತ ಅನಂತವಾದ ಆಧ್ಯಾತ್ಮಿಕ ಜಗತ್ತಿನ ಕಡೆಗೆ ಸಾಗುವವರು ಭಕ್ತರು.

ಬಸವ ಎಂದರೆ ಒಬ್ಬ ವ್ಯಕ್ತಿ ಅಲ್ಲ; ತ್ರ್ಯಕ್ಷರ ಮಂತ್ರ, ವ್ಯಕ್ತಿ, ಕುಟುಂಬ, ಸಮಾಜ ಮತ್ತು ವಿಶ್ವವನ್ನು ಬೆಸೆಯುವ ಮಂತ್ರ. ಮೇಲು ಕೀಳುಗಳನ್ನು ಹೋಗಲಾಡಿಸುವ ಮಂತ್ರ.

ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಮಹಾದೇವ ಭೂಪಾಲ (ಮೋಳಿಗೆ ಮಾರಯ್ಯ)ರಂಥ ಶ್ರೀಮಂತರು ವಸ್ತುಮೋಹದಿಂದ ಹೊರಬರುವರು. ಆಯ್ದಕ್ಕಿ ಲಕ್ಕಮ್ಮರಂಥ ಬಡವರು ವಸ್ತುಮೋಹಕ್ಕೆ ಒಳಗಾಗದೆ ಇರುವರು. ಎಲ್ಲರೂ ಎಲ್ಲ ಅಹಂಕಾರದಿಂದ ಹೊರಬಂದು ಪ್ರೇಮದ ಅತ್ಯುನ್ನತ ಮಟ್ಟವನ್ನು ತಲುಪುವರು. ಎಲ್ಲ ಶರಣರ ವಚನಗಳು ಅಂತರಂಗದ ಬೆಳಕಾಗಿವೆ. ಅನುಭವ ಮಂಟಪದಲ್ಲಿ ಎಲ್ಲರ ಬೆಳಕು ಒಂದಾಗಿ ಹಳೆಯ ಸಮಾಜದ ಒಳಗೆಯೆ ಪರ್ಯಾಯ ಸಮಾಜದ ಉದಯವಾಯಿತು.

ಬದುಕುವ ಕಲೆ

ನಾವು ಹೇಗೆ ಅಸ್ತಿತ್ವದಲ್ಲಿರಬೇಕು. ಹೇಗೆ ಬದುಕಬೇಕು. ಹೇಗೆ ಮಾತನಾಡಬೇಕು. ಹೇಗೆ ಉಣಬೇಕು. ಹೇಗೆ ಉಡಬೇಕು. ಬದುಕಿಗೆ ಅನಿವಾರ್ಯವಲ್ಲದ ಐಹಿಕ ವಸ್ತುಗಳ ಮೋಹದಿಂದ ಹೇಗೆ ಹೊರಬರಬೇಕು. ಚಿಂತೆಯಿಂದ ಬಿಡಿಸಿಕೊಂಡು ಸಮಸ್ಯೆಗಳನ್ನು ಹೇಗೆ ಎದುರಿಸಬೇಕು. ಸಮಾಜದಲ್ಲಿ ಯಾವರೀತಿ ವ್ಯವಹರಿಸಬೇಕು. ದೇಶದ ಕಾನೂನನ್ನು ಯಾವರೀತಿ ಗೌರವಿಸಬೇಕು. ಯಾವುದನ್ನು ನರಕ ಎಂದು ತಿರಸ್ಕರಿಸಬೇಕು. ಯಾವುದನ್ನು ಸ್ವರ್ಗ ಎಂದು ಸ್ವೀಕರಿಸಬೇಕು. ಮಾನವ ಏಕತೆಯನ್ನು ಹೇಗೆ ಸಾಧಿಸಬೇಕು. ದ್ವೇಷಾಸೂಯೆಗಳಿಲ್ಲದೆ ಮತ್ತು ರಕ್ತಪಾತವಿಲ್ಲದೆ ನ್ಯಾಯಬದ್ಧವಾದ ಸಮಾಜವನ್ನು ಯಾವರೀತಿ ನಿರ್ಮಾಣ ಮಾಡಬೇಕು. ಅನಿಷ್ಟಗಳ ವಿರುದ್ಧ ಹೇಗೆ ಹೋರಾಡಬೇಕು. ನಮ್ಮೊಳಗೇ ಹೇಗೆ ಜಗಳವಾಡಬೇಕು ಮತ್ತು ನಮ್ಮ ಹೊರಗೆ ಹೇಗೆ ಸೌಹಾರ್ದ ಸಾಧಿಸಬೇಕು. ನಾವು ಏಕೆ ಗಳಿಸಬೇಕು, ಹೇಗೆ ಗಳಿಸಬೇಕು ಮತ್ತು ಹೇಗೆ ಖರ್ಚು ಮಾಡಬೇಕು. ಪಂಚಮಹಾಭೂತಗಳನ್ನು ಹೇಗೆ ಅರಿತುಕೊಳ್ಳಬೇಕು. ಹೇಗೆ ಸಹಿಸಿಕೊಳ್ಳಬೇಕು. ಆತ್ಮಸ್ತುತಿಯ ಸೆಳೆತದಿಂದ ಹೇಗೆ ಪಾರಾಗಬೇಕು. ಒಳ್ಳೆಯದು ಕಂಡಲ್ಲಿ ಹೇಗೆ ಹೊಗಳಬೇಕು. ಕೆಟ್ಟದ್ದನ್ನು ಹೇಗೆ ತೆಗಳಬೇಕು. ಬದುಕಿನ ಎಲ್ಲ ಏರಿಳಿತಗಳನ್ನು ಹೇಗೆ ಸಹಿಸಿಕೊಳ್ಳಬೇಕು. ನಮ್ಮ ಹೆಂಡಿರು ಮಕ್ಕಳೊಂದಿಗೆ ಮತ್ತು ಸಮಾಜದಲ್ಲಿ ಹೇಗೆ ನಡೆದುಕೊಳ್ಳಬೇಕು. ನಮ್ಮ ಪ್ರವೃತ್ತಿಗಳನ್ನು ಹೇಗೆ ಬಳಸಿಕೊಳ್ಳಬೇಕು. ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ಹೇಗೆ ನಿರ್ಧರಿಸಬೇಕು. ನಮ್ಮನ್ನು ನಾವು ಹೇಗೆ ವಿಮರ್ಶೆಗೆ ಒಳಪಡಿಸಬೇಕು. ಬೇರೆಯವರನ್ನು ಹೇಗೆ ವಿಮರ್ಶೆ ಮಾಡಬೇಕು. ಯಾವ ರೀತಿ ಸತ್ಯ ನುಡಿಯಬೇಕು. ಯಾವ ರೀತಿ ಪಶ್ಚಾತಾಪ ಪಡಬೇಕು. ಧಾರ್ಮಿಕತೆ ಯಾವುದು, ಧರ್ಮ ಯಾವುದು, ಅಧ್ಯಾತ್ಮ ಯಾವುದು. ಆತ್ಮಪ್ರಜ್ಞೆ ಮತ್ತು ಪರಿಪೂರ್ಣವಾದ ವ್ಯಕ್ತಿತ್ವವನ್ನು ಹೇಗೆ ರೂಪಿಸಿಕೊಳ್ಳಬೇಕು. ಇಷ್ಟಲಿಂಗದ ಮೂಲಕ ಮಾನಸಿಕ ವ್ಯಕ್ತಿತ್ವ ಹೇಗೆ ಬೆಳೆಯುವುದು. ಇಡೀ ಸಮಾಜವೇ ಜಂಗಮಲಿಂಗವೆಂದು ಭಾವಿಸಿ ದಾಸೋಹದ

ಮೂಲಕ ಸಾಮಾಜಿಕ ವ್ಯಕ್ತಿತ್ವವನ್ನು ಹೇಗೆ ಪಡೆಯಬೇಕು. ಶಿವಯೋಗದಿಂದ ಮಾನಸಿಕ ವ್ಯಾಯಾಮ, ದಾಸೋಹದಿಂದ ಸಾಮಾಜಿಕ ವ್ಯಾಯಾಮ ಮತ್ತು ಕಾಯಕದಿಂದ ದೈಹಿಕ ವ್ಯಾಯಾಮ ಯಾವ ರೀತಿ ಆಗುವುದು. ಮಾನಸಿಕ ಶಕ್ತಿಯಿಂದ ಯಾವ ರೀತಿಯಲ್ಲಿ ದೈಹಿಕ ಮತ್ತು ಸಾಮಾಜಿಕ ಶಕ್ತಿಗಳನ್ನು ಸದ್ಬಳಕೆ ಮಾಡಿಕೊಳ್ಳುವುದು. ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹೇಗೆ ಪಡೆಯುವುದು. ಹೊರಗಿನ ಕ್ರಾಂತಿಯನ್ನು ಸಾಧಿಸುವುದಕ್ಕಾಗಿ ಒಳಗಿನ ಕ್ರಾಂತಿ ಯಾವ ರೀತಿ ನಡೆಯಬೇಕು. ಹಳೆಯ ವ್ಯವಸ್ಥೆಗೆ ವಿಮುಖವಾಗಿ ಮತ್ತು ಪರ್ಯಾಯ ವ್ಯವಸ್ಥೆಯಲ್ಲಿ ಕಾರ್ಯೋನ್ಮುಖವಾಗಿ, ಸೈನಿಕರನ್ನು ಬಳಸದೆ ಮತ್ತು ಪ್ರತ್ಯೇಕ ಹೋರಾಟವನ್ನೂ ಮಾಡದೆ ಪ್ರಜ್ಞಾಪೂರ್ಣವಾದ ಮೌನಕ್ರಾಂತಿಯನ್ನು ಯಾವ ರೀತಿ ಮಾಡಬೇಕು. ತಾನು ತಾನಾಗಿ ನೋಡುವ ಆತ್ಮಮುಖಿ, ತಾನೇ ಸಕಲ ಜೀವಿಗಳಾಗಿ ನೋಡುವ ಜೀವಾತ್ಮಮುಖಿ, ತನ್ನನ್ನು ತಾನು ಸಮೂಹವಾಗಿ ನೋಡುವ ಸಂಗಾತ್ಮಮುಖಿ ಮತ್ತು ತನ್ನನ್ನು ತಾನು ಅನಂತವಾಗಿ ನೋಡುವ ಪರಮಾತ್ಮಮುಖಿ ಹೇಗಾಗಬೇಕು. ಸಕಲಜೀವಾತ್ಮರಿಗೆ ಲೇಸನೆ ಬಯಸುತ್ತ ಹೇಗೆ ವಿಶ್ವಮಾನವರಾಗಿ ರೂಪುಗೊಳ್ಳಬೇಕು ಎಂಬುದನ್ನು ಬಸವಣ್ಣನವರು ನಮಗೆ ಕಲಿಸಿಕೊಟ್ಟರು. ಮಾನಸಿಕ ವ್ಯಕ್ತಿತ್ವ ಆತ್ಮಮುಖಿಯಾಗಿರುತ್ತದೆ. ಭೌತಿಕ ವ್ಯಕ್ತಿತ್ವ ಜೀವಾತ್ಮಮುಖಿಯಾಗಿರುತ್ತದೆ. ಸಾಮಾಜಿಕ ವ್ಯಕ್ತಿತ್ವ ಸಂಗಾತ್ಮಮುಖಿಯಾಗಿರುತ್ತದೆ. ವಿಶ್ವವ್ಯಕ್ತಿತ್ವ ಪರಮಾತ್ಮಮುಖಿಯಾಗಿರುತ್ತದೆ. ಇದೇ ಬಸವಣ್ಣನವರ ಅದ್ವಿತೀಯ ಬದುಕುವ ಕಲೆ. (ಆರ್ಟ್ ಆಫ್ ಲಿವಿಂಗ್)

ಬಸವಣ್ಣನವರ ಪರ್ಯಾಯ ಸಮಾಜ ವಿಶ್ವಕ್ಕೇ ಮಾದರಿಯಾಗಿದೆ. ೧೨ನೇ ಶತಮಾನದ ವಿಶ್ವ ಇಂಥ ಒಂದು ಸಮಾಜ ವ್ಯವಸ್ಥೆಯ ಕನಸನ್ನೂ ಕಂಡಿರಲಿಲ್ಲ. ಬಸವಣ್ಣನವರು ಪರ್ಯಾಯ ಸಮಾಜದ ಕನಸನ್ನು ಕಂಡರು. ವರ್ಗ ಹೋರಾಟದ ಸಿದ್ಧಾಂತದೊಂದಿಗೆ ದೇಶದ ಗಡಿಗಳಿಲ್ಲದ ಮಾನವ ಸಮಾಜ ನಿರ್ಮಾಣವಾಗಬೇಕು ಎಂದು ಕಾರ್ಲ್ ಮಾರ್ಕ್ಸ್ ಹೇಳಿದ್ದು ಇಂಥ ಒಂದು ಸಮಾಜದ ಮುನ್ಸೂಚನೆಯೊಂದಿಗೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

ಮೌನಕ್ರಾಂತಿಯ ಹರಿಕಾರ

ಕಮ್ಯೂನಿಸ್ಟರ ಹಾಗೆ ಪ್ರತ್ಯಕ್ಷ ವರ್ಗ ಹೋರಾಟ ಮಾಡದೆ, ಹುತಾತ್ಮ ಭಗತಸಿಂಗ್ ಹಾಗೆ ರಾಜ್ಯ ವ್ಯವಸ್ಥೆಯ ವಿರುದ್ಧ ಬಂಡೇಳದೆ, ಅಥವಾ ಮಹಾತ್ಮಾ ಗಾಂಧೀಜಿಯವರ ಹಾಗೆ ಯಾವುದೇ ಅಸಹಕಾರ ಚಳವಳಿಯನ್ನೂ ಹೂಡದೆ ಪರಂಪರಾಗತ ರಾಜ್ಯಶಕ್ತಿ ಮತ್ತು ಸಮಾಜ ವ್ಯವಸ್ಥೆಯ ಬಂಧದ ಒಳಗಡೆಯೆ ಪರ್ಯಾಯ ಸಮಾಜ ವ್ಯವಸ್ಥೆಯನ್ನು ಸುವ್ಯವಸ್ಥಿತವಾಗಿ ರೂಪಿಸುವುದರ ಮೂಲಕ ಅದ್ವಿತೀಯ ಮೌನಕ್ರಾಂತಿಗೆ ನಾಂದಿ ಹಾಡಿದವರು ಬಸವಣ್ಣನವರು. ಅವರ ಕ್ರಾಂತಿಯು ಅಂತಿಮ ಘಟ್ಟ ತಲುಪಿದ್ದರೆ

ಬಿಜ್ಜಳನಂಥ ದೊರೆಗಳ ರಾಜ್ಯ ವ್ಯವಸ್ಥೆಯೂ ಮುಂದುವರಿಯುತ್ತಿರಲಿಲ್ಲ; ಜಿಡ್ಡುಗಟ್ಟಿದ ಸಮಾಜ ವ್ಯವಸ್ಥೆಯೂ ಇರುತ್ತಿರಲಿಲ್ಲ.

ಬಸವಣ್ಣನವರು ಪ್ರಧಾನಿಯಾಗಿ ಬಿಜ್ಜಳನ ರಾಜ್ಯಸತ್ತೆಯೊಳಗಿನ ಸಾಂಪ್ರದಾಯಿಕ ಸಮಾಜದ ಮೇಲ್ವಿಚಾರಕರಾಗಿದ್ದರು. ಅದೇ ಸಂದರ್ಭದಲ್ಲಿ ಶರಣಸಂಕುಲದ ಮಾರ್ಗದರ್ಶಿಯಾಗುವುದರ ಮೂಲಕ ನವಸಮಾಜದ ಮುನ್ಸೂಚಕರಾಗಿದ್ದರು. ಅವರ ಪರಿಕಲ್ಪನೆಯ ಪರ್ಯಾಯ ಸಮಾಜ, ನವಸಮಾಜವಾದಾಗ ಇಡೀ ಹಳೆಯ ವ್ಯವಸ್ಥೆ ತಾನೇ ತಾನಾಗಿ ಕರಗಿ ಹೋಗುವುದೆಂಬುದು ಆಳುವ ವರ್ಗದ ಅರಿವಿಗೆ ಬಂದಕೂಡಲೇ ಕಲ್ಯಾಣದಲ್ಲಿ ಶರಣರ ಹತ್ಯಾಕಾಂಡವಾಯಿತು. ಕೆಳಜಾತಿಯ ಮಹಾಜ್ಞಾನಿ ಅಲ್ಲಮಪ್ರಭುಗಳು ಶೂನ್ಯಸಿಂಹಾಸನವೇರಿದಾಗಲೆ ಕಲ್ಯಾಣದ ಪಟ್ಟಭದ್ರರಿಗೆ, ಎಲ್ಲ ದೃಷ್ಟಿಯಿಂದಲೂ ಸಮೃದ್ಧವಾಗಿರುವ ತಮ್ಮ ನೆಲೆ ಕುಸಿಯುತ್ತಿರುವ ಅರಿವಾಯಿತು. ಸಮಗಾರ ಹರಳಯ್ಯ ಮತ್ತು ಬ್ರಾಹ್ಮಣ ಮಧುವರಸರು ಬಸವಣ್ಣನವರ ಪರ್ಯಾಯ ಸಮಾಜದಲ್ಲಿ ಜಾತಿ ಸಂಕರಗೊಂಡು ಕೇವಲ ಶರಣರಾಗಿದ್ದರು. ಅವರ ಮಕ್ಕಳ ಮದುವೆ ಸಾಂಪ್ರದಾಯಿಕ ಸಮಾಜದವರಿಗೆ ಅಂತರ್ಜಾತೀಯ ವಿವಾಹವಾಗಿ ಕಂಡಿತು. ಅದನ್ನೇ ನೆಪ ಮಾಡಿಕೊಂಡ ಯಥಾಸ್ಥಿತಿವಾದಿಗಳು ಶರಣರ ಹತ್ಯೆ ಮಾಡಿದರು. ಶರಣರ ಹತ್ಯಾಕಾಂಡ ಮಧ್ಯಯುಗದ ಇತಿಹಾಸದಲ್ಲಿ ದಾಖಲೆಯಾಗದೆ ಹೋದುದು ಮಾನವೀಯತೆಗೆ ಮಾಡಿದ ಅವಮಾನವಾಗಿದೆ. ಈ ಹತ್ಯಾಕಾಂಡವನ್ನು 'ಕಲ್ಯಾಣ ಕ್ರಾಂತಿ' ಎಂದು ರಮ್ಯವಾಗಿ ಕರೆಯುವುದರ ಮೂಲಕ ತೃಪ್ತಿ ಪಡುವುದರ ಬದಲು, ಮಾನವಕುಲದ ಈ ಮಹತ್ವದ ಘಟನೆ ಇತಿಹಾಸದಲ್ಲಿ ದಾಖಲಾಗದೆ ಇರಲು ಕಾರಣಗಳೇನು? ಸುಲಿಗೆ ವ್ಯವಸ್ಥೆಯ ಪ್ರತಿಪಾದಕರು ಈ ಘಟನೆ ತನ್ನ ನೈಜರೂಪದಲ್ಲಿ ದಾಖಲಾಗದಂತೆ ನೋಡಿಕೊಳ್ಳುವಲ್ಲಿ ಅದು ಹೇಗೆ ಯಶಸ್ಸು ಸಾಧಿಸಿದರು ಎಂಬುದನ್ನು ಕಂಡುಕೊಳ್ಳುವುದು ಸಕಲಜೀವಿಗಳ ಬಗ್ಗೆ ಗೌರವವಿರುವ ಸಂಶೋಧಕರ ಆದ್ಯ ಕರ್ತವ್ಯವಾಗಿದೆ.

ಅಲ್ಲಮಪ್ರಭುಗಳು ಕೊಂಡಾಡಿದಂತೆ ಬಸವಣ್ಣನವರು ಯುಗದ ಉತ್ಸಾಹವಾಗಿದ್ದರು. ಉನ್ನತ ಪ್ರಜ್ಞೆಯ ಪ್ರತೀಕವಾಗಿದ್ದರು. 'ಕರ್ಣದಲಿ ಜನಿಸಿದವರುಂಟೆ ಜಗದೊಳು' ಎಂದು ಹೇಳುವ ವೈಜ್ಞಾನಿಕ ಮನೋಭಾವದವರಾಗಿದ್ದರು. 'ಕೂಡಲಸಂಗಮದೇವರ ಮನಮುಟ್ಟಿ ಪೂಜಿಸಿ ಕರ್ಮ ಹರಿಯದೊಡಾ ಪೂಜೆಯದೇಕೊ' ಎಂದು ಅವರು ಕರ್ಮಸಿದ್ಧಾಂತವನ್ನು ಅಲ್ಲಗಳೆದರು. 'ಹುರುಳಿಲ್ಲ ಹುರುಳಿಲ್ಲ ಲಿಂಗಾರ್ಚನೆ, ಕೂಡಲಸಂಗಮದೇವಾ ಜಂಗಮಕ್ಕೆರೆದಡೆ ಸ್ಥಾವರ ನನೆಯಿತ್ತು' ಎಂದು ಹೇಳುವುದರ ಮೂಲಕ ಜಗದ ಸೇವೆಯೆ ಜಗದೀಶನಿಗೆ ಮಾಡುವ ಪೂಜೆ ಎಂಬ ಅರಿವು ಮೂಡಿಸಿದರು. 'ಲೋಕವಿರೋಧಿ

ಶರಣನಾರಿಗಂಜುವವನಲ್ಲ' ಎಂದು ಮೇಲು ಕೀಳುಗಳಿಂದ ತುಂಬಿ ತುಳುಕುತ್ತಿದ್ದ ಸಮಾಜಕ್ಕೆ ಸ್ಪಷ್ಟಪಡಿಸಿದರು. 'ಕುಲವನರಸುವರೆ ಶರಣರಲಿ ಜಾತಿಸಂಕರವಾದ ಬಳಿಕ?' ಎಂದು ಪ್ರಶ್ನಿಸುವುದರ ಮೂಲಕ ಪರ್ಯಾಯ ಸಮಾಜದ ಅಡಿಪಾಯ ಹಾಕಿದರು. 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೆ ಕುಲಜರು' ಎಂದು ಎದೆತಟ್ಟಿ ಹೇಳಿದರು. 'ಹಡೆದೊಡವೆ ವಸ್ತುವನು ಮೃಡಭಕ್ತರಿಗಲ್ಲದೆ ಕಡಬಡ್ಡಿಯ ಕೊಡಲಾಗದು' ಎಂದು ಪರ್ಯಾಯ ಸಮಾಜದ ಸದಸ್ಯರಿಗೆ ಆದೇಶಿಸುವ ಮೂಲಕ ಬಡ್ಡಿಯ ಕ್ರೌರ್ಯದ ವಿರಾಟ್ ಸ್ವರೂಪದ ಅರಿವು ತಮಗಿದೆ ಎಂದು ತೋರಿಸಿಕೊಟ್ಟರು. 'ವೇದ ಶಾಸ್ತ್ರ ಆಗಮಂಗಳನೋದಿದವರು ಹಿರಿಯರೆ? ನಟನಿ ಬಾಣ ವಿಲಾಸಿ ಸುವಿದ್ಯವ ಕಲಿತ ಡೊಂಬನೇನು ಕಿರಿಯನೆ? ಎಂದು ಹೇಳುವುದರ ಮೂಲಕ ಮೇಲ್ಜಾತಿ ಮೇಲ್ವರ್ಗದವರ ಪ್ರತಿಭೆಗಿಂತ ಕೆಳಜಾತಿ, ಕೆಳವರ್ಗದವರ ಪ್ರತಿಭೆ ಕಡಿಮೆಯೇನಿಲ್ಲ ಎಂದು ವಾದಿಸಿದರು. 'ಕಳ್ಳನಾಣ್ಯ ಸಲುಗೆಗೆ ಸಲ್ಲದು' ಎಂದು ಹೇಳುವುದರ ಮೂಲಕ, ಒಂದು ವ್ಯವಸ್ಥೆಯಲ್ಲಿ ಇದ್ದಾಗ ಅದರ ಕಟ್ಟಳೆಗಳನ್ನು ಪಾಲಿಸಬೇಕು ಎಂಬುದನ್ನು ಸೂಚಿಸಿದರು. 'ವೇದಕ್ಕೆ ಒರೆಯ ಕಟ್ಟುವೆ ಶಾಸ್ತ್ರಕ್ಕೆ ನಿಗಳವನಿಕ್ಕುವೆ' ಎಂದು ಹಳೆಯದರಲ್ಲಿನ ಅಸಂಬದ್ಧತೆಯನ್ನು ಪ್ರಶ್ನಿಸಿದರು. ಅವರು ತಮ್ಮನ್ನು ಅಕ್ರಮ ಸಂತಾನದ ಪ್ರತೀಕವಾಗಿ ನೋಡಿಕೊಳ್ಳುವುದರ ಮೂಲಕ ಹೊಲೆಮಾದಿಗರಿಗೂ ಕಡೆಯಾಗಿ ನಿಂತು ಹುಟ್ಟಿನ ಮೂಲದ ಒಣ ಅಹಂಭಾವವನ್ನು ಅಲ್ಲಗಳೆದರು. 'ಹೊನ್ನಿನೊಳಗೊಂದೊರೆಯ, ಸೀರೆಯೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ. ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ ಕೂಡಲಸಂಗಮದೇವಾ' ಎಂದು ಹೇಳಿ ನರನ ಸಂಗ್ರಹಬುದ್ಧಿಯ ಹಿಂದಿರುವ ಸಾಮಾಜಿಕ ಕ್ರೌರ್ಯವನ್ನು ತೋರಿಸಿಕೊಟ್ಟರು. 'ನಿನ್ನ ನಾನರಿಯದ ಮುನ್ನ ನೀನೆಲ್ಲಿ ಇದ್ದೆ? ಎನ್ನೊಳಗಿದ್ದು ನಿನ್ನ ತೋರಲಿಕ್ಕೆ ನೀನೇ ರೂಪಾದೆ' ಎಂದು ಅಂತಃಸಾಕ್ಷಿಯನ್ನೇ ದೇವರೆಂದು ಸೂಚಿಸಿದರು. ಇಷ್ಟಲಿಂಗವನ್ನು ಅಂತಃಸಾಕ್ಷಿಯ ಪ್ರತೀಕವಾಗಿ ಕಂಡರು. ಇಡೀ ವಿಶ್ವವನ್ನು ಜಂಗಮಲಿಂಗದ ರೂಪದಲ್ಲಿ ನೋಡಿದರು. ಹೀಗಾಗಿ ಬಸವಣ್ಣನವರಿಗೆ ಯಾರೂ ಹೊರಗಿನವರಾಗಲಿಲ್ಲ. 'ಕೈಲಾಸವೆಂಬುದೇನೋ ಪೃಥ್ವಿಯ ಮೇಲೊಂದು ಮೊರಡಿ' ಎಂದು ಅವರು ಸ್ವರ್ಗದ ಭ್ರಮೆಯನ್ನು ಕಳೆಯುವುದರ ಜೊತೆಗೆ ಭೂಮಿಯ ಮಹತ್ವದ ಮನವರಿಕೆ ಮಾಡಿಕೊಟ್ಟರು.

ಇಂಥ ಒಬ್ಬ ಮಹಾನುಭಾವ ಕನ್ನಡದ ನೆಲದಲ್ಲಿ ಆಗಿಹೋದದ್ದು ನಮ್ಮ ಅಂತಃಕರಣದ ಆಳಕ್ಕೆ ಇಳಿಯುತ್ತಲೇ ಇಲ್ಲ ಎಂದೆನಿಸುತ್ತದೆ. ಏಕೆಂದರೆ ನಮ್ಮ ದೇಶ ಮತ್ತು ಜಗತ್ತು ಇಷ್ಟೊಂದು ಅಧೋಗತಿಗೆ ಇಳಿಯುತ್ತಿದ್ದರೂ ಮಾನವಕುಲದ ರಕ್ಷಣೆಗಾಗಿ ಬಸವ ಎಂಬ ತ್ರ್ಯಕ್ಷರ ಮಂತ್ರವನ್ನು ನಾವೇಕೆ ಉಚ್ಚರಿಸುತ್ತಿಲ್ಲ?

ಬಸವಣ್ಣನವರ ಪರ್ಯಾಯ ಸಮಾಜ ಎಂಥ ರೂಪುರೇಷೆಗಳನ್ನು ಹೊಂದಿತ್ತು? ಇಂದಿನ ವರ್ತಮಾನದ ಬದುಕನ್ನು ಹಸನುಗೊಳಿಸಲು ಬಸವಣ್ಣನವರ ವಿಚಾರಧಾರೆಯನ್ನು ಹೇಗೆ ಬಳಸಿಕೊಳ್ಳಬೇಕು? ಎಂಬುದನ್ನು ತಿಳಿದುಕೊಳ್ಳುವುದು ಹಿಂದೆಂದಿಗಿಂತಲೂ ಇಂದು ಹೆಚ್ಚು ಅವಶ್ಯವಾಗಿದೆ.

'ಬಸವ ರಾಜ್ಯದ ಸಿರಿಯು, ಬಸವ ಬಡವರ ನಿಧಿಯು' ಎಂದು ಜನಪದ ಕವಿಯೊಬ್ಬ ಮನದುಂಬಿ ಹಾಡಿದ್ದಾನೆ. ಈ ಹೊಗಳಿಕೆ ಎಷ್ಟೊಂದು ಅರ್ಥಗರ್ಭಿತವಾಗಿದೆ! ಬಸವಣ್ಣನವರು ಅರ್ಥ ಸಚಿವರಾಗಿ ಪ್ರಧಾನಿಯಾಗಿ ಕರ್ತವ್ಯಚ್ಯುತರಾಗದೆ ಬಿಜ್ಜಳನ ಭಂಡಾರ ತುಂಬಿತುಳುಕುವಂತೆ ಮಾಡಿದ್ದಾರೆ. ಕಾಯಕದ ಮೂಲಕ ಮಾನವಶಕ್ತಿಯ ಪ್ರಜ್ಞೆ ಮೂಡಿಸಿ ಜನಕೋಟಿಯ ಮೈಮನಗಳು ಆರೋಗ್ಯಪೂರ್ಣವಾಗಿರುವಂತೆ ನೋಡಿಕೊಂಡಿದ್ದಾರೆ. ಬಸವಣ್ಣನವರ ಪರ್ಯಾಯ ಸಮಾಜ ವ್ಯವಸ್ಥೆಯಲ್ಲಿ ಮೇಲು ಕೀಳುಗಳಿಲ್ಲ. ವರ್ಗ, ವರ್ಣ, ಜಾತಿ ಮತ್ತು ಲಿಂಗಭೇದಗಳಿಲ್ಲ. ಕೊಡುವವರುಂಟು, ಬೇಡುವವರಿಲ್ಲ. ಆತ್ಮಗೌರವವುಂಟು ಅಹಂಕಾರವಿಲ್ಲ. ಅನುಭವದ ಮೂಲಕ ಅನುಭಾವವುಂಟು ಹೊರತಾಗಿ, ದುಡಿಯದೆ ಧ್ಯಾನಿಸುವ ಮೂಲಕ ಬರುವ ಅನುಭಾವವಲ್ಲ. ಕಾಯಕವೆಂಬುದು ಬಸವಣ್ಣನವರ ಪರ್ಯಾಯ ಸಮಾಜದ ಆಧಾರಸ್ತಂಭವಾಗಿದೆ. ಈ ಕಾಯಕಕ್ಕೆ ದಾಸೋಹದ ಜವಾಬ್ದಾರಿ ಇದೆ. ದಾಸೋಹ ಪ್ರಜ್ಞೆಯಿಲ್ಲದ ಕಾಯಕ ಕೂಡ ಹೊಸ ಸಮಾಜದ ಸೃಷ್ಟಿಗೆ ಸಹಾಯಕವಾಗದು. ದಾಸೋಹವಿಲ್ಲದ ಕಾಯಕ ಕೇವಲ ಕೆಲಸ ಎಂದು ಕರೆಯಿಸಿಕೊಳ್ಳುವುದು. ದಾಸೋಹವು ಮಿಗುತಾಯ ಮೌಲ್ಯ ಸೃಷ್ಟಿಯಾಗದಂತೆ ನೋಡಿಕೊಳ್ಳುತ್ತದೆ. ಬಡ್ಡಿ ವ್ಯವಹಾರಕ್ಕೆ ಕಡಿವಾಣ ಹಾಕುತ್ತದೆ. ಆದರೆ ಸಂಪತ್ತಿನ ಸಂಗ್ರಹಣೆ ಮತ್ತು ಬಡ್ಡಿ ವ್ಯವಹಾರದ ಮೇಲೆ ಇಂದಿನ ಜಗತ್ತು ನಿಂತಿದೆ. ಸಂಪತ್ತಿನ ಶೇಖರಣೆ ಮತ್ತು ವಿಸ್ತೀರ್ಣ ಮಾಡುವವರಿಗೆ ಯಾವುದೇ ಮೌಲ್ಯಗಳಿಲ್ಲ. ಯಾವುದೇ ನಾಚಿಕೆ ಇಲ್ಲ. ಅವರಿಗೆ ಹಣವೇ ಮೌಲ್ಯ. ಅದಕ್ಕಾಗಿ ಅವರು ಯಾವುದೇ ದೇಶದ ಮೇಲೆ ಯುದ್ಧ ಮಾಡಬಲ್ಲರು. ಲಕ್ಷಾಂತರ ತಾಯಂದಿರು ಮತ್ತು ಮಕ್ಕಳನ್ನು ಕೊಲ್ಲಬಲ್ಲರು. ಮಾನವನ ಪ್ರತಿಭೆ, ನಾಗರೀಕತೆ ಮತ್ತು ಪರಂಪರೆಯ ಪ್ರತೀಕವಾದ ಪುರಾತನ ಕಲಾತ್ಮಕ ಸ್ಮಾರಕಗಳನ್ನು ಧ್ವಂಸ ಮಾಡಬಲ್ಲರು. ಧರ್ಮಗಳ ದುರ್ಬಳಕೆಗೆ ಮುಂದಾಗಬಲ್ಲರು. ಧರ್ಮದ ಹೆಸರಿನಲ್ಲಿ ಕೋಮುಗಲಭೆ ಸೃಷ್ಟಿಸಬಲ್ಲರು. ಹೀಗೆ ಸಾಗುತ್ತ ಇಂದು ನಾವು ಯಾವ ಮಟ್ಟವನ್ನು ತಲುಪಿದ್ದೇವೆ ಎಂದರೆ ವಿಶ್ವದಲ್ಲಿ ಇಂದು ೩೫ ಸಾವಿರ ಪರಮಾಣು ಅಸ್ತ್ರಗಳಿವೆ. ಒಂದು ಪರಮಾಣು ಅಸ್ತ್ರ ಕ್ಷಣಾರ್ಧದಲ್ಲಿ ಸೃಷ್ಟಿಸುವ ಶಾಖ, ವಿಶ್ವದ ಇತಿಹಾಸದಲ್ಲಿ ಸಾಂಪ್ರದಾಯಿಕ ಅಸ್ತ್ರಗಳು ಸೃಷ್ಟಿಸಿದ ಒಟ್ಟು ಶಾಖಕ್ಕಿಂತ ಹೆಚ್ಚಿಗೆ ಇರುವುದು! ಇಂಥ ಇನ್ನೂ ೨,೧೦,೦೦೦ ಪರಮಾಣು

ಅಸ್ತ್ರಗಳನ್ನು ತಯಾರಿಸುವಷ್ಟು ಸಂಪನ್ಮೂಲಗಳನ್ನು ಅಮೆರಿಕದಂಥ ಶ್ರೀಮಂತ ರಾಷ್ಟ್ರಗಳು ತಯಾರಿಸಿಟ್ಟಿವೆ. ಇದಲ್ಲದೆ ವಿಶ್ವದ ೬೪ ದೇಶಗಳಲ್ಲಿ ನೆಲಬಾಂಬುಗಳನ್ನು ಹುಗಿದಿಡಲಾಗಿದೆ. ಇದರಿಂದ ಪ್ರತಿವರ್ಷ ೨೫ ಸಾವಿರಕ್ಕೂ ಹೆಚ್ಚುಮಂದಿ ಸಾಯುತ್ತಾರೆ. ಅಷ್ಟೇ ಪ್ರಮಾಣದ ಜನ ಅಂಗವಿಕಲರಾಗುತ್ತಾರೆ. ಹೀಗೆ ನಾವು ಬೆಳೆಯ ಭೂಮಿಯಲ್ಲಿ ಪ್ರಳಯದ ಕಸ ತುಂಬಿದ್ದೇವೆ.

ಅಹಂಕಾರ ಅಳಿಸಿ ಸಮರ್ಪಣಾ ಭಾವ ಬೆಳೆಸುವುದು. ವೈಯಕ್ತಿಕವಾದುದನ್ನು ಸಾರ್ವತ್ರಿಕಗೊಳಿಸುವುದು ಬಸವಾದ್ವೈತ. ಅವುಗಳಲ್ಲಿ ಅಭೇದ್ಯ ಕಲ್ಪಿಸುವುದು. ಕನಿಷ್ಠ ಅವಶ್ಯಕತೆಗಳ ಜೊತೆ ಬದುಕುವುದು. ಸರಳ ಬದುಕಿಗೆ ವಿರುದ್ಧವಾದ ವಸ್ತುಗಳನ್ನು ತ್ಯಜಿಸುವುದು. ದೇಹ ಮತ್ತು ಮನಸ್ಸಿಗೆ ಒಳ್ಳೆಯದಲ್ಲದ ಹವ್ಯಾಸಗಳಿಂದ ಹೊರಬರುವುದು ಬಸವಣ್ಣನವರ ಪರ್ಯಾಯ ಸಮಾಜ ನಿರ್ಮಾಣಕ್ಕೆ ಅವಶ್ಯವಾಗಿದೆ.

ಪ್ರಜ್ಞಾ ಪ್ರಧಾನ ಸಮಾಜ...

ಬಸವಣ್ಣನವರ ಪ್ರಜ್ಞಾ ಪ್ರಧಾನ ಸಮಾಜದಲ್ಲಿ ಭವಿಯೂ ಭಕ್ತನಾಗುತ್ತಾನೆ. ಐಹಿಕ ಬದುಕಿಗೆ ಆತ್ಮಜ್ಞಾನದ ಧಾರೆ ಎರೆಯುತ್ತಾನೆ. ಮಾನಸಿಕವಾಗಿ ಇಡೀ ಸಮೂಹವೇ ತಾನಾಗುತ್ತಾನೆ. ಜಾತಿ ಮನೆಯಿಂದ ಮಹಾಮನೆಗೆ ಸಾಗುತ್ತಾನೆ. ಬಹುದೇವತೆಗಳನ್ನು ತೊರೆದು ಏಕದೇವೋಪಾಸಕನಾಗುತ್ತಾನೆ. ಸ್ಥಾವರಲಿಂಗದಿಂದ ಇಷ್ಟಲಿಂಗಕ್ಕೆ ಹೊರಳುತ್ತಾನೆ. ಹೆಂಡಿರು ಮಕ್ಕಳುಳ್ಳ ಶಿವನ ಸ್ಥಾನದಲ್ಲಿ ಅನಾದಿ, ಅನಂತ, ನಿರಾಕಾರ ಶಿವನ ಸ್ಥಾಪನೆ ಮಾಡುತ್ತಾನೆ. ಮಂದಿರಗಳನ್ನು ತೊರೆದು ಅನುಭವ ಮಂಟಪಕ್ಕೆ ಬರುತ್ತಾನೆ. ಕರ್ಮ ಸಿದ್ಧಾಂತ ಅಲ್ಲಗಳೆದು ಕಾಯಕ ಸಿದ್ಧಾಂತವನ್ನು ಸ್ವೀಕರಿಸುತ್ತಾನೆ. ದಾನಿ ಎನಿಸಿಕೊಳ್ಳುವ ಬದಲು ದಾಸೋಹಿ ಎನಿಸಿಕೊಳ್ಳುತ್ತಾನೆ. ರಾಜಪ್ರಭುತ್ವದ ಉಸಿರುಗಟ್ಟುವ ವಾತಾವರಣದಿಂದ ಹೊರಬಂದು ಪ್ರಜಾಪ್ರಭುತ್ವದ ಬಯಲಿನ ಕಡೆಗೆ ಸಾಗುತ್ತಾನೆ. ಒಳಗೆ ಸ್ಥಿತಪ್ರಜ್ಞನಾಗಿಯೂ ಹೊರಗೆ ಸ್ಥಿತಿಪ್ರಜ್ಞನಾಗಿಯೂ ಇರುತ್ತಾನೆ. ನಂಬಿಕೆ ಪ್ರಧಾನ ಸಮಾಜದಿಂದ ಪ್ರಜ್ಞಾ ಪ್ರಧಾನ ಸಮಾಜಕ್ಕೆ ಬಂದ ಕಾರಣ ಮಾತಿಲ್ಲದ ಸಮುದಾಯದ ಮಾತಾಗುತ್ತಾನೆ.

ಪರಿಪೂರ್ಣವಾಗಿ ಅಸಮಾನತೆಯ ವಿರೋಧಿಯಾಗಬೇಕೆ? ಕಾರ್ಮಿಕರು, ದಲಿತರು, ಮಹಿಳೆಯರು ಮತ್ತು ಮಕ್ಕಳ ಪರ ಆಗಬೇಕೆ? ಬಸವಮಾರ್ಗದಲ್ಲಿ ಮುನ್ನಡೆಯಿರಿ.

ಅಹಂಕಾರದಿಂದ ವಿಶ್ವ ನಾಶ. ದಯೆಯಿಂದ ವಿಶ್ವ ರಕ್ಷಣೆ. ಇದೇ ಬಸವಣ್ಣನವರು ಸಾರಿದ ಸತ್ಯ.

❖❖

೨೪

❖

ಶರಣರ ಸಮಗ್ರ ಕ್ರಾಂತಿ

ಮುತ್ಸದ್ದಿ ಬಸವಣ್ಣನವರು ರಾಜಕೀಯ ತತ್ತ್ವಜ್ಞಾನಿಯಾಗಿದ್ದರು. ಬಿಜ್ಜಳನ ಪ್ರಧಾನಿಯಾಗಿದ್ದ ಅವರು ಹಳೆಯ ಪ್ರಭುತ್ವ ವ್ಯವಸ್ಥೆಯಲ್ಲಿ ದುಡಿಯುವ ವರ್ಗಕ್ಕೆ ನ್ಯಾಯ ಒದಗಿಸುತ್ತಲೇ ಹೊಸ ತೆರನಾದ ಸಮತಾ ಸಿದ್ಧಾಂತದೊಂದಿಗೆ ಪ್ರಭುತ್ವ ನಿರಾಕರಣೆಯಿಂದ ಕೂಡಿದ ಅಹಿಂಸಾತ್ಮಕ ಚಳವಳಿಯನ್ನು ವಿಶ್ವದಲ್ಲೇ ಮೊದಲಬಾರಿಗೆ ಆರಂಭಿಸುವ ಮೂಲಕ ಹೊಸತೆರನಾದ ರಾಜನೀತಿಯ ಜನಕರಾದಾರು!

ಪ್ರಭುತ್ವವನ್ನು ಎದುರು ಹಾಕಿಕೊಳ್ಳದೆ ಜನಶಕ್ತಿಯನ್ನು ಒಂದುಗೂಡಿಸುತ್ತ, ದುಡಿಯುವ ವರ್ಗದ ನಾಯಕತ್ವದಲ್ಲಿ ಪರ್ಯಾಯವಾದ ಪರಿಪೂರ್ಣ ವ್ಯವಸ್ಥೆಯನ್ನು ರೂಪಿಸಲು ಬೇಕಾದ ಧಾರ್ಮಿಕ, ಸೈದ್ಧಾಂತಿಕ, ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಸಾಹಿತ್ಯಕ, ಕಲಾತ್ಮಕ, ಮನೋವಿಜ್ಞಾನಿಕ ಹಾಗೂ ವ್ಯಷ್ಟಿ ಮತ್ತು ಸಮಷ್ಟಿ ಜ್ಞಾನದಿಂದ ಕೂಡಿದ ವೈಜ್ಞಾನಿಕ ಮನೋಭಾವದ ಹೊಸ ಜಗತ್ತನ್ನು ಸೃಷ್ಟಿಸುವ ಕ್ರಮವನ್ನು ಕಂಡುಹಿಡಿದವರೇ ಬಸವಣ್ಣನವರು.

ಕಾಯಕನಿಷ್ಠೆ, ಪ್ರಸಾದ ಪ್ರಜ್ಞೆ, ದಾಸೋಹಂಭಾವ, 'ಶಿವನ ಸೊಮ್ಮು' ಎಂಬ ಸಾಮಾಜಿಕ ನಿಧಿ, ಗಣಶಕ್ತಿಯ ಮಹತ್ವವನ್ನು ಎತ್ತಿ ಹಿಡಿಯುವ ಸಮೂಹ ನಾಯಕತ್ವ, ಶರಣಸಂಕುಲ, ಒಳಗಿನ ಅರಿವು ಮೂಡಿಸುವ ಇಷ್ಟಲಿಂಗ ಮತ್ತು ಹೊರಗಿನ ಪ್ರಜ್ಞೆ ಮೂಡಿಸುವ ಜಂಗಮಲಿಂಗ, ಇವೆರಡೂ ಬೇರೆ ಅಲ್ಲ ಎಂಬ ಸಂಗಮತತ್ತ್ವ, ಈ ಎಲ್ಲವನ್ನೂ ಒಂದಾಗಿಸುವ ಪ್ರಕ್ರಿಯೆಯಿಂದ ಕೂಡಿದ ಲಿಂಗಜಂಗಮ ಮುಂತಾದ ಕಾರಣಗಳಿಂದಾಗಿ ಕನ್ನಡ ನಾಡಿನ ಬಸವಾದಿ ಶರಣರು ೧೨ನೇ ಶತಮಾನದಲ್ಲಿ ವಿಶ್ವದಲ್ಲೇ ವಿಶಿಷ್ಟವಾದ 'ಶರಣಸಂಕುಲ' ಎಂಬ ನವಮಾನವರ ಸಮಾಜವನ್ನು ನಿರ್ಮಿಸಿ ತೋರಿಸಿದ್ದಾರೆ. ಬಸವಣ್ಣನವರು ಬದುಕಿನ ಎಲ್ಲ ರಂಗಗಳಲ್ಲಿ ಕ್ರಾಂತಿ ಮಾಡುತ್ತ ವಿಶ್ವದ ಪ್ರಥಮ ಸಮಗ್ರಕ್ರಾಂತಿಪುರುಷರಾಗಿದ್ದಾರೆ ಎಂಬ ಅರಿವು ಮೂಡುವವರೆಗೂ ನಾವು ಈ ವೈಶಿಷ್ಟ್ಯವನ್ನು ಜಗತ್ತಿಗೆ ತಿಳಿಸಲಿಕ್ಕಾಗದು.

ಇಷ್ಟಲಿಂಗವು ನಮ್ಮೊಳಗಿನ ದೇವರ ಸಂಕೇತವಾಗಿದೆ. ಜಂಗಮಲಿಂಗವು ವಿಶ್ವ ಎಂಬ ದೇವರಾಗಿದೆ. ಇವೆರಡು ಕೂಡಿದ ನಂತರ ಸೃಷ್ಟಿಯಾಗುವುದೇ ಲಿಂಗತತ್ತ್ವ. ಈ ಲಿಂಗತತ್ತ್ವವೇ ಸಂಗಮತತ್ತ್ವ. ಈ ಒಂದುಗೂಡಿ ಬದುಕುವ ಸಮತಾತತ್ತ್ವವನ್ನೇ ಸರ್ವಶರಣರ ವಚನಗಳು ಸಾರುತ್ತಿವೆ. ಈ ಹಿನ್ನೆಲೆಯಲ್ಲಿ ಶರಣಸಂಕುಲ ಹೆಸರಿನ ಸಮತಾ ಸಮಾಜದ ನಿರ್ಮಾಣವಾಯಿತು.

'ಜಂಗಮಲಿಂಗ' ಎಂಬುದು ಪರಮಾತ್ಮ ಎಂಬ ಅನಾದಿ ಶಕ್ತಿಯಿಂದ ನಿರ್ಮಾಣವಾಗಿ 'ಇಡೀ ವಿಶ್ವವೇ ದೇವರು' ಎಂಬ ಪರಿಕಲ್ಪನೆ ಮೂಡಿಸುವಂಥದ್ದು. ಆದರೆ 'ಲಿಂಗಜಂಗಮ' ಎಂಬುದು ಬಸವಣ್ಣನವರು ಸೃಷ್ಟಿಸಿದ ಸಮತಾತತ್ತ್ವದಿಂದ ಕೂಡಿದ ಸಮಾಜವಾಗಿದೆ. ಅದುವೆ ಶರಣಸಂಕುಲ. ಲಿಂಗತತ್ತ್ವವೇ ಸಮತಾತತ್ತ್ವ. ಶರಣತತ್ತ್ವ, ಬಸವತತ್ತ್ವ ಮತ್ತು ವಚನತತ್ತ್ವ ಎಂಬುವು ಸಮತಾತತ್ತ್ವವೇ ಆಗಿವೆ.

ಶರಣರು ಬಿಜ್ಜಳನ ಆಡಳಿತಕ್ಕೆ ಚ್ಯುತಿ ಬರದಂತೆ ನಡೆದುಕೊಂಡರು. ಅವರ ಕಾಯಕ ಪ್ರಜ್ಞೆಯಿಂದಾಗಿ ಬಿಜ್ಜಳನ ಬೊಕ್ಕಸ ತುಂಬಿ ತುಳುಕಿತು. ಬಸವಣ್ಣನವರ ಮುತ್ಸದ್ದಿತನದಿಂದಾಗಿ ಯುದ್ಧದ ಸಮಸ್ಯೆಗಳಿಂದ ಪಾರಾದ ಬಿಜ್ಜಳನ ಕಲ್ಯಾಣ ರಾಜ್ಯ ಸುಭಿಕ್ಷೆಯ ತಾಣವಾಯಿತು. ಬಸವಣ್ಣನವರ ಅನುಯಾಯಿಗಳಾಗಿದ್ದ ಕಾಯಕಜೀವಿಗಳೆಲ್ಲ ಕೊಡುವುದರಲ್ಲಿ ಸಂತೋಷ ಪಡುತ್ತಿದ್ದರು. 'ಕಲ್ಯಾಣದಲ್ಲಿ ಕೊಡುವವರುಂಟು ಬೇಡುವವರಿಲ್ಲ' ಎಂಬ ವಾತಾವರಣ ಸೃಷ್ಟಿಯಾಯಿತು.

ಬಸವಣ್ಣನವರ ಮುತ್ಸದ್ದಿತನದಿಂದಾಗಿ ಕಲ್ಯಾಣ ರಾಜ್ಯ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸಿದ್ದರೂ ರಾಜಪ್ರಭುತ್ವದ ಬಗೆಗಿನ ಶರಣರ ಅನಾಸಕ್ತಿ, ಶರಣಸಂಕುಲದಲ್ಲಿನ ಸಮೂಹ ಪ್ರಜ್ಞೆಯ ಸ್ವತಂತ್ರ ಬದುಕು ಮತ್ತು ಕಲ್ಯಾಣರಾಜ್ಯದ ಜನಸಮುದಾಯ ಬಸವಣ್ಣನವರ ಸಾತ್ವಿಕ ವ್ಯಕ್ತಿತ್ವದ ಬಗ್ಗೆ ಇಟ್ಟುಕೊಂಡ ಅಭಿಮಾನದಿಂದಾಗಿ ಬಿಜ್ಜಳನ ಪ್ರಭುತ್ವದ ಬಗ್ಗೆ ಉದಾಸೀನ ಭಾವ ಮೂಡಿಸುವಂಥ ವಾತಾವರಣ ಸೃಷ್ಟಿಯಾಯಿತು. ಬಿಜ್ಜಳನ ಪ್ರಭುತ್ವದ ಭಾಗವೇ ಆಗಿದ್ದ ಪ್ರಧಾನಿ ಬಸವಣ್ಣನವರು ರಾಜಪ್ರಭುತ್ವದ ಜೊತೆ ಸಂಬಂಧವಿಟ್ಟುಕೊಳ್ಳದ ಶರಣಸಂಕುಲವನ್ನೇಕೆ ಸ್ಥಾಪಿಸಿದರು? ಎಂಬದು ಗಮನಾರ್ಹವಾಗಿದೆ.

ಬಸವಣ್ಣನವರ ಜನಪರ ಕ್ರಿಯಾಶಕ್ತಿಯಿಂದಾಗಿ ಅಸಹನೆಯಿಂದ ಕುದಿಯುತ್ತಿದ್ದ ಪಟ್ಟಭದ್ರ ಹಿತಾಸಕ್ತಿಗಳಾದ ಪುರೋಹಿತಶಾಹಿಗಳು ಬಿಜ್ಜಳನ ದಿಕ್ಕು ತಪ್ಪಿಸುವಲ್ಲಿ ನಿರತರಾದರು. ಬಸವಣ್ಣನವರ ಸಾಧನೆಗಳೆಲ್ಲ ರಾಜಪ್ರಭುತ್ವದ ಮಹತ್ವದ ಬಗ್ಗೆ ಉದಾಸೀನ ತಾಳುವಂಥ ಮನಸ್ಸುಗಳನ್ನು ರೂಪಿಸುವಲ್ಲಿ ಯಶಸ್ಸನ್ನು ಸಾಧಿಸುವ ಶಕ್ತಿಯನ್ನು ಹೊಂದಿವೆ ಎಂಬ ವಾದವನ್ನು ಪುರೋಹಿತಶಾಹಿಗಳು ಬಿಜ್ಜಳನ ಮುಂದಿಟ್ಟರು. ಈ ಬೆಳವಣಿಗೆಯ ಅಂತಿಮ ಘಟ್ಟದಲ್ಲಿ ದೇಶದಲ್ಲಿನ ರಾಜಪ್ರಭುತ್ವ

ಮತ್ತು ಸಮಾಜದಲ್ಲಿನ ವೈದಿಕ ಪ್ರಭುತ್ವ ನಿರ್ನಾಮವಾಗುವುದು ಎಂಬುದನ್ನು ಬಿಜ್ಜಳನಿಗೆ ಮನವರಿಕೆ ಮಾಡಿಕೊಟ್ಟರು. ಬಿಜ್ಜಳನ ಮನದಲ್ಲಿ ಗೊಂದಲ ಸೃಷ್ಟಿಸುವಲ್ಲಿ ಯಶಸ್ವಿಯಾದರು. ಬಸವಣ್ಣನವರು ಸಾಧಿಸಿದ ಭೌತಿಕ ಅಭಿವೃದ್ಧಿ ಬಿಜ್ಜಳನ ಪ್ರಭುತ್ವಕ್ಕೆ ಪೂರಕವಾಗಿದ್ದರೂ ಸೈದ್ಧಾಂತಿಕ ಬೆಳವಣಿಗೆ ರಾಜಪ್ರಭುತ್ವದ ನಿರಾಕರಣೆಯಾಗಿತ್ತು ಮತ್ತು ಪ್ರಜಾಪ್ರಭುತ್ವದ ಸೂಚನೆಯಾಗಿತ್ತು. ಪ್ರಭುತ್ವದ ವಿರುದ್ಧ ಯುದ್ಧ ಸಾರದೆ ಅದನ್ನು ಸೋಲಿಸುವ ವಿನೂತನ ವಿಧಾನವನ್ನು ಬಸವಣ್ಣನವರು ಕಂಡುಹಿಡಿದಿದ್ದರು. ಬದುಕಿನ ಪ್ರತಿಯೊಂದು ರಂಗದಲ್ಲಿ ವಿಕಸನ ಹೊಂದುವುದರ ಮೂಲಕ ಪರಿಮಾಣಾತ್ಮಕ ಬದಲಾವಣೆಯನ್ನು ಸಾಧಿಸುತ್ತ ಕೊನೆಯಲ್ಲಿ ಗುಣಾತ್ಮಕ ಬದಲಾವಣೆಯೊಂದಿಗೆ ಹೊಸ ಸಮಾಜವನ್ನು ಸೃಷ್ಟಿಸುವುದೇ ಬಸವಣ್ಣನವರ ವಿನೂತನ ಕ್ರಾಂತಿಯ ಉದ್ದೇಶವಾಗಿತ್ತು.

ಬಸವಣ್ಣನವರು ಜನಸಮುದಾಯವನ್ನು ವೇದಾಗಮ, ರಾಮಾಯಣ, ಮಹಾಭಾರತ, ಭಗವದ್ಗೀತೆ, ಪುರಾಣ ಮತ್ತು ಮನುಸ್ಮೃತಿಯ ಗುಂಗಿನಿಂದ ಹೊರತಂದರು. 'ಆನು ಹಾರುವನೆಂದರೆ ಕೂಡಲಸಂಗಮ ನಗುವನಯ್ಯಾ' ಎಂದು ತಿಳಿಸಿದ ಬಸವಣ್ಣನವರು ಜಾತಿಗಳ ಹೆಸರಿನಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಗುರುತಿಸಿದರು. ಜಾತಿಗಳೊಳಗಿನ ಕಾಯಕದ ಮಹತ್ವವನ್ನು ಗುರುತಿಸುತ್ತಲೇ ಜಾತಿವಿನಾಶ ಚಳವಳಿ ಆರಂಭಿಸಿದರು. ಜಾತಿ ಮತ್ತು ವರ್ಗಗಳಲ್ಲಿನ ಒಳಸಂಬಂಧಗಳನ್ನು ಕಂಡುಕೊಳ್ಳುವ ಮೂಲಕ ವರ್ಗವಿನಾಶದ ರೂಪುರೇಷೆಗಳನ್ನು ಸಿದ್ಧಪಡಿಸಿದರು. ಬಡವರು, ಕೆಳಜಾತಿಯವರು ಮತ್ತು ಹೆಣ್ಣುಮಕ್ಕಳು ಹೊಸ ಸಮಾಜವನ್ನು ನಿರ್ಮಿಸಬಲ್ಲರು ಎಂಬುದರ ಬಗ್ಗೆ ಅವರಿಗೆ ಅಚಲವಾದ ನಂಬಿಕೆ ಇತ್ತು. ಜನಶಕ್ತಿಯ ಮಹತ್ವವನ್ನು ಅರಿತಿದ್ದ ಅವರು 'ಊರ ಮುಂದೆ ಹಾಲ ಹಳ್ಳ ಹರಿಯುತ್ತಿರಲು ಬಿಜ್ಜಳನ ಭಂಡಾರವೇಕೆ?' ಎಂದು ಪ್ರಶ್ನಿಸಿದರು. ತಮ್ಮ ಪ್ರಧಾನಮಂತ್ರಿ ಪದವಿಯನ್ನು 'ನಾಯಿತೇಜ' ಎಂದು ಕರೆದರು. 'ಹೊಲೆಯ ಹೊಲಬಿಗನಾದಡೆ ಅವನ ಹೊರೆಯಲಿಪ್ಪುದು ಲೇಸು' ಎಂದು ಹೇಳುತ್ತ ಬದುಕಿನ ಮಾರ್ಗ ತೋರಿಸುವವರೇ ಮುಖ್ಯರು ಎಂಬುದನ್ನು ಪ್ರತಿಪಾದಿಸಿದರು. 'ಆಸೆಯೆಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ' ಎಂದು ಬಡ ಆಯ್ದಕ್ಕಿ ಲಕ್ಕಮ್ಮನಂಥ ದೃಢನಿರ್ಧಾರದ ಶರಣೆಯರು ಮತ್ತು ಶರಣರು ಸಾರಿ ಹೇಳುವಂಥ ವಾತಾವರಣ ಸೃಷ್ಟಿಸಿದರು. ತುಳಿತಕ್ಕೊಳಗಾದ ಜೀವಗಳು ಅನುಭವದ ಮೂಲಕ ಗಟ್ಟಿ ಜೀವಗಳಾಗಿದ್ದು. ಆ ಅನುಭವದ ಮೂಲಕವೇ ಅನುಭಾವದ ಅರಿವಾಗುವುದು ಎಂಬುದನ್ನು ಬಸವಣ್ಣನವರು ಬಹುಬೇಗ ಕಂಡುಕೊಂಡರು.

ಬಸವಣ್ಣನವರು ಜಾತಿಯ ಸಂಕೋಲೆಗಳನ್ನು ಕಳಚಿದ ರೀತಿ ವಿಶಿಷ್ಟವಾಗಿದೆ. ಅವರು ಜಾತಿಸೂಚಕ ಪದಗಳನ್ನು ಕಾಯಕ ಸೂಚಕ ಪದಗಳಾಗಿ ಮಾರ್ಪಡಿಸಿದರು.

ಕಾಯಕಕ್ಕೆ ಅಂಟಿದ್ದ ಜಾತಿಯ ವಿಷವನ್ನು ತೆಗೆದು ಹಾಕಿದರು. ಕಾಯಕಗಳ ಮಧ್ಯೆ ಇದ್ದ ಮೇಲು ಕೀಳು ಭಾವನೆಯನ್ನು ಹೊಡೆದು ಹಾಕಿದರು. ಪ್ರಧಾನಿ ಕಾಯಕ ದೊಡ್ಡದಲ್ಲ, ಸಮಗಾರ ಕಾಯಕ ಸಣ್ಣದಲ್ಲ ಎಂಬುದನ್ನು 'ಶರಣು' ಎಂದು ಹೇಳಿದ ಸಮಗಾರ ಹರಳಯ್ಯನವರಿಗೆ ಬಾಗಿದ ಶಿರ ಮತ್ತು ಮುಗಿದ ಕೈಗಳೊಂದಿಗೆ 'ಶರಣು ಶರಣಾರ್ಥಿ' ಎಂದು ಹೇಳುವ ಮೂಲಕ ಸೂಚಿಸಿದರು. ಜನರನ್ನು ಒಂದೂಗೂಡಿಸುವುದು ಆರ್ಥಿಕ ಸಮಾನತೆಯಿಂದ ಕೂಡಿದ ನಿರ್ಜಾತಿ ವ್ಯವಸ್ಥೆಯಿಂದ ಮಾತ್ರ ಎಂಬುದು ಬಸವಣ್ಣನವರಿಗೆ ಮನವರಿಕೆಯಾಗಿತ್ತು. ಸಾಂಪ್ರದಾಯಕವಾಗಿ ಬಂದ ಜಾತಿ ವ್ಯವಸ್ಥೆಯೊಳಗಿನ ರಕ್ತ ಸಂಬಂಧವನ್ನು 'ನಂಟುಭಕ್ತಿ ನಾಯಕ ನರಕ' ಎಂದು ಟೀಕಿಸುವ ಮೂಲಕ ಅಲ್ಲಗಳೆದರು. ಸರ್ವಸಮತ್ವ ಪ್ರಜ್ಞೆಯಿಂದ ಕೂಡಿದ ಇಷ್ಟಲಿಂಗ ಭಕ್ತಿಯ ಮೂಲಕ ಶರಣಸಂಕುಲದಲ್ಲಿ ಭಕ್ತಿಸಂಬಂಧವನ್ನು ಬೆಸೆಯುವಲ್ಲಿ ಯಶಸ್ಸನ್ನು ಸಾಧಿಸಿದರು. ಇದು ಜಾತಿವಿನಾಶ ಮತ್ತು ವರ್ಗವಿನಾಶ ಮಾಡುವ ಸಾಮಾಜಿಕ ಸಂಬಂಧಕ್ಕೆ ನಾಂದಿಯಾಯಿತು. ಮನುವಾದಿ ವ್ಯವಸ್ಥೆಯಲ್ಲಿ ಮೇಲ್ವರ್ಗ ಮತ್ತು ಮೇಲ್ಜಾತಿ ಬ್ರಾಹ್ಮಣರಾಗಿದ್ದ ಮಂತ್ರಿ ಮಧುವರಸರು ಮತ್ತು ಕೆಳಜಾತಿ, ಕೆಳವರ್ಗದರಾಗಿದ್ದ ಸಮಗಾರ ಹರಳಯ್ಯನವರು ಇಷ್ಟಲಿಂಗವನ್ನು ಧರಿಸುವ ಮೂಲಕ ಶರಣ ಸಂಕುಲದಲ್ಲಿ ಜಾತಿ ಮತ್ತು ವರ್ಗರಹಿತವಾಗಿ ಸಮತೆಯ ಬದುಕನ್ನು ಪಡೆದರು. ಶರಣಧರ್ಮದ ಈ ಸಮಾನತೆಯ ಕಾರಣದಿಂದಲೇ ಮಧುವರಸರ ಮಗಳು ಲಾವಣ್ಯ ಮತ್ತು ಹರಳಯ್ಯನವರ ಮಗ ಶೀಲವಂತರ ವಿವಾಹ ಏರ್ಪಡಲು ಸಾಧ್ಯವಾಯಿತು. ಆದರೆ ಮನುಧರ್ಮಕ್ಕೆ ವಿರುದ್ಧವಾದ ಈ ವಿಲೋಮ ಪದ್ಧತಿಯ ಈ ಮದುವೆ ಪುರೋಹಿತಶಾಹಿಗಳಿಗೆ ನುಂಗಲಾರದ ತುತ್ತಾಯಿತು. ಇದಕ್ಕೂ ಮೊದಲು ಕೆಳವರ್ಗದ ನಟುವರ ಜನಾಂಗದ ಅಲ್ಲಮಪ್ರಭುಗಳನ್ನು ಬಸವಣ್ಣನವರು ಅನುಭವ ಮಂಪಟದ ಶೂನ್ಯಸಿಂಹಾಸನದ ಮೇಲೆ ಕೂಡಿಸಿದ್ದೇ ಪುರೋಹಿತಶಾಹಿಗಳ ದೃಷ್ಟಿಯಲ್ಲಿ ಪ್ರಮಾದವಾಗಿತ್ತು. ಬಸವಣ್ಣನವರ ಆ ನಿರ್ಧಾರ ವೈದಿಕರ ಅಸ್ತಿತ್ವವನ್ನೇ ಅಲುಗಾಡಿಸಿತ್ತು. ಅದಾಗಲೇ ಅವರ ಮನುಧರ್ಮ ಸಿಂಹಾಸನ ಕುಸಿಯತೊಡಗಿತ್ತು. ಆದರೆ ಪುರೋಹಿತಶಾಹಿಗಳು 'ರಾಜಸಿಂಹಾಸನ ಕುಸಿಯುತ್ತಿದೆ' ಎಂದು ಗುಲ್ಲೆಬ್ಬಿಸಿದರು. ಅರಮನೆಯಲ್ಲಿ ಬಿಜ್ಜಳ, ತಮ್ಮ ಕರ್ಣದೇವ ಮತ್ತು ಮಗ ರಾಯಮುರಾರಿ ಸೋವಿದೇವರ ಮಧ್ಯೆ ಅಪನಂಬಿಕೆ ಹುಟ್ಟುವಂತೆ ಮಾಡಿದರು. ಹರಳಯ್ಯ ಮಧುವರಸರ ಮಕ್ಕಳ ಮದುವೆಯ ಸಂದರ್ಭದಲ್ಲಿ ಈ ಅಪನಂಬಿಕೆ ತಾರಕಕ್ಕೇರಿತು. ಬಿಜ್ಜಳ ಈ ಸಂದರ್ಭದಲ್ಲಿ ಮಂತ್ರಿಮಂಡಲದ ತುಂಬ ಇದ್ದ ಮನುವಾದಿ ಪುರೋಹಿತರ ಒತ್ತಡಕ್ಕೆ ಮಣಿದಿದ್ದ. ಹೀಗೆ ಪುರೋಹಿತಶಾಹಿ ಹಿಡಿತಕ್ಕೆ ರಾಜಶಾಹಿ ಒಳಗಾಯಿತು. ಈ ಸಂದರ್ಭದ ಲಾಭ ಪಡೆದ ಮನುವಾದಿಗಳು ಜಗದೇವ ಮಲ್ಲಿಬೊಮ್ಮರಿಂದ ಬಿಜ್ಜಳನ

ಕೊಲೆಯಾಗುವಂಥ ಷಡ್ಯಂತ್ರ ಹೂಡಿದರು. ಸೋವಿದೇವನಿಗೆ ಇದೆಲ್ಲದರ ಅರಿವಿದ್ದರೂ ಮನುವಾದಿಗಳು ಸಿಂಹಾಸನದ ಆಸೆ ಹಚ್ಚಿದ್ದರಿಂದ ಕಂಡೂ ಕಾಣದ ಹಾಗೆ ಇದ್ದ. ಮನುವಾದಿಗಳು ಶರಣರ ಮೇಲೆ ಬಿಜ್ಜಳನ ಕೊಲೆಯ ಆರೋಪ ಹೊರಿಸಿದರು. ಉರಿಯುವ ಬೆಂಕಿಯ ಮೇಲೆ ತುಪ್ಪವನ್ನು ಚೆಲ್ಲುತ್ತಲೇ ಇದ್ದರು. ಅಂತೂ ಸೋವಿದೇವನನ್ನು ಸಿಂಹಾಸನದ ಮೇಲೆ ಕೂಡಿಸಿದರು. ಮನುವಾದಿಗಳು ಹೇಳಿದಂತೆ ಸೈನಿಕರು ಕೇಳುವ ಸ್ಥಿತಿ ತಲುಪಿತು. ಶರಣರ ಕೊಲೆ ಸುಲಿಗೆ ಮಾಡುವ ಮತ್ತು ಅವರ ವಚನಕಟ್ಟುಗಳನ್ನು ಸುಡುವ ಕೃತ್ಯಗಳು ಮುಂದುವರಿದಿದ್ದವು. ಅಳಿದುಳಿದ ಶರಣರು ಚೆಲ್ಲಾಪಿಲ್ಲಿಯಾಗಿ ದಿಕ್ಕುದೆಸೆಯಿಲ್ಲದೆ ಕಲ್ಯಾಣ ಬಿಟ್ಟು ಹೋಗುವಂತಾಯಿತು. ಅಕ್ಕ ನಾಗಮ್ಮ, ಚೆನ್ನಬಸವಣ್ಣ, ಮಡಿವಾಳ ಮಾಚಿದೇವ, ಕಿನ್ನರಿ ಬ್ರಹ್ಮಯ್ಯ, ನುಲಿಯ ಚೆಂದಯ್ಯ, ಡೋಹರ ಕಕ್ಕಯ್ಯ, ಗಂಗಾಂಬಿಕೆ ಮುಂತಾದ ಶರಣರ ಮುಂದಾಳತ್ವದಲ್ಲಿ ಶರಣರ ಗುಂಪೊಂದು ಬೆಂಕಿಗಾಹುತಿಯಾಗದೆ ಉಳಿದ ವಚನಕಟ್ಟುಗಳ ರಕ್ಷಣೆಗಾಗಿ ಉಳವಿಯ ಕಡೆಗೆ ಸಾಗಿತು.

ಶರಣರ ಸಮಗ್ರ ಕ್ರಾಂತಿಯ ಪ್ರಕ್ರಿಯೆಯನ್ನು ಪಟ್ಟಭದ್ರ ಶಕ್ತಿಗಳು ಹಾಳುಮಾಡಿದ್ದನ್ನೇ ಮುಂದಿನ ಶತಮಾನಗಳ ಲಿಂಗಾಯತರು 'ಕಲ್ಯಾಣಕ್ರಾಂತಿ' ಎಂದು ರಮ್ಯವಾಗಿ ಭ್ರಮಿಸಿದರು. ಆ ಮೂಲಕ ಶರಣರ ತ್ಯಾಗ ಬಲಿದಾನಗಳನ್ನು ಮರೆತರು. ಅಕ್ಷರಜ್ಞಾನ ಪಡೆದಂತೆಲ್ಲ ಶರಣ ಶರಣೆಯರನ್ನು ಬಾಯಿಮಾತಿನಲ್ಲಿ ವೈಭವೀಕರಿಸುತ್ತ ತಮ್ಮ ಮಕ್ಕಳಿಗೆ ಅವರ ನೆನಪಿಗಾಗಿ ಹೆಸರಿಡುವುದನ್ನೂ ಮರೆತರು. ಮಾನವಕುಲದ ಏಳ್ಗೆಗಾಗಿ ಬಸವಣ್ಣನವರು ಕನಸು ಕಂಡ ಜಾತಿ ಮತ್ತು ವರ್ಗ ತಾರತಮ್ಯಗಳಿಂದ ಮುಕ್ತವಾದ ಹೊಸಜಗತ್ತಿನ ನಿರ್ಮಾಣದ ಚಳವಳಿಯಲ್ಲಿ ಹುತಾತ್ಮರಾದ ಹರಳಯ್ಯ ಮತ್ತು ಮಧುವರಸರ ಹೆಸರನ್ನು ಕಳೆದ ೮೦೦ ವರ್ಷಗಳ ಅವಧಿಯಲ್ಲಿ ಯಾವುದೇ ಲಿಂಗಾಯತ ಮನೆತನದಲ್ಲಿ ಕಾಣುವುದಿಲ್ಲ! ಚೆಂದಯ್ಯ, ಬೊಮ್ಮಯ್ಯ, ಕಕ್ಕಯ್ಯ, ಚೆನ್ನಯ್ಯ, ಧೂಳಯ್ಯ, ನಾಗಿದೇವ, ಚಂದಿಮರಸ, ಮಾರಯ್ಯ, ದಾಸಿಮಯ್ಯ, ಚೌಡಯ್ಯ, ಮಸಣಯ್ಯ, ಉರಿಲಿಂಗಪೆದ್ದಿ, ಮಾಚಿದೇವ, ಬಾಚರಸ, ರೇಕಣ್ಣ, ಗೊಗ್ಗವ್ವೆ, ಕೇತಲದೇವಿ, ದುಗ್ಗಳೆ, ಬೊಂತಾದೇವಿ, ಕಾಳವ್ವೆ, ಲಕ್ಕಮ್ಮ, ಸಂಕವ್ವೆ ಮುಂತಾದ ಶರಣ ಶರಣೆಯರ ಹೆಸರುಗಳು ಕೂಡ ಯಾವುದೇ ಲಿಂಗಾಯತ ಮನೆತನದಲ್ಲಿ ಕಾಣಬರುವುದಿಲ್ಲ.

ಲಿಂಗಾಯತರು ತಮ್ಮ ತ್ಯಾಗ ಮತ್ತು ಧೀರ ಪರಂಪರೆಯ ಅರಿವು ಇಲ್ಲದ್ದಕ್ಕೆ ಹರಳಯ್ಯ-ಮಧುವರಸರಿಗೆ ಎಳೆಹೂಟೆ ಶಿಕ್ಷೆಯ ಹಿಂದಿರುವ ರಾಜ್ಯಶಕ್ತಿ ಮತ್ತು ವೈದಿಕಶಕ್ತಿಯ ಕ್ರೌರ್ಯವನ್ನು ಮರೆತದ್ದೇ ಸಾಕ್ಷಿ. (೧೫೦೦ ವರ್ಷಗಳಷ್ಟು ಹಿಂದೆ ಸತ್ಯಕ್ಕಾಗಿ ಹುತಾತ್ಮರಾದ ಪ್ರವಾದಿ ಮುಹಮ್ಮದ ಪೈಗಂಬರರ ಮೊಮ್ಮಗ ಹುಸೇನ ಅವರ ಹೆಸರನ್ನಿಡದ ಒಂದು ಮುಸ್ಲಿಂ ಮನೆತನ ಕೂಡ ಜಗತ್ತಿನಲ್ಲಿಲ್ಲ!) ಲಿಂಗಾಯತರು

ಕಳೆದ ೬ ಶತಮಾನಗಳ ಅವಧಿಯಲ್ಲಿ ಕೆಳವರ್ಗದಿಂದ ಮೇಲ್ವರ್ಗ ಮತ್ತು ಮೇಲ್ಜಾತಿಯ ಗುಣಗಳನ್ನು ರೂಢಿಸಿಕೊಳ್ಳುತ್ತ ಬೆಳೆದರು. ವಿಜಯನಗರದಲ್ಲಿ ರಾಜಾಶ್ರಯ ಸಿಕ್ಕ ನಂತರ ತಾವು 'ಲಿಂಗೀಬ್ರಾಹ್ಮಣರು' ಎಂಬ ಭ್ರಮೆಗೆ ಒಳಗಾದರು. ಮೇಲ್ಜಾತಿ ಮತ್ತು ಮೇಲ್ವರ್ಗದ ದಾರಿ ಹಿಡಿದು ಆಚಾರ್ಯ ಸಂಪ್ರದಾಯಕ್ಕೆ ಬಲಿಯಾದರು. ೧೨ನೇ ಶತಮಾನದ ಶರಣರ ಧೀರೋದಾತ್ತ ಗುಣಗಳನ್ನು ಮರೆಮಾಚುತ್ತ ಧಾರ್ಮಿಕ ವಿಧಿವಿಧಾನಗಳಲ್ಲೇ ಅವರನ್ನು ಅರ್ಥೈಸತೊಡಗಿದರು. ಮೇಲ್ವರ್ಗದ ಲಿಂಗಾಯತರು ವೈದಿಕರು ಸೃಷ್ಟಿಸಿದ ಅಧ್ಯಾತ್ಮವೆಂಬ ಭ್ರಮೆಯ ಲೋಕಕ್ಕೇ ಜೋತುಬಿದ್ದು ಶರಣರ ಅನುಭಾವ ಮತ್ತು ಆ ಅನುಭಾವದ ನೆಲೆಯಾದ ಅನುಭವವನ್ನೇ ಮರೆತರು. 'ನಡೆದಾಡುವ ದೇವರುಗಳು' ಅವರ ಬೆಂಬಲಿಗೆ ನಿಂತರು. 'ಭಗವದ್ಗೀತೆ ಜಗತ್ತಿನ ಶ್ರೇಷ್ಠಗ್ರಂಥ' ಎಂದು ಮಾಯಾಭ್ರಾಂತಿ ಕವಿದ ಗೀತಜ್ಞರು ಪ್ರತಿಪಾದಿಸಿದಾಗ ಅದನ್ನೇ ನಿಜ ಎಂದು ಭಾವಿಸಿದರು. ಇಷ್ಟಲಿಂಗದ ವಿರಾಟದರ್ಶನವನ್ನು ಅರ್ಥೈಸಿಕೊಳ್ಳಲಿಕ್ಕಾಗದೆ ಹೋದರು. ಅದರ ಸಮಷ್ಟಿರೂಪವನ್ನು ವ್ಯಷ್ಟಿಗೆ ಇಳಿಸುತ್ತ ಶ್ರದ್ಧೆಯಿಂದಲೇ ಇಷ್ಟಲಿಂಗಪೂಜಾನಿರತರಾಗುತ್ತ ಸಮಷ್ಟಿಯ ಅರಿವಿಲ್ಲದೆ ಲಿಂಗಾಂಗಸಾಮರಸ್ಯವನ್ನು ಸಾಧಿಸಿದೆವು ಎಂದು ಅನೇಕ ಅಣ್ಣಗಳು, ಅಕ್ಕಗಳು, ಅಪ್ಪಗಳು ಭಾವಿಸಿದರು. ಬಸವಣ್ಣನವರ ಹೆಸರಿನಲ್ಲಿ ಸಮಿತಿಗಳನ್ನು, ಪ್ರತಿಷ್ಠಾನಗಳನ್ನು ಮತ್ತು ಆಶ್ರಮಗಳನ್ನು ಕಟ್ಟಿಕೊಳ್ಳುತ್ತ ಶರಣರ ಪ್ರಖರ ವೈಚಾರಿಕತೆಯನ್ನು ಮರೆತು ವೈದಿಕದ ರೀತಿಯಲ್ಲೇ ಕರ್ಮಸಿದ್ಧಾಂತ, ಪುನರ್ಜನ್ಮ, ಸ್ವರ್ಗ, ನರಕ, ಪುಣ್ಯ, ಪಾಪ, ಶಾಪ, ಮೋಕ್ಷಗಳನ್ನು ನಂಬುತ್ತ ಮೂಢನಂಬಿಕೆಗಳೊಂದಿಗೆ ಬದುಕುವ ಪರಿ ಹೇಸಿಗೆ ಹುಟ್ಟಿಸುವಂಥದ್ದು. ಲಿಂಗಾಂಗಸಾಮರಸ್ಯ ಸೂಚಿಸುವ ಚೈತನ್ಯ ಮತ್ತು ವಸ್ತುವಿನ ಸಮರಸದ ರಹಸ್ಯವನ್ನು ಅರಿಯದೆ ಹೋದ ಇವರು ವೈದಿಕರ ರಾಜಕೀಯ ಸಿದ್ಧಾಂತವನ್ನೂ ಪುರಸ್ಕರಿಸಿದರು. ಶರಣರ ಹತ್ಯೆ ಮಾಡಿದ ವೈದಿಕಶಕ್ತಿಗಳು ಬಸವನಾಡಾದ ಕನ್ನಡ ನಾಡಿನಲ್ಲಿ ರಾಜಕೀಯ ಸೂತ್ರ ಹಿಡಿಯುವಂಥ ಸ್ಥಿತಿಯನ್ನು ಇಂಥವರೆಲ್ಲ ಸೇರಿ ಸೃಷ್ಟಿ ಮಾಡಿದರು. ಏತನ್ಮಧ್ಯೆ ಲಿಂಗಾಯತ ಮತ್ತು ವೀರಶೈವದ ಗೊಂದಲಕ್ಕೆ ಒಳಗಾದರು. ಗುರು ವಿರಕ್ತರ ಮಧ್ಯೆ ಶೀತಲಸಮರವಂತೂ ಮುಂದುವರಿಯುತ್ತ ಬಸವ ಪ್ರಣೀತ ಲಿಂಗಾಯತ ಮತ್ತು ಪಂಚಾಚಾರ್ಯ ಪ್ರಣೀತ ವೀರಶೈವ ಎಂಬಲ್ಲಿಗೆ ಬಂದು ನಿಂತಿತು. ಲಿಂಗಾಯತ ಮತ್ತು ವೀರಶೈವ ಬೇರೆ ಅಲ್ಲ ಎಂದು ಪಂಚಾಚಾರ್ಯರು ಪ್ರತಿಪಾದಿಸಿದರೆ ಬಹುಪಾಲು ವಿರಕ್ತರು ಲಿಂಗಾಯತರಿಗೆ ಬಸವಣ್ಣನವರೇ ಧರ್ಮಗುರು; ವಚನಗಳೇ ಧರ್ಮಗ್ರಂಥ ಎಂದು ವಾದಿಸುವರು. ಆದಿರೇಣುಕರೇ ಧರ್ಮಗುರು ಮತ್ತು ಸಿದ್ಧಾಂತ ಶಿಖಾಮಣಿಯೇ ಧರ್ಮಗ್ರಂಥ. ಬಸವಣ್ಣ ಧರ್ಮಸ್ಥಾಪಕರಲ್ಲ, ವೀರಶೈವ ಧರ್ಮ ಸುಧಾರಕರು. ಲಿಂಗಾಯತರು ಮತ್ತು ವೀರಶೈವ ಪದಗಳು ಒಂದೇ ಧರ್ಮದ ಎರಡು ಹೆಸರುಗಳು.

ಅವುಗಳ ಮಧ್ಯೆ ಕಲ್ಪಿತ ಭೇದ ಬೇಡ ಎಂಬುದು ಪಂಚಾಚಾರ್ಯರ ವಾದವಾಗಿದೆ. ಬಸವಣ್ಣ ಸೃಷ್ಟಿಸಿದ ಇಷ್ಟಲಿಂಗ ಕಟ್ಟಿಕೊಂಡು ಹೀಗೆ ಹೇಳುವುದು ಸರಿಯಲ್ಲ ಎಂಬುದು ಲಿಂಗಾಯತರ ವಾದವಾಗಿದೆ. ಸಿದ್ಧಾಂತ ಶಿಖಾಮಣಿ ಗ್ರಂಥವು ೧೭ನೇ ಶತಮಾನದ ವಚನಗಳ ನಂತರ ಸೃಷ್ಟಿಯಾದುದು ಸಂಶೋಧನೆಯಿಂದ ಸಾಬೀತಾಗಿದ್ದನ್ನು ಲಿಂಗಾಯತ ಧರ್ಮದ ವಿರಕ್ತಮಠಗಳ ಸ್ವಾಮಿಗಳು ಮತ್ತು ವಚನ ತಜ್ಞರು ಎತ್ತಿಹಿಡಿಯುತ್ತಾರೆ. ಈ ರೀತಿಯ ವಾಗ್ಯುದ್ಧದಲ್ಲಿ ವೀರಶೈವವಾದಿಗಳು ಶೈವಾಗಮಗಳ ಮೊರೆ ಹೋಗುತ್ತಾರೆ. ತಮ್ಮದು ಪುರಾತನ ಧರ್ಮ ಎಂದು ಹೇಳುತ್ತಾರೆ. ನಿಮ್ಮ ವೀರಶೈವ ಧರ್ಮ ಪುರಾತನವಾಗಿದ್ದು ಸ್ವತಂತ್ರ ಧರ್ಮವಾಗಿದೆ. ೧೨ನೇ ಶತಮಾನದಲ್ಲಿ ಬಸವಣ್ಣನವರು ಸ್ಥಾಪಿಸಿದ ನಮ್ಮ ಲಿಂಗಾಯತ ಧರ್ಮವೂ ಸ್ವತಂತ್ರ ಧರ್ಮವಾಗಿದೆ ಎಂದು ಅನೇಕ ಸಂವೇದನಾಶೀಲ ಲಿಂಗಾಯತ ಸ್ವಾಮಿಗಳು ಮತ್ತು ತಜ್ಞರು ತಿಳಿಸುತ್ತಾರೆ. ಲಿಂಗಾಯತ ಎಂಬುದು ಸ್ವತಂತ್ರ ಧರ್ಮ ಅಲ್ಲವೇ ಅಲ್ಲ. ಅದೇನಿದ್ದರೂ ವೀರಶೈವಕ್ಕೆ ಇರುವ ಪರ್ಯಾಯ ಹೆಸರು ಎಂದೇ ಪಂಚಾಚಾರ್ಯವಾದಿಗಳು ವಾದಿಸುತ್ತಾರೆ.

ಶೈವಾಗಮಗಳನ್ನು ನಂಬುವ ಪಂಚಾಚಾರ್ಯರಿಗೆ ವೇದಗಳು ಅಪಥ್ಯವಲ್ಲ. ಸ್ಥಾವರಪೂಜಕರಾದ ಅವರು ಇಷ್ಟಲಿಂಗವನ್ನೂ ಪೂಜಿಸುತ್ತಾರೆ. ಯಜ್ಞಗಳನ್ನೂ ಮಾಡುತ್ತಾರೆ! ವೇದಾಗಮಗಳನ್ನು ಮತ್ತು ಭವಿಶೈವವನ್ನು ವಿರೋಧಿಸುವ ಬಸವಣ್ಣನವರು ತಮ್ಮ ವೀರಶೈವ ಧರ್ಮವನ್ನು ಉದ್ಧಾರ ಮಾಡಿದವರೆಂದೂ ಹೇಳುತ್ತಾರೆ!

ಸಕಲಜೀವಾತ್ಮರನ್ನು ನಮ್ಮ ಚೈತನ್ಯದೊಳಗೆ ಕೇಂದ್ರೀಕರಿಸುವ ಮೂಲಕ ಇಡೀ ವಿಶ್ವದ ಜೊತೆ ಒಂದಾಗುತ್ತ ಸರ್ವಸಮತ್ವದ ಬದುಕಿಗಾಗಿ ಹೋರಾಡುವ ಅರಿವನ್ನು ಸಾಧಿಸುವುದೇ ಲಿಂಗಾಂಗಸಾಮರಸ್ಯ ಎಂಬುದು ಇವರ ಅರಿವಿಗೆ ಬರದೆ ಹೋಯಿತು. ಲಿಂಗಾಂಗಸಾಮರಸ್ಯವು ಎಲ್ಲವನ್ನೂ ಒಳಗೊಳ್ಳುವ ಗುಣ ಹೊಂದಿದೆ. ಲಿಂಗತತ್ತ್ವಕ್ಕೆ ಯಾವುದೂ ಹೊರಗಿನದಲ್ಲ. ಆದರೆ ವೈದಿಕ ತತ್ತ್ವಕ್ಕೆ ಯಾವುದೂ ಒಳಗಿನದಲ್ಲ. ಮಾನವಕುಲವನ್ನು ಜಾತಿ, ವಿಜಾತಿ, ವರ್ಣ ಮತ್ತು ವರ್ಗಗಳಲ್ಲಿ ವಿಂಗಡಿಸುತ್ತ ಹೋಗುವುದರ ಮೂಲಕವೇ ಅದು ತನ್ನ ಅಸ್ತಿತ್ವವನ್ನು ಸಹಸ್ರಾರು ವರ್ಷಗಳಿಂದ ಕಾಪಾಡಿಕೊಳ್ಳುತ್ತ ಬಂದಿದೆ. ಇಂಥ ವೈದಿಕಕ್ಕೆ ಬಲಿಯಾದ ಬಹುಪಾಲು ಲಿಂಗಾಯತರು ಶರಣರ ಹೋರಾಟದ ಗುಣವನ್ನು ಕಳೆದುಕೊಂಡರು.

ಇಡೀ ವಿಶ್ವ ಸಾಮರಸ್ಯದ ಮೂಲಕ ಸೃಷ್ಟಿಯಾಗಿದೆ. ಮಾನವರ ಬದುಕಿನಲ್ಲಿ ಈ ಸಾಮರಸ್ಯವನ್ನು ಪುನರ್ ಸೃಷ್ಟಿಸುವುದೇ ಬಸವಣ್ಣನವರ ಏಕೈಕ ಗುರಿಯಾಗಿತ್ತು. ಭ್ರಮಾತ್ಮಕ ಲೋಕವನ್ನು ಸೃಷ್ಟಿಸುವ ಭಗವದ್ಗೀತೆಯ ಪ್ರತಿಪಾದಕರನ್ನು ಬಸವಣ್ಣನವರು 'ಮಾಯಾಭ್ರಾಂತಿ ಕವಿದ ಗೀತಜ್ಞರು' ಎಂದು ಕರೆದರು. ವೇದ, ಪುರಾಣ, ರಾಮಾಯಣ,

ಮಹಾಭಾರತ, ಭಾಗವತ, ಶೈವಾಗಮ, ಮನುಸ್ಮೃತಿ ಮುಂತಾದ ಗ್ರಂಥಗಳು ಸಹಸ್ರಾರು ವರ್ಷಗಳಿಂದ ಭಾರತೀಯರ ಮನಸ್ಸನ್ನು ಆಳುತ್ತ ಇಡೀ ಸಮಾಜ ವೈದಿಕರ ಹತ್ತೋಟಿಯಲ್ಲಿರುವಂತೆ ನೋಡಿಕೊಂಡಿವೆ. ನಿಸರ್ಗತತ್ತ್ವಕ್ಕೆ ವಿರುದ್ಧವಾಗಿರುವ ಈ ಎಲ್ಲವನ್ನೂ ಬಸವಣ್ಣನವರು ಅಲ್ಲಗಳೆದರು ಹೊರತಾಗಿ ಯಾವುದೇ ದ್ವೇಷದಿಂದ ಅಲ್ಲ. ಹೀಗೆ ಅಲ್ಲಗಳೆಯುವ ಮೂಲಕ ಬಹುತ್ವದ ಒಳಗಿನ ಏಕತ್ವವನ್ನು ಅವರು ಕಂಡುಹಿಡಿದರು. ಶರಣರನ್ನು ಜೊತೆಗೂಡಿಸಿಕೊಂಡು ನಿತ್ಯನೂತನವಾದ ವಚನ ಸಾಹಿತ್ಯದ ರಚನೆ ಮಾಡಿದರು. ಹಳೆಯದರಲ್ಲಿ ಸಾಧುವಲ್ಲದ್ದನ್ನು ದೂರ ಸರಿಸುತ್ತ ಹೊಸ ತತ್ತ್ವದ ಮೂಲಕ ಜನಸಮುದಾಯಕ್ಕೆ ವಿಮೋಚನೆಯ ಜಗತ್ತಿನ ಕಲ್ಪನೆ ಮೂಡಿಸಿದರು. ಕಾಯಕಜೀವಿಗಳು ವೇದ, ಶಾಸ್ತ್ರ, ಪುರಾಣ, ಆಗಮ ಮುಂತಾದ ಸಂಕೋಲೆಗಳನ್ನು ಬಿಡಿಸಿಕೊಂಡು ಸ್ವತಂತ್ರ ವಿಚಾರಧಾರಿಗಳಾದರು. ಸಕಲಜೀವಿಗಳ ಜೊತೆ ಏಕತ್ವವನ್ನು ಸಾಧಿಸಿದರು. ಆದರೆ ಕಾಲ ಕಳೆದಂತೆ ಬದಲಾವಣೆಗೆ ಒಳಗಾಗುತ್ತ ಮುಂದುವರಿದ ಲಿಂಗವಂತರು ಏಕತ್ವವನ್ನು ಮರೆತು ತಮಗರಿಯದಂತೆಯೆ ಜಾತಿವ್ಯವಸ್ಥೆಗೆ ಬಲಿಯಾದರು. ಹೀಗಾಗಿ ಬಹುತ್ವವನ್ನು ಆ ಏಕತ್ವದ ಕಡೆಗೆ ಒಯ್ಯುವ ಪ್ರಯತ್ನ ಮಾಡಲಿಲ್ಲ. ಅಂದರೆ 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂದು ಹೇಳುವುದನ್ನು ಬಿಟ್ಟು ಆದಿ, ಶೀಲವಂತ, ಬಣಜಿಗ, ಪಂಚಮಸಾಲಿ, ಸಾದರ, ನೊಣಬ, ಜೇಡರ, ಬಣಗಾರ, ಹಟಗಾರ, ಶಿವಸಿಂಪಿ, ಮಡಿವಾಳ, ಕಂಬಾರ, ಕುಂಬಾರ, ಸಮಗಾರ, ಹೊಲೆಯ, ಮಾದಿಗ ಮುಂತಾದ ಹಲವು ಹದಿನೆಂಟು ವೃತ್ತಿಗಳನ್ನು ಜಾತಿಗಳನ್ನಾಗಿಸಿ ಮನುವಾದಿಗಳ ಜಾತಿ, ಅಸ್ಪೃಶ್ಯತೆ ಮತ್ತು ವರ್ಣ ಪದ್ಧತಿಗಳನ್ನೇ ಉಳಿಸಿ ಬೆಳೆಸುತ್ತ ಬಂದರು. ಆ ಮೂಲಕ 'ಇವ ನಮ್ಮವನಲ್ಲ, ಇವ ನಮ್ಮವನಲ್ಲ, ಇವನಮ್ಮವನಲ್ಲ' ಎಂದು ಭಾವಿಸುವ ಸ್ಥಿತಿಯನ್ನು ಬಹುಪಾಲು ಲಿಂಗಾಯತರು ತಲುಪಿದ್ದಾರೆ.

ಇಡೀ ಮಾನವಕುಲವನ್ನು ಒಳಗೊಳ್ಳುವ ಲಿಂಗವಂತ ಧರ್ಮ ಕಾಯಕದ ಮೇಲೆ ನಿಂತಿದೆ. ಸಕಲಜೀವಾತ್ಮರಿಗೆ ಲೇಸನೇ ಬಯಸುವುದೇ ಅದರ ಗುರಿಯಾಗಿದೆ. ಕಾಯಕದ ಮೂಲಕ ಜೀವಜಗತ್ತಿನ ಸಂರಕ್ಷಣೆ ಮಾಡುವುದನ್ನು ತಿಳಿಸಿಕೊಡುವ ತತ್ತ್ವವೇ ಲಿಂಗತತ್ತ್ವವಾಗಿದೆ. ಶರಣರ ಸಮಗ್ರ ವಚನಗಳು ಈ ಲಿಂಗತತ್ತ್ವವನ್ನು ಧ್ವನಿಸುತ್ತವೆ. ಆದರೆ ಆ ಧ್ವನಿಯನ್ನು ಕೇಳಿಸಿಕೊಳ್ಳದಷ್ಟು ನಾವು ಕಿವುಡರಾಗಿದ್ದೇವೆ.

ಕಾಯಕವಿಲ್ಲದೆ ಗುರು, ಲಿಂಗ ಮತ್ತು ಜಂಗಮ (ಸಕಲ ಜೀವಾತ್ಮರಿಂದ ಕೂಡಿದ ವ್ಯವಸ್ಥೆ) ಇಲ್ಲ. ಅಂತೆಯೆ ಪ್ರಕೃತಿಯಲ್ಲಿ ಪ್ರತಿಯೊಂದೂ ಕಾಯಕ ನಿರತವಾಗಿದೆ. ಸೂರ್ಯ ಚಂದ್ರರೂ ಕಾಯಕ ನಿರತರಾಗಿದ್ದಾರೆ. ಪೃಥ್ವಿ ಕೂಡ ನಿರಂತರ ಸುತ್ತುವಿಕೆಯಿಂದ ಋತುಮಾನಗಳನ್ನು ಸೃಷ್ಟಿಸುತ್ತದೆ. ಸಸ್ಯಸಂಕುಲ, ಕೀಟರಾಶಿ ಮತ್ತು

ಜೀವಜಾಲದಲ್ಲಿ ಬರುವ ಚರಾಚರವೆಲ್ಲ ಕಾಯಕದಿಂದಲೇ ಅಸ್ತಿತ್ವದಲ್ಲಿವೆ. ಕಾಯಕವು ನಿಸರ್ಗಧರ್ಮವಾಗಿದೆ. ಲಿಂಗಾಯತವು ಕಾಯಕಧರ್ಮವಾಗಿದೆ. ಆದ್ದರಿಂದ ಲಿಂಗಾಯತ ಧರ್ಮವು ನಿಸರ್ಗಧರ್ಮವೇ ಆಗಿದೆ.

ನಿಸರ್ಗಧರ್ಮದಲ್ಲಿ ಪ್ರತಿಯೊಂದು ಜೀವಿಗೂ ಅದರದೇ ಆದ ವೈಶಿಷ್ಟ್ಯವಿದೆ. ತನ್ನದೇ ಆದ ಕಾಯಕ, ಜೀವನವಿಧಾನ ಮತ್ತು ವಿಕಾಸಕ್ರಿಯೆಯಲ್ಲಿ ಪಡೆದ ಶಕ್ತಿವಿಶೇಷದಿಂದಾಗಿ ಪ್ರತಿಯೊಂದು ಜೀವಿ ನಿಸರ್ಗದಲ್ಲಿ ತನ್ನದೇ ಆದ ಮಹತ್ವವನ್ನು ಹೊಂದುವ ಮೂಲಕ ತಾನು ಬದುಕಿರುವುದರ ಸಾರ್ಥಕತೆಯನ್ನು ಸೂಚಿಸುತ್ತದೆ. ಈ ಎಲ್ಲ ಜೀವಿಗಳು ಆಹಾರ ಸರಪಳಿಯ ಕೊಂಡಿಗಳಾಗಿ ನೈಸರ್ಗಿಕ ಪ್ರಕ್ರಿಯೆಯನ್ನು ಮುಂದುವರಿಸಿಕೊಂಡು ಹೋಗುತ್ತಲೇ ಇರುತ್ತವೆ. ಆದರೆ ಮಾನವ ತನ್ನ ಭೋಗಲಾಲಸೆಯಿಂದ ನಿಸರ್ಗದ ಸುಲಿಗೆಯನ್ನು ನಿರಂತರವಾಗಿ ಮಾಡುತ್ತ ಈ ಭೂಮಿಯನ್ನು ಹದಗೆಡಿಸುತ್ತಿದ್ದಾನೆ. ಎಲ್ಲವನ್ನೂ ಶೋಷಣೆಗೆ ಒಳಪಡಿಸುತ್ತಿದ್ದಾನೆ. ವಿಕೃತಗೊಳಿಸುತ್ತಿದ್ದಾನೆ. ಇಡೀ ಪರಿಸರ ಅವನ ಅಹಂಕಾರದಿಂದ ಕೂಡಿದ ಕುಕೃತ್ಯದಿಂದಾಗಿ ನಲುಗಿ ಹೋಗಿದೆ. ಎಲ್ಲ ವೈವಿಧ್ಯಗಳಿಂದ ಕೂಡಿದ ಜೀವಜಗತ್ತನ್ನು ಹೊಂದಿರುವ ಪೃಥ್ವಿಯೇ ನಮ್ಮ ಏಕೈಕ ಮಹಾಮನೆಯಾಗಿದೆ ಎಂಬ ಅರಿವನ್ನು ಒಂಬತ್ತು ಶತಮಾನಗಳಷ್ಟು ಹಿಂದೆಯೆ ಬಸವಣ್ಣನವರು ಮೂಡಿಸಿದರೂ ನಾವು ಅದರ ಮಹತ್ವವನ್ನು ಅರಿಯದೆ ಹೋದೆವು.

ಸತ್ಯಶುದ್ಧ ಕಾಯಕದ ಮೂಲಕ ಈ ಮಹಾಮನೆಯನ್ನು ರಕ್ಷಿಸುವ ಜವಾಬ್ದಾರಿ ಮತ್ತು 'ನದಿಯೊಳಗೆ ನದಿ ಬೆರಸಿದಂತೆ' ಭಾವೈಕ್ಯದೊಂದಿಗೆ ಬದುಕುತ್ತ 'ದಯವೇ ಧರ್ಮದ ಮೂಲ' ಎಂಬ ನಿಜದ ನಿಲವನ್ನು ತಾಳುವುದರ ಮೂಲಕ ಮಾನವರು ಜಾತಿ, ಕುಲ, ಮತ, ಪಂಥ, ದೇಶ, ಭಾಷೆ ಮುಂತಾದವುಗಳಿಂದ ಹೊರಬಂದು ಮಾನವಧರ್ಮವನ್ನು ಪಾಲಿಸುತ್ತ ಸರ್ವಸಮತ್ವದ ಬದುಕನ್ನು ಬದುಕಬೇಕು ಎಂಬುದೇ ಬಸವಣ್ಣನವರ ಆಶಯವಾಗಿತ್ತು. ತುಳಿತಕ್ಕೊಳಗಾದ ದುಡಿಯುವ ಜನರನ್ನು ಒಂದುಗೂಡಿಸುತ್ತ ಅವರ ಸಮೂಹಶಕ್ತಿಯಿಂದ ಮಾತ್ರ ಹೊಸ ಜಗತ್ತನ್ನು ನಿರ್ಮಾಣ ಮಾಡಲು ಸಾಧ್ಯ ಎಂಬುದನ್ನು ವಿಶ್ವದಲ್ಲೇ ಮೊದಲಬಾರಿಗೆ ಕಂಡುಕೊಂಡವರೆಂದರೆ ಬಸವಣ್ಣನವರು!

ಭಾರತದಲ್ಲಿ ಕಳೆದ ಸಹಸ್ರಾರು ವರ್ಷಗಳಿಂದ ಚಾತುರ್ವರ್ಣಗಳಲ್ಲಿ ಸವರ್ಣೀಯರಾದ ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯ ವರ್ಣೀಯರೇ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಪ್ರಬಲರಾಗಿದ್ದರು. ಈ ಮೂರೂ ವರ್ಣದವರು ಒಟ್ಟು ಜನಸಂಖ್ಯೆಯ ಪ್ರತಿಶತ ೧೦ರಷ್ಟಿದ್ದರೂ ಶೇಕಡಾ ೯೦ರಷ್ಟು ಶೂದ್ರವರ್ಣದವರ ಶೋಷಣೆ ಮಾಡುತ್ತಿದ್ದರು. ಮಠ ಮಂದಿರಗಳು

ಶೋಷಣೆಯ ಕೇಂದ್ರಗಳಾಗಿ ಬೆಳೆದಿದ್ದವು. ಶಸ್ತ್ರಗಳಿಂದ ಕೂಡಿದ ರಾಜ್ಯಸತ್ತೆ ಮತ್ತು ಶಾಸ್ತ್ರಗಳಿಂದ ಕೂಡಿದ ಧರ್ಮಸತ್ತೆ ಒಂದಾಗಿ ದುಡಿಯುವ ಜನರಾದ ಶೂದ್ರವರ್ಣದವರ ಶೋಷಣೆ ಮಾಡುವಲ್ಲಿ ತಲ್ಲೀನವಾಗಿದ್ದವು. ಬ್ರಾಹ್ಮಣರು ಮತ್ತು ವ್ಯಾಪಾರಿ ವರ್ಗದ ಹಿಡಿತದಲ್ಲಿ ಧಾರ್ಮಿಕ ಕೇಂದ್ರಗಳಿದ್ದವು. ಕೆಲವೊಂದು ಸಲ ಇಂಥ ಧಾರ್ಮಿಕ ಕೇಂದ್ರಗಳು ಸಮಾಜೋ ಆರ್ಥಿಕ ಶಕ್ತಿಕೇಂದ್ರಗಳಾಗಿ ರಾಜ್ಯಶಕ್ತಿಯನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳುತ್ತಿದ್ದವು. ಬಡವರು ರಾಜ್ಯಶಕ್ತಿಗೆ ತೆರಿಗೆ ಕೊಡುವ ಹಾಗೆ ಅನೇಕ ಕಡೆಗಳಲ್ಲಿ ದೇವಾಲಯಗಳಿಗೂ ತೆರಿಗೆ ಕೊಡುವಂಥ ಸ್ಥಿತಿ ನಿರ್ಮಾಣವಾಗಿತ್ತು. ರೈತರು ತಮ್ಮ ಜಮೀನಿನ ಫಲವತ್ತಾದ ಭಾಗವನ್ನು ಗುಡಿಗುಂಡಾರಗಳಿಗೆ ಬಿಟ್ಟು ಕೊಡಬೇಕಾಗಿತ್ತು. ಗಾಣಿಗರು ಉಚಿತವಾಗಿ ಬತ್ತದ ನಂದಾದೀವಿಗೆಗೆ ಮತ್ತು ಮಂದಿರಗಳಲ್ಲಿ ಅನ್ನಸಂತರ್ಪಣೆಗಾಗಿ ಅಡುಗೆ ಮಾಡಲು ಎಣ್ಣೆ ಕೊಡಬೇಕಿತ್ತು. ಕೂಲಿಕಾರರು ಬಿಟ್ಟಿ ಕೂಲಿ ಮಾಡಬೇಕಿತ್ತು. ಶಕ್ತಿಕೇಂದ್ರಗಳಾಗಿದ್ದ ಧಾರ್ಮಿಕ ಕೇಂದ್ರಗಳ ಜೊತೆಗೆ ಈ ರೀತಿ ಸಹಕರಿಸಬೇಕೆಂದು ರಾಜಾಜ್ಞೆಯಾಗುತ್ತಿತ್ತು! ಮೂರ್ತಿಗಳು ಮತ್ತು ಮಂದಿರಗಳು ಶೋಷಣೆಯ ಕೇಂದ್ರಗಳಾಗಿದ್ದನ್ನು ಅರಿತುಕೊಂಡ ಬಸವಣ್ಣನವರು ಮೂರ್ತಿ ಮಂದಿರಗಳಿಲ್ಲದ ಲಿಂಗವಂತ ಧರ್ಮ ಸ್ಥಾಪಿಸಿದರು. ಸಮಾನತೆಯ ಸಂಕೇತವಾದ ಇಷ್ಟಲಿಂಗವನ್ನು ಸೃಷ್ಟಿಸಿ ದುಡಿಯುವ ಜನರನ್ನು ಲಿಂಗಧಾರಿಗಳಾಗಿ ಮಾಡಿದರು. ಶೂದ್ರರು, ಅತಿಶೂದ್ರರು ಎಂದೆನಿಸಿಕೊಳ್ಳುವ ಪಂಚಮರು ಮತ್ತು ಮೇಲ್ಜಾತಿಗಳವರು ಪರಿವರ್ತನೆಹೊಂದಿ ಲಿಂಗವಂತರಾದರು. ಹೀಗೆ ಜಾತಿಸಂಕರಗೊಂಡು ಒಂದಾಗಿ ಸಮಭಾವದೊಂದಿಗೆ ಬದುಕುವಂಥ ಶರಣಸಂಕುಲವೆಂಬ ನವಸಮಾಜದ ನಿರ್ಮಾಣ ಮಾಡಿದರು. ಗುಡಿಗಳು, ಮೂರ್ತಿಗಳು, ಪೂಜಾರಿಗಳು, ಮಠಗಳು ಮತ್ತು ಸ್ವಾಮಿಗಳು ಇಲ್ಲದ ಈ ಸಮಾಜದಲ್ಲಿ ಇಷ್ಟಲಿಂಗದೇವನೊಬ್ಬನೇ ದೇವನಾದ. ಈ ದೇವರಿಗೆ ನರಬಲಿ, ಪ್ರಾಣಿಬಲಿ, ಪಕ್ಷಿಬಲಿ, ತೆಂಗಿನಕಾಯಿ ಬಲಿ, ಕುಂಬಳಕಾಯಿ ಬಲಿ, ಲಿಂಬೆಕಾಯಿ ಬಲಿ ಮುಂತಾದ ಬಲಿಗಳನ್ನು ಕೊಡಬೇಕಾಗಿಲ್ಲ. ಬೆಳ್ಳಿ ಬಟ್ಟಲು, ಬಂಗಾರದ ತೊಟ್ಟಿಲು, ರತ್ನಖಚಿತ ಕಣ್ಣುಗಳು, ವಜ್ರದ ಕಿರೀಟ ಮತ್ತು ಪ್ರಭಾವಳಿಗಳು ಈ ಹೊಸ ದೇವರಿಗೆ ಬೇಕಿಲ್ಲ. ಇಲ್ಲಿ ಹರಕೆ ಹೊರಲು ಅವಕಾಶವೇ ಇಲ್ಲ. ಈ ದೇವರ ಮುಂದೆ ಮೂಢನಂಬಿಕೆಯ ಬೂಟಾಟಿಕೆಗಳು ನಡೆಯುವುದಿಲ್ಲ. ಯಾವ ಖರ್ಚೂ ಇಲ್ಲದೆ ಈ ದೇವರನ್ನು ಪೂಜಿಸಬಹುದು. ಈ ದೇವರ ಪೂಜೆಗೆ ಯಾವುದೇ ಮಧ್ಯವರ್ತಿಗಳಿಲ್ಲ. ಈ ದೇವರ ಪೂಜೆ ಮಾಡುವವರು ಯಾವುದೇ ಮಂದಿರಕ್ಕೆ ಹೋಗಿ ದೂರದಿಂದಲೇ ದೈನ್ಯದಿಂದ ಕೈಮುಗಿದು ನಿಲ್ಲಬೇಕಿಲ್ಲ. ಅಲ್ಲಿ ಬಿಟ್ಟಿಕೂಲಿ ಮಾಡಬೇಕಿಲ್ಲ. ದವಸ-ಧಾನ್ಯ ಧನ-ಕನಕಗಳನ್ನು ಕೊಡಬೇಕಿಲ್ಲ. ದೇವರು ಮತ್ತು ಮೂಢನಂಬಿಕೆಗಳ ಹೆಸರಿನಲ್ಲಿ

ಶೋಷಣೆಗೆ ಒಳಗಾಗಬೇಕಿಲ್ಲ. ಹೀಗೆ ದುಡಿಯುವ ವರ್ಗ ವೈಚಾರಿಕತೆಯನ್ನು ಬೆಳೆಸಿಕೊಂಡಿತು. ಮೇಲ್ಜಾತಿಯವರಿಂದ ಶೋಷಣೆಯ ಜೊತೆಗೆ ಅಪಮಾನಕ್ಕೆ ಒಳಗಾಗುವುದನ್ನೂ ತಪ್ಪಿಸಿಕೊಂಡಿತು. ನೇರವಾಗಿ ಏಕದೇವೋಪಾಸನೆಯ ಆನಂದವನ್ನು ಅನುಭವಿಸಿತು. ದುಡಿಯವ ಜನರು ಕಾಯಕದಿಂದ ಬಂದದ್ದರಲ್ಲಿನ ಮಿಗುತಾಯವನ್ನು ಶರಣಸಂಕುಲದಲ್ಲಿನ ಸಾಮಾಜಿಕ ನಿಧಿಯಾದ ಶಿವನಿಧಿಗೆ ಅರ್ಪಿಸಿದರು. ಹೀಗೆ ಅವರಿದ್ದ ತಾಣದಲ್ಲಿಯೆ ಹಾಲಹಳ್ಳ ಹರಿಯುವಂತಾಯಿತು. 'ಕಲ್ಯಾಣದಲ್ಲಿ ಕೊಡುವವರುಂಟು ಬೇಡುವವರಿಲ್ಲ' ಎಂಬ ವಾತಾವರಣದ ನಿರ್ಮಾಣವಾಯಿತು. ಹಣವು ಹಣವನ್ನು ಗಳಿಸುವಂಥ ಬಡ್ಡಿಯ ವ್ಯವಹಾರ ನಿಂತುಹೋಯಿತು. ಕಾಯಕದಿಂದ ಮಾತ್ರ ಗಳಿಕೆಯಾಗುವಂಥ ವ್ಯವಸ್ಥೆ ಬಂದಿತು. ಮೂಢನಂಬಿಕೆ ಮತ್ತು ದೇಗುಲ ವ್ಯವಸ್ಥೆಯ ಕಪಿಮುಷ್ಟಿಯಿಂದ ಹೊರಬಂದ ಕಾಯಕಜೀವಿಗಳು ತಮ್ಮ ಗಳಿಕೆಯಲ್ಲಿನ ಉಳಿಕೆಯನ್ನು ದಾಸೋಹಂ ಭಾವದೊಂದಿಗೆ ಜನಪರ ಕಾರ್ಯಗಳಿಗೆ ಬಳಸಿದರು ಮತ್ತು ಶಿವನಿಧಿಗೆ ಅರ್ಪಿಸಿದರು. ಶರಣರು ಉದ್ದಂಡ ವೃತ್ತಿಯನ್ನು ಕಾಯಕ ಎಂದು ಪರಿಗಣಿಸಲಿಲ್ಲ. ಕಾಯಕದಿಂದ ಆಗುವ ಉತ್ಪಾದನೆಯು ಮಾನವಕುಲದ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಪೂರಕವಾಗಿರಬೇಕು. ಪರಿಸರವನ್ನು ಕಾಪಾಡುವಂಥದ್ದಿರಬೇಕು. ಒಟ್ಟಾರೆ ಸಕಲಜೀವಾತ್ಮರಿಗೆ ಬಾಧೆಯನ್ನುಂಟು ಮಾಡದಂತಿರಬೇಕು. ಮಾನವರು ತಮ್ಮ ಕಾಯಕದ ಮೂಲಕ ಸ್ವಾವಲಂಬಿಗಳಾಗಬೇಕು. ಕುಟುಂಬದ ಪೋಷಣೆ ಮಾಡಬೇಕು. ತದನಂತರ ಗುರುಪೂಜೆ (ಜ್ಞಾನ ಸಂಪಾದನೆ) ಲಿಂಗಾರ್ಚನೆ (ತತ್ತ್ವದ ಅರಿವು ಹೊಂದುವಿಕೆ) ಮತ್ತು ಜಂಗಮ ದಾಸೋಹ (ಸಮಾಜ ಸೇವೆ) ಮಾಡುವ ಗುರಿಯನ್ನು ಸಾಧಿಸಲೇಬೇಕು. ಅಂದರೆ ದುಡಿಮೆಯಿಂದ ಬಂದುದರಲ್ಲಿನ ಉಳಿಕೆ (ಮಿಗುತಾಯ)ಯನ್ನು ಜ್ಞಾನಕ್ಕೆ, ತತ್ತ್ವಪ್ರಸಾರಕ್ಕೆ ಮತ್ತು ಸಮಾಜಕ್ಕೆ ವಿನಿಯೋಗಿಸುವಂತಾಗಬೇಕು. ಆ ಮೂಲಕ ದೇವರ ಪ್ರಸಾದವಾದ ಕಾಯವನ್ನು, ಕುಟುಂಬವನ್ನು ಮತ್ತು ಸಮಾಜವನ್ನು ರಕ್ಷಣೆ ಮಾಡಿದಂತಾಗುವುದು. ಸ್ವಾವಲಂಬನೆಯ ಮೂಲಕ ಕೌಟುಂಬಿಕ ಮತ್ತು ಸಾಮಾಜಿಕ ಜವಾಬ್ದಾರಿಯನ್ನು ನಿಭಾಯಿಸಿದಂತಾಗುವುದು. ಹೀಗೆ ಇಷ್ಟಲಿಂಗದ ಮೂಲಕ ಬಸವಣ್ಣನವರು ಹೊಸದೊಂದು ಮಾನವೀಯ ವ್ಯವಸ್ಥೆಯನ್ನೇ ನಿರ್ಮಾಣ ಮಾಡಿದರು.

ಇಷ್ಟಲಿಂಗಪೂಜೆಯು ಹೊರಲೋಕ ಮತ್ತು ಒಳಲೋಕದ ಮಧ್ಯೆ ಸಮತೋಲನವನ್ನು ಸಾಧಿಸುವಂಥದ್ದಾಗಿದೆ. ಇದೊಂದು ವಿಶಿಷ್ಟವಾದ ವಿಧಾನವಾಗಿದೆ. ಇದು ಮಾನವನ ಖಾಸಗಿತನವನ್ನು ಕಾಪಾಡುತ್ತ ಸಾಮಾಜಿಕ ಜವಾಬ್ದಾರಿಯ ಪ್ರಜ್ಞೆ ಮೂಡಿಸುವಂಥದ್ದಾಗಿದೆ. ತಂದೆ-ತಾಯಿ, ಸತಿ-ಪತಿ, ಮಗ-ಮಗಳು, ಅಣ್ಣ-ತಮ್ಮ, ಬಡವ-ಶ್ರೀಮಂತ, ಸಾಮಾನ್ಯರು-ಜ್ಞಾನಿಗಳು ಹೀಗೆ ಪ್ರತಿಯೊಬ್ಬರು ವಯಸ್ಸು,

ಲಿಂಗ, ವರ್ಗ ಜಾತಿ ಮತ್ತು ವರ್ಣಭೇದಗಳಿಲ್ಲದೆ ಇಷ್ಟಲಿಂಗ ಪೂಜೆಯಲ್ಲಿನ ಖಾಸಗಿತನವನ್ನು ಅನುಭವಿಸಬಹುದು. ಆ ಮೂಲಕ ಅನುಭಾವದ ಆನಂದವನ್ನು ಪಡೆಯಬಹುದು. ಇಷ್ಟಲಿಂಗದಿಂದುಂಟಾಗುವ ಏಕಾಗ್ರತೆ ಮನುಷ್ಯನ ಖಿನ್ನತೆಯನ್ನು ಕೂಡ ಕಳೆಯುತ್ತದೆ. ಹೊಸ ಚೈತನ್ಯ ಮೂಡಿಸುತ್ತದೆ. ಸಹನಶಕ್ತಿಯನ್ನು ಹೆಚ್ಚಿಸುತ್ತದೆ. ಮನಸ್ಸಿನ ಮೇಲೆ ಹಿಡಿತ ಸಾಧಿಸುವ ಕಲೆ ಕೂಡ ಇದಾಗಿದೆ. ಇಷ್ಟಲಿಂಗಪೂಜಕ ತನ್ನೊಳಗೇ ಲೋಕಾತ್ಮರ ಜೊತೆ ಒಂದಾಗುತ್ತ ಪರಮಾತ್ಮನ ಅರಿವು ಮೂಡಿಸಿಕೊಳ್ಳುತ್ತಾನೆ. ಇದುವೇ ಇಷ್ಟಲಿಂಗ ಪೂಜೆಯ ವೈಶಿಷ್ಟ್ಯ. ಇಲ್ಲಿ ಆತ್ಮ ಮತ್ತು ಪರಮಾತ್ಮನ ಸಂಬಂಧ ನೇರವಾಗಿ ಆಗುವುದಿಲ್ಲ. ಆತ್ಮನು ಸಕಲ ಲೋಕಾತ್ಮರ ಜೊತೆ ಒಂದಾಗಿ ಅವರ ಸುಖ ತನ್ನ ಸುಖ, ಅವರ ದುಃಖ ತನ್ನ ದುಃಖ ಎಂಬ ಸಂವೇದನೆಯನ್ನು ಹೊಂದಿದಾಗಲೇ ಪರಮಾತ್ಮನ ಜೊತೆ ಸಂಬಂಧ ಕಲ್ಪಿಸಲು ಸಾಧ್ಯವಾಗುವುದು. ಹೀಗೆ ಆತ್ಮನು ಲೋಕಾತ್ಮರ ಜೊತೆ ಒಂದಾದಾಗಲೇ ಪರಮಾತ್ಮನ ಅರಿವನ್ನು ಹೊಂದುವನು. ಆಗ ಆತನಿಗೆ ಆ ಅರಿವೇ ಗುರುವಾಗುವುದು. ಗುರುವೇ ದೇವರಾಗುವುದು. ವಚನಗಳು ಇಂಥ ಅರಿವಿನ ಆಗರವಾಗಿವೆ. ಈ ಪ್ರಕಾರ ಇಷ್ಟಲಿಂಗವು ಸ್ವಂತಿಕೆಯನ್ನು ಮತ್ತು ಸಾಮಾಜಿಕತೆಯನ್ನು ಒಟ್ಟಿಗೆ ನಿಭಾಯಿಸುವಂಥ ವಿಶಿಷ್ಟ ಶಕ್ತಿಯನ್ನು ಕೊಡುವಂಥದ್ದಾಗಿದೆ. ಅರಿವು ಒಳಲೋಕದ ಚೈತನ್ಯದ ದರ್ಶನ ಮಾಡಿಸಿದರೆ. ಪ್ರಜ್ಞೆ ಹೊರಲೋಕದ ವಸ್ತುವಿನ ದರ್ಶನ ಮಾಡಿಸುತ್ತದೆ. ಇಂಥ ಅರಿವು ಮತ್ತು ಪ್ರಜ್ಞೆ ಕೂಡಿದಾಗ ಕೂಡಲಸಂಗಮವಾಗುತ್ತದೆ. ಈ ಭಕ್ತರ ಮಾತಿನಲ್ಲೇ ಕೂಡಲಸಂಗಮದೇವ ರಾಶಿಯಾಗಿರುತ್ತಾನೆ.

ಇಂಥ ಕಾಯಕಜೀವಿಗಳು ಇರುವ ಸಮಾಜಕ್ಕೇ 'ಜಂಗಮ' ಎನ್ನುತ್ತಾರೆ. 'ಇನ್ನು ಜಂಗಮವೇ ಲಿಂಗವೆಂದು ನಂಬಿದೆ' ಎಂದು ಬಸವಣ್ಣನವರು ಹೇಳುತ್ತಾರೆ. ಬಸವಣ್ಣನವರು ಸಮಾಜಕ್ಕೇ ದೇವರೆಂದು ನಂಬುತ್ತಾರೆ. ಅವರಿಗೆ ಸಕಲರ ನೆಮ್ಮದಿಯ ಬದುಕೇ ಮುಖ್ಯವಾದುದು; ಅಂಥ ಸಮಾನತೆಯ ಸಮಾಜವನ್ನು ಸ್ಥಾಪಿಸುವುದೇ ಲಿಂಗಪೂಜಾಫಲ. ಮೂರ್ತಿಗಳ ಮುಂದೆ ಮತ್ತು ಪಂಚಮಹಾಭೂತಗಳ ಮುಂದೆ ಶರಣಾಗತರಾಗುತ್ತ, ಧರ್ಮಗಳ ಒಡೆಯರ ಮುಂದೆ ತಲೆತಗ್ಗಿಸಿ ನಿಲ್ಲುವುದೇ ಭಕ್ತಿ ಎಂಬುದನ್ನು ಬಸವಾದಿ ಶರಣರು ಅಲ್ಲಗಳೆದಿದ್ದಾರೆ. 'ಸರ್ವಸಮತ್ವದಿಂದಿರೆ ಭಕ್ತಿ' ಎಂಬುದು ಶರಣರ ಭಕ್ತಿಯ ಪರಿಕಲ್ಪನೆಯಾಗಿದೆ. ಇಂಥ ಭಕ್ತಿಯುಳ್ಳ ಶರಣ ಯಾರಿಗೂ ಅಂಜುವುದಿಲ್ಲ. ದಾಕ್ಷಿಣ್ಯಕ್ಕೆ ಒಳಗಾಗುವುದಿಲ್ಲ. ಆತ ಸುಲಿಗೆ ಲೋಕದ ವಿರೋಧಿಯಾಗಿರುತ್ತಾನೆ. ಆತನಿಗೆ ಭಕ್ತಿ ಎಂಬುದು ಆತ್ಮವಿಮರ್ಶೆಯ ಸಾಧನವಾಗಿದೆ. ಅದು ಕರಗಸದಂತೆ ಕೊಯ್ಯುತ್ತ ಹೋಗುವಂಥದ್ದು; ಆ ಮೂಲಕ ಪರಿಶುದ್ಧಗೊಳಿಸುವಂಥದ್ದು.

ಅಕ್ಷರಜ್ಞಾನವಿಲ್ಲದ ಕಾಯಕಜೀವಿಗಳಲ್ಲಿ ಆತ್ಮಗೌರವ ತುಂಬುತ್ತ ಈ ಉನ್ನತ ಅವಸ್ಥೆಯನ್ನು ತಲುಪುವ ಹಾಗೆ ಮತ್ತು ಅವರ ವ್ಯಕ್ತಿತ್ವವಿಕಸನವಾಗುವಂತೆ ಮಾಡಿದ್ದು ಬಸವಣ್ಣನವರ ಅನನ್ಯ ಸಾಧನೆಗಳಲ್ಲಿ ಒಂದಾಗಿದೆ. ಬಸವಣ್ಣನವರು ಇಂಥ ಬಸವಳಿದವರ ಬಳಿಗೆ ಹೋಗಿ ಅವರನ್ನು ಅಪ್ಪಿಕೊಂಡರು; ಹೆಗಲಮೇಲೆ ಹೊತ್ತುಕೊಂಡು ಮೇಲೆ ತಂದರು. ಕಠಿಣಸಾಧ್ಯವಾದ ನಿರಂತರ ಪ್ರಯತ್ನದಿಂದ ಅವರು ಇದನ್ನು ಕಾರ್ಯಗತಗೊಳಿಸಿದ್ದಾರೆ. ಅವರಿಗೆ ಉಣಲು, ಉಡಲು, ನಡೆಯಲು ಮತ್ತು ನುಡಿಯಲು ಕಲಿಸುವ ಮೂಲಕ ಇಂಥ ಅಘಟಿತ ಘಟನೆಯನ್ನು ಸಾಧಿಸಿತೋರಿಸಿದ್ದಾರೆ.

ಯಾವ ಜನರ ಅನುಭವಕ್ಕೆ ಕವಡೆ ಕಿಮ್ಮತ್ತು ಇದ್ದಿದ್ದಿಲ್ಲವೊ; ಯಾರ ದುಡಿಮೆಯನ್ನು ಕೌಶಲರಹಿತವೆಂದು ಪರಿಗಣಿಸಲಾಗಿತ್ತೊ; ಯಾರ ಜ್ಞಾನವು ಅಕ್ಷರ ರೂಪಕ್ಕೆ ಇಳಿಸುವ ಯೋಗ್ಯತೆಯನ್ನು ಹೊಂದಿಲ್ಲ ಎಂದು ತುಚ್ಛೀಕರಿಸಲಾಗಿತ್ತೋ; ಯಾರ ಬದುಕು ಆದರ್ಶ ಅಲ್ಲ ಎಂದು ಭಾವಿಸಲಾಗಿತ್ತೋ ಅಂಥ ಕಾಯಕಜೀವಿಗಳಲ್ಲಿ ಬಸವಣ್ಣನವರು ಅನುಭವದ 'ಭಿಕ್ಷೆ'ಯನ್ನು ಪಡೆದರು. ಎಲ್ಲ ಕಾಯಕಜೀವಿಗಳ ಬದುಕಿನಲ್ಲಿ ಭಾಗಿಯಾಗುತ್ತ ಅವರ ಅನುಭವವನ್ನು ತಮ್ಮದಾಗಿಸಿಕೊಳ್ಳುವುದರಲ್ಲಿ ತಲ್ಲೀನರಾದರು. ಆ ಮೂಲಕ ದುಡಿಯುವ ವರ್ಗದ ಅದಮ್ಯ ಶಕ್ತಿಯ ವಿರಾಟ್ ಸ್ವರೂಪವನ್ನು ಕಂಡುಕೊಂಡರು. ಅವರ ಅನುಭವದ ಮೇಲೆಯೆ ಅನುಭಾವದ ತತ್ತ್ವಜ್ಞಾನವನ್ನು ವಿಶ್ವಕ್ಕೆ ನೀಡುವುದರ ಮೂಲಕ ದುಡಿಯುವ ವರ್ಗದ ತತ್ತ್ವಜ್ಞಾನವು ಅನನ್ಯವಾದುದು ಎಂಬುದನ್ನು ಸಾಧಿಸಿ ತೋರಿಸಿದರು. ಜಗತ್ತಿನ ಯಾವ ಮೂಲೆಯಲ್ಲೂ ಇಲ್ಲದಂಥ ದುಡಿಯುವ ವರ್ಗದ ಸಂಘಟನೆ ಮಾಡಿದರು. ವಿಶ್ವದ ಕಾಯಕಜೀವಿಗಳ ಪ್ರಥಮ ನಾಯಕರೆನಿಸಿದರು. ಅಹಂನ ಕಡುವೈರಿಗಳಾಗಿದ್ದ ಅವರು ಹೊಗಳಿಕೆಯನ್ನು ಎಂದೂ ಇಷ್ಟಪಡಲಿಲ್ಲ. ಅದನ್ನು ಹೊನ್ನಶೂಲ ಎಂದು ಕರೆದರು. ತಾವೇ ಎಲ್ಲರಿಗಿಂತ ಕಿರಿಯರೆಂದು ಮನವರಿಕೆ ಮಾಡಿಕೊಡುತ್ತ ಅಹಂಕಾರ ಮರ್ದನ ಮಾಡಿದರು. ಎಲ್ಲ ಬಗೆಯ ಕಾಯಕಜೀವಿಗಳೆಂಬ ಗಣಂಗಳ ಮಧ್ಯದ ನಾಯಕತ್ವ ಗುಣವುಳ್ಳವರನ್ನು ಆಯ್ಕೆ ಮಾಡಿ ಅವರನ್ನು ಅಮರಗಣಂಗಳೆಂದು ಕರೆದು ಸರ್ವಸಮಾಜಗಳ ಪ್ರತಿನಿಧಿಯಾಗಿಸಿದರು. ಹೀಗೆ ಸಮೂಹ ನಾಯಕತ್ವದ ರೂವಾರಿಗಳಾದರು. ಜನಸಮುದಾಯಗಳ ಆಶಯಗಳಿಗೆ ಬಾಯಿಯಾದರು. ಫ್ರೆಂಚ್ ಕ್ರಾಂತಿಯ ಸಂದರ್ಭದಲ್ಲಿ ಇಂಥ ಪ್ರಕ್ರಿಯೆಯನ್ನೇ ರೂಸೋ 'ಜನರಲ್ ವಿಲ್' ಎಂದು ಕರೆದದ್ದು.

ಎಲ್ಲ ಜಾತಿ ಜನಾಂಗಗಳ ಹಿನ್ನೆಲೆಯಿಂದ ಬಂದು ಇಷ್ಟಲಿಂಗ ದೀಕ್ಷೆ ಪಡೆದು ಶರಣರಾದಂಥವರಲ್ಲಿನ ೭೭೦ ಪ್ರಮುಖರನ್ನು ಆಯ್ಕೆ ಮಾಡಿ ಸರ್ವಸಮಾಜಗಳ ಭಾವನೆಗಳಿಗೆ ಬೆಲೆಕೊಡುವಂಥ ಸಮಾಜೋ ಧಾರ್ಮಿಕ ಸಂಸತ್ ಅನ್ನು

ಕ್ರಿಯಾಶೀಲವಾಗಿಸುವ ಮೂಲಕ ಹೊಸ ಸಮಾಜದ ನೀಲನಕ್ಷೆ ಸಿದ್ಧಪಡಿಸಿದ ಶ್ರೇಯಸ್ಸು ಬಸವಣ್ಣನವರಿಗೆ ಸಲ್ಲುತ್ತದೆ. ಮಾನವಕುಲವನ್ನು ಒಂದುಮಾಡುವ ಈ ಅನುಭವ ಮಂಟಪವೇ ಇಂದಿನ ಸಂಸತ್ ವ್ಯವಸ್ಥೆಗೆ ಸಾಕ್ಷಿಯಾಗಿದೆ. ಅನುಭವ ಮಂಟಪದ ಮೂಲಕ ಅಮರಗಣಂಗಳ ಮಧ್ಯೆ ಅಭಿವ್ಯಕ್ತಿ ಸ್ವಾತಂತ್ರ್ಯದ ಮಹತ್ವವನ್ನು ಎತ್ತಿಹಿಡಿದರು. ಅವರಲ್ಲಿ ವಿಮರ್ಶಾ ಪ್ರಜ್ಞೆ ಮೂಡಿಸಿದರು. ಶರಣ ಶರಣೆಯರ ಮಧ್ಯೆ ಜಾತಿಭೇದ ಮತ್ತು ಲಿಂಗಭೇದಗಳಿಲ್ಲದಂಥ ಸ್ಥಾಯಿಭಾವದ ಸೃಷ್ಟಿ ಮಾಡಿದರು. ಸತ್ಯಾನ್ವೇಷಣೆಯ ಉದ್ದೇಶದಿಂದ ಚರ್ಚೆಯಲ್ಲಿ ಭಾಗವಹಿಸಿದರು.

ಪ್ರಜಾಪ್ರಭುತ್ವದ ರೂಪುರೇಷಗಳ ಚಿಂತನೆ, ವಚನಗಳನ್ನು ಬದುಕಿನ ಸಂವಿಧಾನವನ್ನಾಗಿಸುವ ಬಯಕೆ, ಕಾಯಕಜೀವಿಗಳ ಜೀವನಾನುಭವದ ಮಕರಂದವನ್ನು ಸೈದ್ಧಾಂತಿಕವಾಗಿ ಕ್ರೋಡೀಕರಿಸಿ ಅನುಭಾವದ ಮಧುವನ್ನು ಸೃಷ್ಟಿಸುವುದು ಮುಂತಾದವು ಅನುಭವ ಮಂಟಪದ ಧ್ಯೇಯೋದ್ದೇಶಗಳಾಗಿದ್ದವು.

ನಿರ್ಜಾತಿ ವ್ಯವಸ್ಥೆಯ ಈ ಅನುಭವ ಮಂಟಪದಲ್ಲಿ ದಲಿತರಿಗೂ ಮಹಿಳೆಯರಿಗೂ ಸಮಾನ ಅವಕಾಶವಿದ್ದುದು ವಿಶ್ವದಲ್ಲೇ ಅದ್ವಿತೀಯವಾಗಿದೆ. ವರ್ಗ, ವರ್ಣ ಮತ್ತು ಲಿಂಗಭೇದಗಳಿಲ್ಲದ ಸಮಾಜವೊಂದರ ಉದಯಕ್ಕೆ ಅನುಭವಮಂಟಪ ಕಾರಣವಾಯಿತು. ನವಸಮಾಜವಾಗಿ ರೂಪುಗೊಂಡಂಥ ಶರಣಸಂಕುಲವು ಮಾನವರ ಮಧ್ಯೆ ಇರುವ ಎಲ್ಲ ಪ್ರಕಾರದ ಅಡ್ಡಗೋಡೆಗಳನ್ನು ಕೆಡವಿ ಹಾಕಿತು. ಇಡೀ ಮಾನವಕುಲವನ್ನು ಒಂದಾಗಿಸುವ ಮಂತ್ರ ಕಲಿಸಿತು.

ರಾಜ್ಯಶಕ್ತಿಗೆ ಬದಲಾಗಿ ಜನಶಕ್ತಿಯನ್ನು ರೂಪಿಸುವ ವಿಧಾನವನ್ನು ಕಂಡುಹಿಡಿದ ಬಸವಣ್ಣನವರು ರಾಜ್ಯಶಕ್ತಿಗೆ ಪರ್ಯಾಯವಾಗಿ ಶರಣಸಂಕುಲದ ನಿರ್ಮಾಣ ಮಾಡಿದರು. ಶರಣರ ಅನುಭವಮಂಟಪಕ್ಕೆ ಬಾಗಿಲುಗಳಿರಲಿಲ್ಲ. ಇಲ್ಲಿ ಪ್ರವೇಶ ಪಡೆಯುವುದು ಪ್ರತಿಯೊಬ್ಬ ಮಾನವನ ಹಕ್ಕಾಗಿತ್ತು. ಇದು ಜಾತಿಮಂಟಪಗಳನ್ನು ವಿರೋಧಿಸುವ ನೀತಿಮಂಟಪವಾಗಿತ್ತು. ಎಲ್ಲ ಜಾತಿ ಜನಾಂಗಗಳ ಹಿನ್ನೆಲೆಯಿಂದ ಬಂದ ಕಾಯಕಜೀವಿ ಶರಣರು ಜಾತ್ಯತೀತರಾಗಿ ಮತ್ತು ಧರ್ಮಬದ್ಧರಾಗಿ ಹೊಸತನವನ್ನು ಸಾಧಿಸಿದ್ದು ವಿಶ್ವದ ಇತಿಹಾಸದಲ್ಲೇ ಅನನ್ಯವಾಗಿದೆ.

ಅನುಭವ ಪ್ರಧಾನವಾದ ಜೀವನಶಿಕ್ಷಣ, ಸೈದ್ಧಾಂತಿಕವಾಗಿ ಜನಸಮೂಹದ ಸಂಘಟನೆ ಮತ್ತು ಅನುಭಾವದ ನೆಲೆಯಲ್ಲಿ ರಾಜ್ಯಶಕ್ತಿಯನ್ನು ಕಡೆಗಣಿಸುವಂಥ ಸ್ವಾವಲಂಬನೆಯ ಸಂಕುಲ ಬದುಕನ್ನು ಸಾಧಿಸುವ ಹೋರಾಟ ಈ ಮೂರು ಅವಸ್ಥೆಗಳು ಬಸವಣ್ಣನವರ ದರ್ಶನದ ಮೂರು ಮುಖ್ಯ ಮಗ್ಗಲುಗಳಾಗಿವೆ. ಅಂತೆಯೆ ಅವರ ದರ್ಶನವು ಭೂಮುಖಿ ದರ್ಶನ ಎಂದೆನಿಸಿಕೊಳ್ಳುವುದು. ಈ ದರ್ಶನದ ಪ್ರಕಾರ ಮರ್ತ್ಯಲೋಕವು ಕರ್ತಾರನ ಕಮ್ಮಟವಾಗಿದೆ. ಇಲ್ಲಿ ದೇವಲೋಕಕ್ಕೆ ಸ್ಥಾನವೇ

ಇಲ್ಲ. ಸಮಗ್ರ ಕ್ರಾಂತಿಯ ಪರಿಕಲ್ಪನೆಯಿಲ್ಲದೆ ಇಂಥ ಸಾಧನೆ ಮಾಡಲಿಕ್ಕಾಗದು. ಬಸವಣ್ಣನವರು ರೂಪಿಸಿದ ಆ ಮೂರೂ ಅವಸ್ಥೆಗಳು ಸ್ಫಟಿಕದ ಶಲಾಕೆಯಂತೆಯೂ ಮುತ್ತಿನಹಾರದಂತೆಯೂ ಮಾಣಿಕ್ಯದ ದೀಪ್ತಿಯಂತೆಯೂ ಇದ್ದು ಮಾನವನ ಘನತೆಯನ್ನು ಕಾಪಾಡುವ ಶಕ್ತಿಯನ್ನು ಹೊಂದಿವೆ. ಬಸವದರ್ಶನವಾದ ಲಿಂಗತತ್ತ್ವವನ್ನು ಒಳಗೊಂಡ ಬಸವಾದಿ ಶರಣರ ವಚನಗಳು ದುಡಿಯುವ ಜನರ ಮಾನವೀಯ ಮೌಲ್ಯಗಳ ಮತ್ತು ವಿಶ್ವವ್ಯಾಪಿ ಸಂಸ್ಕೃತಿಯ ವಾಹಕಗಳಾಗಿವೆ. ದುಡಿಯುವ ವರ್ಗದ ಸಾಹಿತ್ಯದ ಅನನ್ಯತೆಯ ಮಾದರಿಯಾಗಿ ಇಂದಿಗೂ ಜನಮನವನ್ನು ಸೂರೆಗೊಳ್ಳುತ್ತಿವೆ.

ಕಾಯಕಜೀವಿಗಳಿಗೆ ಬಿಡುವೆಂಬುದೇ ಇರುವುದಿಲ್ಲ. 'ಕರ್ಮಣ್ಯೇ ವಾಧಿಕಾರಸ್ಥೆ ಮಾ ಫಲೇಷು ಕದಾಚನ' (ದುಡಿಮೆಯ ಫಲಾಪೇಕ್ಷೆ ಇಲ್ಲದೆ ದುಡಿ) ಎಂದು ಆಳುವವರ್ಗ ಅವರಿಗೆ ಭಗವದ್ಗೀತೆಯನ್ನು ಉದ್ಧರಿಸುತ್ತ ದುಡಿಯುವ ಸ್ವಾತಂತ್ರ್ಯ ಮಾತ್ರ ಹೊಂದುವಂಥ ಸ್ಥಿತಿಯನ್ನು ಸೃಷ್ಟಿಸಿದೆ. ಇಂಥ ಬಿಡುವಿಲ್ಲದ ಕಾಯಕಜೀವಿಗಳಿಗೆ ಅವರದೇ ಆದ ಕಾಯಕಗಳ ಅನುಭವದ ಮೂಲಕ ಅನುಭಾವವೆಂಬ ತತ್ತ್ವಜ್ಞಾನವನ್ನು ಕಲಿಸುವ ವಿನೂತನ ಮಾರ್ಗವನ್ನು ಬಸವಣ್ಣನವರು ಕಂಡುಹಿಡಿದರು. ಕಾಯಕಜೀವಿಗಳು ತಮ್ಮ ಕಾಯಕದ ಮೂಲಕವೇ ಅನುಭಾವದ ಸಾಕ್ಷಾತ್ಕಾರ ಮಾಡಿಕೊಂಡರು. ಅವರ ಏಕಾಗ್ರತೆಯ ಕಾಯಕದಿಂದ ಸೃಷ್ಟಿಯಾದ ವಸ್ತುಗಳು ಉತ್ಕೃಷ್ಟ ಉತ್ಪನ್ನಗಳಾದವು.

ಅಕ್ಷರಲೋಕದಿಂದ ವಂಚಿತರಾದ ಮಹಿಳೆಯರು, ಶೂದ್ರರು, ಅತಿಶೂದ್ರರು ಮತ್ತು ಎಲ್ಲ ಕಾಯಕಜೀವಿಗಳಿಗೆ ಅವರ ಕಾಯಕದ ಅನುಭವದ ಮೂಲಕವೇ ಅವರಿಗೆ ಸಕಲ ಜೀವಾತ್ಮರ ಮೂಲ ಒಂದೇ ಎಂಬ ಸತ್ಯವನ್ನು ಮನಗಾಣಿಸುವಂಥ ತತ್ತ್ವಜ್ಞಾನವನ್ನು ಅರುಹುವ ಶಿಕ್ಷಣ ಕೊಡುವುದು ಅತ್ಯಂತ ತುರ್ತಾಗಿ ಆಗಬೇಕಾದ ಕಾರ್ಯ ಎಂಬುದನ್ನು ಬಸವಣ್ಣನವರು ಮನಗಂಡರು. ಕಾಯಕಜೀವಿಗಳು ತಮ್ಮ ಕಾಯಕದಲ್ಲಿ ಕರಕುಶಲತೆಯನ್ನು ಹೊಂದುತ್ತ, ಹೊಂದುತ್ತ ಔನತ್ಯವನ್ನು ಸಾಧಿಸುವುದರ ಮೂಲಕವೇ ಬಸವತತ್ತ್ವವನ್ನು ಅರಿತುಕೊಂಡರು. ತಾವು ಕಂಡುಕೊಂಡ ತತ್ತ್ವಜ್ಞಾನದ ಅರಿವನ್ನು ವಚನಗಳಲ್ಲಿ ಹಿಡಿದಿಡುವಲ್ಲಿ ಶರಣರು ತಮ್ಮ ಕಾಯಕದ ಅನುಭವವನ್ನೇ ಪ್ರತಿಮೆ, ಪ್ರತೀಕ, ಸಂಕೇತ ಮತ್ತು ರೂಪಕಗಳಾಗಿ ಬಳಸಿದರು. ಹೀಗೆ ವಚನ ಸಾಹಿತ್ಯವು ವಿಶ್ವದಲ್ಲೇ ಕಾಯಕಜೀವಿಗಳ ಮೊದಲ ಸಾಹಿತ್ಯವಾಯಿತು. ದುಡಿಮೆ, ಶಿಕ್ಷಣ ಮತ್ತು ತತ್ತ್ವಗಳ ಮಹಾಸಂಗಮವಾಗಿರುವ ವಚನಗಳು ಇಂದಿಗೂ ಸಹೃದಯರು ಹರ್ಷೋದ್ಗಾರ ತೆಗೆಯುವಂತೆ ಮಾಡುತ್ತವೆ. ಚೈತನ್ಯರೂಪಿಯಾದ ಒಬ್ಬನೇ ದೇವರು, ವಸ್ತುರೂಪಿಯಾದ ಒಂದೇ ವಿಶ್ವ ಮತ್ತು ಸಕಲ ಚರಾಚರಗಳೊಂದಿಗೆ ಇರುವ ಏಕೈಕ ಮಾನವಕುಲದ ಮಧ್ಯೆ ಇರುವಂಥ ಅವಿನಾಭಾವ ಸಂಬಂಧವನ್ನು ವಚನಗಳು ಮನದಟ್ಟು ಮಾಡಿಕೊಡುವಲ್ಲಿ ಯಶಸ್ಸನ್ನು ಸಾಧಿಸಿವೆ.

ವಚನಗಳು ಬಾಹ್ಯಕ್ರಾಂತಿಯನ್ನಷ್ಟೇ ಸೂಚಿಸುವುದಿಲ್ಲ. ಆಂತರಿಕ ಕ್ರಾಂತಿಯ ಕಡೆಗೂ ಒತ್ತುಕೊಡುತ್ತವೆ. ಒಳಗೂ ಹೊರಗೂ ಸಮಗ್ರ ಕ್ರಾಂತಿಯಾದಾಗ ಮಾತ್ರ ನವಮಾನವರನ್ನು ಸೃಷ್ಟಿಸಲು ಸಾಧ್ಯ ಎಂಬುದು ಬಸವಣ್ಣನವರ ಅಚಲ ನಿರ್ಧಾರವಾಗಿತ್ತು. ಆಂತರಿಕ ಕ್ರಾಂತಿಯಾಗದೆ ಬರಿ ಬಾಹ್ಯಕ್ರಾಂತಿ ಬಹಳ ದಿನಗಳ ವರೆಗೆ ಬಾಳಿಕೆ ಬರುವಂತದ್ದಾಗುವುದಿಲ್ಲ. ಬರಿ ಆಂತರಿಕ ಕ್ರಾಂತಿಯಿಂದ ಅಂತರಂಗ ಶುದ್ಧಿಯಾಯಿತೆಂದು ಬದುಕುವವರಿಂದಲೂ ಯಾವುದೇ ಸಾಮಾಜಿಕ ಬದಲಾವಣೆಯಾಗುವುದಿಲ್ಲ. ಆಂತರಿಕ ಮತ್ತು ಬಾಹ್ಯಕ್ರಾಂತಿಯ ಸಂಗಮದಿಂದಲೇ ನವಮಾನವನ ಉದಯವಾಗುವುದು. ಆಂತರಿಕವಾಗಿ ಬದಲಾವಣೆ ಹೊಂದಬೇಕಾದರೆ ಬಾಹ್ಯ ಪ್ರಪಂಚದ ಆಗುಹೋಗುಗಳ ಬಗ್ಗೆ ಆಳವಾದ ಜ್ಞಾನ ಇರಬೇಕಾಗುವುದು. ಬಾಹ್ಯಜ್ಞಾನ ಪಡೆದಂತೆಲ್ಲ ಆಂತರಿಕವಾಗಿ ಬದಲಾವಣೆಗಳಾಗುತ್ತ ಹೋಗುವವು. ಆಂತರಿಕವಾಗಿ ಆಗುವ ಬದಲಾವಣೆಗಳು ಬಾಹ್ಯಪ್ರಪಂಚದ ಮೇಲೆ ಪರಿಣಾಮ ಬೀರುವವು. ಆ ಮೂಲಕ ಸಾಮಾಜಿಕವಾಗಿ ಬದಲಾವಣೆಯಾಗತೊಡಗುವುದು. ಹೀಗೆ ಆಂತರಿಕ ಮತ್ತು ಬಾಹ್ಯಜಗತ್ತಿನ ಕೊಡುಕೊಳ್ಳುವಿಕೆಯ ಮೂಲಕ ವ್ಯಕ್ತಿಯಲ್ಲಿ ಮತ್ತು ಸಮಾಜದಲ್ಲಿ ಬದಲಾವಣೆಯಾಗುತ್ತ ಹೋಗುವುದು. ಈ ಕೊಡುಕೊಳ್ಳುವಿಕೆ ಮಾನವಕುಲವನ್ನು ಅಧೋಗತಿಗೆ ಒಯ್ಯುವಂಥದ್ದಾಗಿರಬಹುದು ಅಥವಾ ಉನ್ನತಿಯ ಕಡೆಗೆ ಸಾಗಿಸುವಂಥದ್ದಾಗಿರಬಹುದು. ಬಾಹ್ಯಪ್ರಪಂಚದ ಪ್ರಭಾವ ಒಬ್ಬ ವ್ಯಕ್ತಿಯ ಮೇಲೆ ನಕಾರಾತ್ಮಕವಾದಾಗ ಆತ ತದನಂತರ ಬಾಹ್ಯಪ್ರಪಂಚದ ಮೇಲೆ ನಕಾರಾತ್ಮಕವಾದ ಪ್ರಭಾವವನ್ನೇ ಬೀರತೊಡಗುತ್ತಾನೆ. ಅಂಥ ಮನಸ್ಥಿತಿಯವರಿಗೆ ಬಾಹ್ಯಪ್ರಪಂಚ ನಕಾರಾತ್ಮಕವಾಗಿ ಕಾಣುವುದು ಸಹಜವಾಗುತ್ತದೆ. ಹೀಗೆ ಕೇಡಿನ ವಾತಾವರಣ ಸೃಷ್ಟಿಯಾಗುತ್ತ ಹೋಗುವುದನ್ನು ಶರಣರು ಗಮನಿಸಿದರು. ಅಜ್ಞಾನ, ಮೂಢನಂಬಿಕೆ, ಮೂಢಭಕ್ತಿ, ಹಿಂಸಾಭಕ್ತಿ, ಗೊಡ್ಡುಸಂಪ್ರದಾಯ ಮತ್ತು ವರ್ಣಾಶ್ರಮ ಧರ್ಮದ ಹೆಸರಿನಲ್ಲಿ ಶೋಷಣೆ ನಡೆಯುತ್ತಿರುವುದನ್ನು ಗಮನಿಸಿದರು. ಮಾನವರು ವೈಚಾರಿಕ ಮತ್ತು ವೈಜ್ಞಾನಿಕ ಮನೋಭಾವವನ್ನು ತಾಳಿದಾಗ ಮಾತ್ರ ಎಲ್ಲ ತೆರನಾದ ಅನಿಷ್ಟಗಳಿಂದ ಹೊರಬರಲು ಸಾಧ್ಯ ಎಂಬುದರ ಬಗ್ಗೆ ಶರಣರಿಗೆ ಅಚಲವಾದ ನಂಬಿಕೆ ಇತ್ತು. ಹೀಗೆ ಅವರು ಕೆಟ್ಟದ್ದರ ದುಷ್ಪರಿಣಾಮದ ಬಗ್ಗೆ ಆಳವಾಗಿ ಚಿಂತಿಸಿದರು. ವಚನಗಳ ಮೂಲಕ ಜನಮಾನಸದಲ್ಲಿ ಒಳ್ಳೆಯದರ ಕನಸುಗಳನ್ನು ಬಿತ್ತಲು ಯತ್ನಿಸಿ ಸಫಲರಾದರು. ಸಮಾಜದಲ್ಲಿರುವ ಕೆಟ್ಟದ್ದರ ಜಾಗದಲ್ಲಿ ಒಳ್ಳೆಯದನ್ನು ಸ್ಥಾಪಿಸುವುದರಲ್ಲಿ ಮಗ್ನರಾದರು. ನಿಜದ ನಿಲವನ್ನು ತಾಳಿದ ಶರಣರಿಗೆ ಇದೇ ಧರ್ಮಕಾರ್ಯವಾಯಿತು. ಮಾನವರಿಗೆ ಶೋಷಣೆಯ ಅರಿವು ಮೂಡಿಸಿ ಶೋಷಣೆಯ ಮೂಲಗಳನ್ನು ಅವರ ಮನಸ್ಸಿಗೆ ನಾಟುವಂತೆ ತಿಳಿಸಿದರೆ ಅವರೆಂದೂ ಶೋಷಣೆಯ ಪರವಾಗಿ ನಿಲ್ಲುವುದಿಲ್ಲ. ಅಷ್ಟೇ

ಅಲ್ಲ ಆಂತರಿಕ ಮತ್ತು ಬಾಹ್ಯ ಜಗತ್ತನ್ನು ಶುದ್ಧಗೊಳಿಸಲು ಅವರು ಸನ್ನದ್ಧರಾಗುತ್ತಾರೆ. ಹೀಗೆ ಅಂತರಂಗ ಮತ್ತು ಬಹಿರಂಗದ ಶುದ್ಧಿಗಾಗಿ ನಿರಂತರ ಕ್ರಿಯಾಶೀಲವಾಗುವುದರ ಮೂಲಕ ಮಾನವರನ್ನು ಸಾಮಾಜಿಕವಾಗಿ ಕ್ರಿಯಾಶೀಲಗೊಳಿಸಲು ಯತ್ನಿಸುತ್ತಾರೆ. ಇದು ಅವರ ನಿರಂತರ ಕ್ರಿಯೆಯಾಗಿತ್ತು.

ಈ ಜೀವಜಗತ್ತನ್ನು ಬಸವಣ್ಣನವರು ಜಂಗಮಲಿಂಗ ಎಂದು ಕರೆದು ಕಾಯಕ ಮತ್ತು ದಾಸೋಹದಿಂದ ಜಂಗಮಲಿಂಗ ಪೂಜೆ ಮಾಡಲು ತಿಳಿಸಿದ್ದಾರೆ. ಅಂದರೆ ಸಮಾಜಸೇವೆಯಿಂದ ಮಾತ್ರ ಸಮಾಜವೆಂಬ ದೇವರ ಪೂಜೆ ನೆರವೇರುತ್ತದೆ. ಈ ಜಂಗಮವು ಚೈತನ್ಯವಾಗಿ, ಪಂಚಮಹಾಭೂತಗಳಾಗಿ, ವಿಶ್ವವಾಗಿ, ಜೀವಸಂಕುಲವಾಗಿ ಮತ್ತೆ ಮಾನವ ಸಮಾಜವಾಗಿ, ತತ್ತ್ವಪ್ರಚಾರದ ವ್ಯಕ್ತಿಯಾಗಿ ವಿವಿಧ ಅರ್ಥಗಳನ್ನು ಸ್ಫುರಿಸುತ್ತಲೇ ಹೋಗುತ್ತದೆ. ಹೀಗೆ ಒಟ್ಟಾರೆ ಜೀವಜಗತ್ತಿನ ಕಲ್ಯಾಣವೇ ಬಸವಣ್ಣನವರ ಮುಖ್ಯ ಗುರಿಯಾಗಿತ್ತು. ಅಂತಯೆ ಈ ಜೀವಜಗತ್ತಿನ ಸಂರಕ್ಷಣೆಗಾಗಿ ಅವರು ಶರಣರೆಂಬ ನವಮಾನವರ 'ಸೃಷ್ಟಿ' ಮಾಡಿದರು. ಶರಣರು ಬದುಕಿನ ಎಲ್ಲ ಸ್ತರಗಳಲ್ಲಿ ಕ್ರಾಂತಿಕಾರಿ ನಿಲವನ್ನು ತಾಳುವಂತೆ ಮಾಡಿದರು. ವೈದಿಕರು ಸೃಷ್ಟಿಸಿದ ಅಸ್ಪೃಶ್ಯತೆ, ಜಾತಿ, ಉಪಜಾತಿ, ಚಾತುರ್ವರ್ಣ ವ್ಯವಸ್ಥೆ, ಮೂಢನಂಬಿಕೆ, ಶೋಷಣೆ, ಸ್ತ್ರೀಶೋಷಣೆ ಮತ್ತು ಜನಸಮುದಾಯವನ್ನು ವಿವಿಧ ಪ್ರಕಾರಗಳಲ್ಲಿ ಬೇರ್ಪಡುಸುತ್ತ ಅವರ ವ್ಯಕ್ತಿತ್ವವನ್ನು ಮೊಟಕುಗೊಳಿಸುವಂಥ ಸಂಪ್ರದಾಯಗಳನ್ನು ಹಾಗೂ ಬಹುಜನರಾದ ಕಾಯಕಜೀವಿಗಳು ಗುಲಾಮರಂತೆ ಬದುಕುವುದನ್ನೇ ಜೀವನವಿಧಾನವಾಗಿ ಮಾಡುವಂಥ ಆಚರಣೆಗಳನ್ನು ದಿಟ್ಟತನದಿಂದ ಕಿತ್ತೆಸೆದರು. ಆಗ ಕಾಯಕಜೀವಿಗಳ ತಮ್ಮ ಘನತೆಯನ್ನು ಅರಿತುಕೊಂಡರು. ಅವರು ಹೊಸ ಚಿಂತನೆ ಮತ್ತು ಹೊಸ ಜೀವನಕ್ರಮದೊಂದಿಗೆ ಮಾನವೀಯ ವ್ಯವಸ್ಥೆಯನ್ನು ಕಟ್ಟುವಂಥ ಕಾರ್ಯದಲ್ಲಿ ನಿರತರಾದರು. ಅವರು ಎಷ್ಟೊಂದು ಸ್ವಾವಲಂಬಿಗಳಾದರೆಂದರೆ ಬಿಜ್ಜಳನ ಭಂಡಾರದ ಮೇಲೆ ಅವಲಂಬಿತರಾಗದೆ ತಮ್ಮ ಮನದಾಳದಿಂದ ಹಿಂಸಾತ್ಮಕವಾದ ರಾಜ್ಯಶಕ್ತಿಯನ್ನೇ ಕಿತ್ತೊಗೆದರು! ಮಾರ್ಕ್ಸ್ ಹೇಳಿದ 'ಸ್ಟೇಟ್ ಶುಡ್ ವಿದರ್ ಅವೆ' ಎಂಬುದು ನಮ್ಮ ಕಾಯಕಜಿವಿ ಶರಣರು ಬಸವಣ್ಣನವರ ನೇತೃತ್ವದಲ್ಲಿ ಮೌನವಾಗಿ ಸಾಧಿಸಿ ತೋರಿಸಿದರು. ಕಲ್ಯಾಣದಲ್ಲಿ ಶರಣರ ಹತ್ಯಾಕಾಂಡವಾಗಲು ಶರಣರ ಈ ದೃಢನಿಲವೇ ಮೂಲ ಕಾರಣವಾಯಿತು. ರಾಜ್ಯಶಕ್ತಿ ಮತ್ತು ಮನುಧರ್ಮಶಕ್ತಿಗಳು ಶರಣರ ವಿರುದ್ಧ ಸ್ಫೋಟಗೊಳ್ಳಲು ಹರಳಯ್ಯ ಮತ್ತು ಮಧುವರಸರ ಮಕ್ಕಳ ಮದುವೆ ಅವಕಾಶ ಕಲ್ಪಿಸಿತು. ಆಗ ಶರಣರ ಹತ್ಯಾಕಾಂಡವಾಯಿತು. ಅವರ ಬಹುಪಾಲು ಕ್ರಾಂತಿಕಾರಿ ವಚನ ಸಾಹಿತ್ಯವನ್ನು ಧ್ವಂಸ ಮಾಡಲಾಯಿತು. ಈ ಹತ್ಯಾಕಾಂಡ ಕಲ್ಯಾಣಕ್ರಾಂತಿ ಅಲ್ಲ. ಅದು ಶರಣರ ಅಹಿಂಸಾ ಕ್ರಾಂತಿಯ ಮೇಲೆ ಕ್ರೂರ ದಾಳಿ ಮಾಡಿದ ಪಟ್ಟಭದ್ರರ ಪ್ರತಿಕ್ರಾಂತಿಯಾಗಿದೆ.

ಶರಣಸಂಕುಲದಲ್ಲಿ ಮೇಲೆ ತಿಳಿಸಿದ ಎಲ್ಲ ಅನಾಹುತ ಆಚರಣೆ, ಮೂಢನಂಬಿಕೆ ಮತ್ತು ಶೋಷಣೆಗಳ ವಿರುದ್ಧ ಮತ್ತು ಮಾನವರೊಳಗಿನ ಅವಗುಣಗಳ ವಿರುದ್ಧ ನಿರಂತರವಾದ ಸಮಗ್ರ ಕ್ರಾಂತಿ ನಡೆಯುತ್ತಿತ್ತು. ಈ ಕ್ರಾಂತಿಯು ಮೂರು ತೆರನಾದ ವೈಚಾರಿಕ ಸಂಘರ್ಷಗಳಿಂದ ಕೂಡಿತ್ತು. ನಮ್ಮೊಳಗಿನ ಅವಗುಣಗಳ ವಿರುದ್ಧದ ಸಂಘರ್ಷ, ಶರಣಸಂಕುಲದೊಳಗಿನ ವೈಚಾರಿಕ ಸಂಘರ್ಷ ಮತ್ತು ಬಿಜ್ಜಳನ ವ್ಯವಸ್ಥೆಯೊಳಗಿನ ಶೀತಲಸಂಘರ್ಷಗಳ ಮೂಲಕ ಶರಣರ ಚಳವಳಿ ಬೆಳೆದು ಹೊಸತನವನ್ನು ಸಾಧಿಸಿತು. ಈ ಕಾರಣದಿಂದಲೇ ಬಸವಧರ್ಮವು ಮಾನವವಿಮೋಚನೆಯ, ವ್ಯಕ್ತಿತ್ವವಿಕಸನದ, ಪಶು, ಪಕ್ಷಿ ಮತ್ತು ಮಾನವಹಕ್ಕುಗಳ, ಸಮತಾವಾದದ, ಗೊಡ್ಡುಸಂಪ್ರದಾಯಗಳನ್ನು ವಿರೋಧಿಸುವ, ಮೂಢನಂಬಿಕೆಗಳಿಗೆ ಸವಾಲೆಸೆಯುವ ಮತ್ತು ಒಡೆಯ–ಗುಲಾಮ ವ್ಯವಸ್ಥೆಯನ್ನು ಕಿತ್ತೆಸೆದ ಧರ್ಮವಾಗಿ ಮಾನವ ವಿಜಯದ ಪತಾಕೆಯನ್ನು ಹಾರಿಸಿದೆ.

ಬಸವಣ್ಣನವರು ಮಾನವ ಸಂಬಂಧದಲ್ಲೂ ಕ್ರಾಂತಿ ಮಾಡಿದರು. ರಕ್ತಸಂಬಂಧಕ್ಕಿಂತ ಭಕ್ತಿ ಸಂಬಂಧವೇ ಮಹತ್ವದ್ದು ಎಂಬುದು ಅವರ ದೃಢ ನಿಲವಾಗಿತ್ತು. ಆ ಕಾರಣದಿಂದಲೇ ಸೈದ್ಧಾಂತಿಕ ಸಂಬಂಧವೇ ಅಂತಿಮ ಎಂದು ಅರುಹಿದರು. ಬಸವಣ್ಣನವರ ಕುಟುಂಬ ವರ್ಗದವರೆಲ್ಲರೂ ಶರಣರ ಸೈದ್ಧಾಂತಿಕ ಚಳವಳಿಯಲ್ಲಿ ತೊಡಗುವುದರ ಮೂಲಕ ಅವರ ಸಂಬಂಧಿಗಳಾದುದು ಅನನ್ಯವಾಗಿದೆ. ಬಸವಣ್ಣನವರು ಪ್ರಧಾನಿಯಾಗಿದ್ದರೂ ದುಡಿಯುವ ಜನಸಮೂಹದ ಜೊತೆ ಬದುಕಿದರು. ಹರಗಣಪಂಕ್ತಿಯಲ್ಲಿ ಪ್ರಸಾದ ಸ್ವೀಕರಿಸುತ್ತಿದ್ದರು. ಬಿಜ್ಜಳನ ರಾಜ್ಯವ್ಯವಸ್ಥೆಯ ಪ್ರಧಾನಿಯಾಗಿದ್ದುಕೊಂಡೂ ನವಸಮಾಜದ ನಿರ್ಮಾಣಕ್ಕಾಗಿ ಕಾಯಕಜೀವಿಗಳ ನಾಯಕತ್ವ ವಹಿಸಿಕೊಂಡ ಅದ್ವಿತೀಯ ಮುತ್ಸದ್ದಿ ಬಸವಣ್ಣ. ಪರಸೇವೆ ಮಾಡುವ ಪ್ರಧಾನಿ ಹೆಚ್ಚಿನವನಲ್ಲ, ಕಾಯಕಜೀವಿಗಳು ಕಡಿಮೆಯವರಲ್ಲ ಎಂಬುದು ಬಸವಣ್ಣನವರ ನಿಲವಾಗಿತ್ತು. ಅಂತೆಯೆ ಸಂಕಷ್ಟಕ್ಕೊಳಗಾದ ಜನರ ಮಧ್ಯದಿಂದಲೇ ಸರ್ವರನ್ನೂ ಒಳಗೊಳ್ಳುವಂಥ ಕಾಯಕಸಿದ್ಧಾಂತದ ಹೊಸಧರ್ಮವನ್ನು ಸ್ಥಾಪಿಸಲು ಮತ್ತು ಕರ್ಮಸಿದ್ಧಾಂತದ ಸವರ್ಣೀಯರ ಹಳೆಯ ಧರ್ಮವನ್ನು ಅಲ್ಲಗಳೆಯಲು ಅವರಿಂದ ಸಾಧ್ಯವಾಯಿತು. ಕರ್ಮಸಿದ್ಧಾಂತದ ಕೂಸುಗಳಾದ ಸ್ವರ್ಗ, ನರಕ, ಪುಣ್ಯ, ಪಾಪ, ಶಾಪ, ಪುನರ್ಜನ್ಮ, ಮೋಕ್ಷ, ಮಂದಿರ, ಮೂರ್ತಿ, ಮಠ, ಸ್ವಾಮಿ, ದಾನ, ಪಂಚಾಂಗ, ಮೂಢನಂಬಿಕೆ ಮತ್ತು ಅಧ್ಯಾತ್ಮಗಳನ್ನು ಅಲ್ಲಗಳೆದು ಆತ್ಮವಿಶ್ವಾಸ ಬೆಳೆಸಿದರು. ದೇವರು ದಿಂಡಿರುಗಳ ಹೆಸರಿನಲ್ಲಿ ಪುರೋಹಿತಶಾಹಿಗಳಿಗೆ ದಂಡ ತೆರುವ ಪ್ರಾಯಶ್ಚಿತ್ತವನ್ನು ಅಲ್ಲಗಳೆದು 'ಒಮ್ಮೆ ಶರಣೆನ್ನು' ಎಂದು ಹೇಳುವ ಮೂಲಕ ಪಶ್ಚಾತ್ತಾಪದ ಹಾದಿ ತೋರಿಸಿದರು. ಗುರು, ಲಿಂಗ, ಜಂಗಮ, ಕಾಯಕ, ಪ್ರಸಾದ, ದಾಸೋಹ ಮತ್ತು

ಅನುಭಾವದ ಮೂಲಕ ಮಾನವಧರ್ಮಕ್ಕೆ ನಾಂದಿ ಹಾಡಿದರು. ಕೆಳವರ್ಗೀಕರಣಕ್ಕೆ ಮತ್ತು ಕೆಳಜಾತೀಕರಣಕ್ಕೆ ಒಳಗಾಗಿ ಎಲ್ಲರೊಡನೆ ಒಂದಾದರು. ರಾಜ್ಯಗಳ ಅಳಿವಿನ ಮತ್ತು ಪ್ರಜಾಪ್ರಭುತ್ವದ ಉದಯದ ಕನಸು ಕಾಣುತ್ತ ಯುಗದ ಉತ್ಸಾಹವಾದರು. ಸವರ್ಣೀಯರ ಕೇಂದ್ರಿತ ಮತ್ತು ಮಾನವ ಕೇಂದ್ರಿತ ಬದುಕನ್ನು ಅಲ್ಲಗಳೆದು ಪಶುಪಕ್ಷಿಗಳೂ ಸೇರಿದಂತೆ ಜೀವಕೇಂದ್ರಿತ ಬದುಕಿಗೆ ಮಾರ್ಗದರ್ಶಿಯಾದರು.

ಈ ಹಿನ್ನೆಲೆಯೊಂದಿಗೆ ಶರಣರು ಬೌದ್ಧಿಕ ಮತ್ತು ಮಾನಸಿಕ ಔನತ್ಯ ಸಾಧಿಸುತ್ತ ನವಮಾನವರಾದರು. ಅಹಿಂಸಾಧರ್ಮವನ್ನು ಪಾಲಿಸುತ್ತ ಪ್ರಭುತ್ವ ಬಯಸುವ ಎಲ್ಲ ತೆರಿಗೆಗಳನ್ನು ಕೊಡುತ್ತ ಸಾಗಿದರು. ಆದರೆ ಪ್ರಭುತ್ವದ ಮೇಲೆ ಅವಲಂಬಿತರಾಗದೆ ರಾಜಕೀಯ ವ್ಯವಸ್ಥೆಯಿಂದ ಮಾನಸಿಕವಾಗಿ ವಿಮುಖರಾಗುತ್ತ 'ಅನುಭಾವಿ ಅರಾಜಕತಾವಾದಿ'ಗಳಾದರು. ಮಾನವಕುಲದ ಇತಿಹಾಸದಲ್ಲಿ ಇದೊಂದು ಬಹುದೊಡ್ಡ ಸಾಧನೆಯಾಗಿದೆ. ರಾಜ್ಯಶಕ್ತಿಯ ಹಿಂಸೆಯನ್ನು ಅಹಿಂಸೆಯಿಂದ ಎದುರಿಸಿದ ಮೊದಲ ಶಕ್ತಿಶಾಲಿ ಚಳವಳಿ ಇದಾಗಿದೆ. ಬಿಜ್ಜಳನ ಪ್ರಭುತ್ವವನ್ನು ಶರಣರು ಎದುರು ಹಾಕಿಕೊಳ್ಳಲಿಲ್ಲ. ಆದರೆ ಆ ಪ್ರಭುತ್ವದ ಮೇಲೆ ಅವಲಂಬವಾಗದಂಥ ಸಾಮಾಜಿಕ ವ್ಯವಸ್ಥೆಯನ್ನು ಬಿಜ್ಜಳನ ವ್ಯವಸ್ಥೆಯ ಒಳಗೇ ನಿರ್ಮಿಸಿದರು. ಇದರಿಂದ ಪುರೋಹಿತಶಾಹಿಗಳು ಮತ್ತು ಪ್ರಭುತ್ವ ಗಲಿಬಲಿಗೊಂಡಿತು. ಶರಣರು ಬಸವಣ್ಣನವರ ಮಾರ್ಗದರ್ಶನದಲ್ಲಿ ಪ್ರಭುತ್ವವನ್ನು ಎದುರು ಹಾಕಿಕೊಳ್ಳದೆ ನಾಶಮಾಡುವ ನವೀನ ತಂತ್ರ ಹೂಡಿದ್ದಾರೆ ಎಂದು ಪುರೋಹಿತಶಾಹಿಗಳು ಬಿಜ್ಜಳನ ಕಿವಿಯೂದಿದರು. ಇಂಥ ಷಡ್ಯಂತ್ರಗಳಿಂದಾಗಿ ಶರಣರ ಮಾರಣ ಹೋಮವಾಯಿತು. ಪ್ರಭುತ್ವ ಸದಾ ಸಂಶಯಗ್ರಸ್ಥ ವಾಗಿರುವುದರಿಂದಲೇ ಹೇಡಿಗುಣವನ್ನು ಹೊಂದಿ ಆಕ್ರಮಣಶೀಲವಾಗಿರುತ್ತದೆ. ಹೀಗೆ ಬಿಜ್ಜಳನ ಪ್ರಭುತ್ವ (ಬಹುಶಃ ಬಿಜ್ಜಳನಿಗೆ ಹಿಡಿಸದಿದ್ದರೂ) ಅಮಾಯಕರ ಮೇಲೆ ಆಕ್ರಮಣ ಮಾಡಿತು. ತನ್ನ ಮೇಲೆ ಅವಲಂಬಿತರಾಗದವರ ಬಗ್ಗೆ ಪ್ರಭುತ್ವ ಭಯಭೀತವಾಗಿರುತ್ತದೆ. ಅಂತೆಯೆ ಅದು ತನ್ನ ಮೇಲೆ ಅವಲಂಬಿತರಾಗದ ಶರಣರ ಹತ್ಯೆ ಮಾಡಿತು.

ಕಲ್ಯಾಣ ಹತ್ಯಾಕಾಂಡಕ್ಕೆ 'ಕಲ್ಯಾಣಕ್ರಾಂತಿ' ಎಂದು ಕರೆಯುದರ ಮೂಲಕ ನಾವು ಶರಣರಿಗೆ ಅನ್ಯಾಯ ಮಾಡುತ್ತಿದ್ದೇವೆ. ಈ ಹಿನ್ನೆಲೆಯಲ್ಲಿ ಶರಣಸಂಕುಲದಲ್ಲಿ ಪ್ರತಿಕ್ಷಣ ನಡೆಯುತ್ತಿದ್ದ ಸಮಗ್ರ ಕ್ರಾಂತಿಯ ಚಟುವಟಿಕೆಗಳನ್ನು ಮರೆಮಾಚಲಾಯಿತು ಎಂಬುದನ್ನು ತಿಳಿದುಕೊಳ್ಳುವುದು ಕಾಲದ ಅವಶ್ಯಕತೆಯಾಗಿದೆ.

ಬಸವಣ್ಣನವರು ಬಿಜ್ಜಳನ ಪ್ರಧಾನಿಯಾಗಿದ್ದುಕೊಂಡು ಜನರಿಗೆ ನ್ಯಾಯ ಸಿಗುವಂಥದ್ದರ ಕಡೆಗೇ ತಲ್ಲೀನರಾಗುತ್ತಿದ್ದರು. ಪರುಷಕಟ್ಟೆ ಎಂಬ ಸಾಮಾಜಿಕ ನ್ಯಾಯಪೀಠದ ಮೇಲೆ ಕುಳಿತು ಜನರ ಅಹವಾಲುಗಳನ್ನು ಆಲಿಸುತ್ತಿದ್ದರು. ಸಮಸ್ಯೆಗಳಿಗೆ

ಪರಿಹಾರ ಕಂಡುಹಿಡಿದು ಪ್ರಭುತ್ವದ ಮನವೊಲಿಸಿ ಜನಪರ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಜನರ ಕಾಯಕನಿಷ್ಠೆಯಿಂದಾಗಿ ಬಿಜ್ಜಳನ ಭಂಡಾರ ತುಂಬಿ ತುಳುಕುತ್ತಿತ್ತು. ಶರಣರ ಮೇಲೆ ಹರಿಹಾಯುವ ಯಾವುದೇ ಕಾರಣಗಳು ಬಿಜ್ಜಳನ ಬಳಿ ಇರಲಿಲ್ಲ ಆದರೆ ಅವೈದಿಕ ಶರಣರ ಕ್ರಾಂತಿಕಾರಿ ಜೀವನಕ್ರಮದಿಂದ ತಮ್ಮ ಅಸ್ತಿತ್ವವೇ ಹೇಳ ಹೆಸರಿಲ್ಲದಂತಾಗುತ್ತದೆ ಎಂದು ಭಯಪಟ್ಟ ಪುರೋಹಿತಶಾಹಿಗಳು ಆ ತಮ್ಮ ಭಯವನ್ನು ಬಿಜ್ಜಳನ ಮನದಲ್ಲೂ ಬಿತ್ತಿದರು. ಆ ಮೂಲಕ ಶರಣರ ಲೋಕಮಾನ್ಯವಾದ ಕ್ರಾಂತಿಕಾರಿ ವ್ಯವಸ್ಥೆಯನ್ನು ಹಾಳುಮಾಡಿದರು.

ಬಸವಣ್ಣನವರು ವಚನ ಚಳವಳಿ ಆರಂಭಿಸುವ ಮೊದಲು ಜಗತ್ತಿನಲ್ಲಿ ಅನ್ಯಾಯದ ಯುದ್ಧಗಳು ಮತ್ತು ನ್ಯಾಯಬದ್ಧ ಎಂದು ಕರೆದುಕೊಳ್ಳುವ ಯುದ್ಧಗಳು ನಡೆಯುತ್ತಿದ್ದವೇ ಹೊರತು ಚಳವಳಿಗಳು ನಡೆಯುತ್ತಿದ್ದಿಲ್ಲ. ಈ ಕಾರಣದಿಂದಲೇ ಬಸವಣ್ಣನವರು ಚಳವಳಿಯ ಜನಕರೆಂಬುದರ ಅರಿವಾಗುವುದು. ಅವರು ರೂಪಿಸಿದ ಧರ್ಮವು ವಿವಿಧ ಸಾಮಾಜಿಕ ಸ್ತರಗಳಿಂದ ಬಂದ ಬಹುನಾಯಕರಿಂದ ಕೂಡಿದ ಸರ್ವೋದಯ ಧರ್ಮವಾಗಿದೆ. ಬಸವಣ್ಣನವರು ಮಾಡಿದ ಪ್ರಯೋಗಗಳೆಲ್ಲ ಇಡೀ ವಿಶ್ವದಲ್ಲೇ ಪ್ರಥಮ ಬಾರಿಗೆ ನಡೆದ ಪ್ರಯೋಗಗಳಾಗಿವೆ. ಸಮಗ್ರ ಕ್ರಾಂತಿಯ ಪ್ರಯೋಗಗಳಾಗಿವೆ.

❖❖

೨೫
❖
ವಚನಗಳಲ್ಲಿ ಜಾಗತೀಕರಣಕ್ಕೆ ಉತ್ತರ

(ಜೀವಸಂಕುಲಕ್ಕೆ ಮತ್ತು ಭೂಮಿಗೆ ಸಹಕಾರಿಯಾಗುವಂಥ ಕಾಯಕ; ಕಾಯಕದಿಂದ ಬಂದುದನ್ನು ದೇವರ ಪ್ರಸಾದ ಎಂದು ಸ್ವೀಕರಿಸುವ ಮನೋಭಾವ ಮತ್ತು ಬಂದುದರಲ್ಲಿ ದಾಸೋಹ ಭಾವದಿಂದ ಹಂಚಿ ತಿನ್ನುವ ಸಾಮಾಜಿಕ ಪ್ರಜ್ಞೆಯಿಂದ ೧೨ನೇ ಶತಮಾನದ ಶರಣರು ಬದುಕುತ್ತ ನವಸಮಾಜದ ನಿರ್ಮಾಪಕರಾದರು. ಆದರೆ ಇಂದು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಯಿಂದಾಗಿ ನಮ್ಮ ನೆಲ ಜಲ ಸಂಪನ್ಮೂಲಗಳು ಬಹುರಾಷ್ಟ್ರೀಯ ಕಂಪೆನಿಗಳ ಪಾಲಾಗುತ್ತಿವೆ. ಉದಾರೀಕರಣವೆಂದರೆ ಬಹುರಾಷ್ಟ್ರೀಯ ಕಂಪೆನಿಗಳಿಗೆ ಕಡಿಮೆ ದರದಲ್ಲಿ ಭೂಮಿ, ವಿದ್ಯುತ್ ಮತ್ತು ನೀರಿನ ಸೌಲಭ್ಯ ಒದಗಿಸುವುದು. ಖಾಸಗೀಕರಣವೆಂದರೆ ಸರ್ಕಾರಿ ಸ್ವಾಮ್ಯದ (ಪಬ್ಲಿಕ್ ಸೆಕ್ಟರ್) ಉದ್ದಿಮೆಗಳನ್ನು ಕಡಿಮೆ ಮಾಡುತ್ತ ಖಾಸಗೀ ವಲಯಕ್ಕೆ ಹೆಚ್ಚಿನ ಆದ್ಯತೆ ಕೊಡುವುದು. ಜಾಗತೀಕರಣವೆಂದರೆ ಜಗತ್ತಿನ ರಾಷ್ಟ್ರಗಳಬಿ೧೩೦

ಮಧ್ಯೆ ಉತ್ಪಾದನೆ ಮತ್ತು ವಹಿವಾಟಿನ ಸಂಬಂಧವನ್ನು ಉದಾರೀಕರಣ ಮತ್ತು ಖಾಸಗೀಕರಣದ ಆಧಾರದ ಮೇಲೆ ಕುದುರಿಸುವುದು. ಇಂಥ ವ್ಯವಸ್ಥೆಯಿಂದಾಗಿ ಬಡದೇಶಗಳ ಮಾನವ ಸಂಪನ್ಮೂಲಗಳಿಂದಲೇ ಅವುಗಳ ನೈಸರ್ಗಿಕ ಸಂಪನ್ಮೂಲಗಳನ್ನು ಸೂರೆಗೊಳ್ಳುವ ಕ್ರಿಯೆಯಲ್ಲಿ ಬಹುರಾಷ್ಟ್ರೀಯ ಕಂಪೆನಿಗಳು ತಲ್ಲೀನವಾಗಿವೆ. ನಾವು ಮತ್ತು ಇಡೀ ಜಗತ್ತು ಈ ಸಂದಿಗ್ಧ ಸ್ಥಿತಿಯಿಂದ ಪಾರಾಗಲು ಶರಣರ ಬದುಕಿನ ಸೂತ್ರಗಳ ಬಗ್ಗೆ ಮರುಚಿಂತನೆ ಮಾಡುವುದು ಅವಶ್ಯವಾಗಿದೆ. ಪುರಾತನ ಕಾಲದಿಂದಲೂ ಇರುವ ಪಪಾಯಿ ಗಿಡದ ಎಲೆಗಳ ರಸದಿಂದ ಹೊಸಾದಾಗಿ ಕಂಡುಬಂದ ಡೇಂಗೂ ರೋಗದ ಜ್ವರಪೀಡಿತರನ್ನು ರಕ್ಷಿಸುವಂತೆ ಶರಣರ ವಚನಗಳ ಮೂಲಕ ಜಾಗತೀಕರಣದ ಸಮಸ್ಯೆಗಳನ್ನು ನಿವಾರಿಸಬಹುದು. ವಚನಗಳು ಸರಳ ಸಹಜ ಬದುಕಿನ ಪಾಠ ಹೇಳುತ್ತವೆ. ಅವುಗಳನ್ನು ಸರಿಯಾಗಿ ಅರ್ಥೈಸಿಕೊಂಡು ಮುನ್ನಡೆಯುತ್ತ ನಮ್ಮ ದೇಶದ ಜನರ ಮತ್ತು ಸಂಪನ್ಮೂಲಗಳ ಸಂರಕ್ಷಣೆ ಮಾಡಬೇಕಿದೆ. ಈ ಹಿನ್ನೆಲೆಯಲ್ಲಿ ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುವೆಂಪು ಸಂಶೋಧನಾ ಮತ್ತು

ವಿಸ್ತರಣಾ ಕೇಂದ್ರ ೨೦೧೫ನೇ ಡಿಸೆಂಬರ್ ೧೮ ಮತ್ತು ೧೯ರಂದು ಏರ್ಪಡಿಸಿದ್ದ 'ಸಾಹಿತ್ಯ, ಸಾಹಿತಿ ಮತ್ತು ವರ್ತಮಾನ ವಿಚಾರಸಂಕಿರಣ'ದಲ್ಲಿ 'ಜಾಗತೀಕರಣದ ಸವಾಲುಗಳು' ಕುರಿತ ಎರಡನೇ ದಿನದ ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾಡಿದ ಭಾಷಣವಿದು.)

ಸಾಹಿತ್ಯ ಹಿತಕಾರಿಯಾಗಿದ್ದು ಕಾವ್ಯನ್ಯಾಯ ಒದಗಿಸಲು ಇರುವಂಥದ್ದು. ಅಗೋಚರವಾದದ್ದನ್ನು ಕಾಣುವಂಥ ಕ್ರಾಂತದೃಷ್ಟಿ ಸಾಹಿತಿಯಾದವನಿಗೆ ಇರಲೇಬೇಕು. ಅದಿಲ್ಲದೆ ಆತ ಸೃಜನಶೀಲ ಸಾಹಿತಿ ಆಗಲಾರ. ಮಾನವರು ಸೇರಿದಂತೆ ಇಡೀ ಜೀವಸಂಕುಲದಿಂದ ಕೂಡಿದ ನಿಸರ್ಗದ ಬಗ್ಗೆ ಕಾಳಜಿ ಇರುವ ಸಾಹಿತಿ ಮಾತ್ರ ಇಂಥ ಕ್ರಾಂತದೃಷ್ಟಿಯನ್ನು ಹೊಂದಲು ಸಾಧ್ಯ. ಕ್ರಾಂತದರ್ಶಿಯಾದ ಸಾಹಿತಿ ತನ್ನ ಜನಾಂಗ, ದೇಶ ಮತ್ತು ಕಾಲವನ್ನು ಮೀರಿ ಚಿಂತಿಸಬಲ್ಲವನಾಗಿರುತ್ತಾನೆ.

ಮಾನವ ಜನಾಂಗದ ಸಾಂಸ್ಕೃತಿಕ ಪರಂಪರೆಯನ್ನು ತನ್ನ ಅನುಭವಗಳ ಮೂಲಕ ಸಮೃದ್ಧಗೊಳಿಸುತ್ತಲೇ ತನ್ನ ಕಾಲದ ಬದುಕಿನಲ್ಲಿ ನಡೆಯುತ್ತಿರುವ ಅಹಿತಕರ ಬೆಳವಣಿಗೆಗಳ ಬಗ್ಗೆ ಜಾಗೃತವಾಗಿರುತ್ತಾನೆ. ಇಂಥ ಅಹಿತಕರ ಬೆಳವಣಿಗೆಗಳು ಮುಂದಿನ ಜನಾಂಗಕ್ಕೆ ಎಂಥ ಅನಾಹುತವನ್ನು ತಂದೊಡ್ಡಬಲ್ಲವು ಎಂಬುದರ ಬಗ್ಗೆ ಚಿಂತಿಸುತ್ತಾನೆ ಆ ಮೂಲಕ ಕ್ರಾಂತದೃಷ್ಟಿ ಪಡೆಯುತ್ತಾನೆ.

ಇಂದು ಬಹಳ ಹೀನಾಯವಾದ ಪರಿಸ್ಥಿತಿಯ ಕಡೆಗೆ ನಾಂದಿ ಹಾಡುವ ಕಾಲಮಾನದಲ್ಲಿ ನಾವಿದ್ದೇವೆ. ಎಲ್ಲ ರಾಜಕೀಯ ಸಿದ್ಧಾಂತಗಳು, ಎಲ್ಲ ಧರ್ಮಗಳು ಮತ್ತು ಎಲ್ಲ ಜೀವನವಿಧಾನಗಳು ಜಾಗತೀಕರಣದ ಮುಂದೆ ದುರ್ಬಲವಾಗಿ ಕಾಣುವ ಸ್ಥಿತಿಯನ್ನು ತಲಪುತ್ತಿವೆ. ವಸ್ತುಮೋಹಿಯಾಗುತ್ತ ಮೋಸ, ದಬ್ಬಾಳಿಕೆ ಮತ್ತು ಹಿಂಸೆಯಿಂದ ಮಾತ್ರ ಐಷಾರಾಮಿಯಾಗಿ ಬದುಕಲು ಸಾಧ್ಯ ಎಂಬ ಸಿದ್ಧಾಂತವೊಂದು ರೂಪುಗೊಳ್ಳುತ್ತಿದೆ. ಇವೆಲ್ಲ ಆಯಾ ಧರ್ಮಗಳನ್ನು ಮತ್ತು ಸಿದ್ಧಾಂತಗಳನ್ನು ತಮ್ಮ ಮೂಗಿನ ನೇರಕ್ಕೆ ಅರ್ಥೈಸುವುದರ ಮೂಲಕವೇ ನಡೆಯುತ್ತಿವೆ.

ಇಂಥ ಕಲುಷಿತ ವಾತಾವರಣದಲ್ಲಿ ಜಾಗತೀಕರಣದ ಗಾಳಿ ಬೀಸುತ್ತಿದ್ದು, ಜೀವನಮೌಲ್ಯಗಳು ಬಹುಬೇಗನೆ ಮಾರುಕಟ್ಟೆ ಮೌಲ್ಯಗಳಾಗಿ ಪರಿವರ್ತನೆಗೊಳ್ಳುತ್ತಿವೆ. ನಾವು ತಿನ್ನುವ ವಸ್ತು, ಧರಿಸುವ ಬಟ್ಟೆ, ಬಳಸುವ ವಸ್ತುಗಳು ಮತ್ತು ಇರುವ ಸ್ಥಳ ಹೀಗೆ ಎಲ್ಲವೂ ಥಳುಕುಬಳುಕಿನಿಂದ ಕೂಡಿರಬೇಕು ಎಂಬುದರ ಪಾಠ ಕಲಿಸುತ್ತ, ಕೊಳ್ಳುಬಾಕ ಸಂಸ್ಕೃತಿಯನ್ನು ವಿಶ್ವದ ಎಲ್ಲೆಡೆ ಹಬ್ಬಿಸುವುದೇ ಜಾಗತೀಕರಣ ಎಂಬುದು ನಮಗೆ ಅರ್ಥವಾಗಬೇಕಾದರೆ ನಾವು ಅದರ ನಶೆಯಿಂದ ಹೊರಬರಬೇಕಾಗುತ್ತದೆ.

'ಆಸೆ ಎಂಬುದು ಅರಸಿಂಗಲ್ಲದೆ ಶಿವಭಕ್ತರಿಗುಂಟೆ ಅಯ್ಯಾ' ಎಂದು ಬಸವಣ್ಣನವರ ಸಮಕಾಲೀನ ಶರಣೆ ಆಯ್ದಕ್ಕಿ ಲಕ್ಕಮ್ಮ ಪ್ರಶ್ನಿಸಿದ್ದಾಳೆ. ಸಾಮ್ರಾಜ್ಯಶಾಹಿಗಳ ರಾಜಕೀಯ

ಆಶ್ರಯದೊಂದಿಗೆ ಜಾಗತೀಕರಣದ ರೂವಾರಿಗಳಾಗಿರುವ ಬಹುರಾಷ್ಟ್ರೀಯ ಕಂಪನಿಗಳ ಮಾಲೀಕರೇ ಈ ಕಾಲದ ಅರಸರು. ಅವರ ಆಸೆ ಎಷ್ಟಿದೆ ಎಂದರೆ, ಅವರು ತಮ್ಮ ಲಾಭಕ್ಕಾಗಿ ಮಾನವ ಸಂಪನ್ಮೂಲ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಬಂಡವಾಳದ ಹಿಡಿತಕ್ಕೆ ತಂದು ಜಗತ್ತನ್ನು ಸರ್ವನಾಶ ಮಾಡಲೂ ಸಿದ್ಧರಿದ್ದಾರೆ!

ಗ್ರಾಹಕರಾಗುತ್ತಿರುವ ಮಾನವರು: ಶೋಷಣೆಯೊಂದೇ ಗುರಿಯಾಗಿರುವಾಗ ಜನರನ್ನು ಗ್ರಾಹಕರನ್ನಾಗಿ ಪರಿವರ್ತಿಸುವುದು ಜಾಗತೀಕರಣ ವ್ಯವಸ್ಥೆಗೆ ಅನಿವಾರ್ಯವಾಗುತ್ತದೆ. ಇಂಥ ವಾತಾವರಣದಲ್ಲಿ ಅರ್ಜುನನಿಗೆ ಗುಬ್ಬಚ್ಚಿಯ ಕತ್ತು ಮಾತ್ರ ಕಾಣುವ ಹಾಗೆ ಇವರಿಗೆ ಗ್ರಾಹಕರು ಮಾತ್ರ ಕಾಣತೊಡಗುತ್ತಾರೆ. ಅದೇರೀತಿ ಗ್ರಾಹಕರಿಗೆ ಇವರು ಉತ್ಪಾದಿಸುವ ವಸ್ತುಗಳು ಮಾತ್ರ ಕಾಣತೊಡಗುತ್ತವೆ. ಜಾಗತೀಕರಣ ವ್ಯವಸ್ಥೆ ಇಷ್ಟಕ್ಕೇ ತೃಪ್ತಿಗೊಳ್ಳುವುದಿಲ್ಲ. ಗ್ರಾಹಕ ಮೋಹಗೊಂಡು ವಸ್ತುಗಳನ್ನು ಬಳಸುತ್ತಿರುವಾಗಲೇ ಅದಕ್ಕೂ ಹೆಚ್ಚು ಆಕರ್ಷಕವಾದ ವಸ್ತುಗಳನ್ನು ಅದು ತಯಾರಿಸುತ್ತದೆ. ಇರುವುದನ್ನು ಬಿಟ್ಟು ಹೊಸದಾಗಿ ಬರುವುದರ ಕಡೆಗೆ ಗ್ರಾಹಕ ಸದಾ ಗಮನ ಹರಿಸುವಂತೆ ಜಾಹೀರಾತುಗಳ ಕಸರತ್ತಿನ ಮೂಲಕ ಯಶಸ್ಸನ್ನು ಸಾಧಿಸುತ್ತದೆ. ಹೀಗೆ ಮಾನವರು 'ಬ್ರ್ಯಾಂಡ್' ಹೆಸರಿನಲ್ಲಿ ಜಾಹೀರಾತುಗಳ ಗುಲಾಮರಾಗುವ ಮೂಲಕ ಗ್ರಾಹಕರಾಗಿ ಪರಿವರ್ತನೆ ಹೊಂದುತ್ತ ಸಾಗುತ್ತಾರೆ.

ಈ ಜಾಹೀರಾತುಗಳು ಗ್ರಾಹಕರನ್ನು ಎಷ್ಟೊಂದು ಆಕರ್ಷಣೆಗೆ ಒಳಪಡಿಸುತ್ತವೆ ಎಂಬುದು ಗಾಬರಿ ಹುಟ್ಟಿಸುವ ವಿಚಾರ. ಗ್ರಾಹಕರು ಜಾಹೀರಾತಿನ ಪ್ರಕಾರ ತಮ್ಮ ಮನೆಗಳಿಗೆ ಬಳಿದ ಬಣ್ಣ ತೆಗೆದು ಹೊಸ ಬಣ್ಣ ಬಳಿಯಲು ಪ್ರಾರಂಭಿಸುತ್ತಾರೆ. ತಂದೆಯ ಕಾಲದ ಒಳ್ಳೆಯ ಗಟ್ಟಿಮುಟ್ಟಾದ ಸೋಫಾಸೆಟ್ಟುಗಳನ್ನು ಬದಲಾಯಿಸುತ್ತಾರೆ. ಟಿ.ವಿ., ವಾಷಿಂಗ್ ಮಷಿನ್, ರೆಫ್ರಿಜರೇಟರ್, ಮೊಬೈಲ್, ವಾಚು, ಬನಿಯನ್, ನಿಕರ್ ಹೀಗೆ ಎಲ್ಲವನ್ನೂ ಬದಲಿಸುತ್ತ ಆಧುನಿಕವಾಗುವ ಹುಚ್ಚು ಹಚ್ಚಿಕೊಳ್ಳುತ್ತಾರೆ.

ಲಾಭಕೋರರ ಬದುಕುವ ಕಲೆ: ಇಂಥ ಸ್ಥಿತಿಯಲ್ಲಿ ಸಾಹಿತ್ಯದ ಸೂಕ್ಷ್ಮತೆಯನ್ನು ಅರಿಯಲು ಅವರಿಗೆಲ್ಲಿ ಸಮಯವಿದೆ? ಅದೇನೇ ಇದ್ದರೂ ಈ ವಸ್ತುಮೋಹಕ್ಕೆ ಒಳಗಾಗದವರಲ್ಲಿ ಮತ್ತು ವಸ್ತುಮೋಹಕ್ಕೆ ಒಳಗಾಗುವಂಥ ಆರ್ಥಿಕ ಪರಿಸ್ಥಿತಿ ಇಲ್ಲದವರಲ್ಲಿ ಸಾಹಿತ್ಯ ಆಸಕ್ತಿಯುಳ್ಳವರು ಹೆಚ್ಚಿನ ಪ್ರಮಾಣದಲ್ಲಿ ಸಿಗುತ್ತಾರೆ. ಅವರು ಸಹೃದಯರಾಗಿಯೋ ಸಾಹಿತ್ಯ ಕೃಷಿಕರಾಗಿಯೋ ಇರುತ್ತಾರೆ. ಅವರೆಲ್ಲರನ್ನು ಒಂದಾಗಿ ನೋಡಿದರೂ ಅವರ ಒಟ್ಟು ಸಂಖ್ಯೆ 'ಸಾರಸ್ವತಲೋಕದ ಅಲ್ಪಸಂಖ್ಯಾತರು' ಎಂಬಂತೆ ಇರುತ್ತದೆ. ಹೀಗೆ ಜಾಗತೀಕರಣವು, ಒಳನೋಟಗಳಿಂದ ಕೂಡಿದ ವಿಶ್ವಸಾಹಿತ್ಯಕ್ಕೆ ಮಾರಕವಾಗಿದೆ. ಅದಕ್ಕೆ ಪರ್ಯಾಯವಾಗಿ ಅದು ಕಾಮಪ್ರಚೋದಕ, ಹಿಂಸಾಪ್ರಚೋದಕ ಅಥವಾ ಇತರೆ ಲಘು ಸಾಹಿತ್ಯವನ್ನು ಬಹುಪ್ರಕಾರವಾಗಿ ಮತ್ತು ಅತ್ಯಾಕರ್ಷಕವಾಗಿ

ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿದೆ. ಈ ಕಾರ್ಯದ ಜೊತೆಗೇ ಕಾರ್ಪೊರೇಟ್ ಶ್ರೀ ಶ್ರೀಗಳನ್ನು ಬೆಳೆಸಿ ಅವರ ಭ್ರಮಾತ್ಮಕ ಚಿಂತನೆಗಳನ್ನು ಕೂಡ ತನ್ನ ಬೆಳವಣಿಗೆಗೆ ಬಳಸಿಕೊಳ್ಳುತ್ತದೆ. ಹೀಗೆ ಜಾಗತೀಕರಣವಾದಿ ಲಾಭಕೋರರ 'ಬದುಕುವ ಕಲೆ' ವೈವಿಧ್ಯದಿಂದ ಕೂಡಿದೆ.

ಜಾಗತೀಕರಣವಾದಿಗಳಲ್ಲೂ ಸಂಗೀತವಿದೆ. ಆದರೆ ಅದರ 'ರಾಗ'ಗಳೇ ಬೇರೆಯಾಗಿವೆ. ಅವರ ಚಿತ್ರಕಲೆಯ 'ಗೆರೆ'ಗಳೇ ಬೇರೆಯಾಗಿವೆ. ಅವರ ಆಹಾರದ 'ರುಚಿ'ಯೆ ಬೇರೆಯಾಗಿದೆ. ಅವರ ಉಡುಪುಗಳ ಶೈಲಿಯೇ ಬೇರೆಯಾಗಿದೆ. ಹೀಗೆ ಎಲ್ಲವನ್ನೂ ಬೇರೆ ರೀತಿಯಲ್ಲಿ ಉತ್ಪಾದಿಸುತ್ತ ಗ್ರಾಹಕರ ಮನಸ್ಸನ್ನು ಸೆಳೆಯುವುದು ಅವರ ಗುಣಧರ್ಮವಾಗಿದೆ. ಬಹುರಾಷ್ಟ್ರೀಯ ಕಂಪೆನಿಗಳು ಅದನ್ನು ಸಾಧಿಸುವುದಕ್ಕಾಗಿ ಎಲ್ಲ ರೀತಿಯ ಬೆಂಬಲ ಕೊಡುವ ಸರ್ಕಾರಗಳಿವೆ.

ಮಾನವರ ಮನಸ್ಸಿನ ಸೂಕ್ಷ್ಮತೆಯನ್ನು ಕಳೆದು, ನಯನಾಜೂಕಿನ ವಸ್ತುಗಳನ್ನು ತಯಾರಿಸುವುದು ಮತ್ತು ಆ ವಸ್ತುಗಳ ವಿನ್ಯಾಸದ ಆಕರ್ಷಣೆ ಹಾಗೂ ಉಪಭೋಗದ ತೀವ್ರತೆಯನ್ನು ಹೆಚ್ಚಿಸುವುದು ಅವರ ಸಂಶೋಧನೆ ಮತ್ತು ಅಭಿವೃದ್ಧಿಯ ಮಾದರಿಯಾಗಿದೆ.

ಸದ್ಬಳಕೆ: ಹಿಂದಿನ ಕಾಲದಲ್ಲಿ ಜನರು ತಮ್ಮ ಹಳೆಯ ಕಾಲದ ವಸ್ತುಗಳ ಬಗ್ಗೆ ಅಭಿಮಾನ ಪಡುತ್ತಿದ್ದರು. ಈಗಲೂ ಅನೇಕ ಕಡೆ ಜನ ತಮ್ಮ ಮನೆಯಲ್ಲಿ ಹಳೆ ಸೀರೆ, ಧೋತರ ಮುಂತಾದ ಬಟ್ಟೆಬರೆಗಳನ್ನು ಕೂಡಿಸಿಡುತ್ತಾರೆ. ಅವುಗಳನ್ನು ಕತ್ತರಿಸಿ ಗಟ್ಟಿಯಾಗಿರುವ ಭಾಗವನ್ನು ಜೋಡಿಸುತ್ತ ರಂಗುರಂಗಿನ ಹಾಸುವ ಮತ್ತು ಹೊದೆಯುವ ಕೌದಿಗಳನ್ನು ಹೊಲಿಯುತ್ತಾರೆ. ಅವು ಬೇಸಗೆಯಲ್ಲಿ ತಂಪಾಗಿರುತ್ತವೆ. ಚಳಿಗಾಲದಲ್ಲಿ ಬೆಚ್ಚಗಾಗಿರುತ್ತವೆ. ಆ ಕೌದಿಗಳ ಮೇಲೆ ಬಟ್ಟೆಯ ತುಕಡಿಗಳಿಂದಲೇ ಆಕರ್ಷಕ ಚಿತ್ತಾರವನ್ನು ಬಿಡಿಸಿರುತ್ತಾರೆ. ಕೌದಿಯ ಪ್ರತಿಯೊಂದು ತುಕಡಿ ಅವರ ಅಜ್ಜನ ಧೋತರದ್ದೋ, ಅಂಗಿಯದ್ದೋ, ಅಜ್ಜಿಯ ಸೀರೆಯದ್ದೊ, ಅಮ್ಮನ ಕುಪ್ಪಸದ್ದೋ, ಮದುವೆ ಮುಂಚೆ ಅಕ್ಕ ಉಟ್ಟಿಕೊಳ್ಳುತ್ತಿದ್ದ ಲಂಗ ದಾವಣಿಯದ್ದೊ ಅಥವಾ ಅಣ್ಣ ಬಾಲಕನಿದ್ದಾಗಿನ ಚಡ್ಡಿಯದ್ದೋ ಇರುತ್ತದೆ. ಗತಿಸಿ ಹೋದ ಹಿರಿಯರ ಮತ್ತು ಮದುವೆಯಾಗಿ ಗಂಡನ ಮನೆಗೆ ಹೋದ ಹೆಣ್ಣುಮಕ್ಕಳ ಹಾಗೂ ಮನೆಯಲ್ಲೇ ಇರುವವರು ಉಟ್ಟುಕೊಂಡ ಉಡುಪುಗಳ ಸಮ್ಮಿಲನವಾಗಿರುತ್ತದೆ ಆ ಕೌದಿ. ಹೀಗಾಗಿ ಅದು ಆ ಮನೆಯವರನ್ನು ನೆನಪಿನ ಅಂಗಳದಲ್ಲಿ ಒಯ್ದು ನಿಲ್ಲಿಸುತ್ತದೆ. ಅವಿಭಕ್ತ ಕುಟುಂಬದ ಸಂಕೇತವಾಗಿ ಕಾಣುತ್ತದೆ. ಇದ್ದವರ, ಹೊರಗೆ ಹೋದವರ ಮತ್ತು ಸತ್ತವರ ಸಂಬಂಧಗಳ ಹೊಲಿಗೆಯಾಗಿರುತ್ತದೆ!

ಆ ಕೌದಿ ಹಳೆಯದಾಗಿ ಹರಿದ ನಂತರ ಅದನ್ನು ಸುಟ್ಟು ಬೂದಿ ಮಾಡಿ ಎಣ್ಣೆಯಲ್ಲಿ ಕಲಿಸಿ ಮೊರಕ್ಕೆ ಸವರುವುದರ ಮೂಲಕ ಅದನ್ನು ಗಟ್ಟಿಗೊಳಿಸಲಾಗುತ್ತದೆ

ಮತ್ತು ಅದು ಚೆನ್ನಾಗಿ ಕೇರಲು ಬರುವಂತಾಗುತ್ತದೆ. ಆ ಮೊರಕ್ಕೆ ತೂತು ಬಿದ್ದ ಮೇಲೆ ಅದನ್ನು ತಿಪ್ಪೆಗೆ ಎಸೆಯಲಾಗುವುದು. ಆಗ ಅದು ಗೊಬ್ಬರದಲ್ಲಿ ಗೊಬ್ಬರವಾಗಿ ಹೋಗುವುದು! ಹೀಗೆ ಅದು ಕೊನೆಗೆ ಗೊಬ್ಬರವಾಗಿಯೂ ಉಪಯೋಗವಾಗುವುದು.

ದಿಗ್ಭ್ರಮೆ ಹುಟ್ಟಿಸುವ ದಿನಗಳು: ಇಂದಿನ 'ಯೂಸ್ ಅಂಡ್ ಥ್ರೋ' ಯುಗದಲ್ಲಿ, ಉಪಯೋಗಿಸಿ ಎಸೆಯುವ ವಸ್ತುಗಳೇ ನಾಗರೀಕತೆಯ ಪ್ರತೀಕವಾಗುತ್ತಿವೆ. ಹೊಸ ಹೊಸ ವಸ್ತುಗಳ ಬಗ್ಗೆ ಅಭಿಮಾನ ಪಡುವಂಥ ಮತ್ತು ಹಳೆ ವಸ್ತುಗಳನ್ನು ಬಿಸಾಕುವಂಥ ಮನಸ್ಥಿತಿಯ ನಿರ್ಮಾಣವಾಗಿದೆ. ಗೊಬ್ಬರವಾಗಲಾರದ ಪ್ಲ್ಯಾಸ್ಟಿಕ್‌ನಿಂದ ತಯಾರಾದ ವಸ್ತುಗಳಿಂದ ತುಂಬಿದ ಕಸದ ರಾಶಿಗಳಿಂದ ಮುಂದೊಂದು ದಿನ ಇಡೀ ಜಗತ್ತೇ ದಿಗ್ಭ್ರಮೆಗೊಳ್ಳುವ ದಿನಗಳು ಬರುವುದರಲ್ಲಿ ಸಂಶಯವಿಲ್ಲ.

'ಜನಸಮುದಾಯಕ್ಕಾಗಿ ಉತ್ಪಾದನೆ' ಎಂಬುದು ಮಾಯವಾಗಿ 'ಬೃಹತ್ ಪ್ರಮಾಣದ ಉತ್ಪಾದನೆ' ಎಂಬ ಮಂತ್ರವನ್ನು ಜಾಗತೀಕರಣದ ಪಂಡಿತರು ಉಚ್ಚರಿಸುತ್ತಿದ್ದಾರೆ. ಈ ಬೃಹತ್ ಪ್ರಮಾಣದ ಉತ್ಪಾದನೆಗೆ ಗಿರಾಕಿಗಳನ್ನು ಸೃಷ್ಟಿಸುವುದೇ ಅವರ ಬಹುದೊಡ್ಡ ಕಲೆಯಾಗಿದೆ. ಜಾಗತೀಕರಣದ ಹುಚ್ಚು ಹಿಡಿದ ಗಿರಾಕಿಗಳು, ಕೆಲಸಕ್ಕೆ ಬರುವ ಹಳೆಯ ವಸ್ತುಗಳನ್ನು ಕೂಡ ಮೂಲೆಗುಂಪು ಮಾಡಿ ಹೊಸ ಬದಲಿ ವಸ್ತುಗಳನ್ನು ಖರೀದಿಸುತ್ತಾರೆ. ಹೀಗೆ ಮಾಡುವುದು ಅವರ ಘನತೆಗೆ ತಕ್ಕದ್ದು ಎಂಬ ವಾತಾವರಣದ ಸೃಷ್ಟಿಯಾಗಿದೆ. ಈ ಹಿನ್ನೆಲೆಯಲ್ಲಿ ನಾವು ಹೊಸದಾಗಿ ಪೇಟೆಗೆ ಬರುವ ವಸ್ತುಗಳನ್ನು ಕೊಳ್ಳದೆ ಬದುಕಲು ಸಾಧ್ಯವೇ ಇಲ್ಲ ಎಂಬ ಮಾನಸಿಕ ಸ್ಥಿತಿ ನಿರ್ಮಾಣವಾಗಿದೆ. ಬಳಸಿ ಎಸೆಯುವ ವಸ್ತುಗಳಿಂದಾಗಿ ನದಿ, ಸಮುದ್ರಗಳ ಸಮೇತ ಇಡೀ ವಿಶ್ವವೇ ಕೊಳಚೆ ಮತ್ತು ಕಸಕಡ್ಡಿಗಳ ಗುಡ್ಡೆಯಾಗುತ್ತಿದೆ.

ಯಂತ್ರನಾಗರೀಕತೆಯ ಮತ್ತು ಕಂಪ್ಯೂಟರ್ ಯುಗದ ಯಾವುದೇ ವಸ್ತುಗಳಿಲ್ಲದೆ ಮಾನವಕುಲ ಹತ್ತಾರು ಸಹಸ್ರವರ್ಷಗಳಿಂದ ಬೃಹತ್ ಸಂಸ್ಕೃತಿ ಮತ್ತು ನಾಗರೀಕತೆಗಳ ನಿರ್ಮಾಣ ಮಾಡಿದೆ. ಪಿರ್‍ಯಾಮಿಡ್ಡುಗಳ ಅಥವಾ ತಾಜಮಹಲ್ ನಿರ್ಮಾಣದ ವೇಳೆ ಯಂತ್ರಗಳ ಆವಿಷ್ಕಾರ ಕೂಡ ಆಗಿರಲಿಲ್ಲ. ವಿದ್ಯುತ್, ಕಂಪ್ಯೂಟರ್, ಟಿವಿ, ಮೊಬೈಲ್, ತಾಂತ್ರಿಕ ಶಿಕ್ಷಣ ಇವೆಲ್ಲ ಇರಲೇ ಇಲ್ಲ. ಆದರೆ ಈ ಕಾಲದವರು ಕೂಡ ಅಚ್ಚರಿ ಪಡುವಂಥದ್ದನ್ನು ಹಿಂದಿನ ನಾಗರೀಕತೆ ಮತ್ತು ಸಂಸ್ಕೃತಿಗಳ ಜನಸಮುದಾಯಗಳು ಸಾಧನೆ ಮಾಡಿ ತೋರಿಸಿವೆ. ಸಂಸ್ಕಾರಗಳಿಂದ ಕೂಡಿದ್ದ ಮಾನವೀಯ ಮೌಲ್ಯಗಳನ್ನು ಸೃಷ್ಟಿಸಿವೆ. ಇದರರ್ಥ 'ಹಳೆಯದೆಲ್ಲವೂ ಸರಿ' ಎಂದಲ್ಲ. ಆ ಹಳೆಯದನ್ನು ಸುಧಾರಿಸುತ್ತ ಮತ್ತು ಕೆಟ್ಟದ್ದನ್ನು ನಿವಾರಿಸುತ್ತ ಮುಂದಕ್ಕೆ ಒಯ್ಯುವ ವ್ಯವಧಾನವೇ ಇಲ್ಲದಂಥ ನಾಗರಿಕ ಸಮಾಜವನ್ನು ಐಹಿಕ ಅಭ್ಯುದಯದ ಜಾಗತೀಕರಣ ಸೃಷ್ಟಿಸಿದೆ.

ಮೌಲ್ಯಗಳ ಜಾಗತೀಕರಣ: ಇಂದು ಮೌಲ್ಯಗಳ ಜಾಗತೀಕರಣವಾಗಬೇಕಿದೆ. ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ಮತ್ತು ಜಾಗತೀಕರಣ ವ್ಯವಸ್ಥೆಗಳು ಬರುವ

ಮೊದಲಿಗೆ ಇದ್ದ ಊಳಿಗಮಾನ್ಯ ಪದ್ಧತಿಯ ಕ್ರೌರ್ಯಗಳು ಕೂಡ ನಮಗೆ ಗೊತ್ತಿವೆ. ಜನಾಂಗವಾದ, ವರ್ಣಭೇದನೀತಿ, ಜಾತೀಯತೆ, ಅಸ್ಪೃಶ್ಯತೆ ಮತ್ತು ಶೋಷಣೆಯ ಪಳೆಯುಳಿಕೆಗಳು ಇಂದಿಗೂ ಜೀವಂತವಾಗಿವೆ.

ಹಾಗೆ ನೋಡಿದರೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮೊದಲಬಾರಿಗೆ ಕೆಳಜಾತಿ, ಕೆಳವರ್ಗದವರು ಸಹಸ್ರಾರು ವರ್ಷಗಳ ಯಥಾಸ್ಥಿತಿ ಬದುಕಿನಿಂದ ಹೊರ ಬರುವ ಅವಕಾಶವನ್ನು ಸ್ವಲ್ಪಮಟ್ಟಿಗಾದರೂ ಪಡೆದುಕೊಂಡರು. ದುಡಿಯುವ ಜನರು ಮೊದಲ ಬಾರಿಗೆ ಕಷ್ಟಪಟ್ಟು ಸಂಘಟನೆ ಮಾಡಿಕೊಳ್ಳುವ ಸಾಮರ್ಥ್ಯ ಪಡೆದರು. ಇದೆಲ್ಲ ಸಾಧ್ಯವಾದುದು ಔದ್ಯೋಗಿಕ ಕ್ರಾಂತಿಯ ನಂತರದ ಬಂಡವಾಳಶಾಹಿ ವ್ಯವಸ್ಥೆ ಗಟ್ಟಿಗೊಳ್ಳುವ ಸಂದರ್ಭದಲ್ಲಿ. ಆದರೆ ಈ ಅಭಿವೃದ್ಧಿ ಪಥ ಮಾನವಸಂಪನ್ಮೂಲದ ಜೊತೆ ನೈಸರ್ಗಿಕ ಸಂಪನ್ಮೂಲವನ್ನೂ ನಾಶಗೊಳಿಸುತ್ತಿದೆ. ೩೦೦೦ ವರ್ಷಗಳಲ್ಲಿ ನೈಸರ್ಗಿಕ ಸಂಪನ್ಮೂಲ ಹಾಳಾದಷ್ಟು ಕಳೆದ ೩೦೦ ವರ್ಷಗಳಲ್ಲಿ ಆಗಿದೆ. ಇನ್ನು ಮುಂದಿನ ೩೦ ವರ್ಷಗಳಲ್ಲಿ ಎಷ್ಟೊಂದು ಹಾಳಾಗುತ್ತದೆ ಎಂದರೆ, ಅದು ಹಿಂದಿನ ಎಲ್ಲವನ್ನೂ ಮೀರಿಸುತ್ತದೆ! ಈ ಹಾಳಾಗುವಿಕೆಯು ಭೂಮಿ, ನೀರು, ವಾಯು, ಆಕಾಶವನ್ನು ಮಲಿನಗೊಳಿಸುತ್ತಿದೆ. ಇಡೀ ಬದುಕನ್ನೇ ವಿಷಮಯಗೊಳಿಸುತ್ತಿದೆ. ಬಂಡವಾಳಶಾಹಿ ವ್ಯವಸ್ಥೆ ಎಂಬುದು ಮನುಷ್ಯ ವಿರೋಧಿ ನಿಲವಿಗೆ ಬದ್ಧವಾಗಿರುವುದರಲ್ಲಿ ಸಂಶಯವಿಲ್ಲ. ಬಂಡವಾಳವು ಪ್ರಧಾನವಾದಲ್ಲಿ ಮನುಷ್ಯರು ಅದರ ಅಧೀನವಾಗಲೇ ಬೇಕು. ಜಾಗತೀಕರಣಕ್ಕೆ ಧನಸಂಪಾದನೆಯೊಂದೇ ಮುಖ್ಯ. ಅದಕ್ಕೇ ಬಿಲ್ ಗೇಟ್ಸ್ 'ನಾನು ಶೈಕ್ಷಣಿಕ ರಂಗದಲ್ಲಿ ಪ್ರತಿಭಾವಂತನಾಗಿರಲಿಲ್ಲ; ಆದರೆ ನನ್ನ ಪ್ರತಿಭಾವಂತ ಸಹಪಾಠಿಗಳು ನನ್ನ ಕಂಪನಿಯಲ್ಲಿ ಕೆಲಸಕ್ಕಿದ್ದಾರೆ' ಎಂದು ಹೇಳುತ್ತಾರೆ. ನಿಜ; ಹಣಕ್ಕೆ ಎಲ್ಲರನ್ನೂ ಎಲ್ಲವನ್ನೂ ಕೊಳ್ಳುವ ಶಕ್ತಿ ಇದೆ. ಈ ವ್ಯವಸ್ಥೆಯ ಅತ್ಯುನ್ನತ ಮಟ್ಟವೇ ಜಾಗತೀಕರಣ. ಧನವೇ ದೇವರಾಗುವ ಸಂದರ್ಭವಿದು.

ಹಣ ಗಳಿಕೆಯೆ ಮುಖ್ಯವಾಗುವ ವ್ಯವಸ್ಥೆಯಲ್ಲಿ ಮಾನವ ಕುಬ್ಜನಾಗುತ್ತಾನೆ. ಹಣವಿಲ್ಲದವನು ಹೆಣದಂತಾಗುತ್ತಾನೆ. ಯಾವ ವ್ಯವಸ್ಥೆಯಲ್ಲಿ ಮಾನವರಿಗೆ ಬೆಲೆ ಇಲ್ಲವೋ ಆ ವ್ಯವಸ್ಥೆಯಲ್ಲಿ ಅಭದ್ರತೆಯಿಂದ ನರಳುವವರು ಕೋಮುವಾದಿ, ಮೂಲಭೂತವಾದಿ ಮತ್ತು ಉಗ್ರವಾದಿಗಳಾಗುವ ಸ್ಥಿತಿಯನ್ನೂ ತಲುಪುವ ಸಾಧ್ಯತೆಗಳಿರುತ್ತವೆ. ಅಭದ್ರತೆಯ ಮನಸ್ಸು ಕ್ರೂರವಾಗುವ ಸಾಧ್ಯತೆಗಳನ್ನು ಪಡೆದುಕೊಂಡಿರುತ್ತದೆ.

ಅಸ್ತಿತ್ವಕ್ಕಾಗಿ ಎಲ್ಲಿ ಹೋರಾಟಗಳು ನಡೆಯುವುದಿಲ್ಲವೋ ಅಲ್ಲಿ ಸಾಮಾಜಿಕ ಕ್ರೌರ್ಯ ವಿವಿಧ ಅವತಾರಗಳಲ್ಲಿ ಸೃಷ್ಟಿಯಾಗುತ್ತ ಹೋಗುತ್ತದೆ. ಸಾಮಾಜಿಕ ವ್ಯವಸ್ಥೆಯ ಮೇಲೆ ಹಿಡಿತ ಸಾಧಿಸದ ದೇಶಗಳು ಯುದ್ಧದಲ್ಲಿ ತೊಡಗುತ್ತ ಜನರ ಲಕ್ಷ್ಯ ಅವರ

ಸಮಸ್ಯೆಗಳ ಕಡೆಗೆ ತಿರುಗದಂತೆ ನೋಡಿಕೊಳ್ಳುತ್ತವೆ. ಜನರು ಅನ್ಯಾಯದ ವಿರುದ್ಧ ಹೋರಾಟದ ಮನೋಭಾವ ತಾಳಿದರೆ, ಸರ್ಕಾರಗಳು ತಮ್ಮ ಜನರ ಮೇಲೆಯೆ ದಬ್ಬಾಳಿಕೆ ಮಾಡಲು ಆರಂಭಿಸುತ್ತವೆ. ಇಂಥ ವ್ಯವಸ್ಥೆ ಇಂದು ಜಾಗತಿಕ ವ್ಯವಸ್ಥೆಯಾಗಿದೆ.

ಸಾಹಿತಿಗಳಿಗೆ ಸವಾಲು: ಕನ್ನಡ ಸಾಹಿತಿಗಳೂ ಸೇರಿದಂತೆ ವಿಶ್ವದ ವಿವಿಧ ದೇಶ ಭಾಷೆಗಳ ಸಾಹಿತಿಗಳಿಗೆ ಈ ಕಾಲ ಬಹುದೊಡ್ಡ ಸವಾಲಾಗಿದೆ. ಮಾರುಕಟ್ಟೆ ಜಾಗತೀಕರಣದಿಂದ ಸ್ಥಳೀಯ ಅಸ್ಮಿತೆಯನ್ನು ರಕ್ಷಿಸುವ ಮೂಲಕ ಮೌಲ್ಯಗಳ ಜಾಗತೀಕರಣ ಮಾಡದಿದ್ದರೆ ಮತ್ತು ವಿವಿಧ ಜನಸಮುದಾಯಗಳು ಅದಕ್ಕೆ ಸ್ಪಂದಿಸದಿದ್ದರೆ ಈ ಜಗತ್ತು ವಿನಾಶದ ಅಂಚಿಗೆ ಸರಿಯುವುದರಲ್ಲಿ ಸಂಶಯವಿಲ್ಲ.

ಜಾಗತೀಕರಣ ಕೇವಲ ಬಂಡವಾಳಶಾಹಿ ವ್ಯವಸ್ಥೆಗೆ ಸಂಬಂಧಿಸಿಲ್ಲ. ಕಮ್ಯೂನಿಸ್ಟ್ ದೇಶಗಳು ಸೇರಿದಂತೆ ಎಲ್ಲ ದೇಶಗಳು, ಎಲ್ಲ ಜನಾಂಗಗಳು ಮತ್ತು ಎಲ್ಲ ಧರ್ಮಗಳು ಜಾಗತೀಕರಣದ ಸೋಂಕಿನೊಂದಿಗೆ ಬದುಕುತ್ತಿವೆ.

ಜಾಗತೀಕರಣವೆಂಬುದು ಸಿಹಿ ಕ್ಯಾಪ್ಸೂಲಿನ ವಿಷವಿದ್ದಂತೆ. ಅದು ನಮಗೆ ಸಿಹಿಯಾದ ಸುಖಾನುಭವ ಕೊಡುವುದು ಆದರೆ ಅದರ ಪರಿಣಾಮ ವಿಷಕಾರಿಯಾಗಿರುತ್ತದೆ.

ಜಾಗತೀಕರಣದ ಪರಿಣಾಮದಿಂದಾಗಿ ಜಗತ್ತಿನ ಜನಸಮುದಾಯ ಕಂಪ್ಯೂಟರ್, ಮೊಬೈಲ್, ಇಂಟರ್‌ನೆಟ್ ಮುಂತಾದ ಸೌಲಭ್ಯಗಳನ್ನು ಪಡೆದಿದೆ ಎಂಬ ಭ್ರಮೆಯನ್ನು ಸೃಷ್ಟಿಸಲಾಗಿದೆ. 'ವಿಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರಗಳು ಜಾಗತೀಕರಣದ ಫಲ' ಎನ್ನುವುದು ಅತಾರ್ಕಿಕವಾದುದು. 'ತಮ್ಮ ಸ್ವಾರ್ಥಕ್ಕಾಗಿ ಜಾಗತೀಕರಣವನ್ನು ಬೆಂಬಲಿಸುವವರು ವಿಜ್ಞಾನ ಮತ್ತು ತಂತ್ರಜ್ಞಾನದ ನೆರವಿನೊಂದಿಗೆ ನಮ್ಮ ಶೋಷಣೆ ಮಾಡುತ್ತಿದ್ದಾರೆ' ಎಂಬ ಸತ್ಯವನ್ನು ಜನರು ತಿಳಿಯುವವರೆಗೂ ಇದು ನಡೆದೇ ಇರುತ್ತದೆ.

ಕೆಂಟುಕಿ, ಮ್ಯಾಕ್‌ಡೊನಾಲ್ಡ್, ಪೆಪ್ಸಿ ಮುಂತಾದವುಗಳಿಲ್ಲದೆ ಬದುಕೇ ಇಲ್ಲ ಎಂಬ ವಿಚಿತ್ರ ಮಾನವ ತಳಿಯೊಂದರ ಸೃಷ್ಟಿಯಾಗಿದೆ. ಪೆಪ್ಸಿಯಲ್ಲಿ ಮಾನವ ಶರೀರಕ್ಕೆ ಉಪಯೋಗವಾಗುವಂಥದ್ದು ನೀರು ಮಾತ್ರ ಎಂಬುದು ನಮಗೆ ಅರ್ಥವಾಗದೆ ಹೋಗಿದೆ. ಅದರೊಳಗಿನ ಉಳಿದ ವಸ್ತುಗಳು ಶೌಚಾಲಯದ ಸ್ವಚ್ಛತೆಗೆ ಅಥವಾ ಕೀಟನಾಶಕವಾಗಿ ಮಾತ್ರ ಉಪಯೋಗವಾಗುವಂಥವು! ಕೆಂಟುಕಿ ಚಿಕನ್ ಹಿಂದಿನ ಕ್ರೌರ್ಯ ಮತ್ತು ಅದರ ರುಚಿಯ ಹಿಂದಿರುವ ರೋಗ ನಮ್ಮ ಗಮನಕ್ಕೆ ಬರುವುದೇ ಇಲ್ಲ. ಪಿಜಾ ಹಟ್ ಮತ್ತು ಮ್ಯಾಕ್‌ಡೊನಾಲ್ಡ್ ಆಹಾರಗಳು ಕೂಡ ಈಗಾಗಲೇ ವಿವಾದಕ್ಕೆ ಒಳಗಾಗಿವೆ. ಮುದ್ದೆ, ರೊಟ್ಟಿ, ಮಜ್ಜಿಗೆ, ಎಳೆನೀರು ಮುಂತಾದವುಗಳ ಮಹತ್ವ ನಮ್ಮ ಅರಿವಿಗೆ ಎಂದು ಬರುವುದೊ ಗೊತ್ತಿಲ್ಲ.

ಸಾಮ್ರಾಜ್ಯವಾದದ ಅತ್ಯುನ್ನತ ಘಟ್ಟ: 'ಸಾಮ್ರಾಜ್ಯವಾದ ಎಂಬುದು ಬಂಡವಾಳಶಾಹಿಯ ಅತ್ಯುನ್ನತ ಘಟ್ಟ' ಎಂದು ಲೆನಿನ್ ಹೇಳಿದ್ದರು. ಆದರೆ ಇಂದು ಜಾಗತೀಕರಣ ಎಂಬುದು ಸಾಮ್ರಾಜ್ಯವಾದದ ಅತ್ಯುನ್ನತ ಘಟ್ಟವಾಗಿದೆ. ಬಂಡವಾಳಶಾಹಿಗಳಿಗಷ್ಟೇ ಇದು ಸೀಮಿತವಾಗಿಲ್ಲ. ಕಮ್ಯೂನಿಸ್ಟ್ ಮತ್ತು ಸಂಪ್ರದಾಯಬದ್ಧ ದೇಶಗಳು ಕೂಡ 'ಜಾಗತೀಕರಣವೆಂಬುದು ಈ ಕಾಲದ ಅನಿವಾರ್ಯತೆ' ಎಂಬ ಮನಸ್ಥಿತಿಯನ್ನು ಹೊಂದುತ್ತಿವೆ. ಅವಿರತವಾದ ನೈಸರ್ಗಿಕ ಸಂಪನ್ಮೂಲಗಳ ದುರ್ಬಳಕೆಯಿಂದಾಗಿ ಭೂಮಿ ವಿಷಮಯವಾಗುತ್ತಿದೆ. ನದಿಗಳು ಚರಂಡಿಗಳ ಹಾಗೆ ಕಾಣುತ್ತಿವೆ. ನಗರಗಳು ಕೊಳಚೆ ಪ್ರದೇಶಗಳಾಗುತ್ತಿವೆ. ಹಳ್ಳಿಗಳು ಅಸಹಾಯಕರ ತಾಣಗಳಾಗುತ್ತಿವೆ. ಇಂಥ ಸ್ಥಿತಿಯಲ್ಲೂ ಸಾಹಿತಿಗಳು ಸಂಭ್ರಮ ಹಂಚಿಕೊಳ್ಳುವುದರಲ್ಲೇ ಮಗ್ನವಾದರೆ ಕ್ರಾಂತದೃಷ್ಟಿ ಬರುವುದಾದರೂ ಹೇಗೆ? ಎಂದು ಪ್ರಶ್ನಿಸಿಕೊಳ್ಳಬೇಕಾಗಿದೆ.

ಬರಿ ಸೈದ್ಧಾಂತಿಕ ಮಾತುಗಳಿಂದ ಜಾಗತೀಕರಣವನ್ನು ತಡೆಯಲಿಕ್ಕಾಗದು. ನಮ್ಮೊಳಗೆ ಆಗುವ ಪರಿವರ್ತನೆಯಿಂದ ಮಾತ್ರ ಇದು ಸಾಧ್ಯ. ಆಯಾ ದೇಶಗಳ ಗಿರಾಕಿಗಳು ಮತ್ತೆ ಪ್ರಜ್ಞಾವಂತ ಪ್ರಜೆಗಳಾಗಿ ತಮ್ಮೊಳಗಿನ ಅರಿವನ್ನು ಆಚರಣೆಯಲ್ಲಿ ತಂದ ಕ್ಷಣದಲ್ಲೇ ವಸ್ತುಗಳ ಜಾಗತೀಕರಣ ವ್ಯವಸ್ಥೆ ಅನಾಥವಾಗುತ್ತದೆ. ಅದರ ಜಾಗದಲ್ಲಿ ಮೌಲ್ಯಗಳ ಜಾಗತೀಕರಣದ ಉದಯವಾಗುತ್ತದೆ.

ನಾನು ೩೩ ವರ್ಷಗಳ ಹಿಂದೆ ಅಂದಿನ ಸೋವಿಯತ್ ದೇಶದ ಪ್ರವಾಸದಲ್ಲಿದ್ದಾಗ 'ನಿಮ್ಮ ಏರೋಫ್ಲೋತ್ ವಿಮಾನಗಳಿಗಿಂತ ನಮ್ಮ ವಿಮಾನಗಳು ಹೆಚ್ಚು ಐಷಾರಾಮಿ' ಎಂದು ನನ್ನ ಗೈಡ್‌ಗೆ ಹೇಳಿದ್ದೆ. ಆಕೆ ಸಮಾಧಾನ ಚಿತ್ತದಿಂದ 'ನಮ್ಮ ವಿಮಾನಗಳನ್ನು ನಾವೇ ತಯಾರಿಸುತ್ತೇವೆ' ಎಂದು ಹೇಳಿದ್ದಳು. ಆಗ ನಾನು ಮೌನವಾದೆ. ಅದೇ ದೇಶ ಮುಂದೆ ಎಂಟು ವರ್ಷಗಳೊಳಗಾಗಿ ಬಂಡವಾಳಶಾಹಿಗಳ ಜಾಗತೀಕರಣದಿಂದ ಉಂಟಾಗುತ್ತಿದ್ದ ಕೊಳ್ಳುಬಾಕ ಸಂಸ್ಕೃತಿಗೆ ಬಲಿಯಾಯಿತು ಎಂಬುದು ಬಹಳ ಜನರಿಗೆ ಗೊತ್ತಿಲ್ಲ.

ಸೋವಿಯತ್ ಯುವಜನಾಂಗ ಜೀನ್ಸ್ ಪ್ಯಾಂಟ್, ರೇಬ್ಯಾನ್ ಗಾಗಲ್, ಹೊಸ ಮಾದರಿಯ ವಾಚ್, ನಿಕಾನ್ ಕ್ಯಾಮರಾ ಮುಂತಾದ ವಸ್ತುಗಳಿಗಾಗಿ ಹಾತೊರೆಯುತ್ತಿತ್ತು. ಅಂದಿನ ಸೋವಿಯತ್ ದೇಶದ ಯಾವುದೇ ವಸ್ತುವಿನ ಬೆಲೆ ಅರ್ಧಶತಮಾನದಿಂದ ಹೆಚ್ಚಾಗಿರಲಿಲ್ಲ. ಆ ವಸ್ತುಗಳ ವಿನ್ಯಾಸದಲ್ಲಿಯೂ ವ್ಯತ್ಯಾಸವಾಗಿರಲಿಲ್ಲ. ಹೀಗಾಗಿ ಯುವಕರು ಸೋವಿಯತ್ ದೇಶದಲ್ಲಿನ ಡಾಲರ್ ಶಾಪ್‌ಗಳಲ್ಲಿ ಮಾತ್ರ ಸಿಗುತ್ತಿದ್ದ ವಿದೇಶಿ ವಸ್ತುಗಳಿಗಾಗಿ ಡಾಲರ್ ಹೊಂದಿಸಲು ಪ್ರಯತ್ನಿಸುತ್ತಿದ್ದರು. ಆ ಕಾಲದಲ್ಲಿ ಎಕ್ಸೇಂಜ್ ಆಫೀಸಿನಲ್ಲಿ ನೂರು ಡಾಲರ್‌ಗೆ ೬೦

ರೂಬಲ್ ಸಿಗುತ್ತಿದ್ದವು. ಆದರೆ ಯುವಕರು ವಿದೇಶಿ ಪ್ರವಾಸಿಗರಿಗೆ ೩೦೦ ರೂಬಲ್ ಕೊಟ್ಟು ೧೦೦ ಡಾಲರ್ ಪಡೆಯುತ್ತಿದ್ದರು! ಆ ಡಾಲರ್‌ಗಳನ್ನು ತೆಗೆದುಕೊಂಡು ಡಾಲರ್ ಶಾಪ್‌ಗೆ ಹೋಗಿ ಹೊಸ ವಿನ್ಯಾಸದ ವಿದೇಶಿ ವಸ್ತುಗಳನ್ನು ಕೊಳ್ಳುತ್ತಿದ್ದರು.

ಅಂದು ಸೋವಿಯತ್ ಯುವಕರು ಯಾವ ವಸ್ತುಗಳಿಗೆ ಹಾತೊರೆಯುತ್ತಿದ್ದರೋ ಆ ವಸ್ತುಗಳು ಇಂದು ನಮ್ಮ ದೇಶದ ನಗರಗಳ ಬೀದಿ ಬದಿಯ ಮಾರಾಟಗಾರರಲ್ಲಿ ಸಿಗುತ್ತವೆ! ನಾವು ವಿಪರೀತವಾಗಿ ವಸ್ತುಮೋಹಕ್ಕೆ ಒಳಗಾಗಿರುವುದರ ದ್ಯೋತಕವಿದು. ನಮ್ಮ ಕಂಬಾರರು, ಕುಂಬಾರರು, ನೇಕಾರರು, ಖಾದಿ ಗ್ರಾಮೋದ್ಯೋಗಿಗಳು, ಸಮಗಾರರು, ಮೇದಾರರು ಮುಂತಾದ ಕಾಯಕ ಜೀವಿಗಳ ಉತ್ಪನ್ನಗಳಿಗೆ ಬೆಲೆಯೆ ಇಲ್ಲದಂತಾಗಿದೆ. ಯಂತ್ರಗಳ ಸಹಾಯದೊಂದಿಗೆ ಬೃಹತ್ ಪ್ರಮಾಣದಲ್ಲಿ ಉತ್ಪನ್ನವಾಗಿ ಕಡಿಮೆ ದರದಲ್ಲಿ ಸಿಗುವ ವಸ್ತುಗಳೇ ಬಂಡವಾಳಶಾಹಿಗಳ ನಿಜವಾದ ಸೈನ್ಯ. ಈ ಸೈನ್ಯ ಯಾವುದೇ ದೇಶದ ಎಂಥದೇ ಮೂಲೆಯಲ್ಲಿರುವ ಜನರನ್ನೂ ತಲುಪಬಲ್ಲುದು. ಅದು ಚೈನಾಗೋಡೆಯನ್ನೂ ದಾಟಬಲ್ಲುದು ಎಂದು ಕಾರ್ಲ್ ಮಾರ್ಕ್ಸ್ ೧೯ನೇ ಶತಮಾನದಲ್ಲೇ ಹೇಳಿದ್ದಾರೆ.

ಯಾರನ್ನೂ ಬಿಡದ ಜಾಗತೀಕರಣ: ಇಂದು ಚೀನ ಕೂಡ ಜಾಗತೀಕರಣದ ಪ್ರಭಾವಕ್ಕೆ ಒಳಗಾಗಿದೆ. ಜಗತ್ತಿನ ಬಂಡವಾಳಶಾಹಿ ರಾಷ್ಟ್ರಗಳಿಗೆ ಗ್ರಾಹಕರ ವಸ್ತುಗಳನ್ನು ಸರಬರಾಜು ಮಾಡುವುದರಲ್ಲಿ ಅದು ತಲ್ಲೀನವಾಗಿದೆ. ಅಮೆರಿಕ, ಫ್ರಾನ್ಸ್, ಆಸ್ಟ್ರೇಲಿಯಾ ಮುಂತಾದ ಬಂಡವಾಳಶಾಹಿ ದೇಶಗಳ ಲಿಬರ್ಟಿ ಪ್ರತಿಮೆ, ಐಫೆಲ್ ಟಾವರ್ ಮತ್ತು ಒಪೆರಾಗಳ ಸ್ಮರಣಿಕೆಗಳು ತಯಾರಾಗುವುದು ಚೀನದಲ್ಲೇ. ಅಮೆರಿಕದ ಕ್ಯಾಲಿಫೋರ್ನಿಯಾ ರಾಜ್ಯದ ಸ್ಯಾನ್‌ಫ್ರಾನ್ಸಿಸ್‌ಕೊ ನಗರದ ಬಳಿ ಇರುವ 'ಸಿಲಿಕಾನ್ ವ್ಯಾಲಿ' ಎಂದು ಕರೆಯಿಸಿಕೊಳ್ಳುವ ಪ್ರದೇಶ ವಿಶ್ವದ ಪ್ರಮುಖ ಯಾಪಲ್ ಮುಂತಾದ ಕಂಪೆನಿಗಳ ತಾಣವಾಗಿದೆ. ಆದರೆ ಈ ಕಂಪನಿಗಳಿಗೆ ಸಂಬಂಧಿಸಿದ ಮೊಬೈಲ್ ಫೋನ್, ಐಪ್ಯಾಡ್ ಮುಂತಾದ ಎಲೆಕ್ಟ್ರಾನಿಕ್ ವಸ್ತುಗಳ ಬಿಡಿಭಾಗಗಳ ಜೋಡಣೆ ಆಗುವುದು ಚೀನದಲ್ಲೇ. ಚೀನದ ಕಾಯಕಜೀವಿಗಳು ಮತ್ತು ತಂತ್ರಜ್ಞರು ತಮ್ಮ ತಮ್ಮ ಉದ್ಯೋಗಗಳಲ್ಲಿ ಬಹಳ ಪರಿಣತರಾಗಿದ್ದಾರೆ. ಅಮೆರಿಕದ ಕಂಪನಿಗಳು ಕೂಡ ಅವರನ್ನು ಸಂದರ್ಶನವಿಲ್ಲದೆ ಕೆಲಸಕ್ಕೆ ತೆಗೆದುಕೊಳ್ಳುವಷ್ಟು ಅವರ ಶ್ರಮಸಂಸ್ಕೃತಿ ಪ್ರಸಿದ್ಧವಾಗಿದೆ.

ಇಂದು ಜಗತ್ತಿನಲಿ ಬಂಡವಾಳಶಾಹಿಗಳು ಮತ್ತು ಕಮ್ಯೂನಿಸ್ಟರ ಮಧ್ಯೆ ಹೋರಾಟವಿದೆ ಎನ್ನುವುದಕ್ಕಿಂತಲೂ ಬಂಡವಾಳ ಮತ್ತು ಶ್ರಮದ ಮಧ್ಯೆ ಯುದ್ಧ ನಡೆದಿದೆ ಎನ್ನುವುದೇ ಸೂಕ್ತ. ಶ್ರಮವು ಬಂಡವಾಳದ ಮೇಲೆ ವಿಜಯ ಸಾಧಿಸುತ್ತಿದೆ. ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಜನ ಕಡಿಮೆ, ಬಂಡವಾಳ ಹೆಚ್ಚು, ಚೀನದಲ್ಲಿ ಜನ

ಹೆಚ್ಚು. ಈ ಜನ ತಮ್ಮ ಶ್ರಮದಿಂದ ವಿಶ್ವದ ತಂತ್ರಜ್ಞಾನದ ಮೇಲೆ ಆಧಿಪತ್ಯ ಸಾಧಿಸುತ್ತಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರವನ್ನು ತಮ್ಮ ಬೌದ್ಧಿಕ ಮತ್ತು ಶಾರೀರಿಕ ಶ್ರಮದಿಂದ ಸಾಕಾರಗೊಳಿಸುತ್ತಿದ್ದಾರೆ. ಹೀಗಾಗಿ ಚೀನ ತನ್ನ ದೇಶದ ಶ್ರಮದ ಮೂಲಕ ಬಂಡವಾಳವನ್ನು ಸಂಗ್ರಹಿಸುತ್ತಿದೆ. ಆದರೆ ಆದದ್ದೇನು? ನಿಸರ್ಗದ ಬಲಿ!

ಚೀನ ತನ್ನ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುತ್ತಿರುವುದು ಜಾಗತೀಕರಣದ ಸೂತ್ರದ ಮೇಲೆಯೆ ಎಂಬುದನ್ನು ಮರೆಯಬಾರದು. ಮಗು ಹಾಲು ಕುಡಿಯಲು ಬೇಕಾದ ನಿಪ್ಪಲ್ ಮೊದಲು ಮಾಡಿ ವಿಮಾನಿನ ಬಿಡಿ ಉಪಕರಣಗಳನ್ನು ಕೂಡ ಬಂಡವಾಳಶಾಹಿ ರಾಷ್ಟ್ರಗಳಿಗಾಗಿ ಚೀನ ದೇಶ ತಯಾರಿಸುತ್ತಿದೆ. ಅದನ್ನು ಬಗ್ಗುಬಡಿಯುವ ಉದ್ದೇಶದಿಂದ ಬಂಡವಾಳಶಾಯಿ ರಾಷ್ಟ್ರಗಳು ಅದರ ಉತ್ಪನ್ನಗಳನ್ನು ತಿರಸ್ಕರಿಸಲು ಆರಂಭಿಸಿದಾಗ ಪರಿಸ್ಥಿತಿ ಏನಾಗಬಹುದು? ಇಂಥ ಹೊಡೆತ ಬಿದ್ದಾಗ ಅದರ ಪಾಲಿಗೆ ಉಳಿಯುವುದು ಹೊಗೆಮಂಜು ಮಾತ್ರ!

ಚೀನ ದೇಶದಲ್ಲಿನ ಹೊಗೆಮಂಜು, ಕಾಶ್ಮೀರ ಮತ್ತು ಚೆನ್ನೈನಲ್ಲಿ 'ಜಲಪ್ರಳಯ', ಭಾರತ, ಅಮೆರಿಕ, ಆಸ್ಟ್ರೇಲಿಯಾ, ಇಂಗ್ಲಂಡ್, ಇಂಡೊನೇಷ್ಯಾ, ಫಿಲಿಪ್ಪೀನ್ಸ್ ಮುಂತಾದ ಕಡೆಗಳಲಿ ಸಂಭವಿಸುತ್ತಿರುವ ನೈಸರ್ಗಿಕ ವಿಕೋಪಗಳು, ಜಗತ್ತಿನ ವಿವಿಧ ಕಡೆಗಳಲ್ಲಿ ಮಹಾಪೂರದಲ್ಲಿ ನಗರಗಳೇ ಕೊಚ್ಚಿ ಹೋಗುವಂಥ ಘಟನೆಗಳು, 'ಹಸಿರುಮನೆ ಪರಿಣಾಮ'ದಿಂದ ಧ್ರುವ ಪ್ರದೇಶದ ಹಿಮ ಕರಗಿ ಉಂಟಾಗುವ ಸಮುದ್ರ ಕೊರೆತ ಮುಂತಾದ ಸಮಸ್ಯೆಗಳು, ಚರ್ಮದ ಕ್ಯಾನ್ಸರ್‌ಗೆ ಕಾರಣವಾಗುತ್ತಿರುವ ಓಜೋನ್ ಪದರದಲ್ಲಿನ ತೂತುಗಳು, ವಿವಿಧ ಕಡೆಗಳಲ್ಲಿ ಸುರಿಯುತ್ತಿರುವ ಆಮ್ಲ ಮಳೆ ಮುಂತಾದ ಅನಿಷ್ಟಗಳಿಗೆ ಮುಖ್ಯ ಕಾರಣವೆಂದರೆ ಮಾನವ ನಿಸರ್ಗವನ್ನು ಬೇಕಾಬಿಟ್ಟಿ ಶೋಷಣೆ ಮಾಡುತ್ತಿರುವುದು.

ಪ್ರಳಯದ ಹೆಬ್ಬಾಗಿಲು: ಹವಾಮಾನ ವೈಪರೀತ್ಯಕ್ಕೆ ಸಂಬಂಧಿಸಿದಂತೆ ವಿಶಸಂಸ್ಥೆ ೨೦೧೫ನೇ ನವೆಂಬರ್ ೩೦ರಿಂದ ಡಿಸೆಂಬರ್ ೧೨ರ ವರೆಗೆ ಪ್ಯಾರಿಸ್‌ನಲ್ಲಿ 'ಹವಾಮಾನ ಬದಲಾವಣೆ' ಕುರಿತಂತೆ ೨೧ನೇ ಸಮ್ಮೇಳನ ಏರ್ಪಡಿಸಿತ್ತು. ಈ ಜಗತ್ತು ಸುರಕ್ಷಿತವಾಗಿರುವ ರೀತಿಯಲ್ಲಿ ಹೊಸ ಮಾದರಿಯ ಅಭಿವೃದ್ಧಿ ಪಥವನ್ನು ಕಂಡುಕೊಳ್ಳುವುದು ಅವಶ್ಯವಾಗಿದೆ ಎಂಬುದು ಸಮ್ಮೇಳನದಲ್ಲಿ ಭಾಗವಹಿಸಿದ್ದ ವಿಶ್ವಸಂಸ್ಥೆಯ ೧೯೩ ಸದಸ್ಯ ದೇಶಗಳ ಭಾವನೆಯಾಗಿತ್ತು. ಶೀಘ್ರವಾಗಿ ಈ ಪಥವನ್ನು ಕಂಡುಕೊಳ್ಳುವ ಬಗ್ಗೆ ಚಿಂತನೆ ನಡೆಯಿತು. ಎಲ್ಲ ದೇಶಗಳು ಸಾಮೂಹಿಕವಾಗಿ ಈ ಸವಾಲನ್ನು ಸ್ವೀಕರಿಸಿ ಪರಿಹಾರ ಕಂಡುಕೊಳ್ಳಬೇಕಿದೆ. ಭೂಮಿಯ ತಾಪಮಾನ ಏರಿಕೆ ೧.೫ ಡಿಗ್ರಿ ಸೆಲ್ಸಿಯಸ್ ಮೀರದಂತೆ ನೋಡಿಕೊಳ್ಳಬೇಕಿದೆ. ಪರಿಸ್ಥಿತಿ ಹೀಗೇ ಮುಂದುವರಿದರೆ ಜಾಗತಿಕ ಉಷ್ಣಾಂಶ ನಮ್ಮ ಜೀವಿತ ಅವಧಿಯಲ್ಲೇ ೫.೫

ಸೆಲ್ಸಿಯಸ್‌ನಷ್ಟು ಹೆಚ್ಚಾಗುವ ಸಾಧ್ಯತೆಗಳಿವೆ. ಭಾರತದ ಮಟ್ಟಿಗೆ ಹೇಳಬೇಕೆಂದರೆ, ಇದರಿಂದಾಗಿ ಭಾರಿ ಸಮುದ್ರ ಕೊರೆತ ಉಂಟಾಗಿ ಕರಾವಳಿ ಪ್ರದೇಶದ ಬಹುಭಾಗ ಸಮುದ್ರ ಪಾಲಾಗುತ್ತದೆ. ಹಿಮಾಲಯದ ಹಿಮ ಕರಗಿ 'ಜಲಪ್ರಳಯ'ವಾಗಿ ದೇಶದ ಅರ್ಧದಷ್ಟು ಜನಸಮುದಾಯ ನಿರಾಶ್ರಿತವಾಗುತ್ತದೆ. ಹೊಸ ಬಗೆಯ ರೋಗ ರುಜಿನಗಳಿಂದಾಗಿ ಎಲ್ಲೆಡೆ ಹಾಹಾಕಾರದ ಪರಿಸ್ಥಿತಿ ಉಂಟಾಗುತ್ತದೆ. ಬಾಂಗ್ಲಾದೇಶದ ಅರ್ಧಭಾಗ ಸಮುದ್ರ ಪಾಲಾಗುತ್ತದೆ!

ಕಳೆದ ಕೇವಲ ೨೦ ವರ್ಷಗಳ ಅವಧಿಯಲ್ಲಿ ಉಷ್ಣಾಂಶದಲ್ಲಿ ಭೂಮಿಯ ತಾಪಮಾನ ೧ ಸೆಲ್ಸಿಯಸ್‌ವರೆಗೆ ಹೆಚ್ಚಾಗಿದೆ! ಹೀಗೆ ತಾಪಮಾನ ಹೆಚ್ಚಾಗುವಲ್ಲಿ ೫೫ ದೇಶಗಳ ಪಾತ್ರ ಶೇಕಡಾ ೫೫ರಷ್ಟಿದೆ. ಅರಣ್ಯ ನಾಶ ಮತ್ತು ಹೆಚ್ಚುತ್ತಿರುವ ಅಂಗಾರಾಮ್ಲವಾಯು ಈ ಹವಾಮಾನ ವೈಪರೀತ್ಯಕ್ಕೆ ಪ್ರಬಲ ಕಾರಣವಾಗಿವೆ. ಪಳಿಯುಳಿಕೆ ಇಂಧನಗಳಾದ ಕಲ್ಲಿದ್ದಲು, ಪೆಟ್ರೋಲ್, ಡೀಸಲ್ ಮತ್ತು ಅಡುಗೆ ಅನಿಲದಂಥ ವಸ್ತುಗಳು ಅಂಗಾರಾಮ್ಲ ವಾಯುವನ್ನು ಹೆಚ್ಚಿಸುತ್ತ ಓಜೋನ್ ಪದರಿಗೆ ತೂತು ಬೀಳುವುದಕ್ಕೆ ಮತ್ತು ಭೂ ತಾಪಮಾನ ಹೆಚ್ಚುವುದಕ್ಕೆ ಪ್ರಮುಖ ಕಾರಣಗಳಾಗಿವೆ.

ಸಮುದ್ರದ ತಳಪದರುಗಳಲ್ಲಿ ಉಂಟಾಗುವ ಘರ್ಷಣೆಯಿಂದ ಏರಿಳತಗಳಾಗಿ ಸುನಾಮಿ ಸೃಷ್ಟಿಯಾಗುತ್ತದೆ. ಆಗ ಸಮುದ್ರ ಉಕ್ಕಿ ಕರಾವಳಿ ಪ್ರದೇಶದ ಜನಸಮುದಾಯ ಜಲಸಮಾಧಿಯಾಗುತ್ತದೆ. ಟೋರ್ನಾಡೊದಂಥ ಸುಂಟರಗಾಳಿಗಳು ಬೀಸುತ್ತವೆ. ಹರಿಕೇನ್ ಸ್ಯಾಂಡಿಯಂಥ ಭಯಾನಕ ಮಳೆಗಾಳಿ ಬೀಸುತ್ತದೆ. ಇಂಥ ನೈಸರ್ಗಿಕ ವಿಕೋಪದಿಂದಾಗಿ ಭಾರಿ ನಗರಗಳು ತತ್ತರಿಸುತ್ತವೆ.

ಮಾನವ ಕೇಂದ್ರಬಿಂದು ಅಲ್ಲ: ಔದ್ಯೋಗಿಕ ಕ್ರಾಂತಿಯಾದಾಗಿನಿಂದ ಇಂದಿನ ಜಾಗತೀಕರಣದ ವರೆಗೂ ಮಾನವ ವಿಶ್ವದ ಕೇಂದ್ರಬಿಂದುವೆಂದೇ ಭ್ರಮಿಸಿದ್ದಾನೆ. ಹೀಗಾಗಿ ಪೃಥ್ವಿಯ ಮೇಲೆ ನಿರಂತರವಾಗಿ ಅತ್ಯಾಚಾರ ಮಾಡುತ್ತಿದ್ದಾನೆ. ಈತನ ಕುಕೃತ್ಯದಿಂದಾಗಿ ಜೀವಸಂಕುಲದ ಎಷ್ಟೋ ಪಶು, ಪಕ್ಷಿ ಮತ್ತು ಸಸ್ಯರಾಶಿ ನಾಶವಾಗಿವೆ. ಇನ್ನೂ ನಾಶವಾಗುತ್ತಲೇ ಇವೆ.

ಡಚ್ಚ ನಾವಿಕರು ೧೫೯೮ರಲ್ಲಿ ಮಾರಿಷಸ್ ದ್ವೀಪಕ್ಕೆ ಬಂದರು. ಅಲ್ಲಿ ಬಾತುಕೋಳಿಯ ಹಾಗೆ ಕಾಣುವ ಮೂರಡಿ ಎತ್ತರದ ಡೊಡೊ ಪಕ್ಷಿಗಳಿದ್ದವು. ಹಾರುವಂಥ ರೆಕ್ಕೆ ಇಲ್ಲದ ಅವು ಭಾರಿ ದೇಹದೊಂದಿಗೆ ನೆಲದ ಮೇಲೆ ಓಡಾಡಿಕೊಂಡಿದ್ದವು. ನಾಲಗೆ ರುಚಿಗಾಗಿ ನಾವಿಕರು ಬೇಟೆಯಾಡುತ್ತ ೧೬೮೧ರೊಳಗಾಗಿ ಅವುಗಳ ಕುಲವನ್ನೇ ನಾಶಮಾಡಿದರು. ಆ ಡೊಡೋಗಳು ಕಲ್ವಾರಿಯಾ ಎಂಬ ಗಿಡಗಳಿಂದ ಬಿದ್ದ ಹಣ್ಣುಗಳನ್ನು ತಿಂದು ಹಿಕ್ಕೆ ಹಾಕಿದಾಗ, ಅದರೊಳಗಿನ ಬೀಜಗಳು ಮೊಳಕೆಯೊಡೆದು ಗಿಡ ಮರಗಳಾಗುತ್ತಿದ್ದವು.

ಡೋಡೋಗಳು ನಾಶವಾದ ನಂತರ ಆ ಗಿಡಮರಗಳೂ ನಾಶವಾದವು. ಹೀಗೆ ಜಗತ್ತಿನ ನೂರಾರು ಕಡೆ ಜೀವಜಾಲದ ಕೊಂಡಿಗಳನ್ನು ಮಾನವ ತನ್ನ ಸ್ವಾರ್ಥದ ಕಾರಣ ಕಳಚಿಬಿಟ್ಟಿದ್ದಾನೆ. ಇನ್ನೂ ಅನೇಕ ಪ್ರಾಣಿ, ಪಕ್ಷಿ ಮತ್ತು ಸಸ್ಯಗಳು ಅಳಿವಿನ ಅಂಚಿನಲ್ಲಿವೆ. ಇಷ್ಟೆಲ್ಲ ಹಾಳು ಮಾಡಿದ ಮಾನವ ಈಗ ಪ್ರಕೃತಿ ಮುನಿಯುತ್ತಿರುವ ಬಗ್ಗೆ ಗಾಬರಿಗೊಳ್ಳುತ್ತಿದ್ದಾನೆ.

ಇವೆಲ್ಲವುಗಳ ಮಧ್ಯೆ ಈ ವಸ್ತುಮೋಹದ ಜಗತ್ತಿನಲ್ಲಿ ಮಾನವರು ದೇಶ, ಭಾಷೆ, ಧರ್ಮಗಳ ಹೆಸರಲ್ಲಿ ಕೊಲೆಗಡುಕರಾಗುತ್ತಿದ್ದಾರೆ. ಇಡೀ ಜಗತ್ತು ಯುದ್ಧ, ಯಾದವೀ ಕಲಹ, ಜನಾಂಗ ದ್ವೇಷ ಮತ್ತು ಜನಾಂಗ ಹತ್ಯೆಯಿಂದ ನರಳುತ್ತಿದೆ.

ಔದ್ಯೋಗೀಕರಣದ ನಂತರ ಬೆಳೆದ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಆದಷ್ಟು ಭೀಕರ ಯುದ್ಧಗಳು ಮತ್ತು ಜನಾಂಗ ಹತ್ಯೆ ಹಿಂದೆದೂ ಆಗಿಲ್ಲ. ಇಂದು ಜಾಗತೀಕರಣದ ವ್ಯವಸ್ಥೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆ ಶೀಘ್ರ ಗತಿಯಲ್ಲಿದ್ದು ಬಳಕೆಯ ಪ್ರಮಾಣಕೂಡ ಅತ್ಯುನ್ನತ ಮಟ್ಟಕ್ಕೇರಿದೆ. ಇಂಥ ಅಭಿವೃದ್ಧಿ ತನ್ನದೆ ಆದ ಸಂಘರ್ಷಗಳನ್ನು ಮತ್ತು ರೋಗರುಜಿನುಗಳನ್ನು ತಂದೊಡ್ಡಿದೆ.

ಸಂಪತ್ತಿನ ಗುಲಾಮರು: 'ಸಂಪತ್ತಿನ ಗುಲಾಮನನ್ನು ದೇವರು ತಿರಸ್ಕರಿಸುವನು' ಎಂದು ಪವಿತ್ರ ಕುರಾನ್‌ನಲ್ಲಿ ಹೇಳಲಾಗಿದೆ. ಇಂದು ಜಗತ್ತಿನಲ್ಲಿ ಅತ್ಯಂತ ಕ್ರೂರವಾಗಿ ವರ್ತಿಸುತ್ತಿರುವ ದುಷ್ಟಶಕ್ತಿ ಎಂದರೆ ಸುನ್ನಿ ಪಂಥದವರೆಂದು ಹೇಳಿಕೊಳ್ಳುವ ಉಗ್ರರಿಂದ ಕೂಡಿದ ಐಎಸ್‌ಐಎಸ್ (ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಅಂಡ್ ಸಿರಿಯಾ).

ಇಸ್ರೇಲ್ ಬಿಟ್ಟರೆ ಮಧ್ಯಪ್ರಾಚ್ಯ ದೇಶಗಳೆಲ್ಲ ಮುಸ್ಲಿಂ ದೇಶಗಳಗಿವೆ. ಎರಡನೇ ಮಹಾಯುದ್ಧದ ನಂತರ ಅಮೆರಿಕ ಮತ್ತು ಇಂಗ್ಲಂಡ್ ಸೇರಿಕೊಂಡು ಅಲ್ಲಿನ ಪ್ಯಾಲೆಸ್ತೀನ್ ದೇಶದಲ್ಲಿ ಯಹೂದಿಗಳನ್ನು ಬಿಡುವ ಮೂಲಕ ಇಸ್ರೇಲ್ ದೇಶ ಸೃಷ್ಟಿಸಿದರು. ಇಂದು ಇಸ್ರೇಲಿಗಳು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುತ್ತ ೪೨ ಲಕ್ಷ ಜನಸಂಖ್ಯೆಯ ಪ್ಯಾಲೆಸ್ತೀನ್ ದೇಶವನ್ನು ಎರಡು ತುಕಡಿಯಾಗಿಸಿ ಮೂಲೆಗುಂಪು ಮಾಡಿದ್ದಾರೆ. ಇಸ್ರೇಲ್ ದೇಶದ ಸಹಾಯದೊಂದಿಗೆ ಅಮೆರಿಕ ಇಡೀ ಮಧ್ಯಪ್ರಾಚ್ಯದಲ್ಲಿ ಆತಂಕ ಸೃಷ್ಟಿಸಿದೆ. ಅಮೆರಿಕ ದೇಶ ಇಸ್ರೇಲ್ ಮೂಲಕ ಐಎಸ್‌ಐಎಸ್ ಉಗ್ರರಿಗೆ ಸಹಾಯ ಮಾಡುತ್ತ ಅವರನ್ನು ಸಂಪತ್ತಿನ ಗುಲಾಮರನ್ನಾಗಿ ಮಾಡಿದೆ.

ಸಾಮ್ರಾಜ್ಯಶಾಹಿ ಮತ್ತು ಜಾಗತೀಕರಣದ ಪ್ರಭಾವ ಆ ಉಗ್ರರ ಮೇಲೆ ಎಷ್ಟೊಂದು ಆಗಿದೆ ಎಂದರೆ, ಇಂದು ಅವರು ತಮ್ಮ ಸ್ವಾರ್ಥಕ್ಕಾಗಿ ಇಸ್ಲಾಮಿನ ಎಲ್ಲ ಆದರ್ಶಗಳನ್ನು ಗಾಳಿಗೆ ತೂರುತ್ತಿದ್ದಾರೆ. ಅಧಿಕಾರ ಮತ್ತು ಸಂಪತ್ತಿನ ಮುಂದೆ ಅವರಿಗೆ ಎಲ್ಲವೂ ತೃಣ ಸಮಾನವಾಗಿ ಕಾಣುತ್ತಿದೆ. ತಮಗೆ ಹೇಗೆ ಬೇಕೋ ಹಾಗೆ ಕುರಾನನ್ನು ಅರ್ಥೈಸುತ್ತ ಮುಸ್ಲಿಮೇತರರು ಇಸ್ಲಾಂ ಬಗ್ಗೆ ಭಯ ಪಡುವಂತೆ ಮಾಡುತ್ತಿದ್ದಾರೆ.

ಇಲ್ಲಿಯ ವರೆಗೆ ಇತಿಹಾಸ ಕಂಡ ಎಲ್ಲ ಕ್ರೂರಶಕ್ತಿಗಳನ್ನು ನೆನಪಿಸುವ ಹಾಗೆ ಐಎಸ್‌ಐಎಸ್ (ಇದಕ್ಕೆ ಐಸಿಸ್ ಮತ್ತು ಐಎಸ್ ಎಂದೂ ಕರೆಯುತ್ತಾರೆ) ಉಗ್ರರು ಹಿಂಸಾಕೃತ್ಯಗಳಲ್ಲಿ ತೊಡಗಿದ್ದಾರೆ. ಇರಾಕ್ ಮತ್ತು ಸಿರಿಯಾದ ಕೆಲ ಭಾಗಗಳ ಮೇಲೆ ಹಿಡಿತ ಸಾಧಿಸಿ ನಿರಂತರ ಹಿಂಸೆ ಮತ್ತು ಅತ್ಯಾಚಾರದಲ್ಲಿ ತೊಡಗಿದ್ದಾರೆ. ಕಳೆದ ಎರಡು ವರ್ಷಗಳ ಅವಧಿಯಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ಮುಸ್ಲಿಮರ ಕೊಲೆ ಮಾಡಿದ್ದಾರೆ. ಮಧ್ಯಪ್ರಾಚ್ಯದ ಇರಾನ್, ಇರಾಕ್, ಸಿರಿಯಾ, ಸಾವುದಿ ಅರೆಬಿಯಾ, ಟರ್ಕಿ, ಮುಂತಾದ ಮುಸ್ಲಿಂ ದೇಶಗಳ ಮೇಲೆ ದಾಳಿ ಮಾಡಿದ್ದಾರೆ. ಐಎಸ್‌ಐಎಸ್ ನಾಯಕ ಅಬು ಬಕ್ರ್ ಅಲ್ ಬಗದಾದಿ, ತಾನು ಜಗತ್ತಿನ ಮುಸ್ಲಿಮರ ನಾಯಕ (ಕಲಿಫಾ) ಎಂದು ಘೋಷಿಸಿದ್ದಾನೆ.

ಐಎಸ್‌ಐಎಸ್ ಬಳಸುವ ಶಸ್ತ್ರಾಸ್ತ್ರಗಳು ಮತ್ತು ಯುದ್ಧ ವಾಹನಗಳು ಅಮೆರಿಕ ಸಾಮ್ರಾಜ್ಯಶಾಹಿಗಳ ಕೊಡುಗೆ ಎಂಬುದು ಸಾಬೀತಾಗಿದೆ. ಇಸ್ರೇಲ್ ಸಹಾಯದೊಂದಿಗೆ ಅಮೆರಿಕದವರು ಐಎಸ್ ಉಗ್ರರಿಗೆ ಸಹಾಯ ಮಾಡುತ್ತಿದ್ದಾರೆ ಎಂಬುದನ್ನು ಮಾನವತಾವಾದಿಗಳು ಸಾಕ್ಷಾಧಾರಗಳೊಂದಿಗೆ ಎತ್ತಿತೋರಿಸುತ್ತಿದ್ದರೂ ಸಾಮ್ರಾಜ್ಯಶಾಹಿ ಕೈಗೊಂಬೆಗಳಾದ ಅನೇಕ ವಿಶ್ವವ್ಯಾಪಿ ವಿದ್ಯುನ್ಮಾನ ಮಾಧ್ಯಮಗಳು ಹಾಗೂ ದೊಡ್ಡ ಪತ್ರಿಕೆಗಳು ಆ ಕಡೆ ಗಮನ ಹರಿಸುತ್ತಿಲ್ಲ. ಆದರೆ ಈ ಅಮಾನುಷ ಉಗ್ರರು 'ಅಲ್ಲಾ ಹೋ ಅಕ್ಬರ್' ಎಂದು ನಾಟಕೀಯವಾಗಿ ಘೋಷಣೆ ಕೂಗುತ್ತ, ಕುಂಬಳ ಕಾಯಿ ಕೊಯ್ಯುವ ಹಾಗೆ ಅಮಾಯಕರ ರುಂಡ ಮುಂಡಗಳನ್ನು ಬೇರ್ಪಡಿಸುವ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಲಭಿಸುವಂತೆ ಮಾಡುತ್ತಿದ್ದಾರೆ.

ಇಂಥ ದುಷ್ಟಶಕ್ತಿಗಳ ಕೈಯಲ್ಲಿ ನ್ಯೂಕ್ಲಿಯರ್ ಬಾಂಬ್‌ಗಳು ಸಿಕ್ಕರೆ ಏನಾಗಬಹುದು ಎಂಬುದನ್ನು ಊಹಿಸಲಿಕ್ಕೂ ಸಾಧ್ಯವಿಲ್ಲ. ಇಂದು ಜಗತ್ತಿನ ೧೯೬ ದೇಶಗಳ ೭೦೦ ಕೋಟಿ ಜನರು ಒಂದಿಲ್ಲೊಂದು ರೀತಿಯ ಯುದ್ಧ ಮತ್ತು ಜನಾಂಗೀಯ ಗಲಭೆಗಳ ಭಯದಲ್ಲೇ ಬದುಕುತ್ತಿದ್ದಾರೆ. ಅಮೆರಿಕಾ, ಚೀನ, ರಷ್ಯಾ, ಸೌದಿ ಅರೆಬಿಯಾ, ಫ್ರಾನ್ಸ್, ಯು.ಕೆ. ಜರ್ಮನಿ, ಜಪಾನ, ಭಾರತ, ಪಾಕಿಸ್ತಾನ, ದಕ್ಷಿಣ ಕೋರಿಯಾ ಮುಂತಾದ ದೇಶಗಳು ೨೦೧೩ರಲ್ಲಿ ಮಿಲಿಟರಿ ಮೇಲೆ ೧೭೪೭ ಶತಕೋಟಿ ಡಾಲರ್ ಖರ್ಚು ಮಾಡಿವೆ!

ಈ ಜಗತ್ತನ್ನು ಸಂಪೂರ್ಣವಾಗಿ ನಾಶ ಮಾಡುವಷ್ಟು ಶಕ್ತಿಶಾಲಿ ನ್ಯೂಕ್ಲಿಯರ್ ಬಾಂಬ್‌ಗಳನ್ನು ಶ್ರೀಮಂತ ದೇಶಗಳು ಹೊಂದಿವೆ. ಇಸ್ರೇಲಿ ಸರ್ಕಾರದಿಂದಾಗಿ ಪ್ಯಾಲೆಸ್ತೀನ್‌ನ ಗಾಜಾ ಪ್ರದೇಶ ಸ್ಮಶಾನ ಸದೃಶವಾಗಿದೆ. ಅದೇ ರೀತಿ ಐಎಸ್‌ಐಎಸ್ ದಾಳಿಗಳಿಂದ ಸಿರಿಯಾ ಸ್ಮಶಾನವಾಗುತ್ತಿದೆ. ಯು.ಕೆ. ಮತ್ತು ರಷ್ಯಾ ಮುಂತಾದ ದೇಶಗಳು ಉಗ್ರರನ್ನು ನಿಯಂತ್ರಿಸಲು ಸಿರಿಯಾ ಮೇಲೆ ದಾಳಿ ಮಾಡಿವೆ. ಉಗ್ರರನ್ನು

ನಿಯಂತ್ರಿಸಲು ಸಿರಿಯಾ ಅಧ್ಯಕ್ಷ ಬಸೀರ್ ಅಲ ಅಸಾದ್ ವಿಷಾನಿಲ ಪ್ರಯೋಗವನ್ನು ಮಾಡಿದರು. ಈ ಎಲ್ಲ ಅನಾಹುತಗಳಿಗೆ ಸಿರಿಯಾದ ಮಕ್ಕಳು ಮತ್ತು ಮಹಿಳೆಯರು ಹೆಚ್ಚಿನ ರೀತಿಯಲ್ಲಿ ಬಲಿಯಾಗುತ್ತಿದ್ದಾರೆ. ಸಿರಿಯಾ ಜನ ಬಾಂಬುಗಳ ದಾಳಿಗಳಿಂದಾಗಿ ಮನೆಯಲ್ಲೇ ಉಳಿದು ಹಸಿದು ಹಲ್ಲಿ ತಿನ್ನುವಂಥ ಹೃದಯವಿದ್ರಾವಕ ಪರಿಸ್ಥಿತಿ ನಿರ್ಮಾಣವಾಗಿದೆ.

ಐಎಸ್ಐಎಸ್ ಇಸ್ಲಾಂ ವಿಚಿತ್ರವಾಗಿದೆ. ಇಸ್ಲಾಂ ವಿರುದ್ಧ ಐತಿಹಾಸಿಕವಾಗಿ ದ್ವೇಷ ಸಾಧನೆ ಮಾಡಿದ ಜನಾಂಗದ ಮಹಿಳೆಯರು ಯುದ್ಧ ಕೈದಿಗಳಾಗಿ ಸಿಕ್ಕರೆ ಅವರ ಮೇಲೆ ಅತ್ಯಾಚಾರ ಮಾಡುವುದು ಮತ್ತು ಮಾರಾಟ ಮಾಡುವುದು ಧರ್ಮಸಮ್ಮತ ಎಂದು ಈ ಉಗ್ರರು ವಾದಿಸುತ್ತಾರೆ.

ಅಲ್ಪಸಂಖ್ಯಾತ ಯಜಿದಿ ಧರ್ಮದ ಮಹಿಳೆಯರನ್ನು ಬಂಧಿಸುತ್ತಾರೆ. ಅವರ ಮೇಲೆ ಸಾಮೂಹಿಕ ಅತ್ಯಾಚಾರ ಮಾಡುತ್ತಾರೆ. ಕೊನೆಗೆ ಅವರನ್ನು ಗುಲಾಮರಂತೆ ಮಾರಾಟ ಮಾಡುತ್ತಾರೆ. ಇದಲ್ಲದೆ ಉತ್ತರ ಇರಾಕ್‌ನಲ್ಲಿ ಈಗಾಗಲೆ ಐದು ಸಾವಿರ ಯಜಿದಿಗಳ ಕೊಲೆ ಮಾಡಿದ್ದಾರೆ.

ದುಷ್ಟ ಐಎಸ್ಐಎಸ್ ನೀತಿಯ ಪ್ರಕಾರ ಇಸ್ಲಾಂಗೆ ಮತಾಂತರಗೊಂಡವರು ಮರಳಿ ತಮ್ಮ ಹಳೆಯ ಧರ್ಮಕ್ಕೆ ಹೊರಟರೆ ಮತ್ತು ಮುಸ್ಲಿಮರು ಇನ್ನೊಂದು ಧರ್ಮ ಸ್ವೀಕರಿಸಲು ಹೊರಟರೆ ಅವರನ್ನು ವಧಿಸುವುದು ಧರ್ಮಸಮ್ಮತ! ಹೆಣ್ಣು ಮಕ್ಕಳು ಮುಖ ತೋರಿಸುವುದು ಅಧರ್ಮ! ಗಂಡ ಬಯಸಿದಾಗಲೆಲ್ಲ ಕಾಮತೃಷೆ ತೀರಿಸದೆ ಇರುವುದು ಅಧರ್ಮ! ಜೆಹಾದ್‌ನಲ್ಲಿ ಹುತಾತ್ಮರಾದ ಪ್ರತಿಯೊಬ್ಬರಿಗೂ ಸ್ವರ್ಗದಲ್ಲಿ ೭೨ ಅಚ್ಯುತ ಕನ್ಯೆಯರು ಕಾಯುತ್ತಿರುತ್ತಾರೆ! ಹುತಾತ್ಮರು ತಮ್ಮ ಪಾಲಿಗೆ ಬಂದ ಆ ಕನ್ಯೆಯರನ್ನು ಭೋಗಿಸುತ್ತಾರೆ! ಎಂದು ಮುಂತಾಗಿ ಸುಳ್ಳು ಪ್ರಚಾರವನ್ನು ಅವರದೇ ಆದ ಸಾಮಾಜಿಕ ಜಾಲತಾಣಗಳ ಮೂಲಕ ಉಗ್ರರು ಹರಿಬಿಡುತ್ತಲೇ ಇರುತ್ತಾರೆ. ಜಗತ್ತಿನ ಅನೇಕ ದೇಶಗಳ ಮುಸ್ಲಿಮ ಯುವಕರು ಮತ್ತು ಯುವತಿಯರು ಅತ್ಯಲ್ಪ ಪ್ರಮಾಣದಲ್ಲಾದರೂ ಈ ಮೋಸಕ್ಕೆ ಬಲಿಯಾಗುತ್ತಿದ್ದಾರೆ.

ಮಾನಸಿಕ ಗುಲಾಮಗಿರಿ: ತಮ್ಮನ್ನು ನಂಬಿದವರನ್ನು ಉಗ್ರಗಾಮಿಗಳು ಮಾನಸಿಕ ಗುಲಾಮಗಿರಿಗೆ ತಳ್ಳುತ್ತಾರೆ. ಐಎಸ್ಐಎಸ್ ಭಯೋತ್ಪಾದಕರು ಮಾಡುವುದು ಇದನ್ನೇ. ಅವರ ಆಜ್ಞೆ ಪಾಲಿಸದಿದ್ದರೆ ಸಾವು ನಿಶ್ಚಿತ ಎಂಬುದನ್ನು ತಮ್ಮ ಅನುಯಾಯಿಗಳಿಗೆ ಅಂಥ ಹಿಂಸಾಕೃತ್ಯದ ಮೂಲಕವೇ ಮನದಟ್ಟು ಮಾಡಿಕೊಟ್ಟಿರುತ್ತಾರೆ. ಉಗ್ರಗಾಮಿ ನಾಯಕರು ನುಡಿದಂತೆ ತಾವು ನಡೆಯದಿದ್ದರೆ ತಮಗೂ ಅದೇ ಗತಿ ಬರುವುದು ನಿಶ್ಚಿತ ಎಂಬ ಭಯ ಅವರ ಹಿಂಬಾಲಕರಲ್ಲಿ ಮನೆ ಮಾಡಿರುತ್ತದೆ.

ಇತ್ತೀಚೆಗೆ ಸಿರಿಯಾದ ರಖ್ಖಾದಲ್ಲಿ ಹೃದಯವಿದ್ರಾವಕ ಘಟನೆಯೊಂದು ನಡೆಯಿತು. ಅಲ್ಲಿನ ಇಸ್ಲಾಮಿಕ್ ಉಗ್ರರ ಸೈನ್ಯಕ್ಕೆ ಸೇರಿದ ಅಲಿ ಸಕ್ರ ಅಲ್ ಕಾಸಿಂ

ಎಂಬ ೨೦ ವರ್ಷದ ಯುವಕನ ೪೫ ವರ್ಷದ ತಾಯಿ ಲೆನಾ ಅಲ್ ಕಾಸಿಂ 'ಆ ಉಗ್ರರ ಸಂಗದಿಂದ ತಪ್ಪಿಸಿಕೊಂಡು ಹೋಗು' ಎಂದು ಮಗನಿಗೆ ತಿಳಿಸಿದ್ದಾಳೆ. ಉಗ್ರರಿಗೆ ತನ್ನನ್ನೇ ಸಮರ್ಪಿಸಿಕೊಂಡಿರುವ ಮಗ ಅಲಿ 'ಪಲಾಯನ ಮಾಡಲು ತಾಯಿ ಒತ್ತಾಯಿಸುತ್ತಿದ್ದಾಳೆ' ಎಂದು ಉಗ್ರರ ನಾಯಕನಿಗೆ ತಿಳಿಸಿದ್ದಾನೆ. 'ನಿನ್ನ ತಾಯಿ ಧಾರ್ಮಿಕ ಕಟ್ಟಳೆಗಳನ್ನು ಮೀರಿದ್ದಾಳೆ. ಆದ್ದರಿಂದ ರಖ್ಖಾ ಹೊರವಲಯದಲ್ಲಿ ಆಕೆ ಕೆಲಸ ಮಾಡುವ ಕಚೇರಿಯ ಮುಂದೆಯೆ ಸಾರ್ವಜನಿಕವಾಗಿ ನೀನೇ ಗುಂಡಿಕ್ಕಿ ಕೊಲ್ಲಬೇಕು.' ಎಂದು ಆ ಉಗ್ರರ ನಾಯಕ ಅಲಿಗೆ ಆದೇಶ ಮಾಡಿದ್ದಾನೆ. ಆಜ್ಞೆಯನ್ನು ಶಿರಸಾವಹಿಸಿ ಪಾಲಿಸಿದ ಅಲಿ ಭಾರಿ ಜನಸಮೂಹದ ಎದುರೇ ತನ್ನ ತಾಯಿಯನ್ನು ಗುಂಡಿಟ್ಟು ಕೊಂದಿದ್ದಾನೆ! ಹೀಗೆ ಇಸ್ಲಾಮಿನ ಶಾಂತಿ ಮತ್ತು ಸಹೋದರತ್ವದ ಮೌಲ್ಯಗಳನ್ನು ಐಎಸ್‌ಐಎಸ್ ಬಲಿಕೊಡುತ್ತ ಕ್ರೌರ್ಯವನ್ನು ಪ್ರದರ್ಶಿಸುತ್ತಿದೆ.

ತಾವು ಪ್ರತಿಪಾದಿಸುವ ಇಸ್ಲಾಂ ಧರ್ಮದ ಕಟ್ಟಳೆ ಮೀರುವವರು, ಧರ್ಮ ತೊರೆಯುವವರು ಮತ್ತು ತೊರೆಯುವಂತೆ ಒತ್ತಾಯ ಮಾಡುವವರಿಗೆ ಮರಣ ದಂಡನೆ ಶಿಕ್ಷೆ ನೀಡಬೇಕೆಂಬುದು ಸಿರಿಯಾದಲ್ಲಿ ಐಎಸ್‌ಐಎಸ್ ನಿಯಮವಾಗಿದೆ. ಆ ತಮ್ಮದೇ ಆದ ಕ್ರೂರ ನಿಯಮದ ಪ್ರಕಾರವೇ ಉಗ್ರರು ಮಗನಿಂದ ತಾಯಿಯ ಹತ್ಯೆ ಮಾಡಿಸಿದ್ದಾರೆ.

ಸ್ವರ್ಗವು ತಾಯಿಯ ಪದತಲದಲ್ಲಿದೆ ಎಂದು ಮುಹಮ್ಮದ ಪೈಗಂಬರರು (೫೭೦-೬೩೨) ತಿಳಿಸಿದ್ದಾರೆ. ಏಕದೇವೋಪಾಸನೆ ಮತ್ತು ಶಾಂತಿಯನ್ನು ಇಸ್ಲಾಂ ಪ್ರತಿಪಾದಿಸುತ್ತದೆ. ಇಸ್ಲಾಂ ಎಂದರೆ ಏಕ ದೇವೋಪಾಸಕರಾಗಿದ್ದು ಅಲ್ಲಾಹನಿಗೆ ಶರಣಾಗತರಾಗಿರುವುದು ಮತ್ತು ನೆಮ್ಮದಿಯಿಂದ ಶಾಂತಿಯುತವಾಗಿ ಬದುಕುವುದು.

ಯಾರೂ ಹೆಚ್ಚಿನವರಲ್ಲ: 'ಬರುವ ವರ್ಷ ನಿಮ್ಮನ್ನು ಕಾಣುವೆನೊ ಇಲ್ಲವೊ ಗೊತ್ತಿಲ್ಲ. ಅದಕ್ಕಾಗಿ ಓ ಜನರೇ ನನ್ನ ಮಾತುಗಳ ಕಡೆ ಗಮನವಿಡಿ, ಅಧರ್ಮವಾದ ಪದ್ಧತಿಗಳೆಲ್ಲ ನನ್ನ ಪದತಲದಲ್ಲಿ ನಿರ್ನಾಮಗೊಂಡಿವೆ. ಅರಬರು ಅರಬರಲ್ಲದವರಿಗಿಂತ ಹೆಚ್ಚಿನವರಲ್ಲ. ಅರಬರಲ್ಲದವರು ಅರಬರಿಗಿಂತ ಹೆಚ್ಚಿನವರಲ್ಲ. ನೀವೆಲ್ಲ ಆದಂನ ಮಕ್ಕಳು. ಆದಂನನ್ನು ಮಣ್ಣಿನಿಂದ ಸೃಷ್ಟಿಸಲಾಗಿದೆ. .... ನಿಮ್ಮ ಗುಲಾಮರು! ನೀವು ಉಣ್ಣುವಂಥ ಆಹಾರ ಅವರಿಗೆ ಕೊಡಿ. ನೀವು ಉಡುವಂಥ ಬಟ್ಟೆ ಅವರಿಗೆ ಕೊಡಿ. ಅಜ್ಞಾನ ಕಾಲದ ರಕ್ತಪಾತಮಯವಾದ ಬದ್ಧದ್ವೇಷವನ್ನು ನಿಷೇಧಿಸಲಾಗಿದೆ.'

ಹಜರತ್ ಮುಹಮ್ಮದ್ ಪೈಗಂಬರರು ತಮ್ಮ ಕೊನೆಯ ಹಜ್ ಯಾತ್ರೆಯ ನಂತರ ಮೆಕ್ಕಾ ಸಮೀಪದ ಅರಫಾ ಮೈದಾನದಲ್ಲಿ ಯಾತ್ರಿಕರಿಗೆ ವಿದಾಯ ಹೇಳುವಾಗ ಆಡಿದ ಈ ಕೊನೆಯ ಮಾತು ಮಾನವ ಜನಾಂಗಕ್ಕೆ ಅನುಪಮ ಕೊಡುಗೆಯಾಗಿದೆ.

ಕೋಮುವಾದ ಅಂದರೆ ಏನು? ಎಂದು ಪ್ಯಾಲೆಸ್ತೀನ್ ಮಹಿಳೆಯೊಬ್ಬಳು ಮುಹಮ್ಮದ್ ಪೈಗಂಬರರಿಗೆ ಕೇಳಿದಳು. 'ನಿನ್ನ ಜನಾಂಗದವರು ತಪ್ಪು ಮಾಡುತ್ತಿದ್ದಾಗ್ಯೂ

ನೀನು ಅವರಿಗೆ ಸಹಾಯ ಮಾಡಿದರೆ ಅದು ಕೋಮುವಾದ' ಎಂದು ಪೈಗಂಬರರು ಉತ್ತರಿಸಿದರು. ಎತ್ತಿ ಕಟ್ಟಬೇಕಾಗಿರುವುದು ತಮ್ಮ ತಮ್ಮ ಧರ್ಮದವರನ್ನಲ್ಲ, ಸತ್ಯವನ್ನು ಎಂದು ಪೈಗಂಬರರು ಸೂಚಿಸಿದ್ದಾರೆ. ೧೫೦೦ ವರ್ಷಗಳಷ್ಟು ಹಿಂದೆ ಪೈಗಂಬರರು, ಕೋಮುವಾದಕ್ಕೆ ನೀಡಿದ ವ್ಯಾಖ್ಯಾನ ಇಂದು ಹೆಚ್ಚು ಪ್ರಸ್ತುತವಾಗಿದೆ.

ಆದರೆ ಎರಡನೇ ಮಹಾಯುದ್ಧದಲ್ಲಿ ಹಿಟ್ಲರ್, ಜರ್ಮನಿಯ ನಾಗರಿಕರನ್ನು ಮೋಸಗೊಳಿಸುತ್ತ ಹಿಂಸೆಯಲ್ಲಿ ತೊಡಗುವಂತೆ ಅವರಿಗೆ ಪ್ರಚೋದನೆ ಮಾಡಿದ ರೀತಿಯಲ್ಲಿ ಈ ಉಗ್ರರು ಜಗತ್ತಿನ ಮುಸ್ಲಿಮರನ್ನು ಪ್ರಚೋದನೆ ಮಾಡುವ ವಿಫಲ ಯತ್ನ ನಡೆಸಿದ್ದಾರೆ.

ಉಗ್ರಗಾಮಿಗಳ ವಿರುದ್ಧ ಫತ್ವಾ: ರಾಜಸ್ಥಾನದಲ್ಲಿನ ಅಜ್ಮೇರ್ ದರ್ಗಾದ ಉರುಸ್ (ಸೂಫಿ ಸಂತ ಗರೀಬ್ ನವಾಜ್ ಮೈನುದ್ದೀನ್ ಚಿಸ್ತಿ ಅವರ ಪುಣ್ಯತಿಥಿ) ಕಳೆದ ಡಿಸೆಂಬರ್‌ನಲ್ಲಿ ನಡೆಯಿತು. ಆ ಸಂದರ್ಭದಲ್ಲಿ ಸೇರಿದ್ದ ಜಗತ್ತಿನ ವಿವಿಧ ದೇಶಗಳ ೭೦ ಸಾವಿರ ಮುಸ್ಲಿಂ ಧರ್ಮಗುರುಗಳು ಐಎಸ್‌ಐಎಸ್, ತಾಲಿಬಾನ್, ಅಲ್ ಖೈದಾ ಮುಂತಾದ ಭಯೋತ್ಪಾದಕ ಸಂಘಟನೆಗಳ ವಿರುದ್ಧ ಫತ್ವಾ (ಧಾರ್ಮಿಕ ಆದೇಶ) ಹೊರಡಿಸಿದ್ದಾರೆ. ಈ ಉಗ್ರವಾದಿ ಸಂಘಟನೆಗಳು ಇಸ್ಲಾಂ ಧರ್ಮಕ್ಕೆ ಸಂಬಂಧಿಸಿದವುಗಳಲ್ಲ. ಇವು ಮಾನವೀಯತೆಗೆ ಕಂಟಕವನ್ನುಂಟು ಮಾಡುವಂಥವುಗಳಾಗಿವೆ ಎಂದು ಅವರು ಹೊರಡಿಸಿದ ಫತ್ವಾದಲ್ಲಿ ಹೇಳಲಾಗಿದೆ. ಉರುಸ್‌ನಲ್ಲಿ ಪಾಲ್ಗೊಂಡ ೧೫ ಲಕ್ಷ ಮಂದಿ ಈ ಭಯೋತ್ಪಾದಕರ ವಿರುದ್ಧ ತಮ್ಮ ಆಕ್ರೋಶ ವ್ಯಕ್ತಪಡಿಸಿದ್ದಾರೆ.

"ಒಬ್ಬ ಮುಗ್ಧನನ್ನು ಕೊಂದರೆ ಇಡೀ ಮಾನವ ಕುಲವನ್ನು ಕೊಂದಂತೆ" ಎಂಬ ಹೇಳಿಕೆ ಪವಿತ್ರ ಕುರಾನ್‌ನಲ್ಲಿದೆ ಎಂದು ಅಜ್ಮೇರ್ ದರ್ಗಾದ ಸಜ್ಜಾದಾ ನಶೀನ್ (ಧರ್ಮಾಧಿಕಾರಿ) ಮುಹಮ್ಮದ್ ಎಹ್ಸಾನ್ ರಜ಼ಾಖಾನ್ ತಿಳಿಸಿದ್ದಾರೆ. ಆದರೆ ಆ ಐಎಸ್‌ಐಎಸ್ ಮುಂತಾದ ಅಮಾನುಷ ಶಕ್ತಿಗಳ ವಿರುದ್ಧ ೭೦ ಸಾವಿರ ಮುಸ್ಲಿಂ ಧರ್ಮಗುರುಗಳು ಒಂದಾಗಿ ಹೊರಡಿಸಿದ್ದ ಫತ್ವಾಗೆ ನಮ್ಮ ಮಾಧ್ಯಮಪತಿಗಳು ಪ್ರಚಾರ ಕೊಡದೆ ಮಾಧ್ಯಮದ ಘನತೆಗೆ ಕುಂದು ತಂದಿದ್ದಾರೆ.

ಸಾಹಿತ್ಯ ಶಕ್ತಿ: ಹಿಂಸೆ ಮತ್ತು ಜಾಗತೀಕರಣಕ್ಕೆ ಉತ್ತರ ಕೊಡುವ ಶಕ್ತಿ ಕನ್ನಡ ಸಾಹಿತ್ಯಕ್ಕೆ ಇದೆ. ಕನ್ನಡ ಸಾಹಿತ್ಯ ಸಹಸ್ರ ವರ್ಷಗಳಿಂದ ಜನಪರವಾಗೇ ಇದೆ. ಒಂಬತ್ತನೆ ಶತಮಾನದ ಕನ್ನಡ ಕಾವ್ಯಗಳ ಲಕ್ಷಣಗ್ರಂಥ 'ಕವಿರಾಜಮಾರ್ಗ'ದಲ್ಲೇ ಸಹಿಷ್ಣುತೆ ಮತ್ತು ಪ್ರಜಾಪ್ರಭುತ್ವದ ಬೀಜಗಳಿವೆ. "ಕಸವರಮೆಂಬುದು ನೆಱೆ ಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ" (ಅನ್ಯರ ವಿಚಾರಗಳನ್ನು ಮತ್ತು ಧರ್ಮವನ್ನು ಸಂಪೂರ್ಣವಾಗಿ ಸಹಿಸಲು ಸಾಧ್ಯವಾದರೆ ಆ ಮನಸ್ಸೇ ಶುದ್ಧ

ಬಂಗಾರ) ಎಂದು ರಾಷ್ಟ್ರಕೂಟ ದೊರೆ ನೃಪತುಂಗನ ಆಸ್ಥಾನದಲ್ಲಿದ್ದು ಕವಿರಾಜಮಾರ್ಗ ಕೃತಿ ರಚಿಸಿದ ಶ್ರೀವಿಜಯ ಹೇಳಿದ್ದಾನೆ.

'ನೆತ್ತರ ಕೋಡಿಯೊಳ್ ಜಿಗುಳೆ ಬಳೆವ ತೆಱದಿಂ ಬಳೆದಂ' ಎಂದು ಮಹಾಕವಿ ಪಂಪ 'ವಿಕ್ರಮಾರ್ಜುನ ವಿಜಯ'ದಲ್ಲಿ ದೊರೆ ಅರಿಕೇಸರಿ ಮಗುವಾಗಿದ್ದಾಗ ಬೆಳೆದ ಬಗೆಯನ್ನು ತಿಳಿಸಿದ್ದಾನೆ. ರಕ್ತ ಹೀರಿ ಬೆಳೆಯುವ ಜಿಗಣೆಯ ಹೋಲಿಕೆಯೊಂದಿಗೆ ಅರಿಕೇಸರಿಯ ಬೆಳವಣಿಗೆಯನ್ನು ತಿಳಿಸುವ ಮೂಲಕ ತನ್ನ ಕಾಲದ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಬಗ್ಗೆ ಅಸಹನೆಯನ್ನು ಸೂಚಿಸಿದ್ದಾನೆ.

'ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟ' ಎಂದು ಹೇಳಿದ ಬಸವಣ್ಣನವರು, ೧೨ನೇ ಶತಮಾನದಲ್ಲೇ ಭೂಮಿಯ ಮಹತ್ವವನ್ನು ಸಾರಿದ್ದಾರೆ. ಮುಂದೆ ಈ ಭೂಮಿಯ ಮೇಲೆ ಆಗುವ ಅನಾಹುತಗಳ ಕುರಿತು ಎಚ್ಚರಿಸಿದ್ದಾರೆ.

"ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ಧರೆ ಹತ್ತಿ ಉರಿದಡೆ ನಿಲಲು ಬಾರದು.
ಏರಿ ನೀರುಂಬಡೆ, ಬೇಲಿ ಕೆಯ್ಯ ಮೇವೊಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ,
ತಾಯ ಮೊಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆ ಕೂಡಲಸಂಗಮದೇವಾ."

ಎಂದು ಬಸವಣ್ಣನವರು ಆತಂಕ ವ್ಯಕ್ತಪಡಿಸಿದ್ದಾರೆ. ಈ ಆತಂಕ ೨೧ನೇ ಶತಮಾನದ ಆತಂಕವೂ ಆಗಿದೆ. ಹಿಂದಿನ ಕಾಲದಲ್ಲೂ ಮಾನವ ನಿರ್ಮಿತ ಅವಘಡಗಳು ಸಂಭವಿಸುತ್ತಿದ್ದವು. ಆದರೆ ಅವುಗಳನ್ನು ನಿಯಂತ್ರಿಸುವ ಶಕ್ತಿ ಮಾನವರಿಗಿತ್ತು. ಇಂದು ಅದೇ ಮಾನವ ಔದ್ಯೋಗಿಕ ಕ್ರಾಂತಿಯ ನಂತರ ಬಂಡವಾಳವಾದ, ಸಾಮ್ರಾಜ್ಯವಾದ ಮತ್ತು ಜಾಗತೀಕರಣದ ಮೂಲಕ ಮಾಡಿದ ಹವಾಮಾನ ವೈಪರೀತ್ಯದಂಥ ಅವಘಡಗಳನ್ನು ಆತ ಸರಿಪಡಿಸಲಾರದಷ್ಟು ಭಯಾನಕವಾಗಿವೆ.

ಬಂಡವಾಳಶಾಹಿ ರಾಷ್ಟ್ರಗಳೊಂದಿಗೆ ಪೈಪೋಟಿಗೆ ಇಳಿದ ಕಮ್ಯೂನಿಸ್ಟ್ ರಾಷ್ಟ್ರಗಳು ಕೂಡ ಬಂಡವಾಳಶಾಹಿಗಳು ಬಳಸಿದ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಬಳಸುತ್ತ ಅದೇ ತಪ್ಪನ್ನು ಮಾಡಿವೆ. ಪೆಟ್ರೋ ಡಾಲರ್ ಮೂಲಕ ಬೇಕಾಬಿಟ್ಟಿ ಬೆಳೆದ ಮಧ್ಯಪ್ರಾಚ್ಯ ರಾಷ್ಟ್ರಗಳು ಮತ್ತು ನಿಸರ್ಗವಿರೋಧಿ ಅಭಿವೃದ್ಧಿಯ ಪಥ ತುಳಿದ ಇನ್ನುಳಿದ ರಾಷ್ಟ್ರಗಳು ಕೂಡ ಈ ಸುಂದರ ಪೃಥ್ವಿಯನ್ನು ಹಾಳುಮಾಡುವಲ್ಲಿ ಸ್ವಲ್ಪಮಟ್ಟಿಗಾದರೂ ಪಾಲುದಾರರಾಗಿವೆ.

ಇಂಥ ಧರೆ ಹತ್ತಿ ಉರಿಯುವ ದಿನಗಳ ಕಡೆಗೆ ಸಾಗುತ್ತಿದ್ದೇವೆ. ನೀರನ್ನು ಹಿಡಿದಿಡುವ ಏರಿಯೇ ನೀರು ಕುಡಿಯುತ್ತದೆ. ಅನೇಕ ರಾಜಕಾರಣಿಗಳು ಮತ್ತು

ಅಧಿಕಾರಿಗಳು ಭ್ರಷ್ಟಾಚಾರದಲ್ಲಿ ತೊಡಗುವುದನ್ನು ಇದು ಜ್ಞಾಪಿಸುತ್ತದೆ. ಅಂತೆಯ ನಮ್ಮ ನೈಸರ್ಗಿಕ ಸಂಪತ್ತು ಲೂಟಿಯಾಗುತ್ತಿದೆ. ಗ್ರೈನೆಟ್ ಶಿಲೆಗಳು, ಕಬ್ಬಿಣ ಮತ್ತು ಮ್ಯಾಂಗನೀಜ ಅದಿರು ರಾಷ್ಟ್ರೀಯ ಸಂಪತ್ತಾಗಿದ್ದರೂ ಅದರಿಂದ ಕೆಲವರು ನೂರಾರು ಕೋಟಿಗಳಿಗೆ ಅಧಿಪತಿಗಳಾಗಿದ್ದಾರೆ. ಕಾನೂನುಗಳನ್ನು ತಿರುವುದರಿಂದ ಬೇಲಿಯೆ ಹೊಲವನ್ನು ಮೆಯ್ಯುವಂತಾಗಿದೆ. ನಾರಿ ತನ್ನ ಮನೆಯಲ್ಲಿ ಕಳ್ಳತನ ಮಾಡುವ ಹಾಗೆ ಆಳುವವರು ದೇಶವನ್ನು ಲೂಟಿ ಮಾಡುವಂಥ ಸ್ಥಿತಿ ಬಂದೊದಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ದುರ್ಬಳಿಕೆಯಿಂದಾಗಿ ತಾಯಿಯ ಮೊಲೆಹಾಲಿನಲ್ಲಿ ಡಿಡಿಟಿ ಅಂಶಗಳು ಕಂಡುಬಂದಿವೆ. ಹೀಗೆ ತಾಯ ಮೊಲೆ ಹಾಲು ನಂಜಾಗುತ್ತಿದೆ. ನಾವು ನಮ್ಮನ್ನೇ ದೂರಿಕೊಳ್ಳುವ ಪರಿಸ್ಥಿತಿ ಇದಾಗಿದೆ.

"ಊರ ಮುಂದೆ ಹಾಲ ಹಳ್ಳ ಹರಿವುತ್ತಿರಲು,
ಒರೆಯಾವಿನ ಬೆನ್ನ ಹರಿಯಲದೇಕಯ್ಯಾ?
ಲಜ್ಜೆಗೆಡಲೇಕೆ? ನಾಣುಗೆಡಲೇಕೆ?
ಕೂಡಲಸಂಗಮದೇವನುಳ್ಳನ್ನಕ್ಕ
ಬಿಜ್ಜಳನ ಭಂಡಾರವೆನಗೇಕಯ್ಯಾ."

–ಬಸವಣ್ಣ

ಸರ್ವೋದಯ ನೀತಿಯಿಂದಾಗಿ ಊರ ಮುಂದೆ ಹಾಲಹಳ್ಳ ಹರಿಯುವಂಥ ಸಾಮಾಜಿಕ ವ್ಯವಸ್ಥೆಗೆ ಬಸವಣ್ಣನವರು ಕಾರಣರಾಗಿದ್ದರು. ಆದರೆ ಬಂಡವಾಳಶಾಹಿಯ ಅಭಿವೃದ್ಧಿ ಪಥದಿಂದಾಗಿ ಊರುಗಳ ಮುಂದೆ ಹರಿಯುವ ಹಳ್ಳಗಳು ಚರಂಡಿಗಳ ಅವತಾರ ತಾಳಿವೆ. ಬೆಂಗಳೂರಿನ ಜ್ಞಾನಗಂಗೋತ್ರಿಯ ಮುಂದೆ ವೃಷಭಾವತಿ ನದಿ ದುರ್ಗಂಧದೊಂದಿಗೆ ಚರಂಡಿಯಾಗಿ ಹರಿಯುತ್ತಿದೆ!

ಇಂಥ ದಿನಗಳು ಬರಬಾರದೆಂದೆ ಬಸವಣ್ಣನವರು ೧೨ನೇ ಶತಮಾನದಲ್ಲೇ ಜೀವಜಾಲ ಸಮತೋಲನದ ಕುರಿತು ತಿಳಿಸಿದ್ದಾರೆ.

"ಧರಣಿಯ ಮೇಲೊಂದು ಹಿರಿದಪ್ಪ ಅಂಗಡಿಯನಿಕ್ಕಿ
ಹರದ ಕುಳಿತಿರ್ದ ನಮ್ಮ ಮಹಾದೇವಸೆಟ್ಟಿ,
ಒಮ್ಮನವಾದಡೆ ಒಡನೆ ನುಡಿವನು.
ಇಮ್ಮನವಾದಡೆ ನುಡಿಯನು.
ಕಾಣಿಯ ಸೋಲ, ಅರ್ಧಗಾಣಿಯ ಗೆಲ್ಲ,
ಜಾಣ ನೋಡವ್ವಾ, ನಮ್ಮ ಕೂಡಲಸಂಗಮದೇವ."

ಎಂದು ಬಸವಣ್ಣನವರು ಜೀವಜಾಲದ ಮಹತ್ವವನ್ನು ತಿಳಿಸಿದ್ದಾರೆ.

ಮಹಾದೇವನು ಸೆಟ್ಟಿಯಾಗಿ ಭೂಮಿಯ ಮೇಲೆ ಹಿರಿದಾದ ಲೋಕವ್ಯವಹಾರದ ಅಂಗಡಿಯನಿಟ್ಟುಕೊಂಡು ವ್ಯಾಪಾರಕ್ಕೆ ಕುಳಿತಿದ್ದಾನೆ. ಆ ದೇವರು ಒಮ್ಮನ (ಒಂದೇ ಮನಸ್ಸು ಮತ್ತು ನಾಲ್ಕು ಸೊಲಿಗೆ)ವಾದರೆ ಕೂಡಲೆ ಮಾತನಾಡುವನು. ಇಮ್ಮನ (ಇಬ್ಬಗೆಯ ಮನಸ್ಸು ಮತ್ತು ಎಂಟು ಸೊಲಿಗೆ)ವಾದರೆ ಮಾತನಾಡುವುದಿಲ್ಲ. ಕಾಣಿ (ಪರಡೆಗಳ ಸಮತೋಲನ ಕಾಪಾಡಿಕೊಳ್ಳುವುದಕ್ಕಾಗಿ ತಕ್ಕಡಿಯ ದಂಡಿಗೆಗೆ ಕಟ್ಟುವ ವಸ್ತು ಮತ್ತು ಚಿಕ್ಕ ನಾಣ್ಯ) ಯಷ್ಟು ಕೂಡ ಸೋಲುವುದಿಲ್ಲ. ಅರ್ಧಗಾಣಿಯಷ್ಟು ಕೂಡ ಗೆಲ್ಲುವುದಿಲ್ಲ. ಆದ್ದರಿಂದಲೇ ಮಹಾದೇವಸೆಟ್ಟಿ ಎನಿಸಿದ ನಮ್ಮ ಕೂಡಲಸಂಗಮದೇವರು ಜಾಣ ಎಂದು ಬಸವಣ್ಣನವರು ಹೆಮ್ಮೆ ಪಡುತ್ತಾರೆ.

ಜೀವಕೇಂದ್ರಿತ ವಿಶ್ವ: ಗಾಂಧೀಜಿಯವರು ಹೇಳಿದಂತೆ ಸೃಷ್ಟಿಯು ಮಾನವರ ಅವಶ್ಯಕತೆಗಳನ್ನು ಪೂರೈಸುತ್ತದೆ ಹೊರತಾಗಿ ದುರಾಸೆಯನ್ನಲ್ಲ. ಬಸವಣ್ಣನವರ ದೇವರು ಜೀವಜಾಲಸಮತೋಲನದ ದೇವರು. ಜೀವಜಾಲ ಸಮತೋಲನಕ್ಕೆ ಧಕ್ಕೆ ತರುವ ಯಾವುದೇ ಕೃತ್ಯ ದೇವವಿರೋಧಿ ಕೃತ್ಯವಾಗಿರುತ್ತದೆ. ಅದು ಜೀವವಿರೋಧಿ ಕೃತ್ಯವೂ ಆಗಿರುತ್ತದೆ. ಸೃಷ್ಟಿಕರ್ತ ತನ್ನ ಸೃಷ್ಟಿಯ ಬಗ್ಗೆ ಕಾಳಜಿ ಹೊಂದಿದ್ದಾನೆ. ಒಮ್ಮನಸ್ಸಿನಿಂದ ಬದುಕುವವರು ಮತ್ತು ಅವಶ್ಯಕತೆ (ನಾಲ್ಕು ಸೊಲಿಗೆ) ಇದ್ದಷ್ಟು ಮಾತ್ರ ಪ್ರಕೃತಿಯಿಂದ ಪಡೆಯುವವರು ದೇವರ ಪ್ರೀತಿಗೆ ಪಾತ್ರರಾಗುತ್ತಾರೆ. ಇಬ್ಬಂದಿತನದಿಂದ ಬದುಕುವವರು ಮತ್ತು ದುರಾಸೆಯುಳ್ಳವರು (ಎಂಟು ಸೊಲಿಗೆಗೆ ಹಾತೊರೆಯುವವರು) ದೇವರ ಪ್ರೀತಿಯನ್ನು ಸಂಪಾದಿಸಲಾರರು. ಪ್ರಕೃತಿ ನಿಯಮದಲ್ಲಿ ಸೋಲು ಗೆಲುವಿನ ಪ್ರಶ್ನೆಯೆ ಇಲ್ಲ. ದೇವರು ಪ್ರಕೃತಿಯಲ್ಲಿ ಚಿಕ್ಕ ನಾಣ್ಯದಷ್ಟೂ ಬಿಟ್ಟುಕೊಡುವುದಿಲ್ಲ. ಅಂದರೆ ಒಂದಿಷ್ಟೂ ಹಾಳು ಮಾಡುವುದನ್ನು ಇಷ್ಟಪಡುವುದಿಲ್ಲ. ಅದರ ಅರ್ಧ ನಾಣ್ಯದಷ್ಟೂ ಉಳಿಸಿಕೊಳ್ಳ ಬಯಸುವುದಿಲ್ಲ. ಆತನ ಜೀವಜಾಲದ ತಕ್ಕಡಿ ಸದಾ ಸಮತೋಲನದಲ್ಲಿರುತ್ತದೆ.

ಸಮತೋಲನ ಕಾಪಾಡಿಕೊಳ್ಳುವುದೆಂದರೆ ಹೆಚ್ಚು ಅಥವಾ ಕಡಿಮೆ ಆಗದಂತೆ ನೋಡಿಕೊಳ್ಳುವುದು. ಆಹಾರ ಸರಪಳಿಯು ಈ ಸಮತೋಲನವನ್ನು ನಿಯಂತ್ರಿಸುತ್ತದೆ. ಮಾನವ ಇದರಲ್ಲಿ ಕೈ ಹಾಕದಂತೆ ಬದುಕಬೇಕಾಗುವುದು ಅವಶ್ಯವಾಗಿದೆ.

"ಮರ ಗಿಡು ಬಳ್ಳಿ ಧಾನ್ಯಂಗಳ ಬೆಳಸೆಲ್ಲವ ತರಿತರಿದು
ಪ್ರಾಣವ ಕೊಂದುಂಡು, ಶರೀರವ ಹೊರೆವ ದೋಷಕ್ಕೆ
ಇನ್ನಾವುದು ವಿಧಿಯಯ್ಯಾ?
ಒಂದಿಂದ್ರಿಯ ಮೊದಲಾಗಿ ಐದಿಂದ್ರಿಯ ಕಡೆಯಾದ
ಜೀವಜಾಲದಲ್ಲಿದೆ ಚರಾಚರವೆಲ್ಲ.
ಅದು ಕಾರಣ,

ಕೂಡಲಸಂಗನ ಶರಣರು ಲಿಂಗಕ್ಕರ್ಪಿಸಿ ಪ್ರಸಾದವ ಕೊಂಡು
ನಿರ್ದೋಷಿಗಳಾಗಿ ಬದುಕಿದರು."

ಎಂದು ಬಸವಣ್ಣವರು ಹೇಳುವಲ್ಲಿ ಈ ಜಗತಿನ ಉಪಭೋಗ ಮತ್ತು ಸಂರಕ್ಷಣೆಯ ತತ್ತ್ವವನ್ನು ಸೂಚಿಸಿದ್ದಾರೆ.

ಸಸ್ಯರಾಶಿಗೂ ಜೀವವಿದೆ ಎಂದು ಅವರು ಹೇಳುತ್ತಾರೆ. ಬದುಕಲು ಆಹಾರ ಅವಶ್ಯವಾಗಿದೆ ಎಂದು ತಿಳಿಸುತ್ತಾರೆ. ಅದಕ್ಕಾಗಿ ಸಸ್ಯವನ್ನು ಕೊಂದು ತಿನ್ನುವುದು ಅನಿವಾರ್ಯವಾಗಿದೆ. ಆದರೆ ಹುಲ್ಲು, ಹುಲ್ಲೆ, ಹುಲಿ, ಮಾನವ ಮೊದಲುಮಾಡಿ ಅಮಿಬಾದಿಂದ ಮಾನವನ ವರೆಗೆ ಮತ್ತು ಮಣ್ಣಿನಿಂದ ಹಿಮಾಲಯದ ವರೆಗೆ ಚರಾಚರವೆಲ್ಲವೂ ಜೀವಜಾಲದಲ್ಲೇ ಇದೆ. ಈ ಜೀವಜಾಲದ ಆಹಾರ ಸರಪಳಿಯನ್ನು ಅರಿತುಕೊಂಡು ಅದರ ಕೊಂಡಿಗಳು ಕಳಚದಂತೆ ಎಚ್ಚರಿಕೆ ವಹಿಸಿ ಉಪಭೋಗಿಸುವಂಥ ಪರಿಜ್ಞಾನ ಮಾನವನಿಗೆ ಇರಬೇಕಾಗುತ್ತದೆ. ಇದನ್ನು ಅರಿತುಕೊಂಡು ಬದುಕುವುದನ್ನು ಬಸವಣ್ಣನವರು ತೋರಿಸಿಕೊಟ್ಟಿದ್ದಾರೆ.

ಸಾಹಿತ್ಯ ಹೀಗೆ ಕ್ರಾಂತದೃಷ್ಟಿಯನ್ನು ಹೊಂದಿರುತ್ತದೆ. "ಸಕಲ ಜೀವಾತ್ಮರಿಗೆ ಲೇಸನೆ ಬಯಸುವ ನಮ್ಮ ಕೂಡಲಸಂಗನ ಶರಣರೇ ಕುಲಜರು" ಎಂದು ಬಸವಣ್ಣನವರು ಹೇಳುತ್ತಾರೆ. ಅಂದರೆ, ಮನುಷ್ಯನು ವಿಶ್ವದ ಕೇಂದ್ರಬಿಂದು ಅಲ್ಲ; ಸಕಲಜೀವಾತ್ಮರು ವಿಶ್ವದ ಕೇಂದ್ರಬಿಂದು ಎಂಬ ವಿಚಾರ ಈ ಮಾತಿನಲ್ಲಿ ಅಡಗಿದೆ.

ನಿಯಮಗಿರಿ: ಒಡಿಶಾದ ನಿಯಮಗಿರಿ, ಅಲ್ಲಿನ ಆದಿವಾಸಿಗಳಿಗೆ ಪವಿತ್ರಸ್ಥಳ. ೨೫೦ ಚದರ ಕಿಲೊ ಮೀಟರ್ ವಿಸ್ತಾರದ ಈ ನಿಯಮಗಿರಿಯಲ್ಲಿ ಆದಿವಾಸಿಗಳ ನಿಯಮರಾಜ ದೇವರ ಸ್ಥಾನವಾಗಿದೆ. ನಿಯಮಗಿರಿ ತನ್ನ ಗರ್ಭದಲ್ಲಿ ಅಲ್ಯೂಮಿನಿಯಂ ತಯಾರಿಕೆಗೆ ಬೇಕಾದ ಬಾಕ್ಸೈಟ್ ಖನಿಜ ಸಂಪತ್ತನ್ನು ತುಂಬಿಕೊಂಡಿದೆ. ವೇದಾಂತ ಗ್ರೂಪ್ ಈ ಪ್ರದೇಶದಲ್ಲಿ ಬಾಕ್ಸೈಟ್ ಗಣಿಗಾರಿಕೆಗಾಗಿ ೧೭೦ ಕೋಟಿ ಡಾಲರ್ ವೆಚ್ಚದ ಬಾಕ್ಸೈಟ್ ಮೈನಿಂಗ್ ಪ್ರೊಜೆಕ್ಟ್ ಆರಂಭಿಸುವ ಯೋಜನೆ ಹಾಕಿಕೊಂಡಿತ್ತು. ಆದರೆ ಅಲ್ಲಿನ ಡೋಂಗ್ರಾಕೊಂಢ್ ಹಾಗೂ ಕಟಿಯಾ ಕಂಧಾ ಆದಿವಾಸಿಗಳು ಈ ಯೋಜನೆಯನ್ನು ವಿರೋಧಿಸಿದರು.

ಆದರೆ ಆ ಬಹುರಾಷ್ಟ್ರೀಯ ಕಂಪೆನಿಯ ಅಧಿಕಾರಿಗಳು ನಿಯಮಗಿರಿಗೆ ಹೋಗಿ ಅಲ್ಲಿನ ಆದಿವಾಸಿಗಳ ಸಭೆ ಕರೆದಿದ್ದಾರೆ. ಪರ್ವತ ಪ್ರದೇಶದ ಅರ್ಧ ಭಾಗವನ್ನು ಆದಿವಾಸಿಗಳಿಗೆ ಬಿಟ್ಟುಕೊಡುವುದಾಗಿ ಮತ್ತು ಆದಿವಾಸಿಗಳಿಗೆ ರಸ್ತೆ ಮುಂತಾದ ಮೂಲಭೂತ ಸೌಕರ್ಯ ಕಲ್ಪಿಸುವುದಾಗಿ ಸಭೆಯಲ್ಲಿ ತಿಳಿಸಿದ್ದಾರೆ. ಆಗ ಒಬ್ಬ ಆದಿವಾಸಿ ಮಹಿಳೆ ಕೇಳಿದ್ದಿಷ್ಟೇ 'ನಮ್ಮ ಪವಿತ್ರವಾದ ನಿಯಮಗಿರಿಯ ಅರ್ಧಭಾಗವನ್ನು ನಮಗೆ ಬಿಟ್ಟುಕೊಡುವ ನೀವು ಯಾರು?'

ಆಕೆಯ ಪ್ರಶ್ನೆಗೆ ಉತ್ತರಿಸಲಿಕ್ಕಾಗದ ಆ ಕಂಪೆನಿ ಅಧಿಕಾರಿಗಳು ಬಾಯಿ ಮುಚ್ಚಿಕೊಂದು ವಾಪಸ್ ಬರಬೇಕಾಯಿತು.

ಸಾಂಪ್ರದಾಯಿಕ ಅರಣ್ಯವಾಸಿಗಳು ಮತ್ತು ಆದಿವಾಸಿಗಳ ಸಾಮುದಾಯಿಕ ಹಾಗೂ ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿದಂತೆ ಪ್ರಜಾಪ್ರಭುತ್ವ ರೀತಿಯಲ್ಲಿ ನಿರ್ಣಯ ಕೈಗೊಳ್ಳುವ ಹಕ್ಕು ಅಲ್ಲಿನ ಗ್ರಾಮಸಭೆಗಳಿಗೆ ಇದೆ ಎಂದು ಸರ್ವೋಚ್ಚ ನ್ಯಾಯಾಲಯ ತೀರ್ಪು ನೀಡಿತು.

ಆದಿವಾಸಿಗಳು ಮತ್ತು ಅರಣ್ಯದ ಮಧ್ಯೆ ಜೈವಿಕ ಸಂಬಂಧವಿದೆ. ನಿಯಮಗಿರಿಯಲ್ಲಿ ಗಣಿಗಾರಿಕೆ ನಡೆಸುವುದರಿಂದ ಪರಿಸರದ ಮೇಲೆ ಭಾರಿ ದುಷ್ಪರಿಣಾಮ ಉಂಟಾಗಲಿದೆ ಎಂಬ ವಾಸ್ತವದ ನೆಲೆಯಲ್ಲಿ ಸರ್ವೋಚ್ಚ ನ್ಯಾಯಾಲಯ ಆದಿವಾಸಿಗಳ ಪರ ತೀರ್ಪು ನೀಡಿತು.

'ಮೇಕ್ ಇನ್ ಇಂಡಿಯಾ' ಪ್ರತಿಪಾದಕರಾದ ಪ್ರಧಾನಿ ಮೋದಿ ಅವರು ಇಂಥ ಸಂಪದ್ಭರಿತ ತಾಣಗಳನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಕೊಡುವ ಉದ್ದೇಶದಿಂದಲೇ 'ಭೂ ಸ್ವಾಧೀನ ಕಾಯ್ದೆ' ಜಾರಿಗೆ ತರಲು ಶ್ರಮಿಸಿ ವಿಫಲರಾದರು.

'ಮೇಕ್ ಇನ್ ಇಂಡಿಯಾ' ಕರೆಯೊಂದಿಗೆ ಜಗತ್ತನ್ನು ಸುತ್ತುವಾಗ ಗಾಂಧೀಜಿಯವರ ಬಹುತ್ವ ಸಂಸ್ಕೃತಿಯ ತತ್ತ್ವಗಳನ್ನು ಎತ್ತಿಹಿಡಿಯುವ ಮೋದಿ ಅವರು ತಮ್ಮ ಪಕ್ಷದ ಪ್ರಧಾನಿ ಹುದ್ದೆಯ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದ ಸಂದರ್ಭದಲ್ಲಿ 'ನಾನೊಬ್ಬ ಹಿಂದೂ ರಾಷ್ಟ್ರವಾದಿ' ಎಂದು ಹೇಳಿದರು. ಇದು ಭಾರತದ ಜಾತ್ಯತೀತ ಸಂವಿಧಾನಕ್ಕೆ ಮಾಡಿದ ಅಪಮಾನ. ನಾವು ಹಿಂದೂ ರಾಷ್ಟ್ರವಾದಿ ಅಥವಾ ಮುಸ್ಲಿಂ ರಾಷ್ಟ್ರವಾದಿಯಾಗಬೇಕಿಲ್ಲ. ನಾವೆಲ್ಲ ಭಾರತ ರಾಷ್ಟ್ರವಾದಿಗಳಾಗಿ ಬದುಕಿದಾಗ ಮಾತ್ರ ದೇಶದೊಳಗಿನ ಹಿಂಸೆಯನ್ನು ಮತ್ತು ಜಾಗತೀಕರಣದ ಶೋಷಣೆಯನ್ನು ತಡೆಗಟ್ಟಲು ಸಾಧ್ಯ.

ಗ್ರಾಹಕರ ದೇಶವಾಗಿ ಭಾರತ: ಜಾಗತೀಕರಣ ತಜ್ಞರ ದೃಷ್ಟಿಯಲ್ಲಿ ಭಾರತ ಬಹುದೊಡ್ಡ ಗ್ರಾಹಕರ ದೇಶವಾಗಿ ಕಾಣಲು ನಮ್ಮ ಜಾತೀಯತೆ ಮತ್ತು ಮೂಢನಂಬಿಕೆಗಳಿಂದ ಕೂಡಿದ ಜೀವನವಿಧಾನವೂ ಕಾರಣವಾಗಿದೆ. ಅವರು ಎಲ್ಲ ಜಾತಿಗಳ ಮತ್ತು ಧರ್ಮಗಳ ಜನಸಮುದಾಯಗಳಿಗೆ ಬೇಕಾದ ವಸ್ತುಗಳನ್ನು ಉತ್ಪಾದಿಸುವಲ್ಲಿ ಕೂಡ ಹಿಂದೆ ಬಿದ್ದಿಲ್ಲ. ಶುಭ ಸಂಕೇತಗಳೆಂದು ಹೇಳುವ ಅನೇಕ ಮೂಢ ನಂಬಿಕೆಯ ವಸ್ತುಗಳನ್ನು ಮಧ್ಯಮವರ್ಗ ಮತ್ತು ಶ್ರೀಮಂತರ ಮನೆಗಳಲ್ಲಿ ಕಾಣಬಹುದು. ಇವುಗಳಲ್ಲಿ ಬಹುಪಾಲು ವಸ್ತುಗಳು ಕಮ್ಯೂನಿಸ್ಟ್ ಚೀನದಲ್ಲಿ ತಯಾರಾದುದೊಂದು ವಿಪರ್ಯಾಸ. ಅವರು ತಯಾರಿಸುವ ಆಮೆ, ಬಾಯಲ್ಲಿ ದುಡ್ಡು ಹಿಡಿದ ಕಪ್ಪೆ, ಸೌಭಾಗ್ಯದ ಲಕ್ಷಣವಾದ ಪುಟ್ಟ ಬೆತ್ತದ ಸಸಿ, ಹ್ಯಾಪಿ ಮ್ಯಾನ್

ಮುಂತಾದವು ಭಾರತೀಯ ಶ್ರೀಮಂತರು ಮತ್ತು ಮಧ್ಯಮವರ್ಗದವರ ಲಕ್ಷಾಂತರ ಮನೆಗಳೊಳಗೆ ಪ್ರವೇಶ ಪಡೆದಿವೆ. ಯಂತ್ರ-ತಂತ್ರ-ಮಂತ್ರ ಮತ್ತು ಜ್ಯೋತಿಷ ಶಾಸ್ತ್ರದ ಮೂಲಕ ಟಿ.ವಿ.ಗಳಲ್ಲಿ ಮೂಢನಂಬಿಕೆಗಳನ್ನು ಹಬ್ಬಿಸುವವರು ಮಾನಸಿಕ ಭಯೋತ್ಪಾದಕರ ಹಾಗೆ ಕಾಣುತ್ತಿದ್ದಾರೆ.

ಆಧುನಿಕತೆ ಕಾಲಿಡುವ ಮೊದಲು ಭಾರತದ ಜಾತಿವ್ಯವಸ್ಥೆ ದೈಹಿಕವಾಗಿತ್ತು. ಆದರೆ ಸ್ವಾತಂತ್ರ್ಯಾನಂತರ ಅದು ಮಾನಸಿಕವಾಗಿ ಬೆಳೆಯುತ್ತದೆ ಎಂದು ಗುರುದೇವ ರಾನಡೆ ಅವರು ಸ್ವಾತಂತ್ರ್ಯ ಬರುವ ಕೆಲ ದಿನಗಳ ಮುಂಚೆ ಹೇಳಿದ್ದರು. ನಮ್ಮ ಟಿ.ವಿ.ಗಳು ಬಹುಪಾಲು ಸಮಯವನ್ನು ಮೂಢನಂಬಿಕೆ, ಸಂಪ್ರದಾಯ ಮತ್ತು ಕ್ರೈಂ ಸ್ಟೋರಿಗಳಿಗೆ ಮೀಸಲಿಟ್ಟಿವೆ. ಈ ಮೂಢನಂಬಿಕೆ ಮತ್ತು ಸಂಪ್ರದಾಯದ ದೃಶ್ಯಗಳು ನಮ್ಮ ಜನರನ್ನು ಹೆಚ್ಚು ಹೆಚ್ಚು ಮಾನಸಿಕವಾಗಿ ಜಾತಿವಾದಿಗಳನ್ನಾಗಿಸುತ್ತಿವೆ. ಭಾರತೀಯರನ್ನು ಮಾನಸಿಕ ಗುಲಾಮರನ್ನಾಗಿಸಲು ಸಾಮ್ರಾಜ್ಯಶಾಹಿಗಳು, ಕೋಮುವಾದಿ ಹಾಗೂ ಉಗ್ರವಾದಿಗಳು ಸತತ ಪ್ರಯತ್ನ ಮಾಡುತ್ತಿರುತ್ತಾರೆ. ಅವರ ಈ ಪ್ರಯತ್ನ ಸಾಮ್ರಾಜ್ಯಶಾಹಿಗಳಿಗೆ ಬಹಳ ಉಪಯೋಗವಾಗುತ್ತದೆ.

ಸರಳ ಸಹಬಾಳ್ವೆಯ ಪಾಠ: 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪನ ಮಾತಿನಂತೆ, ಮನುಷ್ಯ ಜಾತಿ ಒಂದೇ ಸತ್ಯ ಎಂದು ತಿಳಿದು ಭಾರತೀಯರೆಲ್ಲ ಜಾತಿ ಮತಗಳನ್ನು ದೂರ ಸರಿಸಿ ಒಂದಾಗಬೇಕು. ಒಂದಾಗುವುದರ ಮೂಲಕ ದೇಶದ ನೆಲ, ಜಲ, ಪ್ರಾಣಿ, ಪಕ್ಷಿ, ಸಸ್ಯಸಂಕುಲ ಮತ್ತು ಮಾನವರ ಒಳಿತಿಗಾಗಿ ಕರ್ತವ್ಯ ನಿಭಾಯಿಸುವ ಕಡೆಗೆ ಗಮನ ಹರಿಸಬೇಕು. ದುಷ್ಟ ಶಕ್ತಿಗಳು ಜನರನ್ನು ಜಾತಿ ಮತ್ತು ಧರ್ಮದ ಹೆಸರಿನಲ್ಲಿ ಬೇರ್ಪಡಿಸಿ ಶೋಷಣೆ ಮಾಡುವ ತಂತ್ರಗಳನ್ನು ಅರಿತಾಗ ಮಾತ್ರ ಜನರು ಒಂದಾಗಿ ಬದುಕುತ್ತ ಎಲ್ಲ ಸವಾಲುಗಳನ್ನು ಎದುರಿಸಲು ಸಾಧ್ಯ.

> "ಆಡುವುದು ಹಾಡುವುದು ಹೇಳುವುದು ಕೇಳುವುದು
> ನಡೆವುದು ನುಡಿವುದು
> ಸರಸ ಸಮ್ಮೇಳನವಾಗಿಪ್ಪುದಯ್ಯಾ ಶರಣರೊಡನೆ.
> ಚೆನ್ನಮಲ್ಲಿಕಾರ್ಜುನಯ್ಯಾ ನೀ ಕೊಟ್ಟ ಆಯುಷ್ಯವುಳ್ಳನ್ನಕ್ಕರ
> ಲಿಂಗಸುಖಿಗಳ ಸಂಗದಲ್ಲಿ ದಿನಗಳ ಕಳೆವೆನು."

ಎಂದು ಅಕ್ಕ ಮಹಾದೇವಿ ಹೇಳುತ್ತಾಳೆ.

ಮನುಷ್ಯರು ಹೇಗೆ ಶಾಂತಿಯುತ ಸಹಬಾಳ್ವೆ ಮಾಡಬೇಕೆಂಬುದನ್ನು ಈ ವಚನ ಸೂಚಿಸುತ್ತದೆ. ಆಡುವಿಕೆ, ಹಾಡುವಿಕೆ, ಹೇಳುವಿಕೆ, ಕೇಳುವಿಕೆ, ನಡೆಯುವಿಕೆ, ನುಡಿಯುವಿಕೆ, ಸರಸ ಸಮ್ಮೇಳನವಾಗಿರುವಿಕೆಯ ಕುರಿತು ಅಕ್ಕ ಹೇಳಿದ್ದಾಳೆ. ಈ

ಭೂಮಿಯ ಮೇಲೆ ಇರುವ ವರೆಗೆ ಯಾರೊಡನೆ ಹೀಗೆ ಇರಬೇಕು? ಎಂಬ ಪ್ರಶ್ನೆಗೆ ಶರಣರೊಡನೆ ಹೀಗೆ ಇರಬೇಕು ಎಂಬುದು ಉತ್ತರವಾಗಿದೆ. ಸಕಲಜೀವಾತ್ಮರಿಗೆ ಲೇಸನು ಬಯಸುವವರೆಲ್ಲರೂ ಶರಣರು. ಅಂಥವರ ಸತ್ಸಂಗದಲ್ಲಿ ಮಾನವರು ಜೀವಜಾಲ ಸಮತೋಲನಕ್ಕೆ ಧಕ್ಕೆ ತರದೆ ಬದುಕುವಂಥ ಸಂಸ್ಕಾರವನ್ನು ಪಡೆಯುತ್ತಾರೆ. ಶರಣರು ಲಿಂಗಸುಖಿಗಳು. ಲಿಂಗಸುಖಿಗಳೆಂದರೆ ಎಲ್ಲ ಜೀವಸಂಕುಲದ ಪ್ರತಿಯೊಂದು ಜೀವಿಯ ಒಳಗೆ ದೇವರಿರುವನೆಂಬ ಅರಿವಿನೊಂದಿಗೆ 'ಯಾವುದೂ ನನ್ನದಲ್ಲ; ಎಲ್ಲವೂ ನಮ್ಮದು' ಎಂದು ಭಾವಿಸಿ, ಯಾವುದಕ್ಕೂ ಸಮಸ್ಯೆ ಒಡ್ಡದಂತೆ ಕಾಯಕ ಮಾಡುತ್ತ ಬದುಕುವುದರಲ್ಲಿ ಸುಖ ಕಾಣುವವರು. ಅವರೇ ಶರಣರು. ಇಂಥ ಸುಖಿಗಳು ನಾವಾಗಬೇಕಾದರೆ ವಸ್ತುಮೋಹಕ್ಕೆ ಕಾರಣವಾಗುವ ಕೊಳ್ಳುಬಾಕ ಸಂಸ್ಕೃತಿಯಿಂದ ಹೊರಬರಬೇಕು.

ಇಂದಿಗೆ ನಾಳಿಂಗೆ ಎನ್ನದೆ, ಬಂದ ತತ್ಕಾಲಕ್ಕೆ ಉಂಟು ಎಂದು ಹೇಳುತ್ತ, ವಸ್ತುಮೋಹದಿಂದ ದೂರ ಉಳಿಯುವ ಶಕ್ತಿಯನ್ನು ಕೊಡುವ ವಚನ ಸಾಹಿತ್ಯವೆಂದರೆ ವಚನ ಸಾಹಿತ್ಯ. ಇಡೀ ಜಗತ್ತನ್ನು ವಸ್ತುಮೋಹಕ್ಕೆ ಒಳಗಾಗುವಂತೆ ಮಾಡುವ ಜಾಗತೀಕರಣಕ್ಕೆ ವಚನ ಸಾಹಿತ್ಯ ಪ್ರಬಲ ಉತ್ತರವಾಗಿದೆ.

ಎಲ್ಲ ಧರ್ಮ, ಸಿದ್ಧಾಂತ ಮತ್ತು ಜೀವನವಿಧಾನಗಳಲ್ಲಿನ ಒಳ್ಳೆಯದನ್ನು ಕ್ರೋಡೀಕರಿಸುತ್ತ ಮಾನವಧರ್ಮವಾಗಿಸಿ ಬದುಕುವುದರಲ್ಲೇ ನಿಜವಾದ ಆನಂದವಿದೆ. ಇಂದು ಉದಾತ್ತ ವಿಚಾರಗಳ ಜಾಗತೀಕರಣವಾಗಬೇಕಿದೆ. ಪಕ್ಷಿ, ಪ್ರಾಣಿ, ಮರ, ಗಿಡ, ಬಳ್ಳಿ ಮತ್ತು ಮಾನವ ಕುಲದ ಬಗ್ಗೆ ಕಾಳಜಿ ವಹಿಸುತ್ತ, ನೆಲ, ಜಲ, ವಾಯು ಮಾಲಿನ್ಯವಾಗದಂತೆ ನೋಡಿಕೊಳ್ಳುತ್ತ ಬದುಕುವ ಕಲೆಯನ್ನು ಕಲಿಯಬೇಕಾಗಿದೆ.

ಸರ್ವರಿಗಾಗಲಿ ಮಂಗಲ: ಒಂದು ಧರ್ಮದವರು ಇನ್ನೊಂದು ಧರ್ಮದಲ್ಲಿ ಲೋಪದೋಷಗಳಿವೆ ಎಂದು ಆರೋಪಿಸುತ್ತ ಹೋದಂತೆ, ಮಾನವ ಮಾನವರ ಮಧ್ಯೆ ದ್ವೇಷವೇ ಹರಡುತ್ತದೆ. ಆದರೆ ಎಲ್ಲ ಧರ್ಮಗಳ ಗ್ರಂಥಗಳನ್ನು ಓದುತ್ತ ಅವುಗಳೊಳಗಿನ ಜೀವನ ಮತ್ತು ನಿಸರ್ಗ ಪ್ರೀತಿಯನ್ನು ಅರಿತು ಬದುಕಿನಲ್ಲಿ ಅಳವಡಿಸಿಕೊಂಡು ಅದನ್ನೇ ಜನಸಮುದಾಯಗಳ ಮಧ್ಯೆ ಹಂಚುತ್ತ 'ಸರ್ವರಿಗಾಗಲಿ ಮಂಗಲ' ಎಂದು ಹೇಳುತ್ತ ಹೋದರೆ ದೇಶದೊಳಗಿನ ಆಂತರಿಕ ಹಿಂಸೆ, ಲೂಟಿ ಮತ್ತು ಕೊಲೆ ಸುಲಿಗೆಗಳು ನಿರ್ನಾಮವಾಗುತ್ತವೆ. ಆಗ ದೇಶದ ಸ್ಥಿತಿಗತಿಗಳ ಕಡೆಗೆ ಲಕ್ಷ ಕೊಟ್ಟು ಸರ್ವೋದಯದ ಪ್ರಜ್ಞೆಯಿಂದ ಒಂದಾಗಿ ದುಡಿದಾಗ ನೆಮ್ಮದಿಯ ಬದುಕು ನಿರ್ಮಾಣವಾಗುತ್ತದೆ.

ಹೀಗೆ ನಾವು ಬದಲಾದಾಗ ಹಾಸಿಗೆ ಇದ್ದಷ್ಟು ಮಾತ್ರ ಕಾಲು ಚಾಚುವುದನ್ನು ಕಲಿಯುತ್ತೇವೆ. ಇಂಥ ಮನಸ್ಥಿತಿಯ ಮೂಲಕ ಮಾರುಕಟ್ಟೆಯ ಜಾಗತೀಕರಣದಿಂದ

ಮೌಲ್ಯಗಳ ಜಾಗತೀಕರಣದ ಕಡೆಗೆ ಸಾಗುತ್ತೇವೆ. ಆಗ 'ಮೇಕ್ ಇನ್ ಇಂಡಿಯಾ'ದ ಪ್ರಶ್ನೆಯೂ ಬರುವುದಿಲ್ಲ. ಬಹುರಾಷ್ಟ್ರೀಯ ಕಂಪೆನಿಗಳನ್ನು ಆಹ್ವಾನಿಸುತ್ತ ನಮ್ಮ ನೈಸರ್ಗಿಕ ಸಂಪನ್ಮೂಲಗಳ ಸುಲಿಗೆಗೆ ಅವಕಾಶ ಕಲ್ಪಿಸುವ ಅನಿವಾರ್ಯತೆಯೂ ಬರುವುದಿಲ್ಲ. ಆದ್ದರಿಂದ ಸೃಜನಶೀಲ ಸಾಹಿತ್ಯದಲ್ಲಿ ಮತ್ತು ಧಾರ್ಮಿಕ ಸಾಹಿತ್ಯದಲ್ಲಿ ಇಂಥ ಮನಸ್ಥಿತಿಯನ್ನು ಸೃಷ್ಟಿಸುವ ಅಂಶಗಳ ಕಡೆಗೆ ಗಮನ ಹರಿಸಬೇಕಿದೆ ಮತ್ತು ಅಸಹಿಷ್ಣುತೆಯನ್ನು ನಿವಾರಿಸುವ ಸಾಹಿತ್ಯ ರಚನೆಯ ಕಡೆಗೆ ನಮ್ಮ ಮನಸ್ಸನ್ನು ಕೇಂದ್ರೀಕರಿಸಬೇಕಿದೆ.

❖❖

ಧಾರವಾಡ ಮುರುಘಾಮಠದ ಉಚಿತ ಪ್ರಸಾದ ನಿಲಯ ಅನೇಕ ಸಾವಿರ ಬಡ ವಿದ್ಯಾರ್ಥಿಗಳ ಬಾಳಿಗೆ ಬೆಳಕನ್ನು ನೀಡಿದ ದಾರಿದೀಪ. ಪೂಜ್ಯ ಮೃತ್ಯುಂಜಯ ಅಪ್ಪಗಳ ಮಾನವೀಯ ಅಂತಃಕರಣ, ಶಿಕ್ಷಣಪ್ರೀತಿ, ವಿದ್ಯಾರ್ಥಿ ವಾತ್ಸಲ್ಯ ಕಾರಣವಾಗಿ ೧೯೧೭ರಲ್ಲಿ ಸ್ಥಾಪಿತವಾದ ಇದು ಈ ಭಾಗದ ಗ್ರಾಮೀಣ ಬಡ ವಿದ್ಯಾರ್ಥಿಗಳ ಆಶಾಕಿರಣವಾಗಿ, ಉಜ್ವಲ ಭವಿಷ್ಯ ರೂಪಿಸುವ ಮಹಾಮನೆಯಾಗಿ ಕಾರ್ಯ ಮಾಡುತ್ತ ಬಂದಿದೆ. ಇಲ್ಲಿ ಪ್ರಸಾದ ಸ್ವೀಕರಿಸಿ ಅಧ್ಯಯನ ಮಾಡಿದ ಅನೇಕ ವಿದ್ಯಾರ್ಥಿಗಳು ಉನ್ನತ ಹುದ್ದೆ-ಸ್ಥಾನಮಾನಗಳನ್ನು ಪಡೆದು ನಾಡಿಗೆ ವಿಶೇಷ ಗೌರವವನ್ನು ತಂದುಕೊಟ್ಟಿದ್ದಾರೆ. ಇದರ ಪ್ರೇರಣೆಯಿಂದ ಕನ್ನಡ ನಾಡಿನ ತುಂಬ ಮಠ-ಮಾನ್ಯಗಳು ಉಚಿತ ಪ್ರಸಾದ ನಿಲಯಗಳನ್ನು ಆರಂಭಿಸಿ ದೇಶದ ಶೈಕ್ಷಣಿಕ ಪ್ರಗತಿಗೆ ಕಾರಣವಾಗಿವೆ.

ಈ ಸಂಸ್ಥೆಗೆ ಈಗ ನೂರು ವರ್ಷ ಸಾರ್ಥಕ ಸೇವೆ ಸಲ್ಲಿಸಿದ ಸಂಭ್ರಮ. ಇದರ ಶತಮಾನೋತ್ಸವವನ್ನು ಹಲವು ಅರ್ಥಪೂರ್ಣ ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ ಆಚರಿಸಲು ಸಂಕಲ್ಪಿಸಲಾಗಿದೆ. ಅದರಲ್ಲಿ ಗ್ರಂಥಪ್ರಕಟಣೆಗೆ ವಿಶೇಷ ಆದ್ಯತೆ ನೀಡಲಾಗಿದೆ. ನೂರೊಂದು ಮೌಲಿಕಗ್ರಂಥಗಳು, ಒಂದು ಬೃಹತ್ ಸ್ಮರಣ ಸಂಪುಟ, ಒಂದು ಪ್ರಸಾದನಿಲಯದ ವಿದ್ಯಾರ್ಥಿಗಳ ಸೂಚಿ, ಈ ಯೋಜನೆಯ ಅಡಿಯಲ್ಲಿ ಪ್ರಕಟವಾಗುತ್ತಿವೆ.

ಇಲ್ಲಿ ಆಯ್ಕೆ ಮಾಡಿದ ಗ್ರಂಥಗಳೆಲ್ಲ ಶರಣ ಸಾಹಿತ್ಯ-ಸಂಸ್ಕೃತಿ ಕೇಂದ್ರಿತವಾಗಿವೆ. ಇವುಗಳಲ್ಲಿ ಏಕವ್ಯಕ್ತಿ ಷಟ್‌ಸ್ಥಲ ವಚನ ಸಂಪುಟಗಳು, ನಿಶ್ಚಿತ ವಿಷಯ ಕುರಿತ ಅನೇಕ ವ್ಯಕ್ತಿ ಆಯ್ದ ವಚನ ಸಂಕಲನಗಳು, ಸ್ವರವಚನ ಸಂಪುಟಗಳು, ತಾತ್ವಿಕ ಗ್ರಂಥಗಳು, ಲಿಂಗಾಯತ ಪ್ರಾಚೀನ ಕಾವ್ಯಗಳು, ವಚನ ಸಾಹಿತ್ಯ ಸಂಬಂಧಿ ಏಕವ್ಯಕ್ತಿ ಬಿಡಿಲೇಖನ ಸಂಗ್ರಹಗಳು ಸಮಾವೇಶಗೊಂಡಿವೆ. ಇವು ಕೇವಲ ಸಂಖ್ಯೆಯನ್ನು ಪೂರೈಸಲು ಪ್ರಕಟಿಸಿದ ಸಾಮಾನ್ಯ ಕೃತಿಗಳಾಗಿರದೆ, ಸಂಶೋಧಕರು ಹಾಗೂ ಸಾಮಾನ್ಯ ಓದುಗರು ಉಭಯತರಿಗೂ ತುಂಬ ಉಪಯುಕ್ತವಾದ ಉನ್ನತ ಗುಣಮಟ್ಟದ ಆಕರಗ್ರಂಥಗಳಾಗಿವೆಯೆಂದು ಹೇಳಲು ಸಂತೋಷವೆನಿಸುತ್ತದೆ.

ಜ್ಞಾನದ ಬಲದಿಂದ ಅಜ್ಞಾನದ ಕೇಡು,
ಜ್ಯೋತಿಯ ಬಲದಿಂದ ತಮಂಧದ ಕೇಡು